A DESCRIPTIVE CATALOGUE

OF THE

KANARESE MANUSCRIPTS

IN THE

GOVERNMENT ORIENTAL MANUSCRIPTS LIBRARY, MADRAS

BY

MAHĀMAHŌPĀDHYĀYA VIDYĀVĀCASPATI S. KUPPUSWAMI SASTRI, M.A.
PROFESSOR OF SANSKRIT AND COMPARATIVE PHILOLOGY, PRESIDENCY COLLEGE
AND CURATOR, GOVERNMENT ORIENTAL MANUSCRIPTS LIBRARY, MADRAS

(Prepared under the orders of the Government of Madras)

Volume I

Class I—Grammar, Lexicography and Prosody
Class II—Itihāsa and Purāṇa

MADRAS
PRINTED BY THE SUPERINTENDENT, GOVERNMENT PRESS

PRICE, 6 rupees 1935

A DESCRIPTIVE CATALOGUE

OF THE

KANARESE MANUSCRIPTS

IN THE

GOVERNMENT ORIENTAL MANUSCRIPTS LIBRARY, MADRAS

BY

MAHĀMAHŌPĀDHYĀYA VIDYĀVĀCASPATI S. KUPPUSWAMI SASTRI, M.A.
PROFESSOR OF SANSKRIT AND COMPARATIVE PHILOLOGY, PRESIDENCY COLLEGE
AND CURATOR, GOVERNMENT ORIENTAL MANUSCRIPTS LIBRARY, MADRAS

(Prepared under the orders of the Government of Madras)

Volume I

Class I—Grammar, Lexicography and Prosody
Class II—Itihāsa and Purāṇa

MADRAS
PRINTED BY THE SUPERINTENDENT, GOVERNMENT PRESS
1934

CONTENTS.

CLASS I.

(1) Grammar.

	Number.
Karnātakabhāṣhābhūṣaṇa sūtragaḷu	1
1. Karnāṭakabhāṣābhūṣaṇa sōdāharaṇa vṛtti	2-4
2. Karnāṭakavyākaraṇa	5
3. Śabdamaṇidarpaṇa sūtragaḷu	6-9
4. Śabdamaṇidarpaṇasōdāharaṇa vṛtti...	10-11
5. Śabdasmṛti	12

(2) Lexicography.

1. Abhinavābhidhāna	15
2. Akārādinighaṇṭu	13-14
3. Kabbigarakaipiḍi	16
4. Karṇatakaśabdamañjari	17
5. Nāmalingānuśāsana saṭika	22
6. Nānārthakandapadyagaḷu	18-19
7. Nānārtharatnākara saṭika	20-21

(3) Prosody.

1. Chandōmbudhi	23-27

CLASS II.

Itihāsa (and Purāna).

I. 1. Bhāratakathāmañjari (Adiparva)	28-35
2. Do. (Sabhāparva)	36-43
3. Do. (Araṇyaparva)	44-50
4. Do. (Virāṭaparva)	51-59
5. Do. (Udyōgaparva)	60-63
6. Do. (Bhīśmaparva)	64-67
7. Do. (Drōṇaparva)	68-73
8. Do. (Karṇaparva)	74-77
9. Do. (Śalyaparva)	78-79
10. Do. (Gadāparva)	80
11. Do. (Śāntiparva)	81
2. 1. Bhāratakathākusumavallari Śāntiparva)	82
2. Do. (Ānuśāsanikaparva)	83-84
3. Do. (Āśwamēdhikaparva)	85
4. Do. (Swargārōhaṇaparva)	86-88

			NUMBER
3. 1.	Bhāratavacana	(Ādiparva)	89
2.	Do.	(Sambhavaparva)	90
3.	Do.	(Sabhāparva)	91–95
4.	Do.	(Araṇyaparva)	96–99
5.	Do.	(Drōṇaparva)	100
6.	Do.	(Karṇaparva)	101–102
7.	Do.	(Śalyaparva)	103-104
8.	Do.	(Gadāparva)	105
9.	Do.	(Sauptikaparva)	106–107
10.	Do.	(Aiṣikaparva)	108
11.	Do.	(Strīparva)	109
12.	Do.	(Anuśāsanikaparva)	110
13.	Do.	(Mausalaparva)	111
14.	Do.	(Mahāprasthānaparva)	112
15.	Do.	(Swargārōhaṇaparva)	113
4. 1.	Bhāratakathāsangraha	(Adiparva)	114
2.	Do.	(Sabhāparva)	115
3.	Do.	(Araṇyaparva)	116
4.	Do.	(Virāṭaparva)	117
5.	Do.	(Udyōgaparva)	118
6.	Do.	(Bhīṣmaparva)	119
7.	Do.	(Drōṇaparva)	120
8.	Do.	(Karṇaparva)	121
9.	Do.	(Śalyaparva)	122
10.	Do.	(Gadāparva)	123
5.	Bhāratatātparyanirṇaya	... ...	124–125
II. 1.	Rāmāyaṇa (vacana)	... ...	136–138
2.	Torave Rāmāyaṇa ...	... ...	126–132
3.	Uttararāmāyaṇa ...	... ...	133–135

ಕೆಲವು ತಿದ್ದುಪಡಿಗಳು.

I

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
1	18	Kavitāgundaya.	Kavitāguṇōdaya.
,,	27	ಅಜೂಃ	ಅಬೂಃ.
14	2	ಹೊಯ್ಸಿಳ.	ಹೊಯ್ಸಳ.
,,	4	ಧ್ವಾರಸಮುದ್ರ	ದ್ವಾರಸಮುದ್ರ.
19	8	ಸೂತವೃೂ.	ಸೂತ್ರವೃೂ.
22	3	ರಣಾಜಿತೋದ್ಭಾಸಿ	ರಣಾಜಿರೋದ್ಭಾಸಿ.
,,	32	ಕಡೆಗಣ್ಣೊಳ್ಸಂಡತಿಭ	ಕಡೆಗಣ್ಣೊಳ್ಕಂಡೊಂದಿಭ
23	12	ಪತಿಬುದ್ಧರಂ ಕುರಿರ್ತೆ	ಪ್ರತಿಬುದ್ಧರಂ ಕುರಿತ್ತೀ
,,	13	ಕಿರುಗು	ಕಿಱಿದು
28	24	ಸ್ವಕಲ	ಸಕಲ
31	9	ಮಿಸಲುಜ್ಞಾಜ್ವಲಾಖ್ಯಂ	ಮಿನಲುಜ್ವಲಾಖ್ಯಂ
40	30	ವಾಖ್ಯಾನ	ವ್ಯಾಖ್ಯಾನ
41	2	No. 22.	No. 23.
45	28	ವೆಣ್ಣುಮಯ್ಯ.	ವೆಣ್ಣಮಯ್ಯ.
46	14	Nagavama.	Nāgavarma.
62	7	ಮಂಗಳೂರುನಲ್ಲಿ.	ಮಂಗಳೂರಿನಲ್ಲಿ.
106	8	ಭಾರತ ಕಥಾ ಮಂಜರಿ	(ಚಾಯಣ) ಭಾರತ
,,	14	Same work as the above by Narayanappa	Similar to the above by Cāyana (Sukumara bharati)
,,	18	ಗ್ರಂಥವೇ ಸರಿ	ಗ್ರಂಥಕ್ಕೆ ಸಮಾನವಾಗಿದೆ. ಕವಿ = ಚಾಯಣ (ಸುಕುಮಾರ ಭಾರತಿ) ನು.
113	11	Page 207	Page 256
114	6	1 to 5	6 to 10. (10th incomplete).
,,	11	ಮೊದಲಿನ ಮಾತ್ರವೇ ಇವೆ.	೬-೧೦ ಸಂಧಿಗಳಿವೆ (೧೦ ನೆಯದು ಅಸಮಗ್ರ)
153	26	ಕಂಠೀರವನರಭೂಪಾಲ	ಕಂಠೀರವನರಸಭೂಪಾಲ
162	25	ಜಣಕರಾಜ.	ಜಕ್ಕಣರಾಜ
168	12	ಶರಥಸಾಳ್ವಾದಿ	ಶರಭಸಾಳ್ವಾದಿ
170	27	1 to 56	38 to 56.
172	12	ಚಿಕ್ಕಭೂಪಾಲ	ಜಕ್ಕಭೂಪಾಲ
173	2	ಒಂದರಿಂದ ೫೬ ಆಶ್ವಾಸಗಳು	೩೮-೫೬ ಅಧ್ಯಾಯಗಳು
196	24	ಶಿರಃ ಕಚವಚ	ಶಿರಃ ಕವಚ
208	28	ಕಾವೇರೀಪುರ	ಕಾವೇರೀಪೂರ

ಮಾನಿ ಪರಾಕ್ರಮಿ ಯಶೋರ್ಥಿ ನೀತಿಜ್ಞಂ ವಿ ॥
ದ್ಯಾನಿಲಯಂ.

,, ಕನ್ನಡ—ಹೆಱತೆಗಾಲಂ, ನಿಡುಮೂಗಂ ಕುಸಿಗೊರಲಂ ಸವಟೆ ವಾಯಂ.

ಅಂಕಿತನಾಮಂ :—ದೊಡೆಗಂ, ಕಾಟಂ, ಕಸವಂ, ಮಾಚಂ, ಮಾರಂ.

ನಿಶ್ಚಿತನಾಮಂ :—ಪೂ, ಮರಂ, ಪೊತ್ತಗೆ, ಕವಳಗೆ.

ಸಂಸ್ಕೃತಭಾವಕ್ಕೆ :—

ಸನ್ಮಾತ್ರಂ ಭಾವಲಿಂಗಸ್ಯಾ । ದಸ್ಪೃಷ್ಟಂ ಯಚ್ಚ ಕಾರಕೈಃ ॥
ಧಾತ್ವರ್ಥಃ ಕೇವಲಂ ಶುದ್ಧೋ । ಭಾವ ಇತ್ಯಭಿಧೀಯತೇ ॥

ಶೊ ॥ ಯತ್ = ಆವುದು, ಕಾರಕೈಃ = ಷಟ್ಕಾರಕಗಳಿಂದ. ಅಸ್ಪೃಷ್ಟಂ = ಮುಟ್ಟಲ್ಪಡದುದು. ಸನ್ಮಾತ್ರಂಚ = ಉಂಟೆಂಬನಿತುಳ್ಳುದುಂ. ಭಾವಲಿಂಗಸ್ಯಾತ್ = ಭಾವಲಿಂಗಮಪ್ಪುವು. ಶುದ್ಧಃ ಶುದ್ಧವಾದುದು. ಕೇವಲಂ ಧಾತ್ವರ್ಥಃ = ಏನುಂಹೊದ್ದದ ಧಾತ್ವರ್ಥಂ. ಬಾವವು ಇಃ । ಕಟ್ಟುವತ್ತಗೆ.

ಸೂ॥ ಏಕದ್ವಿತ್ರ್ಯಾದಿ ಸಮಾ ।
ಸಾಕೃತಿಯುಂ ಪ್ರತ್ಯಯಾಂತದಿಂದಿರೆ ಲಘುವ ॥
ಪ್ಪೇಕಾರಮನತ್ವಮನಿರ ।
ದಾಕಾರಂ ಬಹುಳದಿಂದೆ ತಳೆದಿರೆ ಲಿಂಗಂ ॥೧೧ ॥

ವೃತ್ತಿ :—ಏಕ ದ್ವಿತ್ರಿ ಇತ್ಯಾದಿಗಳ್ ಸಮಾಸಾಕೃತಿಯಿಂ ಪ್ರತ್ಯಯಾಂತದಿಂದೆಯಿರೆ ಲಿಂಗಂ. ಆಕಾರಂ ಲಘುವಪ್ಪೇಕಾರಮಂ ಅತ್ವಮಂ ಇರದೆ ಬಹುಳದಿಂ ತಳೆದಿರೆ ಲಿಂಗಮಕ್ಕುಂ. ಏಕ, ದ್ವಿ, ತ್ರಿ, ಚತ್ವಾರ್, ಪಂಚನ್, ಷಟ್, ಸಪ್ತನ್, ಅಷ್ಟನ್, ನವನ್, ದಶನ್ ಎಂಬಿ (ವು) ಸಹಜದಿಂ ಲಿಂಗಮಾಗವು. 'ಚತ್ವಾರ್' ಶಬ್ದಮಂ ಪಾಣಿನ್ಯಾಚಾರ್ಯರ್ 'ಚತುರ್' ಶಬ್ದಮೆಂದು ಪೇೞ್ದಪರ್. ಅಂತೆನಲಾಗದು. ಶಬ್ದಮಣಿ ದರ್ಪಣಮಂ ಕಾಲಪ್ರಕ್ರಿ (ಕಾಲಾಪಕ) ವ್ಯಾಕರಣಮಾರ್ಗದಿಂ ಕೇಶಿರಾಜಂ ಪೇೞ್ದನಾಗಿ ಅದೆಂತೆನೆ:—ಅದಱ ಸ್ಯಾದಿತ್ಯಾದಿ ಪ್ರಕ್ರಿಯಾಗಂಥದಲ್ಲಿ 'ರೇಫಾಂತಃಚತ್ವಾರ್ ಶಬ್ದಃ' ಎಂದು ಪೇೞ್ದುದು. ಚತುರೊ [ವ] (ವಾ) ಶಬ್ದಸ್ಯೋತ್ವಂ' ಚತ್ವಾರಿತ್ಯೇತಸ್ಯ ಶಬ್ದಸ್ಯ ಉತ್ವಂ ಭವತಿ 'ಅಘುಟ್ ಸ್ವ: ವ್ವಂ ಜನಯೋಃ'. ಚತ್ವಾರಿತ್ಯೇತಸ್ಯ = 'ಚತ್ವಾರ್' ಎಂಬ ಶಬ್ದದ ವಾ ಶಬ್ದಸ್ಯ = 'ವಾ' ಎಂಬ ಶಬ್ದಕ್ಕೆ, ಉತ್ವಂ = ಉಕಾರೋ ಭವತಿ. ಪಂಚವಚನಾನಿ ಘುಟ್ ಸಂಜ್ಞಾನಿ ಭವಂತಿ. ಸ್ಯಾದೀನಾಂ = 'ಸಿ' ಎಂಬುದು ಮೊದಲಾದುವಱ ವಿಭಕ್ತೀನಾಂ = ವಿಭಕ್ತಿಗಳಾ ಸವು ಮೊದಲೊಳ್ ಪಂಚವಚನಾನಿ = ಐದು ವಚನಂಗಳ್ ಘುಟ್ ಸಂಜ್ಞಾನಿ = 'ಘುಟ್' ಎಂಬ ಪೆಸರುಳ್ಳುವು. ಭವಂತಿ = ಆದಪವು. ಸಿ, ಔ, ಜಸ್, ಅಮ್, ಔ ಪಾಣಿನಿಯರ್ ಪ್ರಥಮೈಕವಚನಮಂ 'ಸು' ಎಂದಪರ್. ಚತ್ರುರಃ, ಚತುರ್ಭಿಃ ಚತ್ರುರ್ಭ್ಯಃ ಚತುರ್ಣಾಂ ಚತುರ್ಷು ಅಘುಟೆಂದೆಂ. ಚತ್ವಾರಃ ಹೇ ಚತ್ವಾರ್ ಚತ್ವಾರಿ ಹೇಚತ್ವಾರಿ ಇಂತಲ್ತು. ಪಾಣಿನೀಯ ಪದ್ಧತಿಯಿಂ ಕವಿಕೇಶಿರಾಜಂ ಪೇೞ್ದನೆಂತೆಂದೊಡೆ ಅದಲ್ತು ತತ್ರ ಚತುರ್ದಶಾದೌ ಸ್ವರಾಃ, ದಶಸಮಾನಾಃ, ತೇಷಾಂ ದ್ವಾವನ್ಯೋನ್ಯಸ್ಯ ಸವರ್ಣೌ, ಪೂರ್ವೋ• ಹ್ರಸ್ವಃ, ಪರೋ ದೀರ್ಘಃ, ಅವರ್ಣವರ್ಜೋನಾಮಿ ಎಂಬ ಸೂತ್ರಂಗಳಂ ಮನದೊಳಿರಿಸಿ ಕವಿಕೇಶವಂ ಪೇೞ್ದಂ

ಸೂ ॥ ತರದಿನಕಾರಂ ಮೊದಲಾ ।
ಗಿರೆ ಪದಿನಾಲ್ಕುಂ ಸ್ವರಂಗಳಾದಿಯ ಪತ್ತ ॥
ಕ್ಕರಮುಂ ಸಮಾನಮೆನಿಸುಗು ।
ಮೆರಡೆರಡವಱೊಳ್ ಸವರ್ಣಮೆಂತೋದಿದೊಡಂ ॥

ವಿದಿತಸಮಾನಂಗಳ ಪೊ।
ರ್ವದಕ್ಕರಂ ಹ್ರಸ್ವಮದಱ ಪರದಕ್ಕರಮಂ॥
ತ್ತದು ದೀರ್ಘಮವರ್ಣಂ ಪಿಂ।
ಗಿದ ಸ್ವರಂ ನಾಮಿಯೆಂದು ಪೇೞಿಲ್ ಪಡೆಗುಂ॥

ಆಕಾರಾಂತಕ್ಕೆ :—ಬಾಲಾ, ಮಾಲಾ, ಶಾಲಾ, ಏಲಾ, ಲೀಲಾ, ಅಳಕಾ,ಕಳಕಾ, ಶ್ರೀತಾ, ಸೀತಾ, ಯಾತ್ರಾ, ಮಾತ್ರಾ, ನಿದ್ರಾ, ಮುದ್ರಾ, ವೇಳಾ, ಜ್ವಾಲಾ, ಶಾಖಾ, ರೇಖಾ, ಮೃಷಾ, ಭಾಷಾ, ದ್ರಾಕ್ಷಾ, ಲಾಕ್ಷಾ ಎಂಬಾಕಾರಾಂತಂಗ[ಳ್ಗೆ](ಳ್), ಬಾಲೆ, ಮಾಲೆ, ಶಾಲೆ, ಏಲೆ, ಲೀಲೆ, ಅಳಕೆ, ಕಳಕೆ, ಶ್ರೀತೆ, ಸೀತೆ, ಯಾತ್ರೆ, ಮಾತ್ರೆ, ನಿದ್ರೆ, ಮುದ್ರೆ, ವೇಳೆ, ಜ್ವಾಲೆ, ಶಾಖೆ, ರೇಖೆ, ಮೃಷೆ, ಭಾಷೆ, ದ್ರಾಕ್ಷೆ, ಲಾಕ್ಷೆ ಎಂಬಂತೆ ಏತ್ವಮಂ ಪಡೆವುವು. ಮೇಣ್ ಕಂಧರಾಶಬ್ದಕ್ಕೆ ಕಂಧರ ವೆಂದು, ಉಪತ್ಯಕಾಶಬ್ದಕ್ಕೆ ಉಪತ್ಯಕವೆಂದು, ಕರುಣಾ ಶಬ್ದಕ್ಕೆ ಕರುಣವೆಂದು, ಆದಿತ್ಯಕಾಶಬ್ದಕ್ಕೆ ಆದಿತ್ಯಕವೆಂದು, ದಂಷ್ಟ್ರಾ ಶಬ್ದಕ್ಕೆ ದಂಷ್ಟ್ರವೆಂದು, ವಾಲುಕಾಶಬ್ದಕ್ಕೆ ವಾಲುಕವೆಂದು ಅಕಾರಾಂತಮಾದೊಡೆ ಬಳಿಕ ವಿಭಕ್ತಿ ಪತ್ತುಗುಂ. ಬಹುಳದಿಂ ಗ್ರೀವ ಶಬ್ದಕ್ಕೆ ಗ್ರೀವೆ, ಗ್ರೀವ ವೆಂದೂ, ಭಿಕ್ಷಾ ಶಬ್ದಕ್ಕೆ ಭಿಕ್ಷೆ, ಭಿಕ್ಷವೆಂದೂ ಅಱಿವುದು.

ನಾಮಪ್ರಕರಣದ ಕೊನೆ :—‘ ಇದು ಸಂಸ್ಕೃತ ಕರ್ಣಾಟಕ ಭಾಷಾವಿಶಾರದ ಶ್ರೀವೀರ ಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ (?) ನಾ (ಮನಿರೂಪ ಲಕ್ಷಣ ಮೆಂಬ ದ್ವಿತೀಯೊಧ್ಯಾ)ಯಂ ಸಮಾಪ್ತಂ’ ಎಂದಿದೆ. ಈ ಅಧ್ಯಾಯದಲ್ಲಿ ೯೦ ಪದ್ಯಗಳಿವೆ.

೩. ಸಮಾಸ ಪ್ರಕರಣಂ.

ಈ ಪ್ರಕರಣದ ಕೊನೆಯಲ್ಲಿ :—‘ ಇದು ಸಮಸ್ತ ಶಾಬ್ದಿಕ ಜನಮನೋಜನಿತ ಚಾರು ಚುಂಬಕಾಯಮಾನ ಸರಸ್ವತೀ ಮುಖತಿಲಕ ಸುಕವಿ ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಮಾಸನಿರ್ಣಯಂ ತೃತೀಯ ಸಂಧಿ ಸಮಾಪ್ತಂ’ ಎಂದಿದೆ. ಈ ಸಂಧಿಯಲ್ಲಿ ೩೫ ಪದ್ಯಗಳಿವೆ.

೪. ತದ್ಧಿತ ಪ್ರಕರಣಂ.

ಕೊನೆಯಲ್ಲಿ ಸೂ ॥ ಒದವಿರ್ಕುಂ ಸಂಸ್ಕೃತಮೆ।
ನ್ನದೆ ಕನ್ನಡಮೆನ್ನದಾಯಿಲ ಪ್ರತ್ಯಯಮಂ॥
ತ್ತದು ತಾನಿವು ಮೊದಲಾಗಱಿ।
ವುದನ್ವಿತರ್ ಪಿಕ್ಕ ತದ್ಧಿತ ಪ್ರತ್ಯಯಮಂ॥ ೧॥

ವೃತ್ತಿ :—ಸಂಸ್ಕೃತಮೆನ್ನದೆ ಕನ್ನಡಮೆನ್ನದಾಯಿಲ ಪ್ರತ್ಯಯಮೊದವಿರ್ಕುಂ. ಅಂತೆ ತಾನಾದಿವು ಮೊದಲಾಗಱಿವುದು ತದ್ಧಿತ ಪ್ರತ್ಯಯಮಂ ಅನ್ವಿತರಱಿವುದು. ಪ್ರಯೋಗ :—ಗಾಡಾಯ್ಲಂ, (ಗಾಡಾಯಿಲಂ), ರೇಖಾಯ್ಲಂ (ರೇಖಾಯಿಲಂ). ಕನ್ನಡಕ್ಕೆ :— ಓಜಾಯ್ಲ (ಓಜಾಯಿಲಂ), ಅಡ್ಡಾಯಿಲಂ ಪುಗ್ಗಾಯಿಲಂ. ಪುಗ್ಗಾಯಿಲನೆಂದು ಗರ್ವಿತಂ.—

Colophon :—‘ ಇದು ಸಂಸ್ಕೃತ ಕರ್ಣಾಟಕೋಭಯ ಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯ ರತ್ನಮಾಲೆಯೊಳ್ ತದ್ಧಿತವಿವರಣಂ ಚತುರ್ಥ ಸಂಧಿ ಸಮಾಪ್ತಂ—’ ಎಂದಿದೆ. ಈ ಸಂಧಿಯಲ್ಲಿ ೧೯ ಪದ್ಯಗಳಿವೆ.—ಸಂಧಿಯಾದಿಯಲ್ಲಿ ೩ ಪಂಕ್ತಿಗಳನಂತರ ೩ ಓಲೆಗಳು ಕಾಣಿಸುವುದಿಲ್ಲ.

೫. ಆಖ್ಯಾತ ಪ್ರಕರಣಂ.

ಮೊದಲಲ್ಲಿ ಸೂ :—

ಕ್ರಿಯೆಯರ್ಥದ ಮೂಲಂ * * ವಿಭಕ್ತಿಯಾಖ್ಯಾತಿಕರ್ಕಂ ॥ ೧ ॥

ಕೊನೆಯಲ್ಲಿ :—' ಪಿರಿದುಂ ಪ್ರಕ್ಷಾಂತರ ' ಎಂಬ ಸೂತ್ರದ ವರೆಗಿದೆ. ಮೇಲೆಬರೆದ ಈ ಎರಡು ಸೂತ್ರಗಳ ನಡುವೆ ಕೆಲವು ಓಲೆಗಳು ಮುರಿದು ಹೋಗಿವೆ.

೬. ಧಾತು ಪ್ರಕರಣಂ.

ಈ ಪ್ರಕರಣವು ಹೋಗಿದೆ.

೭. ಅಪಭ್ರಂಶ ಪ್ರಕರಣಂ.

ಇದರಲ್ಲಿ ೧ ನೆಯ ಸೂತ್ರ, ' ಸಕ್ಕದದ * * ' ಎಂಬುದರ ಪ್ರಯೋಗದಿಂದ ಮುಂದಕ್ಕಿದೆ. ಅಲ್ಲಲ್ಲಿ ಒಲೆಗಳು ಮುರಿದವೆ ಕೊನೆಯಲ್ಲಿ—' ಇದು ಸಮಸ್ತ ಶಾಬ್ದಿಕ ಜನ ಮನೋಜನಿತ ಶಬ್ದ ಸಂದೇಹಶ್ಯಲ್ಯಚಾರುಚುಂಬಕಾಯ ಮಾನಾನೂನ ಕರ್ಣಾಟಕ ಲಕ್ಷಣ ಶಿಕ್ಷಾಚಾರ್ಯ ಸುಕವಿಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅಪಭ್ರಂಶ ಪ್ರಪಂಚಂ ಅಪಭ್ರಂಶ ಲಕ್ಷಣಂ ಸಪ್ತಮಪ್ರಕರಣಂ ' ಎಂದಿದೆ. ಇದರಲ್ಲಿ ೪೯ ಪದ್ಯಗಳಿವೆ.

೮. ಅವ್ಯಯ ಪ್ರಕರಣಂ.

ಇದು ಮೊದಲಿಂದ ಕೊನೆಯ ವರೆಗೂ ಇದೆ. ಸೂ. ೪. ' ಆ ನುಮೆನಿಪ್ಪ...' ಎಂಬುದಕ್ಕೆ ' ವೃ ' ಎಂದು ಬರೆದು ಪ್ರಯೋಗವನ್ನು ಬರೆದಿದ್ದಾನೆ. ವೃತ್ತಿಯಿಲ್ಲ. ಕೊನೆಯಲ್ಲಿ ' ಇದು ಸಮಸ್ತ ಶಾಬ್ದಿಕಮನೋಜನಿತ (ಶಬ್ದ ಸಂದೇಹ) ಶಲ್ಯಚಾರುಚುಂಬಿಕಾಯಮಾನಾನೂನ ಕರ್ಣಾಟಕ ಲಕ್ಷಣ ಶಿಕ್ಷಾಚಾರ್ಯ ಸುಕವಿ ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅವ್ಯಯಾರ್ಥ ವಿವರಣಂ ಅಷ್ಟಮ ಪ್ರಕರಣಂ ' ಎಂದಿದೆ. ಇದರಲ್ಲಿ ೨೩ ಪದ್ಯಗಳಿವೆ.

೯. ಪ್ರಯೋಗಸಾರಮೆಂಬ ಶಬ್ದಾರ್ಥ ನಿರ್ಣಯಂ.

ಇದರಲ್ಲಿ ಮೊದಲ ಮತ್ತು ಕೊನೆಯ ಭಾಗಗಳಿವೆ. ಆ ಮೇಲೆ ಸಮಾಪ್ತಿ ವಾಕ್ಯಗಳು ನಾಲ್ಕು ಕಂದಪದ್ಯಗಳವೆ. ಬಳಿಕ ' ಇದು ಸಮಸ್ತ ಶಾಬ್ದಿಕಮನೋಜನಿತ * * ಶಬ್ದ ಮಣಿದರ್ಪಣದೊಳ್ ಪ್ರಯೋಗಸಾರ ಶಬ್ದಾರ್ಥನಿರ್ಣಯಂ ನವಮ ಪ್ರಕರಣಂ ' ಎಂದಿದೆ. ತರುವಾಯ ' ಗಮಕಸಮಾಸದಿಂ ' ಎಂಬ ವೃತ್ತವಿದೆ. ಅನಂತರ ಈ ಪ್ರತಿಯನ್ನು ಬರೆದವನ ಹೆಸರು, ಕಾಲಮುಂತಾದುವಿವೆ.—

ನಾಮ ಮತ್ತು ತದ್ಧಿತ ಪ್ರಕರಣಗಳ ಕೊನೆಯಲ್ಲಿ ಮಾತ್ರ ಲಿಂಗಾರಾಧ್ಯನ ಹೆಸರು ಕಂಡು ಬರುತ್ತದೆ. ಕೇಶಿರಾಜನು ಕಾಲಾಪಕವ್ಯಾಕರಣ ಮಾರ್ಗವನ್ನನುಸಿರುವಂತೆ ಈ ಪ್ರತಿಯಿಂದ ಗೊತ್ತಾಗುತ್ತದೆ. ಈ ಪುಸ್ತಕದೊಡನೆ ಕರ್ಣಾಟಕ ಭಾಷಾಭೂಷಣದ ಮೊದಲು ಮೂರು ಪರಿಚ್ಛೇದಗಳೂ ಕಾವ್ಯಾವಲೋಕನದ (' ಯಮಕ ಲಕ್ಷಣಂ ' ಎಂದು ಬರೆದಿರುವ) ಒಂದೋಲೆಯೂ ಇವೆ.

III

ಕವಿ ಮತ್ತು ಸಾಮಾನ್ಯಾನು ಕ್ರಮಣಿಕೆಗಳಲ್ಲಿ ಕೊಟ್ಟಿರುವ ಸಂಖ್ಯೆಗಳು ಪುಟಗಳನು ಸೂಚಿಸುತ್ತವೆ.

A DESCRIPTIVE CATALOGUE

OF THE

KANARESE MANUSCRIPTS.

CLASS I—GRAMMAR, LEXICOGRAPHY AND PROSODY.

(I) GRAMMAR.

No. 1. ಕರ್ಣಾಟಕಭಾಷಾಭೂಷಣ ಸೂತ್ರಗಳು.

KARṆĀṬAKABHĀṢĀBHŪṢAṆA SŪTRAGAḶU.

Substance, Śritāla. Size, 11¾ × 2¼ inches. Pages, 5. Lines, 10 on a page. Character, Kanarese. Condition, injured. Appearance, very old. mode of writing, good and free from mistakes.

Complete.

280. original Sūtras on Kannaḍa grammar. The author, Nāgavarma II alias Nākiga, son of a Jaina Brahman named Dāmōdara, also wrote Kāvyāvalōkana and Vastukōśa and was the Kaṭakōpādhyāya in the court of king Jagadēkamalla of the Cālukya dynasty who ruled from 1139—1149 A.D. The author had the titles Abhinavaśarvavarma, Kavikarṇapūra and Kavitāguṇḍaya and mentions Nayasēna (1112 A.D.). Janna (1209 A.D.) in his Anantanāthapurāṇa states that he was a pupil of this Nāgavarma. Vāṇīvallabha alias Ācaṇṇa (1195 A.D.) in his work Vardhamānapurāṇa refers to this author as a great poet.

Beginning:

ಅಥ ಕರ್ಣಾಟಕಶಬ್ದ ಸಿದ್ಧಿಃ । ಅಕಾರಾದಯಃ ಪ್ರಸಿದ್ಧಾ ವರ್ಣಾಃ । ತೇಷ್ವಾದ್ಯಾ ಚತು
ರ್ದಶ ಸ್ವರಾಃ । ಏಕದ್ವಿತ್ರಿಮಾತ್ರಾಸ್ತೇ ಹ್ರಸ್ವದೀರ್ಘಪ್ಲುತಾಃ । ಏದೋತಾ ಹ್ರಸ್ವಾ ಚ ।
ಕಾದಯಸ್ತ್ರಿಂಶದ್ವ್ಯಂಜನಾನಿ । (ವರ್ಗಾಸ್ತೇ ಮಾಂ)ತಾಃ ಪಂಚ ಪಂಚ ಪಂಚ । ಅನುನಾ
ಸಿಕಾಸ್ತೇಷಾಂ ಪಂಚಮಾಃ । ವಿಭಾಷಯಾ ಯವಲಾಃ । ಲ ರ ಡೈ ರೇ ವ ಳ ಐ ಊಃ ಪ್ರಯ
ತ್ನಾಶ್ರಯಾತ್ । ನಾತ್ರ ಪ್ರಾಯೇಣ ವರ್ಗಾಣಾಂ ದ್ವಿತೀಯಚತುರ್ಥಾಃ । ಶ ಷಾ ಚ । ಋ
ಕಾ(ರಾದಯಶ್ಚತ್ವಾ)ರಃ ಸ್ವರಾಃ । ಅನುಸ್ವಾರೋ ಬಿಂದುಃ । ಸ ಉಪರ್ಯಾಧಸ್ತಾಚ್ಚ ವಿಸ
ರ್ಗಃ । ವಿಭಕ್ತ್ಯಂತಂ ಪದಂ । ಪರಸ್ಸನ್ನಿಕರ್ಷಸ್ಸಂಹಿತಾ ।

ಇತಿ ಸಂಜ್ಞಾವಿಧಾನಂ ಪ್ರಥಮಃ ಪರಿಚ್ಛೇದಃ

ಸಂಧೌ । (ಸ್ವರೇಽಸ್ವರಸ್ಯ ಲೋಪಃ) । ಪ್ರಕೃತೇರುದೇ [ತೌ] (ತೋಃ) ।

*   *   *   *

ಇಕಾರೋ ವಿಭಾಷಯಾತ್ವೈತ್ರ್ವ । ವ್ಯವಸ್ಥಿತವಿಭಾಷಯಾ ಕ್ವಚಿದೇಕಾರಾಂತತ್ವಮೇವ ನೇತ್ವಂ । ತತ್ಪುರುಷೇ ಪೂರ್ವಪದಾಂತ್ಯಸ್ಯ ಲೋಪಃ । ಅತ್ವಮುಲ್ಲಸ್ಯ । ಬಹುವ್ರೀಹಾವದನ್ತೇ । ಇಲ್ಲಸ್ಯೇಲಿಃ । ದ್ವಿಗೌ ಸಂಖ್ಯಾವ್ಯಾಚೀನಾಮುಪಾಂತ್ಯವ್ಯಂಜನಾದೇರ್ಲೋಪಃ । ಏಕಾರ್ಥವಾಚಕಸ್ಯಾರಂತಃ । ಇರಾದೇಶೋ ದ್ವ್ಯರ್ಥಸ್ಯ । ಕಪವರ್ಗಯೋಸ್ತ್ರ್ಯಯಾಖ್ಯಸ್ಯ ತಾವಾಗಮೋ ಬಹುಳಂ (ಹ್ರಸ್ವ)ಶ್ಚ । ಪೂರ್ವಸ್ಯ ತ್ರ್ಯಾದೀನಾಂ ವ್ಯಂಜನೇಷ್ವಿವ ।

End :

ಎಲೆ ವಿತರ್ಕಭಾವನಾಮಂತ್ರಣೇಷು । ಹ್ರಸ್ವಾಂತೋಽಪಿ ಚ । ಅಹಃ ಸುಪ್ರಹರ್ಷ ಶೋಭನೇ ಚ । ಅಃ ಅಃ ದುಃಖಸೂಚನೇ । ಅಂ ಬೇ (ಭೇ)ದವಿಸ್ಮಯೇ । ಉಃ ಪ . . . . । ಅಯ್ಯೋ ವಿಷಾದಾಪಹಾಸಯೋಃ । ಸ್ವ ಏವಾನುಕಂಪಾಯಾಂ ಚ । ಓಹೊ ನಿವಾರಣಾರ್ಥೇ । ಅರೆ ಅರಮ ಕ್ವಚಿತ್ಕಣಾಚಿದರ್ಥಯೋಃ । ಅಲ್ತೆ ಸಂಪ್ರಶ್ನಾನುಮಾನಯೋಃ ।

Colophon :

ಇತಿ ಕರ್ನಾಟಕ ವ್ಯಾಕರಣೇ ನಿಪಾತಪ್ರಕರಣಂ ನಾಮ ದಶಮಃ ಪರಿಚ್ಛೇದಃ ॥

(ಪ.ವಿ.)—

ಸೂತ್ರಗಳು ಮಾತ್ರ ಸಮಗ್ರವಾಗಿವೆ. ಓಲೆಯ ಕಡೆಯ ಭಾಗವು ಮುರಿದಿರುವಕಾರಣ ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಗ್ರಂಥಪಾತವೆನ್ನಬಹುದು. ಕವಿ ಎರಡನೆಯ ನಾಗವರ್ಮ. ಈತನು, ಕ್ರಿ.ಶ. ೧೧೩೯—೧೧೪೯ ರ ವರೆಗೆ ಚಾಳುಕ್ಯರಾಜನಾದ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದಂತೆ ತಿಳಿಯ ಬರುತ್ತದೆ. ಕ್ರಿ.ಶ. ೧೧೯೫ ರಲ್ಲಿದ್ದ ಆಚಣ್ಣನು (ವಾಣೀವಲ್ಲಭನು) ತನ್ನ ವರ್ಧಮಾನಪುರಾಣದಲ್ಲಿ ಈತನನ್ನು ಸ್ತುತಿಸಿರುವುದರಿಂದಲೂ, ಕ್ರಿ. ಶ. ೧೧೧೨ ರಲ್ಲಿದ್ದ ನಯಸೇನನನ್ನು ಈತನು ನಿರ್ದೇಶಿಸಿರುವುದರಿಂದಲೂ ಕ್ರಿ.ಶ. ೧೨೦೯ ರಲ್ಲಿದ್ದ ಜನ್ನನು ಅನಂತನಾಥ ಪುರಾಣದಲ್ಲಿ ಈತನನ್ನು ತನ್ನ ಗುರುವೆಂಬುದಾಗಿ ಹೇಳಿರುವುದರಿಂದಲೂ ಈ ಕವಿಯು ಕ್ರಿ.ಶ. ಸುಮಾರು ೧೧೪೫ ರಲ್ಲಿದ್ದಿರ ಬಹುದೆಂದು ತೋರುತ್ತದೆ. ಈತನು ಕಾವ್ಯಾವಲೋಕನವೆಂಬ ಅಲಂಕಾರಶಾಸ್ತ್ರ ಗ್ರಂಥವನ್ನೂ, ವಸ್ತುಕೋಶವೆಂಬ ನಿಘಂಟುವನ್ನೂ ಬರೆದಿದ್ದಾನೆ. ಜೈನ ಬ್ರಾಹ್ಮಣನಾದ ದಾಮೋದರನ ಮಗ. ಈ ಗ್ರಂಥದಲ್ಲಿ ಒಟ್ಟು ೨೮೦ ಸೂತ್ರಗಳು ಇವೆ. ಸಂಜ್ಞೆ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತನಿಯಮ, ಅವ್ಯಯನಿರೂಪಣ, ನಿಪಾತನಿರೂಪಣಗಳೆಂಬ ಹತ್ತು ಪ್ರಕರಣಗಳಿವೆ.

No. 2. ಕರ್ಣಾಟಕಭಾಷಾಭೂಷಣ, ಸೋದಾಹರಣವೃತ್ತಿ.

KARNĀṬAKABHĀṢĀBHŪṢAṆA, WITH VṚTTI AND ILLUSTRATIONS.

Substance, palm-leaf. Size, 14⅛ × 1½ inches. Pages, 96. Lines, 4 on a page. Character, Kanarese. Condition, very much injured. Appearance, very old. Mode of writing, good and free from mistakes. Complete.

Same work as the above ; but this manuscript contains the Sanskrit commentary on the original Sanskrit Sūtras and illustrative examples in Kanarese.

Beginning:

ಶ್ಲೋಕ ॥ ಸರ್ವಜ್ಞಂ ತಮ[ಧ]ಹಂ ವಂದೇ
ಪರಂಜ್ಯೋತಿಸ್ತಮೋಪಹಂ ।
ಪ್ರವೃತ್ತಾ ಯನ್ಮುಖಾದ್ದೇವೀ
ಸರ್ವಭಾಷಾ ಸರಸ್ವತೀ ॥

ಸೂತ್ರ॥ ಅಥ ಕರ್ಣಾಟಕ ಶಬ್ದಸಿದ್ಧಿಃ॥

ವೃ ॥ ಅಥಶಬ್ದೋಽಯಂ ಮಂಗಲಾರ್ಥಃ, ಮಂಗಲಾದೀನಿ ಶಾಸ್ತ್ರಾಣಿ ಪ್ರಥಂತ ಇತಿ. ಅಧಿಕಾರಾರ್ಥೋ ವಾ, ಇಹ ಕರ್ಣಾಟಕವಿಷಯೇ ಶಬ್ದಸಿದ್ಧಿರಧಿಕ್ರಿಯತ ಇತ್ಯರ್ಥಃ ;

ಸೂ॥ ಅಕಾರಾದಯಃ ಪ್ರಸಿದ್ಧಾ ವರ್ಣಾಃ ॥

ವೃ ॥ ಅಕಾರಾದಯೋ (ವರ್ಣಾಃ) ಹಕಾರಪರ್ಯವಸಾನಾಃ ಪ್ರಸಿದ್ಧಾ ಇತ್ಯೇವಂ ವೇದಿತವ್ಯಾಃ ॥ ತೇಷಾಮನಾದಿಕಾಲಪ್ರಸಿದ್ಧತ್ವಾದನ್ಯಥಾ ನೋಪದೇಷ್ಟವ್ಯಾಃ ॥

ಸೂ ॥ ತೇಷ್ವಾದೌ [ಚ] ಚತುರ್ದಶ ಸ್ವರಾಃ ॥

ವೃ ॥ ತೇಷ್ವಕಾರಾದಿಷ್ವಾದೌ ವ್ಯವಸ್ಥಿತಾ ಯೇ ಚತುರ್ದಶ ವರ್ಣಾಃ ತೇ ಸ್ವರಸಂಜ್ಞಾ ಭವಂತಿ॥ ತೇ ಅ, ಆ, ಇ, ಈ, ಉ, ಊ, ಋ, ೠ, ಌ, ೡ, ಏ, ಐ, ಓ, ಔ ॥

ಸೂ ॥ ಏಕದ್ವಿತ್ರಿಮಾತ್ರಾಃ ತೇ ಹ್ರಸ್ವದೀರ್ಘಪ್ಲುತಾಃ.

ವೃ॥ ತೇ ಇತಿ ತಚ್ಛಬ್ದೋಪಾದಾನಂ ವ್ಯಕ್ತ್ಯರ್ಥಂ ; ಅಕಾರಾದಿಸ್ವರವ್ಯಕ್ತ್ಯಾ ಯೇ ವರ್ಣಾಃ ತೇ ಖಲು ಏಕದ್ವಿತ್ರಿಮಾತ್ರಾಸ್ಸಂತಃ ಯಥಾಸಂಖ್ಯಂ ಪ್ರತ್ಯೇಕಂ ಹ್ರಸ್ವದೀರ್ಘಪ್ಲುತಾ ಭವಂತಿ ; ಅ ೧ ; ಆ ೨ ; ಆ ೩ ; ಇತ್ಯಾದಿ ಸಾಮಾನ್ಯಾಪೇಕ್ಷಯಾ ಸಂಖ್ಯಾಪಿ ನ ವಿರುಧ್ಯತೇ ॥

ಸೂ ॥ ಎದೋತೌ ಹ್ರಸ್ವೌ ಚ ॥

ವೃ ॥ ಎಕಾರೋಕಾರೌ ದ್ವಾವಪಿ ಕ್ವಚಿದ್ಭಾಷಾ(ಯಾಂ) ಹ್ರಸ್ವೌ ಭವತಃ ॥ "ನಿತ್ಯಂ ಸಂಧ್ಯಕ್ಷರಾಣಿ ದೀರ್ಘಾಣೀ" ತ್ಯುಪದೇಶಾದಿದಂ ವಚನಂ ॥

ಉದಾಹರಣ :—ಎಲೆ, ಏಲಕ್ಕಿ, ಸೆಲೆ, ಸೇಲೆ, ಒಲೆ, ಓಲೆ .

ಸೂ ॥ ಕಾದಯಸ್ತ್ರಯ (ಸ್ತ್ರಿಂ)ಶದ್ವ್ಯಂಜನಾನಿ.

ವೃ ॥ ಕಕಾರಪ್ರಭೃತಯಸ್ತ್ರಯಸ್ತ್ರಿಂಶತ್ಪರಿಮಿತಾ ಯೇ ವರ್ಣಾಃ ಪ್ರತ್ಯೇಕಂ ತೇ ವ್ಯಂಜನಸಂಜ್ಞಾ ಭವಂತಿ ॥

ಸೂ ॥ ವರ್ಗಾಸ್ತು ಮಾಂತಾಃ ಪಂಚ, ಪಂಚ, ತೇ ಪುನಃ ॥

ವೃ ॥ ಕಕಾರಾದಯೋ ಮಾವಸಾನಾ ಯೇ ವರ್ಣಾಃ ಪಂಚ ಪಂಚ ಭೂತ್ವಾ ಸಂಜ್ಞೈವ ವೇದಿತವ್ಯಾಃ .

ಉದಾ :—ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್

ಸೂ॥ ಅನುನಾಸಿಕಾಸ್ತೇಷಾಂ ಪಂಚಮಾಃ ॥

ತೇಷಾಂ ವರ್ಗಾಣಾಂ ಅಂತ್ಯೇ ವ್ಯವಸ್ಥಿತಾ ಯೇವರ್ಣಾಃ ತೇ ಅನುನಾಸಿಕ ಸಂಜ್ಞಾ ಭವಂತಿ ॥ ತೇ ಕೇ ; ಙ, ಞ, ಣ, ನ, ಮಾಃ ॥

* * * *

ಸೂ ॥ ಅನುಸ್ವಾರೋ ಬಿಂದುಃ॥

(ಕರತಲನಿಕ್ಷಿಪ್ತ) ನಿಸ್ತಲೋದಾತ್ತಮುಕ್ತಾಫಲಾನುಕಾರೀ ಬಿಂದುರನುಸ್ವಾರಸಂಜ್ಞೋ ಭವತಿ ॥ ಕೇವಲಸ್ಯಾಸ್ಯ ರೂಪಂ ' ೦ ' ಇತಿ ॥

ಸೂ ॥ ಸ ಉಪರ್ಯಧಸ್ತಾಚ್ಚ ವಿಸರ್ಗಃ ॥

ವೃ ॥ ಸ ಏವ ಬಿಂದುರುಪರ್ಯಧಸ್ತಾಚ್ಚ ವ್ಯವಸ್ಥಿತೋ ವಿಸರ್ಗಸಂಜ್ಞೋ ಭವತಿ— ' ಃ' ಇತಿ.

ಸೂ ॥ ವಿಭಕ್ತ್ಯಂತಂ ಪದಂ॥

ವೃ ॥ ನಾಮಾಖ್ಯಾತ ವಿಭಕ್ತ್ಯಂತಂ ಯಚ್ಛಬ್ದರೂಪಂ ತತ್ಪದಸಂಜ್ಞಕಂ ಭವತಿ ॥
ಉದಾ ॥ ಕೆಯ್ವೊಲಂ ದಿವದಂತೆ ನಿಶಿ (ಸಸಿ) ಯಿಂದೆಸೆಯಿತ್ತು.

ಸೂ ॥ ಪರ [ಸ್ವರ] ಸ್ಸನ್ನಿಕರ್ಷಸ್ಸಂಹಿತಾ ॥

ವೃ ॥ ವಿಶಿಷ್ಟಾನಾಂ ವರ್ಣಾನಾಂ ಪರಸ್ಪರಮನ್ಯೋನ್ಯಂ ಸನ್ನಿಕರ್ಷಃ ಸಂಶ್ಲೇಷ ಸಂಧಿರಿ(ಸಂಹಿತೇ)ತ್ಯುಚ್ಯತೇ ॥

Colophon :

ಇತಿ ಕರ್ಣಾಟಕವ್ಯಾಕರಣೇ ಸಂಜ್ಞಾವಿಧಾನಂ ನಾಮ ಪ್ರಥಮಃ ಪರಿಚ್ಛೇದಃ.

ಸೂ ॥ ಸಂಧೌ ॥

ಸಂಧಾವಿತ್ಯಯಮಧಿಕಾರಃ—ಇತ ಉತ್ತರಂ ಯದ್ವಿವಕ್ಷ್ಯತೆ ತತ್ಪುನಃ ಸನ್ಧೌ ಭವತೀತ್ಯವಗಂತವ್ಯಂ.

ಸೂ ॥ ಸ್ವರೇ ಸ್ವರಸ್ಯ ಲೋಪಃ ॥

ವೃ॥ ಸ್ವರೇ ಪರತ್ರಾವಸ್ಥಿತೇ ಪೂರ್ವಸ್ವರಸ್ಯ ಲೋಪೋ ಭವತಿ ॥

ಪ್ರಯೋಗಃ—ಎನ್ನರಸಂ, ಎನ್ನಾಳ್ದಂ, ಮುನ್ನೀವಂ, ಕೂರ್ತೀವಂ, ಬಿಟ್ಟಿಳ್ದಂ, ತ್ರೈತೆಸೆವಂ ಪದೆದೆಯ್ದು, ವಿರೊಗ್ಗಿಪ್ಪಂ, ಒಳ್ತಿತ್ತಾಗಂ.

* * * *

ಸೂ ॥ ತತ್ಪುರುಷೇ ಪೂರ್ವಪದಾಂತಸ್ಯ ಲೋಪಃ ॥
ಪ್ರಾಯೋ ಯಥೋಚಿತಾಗಮಶ್ಚ ॥

ವೃ ॥ ತತ್ಪುರುಷಸಮಾಸೇ ವರ್ತಮಾನಸ್ಯ ಪೂರ್ವಪದಸ್ಯ ಸಂಬಂಧಿನೋ ಅಂತ್ಯವರ್ಣಸ್ಯ ಲೋಪಃ ಪ್ರಾಯೇಣ ಭವತಿ ; ಯಥೋಚಿತಾಗಮಶ್ಚ ವಿಧೇಯಃ.

ಪ್ರಯೋಗಃ—ಅರಮನೆ, ಮಾಮರಂ, ಪೂಗೊಂಚಲ್, ಮಾಂಗಾಯ್, ಪೂಂದಳಿರ್ ತೆಂಬೆಲರ್, ದಾಂಗುಡಿ ; ಪ್ರಾಯೋಗ್ರಹಣಾತ್ ಕ್ವಚಿನ್ನ ಭವತಿ : ಅಱಸುಗುವರಂ, ಅಱಸಾಳ್ತನಂ.

ಸೂ || ಆತ್ವಮೆಲ್ಲಸ್ಯ ||

ವೃ || ಸಮಸ್ತಪದಪೂರ್ವಸ್ಯ ಎಲ್ಲಶಬ್ದಸ್ಯಾತ್ವಂ ಭವತಿ.

ಪ್ರಯೋಗಃ—ಎಲ್ಲಾಧನಂ, ಎಲ್ಲಾತ್ರೆಱಂ, ಎಲ್ಲೆಡೆ.

ಸೂ || ಬಹುವ್ರೀಹಾವದಂತೇ ||

ವೃ || ಬಹುವ್ರೀಹಿಸಮಾಸೇ ಕೃತೇ ತದಂತೇಷ್ವಕಾರೋ ಭವತಿ.

ಪ್ರಯೋಗಃ—ಕೊನೆವಲ್ಲಂ, ಬಟ್ಟದೊಡೆಯಂ, ಪೊಂಬಸಿಱಂ, ಕಾಱೊಡಲಂ, ಬೆಳ್ಗದಿಱಂ, ನೆಲ್ವುಗಿವಿಯಂ, ಕುಸಿಗೊಱಲಂ, ಕೆಂಗಣ್ಣಂ.

ಕ್ವಚಿನ್ನ ಭವತಿ : ಜಳ್ಗಳ, ಕಡುಚಾಗಿ ಇತ್ಯಾದಿ.

* * * *

ಸೂ || ಗುಂಕುಮಿಮೌ ಭವಿಷ್ಯಂತೌ ||

ವೃ || ಸರ್ವತ್ರ ಪ್ರಥಮಪುರುಷಸ್ಯ ಭವಿಷ್ಯಂತ್ಯಾಃ ಸರ್ವತ್ರ ನಪುಂಸಕಲಿಂಗೇ ಚ ಲಕ್ಷ್ಯಾನುಸಾರೇಣ ಗುಂಕುಮಾದೇಶೌ ಭವತಃ.

ಪ್ರಯೋಗಃ—ಮಿಱುಗುಗುಮಾಕೆ, ಮಿಱುಗುಗುಮದುಪೆಣ್, ಇರ್ಕುಮವಂ, ಒರ್ಕುಮವಳ್, ತೋರ್ಕುಮದು.

ಸೂ || ದದಪಾದಾವಿದಾಗಮೋ ಬಹುಳಂ ||

ವೃ || ದದಪಕಾರಾದಿವಿಭಕ್ತಿಗಣೇ ಇದಾಗಮೋ ಬಹುಳಂ ಭವತಿ.

ಪ್ರಯೋಗಃ—ಮೆಚ್ಚಿದಂ, ಮೆಚ್ಚಿದಪಂ, ಮೆಚ್ಚಿದರ್. ಬಹುಳಗ್ರಹಣಾದನ್ಯತ್ರಾಪಿ ಭವತಿ.

ಎಚ್ಚಿಱತು, ಎಚ್ಚಿಱತ್ತು, ಬೆಚ್ಚಿಱತು, ಬೆಚ್ಚಿಱತ್ತು. ಕ್ವಚಿದನ್ಯದೇವ : ನುಡಿದತ್ತು, ನಡೆದತ್ತು, ಒಡೆದಂ, ಪಡೆದಂ, ಕಳೆದಂ, ಬಳೆದಂ.

ಸೂ || ಇಶ್ಚ ಎಶ್ಚ

ವೃ || ವಕಾರಾದಿವಿಭಕ್ತಿಗಣೇ ಪರೇ ಇಶ್ಚ ಎಶ್ಚ ಆಗಮೌ ಭವತಃ.

ಪ್ರಯೋಗಃ—ಜಡಿವಂ, ಬಡಿವಂ, ನುಡಿವಂ, ಆಡುವಂ, ಮಾಡುವಂ, ಕೂಡುವಂ, ಉಡವಯ್, ಕುಡುವೆರ್. ಚಕಾರಾದನ್ಯದೇವ : ಸೆಳೆವಂ, ಬಳೆವಂ, ಕಳೆವಂ. ಕ್ವಚಿನ್ನಭವತಿ ಈವಂ, ಕಾವಂ, ನೋವಂ.

* * * *

ಸೂ ॥ ಅರೆ ಅರೆಮ ಕ್ವಚಿ(ತ್ಕದಾಚಿ)ದರ್ಥಯೋಃ ॥

ವೃ ॥ ಅರೆ ಅರೆಮ ಇತ್ಯೇತೌ ಕ್ವಚಿತ್ಕ ದಾಚಿದರ್ಥಯೋರ್ವರ್ತೇತೇ ॥

ಪ್ರಯೋಗಃ—ಅರೆ ಎಡೆಯೊಳ್, ಅರೆಉಳಿದಂ, ಅರಮ ಎತ್ತಾನುಮೊರ್ಮೆ, ಅರಮ ಅರಲ್ದ.

ಸೂ ॥ ಅಲ್ತೆ ಸಂಪ್ರಶ್ನಾನುಮಾನಯೋಃ ॥

ವೃ ॥ ಅಲ್ತೆ ಇತಿ ಶಬ್ದಃ ಸಂಪ್ರಶ್ನೇ ಽನುಮಾನೇ ಚ ವರ್ತತೇ.

ಪ್ರಯೋಗಃ—ನೀನಿದಂ ಬೇಳ್ದೆಯಲ್ತೆ, ಇದಲ್ತೆ, ಅನ್ನುಮಾಡಿದ ಸೂತ್ರಂ.

Colophon:

ಇತಿ ಕರ್ಣಾಟಕವ್ಯಾಕರಣೇ ನಿಪಾತಪ್ರಕರಣಂ ನಾಮ ದಶಮಃ ಪರಿಚ್ಛೇದಃ

ಶ್ಲೋಕ—

ಕರ್ಣಾಟ[ಕ]ಶಬ್ದಸೂತ್ರಾಣಿ । ಲೋಕವ್ಯುತ್ಪತ್ತಿಹೇತವೇ ॥
ರಚಿತಾನಿ ಸ್ಫುಟಾರ್ಥಾನಿ । ಕೃತಿನಾ ನಾಗವರ್ಮಣಾ ॥

ಇತಿ ಕರ್ಣಾಟಕ ಭಾಷಾಭೂಷಣಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಬರವಣಿಗೆಯು ಚೆನ್ನಾಗಿದೆ. ಶುದ್ಧವಾದ ಪ್ರತಿ. ಅತಿ ಶಿಥಿಲ. ಆದರೆ ಇದರಲ್ಲಿ ಸೂತ್ರಗಳಿಗೆ ಸಂಸ್ಕೃತವ್ಯಾಖ್ಯಾನವೂ, ಕನ್ನಡ ಭಾಷೆಯಲ್ಲಿ ಉದಾಹರಣೆಗಳೂ ಇರುತ್ತವೆ. ಕವಿ ಎರಡನೆಯ ನಾಗವರ್ಮ. ಇತರ ವಿಷಯಗಳನ್ನು ೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 3. ಕರ್ಣಾಟಕಭಾಷಾಭೂಷಣಂ, ಸೋದಾಹರಣವೃತ್ತಿ.

KARṆĀṬAKABHĀṢĀBHŪṢAṆA WITH VṚTTI AND ILLUSTRATIONS.

Substance, palm-leaf. Size, $10\frac{1}{8} \times 2\frac{1}{8}$ inches. Pages, 42. Lines, 11 on a page. Character, Kanarese. Condition, slightly injured. Appearance, very old. Mode of writing, not bad but full of mistakes.

Begins on fol. 1*a*. The other works herein are (1) Śabdamaṇidarpaṇa 22*a* (2) Nāgavarmachandassu 38*a* and (3) Ratnaparīkṣe 43*a* (in Telugu).

Complete.

Same work as the above.

(ವಿ-ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿಲ್ಲ. ತಪ್ಪುಗಳಿವೆ. ಕವಿ ಎರಡನೆಯ ನಾಗವರ್ಮ. ಮೇಲೆ ವರ್ಣಿಸಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ೧ ನೇ ನಂಬರಿನಲ್ಲಿ ನೋಡುವುದು. ಇದರಲ್ಲಿ ಮೂಲ ಸೂತ್ರಗಳಿಗೆ ವೃತ್ತಿಯೂ, ಉದಾಹರಣೆಗಳೂ ಇವೆ.

No. 4. ಕರ್ಣಾಟಕಭಾಷಾಭೂಷಣ, ಸೋದಾಹರಣ ವೃತ್ತಿ- KARṆĀṬAKABHĀṢĀBHŪṢAṆA WITH VṚTTI AND ILLUSTRATIONS.

Substance, palm-leaf. Size, 15 × 1¼ inches. Pages, 40. Lines, 6 on a page. Character, Kanarese. Condition, very much injured. Appearance, very old. Mode of writing, good and free from mistakes.

Imperfect and incomplete. Many leaves are broken.

Same work as the above.

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಸಾಮಾನ್ಯವಾಗಿ ಓಲೆಗಳೆಲ್ಲಾ ಮುರಿದು ಹೋಗಿವೆ. ಬರೆವಣಿಗೆಯು ಉತ್ತಮವಾದುದು. ತಪ್ಪುಗಳಿಲ್ಲ. ಮೇಲೆ ವರ್ಣಿಸಾಗಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ಮೇಲಣ ನಂ. ೧ ರಲ್ಲಿ ನೋಡುವುದು.

No. 5. ಕರ್ಣಾಟಕ ವ್ಯಾಕರಣ- KARṆĀṬAKA VYĀKARAṆA.

Substance, paper. Size, 12 × 9 inches. Pages, 316. Lines, 17 on a page. Character, Kanarese and English. Condition, fair. Appearance, old. Mode of writing, good and free from mistakes. At the end of the work there are 22 pages containing some useful information.

The Manuscript is dated 1st August 1820.

Complete.

An easy on Kannaḍa grammar intended for beginners. A literal translation in English is also added. The name of the author is not given but it is presumed that the work was written by some scholar at the instance of Mr. C. P. Brown. The work is divided into 8 chapters as given below :—

						Pages.
(1)	Of letters	..	..	..	..	1
(2)	,, nouns	..	..	..	..	41
(3)	,, verbs	..	..	..	..	129
(4)	,, indeclinable words and particles				..	191
(5)	,, derivative words		..	..	..	201
(6)	,, words borrowed from Sanskrit				..	217
(7)	,, compound words		..	..	..	235
(8)	,, syntax	..	..	..	..	245

Beginning:

The Karṇāṭaka language is written from left to right. The characters like those in the most ancient Greek and Roman manuscripts are formed of equal sizes and placed at equal distances without either connexion, or stops, and without any distinction whatsoever of words

* * * *

Nouns are by Karnāṭaka Grammarians stated to have only seven cases, viz ., ಪ್ರಥಮಾ ವಿಭಕ್ತಿ the nominative, ದ್ವಿತೀಯಾ ವಿಭಕ್ತಿ the accusitive, ತೃತೀಯಾ ವಿಭಕ್ತಿ the instrumental, ಚತುರ್ಥೀ ವಿಭಕ್ತಿ the dative, ಪಂಚಮೀ ವಿಭಕ್ತಿ the ablative, ಷಷ್ಠೀ ವಿಭಕ್ತಿ the genitive and ಸಪ್ತಮೀ ವಿಭಕ್ತಿ the locative. From this arrangement the vocative is excluded, as being only a particular form of the nominative, but in the examples it shall be retained.

* * * *

N.	ಹೆರತು	ಪೆರತು or ಪೆರದು	... Another thing.
A.	ಹೆರತ ... ಹೆರತನ್ನು ...	ಪೆರತಂ	... Another thing.
I.	ಹೆರತರಿಂದ ...	ಪೆರತರಿಂ	... By another thing.
D.	ಹೆರತಕ್ಕೆ ...	ಪೆರತಕ್ಕೆ	... To another thing.
Ab.	ಹೆರತರದೆಸೆಯಿಂದ...	ಪೆರತರತ್ತಣಿಂ	... From another thing.
G.	ಹೆರತರ ...	ಪೆರತರ	... Of another thing.
L.	ಹೆರತರಲ್ಲಿ ...	ಪೆರತರೊಳ್	... In another thing.

ಹೆರವು other things.

End:

ನಾವು ಮಾಡಲಾರೆವು or ಮಾಡಲರಿಯೆವು	... We cannot do.
ನೀವು ಮಾಡಲಾರಿರಿ or ಮಾಡಲರಿಯಿರಿ	... Ye cannot do.
ಅವರು ಮಾಡಲಾರರು or ಮಾಡಲರಿಯರು	... They (m. and f.) cannot do.
ಅವು ಮಾಡಲಾರವು or ಮಾಡಲರಿಯವು	... They (n) cannot do.

The defective verb ಬೇಕು, and its negative ಬೇಡ, when used as auxiliaries correspond in signification with the English verbs must and must not; but when used simply after a noun, they denote want or requisition; as ನನಗೀ ಪುಸ್ತಕಗಳು ಬೇಕು I want these books ನನಗೆ ಹಣ ಬೇಕು, I require money. These verbs are the same for all the tenses, the negative verb only takes the personal affixes for the second person plural.

* * * *

When the word ಇಲ್ಲ or ಅಲ್ಲ is added to the conjunctive particles and joined to two different words, it signifies neither; as ಅಲ್ಲಿ ನೀನೂ ಇಲ್ಲ ಅವನೂ ಇಲ್ಲ, Neither you nor he were there. ಆ ಶಿಶುವಿಗೆ ತಂದೆಯೂ ಇಲ್ಲ ತಾಯಿಯೂ ಇಲ್ಲ that infant has neither father nor mother, ಇದು ಹಿತ್ತಾಳೆಯೂ ಅಲ್ಲ ಚಿನ್ನವೂ ಅಲ್ಲ this is neither brass nor gold.

(ವಿ.ವಿ).—

ಸಮಗ್ರ. ಬರವಣಿಗೆಯು ಶ್ಲಾಘ್ಯವಾದುದು, ತಪ್ಪುಗಳಿಲ್ಲ. ಕರ್ಣಾಟಕಭಾಷಾ ಮರ್ಯಾದೆಯನ್ನು ಸುಲಭವಾಗಿ ವ್ಯಾಕರಣ ಸಂಪ್ರದಾಯಗಳೊಡನೆ ಅಭ್ಯಾಸಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ವ್ಯಾಕರಣ ಸೂತ್ರಗಳನ್ನೆಲ್ಲ ಆಂಗ್ಲೇಯ ಭಾಷೆಯಲ್ಲಿಯೇ ಬರೆದು ಇರುತ್ತಾರೆ. ಸಿ. ಪಿ. ಬ್ರೌನ್ ಸಾಹೇಬರ ಅಪ್ಪಣೆಯಂತೆ ಇದನ್ನು ಬರೆದಿರುವಂತೆ ಪ್ರಾಯಃ ತೋರುತ್ತದೆ. ಈ ಗ್ರಂಥದ ಕೊನೆಯಲ್ಲಿ ಅನುಬಂಧವು ಬರೆದಿದೆ. ಈ ಗ್ರಂಥವು ಸನ್ ೧೮೨೦ ನೆಯ ಇಸವಿ ಆಗಸ್ಟು ೧ ರಲ್ಲು ೪-೪೫ ಗಂಟೆಗೆ ಕೈಸೇರಿದಂತೆ ಅನುಬಂಧದ ಕೊನೆಯಲ್ಲಿ ಬರೆದಿದೆ. ಬರಹವು ಪ್ರಾಯಃ ಬ್ರೌನ್ ಸಾಹೇಬರದೇ ಇರಬಹುದು.

No. 6. ಶಬ್ದ ಮಣಿದರ್ಪಣ ಸೂತ್ರಗಳು.

ŚABDA MAṆIDARPAṆA SÛTRAGAḶU.

Substance, Palm-leaf. Size, 13¾—1¼ inches. Pages, 72. Lines, 5 on a page. Character, Kanarese. Condition, injured. Appearance, old. Mode of writing, good, free from mistakes and omissions.

Complete.

The original Sūtras in the Kanda metre, contained in the Śabdamaṇidarpaṇa, a wellknown standard work on Kannaḍa grammar. The author Kēśava or Kēśirāja was the Daṇḍanāyaka in the court of Sarvajña, a cōla King who ruled about 1260 A.D. Mallikārjuna, father of Kēśirāja, wrote Sūktisudhārṇava and was in the court of Hoysaḷa, Sōmēśvara (1233-1254). Sumanōbāṇa, the author's maternal grandfather, was the Kaṭakōpādhyāya in the court of Hoysaḷa Narasiṁha (1136-1171 A.D.). Janna, maternal uncle of Kēśirāja, was a great poet and got the title "Kavicakravartin" from the king Ballāḷā of Dvārasamudra (1209 A.D.). The author states in the beginning that the stanzas and passages given as illustrations in this work were taken from the works written by Gajaga, Guṇanandin, Manasija, Asaga, Candrabhaṭṭa, Guṇavarma, Śrivijaya, Honna, Pampa and Sujanōttaṁsa. Quotations are also taken from the works of Rāma, Nāgacandra, Nāgavarma, Nēmicandra, Hēmarāja and Brahmaśiva. This work has been written after the model of Nāgavarma's Śabdasmṛti but in an elaborate manner. The other works of the author are (1) Cōḷapālakacarita, (2) Śrîcitramāle, (3) Subhadrāharaṇa, (4) Prabōdhacandra and (5) Kirātārjunîya. None of these works have been traced out.

Date of transcription.—The third day of the lunar month Adhikajyēṣṭha in the year Pingala. Name of the scribe.—Śānubhōga Liṅgappayya who copeid this Ms. for Tōṭadayyana Nāyakarayya.

Beginning :

ಶ್ರೀವಾಗ್ದೇವಿಗೆ ಶಬ್ದದಿ ।
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊ ॥
ಛುದ್ಭಾವಿಪ ನಿರ್ಮಲಮೂರ್ತಿಗಿ
ಛಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥
ಕವಿ ಸುಮನೋಬಾಣನ ಯಾ ।
ದವಕಟಕಾಚಾರ್ಯನೆಸೆವ ದೌಹಿತ್ರನೆ ನಾಂ ।
ಕವಿ ಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೆಂ ॥
ಗುಣಮಮರೆ ಶಬ್ದಮಣಿದ
ರ್ಪಣನಾಮವನಿಟ್ಟು ನೆಪೆಯೆ ಕರ್ಣಾಟಕ ಲ ।
ಕ್ಷಣ ಶಬ್ದಶಾಸ್ತ್ರಮಂ ಲಾ
ಕ್ಷಣಿಕರ್ ಪೇಪೆಂದು ಬೆಸಸೆ ಬಗೆವ್ರುಗೆ ಪೇಪ್ದೆಂ ॥

*   *   *

ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ ॥
ವಿಜಯರ ಹೊನ್ನನ ಹಂಪನ ।
ಸುಜನೋತ್ತಂಸನ ಸುಮಾರ್ಗ ಮಿದಪೊಳೆ ಲಕ್ಷ್ಯಂ ॥
ಪ್ರಾಸುಚ್ಛಂದೋನ್ವಯು ವಿ ।
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ ॥
ವ್ಯಾಸಂ ತದ್ವ್ಯಾಕುಲಮೆಂ ।
ದಾ ಸೂತ್ರಕ್ಕರ್ಥವೃತ್ತಿ ವರ್ತ್ತಿಗೆ ಬರೆದೆಂ ॥
ಜನಮಂಗೀಕರಿಪುದು ಸೆ ।
ಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾ
ನ ನಿಜೇಷ್ಟಸಿದ್ಧಿಗಳ್ ನೆಲ ।
ಗೆ ನಿಂದ ಕಾರಣದೆ ಶಬ್ದಮಣಿದರ್ಪಣಮಂ ॥
ಕ್ರಮದಿಂದೆ ಸಂಧಿ ನಾಮಂ
ಸಮಾಸಮಾ ತದ್ಧಿತಂ ಪೊದಳ್ದಾಖ್ಯಾತಂ ।
ಸಮುದಿತ ಧಾತುವಪಭ್ರಂ ।
ಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್
ಅನುಕೂಲಪವನನಿಂ ಜೀ
ವನಿಷ್ಟದಿಂ ನಾಭಿ ಮೂಲದೊಳ್ಕಹಳೆಯ ಪೊಂ ।
ಗಿನವೊಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ ॥

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ ।
ಲೋಕಂ ತತ್ವಾಲೋಕದಿ
ನಾಕಾಂಕ್ಷೆಪ ಮುಕ್ತಿಯುಕ್ಕುಮದೆ ಬುಧರ್ಗೆ ಫಲಂ ॥
ಆರಯಿ ತಚ್ಛಾಸ್ತ್ರವ್ಯವ
ಹಾರಜ್ಞಾನಾರ್ಥಮಾಗಿ ಪೇೞ್ವಿಡುಗುಂ ॥
ಧೀರರಿನಕ್ಷರಸಂಜ್ಞಾ
ಕಾರಂ ವ್ಯಾಕರಣದಾದಿಯೊಳ್ಪರಿವಿಡಿಯಿಂ ॥
ಅಕ್ಕರಮುಂ ವರ್ಣಮುಮೆಂ
ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪುಂ ।
ಬೊಕ್ಕುಚ್ಚರಿಸಲ್ಬಾರದು
ವಕ್ಕರಮಲ್ಲವು ಘನಸ್ವನಾದಿಧ್ವನಿಗಳ್ ॥
ವ್ಯವಹರಿಪುವೆರಡು ರೂಪಿಂ
ದವಕ್ಕರಂ ಶ್ರಾವಣಂ ಸ್ವನ್ಯೈಕಾಕಾರಂ ।
ವಿವಿಧಾಕಾರಂ ಲಿಪಿಭೇ
ದವೃತ್ತಿಯಿಂ ಚಾಕ್ಷುಷಂ ಪುರಾತನ ಮತದಿಂ ॥
ವರ್ಣಂಗಳ ಪಾಠಕ್ರಮ
ವರ್ಣವವೃತಧಾತ್ರಿಯೊಳ್ಪ್ರಸಿದ್ಧಂ ನಿಜದಿಂ ।
ವರ್ಣಂಗಳಕಾರಾದ್ಯಾ
ಪೂರ್ಣತೆಯಂ ಪಡೆವುವಾಳಕಾರಂಬರೆಗಂ ॥
ಕುಳದ ನಿಯಾಮದೊಳೆಂದುಂ
ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ ವಿಕಲ್ಪಂ ।
ಕ್ಷಳನಲ್ಲದಿಲ್ಲ ಸಂಸ್ಕೃತ
ದೊಳಾಲಕಾರಕ್ಕೆ ಪೇಳ್ವೆನದಱಿಂ ಕ್ಷಳನಂ ।
ತರದಿನಕಾರಂ ಮೊದಲಾ
ಗಿರೆ ಪದಿನಾಲ್ಕುಂ ಸ್ವರಂಗಳಾದಿಯು ಪತ್ತ
ಕ್ಕರಮುಂ ಸಮಾನಮೆನಿಸುಗು
ಮೆರಡೆರಡವರೊಳ್ಸವರ್ಣಮೆಂತೋದಿದೊಡ ॥

* * *

ಇದು ಪೂರ್ವ ಪ್ರಕರಣ ಮಿಂ
ತಿದಱೊಳ್ಪ್ರಕಲ್ಪಸಂಜ್ಞೆಪೇೞುವೆನಲ್ಪೀ ॥
ಡುದಿತಪ್ರಕರಣಗಣಸೂ
ತ್ರದಿಷ್ಟದಿಂ ಸಂಜ್ಞೆಯೊಡನೆ ಪೇೞ್ವಿಡುಗುಂ ॥

* * * *

Colophon:

ಇಂತಿದು ಸಂಜ್ಞಾಪ್ರಕರಣಂ.

ಸ್ವರ ಮಿದಿರೊಳರೆ ವಿಭಕ್ತಿ
ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ ।

ಪರಸಂಸ್ಕೃತಕರ್ಣಾಟಕ
ಮೆರಡಱೊಳಂ ನಾಮರೂಢಿಯುಳಿಯದ ಪಕ್ಷಂ ॥

* * * *

ಧಾತುಗಳ್ಗಂ ಪರಮಾದೊಡ
ಜಾತಂ ದ್ವಿತ್ವಂ ಯಕಾರದಲ್ಲಿ ವಿಕಲ್ಪಂ ।
ಮಾತೇನುಯ್ನುಯ್ಪುಯ್ಬುಯ್
ಧಾತುಗಳೊಳ್ ದ್ವಿತ್ವಮಲ್ಲದಿಲ್ಲ ವಿಕಲ್ಪಂ ॥
ಪ್ರತಿಷೇಧದ ಧಾತುಗೆ ಮುಂ
ದೆ ತಱುಂಬೆ ವಿಭಕ್ತಿ ಪೂರ್ವಕಾಲ ಕ್ರಿಯೆಯೊಳ್ ।
ಪ್ರತಿಷೇಧದದೆಂಬುದು ಮುಂ
ದೆ ತೋಱೆ ಮೇಣ್ ದ್ವಿತ್ವವೃತ್ತಿ ನಿತ್ಯಮೆನಿಕ್ಕುಂ ॥

Colophon :

ಇದು ಸಮಸ್ತಶಾಬ್ದಿಕಜನಮನೋಜನಿತ ಶಬ್ದಸಂದೇಹಶಲ್ಯ ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿ ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಂಧಿಕಾರ್ಯಮೆಂಬ ಪ್ರಥಮಸಂಧಿ ಸಂಪೂರ್ಣಂ ॥

ಕ್ರಿಯೆಯುಂ ನುಡಿಯದುದು ವಿಭ
ಕ್ತಿಯುನಿಲ್ಲದುದರ್ಥಮುಳ್ಳುದಂತದು ಲಿಂಗಂ ।
ನಿಯತ ಚತುರ್ಭೇದಮದಾ
ರಯೆ ಕೃತ್ತದ್ಧಿತಸಮಾಸನಾಮಸ್ಥಿತಿಯಿಂ ॥
ಭೂತಭವಿಷ್ಯತ್ಕ್ರಿಯೆಗಳ್
ಪೇತವಿಭಕ್ತಿಗಳನುಳಿಯೆ ಕೃತ್ತಪ್ಪುವಸಂ ॥
ಭೂತ್ರಂ ಸಂಪ್ರತಿ ವಿಧಿಗಳೊ
ಳಾತೆಱದಿಂ ಮಧ್ಯಮೋತ್ತಮಕ್ರಿಯೆಗಳೊಳಂ ॥

End :

ತಳೆಗುಂ ಕಾಲಾರ್ಥಮನಾ
ಗಳೀಗಳೆಂಬಾಗಡೀಗಡೆಂಬಿವು ಬಿಂದೂ
ಜ್ಜ್ವಳಮುಮಿವುದಯಮನುಸಿರ್ಪುವು
ತಿಳ ಸವಳದೆ ಪೊತ್ತೆಡೆನೆ ಸವಳ್ತೆಡೆಯೆನೆಯುಂ ॥
ಸವಸಂದ ಕಾಲವಾಚಕ
ಮಿವು ಸಾಡಿದು ನಾಳೆ ನಿನ್ನೆ ಮೊನ್ನೆಗಳಾದಂ
ವಿವರಿಪುವೀವಱು ಮೊನೆಯೋ
ಡವು ಕೆಂಚಿದ್ಭೂತ ಭೂತಕಾಲದ್ವಯದೊಳ್ ॥
ಅವ್ಯಯಪ್ರಕರಣಂ ಸಮಾಪ್ತಂ ॥

ಅಪರಿಮಿತವಿದ್ಯರೆನಿಸಿ
ರ್ದ ಪುರಾಣಕವೀಂದ್ರರಖಿಳಕಾವ್ಯಂಗಳ ಗೂ ।
ಢಪದಪ್ರಯೋಗಮಂ ನೆರ
ಪಿ ಪದಾರ್ಥಂಗಳಂ ಮನಂಬುಗೆ ಬೇಳ್ಪೆಂ ॥
ನಡೆದುದು ಮಾರ್ಗಂ ಪದಮಿಡ
ಲೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ ॥
ತೊಡಗಿದ ಕೃತಿಗಳೊಳಾನೆಯ
ನಡು ಬಡವೆ ತಾನೆ ಲೋಕದೊಳ್ ಲಾಕ್ಷಣಿಕಂ ॥
ದೊರೆವಡೆದ ಚೋಳಪಾಲಕ
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ
ಹರಣಂ ಪ್ರಬೋಧಚಂದ್ರಂ
ಕಿರಾತ್ರಮಿವು ಕೇಶಿರಾಜಕವಿ ರಚಿತಂಗಳ್ ॥
ಸಿರಿಗೀಕ್ಷಿಪ ರಸಚಿತ್ರಂ
ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ ।
ಕರಮಾದುದೆಂದು ಬುಧರಾ
ದರ್ಶಿಪರ್ ಮೆಚ್ಚೆಂದು ಶಬ್ದಮಣಿದರ್ಪಣಮಂ ॥
ಆರ್ಯನ ಯಾದವ ಕಟಕಾ
ಚಾರ್ಯನ ಕೇಶವನ ಶಬ್ದಮಣಿದರ್ಪಣಮುಂ
ಸೂರ್ಯೇಂದುಮೇರುವಾರಿಧಿ
ಪರ್ಯಂತಂ ಪರೆದು ನಿಲ್ಕನಾಕುಳದಿಂದಂ ॥
ಗಮಕಸಮಾಸದಿಂ ರಳಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ।
ವ ಮ ಪ ಹ ಭೇದದಿಂ ವಿರಹಿತಾವ್ಯಯ ಸಂಸ್ಕೃತಲಿಂಗದಿಂ ಪದೋ
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥

Colophon:

ಇದು ಸಮಸ್ತಶಾಬ್ದಿಕಜನಮನೋಜನಿತ ಶಬ್ದಸಂದೇಹಶಲ್ಯ ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಪ್ರಯೋಗಸಾರಶಬ್ದಾರ್ಥನಿರ್ಣಯಂ . . . . . .

ಪಿಂಗಳಸಂವತ್ಸರದ ಅಧಿಕಜ್ಯೇಷ್ಠಶುದ್ಧ ೩ ತೋಟದಯ್ಯನ ನಾಯಕರಯ್ಯನವರಿಗೆ ಸಿನ ಭಾಗಲಿಂಗಪ್ಪನು ಅಯಿಶ್ವರ್ಯ ಆ . . . . . . ಉಂಟಾಗಲಿ ಎಂದು ಹರಸಿ ಬರದು ಕೊಟ್ಟ ಶಬ್ದಮಣಿಸೂತ್ರದ ಪುಸ್ತಕಕ್ಕೆ ಮಂಗಳಮಹಾ.

(ವಿ-ವಿ.)—

ಸಮಗ್ರ. ಬರೆವಣಿಗೆ ಚೆನ್ನಾಗಿದೆ. ಅಲ್ಲಲ್ಲಿ ಶಿಥಿಲವಾಗಿದೆ. ಪುರಾತನ ಪ್ರತಿ. ತಪ್ಪುಗಳು ಅಷ್ಟಾಗಿಲ್ಲ. ಕವಿ ಕೇಶಿರಾಜ. ಜೈನಮತದವನು. ಕ್ರಿ. ಶ. ೧೨೩೩ ರಿಂದ ೧೨೬೮ ರ ವರೆಗೆ ರಾಜ್ಯಭಾರಮಾಡಿದ ಹೊಯ್ಸಳ ಸೋಮೇಶ್ವರ ಆಸ್ಥಾನದಲ್ಲಿದ್ದು "ಸೂಕ್ತಿಸುಧಾರ್ಣವ"

ವೆಂಬ ಗ್ರಂಥವನ್ನು ಬರೆದ, ಮಲ್ಲಿಕಾರ್ಜುನನ ಮಗ. ಮತ್ತು, ಕ್ರಿ.ಶ. ೧೧೩೬ ರಿಂದ ೧೧೭೧ ರ ವರೆಗೆ ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದ ಕವಿ ಸುಮನೋಬಾಣನ ದೌಹಿತ್ರ. ಈ ಕೇಶಿರಾಜನ ಸೋದರಮಾವನಾಗಿದ್ದ ಜನ್ನನು ಕ್ರಿ.ಶ. ಸುಮಾರು ೧೨೦೯ ರಲ್ಲಿದ್ದಂತೆಯೂ ಧ್ವಾರಸಮುದ್ರದ ವೀರಬಲ್ಲಾಳನಿಂದ "ಕವಿ ಚಕ್ರವರ್ತಿ" ಎಂಬ ಬಿರುದನ್ನು ಪಡೆದಂತೆಯೂ ತಿಳದುಬರುತ್ತದೆ. ಈ ಕೇಶಿರಾಜನು ಚೋಳವಂಶದ ಸರ್ವಜ್ಞನ ಆಸ್ಥಾನದಲ್ಲಿ ದಂಡಾಧೀಶನೂ, ಮಂತ್ರಿಯೂ ಆಗಿದ್ದಂತೆ ತಿಳಯಬರುತ್ತದೆ. ವಿಶೇಷ ವಿಷಯಗಳನ್ನು ಕವಿಚರಿತ್ರೆಯ ಒಂದನೆಯ ಭಾಗದಲ್ಲಿ ನೋಡುವುದು. ಇವನು ಚೋಳಪಾಲಕ ಚರಿತ, ಶ್ರೀಚಿತ್ರಮಾಲೆ, ಸುಭದ್ರಾಹರಣ, ಪ್ರಬೋಧಚಂದ್ರೋದಯ, ಕಿರಾತಾರ್ಜುನವೆಂಬ ಬೇರೆ ಐದು ಗ್ರಂಥಗಳನ್ನೂ ಬರೆದಿರುವುದಾಗಿ ಹೇಳಕೊಂಡಿದ್ದಾನೆ. ಆದರೆ ಅವುಗಳಲ್ಲಿ ಯಾವುದೂ ಇದುವರೆಗೆ ದೊರೆತಂತೆ ತಿಳಯಬರುವುದಿಲ್ಲ. ಇದರಲ್ಲಿ ಮೂಲಸೂತ್ರಗಳು ಮಾತ್ರವೇ ಇರುತ್ತವೆ; ವೃತ್ತಿ, ಟೀಕೆ, ಉದಾಹರಣೆಗಳೊಂದೂ ಇಲ್ಲ.

No. 7. ಶಬ್ದಮಣಿದರ್ಪಣ ಸೂತ್ರಗಳು.
ŚABDAMAṆIDARPAṆA SŪTRAGAḶU.

Substance, palm-leaf. Size, $11\frac{5}{8} \times 1\frac{1}{8}$ inches. Pages, 184. Lines, 4 on a page. Character, Kanarese. Condition, slightly injured. Appearance, old. Mode of writing, good and free from mistakes.

At the end of the manuscript there are a few stanzas relating to the Rāmacarita and Śṛṅgāra.

Wants a small portion in the end; otherwise complete.

Same work as the above. By Kēśirāja.

(ವಿ.ವಿ.)—

ಅವ್ಯಯ ಪ್ರಕರಣದಲ್ಲಿ ಸ್ವಲ್ಪಭಾಗವು ಹೊರತು ಗ್ರಂಥವು ಸಂಪೂರ್ಣವೆಂತಲೇ ಹೇಳಬೇಕು. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲವಾಗಿದೆ. ಮೂಲ ಸೂತ್ರಗಳೂ, ಧಾತುಪಾಠವೂ ಇದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ. ಗ್ರಂಥದ ಕೊನೆಯಲ್ಲಿ ಕೆಲವು ಓಲೆಗಳಲ್ಲಿ ರಾಮಚರಿತೆಗೆ ಸಂಬಂಧಪಟ್ಟ ಕೆಲವು ಪದ್ಯಗಳೂ ಕೆಲವು ಶೃಂಗಾರ ಪದ್ಯಗಳೂ ಇವೆ. ಇತರ ವಿಷಯಗಳನ್ನು ನಂ. ೬ ನಲ್ಲಿ ನೋಡಿ ತಿಳಯುವುದು.

No. 8. ಶಬ್ದಮಣಿದರ್ಪಣ ಸೂತ್ರಗಳು.
ŚABDAMAṆIDARPAṆA SŪTRAGAḶU.

Substance, palm-leaf. Size, $14\frac{1}{3} \times 1\frac{1}{2}$ inches. Pages, 82. Lines, 4 on a page. Character, Kanarese. Condition, very much injured. Appearance, very old. Mode of writing, good and free from mistakes.

Complete.

Same work as the above. By Kēśirāja.

(ವಿ.ವಿ.)—

ಸಮಗ್ರ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಶುದ್ಧವಾದ ಪ್ರತಿ. ಬಹಳ ಶಿಥಿಲವಾಗಿದೆ. ಇದರಲ್ಲಿ ಶಬ್ದಮಣಿದರ್ಪಣಮೂಲಸೂತ್ರಗಳಾದ ಕಂದಪದ್ಯಗಳು ಮಾತ್ರವೇ.

ಇರುವುವಲ್ಲದೆ ಉದಾಹರಣೆಗಳೂ ವೃತ್ತಿಯೂ ಕಂಡುಬರುವುದಿಲ್ಲ. ಸಮಾಪ್ತಿವಾಕ್ಯಗಳು ಇದರಲ್ಲಿಲ್ಲ. ಗ್ರಂಥವು ಅವ್ಯಯಪ್ರಕರಣದೊಂದಿಗೆ ಮುಗಿಯುವುದು. ಹಿಂದೆ ವರ್ಣಿತವಾದ ಗ್ರಂಥವೇ. ವಿಶೇಷ ವಿಷಯಗಳನ್ನು ನಂ. 6 ನಲ್ಲಿ ನೋಡಿ ತಿಳಿಯುವುದು.

No. 9. ಶಬ್ದಮಣಿದರ್ಪಣ ಸೂತ್ರಗಳು.
ŚABDAMAṆIDARPAṆA SŪTRAGAḶU.

Substance, palm-leaf. Size, 10⅛ × 2⅛ inches. Pages, 34. Lines, 11 on a page. Character, Kanarese. Condition, slightly injured. Appearance, old. Mode of writing, not bad and not free from mistakes.

Begins on fol. 22*a*. The other works herein are (1) Bhāṣābhūṣaṇa 1*a* and (2) Nāgavaramachandassu 38*a*. (3) Ratnaparīkṣe 43*a* in (Telugu). Complete.

Same work as the above. By Kēśirāja.

(ವಿ.ವಿ.)—

ಸಮಗ್ರ. ಬರೆವಣಿಗೆ ಚೆನ್ನಾಗಿದೆ. ಅಲ್ಲಲ್ಲಿ ಕೆಲವು ತಪ್ಪುಗಳಿವೆ. ಗ್ರಂಥವು ಸ್ವಲ್ಪ ಶಿಥಿಲವಾಗಿದೆ. ಇದರಲ್ಲಿ ಶಬ್ದಮಣಿದರ್ಪಣದ ಮೂಲಸೂತ್ರಗಳು ಮಾತ್ರವೇ ಇವೆ. ವೃತ್ತಿ, ಉದಾಹರಣೆಗಳೊಂದೂ ಇಲ್ಲ. ಸಮಾಪ್ತಿವಾಕ್ಯಗಳೂ ಇಲ್ಲ. ಗ್ರಂಥದ ಆದಿಭಾಗದಲ್ಲಿ ನಾಗವರ್ಮನ ಭಾಷಾಭೂಷಣವೂ ನಾಗವರ್ಮನ ಛಂದಸ್ಸೂ ಇವೆ. ಇದು ಹಿಂದೆ ವರ್ಣಿತವಾದ ಗ್ರಂಥವೇ. ವಿಶೇಷ ವಿಷಯಗಳನ್ನು ನಂ. 6 ನಲ್ಲಿ ನೋಡಿ ತಿಳಿಯುವುದು.

No. 10. ಶಬ್ದಮಣಿದರ್ಪಣ, ಸೋದಾಹರಣವೃತ್ತಿ.
ŚABDAMAṆIDARPAṆA WITH VṚTTI AND ILLUSTRATIONS.

Substance, palm-leaf. Size, 15 × 1¼ inches. Pages, 211. Lines, 5 on a page. Character, Kanarese. Condition, much injured. Appearance, very old. Mode of writing, good and free from mistakes.

Begins on fol. 1*a*. The other work herein is Bhāṣābhūṣaṇa 107*a*. Complete.

Same work as the above; but contains the Vṛtti and illustrations by the author himself.

Date of transcription—10th day of the dark fortnight of the lunar month Vaiśākha in the year Krōdhin, Śaka year 1646, corresponding to 1724 A.D.

Name of the scribe—Celuvarāya.

Beginning:

ಮೂಲ ॥ ಶ್ರೀವಾಗ್ದೇವಿಗೆ ಶಬ್ದದಿ
ನಾನಾವಿಂದ್ರಿಯದ ವಿಷಯಮಂ ಶ್ರೋತ್ರದೊಳು ।
ದ್ಭಾವಿಪ ನಿರ್ಮಲಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

ವೃತ್ತಿ ॥ ಕಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಕೆಂಬ ದೇವಿಗೆ ಪಂಚೇಂದ್ರಿಯಂಗ[ೞ](ಳ) ವಿಷಯಮಪ್ಪ ಶಬ್ದಸ್ಪರ್ಶರೂಪರಸಗಂಧಂಗಳಂ ಶ್ರೋತ್ರೇಂದ್ರಿಯವೊಂದಱೊಳೆ ಶಬ್ದಮುಖದಿನಭಿವ್ಯಕ್ತಿಯಿಂ ಮಾ(ಡ್ಪ) ವಿಮಲಸ್ವರೂಪೆಗೆ ಭುವನಸ್ತುತೆಗೆ ಶಾಸ್ತ್ರಮುಖದೊ[ೞ](ಳ್) ನಮಸ್ಕರಿಸುವೆಂ.

ಮೂಲ ॥ ಕವಿ ಸುಮನೋಬಾಣನ ಯಾ
ದವಕಟಕಾಚಾರ್ಯನೆನಿಪ (?) ದೌಹಿತ್ರನ ನಾಂ ।
ಕವಿ ಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೆಂ ॥

ವೃತ್ತಿ ॥ ಯಾದವ ಕಟಕೋಪಾಧ್ಯಾಯನಪ್ಪ ಸುಕವಿ ಸುಮನೋಬಾಣನ ಮಗಳ ಮಗನಪ್ಪ, ಮಲ್ಲಿಕಾರ್ಜುನದೇವನಂದನನೆಂ ಕೇಶಿರಾಜಕವಿಯೆನಾಂ.

* * * *

ಮೂಲ ॥ ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ ।
ವಿಜಯರ ಹೊನ್ನನ ಹಂಪನ
ಸುಜನೋತ್ತಂಸನ ಸುಮಾರ್ಗವಿದಱೊಳೆ ಲಕ್ಷ್ಯಂ ॥

ವೃತ್ತಿ ॥ ಈ ಕವಿಗಳಾದಿಯಾದವರ ಮಾರ್ಗಂಗಳದಱೊಳೊಳವು.

* * * *

ಮೂಲ ॥ ಕೊರಲುಂ ಜಿಹ್ವಾಮೂಲಮು
ಮುರಮುಂ ತಾಲುಗೆಯು ; ಮೋಷ್ಠಮುಂ ನಾಸಿಕೆಯುಂ ।
ಶಿರಮುಂ ದಂತಮು ; ಮೆಂದ
ಕ್ಕರಮುದಯಿಪ ತಾಣಮಾದುವೀಪೇೞ್ದೆಂಟುಂ ॥

ವೃತ್ತಿ ॥ ಕೊರಲುಂ, ತಾಲುಗೆಯುಂ, ಓಷ್ಠಮುಂ, ಶಿರಮುಂ, ದಂತಮುಂ, ಜಿಹ್ವಾಮೂಲಮುಂ, ಉರಮುಂ, ನಾಸಿಕೆಯುಂ ಎಂದೀ ಪೇೞ್ದೆಂಟುಂ ಅಕ್ಕರಮುದಯಿಪ ತಾಣಮಾದುವು. ಅವಱೊಳೇಕ ಸ್ಥಾನಂಗಳನಱಿದು ವರ್ಣಾವೃತ್ತಿಯುಂ ಮಾಡ್ಪುದು.

ಘಾತಕ್ರಮಮದರ್ಕೆ . . . . . ಅನ್ವಯಮುಂ ಪೇೞ್ದೆಂ.
ಅ, ಆ, ಕ, ಖ, ಗ, ಘ, ಙ, ಹ, ವಿಸರ್ಜನೀಯಂಗಳ್ಗೆ ಕೊರಲ್.
ಇ, ಈ, ಚ, ಛ, ಜ, ಝ, ಞ, ಯ, ಶಂಗಳ್ಗೆ ತಾಲುಗೆ.
ಉ, ಊ, ಪ, ಫ, ಬ, ಭ, ಮ, ಉಪಧ್ಮಾನೀಯಂಗಳ್ಗೋಷ್ಠಂ.
ಋ, ೠ, ಟ, ಠ, ಡ, ಢ, ಣ, ರ, ಷಂಗಳ್ಗೆ ಶಿರಂ.
ಌ, ೡ, ತ, ಥ, ದ, ಧ, ನ, ಲ, ಸಂಗಳ್ಗೆ ದಂತಂ.
ಏದೈತ್ವಂಗಳ್ಗೆ ಕಂಠತಾಲು.
ಓದೌತ್ವಂಗಳ್ಗೆ ಕಂಠೋಷ್ಠಂ.
ವಕಾರಕ್ಕೆ ದಂತೋಷ್ಠಂ.
ಜಿಹ್ವಾಮೂಲೀಯಕ್ಕೆ ಜಿಹ್ವಾಮೂಲಂ.

ಅನುಸ್ವಾರಕ್ಕೆ ನಾಸಿಕೆ.

ವರ್ಗ ಪಂಚಮಯುಕ್ತ ಹಕಾರಕ್ಕಂ ಅಂತಸ್ಥಾನ್ವಿತ ಹಕಾರಕ್ಕಂ ಉರಂ.

ಮೂಲ ॥ ಕವಿಗಳ್ ಸ್ವರದಿಂ ವರ್ಗದಿ, ।
ನವರ್ಗದಿಂ ಯೋಗವಾಹದಿಂ ದೇಸಿಯೊಳು ।
ದ್ಭವಮಪ್ಪ ವರ್ಣದಿಂ [ತಾಂ]ಪಂ
ಚವಿಧಂ ತಾನೆಂದು ತಿಳಪುವರ್ ಶಿದ್ಧಗೆಯುಂ ॥

ವೃತ್ತಿ ॥ ಅ, ಆ, ಇ, ಈ, ಉ, ಊ, ಋ, ೠ, ಌ, ೡ, ಏ, ಐ, ಓ, ಔ ಇವು ಸ್ವರಂಗಳ್.

ಕ	ಖ	ಗ	ಘ	ಙ
ಚ	ಛ	ಜ	ಝ	ಞ
ಟ	ಠ	ಡ	ಢ	ಣ
ತ	ಥ	ದ	ಧ	ನ
ಪ	ಫ	ಬ	ಭ	ಮ

ಇವು ವರ್ಗಂಗಳ್.

ಯ, ರ, ಲ, ವ, ಶ, ಷ, ಸ, ಹ, ಳ—ಇವು ಅವರ್ಗಂಗಳ್ X‍ಕ, ‍ಂ‍ಪ ಅಂ, ಅಃ ಇವು ಯೋಗವಾಹಂಗಳ್, ಱ, ೞ, ಳ, ಎ, ಒ —ಇವೈದೂ ದೇಶೀಯಂಗಳ್. ಕ್ಷ, ಳ 'ಲ' ಕಾರದೊಳ್ಭೇದ ಮಾಗೊಂಡುಂಟು. ಇಂತು ಶುದ್ಧಾಕ್ಷರಂ ನ . . . . ಪಂಚವಿಧಮೆಂದು ಕವಿಗಳ್ ಬಾಲಶಿಕ್ಷೆಯಂ ಮಾಡ್ಪಿರ್.

* * * *

ಮೂಲ ॥ ಇದು ಸಂಜ್ಞಾ ಪ್ರಕರಣ ಮಿಂ ।
ತಿದಪೊಳ್ ಸಾಕಲ್ಯಸಂಜ್ಞೆ ಬೇಙ್ದವೆನಲ್ಬೇ
ಡುದಿತ ಪ್ರಕರಣ ಗಣಸೂ
ತ್ರದಿಷ್ಟದಿಂ ಸಂಜ್ಞೆಯೊಡನೆ ಪೇೞಲ್ಪಡುಗುಂ ॥

ವೃತ್ತಿ ॥ ಇದು ಸಂಜ್ಞಾಪ್ರಕರಣಂ ಸಮಾಪ್ತಂ ॥

ಮೂಲ ॥ ಸ್ವರಮಿದಿಪೊಳರೆ ವಿಭಕ್ತಿ ।
ಸ್ವರಕಂ ಪ್ರಕೃತಿ ಸ್ವರಕಮಕ್ಕುಂ ಲೋಪಂ ॥
ವರಸಂಸ್ಕೃತ ಕರ್ಣಾಟಕ
ಮೆರಡಪೊಳ್ಗಂ ನಾಮರೂಢಿಯಾಳದ ಪಕ್ಷಂ ॥

ವೃತ್ತಿ ॥ ಸ್ವರಂ ಪರಮಾಗೆ ಸಂಸ್ಕೃತದ ಕನ್ನಡದ ವಿಭಕ್ತಿ ಸ್ವರಕ್ಕಂ ಸಹಜಸ್ವರಕ್ಕಂ ನಾಮ ಪ್ರಸಿದ್ಧ (ಢಿ) ಕೆಡೆದಪಕ್ಷಂ ಲೋಪಮಕ್ಕುಂ. ಸಂಸ್ಕೃತ ವಿಭಕ್ತಿಯ ಸ್ವರಕ್ಕೆ ಲೋಪಂ—ಕ್ರಮದೆ + ಆಯುಷ್ಯ = ಕ್ರಮದಾಯುಷ್ಯ. ಈಶ್ವರನ + ಒಲವು = ಈಶ್ವರನೊಲವು. ಇಂದ್ರಂಗೆ + ಐರಾವತಂ = ಇಂದ್ರಂಗೈರಾವತಂ. ಗಿರಿಯುತ್ತಣಿಂದೆ + ಇಳಿದಂ = ಗಿರಿಯುತ್ತಣಿಂದಿಳಿದಂ. ಗೃಹದಲ್ಲಿ + ಇರ್ದಂ = ಗೃಹದಲ್ಲಿರ್ದಂ. ಆ ಪ್ರಕೃತಿ ಸ್ವರಲೋಪಂ—ಬುಧ + ಅರ್ = ಬುಧರ್. ಉದ್ಧತ + ಅರ್ = ಉದ್ಧತರ್. ದೇವ + ಎಂಬ = ದೇವೆಂಬ: ದೇವೆಂಬರ ಸಿಂಬಾಳೆಂಬ. ರಾಗ + ಇಸು = ರಾಗಿಸು. ಭೋಗ + ಇಸು = ಭೋಗಿಸು, ಭಂಗ + ಇಸು = ಭಂಗಿಸು. ಭಾವ + ಇಸು = ಭಾವಿಸು.

2

ಭೋಗಿಸು ಭಾವಿಸು ರಾಗಿಸು ಭಂಗಿಸು ಪಾಲಿಸು.

ಸಾಲದೆ ಹೇಳೋಂ ನಮಃ ಶಿವಾ ಎಂಬ ಪದಂ.

ಕರ್ಣಾಟಕ ಪ್ರಕೃತಿಯ ವಿಭಕ್ತಿ ಸ್ವರಲೋಪಕ್ಕೆ — ನೆಲದಿಂದೆ + ಉಣ್ಬಂ = ನೆಲದಿಂದುಣ್ಬಂ. ಲೇಸಿಂಗೆ + ಒಡೆಯಂ = ಲೇಸಿಂಗೊಡೆಯಂ. ಮರದತ್ತಣಿಂದೆ + ಇಳಿದಂ = ಮರದತ್ತಣಿಂದಿಳಿದಂ. ಚಲದ + ಆಣ್ಮಂ = ಚಲದಾಣ್ಮಂ. ಪೊಲದಲ್ಲಿ + ಇರ್ದಂ = ಪೊಲದಲ್ಲಿರ್ದಂ.

ಆಖ್ಯಾತವಿಭಕ್ತಿಯ ಯವ್ರುಲಿಂಗೆ ಲೋಪಮುಂಟು — ಮಾಡಿದೆವು + ಒಳ್ಪಂ = ಮಾಡಿದೆವೊಳ್ಪಂ.

ಕ್ರಿಯಾ ವಿಭಕ್ತಿಯ ಆದೇಶಸ್ವರಕ್ಕಂ ಲೋಪಮುಂಟು — ಕೂಡಿ + ಇರ್ದಂ = ಕೂಡಿರ್ದಂ. ಕೂಡೆ + ಏಳ್ದಂ = ಕೂಡೇಳ್ದಂ. ಪಸಿದು + ಉಣ್ಡಂ = ಪಸಿದುಣ್ಡಂ.

ತೃತೀಯೆಗಾದೇಶಮಾದ ಯಕಾರಕ್ಕಂ ಲೋಪಂ — ನೆಲದೆ + ಏಳ್ತಂದಂ = ನೆಲದೇಳ್ತಂದಂ. ಪೋಲದೆ + ಏಳ್ತಂದಂ = ಪೊಲದೇಳ್ತಂದಂ.

ಪ್ರಕೃತಿಸ್ವರಲೋಪಕ್ಕೆ — ಅರಸ್ + ಅರ್ = ಅರಸರ್. ಅಚ್ಚ + ಆನೆ = ಅಚ್ಚಾನೆ. ಜೀಯ + ಎಂಬ = ಜೀಯೆಂಬ. ಬಡಬಡ + ಆದಂ = ಬಡಬಡಾದಂ. ದಾಳಿ + ಇಟ್ಟಂ = ದಾಳಿಟ್ಟಂ. ಸವಡಿ + ಇಟ್ಟಂ = ಸವಡಿಟ್ಟಂ.

ಯಕಾರಕ್ಕೆ — ಸೇಸೆ + ಇಕ್ಕಿದಂ = ಸೇಸಿಕ್ಕಿದಂ. ಮುಡಿಗೆ + ಇಕ್ಕಿದಂ = ಮುಡಿಗಿಕ್ಕಿದಂ. ಮಾತು + ಎಲ್ಲಂ = ಮಾತೆಲ್ಲಂ, ಮುನ್ನಿನಿವಂ ಎಂಬಂತೆ.

ಉಕಾರಕ್ಕೆ—ಸುತ್ತು + ಓಲಿ = ಸುತ್ತೋಲಿ. ಹತ್ತು + ಎಂಟು = ಹತ್ತೆಂಟು. ಲೇಸು + ಎಲ್ಲಂ = ಲೇಸೆಲ್ಲಂ. ಸೊವಡು + ಒಂದು = ಸೊವಡೊಂದು.

ನಾಮಭಂಗಂ ಕೆಡುವೊಡೆ ಸಂಸ್ಕೃತ ಕರ್ಣಾಟಕ ಪ್ರಕೃತಿಗೆ ಲೋಪವಿಲ್ಲ — ಪಟು + ಏಕವಾಕ್ಯಂ = ಪಟುವೇಕವಾಕ್ಯಂ ಮಡುವಿದು.

End :

ಆರ್ಯನ ಯಾದವಕಟಕಾ ।
ಚಾರ್ಯನ ಕೇಶವನ ಶಬ್ದಮಣಿದರ್ಪಣಮಂ ॥
ಸೂರ್ಯೇಂದುಮೇರುವಾರಿಧಿ
ಪರ್ಯಂತಂ ಪರೆದು ನಿಲ್ಕನಾಕುಳದಿಂದಂ ॥

ಇದು ಸಮಸ್ತ ಶಾಬ್ದಿಕಮನೋಜನಿತ ಶಬ್ದಸಂದೇಹಶಲ್ಯ ಚಾರುಚುಂ (ಬಕಾಸುವಾನಾನೂನ ಕರ್ಣಾಟಕಲಕ್ಷಣ) ಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಪ್ರಯೋಗಸಾರಶಬ್ದಾರ್ಥನಿರ್ಣಯಂ ನವಮ ಪ್ರಕರಣಂ ॥

ಗಮಕಸಮಾಸದಿಂ ಟಟಿಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ ।
ಸಮುಚಿತಮಾಗಿಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ॥

ವ ಮ ಪ ಹ ಭೇದದಿಂ ವಿರಹಿತಾನ್ವಯು ಸಂಸ್ಕೃತಲಿಂಗದಿಂ ಪದೋ ।
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥

ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು ಸಾವಿರದ ಆರನೂರ ನಾಲ್ವತ್ತಾರ (ನೆಯ) ಕ್ರೋಧಿ ಸಂವತ್ಸರದ ವೈಶಾಖ ಬಹುಳ ೧೦ ಲ್ಲು ಅಪ್ಪಾ ಜೈ . . . . . ಪುತ್ರನಾದ ಚೆಲುವರಾಯನು ಬರೆದ ಶಬ್ದಮಣಿದರ್ಪಣದ ಪುಸ್ತಕಕ್ಕಂ ಮಂಗಳಂ. (1724 A.D.) ಶ್ರೀಮತೇ ವೇಲಾಪುರೀ ಸೌಮ್ಯಕೇಶವಾಯ ನಮಃ ॥

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಬರೆವಣಿಗೆ ಚೆನ್ನಾಗಿದೆ. ಸೂತ್ರವೂ, ವೃತ್ತಿಯೂ, ಪ್ರಯೋಗಗಳೂ ಇವೆ. ಮಿಕ್ಕ ವಿಷಯಗಳನ್ನು ನಂ. 6 ರಲ್ಲಿ ನೋಡಿ ತಿಳಿಯುವುದು.

No. 11. ಶಬ್ದಮಣಿದರ್ಪಣ, ಸೋದಾಹರಣವೃತ್ತಿ.
ŚABDAMAṆIDARPAṆA WITH VṚTTI AND ILLUSTRATIONS.

Substance, palm-leaf. Size, 15¼ × 1¼ inches. Pages, 160. Lines, 6 on a page. Character, Kanarese. Condition, very much injured. Appearance, very old. Mode of writing, fair but not free from mistake.

Complete, but imperfect.

Same work as the above.

(ವಿ. ವಿ.)—

ಸಮಗ್ರ. ಆದರೆ ಓಲೆಗಳು ಅತ್ಯಂತ ಶಿಥಿಲವಾಗಿವೆ. ಪತ್ರಸಂಖ್ಯೆಯು ಕ್ರಮವಾಗಿಲ್ಲ. ಬಹಳವಾಗಿ ಕ್ರಿಮಿದಷ್ಟವಾಗಿವೆ. ಇದರಲ್ಲಿ ಮೂಲಸೂತ್ರಗಳಿಗೆ ವೃತ್ತಿಯೂ ಉದಾಹರಣೆಗಳೂ ಇವೆ. ಬರೆವಣಿಗೆ ಸಾಮಾನ್ಯವಾಗಿದೆ. ಅಲ್ಲಲ್ಲಿ ತಪ್ಪುಗಳೂ ಇವೆ. ಈ ಗ್ರಂಥದ ಮತ್ತು ಕವಿಯ ವಿಷಯವಾಗಿ ಹಿಂದೆ ವರ್ಣಿತವಾಗಿರುವ ನಂ. 10 ರ ಲ್ಲಿ ನೋಡಿ ತಿಳಿಯುವುದು.

No. 12. ಶಬ್ದಸ್ಮೃತಿ.
ŚABDASMṚTI

Substance, Śrītāla. Size, 13⅗ × 2½ inches. Pages, 37. Lines, 10 on a page. Character, Kanarese. Condition, slightly injured. Appearance, old. Mode of writing, good and free from mistakes.

Complete.

An original work on Kanarese grammar by Nāgavarma II. This work forms a portion of the Kāvyāvalōkana by the same author. For other particulars regarding the author vide No. 1 *ante*.

Beginning:

ಕಂದ ॥ ಶ್ರೀವರ್ಧಮಾನನಾನತ ।
ದೇವಾಧಿಪಮಕುಟಕೋಟಿಘಟ್ಟಿತಚರಣಂ ॥
ಕೇವಲವಿಬೋಧಲೋಚನ ।
ನಾವಗಮೊಲ್ದೀಗೆ ಕಾವ್ಯದೊಳ್ಮಮಗರಿವಂ ॥

ಪರಮಾಗಮಮೂರ್ತಿ ಚರಾ ।
ಚರಲೋಕಾಲೋಕಸಂಪ್ರದಾಯಿನಿ ವಿಬುಧೋ ॥
ತ್ಕರಮಾನಸಾಬ್ಜವಾಹಿನಿ ।
ಸರಸ್ವತೀದೇವಿ ವರದೆಯಕ್ಕೆಮಗೆಂದುಂ ॥

ಸಕಲ ಬುಧಸಮಿತಿ ನೆರೆಕೊಂ ।
ಡು ಕೊನೆದು ನೆಲವಿಂದೆ ಕೀರ್ತಿಸುತ್ತಿರೆ ಮುದದಿಂ ॥
ಸುಕರಮದಾಗಿರೆ ಕರ್ಣಾ ।
ಟಕದಿಂ ಕಾವ್ಯಾವಲೋಕಮಂ ವಿರಚಿಸುವೆಂ ॥

ಕವಿಗಳ್ಗದು ಕೈಗನ್ನಡಿ ।
ಕವಿತೆಗೆ ಬಾಳ್ಮೊದಲುದಾತ್ತವಾಗ್ದೇವತೆಗು ॥
ತ್ಸವಕೇತುಕೋಶಗೃಹಮೆನೆ ।
ಭುವನದೊಳಿದು ಪರೆದು ನಿಲ್ವುದೊಂದಚ್ಚರಿಯೇ ॥

ಸಮುಚಿತಶಬ್ದಸ್ಮೃತಿ, ಕಾ ।
ವ್ಯಮಲವ್ಯಾವೃತ್ತಿ ಗುಣವಿವೇಕಂ ರೀತಿ ॥
ಕ್ರಮ, ರಸನಿರೂಪಣಂ ಕವಿ ।
ಸಮಯದಿವಿಂತೈದುಮಿದಜೊಳಧಿಕರಣಂಗಳ್ ॥

ಮಹಾ ಸ್ರಗ್ಧರೆ ॥ ಪರಮಾರ್ಥಂ ಬೇಟಿಕೆ ಪಟ್ಟಿರ್ದಧಿಕರಣ ಮಿಮಂತ್ರಯ್ದಜೊಳ್ ಶಬ್ದಸಿದ್ಧಿ ।
ಸ್ಮರಣಕ್ಕಾದ್ಯಕ್ಕದಾತ್ತಪ್ರಕರಣಗಣಸಾವೃತ್ತಿಯುಂ ಪೊರ್ದ್ದಿ ನಿಲ್ಕುಂ ॥
ತರದಿಂದಂ ಸಂಧಿ ನಾಮಸ್ಥಿತಿ ವಿತತಸಮಾಸಕ್ರಮಂ ತದ್ಧಿತಂ ವಿ ।
ಸ್ತರರೂಪಾಖ್ಯಾತಮಾಖ್ಯಾತಮುಮೆನೆ ದೊರೆವೆತ್ತಯ್ದುಮಧ್ಯಾಯವರ್ಗಂ ॥

ಕಂದ ॥ ಸ್ವರಮೊಂದು ವ್ಯಂಜನಮೆರ ।
ಡೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ ॥
ಬರೆ ಪದಿನಾಲ್ಕುಂ ಸ್ವರಮಾ ।
ಪರಿಶೇಷವ್ಯಂಜನಂಗಳರೆಮಾತ್ರಕೆಗಳ್ ॥

ಉದಾಹರಣೆ —

ನಿರುಪಮರಮೇಯಮಹಿಮರ್ ।
ಚರಿತಾರ್ಥರ್ ಸ್ವಪ್ರದಾನರಾದೀ ಪ್ರಭವರ್ ॥
ಸ್ವರದಂತಿರೆ ಪದಿನಾಲ್ವರ್ ।
ಪರಿವಿಡಿಯಿಂ ಮನುಗಳಾದರಲ್ಲಿಂಬಳಿಯಂ ॥

ವ್ಯಂಜನಕ್ಕೆ ಉದಾಹರಣೆ —

ಉದ್ಯೋತಿತವಿಶ್ವರ್ ಕೃತ ।
ವಿದ್ಯರ್ ಸೋಷ್ಮಪ್ರತಾಪರಖಿಲಾಂತಪದ ॥
ಕ್ಕಾದ್ಯ ವ್ಯಂಜನದಂತನ ।
ವದ್ಯರ್ ಮೂವತ್ತುಮೂವರಾದರ್ ದೇವರ್ ॥

ಸೂತ್ರಂ—

ಸ್ವರದೊಳಗಮೇಕಮಾತ್ರಂ ।
ನಿರಂತರಂ ಹ್ರಸ್ವ, ಮಱದ್ವಿಮಾತ್ರಮೆ ದೀರ್ಘಂ ॥
ಪರಿವಿಡಿಯಿಂ ಮೂತ್ರಾತ್ರಯು ।
ಪರಿಗತಮಪ್ಪುದೆ ಮಲಂ ಪ್ಲುತಂ ತಾನಕ್ಕುಂ ॥

ಉದಾಹರಣೆ—

ಮೊಕ್ಕಳಮೆಸೆದಿರ್ಪ್ಪನಮೇಳ ।
ಪೊಕ್ಕುಚಿತಂ ಹ್ರಸ್ವದೀರ್ಘಸಹಿತಂ ಪ್ಲುತಮೆ ॥
ಕ್ಕೆಕ್ಕೆಯೆ ನೆಗೞ್ತೆರ್ಪ್ಪ್ರೆರ್ಮ್ಮದಲೊಳ್ ।
ಕು ಕ್ಕೂ ಕೂ ಎಂದು ಕೋೞಿ ಕೂಗಿದುದಾಗಳ್ ॥

* * * *

ಸೂತ್ರ—

ಕಂದ ॥ ಲರಡಗ್ರಹಣದೆ ಳ ಱ ೞ ।
ಕ್ಷರಮಕ್ಕುಂ ಪೀಡನಪ್ರಯತ್ನಾಶಯದಿಂ ॥
ದೊರೆಕೊಂಡ ಸಂಖ್ಯೆಯೊಳಮನು ।
ಕರಣದೊಳಂ ವರ್ತಿಕುಂ ಮಹಾಪ್ರಾಣಂಗಳ್ ॥

ಉದಾಹರಣೆ—

ಬೆಳಗುಗಳ ಬೆಳೆದ ಬಳ್ಳಗದ ।
ಬಳಸುಗಳೊಳಗೊಳಗೆ ತೊಳಗಿ ಪೊಳೆಪೊಳೆದೊಳಗು ॥
ಜ್ಜಳಸಿ ತಳವಳಸಿ ದೆಸೆಗಳ ।
ನೞದ್ದುಗಸು ಜೊೞ್ಕೞದ್ದು ಮಿೞದ್ದು ತೞದ್ದುತ್ತಾಗಳ್ ॥
ತೊರೆಗಳ ಪುಳಿನತಳಂಗಳ ।
ತೆರಪುಗಳರೆದೆರೆದು ಪೋಲ್ತುವೆರ್ದ್ದೆರೆ ದಿರೆ ನಾ ॥
ಣೆರಕದಿನರೆದೆರೆದೋಪಳ ।
ಮಿರುಗುವ ಘನಜಘನತಳದ ತೆಱಪಿನ ತೆಱನಂ ॥
ಕೞಲೆ ನುಡಿದಳಲೆ ಬಗ್ಗಿಸಿ ।
ಘೞಲಿಸೆ ನಡೆಯೆಂದು ಜಡಿದು ಸಾರಥಿಗುಂ ಪಾಂ ॥
ಗ ೞಿದು ನಿಲಲೀಯದಲ್ಲಿಂ ।
ದ್ದೆೞತಿದೊಯ್ವಂತೊಯ್ದಳಾತ್ಮಪರನಂ ನರನಂ ॥
ಮೊಱೆದೆಱಗುವರಿಯ ಮಿಱುಗುವ ।
ಸೞಲಂ ಗಱೆವಿಡಿದು ಮೊನೆವರಂ ನರನೆಡೆಯೊಳ್ ॥
ಪಱೆದು ಕಿಱಿಕಿಱಿದೆ ಕೆದಱಿರೆ ।
ಸರಲೊಳ್ ಕೊಱೆ ಕೊಱೆದು ಸೆಱೆಯೆ ಕುಱಿಕುಱಿದಱಿದಂ ॥

ಅವರಾರ್ಥಕ್ಕೆ—

ನೇಸಱಿಂ ಮೆಱಗುವಾಡಿ ಜಯಾವಹಮೆಂಬನಂ ।
ಬೀಸೆ ಬೆಂಬಳಿಯಃನೊಯ್ಯನೆ ಗಾಳಿ ರಣಾಜಿತೋ ॥
ದ್ಭಾಸಿ ಫಲ್ಗುಣನ ಜೋಡಿಸೆ ಭೋಂಕನೆ ನೂರ ನೂ ।
ಚ್ಛಾರ್ಸಿರಂಗಳವ್ರೊಲಾಯ್ತು ರಥಂ ಕಡುವೇಗದಿಂ ॥
ತ್ರ್ಯಂಬಕಲೋಚನಾರ್ಚಿಗಪಿದಗ್ಗಳಮೆಂಬಿನಮೇಳ್ಗಿಯೊಳ್ಕಖಾ ।
ಡಂಬರಮೆಯ್ದೆ ನೀಳ್ದೊಳದುವಾಡಿ ನಿಶಾಚರಮುಂಡನನ್ನಿದು ? ॥
ಮೆಂಬ ಛಟಚ್ಛಟೆಂಬ ಧಗಿಲೆಂಬ ಧಗದ್ಧಗಮೆಂಬ ಧಟ್ಟ್ಚಿ ಘೀ ।
ಟ್ಟೆಂಬ ರವಂ ಕರುತ್ತ್ರಡಸಿ ಮೆಲ್ವ ಸರಕ್ಕನುಸಾರಿಯಪ್ಪಿನಂ ॥

ಸೂತ್ರ—

ನಿರುತಂ ಪ್ರಕೃತಿಪ್ರತ್ಯಯ ।
ಮೆರಡುಮೊಡಂಬಟ್ಟು ತೋಱಿತ ಪದಮೆನೆ ಪಡುಗುಂ ॥
ಪರವರ್ಣದೊಳೆಳಸಿಕ್ಕುರ್ಚ ।
ಸ್ವರರಹಿತವ್ಯಂಜನಂಗಳವು ಸಂಹಿತೆಯೊಳ್ ॥

ಇದ್ದಂ, ಶುದ್ಧಂ, ಸಿದ್ಧಂ, ಬುದ್ಧಂ, ಎನ್ನೊಳ್ ಬೇಳ್ಪುದಂ, ನೆಟ್ಟನೆ ನೀಗೆನಂ, ಸಾವ ರೇಣ್ಯರುಂ ನಾಗರೊರ್.

Colophon:

ಇದು ಶಬ್ದಸ್ಮೃತಿಯೊಳ್ ಸಂಜ್ಞಾ ಪ್ರಕರಣಂ ಸಮಾಪ್ತಂ.

* * * *

ಸೂತ್ರ.—

ಕಾರಕಮುಂ ಕ್ರಿಯೆಯುಂ ಕ್ರಿಯೆ ।
ಕಾರಕದಿಂದನ್ವಿತಾರ್ಥಮಾಗಿಪ್ಪಿನಮಂ ॥
ದಾರೋಪಮೆಯ್ದುಗುಂ ತ ।
ತ್ಕಾರಕಗತಿಯೊಳೆ ವಿಭಕ್ತಿ ಪರಿಣತಮಕ್ಕುಂ ॥

ಪ್ರಯೋಗ :—

ಚಂಪಕಮಾಲೆ

ಅಮೃತದ ಕಂಡಸಕ್ಕರೆಯ ಕೂಟಮುಮೋಪಳ ಕೂಟಮುಂ ಸಮಾ ।
ನಮೆವಲ, ಮೊಲ್ಲಱಳ್ಗೆ ಪಿಟನ್ನಾಟ ಪಿಟಂಬರೆಕೂಟವಿಂಪನೀ ॥
ಗುಮೆ, ಬೆಲೆಗೊಂಡನಾಬೆಲೆಗೆ ಮೆಯ್ಪ್ಪಲೆ‌ಮೋಯಿನಿಗತ್ತೆನೆಂಬ ಕೂ ।
ಟಮನದ, ನೊಂದು ಕೂಟಮೆನಲಕ್ಕುಮೆ ? ನಂಜಿನ ಕಾಳಕೂಟಮಂ ॥
ಪಿಡಿಯಾನೆ ಸ್ವಕ್ವದೊಳಡಸಿದ । ?
ಳಡಸಿದ ಪಲ್ಲವಕೆ ಪಲ್ಲಮರಿ ನಿಲ್ಕುವುದುಂ ॥
ಕಡೆಗಣ್ಣೊಳ್ನೊಂಡಡಿಭ । ?
ಮುಡಿದಿತ್ತುತು ಸಾದ್ರ್ರಸಲ್ಲಕೀಪಲ್ಲವಮಂ ॥

ವಿಭಕ್ತಿ ಪರಿಣಾಮಕ್ಕೆ—

ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ ।
ನೊಸಲೊಳ್ಕಣ್ಗಡಮೆಂದು ನಂಬಿಪೊರೆದೆಂ ತಾನಕ್ಕೆ ತಮ್ಮಮ್ಮನ ॥
ಕೈಸಲಂಬಂ ತಿರುವ್ವಾಯ್ಗ [ತಂದವರದಂತಂಮಿರ್ವರುಂ] (ತಂದಱವರೇ ತಾಮಿರ್ವರುಂ
ಕೈದುವಂ) ।
ಬಿಸುಟರ್ ಜೋಳದ ಪಾಳಯುಂ ಬಗೆದರಿಲ್ಲಾ ದ್ರೋಣನುಂ ದ್ರೋಣಿಯುಂ ॥

* * * *

ಸೂತ್ರ—

ಪ್ರಕೃತಿಗಳಂ ಧಾತ್ವರ್ಥದ ।
ವಿಕಲ್ಪದಿಂದರಿದು ಸಮರಿಕೊಳ್ವುದು ಬಹುರೂ ॥
ಪಕಮನದಂ ಬೇೞಿಲ್ಕಾ ।
ಸಕಳಂ ವಾಕ್ಷತಿಯುಮಾರ ನುಳಿದವರಳವೇ ॥
ಪತಿ ಬುದ್ಧರಂ ಕುರಿರ್ತ್ತಿ ।
ಸ್ಥಿತಿಯಿಂದಂ ಕಿರುಗುಮಾರ್ಗ್ಗ ಸೂಚನೆಗೆಯ್ವಂ ॥
ಮತಿವಂತರಱಿದು ಪೇಳ್ವುದು ।
ವಿತರ್ಕ್ಕದಿಂ ಮತ್ತಮುತ್ತ ಶೇಷಮನಿಪಱತೊಳ್ ॥

ಇಂತಿರೆ ಶಬ್ದಸಂದೇಹ ಧ್ವಾಂತೌಘಂ ಪಿನ್ನಿಲೆ ಜಲರ್ಕನಾಗೆ ಬುಧಸ್ಸಂತತಿ ಗಪ್ಪಂತಿರೆ ಪೇೞ್ದನಿದಂ ಕವಿತಾಗುಣೋದಯಂ.

ಚಂಪಕಮಾಲೆ

ಅಭಿಮತ ಶಬ್ದ ಸಂಸ್ಕರಣದಿಂ ಜನವಂ ತಿಳಿವಂತು ಮಾಡಿ ವಾ ।
ಗ್ವಿಭವಮುದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯುಂತನೆಯ್ದ ತ ॥
ತ್ಸಭೆಯೊಳಗಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ ।
ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ ॥

Colophon:

ಇದು ನಾಗವರ್ಮ ಪ್ರಣೀತಮಪ್ಪ ಕಾವ್ಯಾವಲೋಕನದೊಳ್ ಶಬ್ದಸ್ಮೃತಿಯೊಳ್ ಆಖ್ಯಾತ ವಿವರಣಂ ಪ್ರಥಮಾಧಿಕಾರಂ.

(ವಿ-ವಿ.)—

ಶಬ್ದಸ್ಮೃತಿ ಸಮಗ್ರ. ಸ್ವಲ್ಪ ಶಿಥಿಲ. ಬರವಣಿಗೆ ಉತ್ತಮ.

ಕರ್ಣಾಟಕ ಭಾಷಾಭೂಷಣದಂತೆ ವ್ಯಾಕರಣ ವಿಷಯವನ್ನು ಬೋಧಿಸುವ ಇದು, ಕಾವ್ಯಾವಲೋಕನವೆಂಬ ಅಲಂಕಾರ ಗ್ರಂಥದ ಮೊದಲನೆಯ ಅಧಿಕಾರವು. ಎರಡು ಮತ್ತು ಮೂರನೆಯ ಅಧಿಕಾರಗಳಾದ ಕಾವ್ಯ ಮಲವ್ಯಾವೃತ್ತಿ, ಗುಣವಿವೇಕ ಎಂಬಿವು ಈ ಪುಸ್ತಕದಲ್ಲಿವೆ. ಗುಣವಿವೇಕವೆಂಬ ಅಧಿಕಾರವು ಅಸಮಗ್ರ. ಶಬ್ದಾಲಂಕಾರದ ಕೊನೆಯ ಭಾಗದ ವರೆಗೆ ಮಾತ್ರ ಇದೆ. ಕವಿ, ಎರಡನೆಯ ನಾಗವರ್ಮ, ಗ್ರಂಥ ಕರ್ತೃವಿನ ವಿಷಯವಾಗಿ ಹೆಚ್ಚು ತಿಳಿಯಲು ಬಯಸುವವರು ನಂ. ೧ ರಲ್ಲಿ ನೋಡುವುದು.

(2) LEXICOGRAPHY.

No. 13. ಅಕಾರಾದಿ ನಿಘಂಟು.

AKĀRĀDINIGHAṆṬU.

Substance, palm-leaf. Size, 19 × 1⅝ inches. pages, 60. Lines, 8 on a page. Character, Kanarese. Condition, injured. Appearance, old. Mode of writing, good and free from mistakes.

Breaks off in the course of words beginning with (ತ) Takāra.

A work giving the synonyms in Kanarese of various medical substances, plants, drugs, etc., in Sanskrit. The author Amṛtanandi who is supposed to have flourished about 1300 A.D. was a Jain poet.

Beginning:

ಅಂಬೋಃ—ಗೌರಿ.
ಅಯುತಂ—ಕಣ್ಣು.
ಅಂತಕಾರಿ—ಶಿವ.
ಅಪಿ—ವಿಷ್ಣು.
ಅಕ್ಷಣ—ಪ್ರನಷ್ಟಿ, ಜಟಕಿ, ಹಾಲೆ.
ಅರ್ಕರೋಹಿಣಿ—ಗೂಢ.
ಅತುಃ—ನಾದಲು.
ಅಗಃ—ವೃಕ್ಷಃ, ಕಲ್ಲತ್ತಿ.
ಅಗ—ಮರನು.
ಅಗಸ್ತ್ಯ—ಅಗಸೆ, ಮುನಿ, ರಾವಣ.
ಅಂಗಾರ—ಭಾರಂಗಿ.
ಅಗಾರ—ಮನೆ.
ಅಂಗಾರ ಧೂಮ—ಇಲ್ಲಣ.
ಅಗ್ನಿವರ್ಧನ—ಓಮ.
ಅಗ್ನಿಶಿಖಾ—ಕುಂಕುಮ.
ಅಗ್ನಿವಲ್ಲಭ—ಸಜ್ಜರಸ.
ಅಗ್ನಿಕೇತುಃ—ಕೆಂಪಿನ ಆಬಲು, ಚೆಂಗಣಿಗಲು.
ಅಗ್ನಿವಪುಃ—ಕೋಳಕುಟುಕ.
ಅಗ್ನಿಬೀಜಂ—ಚಿನ್ನ.
ಅಗ್ನಿಮುಖೀ—ಗೇರುಹಿಪ್ಪಲಿ.
ಅಥನಾಧಾ—ಅಂಬಿಲ.
ಅಜಮೋದ—ಓಮ, ಎಕ್ಕ.
ಅಜಗಂಧಾ—ನಾರಂಬಾಳೆ.
ಅಜನಿ—ಕಣಿಗಲು.
ಅಂಜನಂ—ಕಣ್ಣುಕಪ್ಪು.
ರಸಾಂಜನಂ—ನೀಲಾ.

*　　*　　*

ಉಪರಿಷ್ಟ—ಆಲದಮರ.
ಉಪಾಸಂ—ಹಂಸಪಾದಿ, ಕೆರಹು.
ಉಪಚಿತ್ರ—ಇಲಿಮೊಲ, ನಾಗದಂತಿ.
ಉಪೋತ್ಪಲ—ಇಪ್ಪೆ.
ಉಪೋದಕ—ಗುಂಬಬಸಳೆ.
ಉಪೋದಿಕ—ಬಸಳೆ.
ಉದಧರ—ಮೇಘ, ಭದ್ರಮುಸ್ತೆ.
ಉದಕಂ—ಮಡಿವಾಳ, ನೀರು.
ಉದಕಿ—ಲಕ್ಕಿಹೇಡಿ.
ಉದಾಖ್ಯ—ಸೂತಕಸ್ತ್ರೀ.
ಉದರ್ಥಂ—ಉಳ್ಳಿಹೂವು, ದುಂಡುರುಚಿ.
ಉದಕೀರ್ಯ—ತವಸ, ಹೊಗೆ.
ಉದಸಿತಿ—ಮಜ್ಜಿಗೆ.
ಉದಾತ್ತ—ಸ್ಥೈರ್ಯ, ಬಾಗಿ ನಡುಗುವ್ರಡು.
ಉದಂಜನ—ಉಸಮುಚ್ಚಿ.
ಉಥಾಥಿ—ಮಲಾಕಡಲ, ಸಾವಿಗೆ.
ಉದಧಿ—ಮುಕಾವಾನರ.
ಉದರಂ—ಹೊಟ್ಟೆ, ಉದರಂ, ಕಂಟು.

*　　*　　*

ಗರಾಗರಿ—ದೇವದಾಳ.
ಗಣಿಕಾರಿಕಾ—ನರಿವಲು.
ಗಣಿಕ—ಮೊಲ್ಲೆ, ನರುವಲು.
ಗುಳೂಚಿ—ಅಮೃತವಳ್ಳಿ.
ಗಂಧ—ನಾಕು, ರಾಶ್ಮೆ.
ಗಂಧಕುಟಿ—ಮುರಿಗಾಯಿ.
ಗಂಧಿನಿ—ಮುರಿಗಾಯಿ.
ಗಜಲುಬ—ಕೆಂದುಕ.
ಗಣಹಾಸಕ—ಚೋರಕ.
ಗಂಧಮೂಲಿ—ಕರ್ಪೂರಶುಂಠಿ.
ಗಂಧಾಕ್ಷಿ—ದೊಡ್ಡಮೆಕ್ಕೆ.
ಗಂಡಿರ—ಪೂರಣ.
ಗಂಧಮೂಲ—ಬೈಲತಾವರೆ.

ಗಂಡೋಲಿ—ನಿರ್ಗರಿಕೆ, ಕಡಜ.
ಗವಿಸಂ—ಮೇದುಬಿಟ್ಟು, ಹಾಳುಸೆಲ.
ಗರ್ಗರಿ—ಕಡೆಗೋಲು.
ಗಂಧಸಾರ—ಶ್ರೀಗಂಧ.
ಗದ—ರೋಗ.
ಗಡುಲ—ಗೆಜ್ಜಲು.
ಗರಳ—ವಿಷ, ಕೃತ್ರಿಮವಿಷ.
ಗಂಜ—ಮದ್ಯದಮನೆ.
ಗಂಜಾ—ಹೊದರು, ಆನೆಕೊಂಬು.
ಗಜಕರ್ಣ—ಮೊಗವಾಳ.
. . . . ಕೆ—ಗಿರಿಕರ್ಣಿಕೆ, ಮೊಗವಾಳ.
ಗವಾದನಿ—ಹಾವುಮೆಕ್ಕೆ.

End:

ತನುರು—ರೋಮ.
ತನೂಜ—ಮಕ್ಕಳು.
ತಪನ—ರವಿ, ಎಕ್ಕೆ.
ತರಳ—ಗಂಜಿ.
ತಪನಕೇತು—ನರುವಲು.
ತಪನಪೇಶ—ಕೊಡಸಿಗನ ಬೀಜ.
ತಪನೀಯಂ—ಸುವರ್ಣ.

ತರ್ಪಣ—ಹುರಿಹಿಟ್ಟು.
ತಲ್ಪ—ಹಾಸಿಗೆ, ಅಟ್ಟ, ಹೆಂಡತಿ.
ತಲ್ಪಲ—ಯಕ್ಷುಭೇದ.
ತೃಪಾಲ—ಲಜ್ಜೆ.
ತಪು—ಕಡಲೆ.
ಬಿರಿಯ—ತಗರ, ಕರಗಸ.

(ವಿ-ವಿ.)—

ಅಸಮಗ್ರ. ತಕಾರಾದಿ ಶಬ್ದಗಳವರೆಗಿದೆ. ಮುಂದೆ ಗ್ರಂಥವು ಲುಪ್ತವಾಗಿದೆ. ಬರವಣಿಗೆಯು ಚೆನ್ನಾಗಿದೆ. ಶಿಥಿಲ. ಕ್ರಿ.ಶ. ೧೩೦೦ ಸುಮಾರಿನಲ್ಲಿದ್ದ ಅಮೃತ ನಂದಿಯೆಂಬ ಜೈನ ಕವಿಯು ಈ ಗ್ರಂಥವನ್ನು ಬರೆದಂತೆ ತಿಳಿಯಬರುತ್ತಿದೆ. ಈ ಗ್ರಂಥದಲ್ಲಿ ಸಂಸ್ಕೃತ ಭಾಷೆಯಲ್ಲಿರುವ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಪದಗಳಿಗೆ ಕನ್ನಡಭಾಷೆಯ ಹೆಸರುಗಳು ಲಿಖಿತವಾಗಿವೆ.

No. 14. ಅಕಾರಾದಿ ನಿಘಂಟು.

AKĀRĀḌINIGHAṆṬU.

Substance, paper. Size, $10\frac{5}{8} \times 9\frac{1}{2}$ inches. pages, 80. Lines, 20 in a page. Character, Kanarese. Condition, good. Appearance, new. Mode of writing, bad and not free from mistakes.

Incomplete.

Same work as the above, from which, this was restored.

(ವಿ-ವಿ.)—

ಅಸಮಗ್ರ. ಬರವಣಿಗೆ ಚೆನ್ನಾಗಿಲ್ಲ. ಶೈಥಿಲ್ಯವಿಲ್ಲ. ಇದು ಮೇಲಣ ಗ್ರಂಥದ ಪ್ರತಿಕೆ.

No. 15. ಅಭಿನವಾಭಿಧಾನ.

ABHINAVĀBHIDHĀNA.

Substance, Śrītāla. Size, 13½ × 2 inches. Pages, 72. Lines, 10 on a page. Character, Kanarese. Condition, slightly injured. Appearance, old. Mode of writing, good but not free from mistakes.

Incomplete and imperfect.

A lexicon of Kannaḍa words in the Vārdhikaṣaṭpadi metre. As this work was written after the model of a prior work called Vastukōśa by Nāgavarma II, it is called Abhinavâbhidhāna or Abhinavanighaṇṭu. It is also called Maṅgābhidhāna after the name of the author, Maṅgarāja who had the title Abhinavabālasarsvati. He was the son of Remmārya Rāmarasa of Viśvāmitragōtra and belonged to Kamme sect of Smārta Brahmans. The author states that he wrote this work in the Śaka year 1320, Bahudhānya, corresponding to 1398 A.D. The work is divided into five Kāṇḍas as given below:—(1) Svarga, (2) Bhū, (3) Pātāla, (4) Sāmanya and (5) Nānārtha.

Beginning:

. . . .

. . . .

. . ಲೈತೆನೆ ಕಾಕಜಂಘೆಯಕ್ಕೆಲಹಾರಿಯು ಕರ್ಕಶಂ ಕತ್ರಪಮಕ್ಕುಂ ॥
ಬೇಳಪುಂಗಳ ತಿಳಿವನಿಯೆನಿಕ್ಕು ಸೇರುಶತ್ರ
ಮೂಲಿಯೆನಲಾ ಷಡಿಯೆನಿಕ್ಕು ಬೆಳ್ಳಡಿಕೆಲು ವಿ
ಶಾಲಂಕಲಿಲಕವೆ . . . ರ್ನ ವಿಶಿವಾಟಿಕೆಯೆನಿಕ್ಕುಂ ॥
ಕಾಡಂಗಿ ಯಜಗಂಧಿಯಕ್ಕು ನಿರ್ಮ್ರೋಕಿಯೆನೆ
ಕೋಡತ್ರಾಂಬೆಯುದಕ್ಕು ಮಡಲು ಗಜಕರ್ಣ್ಣಿಯು
ಕ್ರ್ಯೋಡೆಯೆನೆ ಸಡೆಯಕ್ಕು ಬಂಡೆಯೆನೆಬೆಂ . . . ಳ್ಳ ಮಾಣ್ಕುಂ ॥

* * * *

ಊರ ಸಾರಿಪ್ಪ ವನಮಾರಾಮವುಪವನಂ ।
ಊರ ದೂರದಲಿಪ್ಪ ವನಮದು ಪರೋಹಿತ್ರಂ ।
ಊರೊಳಗಣರವಸೆಗಳೊತ್ತಿನಲಿಹ ವನವು ದುದ್ಯಾನಮೆಂದೆನಿಕ್ಕುಂ ॥

ಸಾರಕುಸುಮದ ವನಂ ಪುಷ್ಪವಾಟಕೆಯೆನಿಕು । •
ವಾರಾಣಿವಾಸ ಸಸಿತರಗುಬಂಡಿಹ ಚೆಲ್ವಿ ।
ನಾರವೆ ಪ್ರಮದವನಮಕ್ಕುಮಾ ಮಂಟಪಂ ಪರಿಮಿತ್ರಸ್ಥಾನಮಕ್ಕುಂ ॥

ಇತಿ ವನೌಷಧಿವರ್ಗಃ ॥

* * * *

ಹರಿ ಕುರಂಗಂ ಸಪ್ತಿ ನಾಜಿ ಯಾಯು ಘೋಟಕಂ
ತುರಗಂ ಹಯಂ ತಾರ್ಕ್ಷ್ಯಮಶ್ವಮರ್ವ್ವಂ ವಾಹಮು
ರು ರಥ್ಯಮೆನೆ ಕುದುರೆಯಕ್ಕು ವಾಜಿನಿ ವಡಬಿ ಸಿವಾಮಿಯನೆ ಹೆಣ್ಣಿನಿಕ್ಕುಂ ॥
ಮಗುದುರೆ ಪೋತಂ ಕಿಶೋರಮೆನಿಸಿಕ್ಕು ವರ
ಖುರಗಳು ಶಫಂಗಳೆನಿಸಿಕ್ಕು ನಡುಕಶ್ಯಮ
ಕ್ಕು ರಯಂ ಜವಂ ರಂಹಸಂ ತರಪ್ರರಹೆನೆ ವಾಜಮೆನಲೋಟಮಕ್ಕುಂ ॥

* * * *

ಕಾಳೆಗದ ರಥ(ಂ) ಸಾಂಪರಾಯಮೆನಿಕ್ಕು, ಸಂ ।
ಮೇಳದ ರಥಂ ಪುಷ್ಪರಥಮಕ್ಕು, ಗೆಲ್ವ ರಥ ।
ಮಾಳೋಜಿಸಲು ಜೈತ್ರರಥಮಕ್ಕು, ಸುರರಥ(ಂ) ದೇವರಥಮೆಂದೆನಿಕ್ಕು ॥
ಕಾಲಿ ಚಕ್ರಂ ರಥಾಂಗಮೆನಿಕ್ಕು, ಪ್ರತಿನೇಮಿ
ಮೇಲುವೊತ್ತಿಗೆಯಕ್ಕು, ನಾಭಿಪಿಂಡಿಕೆಯೆನಲು
ಕೂಲುದುಂಬಕ್ಕು, ಹಟಮೆನೆ ತಾಳಮಕ್ಕು, ವೃತ್ತಿಕೆಯೆನಲು ಬೆಳೆಯನಿಕ್ಕು,

* * * *

ಅಕ್ಷಮೆನಲಚ್ಚು ಕೂಬರಮೆನಲ್ಕುಸುವಣೆ ।
ವಕ್ಷೋಗ್ರಮೆನೆ ಕೀಲಪಸ್ಕರಮೆನೆ ಕುಱುಗೈ, ಸ ।
ಮಕ್ಷದಲ್ಲಿಹ ಕಟ್ಟಿಪಂಜರಂ ರಥಗೋಪಮಕ್ಕು, ಮಣಿಚರ್ಮಪಾಶಂ
ಲಕ್ಷಿಸಲು ಸಮ್ಯಮೆನೆ, ಯುಗಮೆನಲು ನೊಗನಕ್ಕು, ।
ಪಕ್ಷಮಾವಾಹನಂ ದೋರಣಂ ರಥಹಯಂ ।
ದಕ್ಷಿಣಸ್ಥಂ ನಿಯಂತೃ ಕ್ಷೇತೃ ಸೂತನೆನೆ ಸಾರಥಿಗೆ, ನಾಮಮಕ್ಕುಂ ॥

* * * *

ಕರಗಸಂ ಕ್ರಕಚವಾಕರಪತ್ರವಕ್ಕು, ತೋ ।
ಮರಪಿಂಡಿವಾಳ ಪಟ್ಟಿಸ ಚಕ್ರಂ ಶಕ್ತಿ ಮು ।
ದ್ಗರ ಭುಸುಂಡಿ ಸ್ಫೋಟ ಗದೆ ಶಂಖು ಯಷ್ಟಿಗಳ್ ಕೈದುಗಳ ಭೇದಮಕ್ಕು,।
ಸ್ಫುರಣೆಯೆನೆ ಸಾಣೆ ಧೌತ್ರಂ ಜಿತಂ ಮಸೆವ
ತೆರನಕ್ಕು ವೇತಾಳನಾಚಾರ್ಯನಕ್ಕು ಬೊ
ಪ್ಪರದಂಡೆ ಡೋಳಕ್ಕು ಕಲಾಸ್ಗ ಜಾಳೆಯ ಮಂಡಿಸಿ ರಣಂ ಹಚ್ಚೆಯಕ್ಕುಂ ।
ವಿಸಸನಂ ಸೂದನಂ ಮಾರಣಂ ಘಾತನಂ
ನಿಶರಣಂ ಹಿಂಸನಂ ನಿಶುಂಭನಂ ವರ್ಜನಂ
ಪ್ರಕಮನಂ ಬರ್ಹಣಂ ನಿರಸನಂ ಕದನಂ ಪ್ರವಾಸನಂ ಕೊಲೆಗೆ ನಾಮಂ ।

ಸಸಿಸೆ ಗದ್ದಂ-ಜಜ್ಜಿತಾಹವನೆನಿಕ್ಕು ಡಿ
ಳ್ಳಸಿದವಂ ಸ್ಫುರಿತನಾ ಪ್ರಸ್ಕಂಧನ ಕಲ್ಲಿ
ದೆಸೆಗೆಟ್ಟವಂ ದಿಗ್ವಿಜಯಾ ಧೃತಂ ನಷ್ಟಂ ವಿನಾಶನಗ್ರಹಿತ್ರನಕ್ಕುಂ ॥

End:

ಆಗಳೆಂತೆಂಬಲ್ಲಿ ಹೇತ್ವರ್ಥವಿಲ್ಲದ
ರ್ಥಾಗಮದೊಲಾಕಸ್ಮಿಕಾಖ್ಯವಕ್ಕು ಕೂಡೆ
ಭೋಗೀಪಲ್ಲಿ ರಯಾಭಿಧಾನಮುಕ್ಕು ನಿತ್ಯದಲ್ಲಿ ಸದಾಸನಾಶ್ವಂ
ಸಾದ್ಗುಣ್ಯವಕ್ಕು ವಿಸ್ತೀರ್ಣದಲ್ಲಿ ವಿಸ್ತರಂ
ರಾಗವಕ್ಕೆಂದಭಿನವಂ ಸರ್ವಶಬ್ದಗಂ
ಯೋಗದಿಂ ನಾನಾರ್ಥಕಾಂಡವಂ ಪೇಳ್ದನತಿಚತುರಬುಧರುಮೆಚ್ಚರು
ವರ್ಗವಂ ಬಿಟ್ಟನ್ಯವೆನೆಸದಪರಲ್ಲಿ
ವರ್ಗವಂ ಪುದಿತು ಪರ್ಯಾಯದಿಂ ಪೇಳ್ವೆನು
ಸ್ವರ್ಗಭೂಪಾತಾಳ ಸಾಮಾನ್ಯ ನಾನಾರ್ಥವೆಂದೈದು ಕಾಂಡಂಗಳಂ।
ಪೆರ್ಗಳಸಿ ಮತಿಗೆ ಗೋಚರಿಸದಿಹನುಡಿಯಂ ಪ।
ರಿಗ್ರಹಿಸಿ ತಿದ್ದುವುದು ಬಿಡದೆ ಪೊಡವಿಯೊಳೆನ್ನ
ನಗ್ಗಳಿಯ ಕವಿಮಂಗನೆನಿಸುವುದು ಬ್ರಹ್ಮಿಗಳ್ ಕರ್ಮಿಗಳು ವರಕವಿಗಳು ॥
ಕಮ್ಮೆಕುಲದಲ್ಲಿ ವಿಶ್ವಾಮಿತ್ರಗೋತ್ರದಲಿ
ರೆಮ್ಮಾರ್ಯರಾಮರಸರುದರದಲಿ ಶುದ್ಧಸ
ದ್ಧರ್ಮ ಚಾರಿತ್ರದಲಿ ಯಧಿದೈವವೆನಿಪ ಸೋಮೇಶನ ವರಪ್ರಭೆಯಲಿ।
ಪೆರ್ಮೆಯಿಂ ಸಭೆ ಮೆಚ್ಚುವಂತೆ ನಾನಾಶಬ್ದ
ಸಾಮ್ಯದಿಂದಭಿನವನಿಘಂಟನಭಿನವಮಂಗ
ನಿರ್ಮಿಸಿದನಂಬರಾಂಬಕವಹ್ನಿಯೇಕೈಕಶಕದ ಬಹುಧಾನ್ಯದಲ್ಲಿ ॥

Colophon:

ಇತಿ ಶಿವಪುರಾಧಿಪತಿ ಸೋಮೇಶ್ವರ ಚರಣಾರವಿಂದಮಧುಸೇವಿತಮಧುಕರಾಯಮಾನ ಸ್ವಕಲವಿಬುಧಜನಮನೋಲ್ಲಾಸನಿವಾಸ ಅಭಿನವಬಾಲಸರಸ್ವತಿ ಮಂಗರಾಜವಿರಚಿತಮಭಿನವಾಭಿಧಾನದೊಳ್ ನಾನಾರ್ಥಕಾಂಡಂ ಸಮಾಪ್ತಂ ॥

(ವಿ.ವಿ.)—

ಅಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲದಿಲ್ಲ. ಸ್ವಲ್ಪ ಶಿಥಿಲವಾಗಿದೆ. ಅಭಿನವ ಬಾಲಸರಸ್ವತಿ ಎಂಬ ಬಿರುದಾಂಕಿತನಾದ ಮಂಗರಾಜನು, ಎರಡನೆಯ ನಾಗವರ್ಮಪ್ರಣೀತವಾದ ವಸ್ತುಕೋಶವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಗ್ರಂಥವನ್ನು ಬರೆದಿರುವ ಕಾರಣ ಇದಕ್ಕೆ ಅಭಿನವಾಭಿಧಾನವೆಂಬ, ಹೆಸರು ಬಂದಿತು., ಇದನ್ನು ಮಂಗಾಭಿಧಾನವೆಂತಲೂ ಕರೆಯುವರು. ಈ ಕವಿಯು ಕಮ್ಮೆ ಕುಲದವನು. ವಿಶ್ವಾಮಿತ್ರ ಗೋತ್ರಕ್ಕೆ ಸೇರಿದವನು. ತಂದೆ ರೆಮ್ಮಯಾರ್ಯರಾಮರಸ. ಈ ಗ್ರಂಥವನ್ನು ಶಿವಪುರದ ಸೋಮನಾಥನ ಪ್ರೇರಣೆಯಿಂದ ಬರೆದಂತೆ ಹೇಳಿದ್ದಾನೆ. ಶಾ.ಶ. ೧೩೦೦ ಬಹುಧಾನ್ಯ ಸಂವತ್ಸರದಲ್ಲಿ ಈ ಗ್ರಂಥವನ್ನು ತಾನು ಬರೆದಂತೆ ಗ್ರಂಥದ ಕಡೆಯ ಪದ್ಯದಿಂದ ಗೊತ್ತಾಗುತ್ತದೆ. ಇದು ವಾರ್ಧಿಕ ಷಟ್ಪದಿಯಲ್ಲಿದೆ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥ ಕಾಂಡಗಳೆಂಬುದಾಗಿ ಐದು ಭಾಗ

ಗಳುಂಟು. ಮೊದಲಿನಲ್ಲಿ ಕೆಲವು ಓಲೆಗಳೂ ನಡುವೆ ಒಂದೆರಡು ಓಲೆಗಳೂ ಇಲ್ಲ. ಗ್ರಂಥವು ಮಾತ್ರ ಕಡೆಯುವರೆಗೂ ಚೆನ್ನಾಗಿಯೇ ಇದೆ.

No 16. ಕಬ್ಬಿಗರಕೈಪಿಡಿ.

KABBIGARAKAIPIDI.

Substance, palm-leaf. Size, $12\frac{3}{4} \times 1\frac{3}{8}$ inches. Pages, 44. Lines, 5 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the stanzas 1—64 only.

A lexicon in 100 stanzas in the Vārdhikaṣaṭpadi metre, giving a number of synonymous expressions to the ancient Kanarese words. The author Liṅgamantri was the son of Virūpākṣa and belonged to the Vīra-Śaiva religion. It is stated that the author was acquainted with several languages and scripts and was also well versed in Indian music. He was a minister under Rāyabhūvara, a chieftain of Nuggehalli (in the Hassan district, Mysore), 1530—1542 A.D.

Beginning :

ಶ್ರೀರಮಣವಿಬುಧಪತಿವಾರಿಜಭವಾದಿವ್ಯಂ ।
ದಾರಕಪ್ರಚಯಕೋಟೀರಮಾಣಿಕ್ಯಪ್ರ ।
ಭಾರಂಜಿತಾಂಘ್ರಿಯುಗ ಮಾರಘನದರ್ಪಾಂಧಕಾರಸಂಹಾರ ಶೂರ ॥
ಗೌರೀಮುಖೇಂದುರುಚಿಸಾರಸುಸ್ವಾದಿತಚ ।
ಕೋರ ಪಂಪಾಪುರಾಗಾರ ಪಾಲಿಪುದೆನಗೆ ।
ಚಾರುಮ[ಣಿ](ತಿ)ಯುಂ ದುರಿತವಿದೂರ ಕರುಣಾಲಾಪ ಸಾರಕಾರುಣ್ಯದಿಂದ ॥
(ಚಾರುಮತಿಯುಂ ಮಹೋದಾರ ಸತ್ಕೀರ್ತಿವಿಸ್ತಾರ ಕಾರುಣ್ಯಪೂರ)
ಶಿವಚರಣಯುಗಸ (ಮಾಕಲಿಕಾಂತರಂ)ಗ ಶಿವ ।
ಕವಿನಿಕರಪಾದ ಪಂಕೇಜಾತಭೃಂಗ ಸದ್ ।
ವಿವಿಧಮೃದುಶಬ್ದಸಾಹಿತ್ಯ (ಪೀಯೂಷಾಬ್ಧಿಲಲಿತ) ಲಹರೀತರಂಗಾ ॥
ಅವಿರಳಾನಂದಯೋಗಿವ್ರಾತಸಂಗ ದುಃಖ(ದು)
(ಷ್ಕವಿ) [ಪ್ರವರ]ನಿಕರಹೃದಯಾಂಧಕಾರದೂರಪತಂಗ ।
ನವಮದನರೂಪನಿರುಪಯಲಿಂಗ ಪೇಳೆನಲ್ ಬಲ್ಲರಿದ ನಾಂ ಪೇಳ್ವೆನು ॥
ಮಿಸುಪಗೂಢಪದಪ್ರಯೋಗದೊಳ್ಪಂ ರಸಮ ।
ನೊಸರ್ವಚ್ಚಗನ್ನಡದ ಚೆಲ್ವುಮಂ ತದ್ಭವದ
ಬೆಸುಗೆಯುಂ ದೇಶ್ಯಕ್ಕಮರ್ಥಸೊಂಪಂ ತೋಳ್ಪ ತತ್ಸಮದ ಬಿನ್ನಣವನು ॥
ಉಸಿರೆಂದು ಕೋವಿದರು ಬೆಸಸಲಾನಿದಕೆ ಶೋ ।
ಭಿಸುವ ಕಬ್ಬಿಗರಕೈಪಿಡಿಯೆಂದು ಪೆಸರಿನಿ ।

ತ್ರೊಸೆದು ಪೇೞ್ದಿಪನು ಲಾಲಿಸಿವ್ರುದೆಲ್ಲಾ ಜನಂ ರಸಿಕಜನರರ್ಥಿಯಿಂದ ।
ಗೊರವನ್ನೈಕಿಲ್ವಟ್ಟಳಿಯನ್ನೈಸೊಗಂ ಕಂಡು ।
ಗೊರಲನೆಲರುಣಿಪೆದೆಯು ನೇಣ್ಕಯ್ಯುವಂ ಬಾನ್ಕೆ ।
ವಿರ ಸೊನ್ನೆ ವೆಟ್ಟುವಿಲ್ಲಂ ಬಗ್ಗದೊವಲೊಡೆಯ ನೆಲದೇರ ವಿ.ಗಗಯ್ಯನು ॥
ತಿರಗೊಂದೆವಳಯಿಗೆಯ ಚಾಂಬೊಚ್ಚದಲೆಯನೀ ।
ಸರ ತಿಸುಳ ಪೆದೆದಲೆಯ ಬೆಣ್ಣು(ಹೊ್ಪ)ಡೆಯ ಸಬ್ಬ ಗಂ ।
ಧರಗಿವಿಯ ದೇಸಿಗಂ ಷಾದೇವ ಗನಹನಿಂಗಳಗಣ್ಣ [ಕಣ್ಮಡಿಗನು] (ಕಿಡಿಗ ಗಣ್ಣನು) ॥
ಬಳಿಕ ಪಿರಿತಿನಿಯಾಣ್ಮ ನೊಡಬಡಿಪನೆಯನು ಪಂ ।
ದಲಿವಚ್ಚ ನಾಂತ ಬೆಳ್ಳುಡಿ[ಯನೆ] (ಯನೆನೆ) ಶಿವಗೆ ಬೆಸ ।
ರಿಳೆಯೊಳ್ಕೈಕಿಲ್ವೆಟ್ಟಣಾಗಿ ಸಿಂಗದೇರವಳ್ ಸಬ್ಬಾಣಿ ಎಂದು ಶಿಪೆಯಾ ।
ಲಲಿತನಾಮಂ ಬಿಜ್ಜವಳನೆಡೆಗೆಡಿಪೋ
ಣೆಲರುಣಿವಸಿರನು (ತಂದೆಯ) ತಂದೆಯಿಲ್ಲದಂ
ಕರಿಮೊಗಂ ಬಂಕ[ಣ](ಣ) ಗಿವಿಯನು ಮೂಸಕದೇರನೆನೆ ವಿನಾಯಕನ ನಾಮಂ ॥

* * * *

ಆರವೆುನೆ ಹಾರ ; ಜಾಳಿಯದಿಂಗಳಗೆಯೆನಲ್ ।
ನೇರಬೊಟ್ಟಿಗೆ ಪೆಸರ್ ; ಕನ್ನವುರವೆುನೆ ಕರ್ಣ
ಪೂರಮಂತ್ರಃಪುರವಾದಂತವುರವೆುನಿಸಿಕ್ಕು ; ಸರಿವಿಂಡಿಯೆಂಬ ಪೆಸರಃ ॥
ನಾರಿ ತಾಂ ಪ್ರಥಮಋತುವಾಗದಳ್ ; ತರುಪಿಂಡ ।
ಯಾರಯ್ಯೆ ಪುಷ್ಪವತಿಯಾದವಳ್, ಪತಿವ್ರತಾ ।
ನಾರಿಯಂ ಹದೆಬದೆಯೆನಿಕ್ಕುಂ ಸುವಾಸಿನಿಗೆ ಬಳಿಕ್ಕೈದೆವೆಸರೆನಿಕ್ಕುಂ ॥
ಜಗದೊಳಟುವೆಣ್ಣೆನಲ್ ತಾನಲ್ಪತರುಣಿ, ಬಿ ।
ತ್ತಿಗವೆಣ್ಣೆನಲ್ ಘ್ರೌಢೆ, ಬಚ್ಚೆವೆಣ್ಣೆನೆ ಬಂಜೆ, ।
ಮಿಗೆ ಚೆಲ್ವಗಾರ್ತಿಯೆನೆ ಸರಸವತಿ, ನೆರೆ ಹಾರುಡಿಪಾಸತಿಯೆ ಹೂಜೆಗಾರ್ತಿ, ॥
ಬಗೆಯೆ ಸಬ್ಬವಗಾರ್ತಿಯೆನೆ ಮೇಳದಾಕೆ, ಪ ।
ಚ್ಚಗೆಗಾರ್ತಿಯೆಂದೊಡೆ ಹಾಂಕದವಳಿನ್ನು ಚೆ ।
ಲ್ವೊಗೆದ ಮಲ್ಲಳಗಾರ್ತಿಯೆನೆ ಸುತ್ತಿಬರ್ಪಾಕೆ, ಯೆಂದು ಪೇೞ್ವರ್ ಸುಗುಣರು
ಅರ್ಥ (ಆರ್ತ) ದಿಂದೊರೆವೆನಾಲಿಪ್ಪುದು ರಸಿಕರು ಪದಪು ।
ಗಾರ್ತಿಯೆನೆ ಗಳನಾಳವೆಣ್ಣಕ್ಕು ; ನೆರೆ ಪದಪು ।
ಗಾರ್ತಿಯನೆ ಹೊನಹುಗಾರ್ತಿ ; ಹೆಟ್ಟುಗೆಯೆನಲ್ ಗೆಳತಿಯೆನೆ ಸಖಿಗೆ ನಾಮ ಮಕ್ಕುಂ ॥
ವರ್ತಿಸುವ ಸಿತಗೆ ರಂಜಿಪ ಜೋಡೆಪೆಣ್ಬೆ ಬೆದೆ ।
ಗಾರ್ತಿಯೆನೆ ಜಾರೆ ; ಗುಣಕರುಗೊಂಡಳೆಂದೊಡ ।
ಳ್ಕರ್ತಳೆಂದೊಡೆ ವೇಶ್ಯಾವೆಂದೀಪೆಸರು ಕೂರ್ತಳ್ಗೆ ಸೊಗಯಿಸಿಕ್ಕುಂ ॥

End:

ನಿಕ್ಕುವಂ ನನ್ನಿ ನಿಸದವೆನಲ್ಕಸತ್ಯ ।
ಮಕ್ಕು ; ಕೇವವೆುನಲ್ಕಕ್ಕು ಗರ್ವತೆಪೆಸರ್ ; ನಿಂದೆವಂ
ಗಕ್ಕು ತೆಗಳೆಂಬ ನಾಮಂ ; ಗೆಂಟೆನಲು ದೂರ ; ಮುಟ್ಟೆನಲು ಮುಟ್ಟಲಕ್ಕು ॥

ಹಕ್ಕೆಗವಿ ಗರುಡಿ ಆಡುಂಬೊಲಂ ಗೊತ್ತು ನೆಲೆ
ಯಿಕ್ಕೆ ತಾಯಿವನೆ ಮೇರೆ ಯೆಂಬು ತಾಣಂ ಮೇಣು
ವಕ್ಕೆ ಬಾವಡಿ ಪೊಳಲ್ ಬೀಡು ಆಗರವೆಂದೊಡಾಶ್ರಯಕ್ಕೆ ನಾಮ ಮಕ್ಕುಂ ॥
ಪುರುಳೆಂದಡಭಿಧಾನಮಕ್ಕು, ಮಾಪಂತ್ರರೊ ।
ಪ್ಪಿರೆ ಜೋಧರಕ್ಕು ಪಜ್ಜಳಮೆನಲ್ ಪ್ರಜ್ವಲಂ ।
ಪರಿವಡೆದೆನಲೊಪ್ಪುವದಕೆ ಬೆಸರಕ್ಕು, ಕೋಪಣಮೆ ಕೌಪೀನಮಕ್ಕುಂ, ।
[ಮರಳದಂ] (ಮರವಮಂ) ಮರುಕುಳಿಯನಿಕ್ಕು ಬೆಂಕುಳಿಯೆನಲ್
ಮರುಳನ ಮಸಕಳದುದೆಂದು ಕೈವಿೞರಿದುದು,
ಮುರುವಣೆಯೆನಿಪ್ಪದವಸರದಿಂ ಪೋಪುದಕೆ, ಉಜ್ವಳವೆನಲು ಜ್ವಾಲಾಖ್ಯಂ ॥
ಕದಿರೆಂದು ಕಿರಣಮುಂ ತಾನಕ್ಕು ಮತ್ತೆಥಾ ।
ನ್ಯದ ತೆನೆಯಕ್ಕುದೇಳ್ಬಟ್ಟೆಯೆನಲ್ ಕೆರೆಯಟ್ಟು ॥

(ವಿ-ವಿ.)—

ಅಸಮಗ್ರ. ಮೊದಲಿನಿಂದ ೬೪ ಪದ್ಯಗಳು ಮಾತ್ರವೇ ಇವೆ. ಬರೆವಣಿಗೆ ಚೆನ್ನಾಗಿದೆ. ಶುದ್ಧಪ್ರತಿ. ಸ್ವಲ್ಪ ಶಿಥಿಲವಾಗಿದೆ.

ಕವಿ ಲಿಂಗಮಂತ್ರಿ. ವೀರಶೈವ ಮತ್ತದವನು. ಈತನು ನುಗ್ಗೇಹಳ್ಳಿಯ ರಾಯಭೂಪರನ ಆಸ್ಥಾನದಲ್ಲಿ ಮಂತ್ರಿಯಾಗಿದ್ದಂತೆ ತಿಳಿಯಬರುತ್ತಿದೆ. ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಈ ರಾಯಭೂವರನು ವಿಜಯನಗರದ ವೀರ ಪ್ರತಾಪ ಪ್ರೌಢ ದೇವರಾಯರ ದೌಹಿತ್ರನೆಂಬುದಾಗಿ ಊಹಿಸಬಹುದಾಗಿದೆ. ಈತನ ಕಾಲ ಸು.ಕ್ರಿ.ಶ. ೧೫೩೦. ಈ ಕವಿಯು ಅನೇಕ ಲಿಪಿಗಳಲ್ಲಿಯೂ ಭಾಷೆಗಳಲ್ಲಿಯೂ ಸಂಗೀತಶಾಸ್ತ್ರದಲ್ಲಿಯೂ ನಿಪುಣನಾಗಿದ್ದಂತೆ ಕವಿಚರಿತ್ರೆಯಿಂದ ತಿಳಿಯಬರುತ್ತದೆ. ಕವಿಯು ಹಳೆಗನ್ನಡಪದಗಳಿಗೆ ಸುಲಭವಾದ ರೀತಿಯಿಂದ ಈ ಗ್ರಂಥದಲ್ಲಿ ಅರ್ಥವನ್ನು ತಿಳಿಸುತ್ತಾನೆ. ಇದು ಒಂದು ಕೋಶ.

No. 17. ಕರ್ಣಾಟಕಶಬ್ದಮಂಜರಿ.
KARṆĀṬAKAŚABDAMAÑJARI.

Substance, paper. Size, 12⅓ × 8 inches. Pages, 10. Lines, 20 on a page. Character, Kanarese. Condition, fair. Appearance, old. Mode of writing, good but not free from mistakes.

Written on one side only of the paper.

Begins on page 24. The other work herein is the Karṇāṭakachandōmbudhi I by Nāgavarma I.

Incomplete.

A lexicon in the Vārdhikaṣaṭpadi metre giving a number of synonymous expressions to the ancient Kanarese words. As the author Viraktatōṇṭadārya was mentioned by Dēvōttama (1600 A.D.) in his Nānārtharatnākara as a prior lexicographer, it is presumed that the author might have flourished about 1560 A.D. His other works are (1) Siddhēśvarapurāṇa, (2) Pālkurike Sōmēśvarapurāṇa (3) Manōvijaya, etc.

Beginning :

ಶ್ರೀಮದವಿರಳಸಕಲನಿಷ್ಕಲಗುಣಾತೀತ ।
ನಾಮರೂಪಕ್ರಿಯಾರಹಿತ ಶ್ರುತಿತತಿವಿನುತ ।
ಕಾಮಿತಫಲಪ್ರದಾಯಕ ಸಕಲಲೋಕನಾಯಕ ನಿತ್ಯನಿರ್ಮಾಯಿಕ ॥
ರಾಮಣೀಯಕ ಯೋಗಿಜನಮನೋನಿಲಯ ಚಿತ್ ।
ಕಾಮಿನೀಕಾಂತ ಕರುಣಿಸು ವಿಮಲಮತಿಯ ಮತ್ ।
ಸ್ವಾಮಿ ವರಗುರು ನಿರಂಜನ ವೃಜಿನಮೋಘಪ್ರಭಂಜನ ಮದನಭಂಜನ ॥ (?)
ವರಷಟ್‌ಸ್ಥಲಾಚಾರಸಂಸಿದ್ಧಿನಯ(ನ)ಸು ।
ಸ್ಥಿರಶೈವಪಂಚಾಕ್ಷರೀಮಂತ್ರಹೃದಯನುರು ।
ತರಸತ್ಕ್ರಿಯಾಜ್ಞಾನಸಂಪನ್ನನಖಿಳಶಾಸ್ತ್ರಾರ್ಥಕೋವಿದ ಪಾವನ ॥
ಚರಿತ ಘನಗುರು ನಿರಂಜನಲಿಂಗಚರಣಾಸರ ।
ಸಿರುಹಸಂಭವಮಧುಕರಂ <u>ತೋಂಟದಾರ್ಯ</u> ಬಿ ।
ತ್ತರಿಸಿದನೆನಲ್ಕೆ ಮೆಚ್ಚದಪೊಳರೆ <u>ಕರ್ನಾಟಕಶಬ್ದಮಂಜರಿ</u>ಯನಿದನು ॥
ಎಳೆದೆರ ಗೊರವನೈಮೊಗ ಕಂಬುಗೊರಲ ಮುಪ್ಪೊ ।
ಳಲುರಿಕನೆ(ಲರು)ಣಿವೆದಿಯ ಬಾನ್ನವಿರ ಗೊಂದೆ ।
ವಳಯಿಗೆಯ ಪೆಣ್ಮಯ್ಯವಂ ನೊನ್ನೆವೆಟ್ಟವಿಲ್ಲಂ ಬಗ್ಗದೊವಲೊಡೆಯನು ॥
ಚೆಳವೆಟ್ಟಯ ಪೆಪೆದಲೆಯ ಪೆಣ್ಣೊಡೆಯ ಮಿಡತಿ ।
ಸುಳಿ ಸಬ್ಬ ಬಾಂಬೊಚ್ಚದಲೆಯ ಮಿಗಗಯ್ಯ ನಿಂ ।
ಗಳಗಣ್ಣ ಗೊಂತಂ ಪದತಿವಚ್ಚ ಗಂಧರಗಿವಿಯ ನೀಸರಂದೇಶಿಗಂ ॥
ಗನಹ ಮಾದೇವ ಕನ್ನಡಿಯ ಕಪೆಗೊರಲ ಪಿರಿ ।
ತಿನಿಯಾಣ್ಮ ದಪ್ಪಕವಗೆಯ ಸಂಬು ನೊಡಬಲಿ ।
ವನೆಯನಜುವೊಗನಯ್ಯನಮರ್ದ್ದ ವೆಣ್ಣಿನಿಯನೆಂದೆಂಬೆನೀಶ್ವರನ ನಾಮ ॥ (?)
ವೆನಿಸಿರ್ಪುವೈದೆ ಮೂಕಾಳ ಸಬ್ಬಾಣಿ ಯೆಂ ।
ದೆನೆ ಕುಳವೆಟ್ಟಣಗಿ ಸಿಂಗಕೆರೆಯಳನಲ್ಕನು ।
ವಿಳಿಂ ಗಿರಿಜಾಹ್ವಯದೊಳೆವೆಸರಿದಿರ್ಪುವಾವಿನಾಯಕನನಾಮ ॥

*   *   *   *

ಎರೆಳೆಗುರು ಪಂಚಂದ ನೈದಿಲ್ಗಳೆಯನು ತಾ ।
ವರೆವಗೆಯ ಚೆಂದಿರಂ ಪೆಪೆಯು ಮಿಗಲಚ್ಚಣಂ ।
ಇರುಳಾಣ್ಮ ಸಸಿ ಬಿದುವೆಲ್ ಚಂದ್ರನಾಮವಾಬಟ್ಟೇಂದುಮಂಡಲಾಖ್ಯಂ ।
ಗೆರೆಯೆನಲು ರೇಖಾಖ್ಯ, ಜೊನ್ನವೆನೆ ಜ್ಯೋತ್ಸ್ನಯು, ಕು ।
ಳಿರು ಹಿಮಂ ಚಳಿಯೈಕಿಲೆಂದು ಹಿಮನಾಮವು, ಪೆ ।
ಸರು ಮೀನರಿಲು ತಾರಗೆಯು, ತಾರೆಯುಲ್ಲಿ ಕಳ್ತಲೆ ಮುರ್ಬ್ಬುತಿಮಿರಾಹ್ವಯಂ ।
ಮಂಗಳನ ಪೆಸರುಕೆಂಸೊಡಲ ದಾಡ ವಿಚನೆಂದು ; ।
ತಿಂಗಳ್ಣಾಗಂ ಬುಧನೆನಲ್ಕೆಸಗು ಸೌಮ್ಯನಾ ।
ಮಂ ಗುರುವಿನಲ್ಲಿ ಬೋಳೆಯರೋಜನೆಂದು, ರಕ್ಕಸರೋಜ ಚುಕ್ಕಿಯೆನಲು, ।
ಸಂಗಳಕು ಮಸುರಗುರುವಿನೊಳು ಸನಿಯನೆ ಶನಿಗೆ ।

ಬಂವೆದದು ಬಾಳೆಲರ್ವಟ್ಟಿವಾವುನೆ ರಾಹು ।
ಕಂಗೊಳಿಕು ಚಮ್ಮಳಿಯೆನಲ್ಕಿ ಕೇತುವಿನ ಪೆಸರ್ಅಲ್ಲಿ ಕವಿಗಳ ಮತದೊಳು ॥
ನಿವಿಸ ನಿಮಿಷಂ ; ಕ್ಷಣಂ ಚಣಂ ; ನಾಳಿಯೆನೆ . . ।
ತವೆಗಳಿಗೆ ಯಾವದೊಳಾವ ದೇವ ಸಂಪಗ ।
ಷ್ಟಿವಸ ಕಾಖ್ಯ ; ಸಂಜೆಯೆನೆ ಸಂಧ್ಯಾಹ್ವಯಂ ; ಮುಂಬಗಲ್ ಪೊಳ್ತರೆಯುಮೆನಲಿ
ಸವನಿಪ್ರದುಷಃಕಾಲದಲಿ ; ನಡುವಗಲಲ್ಲಿ ।
ವಿವರಿಸಲ್ ನಟ್ಟನವಗಲಕ್ಕಡೆವಗಲಲ್ಲಿ ।
ವ್ಯವಹರಿಕು ಪಿಂಬಗಲೆನಲ್ಕಿವು ; ತ್ರಿಸಂಧ್ಯೆಯೆನೆ ಮುಚ್ಚಂಜೆ ಮೂಸಂಜೆಯು ।
ತವೆ ಯಿರುಳೆನಲು ರಾತ್ರಿಯುಪಸಿಮವಾಸಿ (?) ಹು ।
ಣ್ಣುವೆ ಪೂರ್ಣಿಮಾಖ್ಯ ; ಪ್ರತಿಪತ್ತಂ ಪಾಡ್ಯವೆಂ ।
ದವತರಿಕು ; ಬಿದಿಗೆಯುಂ ದ್ವಿತೀಯೆಯೊಳ್ ; ತದಿಗೆ ತಾನದು ತೃತೀಯೆಯೊಳ್ ತೋರ್ಕುಂ ।
ಬುವಿಯರಿಯೆ ಚೌತಿಯೆಂದೆನೆ ಚತುರ್ಥಿಯೊಳ್ ; ಪಂ ।
ಚವೆ ಪಂಚಮಿಯೊಳ್ ; ಷಷ್ಠಿಗೆ ಚಟ್ಟಿಯೆಂದು ; ಸ ।
ತ್ತವೆ ಸಪ್ತಮಿಯೊಳಷ್ಟಮಿಗೆ ಅಟ್ಟಮಿಯು ; ನಾಮಿ ನವಮಿಯೊಳ್ ; ದಸಮಿ ದಶಮಿ ॥

End:

ತಾಗೆನೆ ಪಳಂಚೆನಲ್ಸಂಘಟ್ಟನಾರ್ಥಮದು ।
ಕೈಗಣ್ಮಿತೆನೆ ಯತಿಕ್ರಮಣ ಮಜ್ಜನೆನೊಳಂ ।
ಮೈಗರೆದುದೆಂದಡಂಗಿದುವಕ್ಕು ಬರ್ದನಲಾವು ಚವರಕೆ ಕುಂಚವು ॥
ಪೊಗದಮೆನಲ್ ಪ್ರಾಕೃತಂ ; ಕಬಂಧಕ್ಕೆ ಪೆಸ ।
ರೀಗ ಕಡುಕಟೆ ಸಬವೆನೆ ಕುಣಪನೆಂದೆವೆಯು ।
ಯೇಗೆಯ್ಯಲುಂ ಪಸಿಯ ತವೆಯುಕ್ಕು ; ಕೆನ್ನೀರು ರಕುತ ನೆತ್ತರು ಸ್ರೀಶೋಣಿತಂ ॥
ಪಡಿವಳನೆನಿಪ್ಪ ; ಸೇನಾನಿ ; ಪ್ರತಿಹಾರಿ ತಾಂ ।
ಪಡಿಯರನೆನಿಪ್ಪ ; ಘೋಳಾಯನೆನೆ ರಾವುತಂ ।
ಅಡಬಳಂ ಬಾಣಸಿಗನಕ್ಕು ; ಬಿಜ್ಜಣಿಗೆಯವನೆ ಝುಳಂಬಾಯ್ತನಕ್ಕುಂ ।
ಪೊಡೆಪಿಯೊಳಡಂಗಾಯ್ತು ರಾಕುರುಂಬರೆನಿಪ್ಪ ।
ನುಡಿ ಕೊಟ್ಟವರ್ಗೆ ; ಪಚ್ಚಾಯಿಲ ತಾನೆನಲು ಪ ।
ಚ್ಚಡಿಸುವಂ ; ಪರಿಚಾರಕರ್ಗಚ್ಚುಳಾಯ್ತರೆಂದೆಂಬ ನಾಮಂ ಸಲ್ವುದು ॥
ಕಲ್ಲಾಯ್ತನೋಜನೆಂದಿನಿಪ ; ವಿಪುಲ ವಿದ್ಯಮಂ
ಬಲ್ಲ ತಾಸಿಯೆ ಶಿಕ್ಷಿಪಾತ ಬಂ . . . .
. . . .

(ವಿ-ವಿ.)—

ಅಸಮಗ್ರ. ಬರೆವಣಿಗೆ ಚೆನ್ನಾಗಿದೆ. ಕಾಗದದ ಒಂದು ಪಕ್ಕದಲ್ಲಿ ಮಾತ್ರವೇ ಬರೆದಿದೆ. ಹಳೆಗನ್ನಡ ಶಬ್ದಗಳಿಗೆ ಸಮಾನವಾದ ಹೊಸಗನ್ನಡ ಭಾಷೆಯಲ್ಲಿ ಅರ್ಥವನ್ನು ಬರೆದಿದ್ದಾನೆ. ಕವಿ ತೋಂಟದಾರ್ಯ. ನಾನಾರ್ಥರತ್ನಾಕರಕರ್ತನಾದ ದೇವೋತ್ತಮ

ಕವಿಯು ತನ್ನ ಗ್ರಂಥವಲ್ಲಿ ಹಿಂದಣ ನಿಘಂಟುಗಳನ್ನೂ ನಿಘಂಟುಕಾರರನ್ನೂ ಹೇಳುವ ಸಂದರ್ಭದಲ್ಲಿ "ಶಬ್ದಮಂಜರಿ" ಯನ್ನೂ ನಿರ್ದೇಶಿಸಿರುವುದರಿಂದ, ಆ ಶಬ್ದಮಂಜರಿಯು ವಿರಕ್ತತೋಂಟದಾರ್ಯನಿಂದ ವಿರಚಿತವಾದುದೇ ಇರಬಹುದೆಂತಲೂ, ದೇವೋತ್ತಮನ ಕಾಲವು ಕ್ರಿ.ಶ. ೧೬೦೦ ಎಂಬುದಾಗಿ ನಿಶ್ಚಯಿಸಿರುವುದರಿಂದ ಈತನು ಆ ದೇವೋತ್ತಮನಿಗಿಂತಲೂ ಪ್ರಾಚೀನನೆಂಬುದಾಗಿ ನಿಶ್ಚಯಿಸಬಹುದಾಗಿದೆ. ಈ ಕಾರಣದಿಂದ ಈತನ ಕಾಲವು ಕ್ರಿ.ಶ. ಸು. ೧೫೬೦ ಎಂಬುದಾಗಿ ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ. ಈ ಕವಿಯು ಸಿದ್ಧೇಶ್ವರಪುರಾಣ, ಪಾಲ್ಕುರಿಕೆ ಸೋಮೇಶ್ವರಪುರಾಣ, ಮನೋವಿಜಯತಾತ್ಪರ್ಯ ಇತ್ಯಾದಿ ಗ್ರಂಥಗಳನ್ನು ಬರೆದಿರುವುದಾಗಿ ತಿಳಿಯಬರುತ್ತದೆ.

No. 18. ನಾನಾರ್ಥಕಂದಪದ್ಯಗಳು.
NĀNĀRTHAKANDAPADYAGAḶU.

Substance, palm-leaf. Size, 5¾ × 1⅝ inches. Pages, 82. Lines, 4 on a page. Character, Kanarese. Condition, much injured. Appearance very old. Mode of writing, fair but not free from mistakes.

Complete.

A lexicon of Kannada words in the Kanda metre: by Cennakavi alias Dhīradrāviḍa, who flourished about 1600 A.D, and belonged to Bhāradvājagōtra.

Beginning:

ಭಾರದ್ವಾಜಸುಗೋತ್ರದ ।
ಧೀರದ್ರಾವಿಡನು ರಾಮ[ಚಾರಿತ್ರಂಗಳ್] (ಚರಿತಂಗಳ್) ನೀ ॥
ವಾರುಣಿಗೆ ತೋರ್ಪ ಚೆನ್ನಕ ।
ಧೀರಂ ನಾನಾರ್ಥಕಂದಪದ್ಯವ ಪೇಳ್ದಂ ॥
ಹರ ಗಿರಿ ಜಲ ಪಾರ್ವತಿ ವಟ ॥
ತರು ಪುಳಿನ ದ್ವಿಪಲೆ ವಾಣಿ ಶುಕ ನರಿ ದಟ್ಟಂ ॥
ನೊರೆ ಪುಣ್ಯ ಪೇವು ಶುಭ ಸುಖ ।
ವರಸಿತ ಪದಿನೆಂಟು ನಾಮ ಶಿವಶಬ್ದಂಗಳ್ ॥
ಹುತ್ತ ಹುಲಿ ಕಪ್ಪೆ ಕಮಲ ।
ಸತ್ತಿಗೆ ಮುನಿ ವಿಷ್ಣು ಬ್ರಹ್ಮಸಾರಕುಜ ಸುರಪಂ ॥
ಉತ್ತಮಕರಿ ಧ್ವಜ ಕಬ್ಬಂ ।
ತತ್ತೇಜ ಧ್ವನಿ ಸುಪುಂಡರೀಕತ್ರಿಪಂಚಂ ॥
ಮತ್ತಗಜಂ ಮರ ಸರ್ಪಂ ।
ಕತ್ತಲೆ ಯುದಕಾಗ್ನಿ ಸೀಸ ಮುಖ್ಯಂ ಶಂಖಂ ॥
ಬಿತ್ತರವಾಗಿಹ ಹೆಸರೊಂ ।
ಭತ್ತುಂ ನಾಗಾಭಿಧಾನವೆನಿಕುಂ ಜಗದೊಳ್ ॥

* * * *

ಚಂದ್ರಾಗ್ನಿ ಸೂರ್ಯ ತರಳ ಸು ।
ರೇಂದ್ರೈದು ವಿರೋಚನಾಖ್ಯಮುದಕಂ ವಿಪಿನಂ ॥
ಚಂದ್ರಂಚೆ ತಿಮಿರ ನೆತ್ತಿ ರ ।
ವೀಂದ್ರೆಂಟು. ಪೃಥೆಯು ಶಬ್ದವೆನಿಕುಂ ಜಗದೊಳ್ ॥
ಉದಕ ರಥ ವೃಕ್ಷ ನದಿ ನಾ ।
ಲ್ಕಿದು ತಾ(ಂ)ಸ್ಯಂದನ ವೆನಿಕ್ಕು ಬತ್ತಳಿಕೆ ಸಮು ॥
ದ್ರದೊಳಾರಣ್ಯದೆ ನದಿಯೊಳ ।
ವಿದು ನಾಲ್ಕುಂ ಶರಧಿ ಶಬ್ದವೆನಿಕುಂ ಜಗದೊಳ್ ॥

End:

ಕಮಲೆಯೊಳುಂ ಪ್ರೀಯುದೊಳುಂ ।
ರಮಿಸುವುದೀ ಮೂಱು ಪೆಸಱು ರಮೂ ಶಬ್ದಮು ॥ (?) (ಪದಮೇಱು)।
ತ್ರಮು ಕೃಷ್ಣ ನೃಪ ಕುಲಾಲ ।
ಕ್ರಮದೊಳ್ ನಾಲ್ನಾಮ ಚಕ್ರವರ್ತನವೆನಿಕುಂ ॥
ಸುರರಾನೆ ಮೇಘ ವೃಕ್ಷಗ ।
ಳಿರೆ ನಾಲ್ ವ್ಯಂ[illegible]ಕಾಖ್ಯ ಕವಿ ವಸ್ತ್ರಂಗಳ್ ॥
ನೆರೞ ಪತಾಕೆಯು ರ್ಕಂ ।
ಪರಿಕಿಸಲ್ಕೈನಾಮದೊಳೀಶಬ್ದಂ ಜಗದೊಳ್ ॥
ಸುರಲೋಕ ಪೂರ್ವ ಸುಖಮುಂ ।
ಇರವುಗಳುಂ ಸೃಷ್ಟಿಯೈದು ಸ್ವರ್ಗಾಖ್ಯಂ ಭಾ ॥
ಸ್ಕರಶೋಭನವಂಗಾರಕ ।
ತುರಗಂ ಪೂರ್ವಗಳವೈದು ಮಂಗಳಶಬ್ದಂ ॥

(ಪಿ-ವಿ.)—

ಸಮಗ್ರ. ಅತಿಶಿಥಿಲ. ಬರೆವಣಿಗೆ ಸಾಮಾನ್ಯ. ಕವಿ ಧೀರದ್ರಾವಿಡೋಪನಾಮಕನಾದ ಚೆನ್ನಕವಿ. ಈತನು ಬ್ರಾಹ್ಮಣನು. ಭಾರದ್ವಾಜ ಗೋತ್ರದವನು. ಇದರಲ್ಲಿ ೧೫೬ ಕಂದ ಪದ್ಯಗಳವೆ. ಇದು ಅನೇಕಾರ್ಥಬೋಧಕವಾದ ನಿಘಂಟು. ಕವಿ ಕ್ರಿ. ಶ. ಸು. ೧೬೦೦ ರಲ್ಲಿ ಇದ್ದಿರಬಹುದು. ಮೊದಲಿನಲ್ಲಿ ಒಂದೆರಡು ಪದ್ಯಗಳು ಲುಪ್ತವಾಗಿರಬಹುದೆಂದು ತೋರು ತ್ತದೆ.

No. 19. ನಾನಾರ್ಥ ಕಂದ ಪದ್ಯಗಳು-
NĀNĀRTHA KANDA PADYAGAḶU.

Substance, Paper, Size, 3½ × 7½ inches. Pages 22. Lines 16 on a page. Character, Kanarese. Condition, very much injured. Appearance, old.

Begins on page 36. The other works herein are :—(1) Nala-caritre 1. (2) Hariśc'andrarāyana Kathe 107 (Sāngatya) (3) Sāranga-dhara Caritre 186 (Yakṣagāna) (4) Chandōmbudhi 266 (5) Ganagaḷu

grantha 305 (6) Śṛṅgāraratnākara 314 (7) Ārūḍhachandassu 319 (8) Ragaḷegaḷa lakṣana 323 (9) Anantachandassu 326 (in Telugu) (10) Sankirnagrantha 327 (Śivasūktaṣaḍakṣara etc.)

Contains 142 stanzas.

Same work as the above.

(ವಿ.ವಿ.)—

ಇದರಲ್ಲಿ ೧೪೨ ಪದ್ಯಗಳಿವೆ. ಮೇಲೆ ವರ್ಣಿತವಾದ ಗ್ರಂಥವೇ. ಮೇಲೆ ವರ್ಣಿಸಿರುವ ಗ್ರಂಥಾದಿಯಲ್ಲಿ ಮೂರು ಪದ್ಯಗಳು ಇಲ್ಲವಾದುದರಿಂದ ಅವುಗಳನ್ನು ಈ ಗ್ರಂಥದಿಂದ ತೆಗೆದು ಈ ಕೆಳಗೆ ಕೊಟ್ಟಿದೆ.

ಕಂ ॥ ಶ್ರೀರಮಣೀಕುಚಮಂಡಲ ।
ಪೂರಿತಘೌಗಂಧಬಂಧುರಾಂಕಿತವಕ್ಷಂ ॥
ರಾರಾಜಿಪ ಘ(ನ) ಸೌಮ್ಯವು ।
ನೋರಮ್ಯನಿಕಾಯ ! ಶರಣು ಚೆನ್ನಿಗರಾಯಾ ! ॥
ಕುಂದದೆ ನುತಿಪೆಂ ಸಲೆ ಮಾ ।
ಕಂದ(ಂ) ಮದಕರಿಯನೇಜಿ ರಾಜಿಸುತಿರ್ಪಾ ॥
ಕಂದರ್ಪನೊಲಿಸದಿಹ ಹರ ।
ನಂದನನಂ ಕೃತಿಗೆ ಮೊದಲು ಕೈಗಳ ಮುಗಿವೆಂ ॥
ಕಡಲೊಳ್ ಮಲಗಿದವನ ವೇ ।
(ಪೊ)ಡಲುಳ್ಳನೆ ಪರಿಯ ತೊರೆಯೆನುತ ತಲೆಯೊಳ್ (?) ॥
ಮುಡಿದಾತನ ಸಲೆ ಬೊಮ್ಮನ ।
ಮಡದಿಯ ಕಬ್ಬಕ್ಕೆ ಮುನ್ನ ನಾಂ ಬಲಗೊಂಬೆಂ ॥

No. 20. ನಾನಾರ್ಥರತ್ನಾಕರ, ಸಟೀಕ.
NĀNĀRTHARATNĀKARA WITH MEANING.

Substance, Śrītāla. Size, 8 × 2 inches. Pages, 67. Lines, 12 on a page. Character, Kanarese. Condition, injured. Appearance, old. Mode of writing, bad and contains mistakes.

Begins on fol. 1 a. The other work herein is Lalitāstōtra 34 a.

Complete.

Similar to the above. By Dēvōttama; a Jain poet who flourished about 1600 A.D. The stanzas herein are written in various metres such as Śārdūlavikrīḍita, Campakamālā, Utpalamālā, etc., and contain meaning in Kanarese.

Beginning:

ಉತ್ಪಲಮಾಲಾ ವೃತ್ತ ॥

ಶ್ರೀದಿವಿಜೇಂದ್ರವಂದಿತಪದಾಂಬುಜನಾನ(ತಹೃತ್ಪಯೋಜಮಿ) ।
(ತ್ರೋದಯ, ನತ್ಯನೂನಸಕಲಾಗಮಶಾಸ್ತ್ರ) ಪಿರಾಜಪಾನಜೋ ॥
ಧೋದಯ, ನುನ್ನತೋತ್ಸವದಜೂಂಚಿತ್ರಧರ್ಮಸುಧಾಬ್ಧಿಪೂರ್ಣಚಂ ।
ದ್ರೋದಯನಾದನಾದಿ(ಪರಮೇಶ್ವರನೀಗೆಮಗಿಷ್ಟ) ಸಿದ್ಧಿಯಂ ॥
ವಾಣಿ ಜಗತ್ಪಿತಾಮಹನ ರಾಣಿ, ಯತೀವಸುಖಪ್ರದೈಕಕ ।
ಲ್ಯಾಣಿ ಸುನೀಲರತ್ನನಿಭವೇಣಿ ಪದದ್ವಿತಯಾಬ್ಜನಮ್ರ ॥
ಗೀರ್ವಾಣಿ ವಿಕರ್ಮವಲ್ಲರಿಕೃಪಾಣಿ ಸಂಗೀತಕಪಾಣಿ ಗೌರವ ।
ಶ್ರೋಣಿ ಸರೋಜಪಾಣಿ ದಯೆಯಿಂದೆಮಗೀಗೆ ವಚೋವಿಲಾಸಮಂ ॥

ಮತ್ತೇಭವಿಕ್ರೀಡಿತ ॥

ನಿಜಗೋಪಾಲ ಧನಂಜಯಾಭಿನವಮಾಚಂ ಭಾಗುರೀ ನಾಗವ ।
ರ್ಮ ಜಯಂತಾಮರ ಶಬ್ದಮಂಜರಿ ಬಲಾದ್ಯುಕ್ತಾಭಿಧಾನಾರ್ಥಮಂ ।
ದ್ವಿಜವಂಶಾರ್ಣವ ಪೂರ್ಣಚಂದ್ರನೆಮಗೀ ದೇವೋತ್ತಮಂ ಬೇಟಿ ಸೂ ।
ರಿಜನಂ ಮೆಚ್ಚಲು ಸೇವ್ಯಮಾಯ್ತು ಜಗದೊಳ್ ನಾನಾರ್ಥರತ್ನಾಕರಂ ।
ವಾರಿ ಶಿರೋರುಹಾಂಬುನಿಧಿಯೋಗ್ಯಮಶೇಷಗುಣಾಧ್ವರಂ ಸುರಾ ।
ಹಾರವಮರೀಚಿಮುಕ್ತಿಸಿತಮಿಂತಿವರಲ್ಲಮೃತಾಭಿಧಾನಮಂ ॥
ಗಾರಕಪಾದಪಾಗ್ರನವಿಲಾಸಲಸೀಸಕತಾಮ್ರಕೇತುಕಾ ।
ಲೋರಗವಿಪ್ರಚೂಡಶರಮೂಲಿಕೆಗಂ ಶಿಖಿಯೆಂಬ ವಾಚಕಂ ।

ಉತ್ಪಲಮಾಲೆ.

ವಾಣಿ ಶಿಗೋಜಭೂಜ ಪಶುವಾರಿಧರಾತಳವಜ್ರಲೋಚನಂ ।
ಬಾಣ ಮರೀಚಿವೀಚಿದಿಶಪರ್ವತಕುಕ್ಷಿವಿಹಂಗಶೃಂಗ ಗೀ ॥
ರ್ವಾಣ ನಿಕೇತನಂಗಳವು ಗೋವೆನಿಕುಂ ಯಮ ವಾಯುಪುತ್ರ ಸ ।
ತ್ರಾಣಭುಜಂ ಭಟಾಗ್ರಣಿ ಭಯಂಕರ ಶಂಕರಭೀಮವಾಚಕಂ ॥

* * * *

ಮತ್ತೇಭವಿಕ್ರೀಡಿತ ॥

ನಳಿನಂ ಚಂದ್ರಮುನೀಂದ್ರಗೋಮಿನಿಸರವ್ಯೋಹಾಸನಂ ವಾರಿಯು ।
ತ್ಪಲಧೀರಂಗಜಬಿಂದುವಕ್ರಘಣಿಸಂಖ್ಯಾಭೇದಪದ್ಮಾಂಕಿತಂ ॥
ಜಲವಾಜಿಧ್ವನಿರಕ್ತಲೋಹಿತವು ಕೀಲಾಲಾಖ್ಯ ಮುಳ್ಮತ್ತಗಂ ।
ಕುಲಬೆನ್ನಸ್ಥಿ ಬಿದಿರ್ ಮಹಾತಪಸಮೂಹಂ ಕೂಡೆ ವಂಶಾಹ್ವಯಂ ॥
ಕಿರಣಂ ಸಾರಥಿವರ್ಣಭೇದನದಿಸೂತ್ರಂರೇಣುಸೂರ್ಯಾದಿಗಳ್ ।
ಅರುಣಾಖ್ಯಂ ಹಯಸಿಂಹನಾದವತಿದುಃಖಂ ಸ್ವಲ್ಪತ್ವಕ್ಪಾರಮುಂ ॥

ಗರಳಂ ಭೇಧಮೆನಿಸ್ಕು ವಾರಿದಮರಣ್ಯಂ ದುರ್ಜನಂ ಸರ್ಪಶಂ ।
ಕರಹಂಸಂ ವಿಷಭೃದ್ಧಮಕ್ಕು ವಧುತಲ್ಪಂ ನಿದ್ರೆ ಶಯ್ಯಾಹ್ವಯಂ ॥

ಚಂಪಕಮಾಲಾ ವೃತ್ತ ॥

ಬಿಸಜ ವಿಹಂಗ ಧೂರ್ತ ಗಿರಿ ಗಾವಟಿ ಮೃತ್ಯು ಸಮೀಪ ಹಂಸ ನಾ ।
ರಸಮೆನಿಕಾಂತ ಕಾರ್ಕಶಿಕರ್ಣಯುಶಂ ಜಗದೇಕ ಚಕ್ಷುವ ॥
ಕ್ಕಸಿತಘಲಂ ಭಯಂಕರಯುಗಂ ಯಮಶಂಕರವಿಷ್ಣುಪಕ್ಷ ಸಾ ।
ಹಸನಮುಯಂ ಧರಾಧಿಪತಿ ವತ್ಸರವೆಂಬಿವು ಕಾಲವಾಚಕಂ ॥

End:

ಮುನಿಸುಂ ಪ್ರಶ್ನೆ ಪುನರ್ವಚಂಗಳಪಿಶಬ್ದಂ ಹಾಸ್ಯಮಾತ್ಮೀಯಕಾ ।
ಮಿನಿಮುಖ್ಯಪ್ರಜೆಯೆಂಬಿವುಂ ಸ್ವಸಮೆನಿಕ್ಕಾಸನ್ನಮುಂ ಪಾಡ್ಯಸ ॥
ದ್ವನಿತಾಸಂಚಯಮಿಂತಿವೈಯ್ದು ಪ್ರತಿಪತ್ಯಾಖ್ಯಾನಮುಂ ಸ್ನೇಹಮುಂ ।
ಘನವಿಸ್ನೇಹಗಳೆಂಬಿವಿಂ ತನುನಯಂ ನಾನಾರ್ಥರತ್ನಾಕರಂ ॥
ಜಗದೊಳ್ ಜಾಣರಮೆಚ್ಚು ಸತ್ಕವಿಸಮೂಹಕ್ಕೆಯ್ದು ತಾಯ್ನೊಡು ವಾ ।
ಗ್ಮಿಗಳಾನಂದರಸಾಧಿವಾಸ ಗಮಕೀ ಸಂತಾನಸುಪ್ರೀತಿ ವಾ ॥
ದಿಗಳಾವಾಸನಿಧಾನ ದುರ್ಜನಜನಾಂಭೋಜಾತಶುಭ್ರಾಂಶುವೆಂ ।
ಬ ಗುಣವ್ರಾತಮುದಿಂಪುವೆತ್ತು ಮೆಱೆಗುಂ ನಾನಾರ್ಥರತ್ನಾಕರಂ ॥

Colophon:

ಇದು ಭಗವದರ್ಹತ್ಪರಮೇಶ್ವರಚಾರುಚರಣಾರವಿಂದದ್ವಂದ್ವಮಕರಂದಮತ್ತಮಧುಕರಾಯಮಾನ ವಿಬುಧಜನಮನಃಪದ್ಮಿನೀರಾಜಹಂಸ ಶ್ರೀಮತ್ಕವಿರಾಜಹಂಸ ದೇವೋತ್ತಮವಿರಚಿತಂ ನಾನಾರ್ಥರತ್ನಾಕರಂ ಸಮಾಪ್ತಂ ॥

(ವಿ.ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿಲ್ಲ. ಜೈನಮತಾವಲಂಬಿಯಾದ ದೇವೋತ್ತಮನು ಕವಿ. ಕಾಲ ಕ್ರಿ.ಶ. ೧೬೦೦. ಇದರಲ್ಲಿ ಸುಮಾರು ೧೬೦ ಪದ್ಯಗಳು ಬೇರೆಬೇರೆ ವೃತ್ತಗಳಲ್ಲಿ ಲಿಖಿತವಾಗಿವೆ. ಒಂದೊಂದು ಪದ್ಯಕ್ಕೂ ಅಡಿಯಲ್ಲಿ ಕನ್ನಡ ಟೀಕೆಯೂ ಇದೆ. ಈ ಗ್ರಂಥವು ಮುದ್ರಿತವಾಗಿದೆ. ಈ ಓಲೆಯ ಪುಸ್ತಕದಲ್ಲಿ ಶುದ್ಧವಾದ ಪಾಠಭೇದಗಳು ಅನೇಕ ಕಡೆ ಕಂಡುಬರುತ್ತಿವೆ. ಗ್ರಂಥಾಂತ್ಯದಲ್ಲಿ (ನೀಲಾಂಬಿಕಾ) ಸ್ತೋತ್ರವಿದೆ. ಇದು ವಾರ್ಧಿಕಷಟ್ಪದಿಯಲ್ಲಿದೆ.

No. 21. ನಾನಾರ್ಥರತ್ನಾಕರ, ಸಟೀಕ-
NĀNĀRTHARATNĀKARA WITH MEANING.

Substance, paper. Size, 10½ × 9½ inches. Pages, 75. Lines, 20 on a page. Character, Kanarese. Condition, good. Appearance, new. Mode of writing, not good and not free from mistakes.

Begins on page 1. The other work herein is Nīlāmbikāstōtra. 75. Complete; wants the first stanza.

Same work as the above.

(ವಿ-ವಿ.)—

ಸಮಗ್ರ. ಆದರೆ ಮೊದಲನೆಯ ಪದ್ಯವಿಲ್ಲ. ಬರವಣಿಗೆ ಚೆನ್ನಾಗಿಲ್ಲ. ತಪ್ಪುಗಳಿವೆ. ಶೈಥಿಲ್ಯವೂ ಉಂಟು. ಅಲ್ಲಲ್ಲಿ ಗ್ರಂಥಪಾತವಿದೆ. ಮೇಲೆ ವರ್ಣಿತವಾಗಿರುವ ಗ್ರಂಥವೇ, ಕವಿ ದೇವೋತ್ತಮ. ಗ್ರಂಥಾಂತ್ಯದಲ್ಲಿ ನೀಲಾಂಬಿಕಾಸ್ತೋತ್ರವಿದೆ. [ಈ ಪ್ರತಿಯು ಮೇಲಿನ ಪ್ರತಿಯ ಪ್ರತಿಕೆಯು.]

No. 23. ನಾಮಲಿಂಗಾನುಶಾಸನ, ಸಟೀಕ.

NĀMALIṄGĀNUŚĀSANA WITH MEANING.

Substance, Śrītāla. Size, $19\frac{1}{4} \times 2$ inches. Pages, 52. Lines, 9 on a page. Character, Kanarese. Condition, injured. Appearance, old. Mode of writing, not bad and contains mistakes.

Incomplete and imperfect.

Begins from the middle portion of the Svargavarga and breaks off n the course of the Kṣatriyavarga.

A commentary in Kanarese on Amarasiṁha's Nāmaliṅgānuśāsana. The name of the commentator is not given.

Beginning :

. . . . ದೇವತರುಗಳು. ಸನತ್ಕುಮಾರೋ ವೈಧಾತ್ರಃ, ಈ ಎರಡೂ ಬ್ರಹ್ಮನ ಮಗನ ಪೆಸರು. ಸ್ವರ್ವೈದ್ಯಾವಶ್ವಿನೀಸುತೌ । ನಾಸತ್ಯಾ(ವಶ್ವಿನೌ ದಸ್ರಾ)ವಾಶ್ವಿನೇಯೌ ಚ ತಾವುಭೌ ॥ ಇವು ಆರೂ ದೇವಲೋಕದ ವೈದ್ಯರಾದ ಅಶ್ವಿನೀ ದೇವತೆಗಳ ಪೆಸರು. . . . . . . ಶಿ ಮೊದಲಾದ, ಸ್ವರ್ವೇಶ್ಯಾಃ, ಸ್ವರ್ಗದ ವೇಶ್ಯೆಯರು, ಅಪ್ಸರಸುಗಳೆಂಬುದು. ಹಾಹಾ ಹೂಹೂ (ವಿ)ಶ್ಚೈವಮಾಖ್ಯಾಃ, ಇವರು ಮೊದಲಾದ . . . . . ಧರ್ವರು ದೇವರ್ಕಳ ಮನೆಯಲ್ಲಿ ಹಾಡುವರ ಪೆಸರು. ಅಗ್ನಿರ್ವೈಶ್ವಾನರೋ ವಹ್ನಿರ್ವೀತಿಹೋತ್ರೋ ಧನಂಜಯಃ । ಕೃಪೀಟಯೋನಿರ್ಜ್ವಲನೋ ಜಾತವೇದಾಸ್ತನೂನಪಾತ್ । (ಬರ್ಹಿ)ಶ್ಶುಷ್ಮಾ ಕೃಷ್ಣವರ್ತ್ಮಾ ಶೋಚಿಷ್ಕೇಶ ಉಷರ್ಬುಧಃ । ಆಶ್ರಯಾಶೋ ಬೃಹದ್ಭಾನುಃ ಕೃ(ಶಾನುಃ ಪಾವ)ಕೋಽನಲಃ । ಲೋಹಿತಾಶ್ವೋ ವಾ(ಯುಸಖಃ ಶಿಖಾವಾನಾ)ಶುಶುಕ್ಷಣಿಃ । ಹಿರಣ್ಯ(ರೇ)ತಾ ಹುತಭುಗ್ದಹನೋ ಹವ್ಯವಾಹನಃ । ಸಪ್ತಾರ್ಚಿರ್ದಮುನಾಶ್ಶುಕ್ರಶ್ಚಿತ್ರಭಾನುರ್ವಿರೋಚನಃ । ಶುಚಿರಪ್ಪಿತ್ತಮೌರ್ವಸ್ತು ಬಾಡಬೋ ಬಡಬಾನಲಃ ॥ ಟೀಕು . . . ಇವು ಅಗ್ನಿಯ ಪೆಸರು.

* * * *

ನಿಧಿರ್ನಾ ಶೇವಧಿರ್ಭೇದಾಃ ಪದ್ಮಶಂಖಾದಯೋ ನಿಧೇಃ ।
ಮಹಾಪದ್ಮಶ್ಚ ಪದ್ಮಶ್ಚ ಶಂಖೋ ಮಕರಕಚ್ಛಪೌ ।
ಮುಕುಂದಃ ಕುಂದನೀಲೌ ಚ ವರಶ್ಚ ನಿಧಯೋ ನವ ।

ಇವು ಒಂಭತ್ತೂ ನಿಧಿಗಳ ಹೆಸರುಗಳು ಎಂಬುದರ್ಥ.

Colophon ;

ಇತಿ ಸ್ವರ್ಗವರ್ಗಃ.

ದ್ಯೋದಿವೌ ದ್ವೇ ಸ್ತ್ರಿಯಾಮಭ್ರಂ ವ್ಯೋಮ ಪುಷ್ಕರಮಂಬರಂ ।
ನಭೋಽನ್ತರಿಕ್ಷಂ ಗಗನಮನಂತಂ ಸುರವರ್ತ್ಮ ಖಂ ।

* * * * *

ತಾರಾಪಥಸ್ಯಬ್ದಗುಣೋ ಮೇಘದ್ವಾರಂ ಮಹಾಬಲಂ ॥

Colophon:

ಇತಿ ವ್ಯೋಮವರ್ಗಃ.

* * * *

ಆಚಾರ್ಯಾಣೀ ತು ಪುಂಯೋಗೇ ಸ್ಯಾದಾರ್ಯಾ ಕ್ಷತ್ರಿಯೀ ತಥಾ ।
ಉಪಾಧ್ಯಾಯಿನ್ಯುಪಾಧ್ಯಾಯೀ ಪೋಟಾ ಸ್ತ್ರೀ ಪುಂಸಲಕ್ಷಣಾ ॥

ಟೀಕೆ.—ಉಪಾಧ್ಯಾಯಾ,—ಉಪಾಧ್ಯಾಯನ ಹೆಂಡತಿ. ತಜ್ಜಾತಿಯುವಳಾದೊಡೆ ಉಪಾಧ್ಯಾಯೀ ಎನಿಸುಗುಂ. ತಾನೇ ಮಂತ್ರವ್ಯಾಖ್ಯಾನಂ ಗೈವ ಹೆಂಡತಿ ಆಚಾರ್ಯೆ ಎನಿಸುಗುಂ. ಪುಂಯೋಗೇ,—ಆ ಮಂತ್ರವ್ಯಾಖ್ಯಾನಂ ಗೈಯ್ವವನ ಹೆಂಡತಿ ಆಚಾರ್ಯಾಣಿ ಎನಿಸುಗುಂ. ಆಚಾರ್ಯನ ಹೆಂಡತಿ ಆಚಾರ್ಯ್ಯ ಎನಿಸಿಗುಂ. ಕ್ಷತ್ರಿಯನ ಹೆಂಡತಿ ಕ್ಷತ್ರಿಯೀ ಎನಿಸಿಗುಂ. ಉಪಾಧ್ಯಾಯಿನಿ, ಉಪಾಧ್ಯಾಯೀ ಈ ಎರಡೂ ಉಪಾಧ್ಯಾಯನ ಹೆಂಹತಿ. ಸ್ತ್ರೀ—ಸ್ತ್ರೀಯು, ಪುಂಸಲಕ್ಷಣಾ, ಪುರುಷನಂತೆ ಚಿಹ್ನವುಳ್ಳವಳು ಪೋಟಾ ಎನಿಸುಗುಂ.

End:

ಸೋಽಭ್ಯಮಿತ್ರೋಽಭ್ಯಮಿತ್ರೀಯೋಽಭ್ಯಮಿತ್ರೀಣ ಇತ್ಯಪಿ ।

ಟೀಕು.—ಆವನೊಬ್ಬನು ಹಗೆಯುಗೆಲ್ಲಲು ಸಮರ್ಥನಾಗಿ ಇದಿರಾಗಿ ನಡೆದಾತನು, ಸಃ, ಆತನು, ಅಭ್ಯಮಿತ್ರ, ಅಭ್ಯಮಿತ್ರೀಯ, ಅಭ್ಯಮಿತ್ರೀಣ ಎನಿಸುಗು.

ಮೂಲ ॥ ಊರ್ಜಸ್ವಲಃ ಸ್ಯಾದೂರ್ಜಸ್ವೀ ಯ ಊರ್ಜಾಶಯಾನ್ವಿತಃ ॥

ಟೀಕು.—ಯಾವನೊಬ್ಬನು ಅತಿಶಯುವ ಪರಾಕ್ರಮದೊಡನೆ ಕೂಡಿದವನುಂಟೋ ಸಃ, ಆತನು ಊರ್ಜಸ್ವಲ, ಊರ್ಜಸ್ವಿ ಎನಿಸುಗು.

ಮೂಲ ॥ ಸ್ಯಾದುರಸ್ವಾನುರಸಲಃ ॥

ಟೀ.—ಉರಸ್ವಾ, ಉರಸಲಃ ಈ ಎರಡೂ ಪ್ರಶಸ್ತವಾದ ಉರಸ್ಸನ್ನುಳ್ಳವನು.

ಮೂಲ ॥ ರಥಿನೋ ರಥಿಕೋ ರಥೀ ॥

ಟೀ.—ರಥೀ, ರಥಿನ, ರಥಿಕ ಇವು ಮೂರೂ ರಥವುಳ್ಳವನು.

ಮೂಲ ॥ ಕಾಮಂಗಾಮ್ಯನುಕಾಮೀನಃ ॥

ಟೀ.—ಕಾಮಂಗಾಮಿ, ಅನುಕಾಮೀನಃ, ಈ ಎರಡು ಸ್ವೇಚ್ಛೆಯುಲ್ಲಿ ಹೋಗುವನು.

ಮೂ ॥ ಹ್ಯತ್ಯನ್ತೀನಸ್ತಥಾ ಭೃಶಂ ॥

ಟೀ.—ಅತಿಶಯುವಾದ ಗತಿಯುನುಳ್ಳ ಅತ್ಯನ್ತೀನ . . . . . .

ವಿ.ವಿ.)—

ಅಸಮಗ್ರ. ಶಿಥಿಲ. ಬರವಣಿಗೆ ಸಾಮಾನ್ಯವಾಗಿದೆ. ಶೈಥಿಲ್ಯವೂ ಗ್ರಂಥಪಾತವೂ ಉಂಟು. ಇದು ಅಮರಸಿಂಹನ ನಾಮಲಿಂಗಾನುಶಾಸನವೆಂಬ ಕೋಶದಲ್ಲಿನ ಪದಗಳಿಗೆ ಕನ್ನಡ ವ್ಯಾಖ್ಯಾನರೂಪವಾಗಿದೆ. ವ್ಯಾಖ್ಯಾಕಾರನ ಹೆಸರು ತಿಳಿಯುಬರುವುದಿಲ್ಲ.

(3) PROSODY.

No. 22. ಛಂದೋಂಬುಧಿ.

CHANDŌMBUDHI.

Substance, palm-leaf. Size, $13\frac{3}{8} \times 1\frac{1}{4}$ inches. Pages, 64. Lines, 5 on a page. Character, Kanarese. Condition, injured. Appearance, old. Mode of writing good but not free from mistakes.

Complete.

An elaborate treatise on Kannaḍa prosody. The author Nāgavarma I, also known as Nākiga, Nāki and Sayyaḍiyāta, has recast Bāṇabhaṭṭa's Kādambari as a Campūkāvya in Kanarese. He had the titles (1) Kavirājahaṁsa, (2) Budhābjavanakalahaṁsa, (3) Kanda kandarpa and (4) Negaḻtegōja and was the son of a Jaina Brahman Veṇṇamayya II and Pōḻakabbe of Kauṇḍinyagōtra. The author's ancestors were the inhabitants of Veṅgi country. It is stated that the author was a great warrior and poet in the court of Rakkasagaṅga who ruled from 984—999 A.D and was a disciple of Ajitasēnācārya who was the royal preceptor of Rācamalla (974—984 A.D., elder brother of Rakkasagaṅga) and Cāvuṇḍarāya the minister of Rācamalla as well as Rakkasagaṅga. The Ms. under notice contains many good readings and some more stanzas than those found in the printed edition.

Beginning:

ಶ್ರೀವಧುವಂ ಪಯೋಧಿಮಥನೋದ್ಭವವಸ್ತುಸಮೂಹದೊಳ್ ಮಹಾ ।
ದೇವಸಮೇತಮಿರ್ದ ಸುರರುಂ ಸುರರಂ ಕುಡೆ ತನ್ನ ಮೆಚ್ಚುಗೊ(ಂ) ॥
ಡಾವನಶೇಷಭೂಭುವನಮಂಡಲವಲ್ಲಭನಾದ ದೇವನೀ ।
ಗಾವಗಮೊಪ್ಪ ಬೇಳ್ಪ ವರದುನ್ನತಿಯುಂ ಸುಕವೀಂದ್ರವಲ್ಲಭಂ ॥

*   *   *   *

ಕರಮರ್ಥಾಕರಮುಚಿತಂ ।
ನಿರಾಳಮುಚಿತಪ್ರಸನ್ನಮತಿ(ಮ)ಧುರಮಲಂ ॥
ಕರಣೀಯೋತ್ತಮಮಾಗಿ ಪೇೞಲ್ ।
ಧರೆಯೊಳ್ ಕವಿರಾಜಹಂಸನೊರ್ವನೆ ಬಲ್ಲಂ ॥

*   *   *   *

ಜಗದೊಳಗಿದೊಂದು ಮಿಗಿಲೆನೆ ।
ನೆಗೞ್ದಿರ್ಪುದು ವೆಂಗಿವಿಷಯಮಾ ವಿಷಯದೊ(ಳೊ) ॥
ಳ್ವಗಣಿತಮೆನೆ ಸಪ್ತಗ್ರಾ ।
ಮುಗಳೊಳಮಾ ವೆಂಗಿಪೞು ಕರಂಸೊಗಯಿಸುಗುಂ ॥
ಆ ವೆಂಗಿಪೞುವಿನೊಳ್ ವಿಭು ।
ದೇವಸಮಾನಂ ವಿದಗ್ಧಸಂಬುಜಭವಸಂ ॥

ತಾವಗಮೊ(ಳ್ಗ್ಗಣ) ನಿಧಿಯಿಂ ।
ತೀವಸುಧೆಯೊಳೆನಿಸಿ ವೆಣ್ಣಮಯ್ಯಂ ನೆಗಳ್ದಿಂ ॥
ವೇದದೊಳನುಗತ್ರೆನಿಸುವ ।
ವೇದಿಗಳೊಳ್ನಿಪುಣನಾಗಿ ನೆಗಳ್ದಿಂ ಗಂಭೀ ॥
[ರಾ](ರೋ)ದನ್ವತ್ಪರಿವೇಷ್ಟಿತ ।
ಮೇದಿನಿಯೊಳ್ ವೆಣ್ಣಮಯ್ಯನಕಲಂಕಗುಣಂ ॥
ಸಕಲಜ್ಞಾನವಿನಂದಿತ ।
ನಿಕರಗುಣಾವಿ ಪ್ರಭವಮನೋಭವರೂಪಾ
(ಸುಕರಗುಣಪ್ರಭವನಾಮನೋಭವರೂಪಾ) ॥
ಧಿಕನಂಬುಜಸಂಭವಮೂ ।
ರ್ತಿ[ಪ್ರ]ಕರಂ ಕೌಂಡಿಣ್ಯಗೋತ್ರ ಮಂಗಳಚರಿತಂ ॥
ವಿತತ್ರಯಶಂಗಾ ವಿಪ್ರಂ ।
ಗೆ ತತ್ಪ್ರಿಯಸಂಭವಂ ದ್ವಿಜನ್ಮಂಗೆ ಗುಣಾ ॥
ನ್ವಿತೆ ಸತಿ ಸಜ್ಜನಿಕೆ ಗರುಂ ।
ಧರಿಗೆ ಮಿಗಿಲ್ ಕೌಂಡಿಕಬ್ಬೆಯೆಂಬಳ್ ಪೆಸಱಿಂ ॥
ಆ ಕೌಂಡಿಕಬ್ಬೆಗಂ ಮಹಿ ।
ಮೋಕಗನೆನೆ ನೆಗಳ್ದಿ ವೆಣ್ಣಮಯ್ಯಂಗಮನಂ ॥
ಗಾಕಾರವಾಗಿ ಪುಟ್ಟಿಯೆ
ಲೋಕಸ್ತುತನಾಗಿ ದಾಮಮಯ್ಯಂ ನೆಗಳ್ದಿಂ ॥
ಆತನ ಕುಲವನಿತೆ ಜಗತ್ ।
ಖ್ಯಾತೆ ಗುಣವ್ರಾತೆ ರೂಪಲಾವಣ್ಯರಸೋ ॥
ಪೇತೆ ಗುರು(ಗಿರಿ)ಜಾತೆಗಂ ಮಿಗಿ
ಲೇತಪೊಳಂ ಕುಂದಕಬ್ಬೆಯೆಂಬಳ್ ಪೆಸಱಿಂ ॥
ಎನೆ ನೆಗಳ್ದ ಕುಂಡಕಬ್ಬೆಗ
ಮಗಿಂದ್ಯಗುಣನೆನಿಪ ದಾಮಮಯ್ಯಂಗಂ ಭೂ ॥
ವಿನುತಯಶಂ ದ್ವಿಜವಂದ್ಯಂ
ಮನುಮಾರ್ಗಂ ವೆಣ್ಣಮಯ್ಯನಗ್ರತನೂಜಂ ॥
ಶ್ರೀಕಾಂತಾಪತಿ ಸಕಲಕ
ಲಾಕೋಪಿದನದ್ವಿತೀಯನತುಳಚರಿತ್ರಂ ।
ಲೌಕಿಕವೈದಿಕಶಾಸ್ತ್ರ ನ ।
ನೇಕಾಕ್ಷರನೆನಿಸಿ ನೆಗಳ್ದಿ ಚತುರಸ್ರಗುಣಂ ॥
ಅಂತೆನಿಪ ವೆಣ್ಣಮಯ್ಯನ ।
ಕಾಂತೆ ಗುಣವ್ರಾತೆ ಧರಣಿಸುತೆಗಂ ಮಿಗಿಲೆಂ ॥
ಬಂತೋದವಿದ ಪತಿಭಕ್ತಿಯಿ ।
ನಂತೆಸೆದಳ್ ಪೋಳಕಬ್ಬೆ ಯೆಂಬಳ್ ಪೆಸಱಿಂ ॥

ಆ ಪೋಳಕಬ್ಬಿಗಂ ವಿ ।
ದ್ಯಾಪರಿಣತನೆನಿಪ ವೆಣ್ಣಮಯ್ಯಂಗಂ ವಾಕ್ ।
ಶ್ರೀಪತಿ (ವರ) ಕವಿತತ್ವಗು ।
ಣೋಪೇತಂ ನಾಗವರ್ಮನಗ್ರತನೂಜಂ ॥

* * * *

ಕುಂತೀಪುತ್ರಂ ಪೊಣರ್ದ ರಣದೊಳ್, ಪದ್ಮಜಂ ಶಾಸ್ತ್ರದೊಳ್, ಶ್ರೀ ।
ಕಾಂತಂ ಮತ್ತಂ ಪಿರಿಯ ಸಿರಿಯೊಳ್, ಸಿಂಧುಜಂ ಶೌಚದೊಳ್, ಕ ॥
ರ್ಣಂ ತಪ್ಪಿಲ್ಲೆಂದೆನಿಪ ನುಡಿಯೊಳ್, ವಿಕ್ರಮಾದಿತ್ಯ ನಂತೋ ।
ರಂತಾಂತಾದಾರತೆಯೊಳೆಸೆದಂ ಕಂದಕಂದರ್ಪನೆಂದುಂ ॥

* * * *

ಅರಸಂ ರಕ್ಕಸಗಂಗಂ ।
ಗುರುಗಳ್ ನೆಗಟ್ದಜಿತವೀರಸೇನರ್ ದಯೆಯಿಂ ॥
ಪೊರೆವ ನೃಪನಣ್ಣನೆಸೆ ಮ ।
ಚ್ಚರಿಸುವರಾರ್ ನಾಕೆ ಯಿರುಳೊಳೇಂ ಪುಟ್ಟದನೇ ? ॥

* * * *

ಇಂದುಂಧರನುಮೆಗೆ ಪೇಳ್ದಾ ।
ಛಂದಂ ಪಿಂಗಳನಿನವನಿಗಂ ಪರಪಿದೊಡಾ ॥
ಛಂದೋಂಬುರಾಶಿಯೊಳ್ ಕಲಿ ।
ತಂದದೆ ನಿಜಸತಿಗೆ ನಾಗವರ್ಮಂ ಪೇಳ್ದಂ ॥

* * * *

ವಿಧುಬಿಂಬಾನನೆ ! ಛಂದೋಂ ।
ಬುಧಿಯೆಂಬುದಿದೆನ್ನ ಪೆಸಱ ಛಂದಮಿದಂ ಕೇಳ್ ।
ಬುಧ ಸಮಿತಿಗಱಿಯೆ ಪೇಳ್ದೆಂ
ಮಧುರರಸಪ್ರಚುರವಚನರಚನೆಗಳಿಂದಂ ॥
ಒಗೆದುವು ಮ, ಯ, ರ, ಸ, ತ, ಜ, ಭ, ನ ।
ಲಗಾಕ್ಷರಂ ಕೌಸ್ತುಭಾದಿ ನಾನಾವಿಧವ ।
ಸ್ತುಗಳುಂ ಪಯೋಂಬುರಾಶಿಯೊ
ಳೊಗೆವಂತಿರೆ ಚಂದ್ರವದನೆ ಛಂದೋಂಬುಧಿಯೊಳ್ ॥

* * * *

Colophon :

ಗದ್ಯ ॥ ಇದು ಪರಮೇಶ್ವರಚಾರುಚರಣಾರವಿಂದಮಕರಂದಮಧುಕರಾಯಮಾನ ವಿಬುಧಜನ ಮಾನಸ ಪದ್ಮಿನೀರಾಜಹಂಸವಿರಚಿತಮಪ್ಪ ಛಂದೋಂಬುಧಿಯೊಳ್ ನೆಗಟ್ದ ಸಂಜ್ಞಾಧಿಕಾರಂ ಸಮಾಪ್ತಂ.

ಶ್ರೀಪದಮಂ ಸಮವೃತ್ತನಿ ।
ರೂಪಣಸಮಯದೊಳೆ ತಂದು ಮೊದಲಿಟ್ಟೆನದಂ ॥

ಚಾಪಳಲೋಚನೆ ಬಸ್ವಾ ।
ಳಾಪದೊಳೇಂ ಕೇಳೆ ಕೆಳದಿ ನಿನಗಭ್ಯುದಯಂ ॥

1. ಉಕ್ತಿಯೆಂಬ ಛಂದಸ್ಸಿನೊಳೊಂದಕ್ಕರಂ ಪಾದಮಾಗಿಪುಟ್ಟುವ ೨ ವೃತ್ತಂಗಳೊಳಗೆ—

ಶ್ರೀವೃತ್ತಂ

೧ ಶ್ರೀ ।
ಶಂ ॥
ಕಾಂ ।
ತೇ ॥

ಲ ।
ಲ ॥
ಲ ।
ಲ ॥

* * * *

ವಚನ ॥ ಕಂದಕ್ಕೆ ಲಕ್ಷಣಮಂ ಪೇೞ್ವೆಂ—

ಪುರಬಾಣವಹ್ನಿಶರಗಣ ।
ಮಿರೆನಾಲ್ಕುಂ ಪದದೊಳೋಜೆ ಯುಗ್ಮಗಳೊಳ್ ಪ ॥
ನ್ನೆರಡಿರ್ಪತ್ರೊೞಿಯೆ ಪ ।
ನ್ನೆರಡಿರ್ಪತ್ತಾಗೆ ಮಾತ್ರೆಗಳ್ ಮೃಗನಯನೇ ॥

ವ ॥ ಆರ್ಯೆಗೆ ಲಕ್ಷಣಮಂ ಪೇೞ್ವೆಂ—

ಮೊದಲೊಳ್ ಪನ್ನೆರಡೆರಡನೆ ।
ಯದಱೊಳ್ ಪದಿನೆಂಟು ಮೂಱಱೊಳ್ ಪನ್ನೆರಡಂ ॥
ತ್ಯದ ಪಾದದಲ್ಲಿ ಪದಿನೆ ।
ಯ್ದಿದು ಮಾತ್ರಾನಿಯಮಮಾರ್ಯೆಯೊಳ್ ವನಜಮುಖೀ ॥

* * * *

End :

ಕವಿತೆಗೆ ಗಣಮೆಂಟರೊಳೇ ।
ದಿವಭೂಮಿಚಂದ್ರತೋಯಮಿವು ಶುಭಮಕ್ಕುಂ ॥
ರವಿಶಶಿಪವನವ್ಯೋಮಂ ।
ಕವಿತೆಗೆ ಕರಕಷ್ಟಮೆ . . . . ।

ತ್ರಿದಶರ ನಿಲಯದ ಬೆಸಪಿನ ಗಣತತಿಯುಸೆದಿರೆ ದಿನಕರ ।
ಸಮಿತಿಗಳವಱೊಳೆ ಪುದಿಯೆ ನಿಜಹರನುಂ ॥.
ಸದಮಲಯತಿಗಳೆ ಪಸು ಕರಿಯಹಿಗಜ ಮದಪ . . . . . .
. . . . ಲಿತತಿಲಕಮುಮೆಸಲಿದುಬೆಸಱುರಿಂ ॥

ದುದಧಿಯು ತೆಪೆಗಳ ತೆಱದೊಳಗಘ

ನವಪದವಿಲಚನೆಗಳ ಸರಣಿಗಳ್ದುಯಿಪ ರಸರಸಿಕಕೃತಿಯಿಂ ।

ದಿದನೆಪೆಯುಪೆವುದು ಮನವೊಲಿದನು . . . .

. . . . ಯೊಳಗತಿಚದುರೆಯುಮೆನಿಪಳೆ ಪದುಳದೊಳದುವಂ ॥

ಅಮರಸುಮನಸದಿವಿಜರ ನಿಮಿಷರುಭವರದಿತ್ರಿಸು

ತ್ರಸುರವಿಬುಧನಿಲಯು ಮಿವು . . . .

ತ್ರಿರೆ ಪುರಸುರ ಪಸತತಿಗತಿಯಿರೆ ನೆರದಿರುತಮೆನಿಕುಂ । ಕ್ರಮಗತಿಗಳಕರೆಸೊಳೆ ಯತಿ

ದಶಕದಿಶತಕು ಭದೆಡೆಬರುತಿರೆಲಗವೃಕ ಮಲಯಾಲಲಿತ ಲಹರಿಕೆಯು . . . .

. . . . . . ಬೆಸರಿನೊಳದುವೆ ಸೊಗಯಿಸಿತು ಪದದನಂದುದಿಂ ॥ ರಣೀಜ

ನದ ಸುಧೆಗಳಧಿಕತರ ಮಧುರಮಧುವಿದ ಕೊಸುತ ವಿಕೃತಿಸರಧಿ ವಿಧುವೆನಿಪು ವಿರವ

ಧಿಗೆ ದಿವಿಜಬುಧ . . . . ರವಚನೆ ವಿರಚ

ನೆ ಮಯುದಿಂ । ದವಿುತಗುಣಗಣಚರಿತೆ ದರದಳಿತೆ ಕಮಲಮುಖಿ ಕಲಶಕುಶಯುಗಗಳ

ಡಿಭರೆ ಮಣಿಖಚಿತ ಕರವಳೆಯು ಮನಸಿಜನ ಶರ . . . .

. . . . ಲುರುತರ ಶುಭದಂ ॥

Colophon:

ನಾಗವರ್ಮ [ಂ] (ವಿರಚಿತ ಛಂದೋಂಬುಧಿ) ಸಮಾಪ್ತಂ ಮಂಗಳಮಹಾಶ್ರೀ

ತಪ್ಪಂಪಿರೆವವ ಕಡುಜಡ ।

ತಪ್ಪಿತಂ ಬರೆದನೆಂದು ಬಯ್ಯಲ್ವೇಡಿ(ಂ) ॥

ತಪ್ಪಕ್ಕೆ ಶುದ್ಧಮಪ್ಪಿ ।

ತಪ್ಪಿಲ್ಲದೆ ಪ್ರತಿಸಮಾನವಾಗಿಯು ಬರೆದೆಂ ॥ (?)

(ವಿ.ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಕನ್ನಡ ಭಾಷೆಯಲ್ಲಿ ಛಂದೋ ವಿಷಯವನ್ನು ವಿಶದವಾಗಿ ತಿಳಿಸುವ ಗ್ರಂಥವು ಇದಕ್ಕಿಂತಲೂ ಬೇರೆ ಯಾವುದೂ ಇಲ್ಲ. ಕವಿ ಮೊದಲನೆಯ ನಾಗವರ್ಮ. ಈತನಿಗೆ ನಾಕಿಗ, ನಾಕಿ, ಸಯ್ಯಡಿಯಾತ ಎಂಬ ನಾಮಾಂತರ ವಿದ್ದಂತೆ ತಿಳಿಯುಬರುತ್ತವೆ ಕವಿರಾಜಹಂಸ, ಬುಧಾಬ್ಜವನಕಲಹಂಸ, ಕಂದಕಂದರ್ಪ, ಸೆಗಪ್ಪೆಗೋಜ. ಎಂಬಿವು ಈ ಕವಿಯ ಬಿರುದುಗಳು ಬಾಣಭಟ್ಟನ ಕಾದಂಬರಿಯೆಂಬ ವಚನ ಕಾವ್ಯವನ್ನು ಚಂಪೂರೂಪವಾಗಿ ಕನ್ನಡಿಸಿರುತ್ತಾನೆ. ಜೈನಬ್ರಾಹ್ಮಣ. ವೆಂಗಿನಾಡಿನಲ್ಲಿ ವೆಂಗಿಪಳುವಿನಲ್ಲಿದ್ದ ವೆಣ್ಣಮಯ್ಯನ ಮರಿಮಗ (ಪ್ರಪೌತ್ರ). ತಾಯಿ ಪೋಳಕಬ್ಬೆ. ತಂದೆ ವೆಣ್ಣಮಯ್ಯ. ಕೌಂಡಿನ್ಯಗೋತ್ರದವನು. ಕ್ರಿ.ಶ ೯೭೪ ರಿಂದ ೯೮೪ ರ ವರೆಗೆ ಗಂಗರಸನಾಗಿದ್ದ ರಾಚಮಲ್ಲನೂ, ಈತನ ಮಂತ್ರಿಯಾದ ಚಾವುಂಡರಾಯನೂ, ನಾಗವರ್ಮನೂ ಅಜಿತಸೇನಾಚಾರ್ಯರ ಶಿಷ್ಯರೆಂಬುದಾಗಿ ತಿಳಿಯುಬರುತ್ತದೆ. ಈ ಕವಿಯು ರಾಚಮಲ್ಲನ ತಮ್ಮನಾದ ರಕ್ಕಸಗಂಗ (984—999) ನ ಆಸ್ಥಾನದಲ್ಲಿ ಯುದ್ಧವೀರನೂ ಕವಿಯೂ ಆಗಿದ್ದಂತೆ ತೋರುವುದು. ಮೇಲೆ ಹೇಳಿದ ಮಂತ್ರಿಯಾದ ಚಾವುಂಡರಾಯನು ಈ ಕವಿಯ ಪೋಷಕನೆಂಬುದಾಗಿ ಈ ಗ್ರಂಥದಿಂದ ತಿಳಿಯುಬರುತ್ತದೆ. ಈ ಕಾರಣಗಳಿಂದ ಈತನು ಕ್ರಿ.ಶ. ಸು. ೯೯೦ ರಲ್ಲಿದ್ದಿರಬಹುದೆಂದು ನಿಶ್ಚಯಿಸಬಹುದು. ಮುದ್ರಿತ ಪ್ರತಿಗೂ ಈ ಪ್ರತಿಗೂ ಅನೇಕ ಪಾಠಭೇದಗಳಿವೆ.

No. 24. ಛಂದೋಂಬುಧಿ.
CHANDŌMBUDHI.

Substance, paper. Size, 12½ × 8 inches. Pages, 42. Lines, 20 on a page. Character, Kanarese. Condition, fair. Appearance, old. Mode of writing, good.

Begins on page 1. Written on one side of the paper only. English notes by Mr. C. P Brown are written on the other side of the paper. The other work herein is Karṇāṭaka Śabdamañjari, 24.

Complete, but the pages are!not bound in order.

Same work as the above.

The following note in English apparently by Mr. C. P. Brown is found on fol. 13 *a* of the manuscript.

"The prosody of the Kannaḍa or Karnāṭaka Language. Written in that language by Nāgava ma.

This prosody is merely copied from the Sanskrit system : and the first part is perfectly easy : the present manuscript copied from one in the Mackenzie Library is imperfect and erroneous being transcribed by one who did not know prosody, but I! had no difficulty in making it out."

(ವಿ.ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿದೆ. ಆದರೆ ಅಶುದ್ಧ. ಕಾಗದದ ಒಂದು ಪಕ್ಕದಲ್ಲಿ ಮಾತ್ರವೇ ಬರೆದಿದೆ. ಮತ್ತೊಂದು ಪಕ್ಕದಲ್ಲಿ ಮಿ॥ ಬ್ರೌನ್ ಸಾಹೇಬರು ಇಂಗ್ಲೀಷು ಭಾಷೆಯಲ್ಲಿ ಟಿಪ್ಪಣಿಗಳನ್ನು ಬರೆದಿರುತ್ತಾರೆ. ಪತ್ರಗಳು ಹಿಂದುಮುಂದಾಗಿ ಬೈಡಾಂಗಿದೆ. ೧೩ನೆಯ ಪತ್ರದ ಮೊದಲು ಭಾಗದಲ್ಲಿ ಮಿ॥ ಬ್ರೌನ್ ಸಾಹೇಬರು ಬರೆದಿರುವ ಇಂಗ್ಲೀಷ್ ಭಾಷೆಯ ವಿವರಣೆಯಿದೆ. ಇದು ಹಿಂದೆ ವರ್ಣಿತವಾದ ಗ್ರಂಥವೇ.

No. 25. ಛಂದೋಂಬುಧಿ.
CHANDŌMBUDHI.

Substance, paper. Size, 9½ × 7½ inches. Pages, 51. Lines, 17 on a page Character, Kanarese. Condition, much injured. Appearance, very old. Mode of writing, good.

Almost complete.

Same work as the above.

Begins on page 260. The other works herein are (1) Nal̤acaritre, I (2) Hariścandrarāyanakathe 107 (Sāṅgatya), (3) Sāraṅgadharanacaritre 186 (Yakṣagāna), (4) Gaṇagaḷa granth 305, (5) Śṛṅgāraratnākara 314, (6) Ārūdhechandassu 319, (7) Ragaḷegala lakṣaṇa 323, (8) Ananta chandassu 326 (in telugu), (9) Sankirṇa grantha 327 (Śivasūkṣa-ṣaḍakṣara etc.,), (10) Nānārtha kandapadya 336.

(ವಿ.ವಿ.)—

ಅಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಅತಿಶಿಥಿಲ. ಮೇಲೆ ವರ್ಣಿತವಾಗಿರುವ ಗ್ರಂಥವೇ ಸರಿ. ಇದರಲ್ಲಿ ನಳಚರಿತ್ರೆ (ಷಟ್ಪದಿ), ಹರಿಶ್ಚಂದ್ರನಕಥೆ (ಸಾಂಗತ್ಯ), ಸಾರಂಗಧರನಕಥೆ (ಯಕ್ಷಗಾನ), ಶಿವಸೂಕ್ತ ಷಡಕ್ಷರ ಸ್ತುತಿ, ಶೃಂಗಾರ ರತ್ನಾಕರ ಮುಂತಾದ ಗ್ರಂಥಗಳೂ ಇವೆ.

No. 26. ಛಂದೋಂಬುಧಿ.

CHANDŌMBUDHI.

Substance, palm-leaf. Size, 15 × 1¼ inches. Pages, 38. Lines, 7 on a page. Character, Kanarese. Condition, slightly injured. Appearance, old. Mode of writing, good.

Begins on fol 44 *a*. The other works herein are (1) Viduranīti I*a*, (2) Airāvata 18*a*, (3) Rājanīti 34*a*, (4) Kaḷiṅganīti 64*a*, (5) Sanatsujātanīti 77*a*, (6) Hariharacāritra 89*a*, (7) Śyāmalādaṇḍaka 94*a*, (8) Vibhīṣaṇabuddhi 98*a* and (9) Śakunaśāstra 108*a*.

Complete.

Same work as the above.

(ವಿ.ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿದೆ. ಆದರೆ ತಪ್ಪುಗಳಿಲ್ಲ. ಮೇಲೆ ವರ್ಣಿತವಾಗಿರುವ ಗ್ರಂಥವೇ ಸರಿ. ಈ ಪುಸ್ತಕದಲ್ಲಿ ಐರಾವತ, ವಿದುರನೀತಿ, ರಾಜನೀತಿ, ಕಳಿಂಗನೀತಿ, ಸನತ್ಸುಜಾತನೀತಿ, ಹರಿಹರಚರಿತ್ರ, ಶ್ಯಾಮಲಾದಂಡಕ (ಸಂಸ್ಕೃತದಲ್ಲಿ), ವಿಭೀಷಣಬುದ್ಧಿ, ಶಕುನಶಾಸ್ತ್ರ ಈ ಗ್ರಂಥಗಳೂ ಬರೆದಿವೆ.

No. 27. ಛಂದೋಂಬುಧಿ.

CHANDŌMBUDHI.

Substance, Śrītāla. Size, 10⅛ × 2⅛ inches. Pages, 9. Lines, 11 on a page Character, Kanarese. Condition, injured. Appearance, old. Mode of writing, good and free from mistakes.

Begins on fol 38*a*. The other works herein are (1) Bhāṣābhūṣana, 1*a* (2) Śabdamaṇidarpaṇa, 22*a* (3) Ratnaśāstra 43*a* (in Telugu).

Contains up to the beginning of the Samavṛttaprakaraṇa.

Same work as the above.

(ವಿ.ವಿ).—

ಸಮವೃತ್ತ ಪ್ರಕರಣದ ವರೆಗೆ ಮಾತ್ರವೇ ಇದೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಇದರಲ್ಲಿ ಭಾಷಾಭೂಷಣ, ಶಬ್ದಮಣಿದರ್ಪಣ, ರತ್ನಶಾಸ್ತ್ರ (ತೆಲುಗು) ಈ ಗ್ರಂಥಗಳೂ ಸೇರಿವೆ. ಮುದ್ರಿತ ಗ್ರಂಥಕ್ಕೂ ಈ ಪ್ರತಿಗೂ ಪಾಠಭೇದಗಳಿವೆ.

CLASS.--II. ITIHĀSA AND PURÂṆA.

No. 28. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, 18¼ × 1¼ inches. Pages, 173. Lines, 6 on a page. Character, Kanarese. Condition, injured. Appearance, old. Mode of writing, good.

Contains the Ādiparva.

Complete.

This is the well-known Kanarese rendering of the Sanskrit Mahābhārata. The author Nārāyaṇappa had the title Kumāravyāsa. He was an inhabitant of the village Kōḷivāḍu and dedicated this work to God Vīranārāyaṇa of Gadag. The work is written in the Bhāminiṣaṭpadi metre. Kumāravālmīki (1500 A.D.), Lakṣmakavi (1723 A.D.)- Koniah (1750 A.D.), and Babbūraranga (1760 A.D.) have made mention of this poet in their works. It is stated that this author adorned the court of Prauḍhadēvarāya (1419–1446 A.D) of Vijayanagaram and so it is presumed that this author flourished in the 15th century.

Beginning :

ಶ್ರೀವನಿತೆಯರಸನೆ ! ವಿಮಲರಾ ।
ಜೀವಪೀಠನ ಜನಕ ! ಜಗಕತಿ ।
ಪಾವನನೆ ! ಸನಕಾದಿಸಜ್ಜನನಿಕರದಾತಾರ ! ॥
ರಾವಣಾಸುರಮಥನ ! ಶ್ರವಣಸು ।
ಧಾವಿಸೂತ್ತನಕಥನಕಾರಣ ! ।
ಕಾವ್ರನಾನತಜಗವ ಗದುಗಿನ ವೀರನಾರಯಣ ! ॥

*　　*　　*　　*

ದುರಿತಕುಲಗಿರಿವಜ್ರದಂಡನು, ।
ಧರೆಯು ಜಂಗಮಜೀವಿ, ಕವಿವಾ ।
ರಿರುಹದಿನಮಣಿ ; ನಿಖಿಳಯತಿಪತಿದಿಜವಂದಿತನು, ॥
ತರಳನನು ತನ್ನವನೆನಲು ಪತಿ ।
ಕರಿಸಿಮಗನೆಂದೊಲಿದು ಕೃಪೆಯಿಂ ।
ವರವನಿತ್ತನು ದೇವ ವೇದವ್ಯಾಸಮುನಿರಾಯ ॥
ಹಲಗೆ ಬಳ್ಳಹವ ಹಿಡಿಯುದೊಂದ ।
ಗ್ಗಳಕೆ ; ಪದವಿಟ್ಟಳುಪದಿರದ ।
ಗ್ಗಳಕೆ ; ಪರರೊಡ್ಡವದ ರೀತಿಯ ಹಿಡಿಯುದಗ್ಗಳಕೆ, ॥
ಬಳಸಿ ಬರೆಯಾಲು ಕಂಠಪತ್ರದ ।
ವ್ರಲುಹು ಗೆಡೆದಗ್ಗಳಕೆ, ಯೆಂಬೀ
[ಬಿರುದು] ಬಲುಹು [ಗದುಗಿನ] ಸಲುವ್ರದು ವೀರನಾರಾಯಣನ ಕಿಂಕರಗೆ ॥

ಕೃತಿಯನವಧರಿಸುವುದು ಸುಕವಿಯು ।
ಮತಿಗೆ ಮಂಗಳವೀವುದಧಿಕ ।
ಸ್ತುತಿಯ ನೀವುದು ತಿದ್ದಿ ಮೆಚೆವುದು ಲೇಸ ಸೂಚಿಪುದು ॥

ನುತಗುಣರು ಭಾವಕರು ವರಪಂ ।
ಡಿತರು ಸುಜನರು ಸೂಕ್ತಿಗಾರರು ।
ಮತಿಯನೀವುದು ವೀರನಾರಾಯಣನ ಕಿಂಕರಗೆ ॥

ತಿಣಿಕಿದನು ಫಣಿರಾಯ ರಾಮಾ ।
ಯಣದ ಕವಿಗಳ ಭಾರದಲಿ ತಿಂ ।
ಥಿಣಿಯ ರಘುವರ ಚರಿತೆಯಲಿ ಕಾಲೂ[ರ](ರೆ) ತೆರಪಿಲ್ಲ ॥

ಬಣಗು ಗವಿಗಳ ಲೆಕ್ಕಿಪನೆ ? ಸಾ ।
ಕೆಣಿಸದಿರು ಶುಕರೂಪನಲ್ಲದೆ ।
ಕುಣಿಸಿ ನಗನೇ ? ಕವಿ ಕುಮಾರವ್ಯಾಸನುಳದವರ ॥

*　　*　　*　　*

ಹೇಮಖುರಶೃಂಗಾದಿಭರಣದಿ ।
ಕಾಮಧೇನುಸಹಸ್ರಕಪಿಲೆಯ ।
ಸೋಮಸೂರ್ಯಗ್ರಹಣದಲಿ ಸುರನದಿಯ ತೀರದಲಿ ॥

ಶ್ರೀಮುಕುಂದಾರ್ಪಿತವೆನಿಸಿ ಶತ ।
ಭೂಮಿದೇವರಿಗಿತ್ತ ಫಲವಹು ।
ದೀ ಮಹಾಭಾರತದೊಳೊಂದಕ್ಷರವ ಕೇಳ್ದರಿಗೆ ॥

ಚೋರ ನಿಂದಿಸಿ ಶಶಿಯ ಬೈದಡೆ ।
ಕ್ಷೀರವನು ಕ್ಷಯರೋಗಿ ಹಳದರೆ ।
ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು ॥
ಭಾರತದ ಕಥನಪ್ರಸಂಗವ ।
ಕ್ರೂರಕರ್ಮಿಗಳೆತ್ತ ಬಲ್ಲರು ।
ಘೋರತರಕಾರವವ ಕೆಡಿಸುಗು ಕೇಳ್ಪ ಸಜ್ಜನರ ॥

Colophon:

ಅಂತು ಪೀಠಿಕಾಸಂಧಿ ಸಮಾಪ್ತಂ ॥

ಸೂ ॥—

ರಾಯಜನಮೇಜಯಗೆ ವೈಶಂ ।
ಪಾಯ[ಮುನಿ] (ನನು) ಹೇಳಿದನು (ಮುನಿ) ದ್ವೈ ।
ಪಾಯನಭಿವರ್ಣಿಸಿದ ಭಾರತ(ವರ) ಕಥಾಮೃತವ ॥
ಸೂತನೈತಂದನು ಜಗದ್ವಿ ।
ಖ್ಯಾತ ಶೌನಕಮುಖ್ಯಮುನಿಸಂ ।
ಘಾತಪಾವನನೈಮಿಶಾರಣ್ಯ(ದ) ವರಾಶ್ರಮಕೆ ॥

ಆತನನು ಕಂಡೊದು ತಪಸ್ವಿ ।
ವ್ರಾತ ಕುಶಲಕ್ಷೇಮಮಧುರ ।
ಪ್ರೀತಿವಚನಾಮೃತದಿ ಸಂಭಾವನೆಯ ಮಾಡಿದುದು ॥
ಪರಮ ಪೌರಾಣಿಕ ಶಿರೋಮಣಿ ।
ಬರವಿದೆತ್ತಣದಾಯ್ತು[ಕೌಮ](ಕೌತು) ಕ ।
ವರ ಕಥಾಪೀಯೂಷ ಸಾರ ವಿಶೇಷವೇನುಂ[ಟೊ](ಟು) ॥
ಚರಿತಚರಿತಾಶ್ರಮತಪೋನಿ ।
ಷ್ಠರಿಗೆ ವಿಶ್ರಮ ವೈಭವಾದೃಶ ।
ದರುಶನವು ನಮಗೆಂದು ನುಡಿದರು ರೋಮ ಹರುಷಣಿಯ ॥

* * * *

ಒಂದು ದಿನ ನೂಱಾಱು ಮಾನಿಸ ।
ರೊಂದುಗೆಳೆಯಲಿ ಪುರದ ಹೊಱಗಿಹ ।
ದೊಂದು ಠಾವು ಪ್ರಮಾಣ ಕೋಟಿಯೆನಿಪ್ಪುದದರೊಳಗೆ ॥
ಬಂದು ನಿಂದರು ಕೋಲ ಬಿಸುಟೀ ।
ವೃಂದ ಹತ್ತಿತು ಮರನನಿತ ನೈ ।
ತಂದು ತಂದೆಡೆಯಾ(ಗಬ)ಳಲಿದ ನೋಡಿದನು ಭೀಮ ॥
ಮರನ ಹಿಡಿದಲುಗಿದೊಡೆ ಬಿದ್ದರು ।
ಭರತಕುಲಪಾಲಕರು ನೂರ್ವೈ ।
ವರು ಮಹಾವಾತದಲಿ ತರುಫಲನಿಕರ ಬೀಳ್ವಂತೆ ॥
ಶಿರವೊಡೆದು ಬೆನ್ನೊಡೆದು ಮೊಳಕಾ ।
ಲ್ಮುಱಿದು ಕೈಗಳು ಮುಱಿದು ನೆತ್ತರು ।
ಸುಱಿದು ಧೃತರಾಷ್ಟ್ರಂಗೆ ದೂರಿದರನಿಬರೀ ಹದನ ॥
ದುರುಳನವನೊಡನಾಡಬೇಡೆಂ ।
ದರಸನಿವರನು ಸಂತವಿಟ್ಟನು ।
ಹಿರಿದು ಹೆಚ್ಚಿತು ಭೀಮದುರ್ಯೋಧನರಿಗತಿವೈರ ॥
ಮರಳಿ ತಾವೊಂದಾಗುತೀತನ ।
ಕರೆದು ವಿವಿಧಕ್ರೀಡೆಯಲಿ ವೈ ।
ಮಱತಿಸಿ ಭೀಮನ ಕಟ್ಟಿಹಾಯ್ಕಿದರೊಂದು ಮಡುವಿನಲಿ ॥
ಪಾಶವನು ಹರಿದೆದ್ದು ಬಂದತಿ ।
ರೋಷಿ ಸದೆದನು ಮತ್ತೆ ತಮ್ಮೊಳು ।
ಭಾಷೆ ಯಿಂದೊಂದಾಗಿ ಕೂಡಿದರೊಂದು ದಿವಸದಲಿ ॥
ಆಸಿತಗ ಮೈಮರೆದ ಹೊತ್ತಱಮ ।
ಹಾಸುರದ (ಫಣಿ)ಗಳಲಿ ಕಚ್ಚಿಸಿ ।
ಘಾಸಿಮಾಡಲು ಬದುಕಿ ಬೇಸರನಡಿಗಡಿಗೆ ಭೀಮ ॥

* * * *

ಗುರು ನದೀಸುತ ವಿದುರ ಧೃತರಾ ।
ಷ್ಟ್ರರಿಗೆ ಕೈಮುಗಿದಾಯುಧದ ಪರಿ ।
ಪರಿಯ ಚಿತ್ರಕ್ರಮವ ಸಾಂಗೋಪಾಂಗಕೌಶಲವ ॥

ಕರಿತುರಗದೇರಾಟ ಮೊದಲಾ ।
ಗಿರೆ ಸುಯೋಧನ ರಚಿತವಿದ್ಯಾ ।
ಪರಿಣತಿಗೆ ವೆಗ್ಗಳವಿದೆಸೆ ತೋಱಿಸಿದನಾ ಭೀಮ ॥
ಕೋಲಗುರು ಚಿತ್ರೈಸು ಕುರುಭೂ ।
ಪಾಲ ಸಮ್ಮುಖವಾಗು ಹಿಡಿ ಮಾ ।
ಕೋಲನೆಮ್ಮೊಡನೆನುತ ತಿವಿದನು ಭೀಮ ಕೌರವನ ॥
ಮೇಳವಿಸಿತೆರಡಂಕ ಬಂದುಗೆ ।
ಗೋಲ ಹೊಯ್ಲಾಟದಲಿ ಬಳಕಾ ।
ಭೀಳಗದೆಗಳ ತುಡುಕಿ ತರುಬಿದರಧಿಕರೋಷದಲಿ ॥
ಹೊಯ್ದರೊಡ್ಡಿದರಣೆದು ಮೊನೆಯಲಿ ।
ಹೊಯ್ದೊಡೊಳಸುಳಿಯಿಂದ ಕಳೆದರು ।
ಕಾಯ್ದು ಹೆಣಗಿದರುಪ್ಪರಕೆ ಜಾರಿದರು ಪಡಿತಳಕೆ ॥
ಮೆಯ್ದುಗೆದರಡಹೊಯ್ಲಿನಲಿ ಬಲು ।
ಗಯ್ದುಕಾರರು ಮನದ ಖತಿಗಿದಿ ।
ರೆಯ್ದದೆನೆ ಹೊಯ್ದಾಡಿದರು ಕಲಿ ಭೀಮ ಕೌರವರು ॥
ಎಲೆಲೆ ಹಿಡಿಹಿಡಿ ಭೀಮನನು ತೆಗೆ ।
ಕೆಲಕೆ ದುರ್ಯೋಧನನನಿದು ಮಂ ।
ಗಳದ ಬೆಳಗಿಂಗಳಿನ ಮಱತಿ ಸುಱಿದುದು ಶಿವಾ ! ಎನುತ ॥
ಕಳವಳಿಸಿ ಭೀಷ್ಮಾದಿಗಳು ನೃಪ ।
ತಿಲಕರಿಬ್ಬರ ನಡುವೆ ಹೊಕ್ಕರು ।
ಕುಲಗಿರಿಗಳಂದದಲಿ ಕೃಪಗುರುಸುತರು ವಹಿಲದಲಿ ॥
ತೆಗೆದರೀತನ ನತ್ತಲಾತನ ।
ನುಗಿದರತ್ತಲು ಜನದ ಗಳಗ ।
ರ್ಜುಗಳಗಾಢದ ಗಜಬಜವ ಥಟ್ಟೈಸಿದರಲ್ಲಲ್ಲಿ ॥
ಬೆಗಡು ಬೆಳೆದುದು ಭೀಷ್ಮ ವಿದುರಾ ।
ದಿಗಳ ಮನದಲಿ ಮೇಲೆ ಹಬ್ಬುವ ।
ಹಗೆಗಿದುಪಲಕ್ಷಣವಲಾ ಎಂದುದು ಜನಸ್ತೋಮ ॥

* * * *

ತಂದು ಕಾನನ ಮಧ್ಯದಲಿ ತರು ।
ವೃಂದದಡಿಯೊಳಗಿಳುಹಿ ಬಳಕರ ।
ವಿಂದದೆಲೆಯಲಿ ನೀರ ತಂದೆಱೆದನು ನೃಪಾಲರಿಗೆ ॥
ತಳರ ತರಿದೊಟ್ಟಿದನು ತರುವಿನ ।
ನೆಳಲೊಳಗೆ ವಿಶ್ರಮಿಸಿದರು ತನು ।
ಬಳಲಿಕೆಯು ಭಾರಣೆಯು ಕಡುಜೋಡಿಸಿದ ಜೊಮ್ಮಿನಲಿ ॥
ಝುಳಕೆ ಕಂದಿದ ಮೆಯ್ಯ ; ಬಾಡಿದ ।
ಲಲಿತವದನದ ; ಮಾಸಿ ಕೆದರಿದ ।
ತಲೆನವಿರ ; ತನ್ನೈವರನು ಕಂಡಳಲಿದನು ಭೀಮ ॥

ತಾಯೆ ಫೀದಿಟ ನಾಗನಗರಿಯ ।
ರಾಯನರಸಿಯ ? ನಿನ್ನ ಮಕ್ಕಳು ।
ರಾಯರೆದೆದಲ್ಲಣದ ಭಾರಿಯ ಬಾಹುವಿಕ್ರಮರೆ ? ॥
ಈ ಯವಸ್ಥೆಗೆ ಸೋಮವಂಶದ ।
ರಾಯತನವೇನಹುದು ? ಹೇಳಾ ।
ತಾಯೆ ! ಹೇಳೆನ್ನಾಣೆಯೆಂದಳಲಿದನು ಕಲಿ ಭೀಮ ॥
ಜನನಿಯಂಘ್ರಿಯನೊತ್ತಿ ಯಮನಂ ।
ದನನ ಚರಣವ ಮುರಿದು ಬಳಿಕ ।
ರ್ಜನನ ಯಮಳರ ಪದವನೆಚ್ಚರದಂತೆ ಹಿಡಿಕೆಸುತ ॥
ಅನಿಬರಿವರನು ನೋಡಿ ಪೂರ್ವವ ।
ನೆನೆದು ಬಿರಿಬಿರಿದಳುತ ಘನಕಾ ।
ನನದ ಮಧ್ಯದಲೀತನಿದ್ದನು ಹಿರಿದು ಶೋಕಿಸುತ ॥
ಔಕುವುದು ಬಲುನಿದ್ರೆ ನಿದ್ರೆಯ ।
ನೂಕುವನು ಕಣ್ಣೆವೆಗಳಲಿ ನಸು ।
ತೂಕಡಿಕೆ ತೋರಿದರೆ ಪೈಗೆದರುವನು ಕಯ್ಯೊಳಗೆ ॥
ಸೋಕುವುದು ತನಿಮರವೆ ಮರವೆಯ ।
ನೋಕರಿಸುವುದು ಚಿತ್ತವೃತ್ತಿ ನಿ ।
ರಾಕುಳಾಂತಃಕರಣನಾದನು ಬಳಿಕ ಕಲಿಭೀಮ ॥

* * * *

ಹರಿಧನಂಜಯರೊಂದು ದಿನ ಮೃಗ ।
ಹರಿಣ ಕೇಳಿಕಲಾಪದಲಿ ಸಂ ।
ಚರಿಸಿ ಬನದಲಿ ಬಹಳ ಮಾರ್ಗಶ್ರಮದ ಭಾರದಲಿ ॥
ಬರುತ ನೀರಡಸಿದರು ಕಂಡರು ।
ಸರಸಿಯನು ರಥವಿಳಿದು ನೆಳಲಲಿ ।
ಪರಿಹೃತಶ್ರಮರಾಗೆ ಹರಿ ಹೊಕ್ಕನು ಸರೋವರವ ॥
ಆ ಸಮಯದಲಿ ಬಂದನೊಬ್ಬನು ।
ಭೂಸುರನು ಕಿಡಿಗಳ ತುಷಾರದ ।
ಮೀಸೆಗಡ್ಡದ ಸುಳಿದಲೆಯ ಕಬ್ಬೊರ್ಗೆಯ ಜಾಬುಗಳ ॥
ಭಾಸುರದ ಬಳಲುಡಿಗೆಮುಟ್ಟೆಯ ।
ದೂಸರದ ಮೈದೊಡಿಗೆ ಮೆರೆಯೆ ವಿ ।
ಲಾಸದಲಿ ನಡೆತಂದನರ್ಜುನದೇವನಿದ್ದೆಡೆಗೆ ॥
ಹರಿಸಿ ವೇದಾರ್ಥವನು ಮಿಗೆ ವಿ ।
ಸ್ತರಿಸಿ ಕೊಂಡಾಡಿದನು ವಿಪ್ರರ ।
ಪರಮಯೋಗ್ಯತೆಗಾರು ಸರಿಪರಮೇಷ್ಠಿ ಹೊರಗಾಗಿ ॥
ಬರವಿದೇನೆನಗೇನನುಗ್ರಹ ವಿ ।
ವರಿಸಿರೇ ನಿಮ್ಮಿಷ್ಟವನು ಗೋ ।
ಚರಿಸುವೆನು ನಿಮಗೆಂದು ನುಡಿದನು ಪಾರ್ಥ ವಿನಯದಲಿ ॥

ಪಾರ್ಥ ಕೇಳತಿಗಹನವೇ ಗ್ರಾ ।
ಸಾರ್ಥಿಗಳು ನಾವಾದೆವೆಮ್ಮ ।
ಸ್ವಾರ್ಥಸಿದ್ಧಿಯು ಘಟಿಸು ಸಾಕು ಸಮಗ್ರಫಲವಹುದು ॥
ತೀರ್ಥವೇಕೆನ್ನತಿಪ್ಪುರಲು ಪ ।
ರಾರ್ಥಸಾಧನತನನೆ ಪರಮ ।
ಸ್ವಾರ್ಥವೆಂಬರು ಸುಜನರೆಂದನು ಕಪಟದ್ವಿಜ ನಗುತ ॥
ಕೊಟ್ಟೆನೆಂದನು ಪಾರ್ಥನಿವರೊಡ ।
ಬಟ್ಟರೀ ನುಡಿಗೇಳಿ ದನುಜಘ ।
ರಟ್ಟ ಬಂದನು ಹದನವರಿದನು ಹವ್ಯವಾಹನನ ॥
ಕೊಟ್ಟುದೇನು ಕಿರೀಟಿ ! ಯಿವರೇ ।
ಮುಟ್ಟಿದರೆ ಮುನಿವವರಲೀ ಸೀ ।
ಕೊಟ್ಟುದುಣಬಡಿಸುವುದು ಭಾರವಿದೆಂದನಸುರಾರಿ ॥
ಮುಖರನಾದ್ಯೆ ಪಾರ್ಥ ! ಬರ್ಹಿ ।
ರ್ಮುಖರ ಬಾಣಸದಾತನೀತನು ।
ಸುಖವ ಹೇಳ್ಳೈ ತಂದೆ ಖಾಂಡವವನದ ನಿರ್ದಹನ ॥
ನಿಖಿಳನಿರ್ಜರಬಲದೊಡನೆ ಶತ ।
ಮುಖನೊಡನೆ ವಿಗ್ರಹವಲಾ ಸ ।
ಮ್ಮುಖಕೆ ಬಂದುದು ಭಂಗವೆಂದನು ನೆಗುತ ಮುರವೈರಿ ॥

End :

ಖಗ ಚತುಷ್ಟಯು ಮಯಸಹಿತ ವುರಿ ।
ಯುಗುಳಿಸಿದನು ಸಮಸ್ತಭೂತಾ ।
ಳಿಗಳನಾಹುತಿಗೊಂಡನಗ್ನಿ ಧನಂಜಯಾಜ್ಞೆಯಲಿ ॥
ಗಗನದಿಂದಿಳಿತಂದು ಸುರಪತಿ ।
ಮಗನಮನ್ನಿಸಿ ಕೊಟ್ಟನಗ್ಗದ ।
ಗಗನಮಣಿಗೆಣೆಯೆನಿಪ ಮಕುಟವನೊಲಿದು ಪಾರ್ಥಂಗೆ ॥
ಹರಿಗೆ ವಂದಿಸಿ ಮಗನನೊಲಿದಾ ।
ದರಿಸಿ ಕಳುಹಿದನಿಂದ್ರಸಿತ್ತಲು
ಭರದಿನಿವರೈತಂದರಿಂದ್ರಪ್ರಸ್ಥಪುರವರಕೆ ॥
ಧರಣಿಪತಿಗಾ ಖಾಂಡವನ ದ ।
ಳ್ಳುರಿಯ ಹೋಮದ ಹೊಸಕಥೆಯ ವಿ ।
ಸ್ತರಿಸಿ ಹೇಳದನಸುರರಿಪು ಭೀಮಾದಿಗಳು ಕೆಲಿಯೆ ।
ಧಾರುಣೀಶ್ವರರೈವರನು ಸುಕು ।
ಮಾರವರ್ಗವನಾ ಸುಭದ್ರಾ ।
ನಾರಿಯನು ಪಾಂಚಾಲಿಯನು ತತ್ಸಕಲಬಾಂಧವರ ॥
ಸೂರಿಗಳ ಸಚಿವಾದಿನೃಪಪರಿ ।
ವಾರವನು ಪತಿಕರಿಸಿ ಬಂದನು ।
ದ್ವಾರಕೆಗೆ ಹರುಷದಲಿ ಗಮಿಸಿದ ವೀರನಾರಯಣ ॥

Colophon:

ಇಂತು ಇಪ್ಪತ್ತನೆಯ ಸಂಧಿ. ಇತಿಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧುಪಾನಪ್ರಪುಷ್ಪವಚಷ್ಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕಭಾರತಕಥಾಮಂಜರಿಯೊಳ್ ಆದಿಪರ್ವಂ ಸಮಾಪ್ತಂ ॥

(ವಿ-ವಿ.)—

ಆದಿಪರ್ವ ಸಮಗ್ರವಾಗಿದೆ. ಬರವಣಿಗೆ ಶ್ಲಾಘ್ಯವಾದುದು. ತಪ್ಪುಗಳೂ ಇವೆ. ಗ್ರಂಥವು ಶಿಥಿಲವಾಗಿದೆ. ಮುದ್ರಿತಪ್ರತಿಗೂ ಈ ಪ್ರತಿಗೂ ಅಲ್ಲಲ್ಲಿ ಪಾಠಭೇದಗಳಿವೆ. ಅಲ್ಲಲ್ಲಿ ಹೆಚ್ಚು ಪದ್ಯಗಳೂ ಇವೆ. ಇದನ್ನು ಬರೆದ ಕವಿಯು ಕೋಳಿವಾಡು ಗ್ರಾಮ ನಿವಾಸಿಯಾಗಿದ್ದ ನಾರಾಯಣಪ್ಪನೆಂಬ ಬ್ರಾಹ್ಮಣನು. ಈತನಿಗೆ "ಕುಮಾರವ್ಯಾಸ" ನೆಂಬ ಬಿರಿದು ಇದ್ದಿತು. ಕವಿಯು ತನ್ನ ಗ್ರಂಥವನ್ನು ಗದುಗಿನ ವೀರನಾರಾಯಣಸ್ವಾಮಿಗೆ ಅಂಕಿತವಾಗಿ ಸಮರ್ಪಿಸಿರುತ್ತಾನೆ. ಕ್ರಿ.ಶ. ೧೫೦೦ ರಲ್ಲಿದ್ದ ಕುಮಾರವಾಲ್ಮೀಕಿಯೂ, ಕ್ರಿ.ಶ. ೧೫೫೦ ರಲ್ಲಿದ್ದ ಲಕ್ಷ್ಮೀಶ ಕವಿಯೂ ೧೫೫೦ ರಲ್ಲಿದ್ದ ಕೋನಯ್ಯನೂ, ೧೬೫೦ ರಲ್ಲಿದ್ದ ಚಬ್ಬೂರರಂಗನೂ ಈ ಕವಿಯನ್ನು ತಮ್ಮ ಗ್ರಂಥಗಳಲ್ಲಿ ಹೊಗಳಿರುವುದರಿಂದ ೧೫೦೦ ಕ್ಕಿಂತಲೂ ಪೂರ್ವದಲ್ಲಿದ್ದವನೆಂದು ಸ್ಪಷ್ಟವಾಗುತ್ತಿದೆ. ಕ್ರಿ.ಶ. ೧೪೧೯ ರಿಂದ ೧೪೪೬ ರ ವರೆಗೆ ವಿಜಯನಗರದ ಸಿಂಹಾಸನಾರೂಢನಾಗಿದ್ದ ಪ್ರೌಢದೇವನ ಆಸ್ಥಾನದಲ್ಲಿ ಈತನು ಕವಿಯಾಗಿದ್ದಂತೆಯೂ, ಆತನ ಅಪ್ಪಣೆಯಮೇರೆಗೆ ಈ ಗ್ರಂಥವನ್ನು ಬರೆದಂತೆಯೂ ಕೆಲವು ಶೈವಗ್ರಂಥಗಳಿಂದ ತಿಳಿಯಬರುವ ಕಾರಣ ಈತನು ೧೫ ನೆಯ ಶತಮಾನದ ಮಧ್ಯಭಾಗದಲ್ಲಿದ್ದವನೆಂಬುದಾಗಿ ತಿಳಿಯಬರುತ್ತಿದೆ. ಈ ಕವಿಯು ಮಹಾಭಾರತದಲ್ಲಿ ಮೊದಲಿನ ಹತ್ತು ಪರ್ವಗಳನ್ನು ಮಾತ್ರವೇ ಬರೆದಿರುವುದಾಗಿ ಪ್ರತೀತಿಯಿದೆ.

No. 29. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, 18¾ × 1¼ inches. Pages, 522. Lines, 7 on a page. Character, Kanarese. Condition, much injured. Appearance very old. Mode of writing, good but not free from mistakes.

Contains the Ādiparva complete.

Same work as the above ; but this MS. contains 41 Adhyāyās, whereas the other MSS. contain only 20 Adhyāyās in the Ādiparva. In the printed edition published by the Government Oriental Library, Mysore, there are 37 Adhyāyās The printed editions now available in Bangalore and Mangalore contain only 20 Adhyāyās.

The transcription of this manuscript was begun on Sunday, the 1st day of the bright fortnight of the lunar month Mārgaśira and was completed on Sunday, the 7th day of the dark fortnight of the lunar month Phālguna in the year saka year Paridhāvi 1654, corresponding to 1732 A.D.

Name of the scribe—Gōvindayya, son of Nāraṇappa Sānubhōg i.e. Karnam of Badanehāḷu, who copied from a MS. of Narasingarāya son of Hireya Keñcappa of Kanakagiri.

Beginning:

ಶ್ರೀವನಿತೆಯುರಸನೆ ! ವಿಮಲರಾ ।
ಜೀವಪೀಠನಪಿತನೆ ! ಜಗಕತಿ ।
ಪಾವನನೆ ಸನಕಾದಿಸಜ್ಜನನಿಕರದಾತಾರ ! ॥
ರಾವಣಾಸುರಮಥನ ! ಶ್ರವಣಸು ।
ಧಾವಿನೂತನ ಕಥನಕಾ[ರು](ರ)ಣ ! ।
ಕಾ[ವ](ಪು) ದಾನತ ಜನವ ಗದುಗಿನ ವೀರನಾರಯಣ ! ॥

* * * *

ಸಕಲಲೋಕಾಧಾರನೀತನು ।
ನಿಖಿಳರಕ್ಷಕ (. .)ಸು ಈತನು ।
ಸುಕವಿಜನಸುರಧೇನುವೀತನು ಶಕಟಭಂಜಕನು ॥
ಅಕುಟಜನಸಂಹಾರನೀತನು ।
ಪ್ರಕಟತಾರವಿಕೋಟಿತೇಜನು ।
ಭ[ಕ್ತ](ಕುತ)ಜನಪಾಲಕನು [ಆ] (ವಾ) ಗುರುಮಂತ್ರಕೋಟೀಶ ॥
ಅಂದು ಮಂದರಗಿರಿಯ ನೆತ್ತಿಯು ।
[ಛಂ](ಚಂ)ದದಲಿ ಗೋಕುಲವ ರಕ್ಷಿಸಿ ।
ತಂದೆ ಸಂಧಿಪದಂ ತನ್ನನು ತ್ರಿಜಗ ಬೆರಗಾಗೆ ॥ ?
ಇಂದಿರಾಪತಿ ರಕ್ಷಿಸ್ಯೆ ಗೋ
ವಿಂದ ರಕ್ಷಿಸು ಭಕ್ತಜನರನು ।
ತಂದೆ ಸಲಹೈ ಮಂತ್ರಕೊಟದ ದೇ(ವ) ಮುನಿರಾಯ ॥
ನಿಮ್ಮ ರೋಮದೊಳೀಜಗಂಗಳು ।
ವ್ರನ್ನತೋನ್ನತನಂತವಿಷ್ಟವು ।
ಚರ್ಮಧರಸಖ ! ನಿಮ್ಮ ಮಹಿಮೆಯ ಹೊಗ[ಳ](ಳೆ) ಜಗವರಿದು ॥
ಕರ್ಮ ಹರಿವುದು ದುರಿತ ಯೊತ್ರನಿಂದ ಅ । ?
ಗವ್ಯಗೋಚರ ನಿತ ವಿಶ್ವತೇಜೊಬೊಂ । ?
ನಮ್ಮ ನೀತನು ದಿವ್ಯಮುನಿ ಶ್ರೀಪಾದದೊಲ್ಲಭನು ॥

* * * *

ಯುಕ್ತಿಯಿಲ್ಲದ ಕಾರ್ಯ ; ಸಿಜಪತಿ ।
ಭಕ್ತಿಯಿಲ್ಲದ ಕಾಂತೆ ; . . ರ್ವ ಪಿ ।
ಮುಕ್ತನಲ್ಲದ ಮುನಿಪ ; ಸಜ್ಜನರಿಲ್ಲದಾಸ್ಥಾನ ; ॥
ಭಕ್ತಿಯಿಲ್ಲದ ಸಚಿವ ; ಸದ್ಗುಣ ।
ಯುಕ್ತನಲ್ಲದ ಮಿತ್ರ ; ವಚನ ದು ।
ರೋಕ್ತಿಯಿಲ್ಲದ ಕಾವ್ಯರಚನೆ ; ನಿರರ್ಥ ಪವನಿಯುಲಿ ॥

ಬಿಡದೆ [ಅ](ಯ)ನುದಿನ ಹರಿಯು ನೆನೆವಗೆ ।
ಬಡತನವು ಹಿಂಗುವುದು [ಆ] ಮಾತನ ।
ನಡವಳಿಯು ಹೆಚ್ಚುವುದು ಸತ್ವದ ಕಡಲೊಳಿರುತಿಹನು ॥
ನುಡಿದುದೇ ಪಾವನವು ಆತನು ।
ನಡೆದುದದುವೆ ಸುತೀರ್ಥ [ಆ](ವಾ)ತನ ।
ವಡ . . ಳಿಯುಲುತಾ ಶ್ರೀ ವೈಕುಂಠವಾಗಿಹುದು ।
ಭಾರತಾಖ್ಯಾಯನವ ಮಾಡುವ ।
ಸಾರ ಹೃದಯರುಗಳಿಗೆ [ಸತ್ಕೃತ] (ಸುಕೃತವು) ।
ಸೇರುವುದು ವಿಶ್ವಾಸವುಳ್ಳೊಡೆ ಸಕಲಪಾತಕವು ॥
ತೀರುವದಲೀ ಪಾದವೊಂದರ ।
ಭಾರಣೆಗೆ ವಿಶ್ವಾಸವಾಗಿ ವಿ ।
ಚಾರಿಸಲು ನೀಕೇಳು ಜನಮೇಜಯ ಮಹೀಪಾಲ ! ॥
ಕಾಲದೊಳಗೆ . . . . . ವಿದ್ಯಾ ।
[ಜ] ಜಾಲದೊಳಗೆ . . . . . ಸತ್ವಗಜವೈ ।
ಹಾಳಿಯೊಳು ಮಹಶ್ರೇಣಿಯೊಳಗೆ ಸರಸ್ವತೀ ದೇವಿ ॥
ಬಾಳನೇತ್ರನೆ ದೈವದೊಳು ಬಿ ।
ಲ್ಲಾಳನೊಳು ಮನುಮಥನು ಧನದಲಿ ।
ಹೇಳವೀನಭಿಮಾನವೇನನವರತ ಕೇಳೆಂದ ॥

Colophon:

ಇತಿ ಶ್ರೀ ಮಹಾಭಾರತೇ ಶತಸಹಸ್ರಸಂಹಿತಾಯಾಂ ಆದಿಪರ್ವಣಿ ಸಾಂದಿ ಸಮಾಪ್ತಂ. ಸೂ ॥

ರಾಯ ಜನಮೇಜಯಗೆ ವೈಶಂ ।
ಪಾಯ [ಮುನಿ](ನನು) ಹೇಳಿದನು ಮುನಿದ್ವೈ ।
ಪಾಯನನು ವರ್ಣಿಸಿದ ಭಾ(ರತ ಕಥಾಮೃತವ) ॥
ಸೂತನೈತಂದನು ಜಗದ್ವಿ ।
ಖ್ಯಾತಶೌನಕಮುಖ್ಯಮುನಿಸಂ ।
ಘಾತಪಾವನನೈಮಿಶಾರಣ್ಯದ ವರಾಶ್ರಮಕೆ ॥
ಈತನನು ಕಂಡುದು ತಪ[ಸಿ](ಸ್ವಿ) ।
ವ್ರಾತ ಕುಶಲಕ್ಷೇಮಮಧುರ ।
ಪ್ರೀತಿವಚನಾಮೃತದಿ ಸಂಭಾವನೆಯು ಮಾಡಿ[ದರು](ದುದು) ॥

* * * *

ಬಡತನವ ನನುಕರಿಸಿ ಬೋಧನ ।
ದೆಡೆಯು ಹೊಕ್ಕರು ಭೀಮಸೇನನು ।
ಗಡಣದಿಂದವೆ ಕೇರಿಕೇರಿಯು ನಡುವೆ ಬರುತಿರಲು ॥
ಪೊಡವಿಪತಿಗದು ವಿಧಿಯಯೆಂಬುದು ।
ಕಡುವಿರೋಧವೆ ಯಿದಕೆ ತಾನೀ ।
ಪೊಡಲ ಭರಿತಕೆ ದೇಹಿಯನ್ನೆನು ಬಿಡೆನು ಧರ್ಮವನು ॥

ಕಾಲತಾವಿಪರೀತವಾದರೆ ।
ಮೇಲೆತಾ ವರ್ಣಾಶ್ರಮಂಗಳ್ ।
ಕೇಳದಿಟಗೊಂಡವರು ಬೀಳುವ ನರಕ ತನಗಹುದು ॥

ಚಾಳಸಿದ ವರ್ಣಾಶ್ರಮಂಗಳ ।
ಲೋಲಧರ್ಮವನೆನಲು ಭೀಮನು ।
ಪಾಲಿಸಿದ ಕುಲಫಲದ ಭಿಕ್ಷಾವೃತ್ತಿಯೂಟದಲಿ ॥
ಹೊಳಲೊಳಗೆ ಝುಂಕಾರಘೋಷದಿ । ?
ಮಲೆತುಬೇಡುವೆ ತಾನು ಭಿಕ್ಷವ ।
ಬಳಿಕ ತನಗೇನಾ[ದುದಾ](ದೊಡಾ)ಗಲಿ ಯನುತ ಬರುತಿರ್ದ ॥
ಜಲರುಹಾಕ್ಷನ ನಾಮಕೀರ್ತನೆ ।
ಯೊಲಿದು ಪಾಡುತ ಭೀಮ ಸಹಿತೀ ।
ಯಿಳೆಯ ರಾಯರಿಗಾ[ಯಿತು](ಯ್ತು) [ಬಡಿ॰] (ಬೇಡಿಕೆ) ವಿಪ್ರನೋವರಿ
ಯ ॥

ಬಳಿಕ ವಿಪ್ರನ ಮನೆಯೊಳಾಯಿತು ।
ಹೊಳಲೊಳಗೆ ತಾವಲ್ಲಿ ಕುಳ್ಳಿರ್ದ । ? (ಕೊಡುತೆ)
ಬಳಲಿಕೆಯ ಪರಿಹರಿಸಿಕೊಂಡರು ವಿಪ್ರನಿಳೆಯದಲಿ ॥
ಜಲಪನಂಗೀಕರಿಸಿ ಪಾಂಡವ ।
ತಿಲಕರಿಗೆ ಬಂದಾವಿಪತ್ತನು ।
ವೊಲಿದು ಕೇಳ್ಳೈ ರಾಯ ಜನಮೇಜಯಮಹೀಪಾಲ ॥
ಇಳೆಯರಾಯರಿಗೊಬ್ಬ ಭೂಸುರ ।
ಬಳಗದಿರಿಕನ ಮನೆಯ ಗುಡಿಸಿಲ ।
ಹೊಳಲು ಬೀಡಿಕೆಯಾಯ್ತು ಮಿಕ್ಕಿನ ಮನುಜರಳವೇನು ॥
ಬಳಲಿಕೆಯ ಪರಿಹರಿಸಿ ಭಿಕ್ಷವ ।
ತರಲು [ಬಿ .] ಯತ್ನವ ಮಾಡಿ ಪಾಂಡವ । ?
ತೊಳೆದು ಹೊರುವೊಡೆಯಾಗಲೈವರು ಬ್ರಹ್ಮಪುರಿಯೊಳಗೇ ॥

* * * *

ನರರು ತಾವ್ ದೇಸಿಗರು ಕಾರ್ಯ್ಯಾ ।
ತುರರು ನಾವೆನಲರ್ಜುನನನುಪ ।
ಚರಿಸಿ ವಿನಯಗುಣಾಭಿಮುಖದಲಿ ನಗುತಾ ಬೆಸಗೊಳಲಿ ॥
ಧರೆಯಲುಂಟೇ ಪಾಂಡುಸುತರೆಂ ।
ಬರಸುಗಳ ನೀವ್ ಕೇಳಿ ಬಲ್ಲಿರೆ ।
ನಿರುತ ನಾವವರೆಂದು ನುಡಿದನು ನಗುತ ಕಲಿ ಪಾರ್ಥ ॥
ಶಿವಶಿವಾದೊಡೆ ಯಮ ಪುರಂದರ ।
ಪವನ ನಶ್ವಿನಿ ದೇವರಿಗೆ ಸಂ ।
ಭವಿಸಿದವರ್ಕ್ಕೈ ನೀವೆಮಗೆ ಸಂಭಾವನೀಯರಲೆ ॥

ಇವೆ ಸಹಸ್ರತುರಂಗದಿವ್ಯಾ ।
ಸ್ತ್ರವಿವಸನಘಾರ್ಘ್ಯಭರಣರತ್ನ ।
ಪ್ರವರವಿವೆ ಕಾರುಣ್ಯದಲಿ ಕೈಕೊಂಬುದಿವನೆಂದ ॥

ಬಂದವೆಮಗಿವು ನಿಮ್ಮ ನಾವ್ ಬೇ ।
ರೆಂದು ಕಾಣೆವು ಪರಮಬಾಂಧವ ।
ರಿಂದು ಮೊದಲಾಗೆಮಗೆ ನೀವೇ ಮೌಲ್ಯಧನವೆನಲು ॥

ಎಂದ ಬಳಿಕರ್ಜುನಗೆ ನಿಮಗೇ ।
ಕೆಂದು ಭೂಸುರವೇಷವೇನೆನೆ ।
ಯೆಂದ ಪಾರ್ಥನು ತಮ್ಮ ನಿಜಾಭಿಪ್ರಾಯಸಂಗತಿಯ ॥

ಅಂದು ನಿಜವನು ಹೇಳಿ ರಾಯರ ।
ವೃಂದವನು ನೋಡುವೆವು ದ್ರುಪದನ ।
ನಂದನೆಯ ವೈವಾಹರಚನೆಯೊಳಾ ಸ್ವಯಂವರವ ॥
ಇಂದು ನೋಡುವೆನೆಂದು ಭೂಸುರ ।
ರಂದದಲಿ ತಾವ್ ನಟಿಸಿದೆವು ಕೇ ।
ಳೆಂದು ಗಂಧರ್ವಂಗೆ ಹೇಳಿದ ಪಾರ್ಥ ಹರುಷದಲಿ ॥
ಇವು ಮದೀಯ ಸಮಸ್ತ ವಸ್ತು ನಿಮ್ಮಯ । ?
ಭವನದೊಳಗಿರಲೊಂದು ಸಮಯದೊ ।
ಳವನು ತರಿಸುವೆವೆಂದು ಬಳಿಕಂಗಾರವರ್ಮನಲಿ ॥
ಇವರು ವಿನಯವಮಾಡಿ ಗಮನೋ ।
ತ್ಸವದೊಳಿರೆ ಗಂಧರ್ವ ನಸುನಗು ।
ತಿವರಿಗೆಂದನು ಧರ್ಮಶಾಸ್ತ್ರದ ಸಾರಸಂಗತಿಯ ॥
ಮುನಿಯಲಾಗದು ಪಾರ್ಥ ! ನಿನ್ನಯ ।
ಘನತರದ ವಿಕ್ರಮಕೆ ದಿವಿಜರು ।
ದನುಜಭುಜಗರು ನೆರೆಯರುಳಿದೀ ನರರ ಪಾಡೇನು ? ॥
ಅನುಪಮಾನಕ್ಷತ್ರತೇಜಕೆ ।
ವಿನುತವಿಮಲಬ್ರಹ್ಮತೇಜೋ ।
ಘನಸಮೀರ ಸಹಾಯನಾಗಲು ಚೋದ್ಯವೇನೆಂದ ॥
ಅರಸ ! ನಿಮ್ಮಯ ಪೂರ್ವದಲಿ ಸಂ ।
ವರಣನೆಂಬನು ಸೂರ್ಯಪುತ್ರಿಗೆ ।
ಮರುಳುಗೊಂಡನು ಮರೆದು ಕಳೆದನು ರಾಜವೈಭವವ
ಸರಸಿರುಹಸಖನಾತ್ಮಜೆಯು ವರ ।
ಸರಸಿಯಲಿ ಜಲಕ್ರೀಡೆಯಾಡಲು ।
ಧರಣಿಪತಿ ಕಂಡಳಲಿ ಕಾಮದೆ ವಿಕಳಗೊಳುತಿರಲು
ನಿರುತ ಪಾರ್ಥಿವತೇಜದಲಿ ಗೋ ।
ಚರಿಸಿತೈ ಬೆರದುದು ವಿವಾಹೋ ।
ತ್ಕರುಷವಾಯಿತು ವರವಸಿಷ್ಠನ ಬ್ರಹ್ಮತೇಜದಲಿ ॥

ದರಣಿಸುರರಿಂಗಿದಿರೆ ಸ್ವರ್ಗದ ।
ಸುರರು ನರರುಗಳೆಂದು ಭೂಸುರ ।
ವರಕಥೆಯು ವಿಸ್ತರಿಸಿ ಹೇಳದ ಪಾರ್ಥಗೋಂವಿನಲಿ ॥
ಆ ವಸಿಷ್ಠನ ಕೌಶಿಕನ ಯು ।
ದ್ಧಾವಲಂಬವನೇನ ಹೇಳುವೆ ।
ದೇವಕುಲವಂಜುವುದು ವಿಶ್ವಾಮಿತ್ರನುಬ್ಬಟೆಗೆ ॥
ಆ ವಿವಿಧಮಂತ್ರಾಸ್ತ್ರವನು ಶತ ।
ಸಾವಿರವನಾ ಬ್ರಹ್ಮದಂಡದ ।
ಡಾವರದಲೇ ಗೆಲಿದನೊಬ್ಬ ವಸಿಷ್ಠಮುನಿಯಂದ ॥

* * *

ಅವನಿಪತಿ ! ಕೇಳತ್ತಲೀ ಪಾ ।
ರ್ಥಿವರ ಪರಿಹಾಸವನು ಕಾಂತಾ ।
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ॥
ವಿವಿಧ ಕಟುಮಧುರೋಕ್ತಿವಿನ್ಯಾ ।
ಸವನು ಕೇಳುತ ಮುಗುಳುನಗೆಯಲಿ ।
ನವಮದದ್ವಿಪದಂತೆ ಗರುವಾಯಿಯಲಿ ನಡೆತಂದ ॥
ಇವನು ಗತಿ ಮುಖಚೇಷ್ಟೆ ಭಾವೋ ।
ತ್ಸವವಿಳಾಸವುಪೇಕ್ಷೆ ಭರದಂ ।
ಘವಣೆ ಗರುವಿಕೆ ಗಮನ ಭಾವದ ಭೀತಿಭುಲ್ಲವಣೆ ॥
ಇವನ ವಿಮಳಕ್ಷಾತ್ರವಿಕ್ರಮ ।
ವಿವರ ಕೊಂಡೆಯತನವಿವೇ ಸಾ ।
ಕಿವನು ಘಾಟದ ವೀರನೆಂದರು ಧೀರನರ್ಜುನನ ॥
ಬರುತ ಭೀಷ್ಮದ್ರೋಣ ಕೃಪರಿಂ ।
ಗೆರಗಿದನು ಮನದೊಳಗೆ ಯಾದವ ।
ರರಸಹಂತಿಯ ಹರಿಯನಭಿವಂದಿಸಿದನಕ್ಷಿಯಲಿ ॥
ಸುರಪತಿಗೆ ಗುಹಗಣಪದಿಕ್ಪಾ ।
ಲರಿಗೆ ರುದ್ರಾದಿತ್ಯವಸುಮು ।
ಖ್ಯರಿಗೆ ಮಣಿದನು ಬಂದನಗ್ಗದ ಚಾಪವಿದ್ದೆಡೆಗೆ ॥
ಮೊದಲಲಂಬುಜಭವನನಾಮ ।
ಧ್ಯದಲಿ ಮಧುಸೂದನನನಾಬಿಲು ।
ತುದಿಯಲಾವಹಿಸಿದ್ದನಗ್ಗದ ನೀಲಲೋಹಿತನ ॥
ಇದು ಮಹಾ ಭೂಮಿಪರ ಬಿಂಕವ ।
ನೊಡೆದ ಧನುವೇ ಘೋತ್ತುರೆನುತೆ ।
ತ್ತಿದನು ಬಾಗೊತ್ತಿದನು ಕೊರಳಲಿ ತೊಡಿಸಿದನು ತಿರುವ ॥
ಹೊಯ್ದು ತಿರುವನು ಸೆಳೆದು ಕಿವಿವರೆ ।
ಗೊಯ್ದನಿದು ಹದವಿಲ್ಲೆಲಾ ಬಿಲು ।
ಹೊಯ್ದುದಕಟಾ ! ಬರಿದೆ ಹೆದರಿತು ಮಾಗಧಾದಿಗಳು ॥

ಮೆಯ್ದುಗದರಿದರೊಳಗೆ ಹೆಸರೆನೆ ।
ಗೆಯ್ದಬೇಕಿನ್ನೈಸಲೇ ಎಂ ।
ದೈಯ್ದು ಬಾಣವಕೊಂಡು ಯಂತ್ರಹೊಳಹ ನೀಕ್ಷಿಸಿದ ॥

ಬಾಗಿ ನೋಡಿದ ತೈಲಕುಂಭವ ।
ನಾಗ ಹೊಳೆದುದು ಮತ್ಸ್ಯಲೋಚನ ।
ಲಾಗಿ ನನುವನು ಕಂಡು ಹರುಷಿಸಿ ತಿರುವ ತೊಡರಿಸಿದ ॥

ತೂಗಿ ಕಿವಿವರೆಗೊಯ್ದು ಯಂತ್ರವ ।
ತಾಗಿಸಿದನಂಬಿನಲಿ ಪಾರ್ಥನ ।
ಲಾಗುವೇಗವನಾರು ಬಲ್ಲರು ? ಚಾಪತಂತ್ರದಲಿ ॥

ಆಗ ಸೂತ್ರದ ಧಾರೆಯಂತ್ರದ ।
ಜಾಗ ಕೆಡಹಿದರಾಗ ಭೂಪರು ।
ಜಾಗು ತ್ರಿಪುರದ ಮಾರಿಯೆಂದರು ತಮ್ಮ ಮನದೊಳಗೆ ॥

ಜಾಗು ಧಣಿಧಣಿ ! ಸ್ತೋತ್ರ ! ಕಾರ್ಮುಕ ।
ಯೋಗಸಿದ್ಧ ಮುರಾರಿ ಕೋದಂ ।
ಡಾಗಮತ್ರಿಪುರಾರಿ ಎಂದುದು ಸಕಲ ಜನನಿಕರ ॥

* * *

ಲಲಿತ ಮದಿರಾಪಾಂಗದಲಿ ಮು ।
ಕ್ಕುಳಿಸಿ ದಣಿಯವು ಕಂಗಳುಬ್ಬುವ ।
ಪುಳಕಜಲದಲಿ ಮೂಡಿಮುಳುಗದು ಮೆಯ್ ನಿತಂಬಿನಿಯ ॥

ತಳತಲಜ್ಜೆಯ ಭರಕೆ ಕುಸಿದು ।
ಚ್ಚಳಸಿತಂತಃಕರಣವಾಂಗಿಕ ।
ಲುಳಿತಸಾತ್ವಿಕಭಾವವೇಢೈಸಿದುದು ಮಾನಿನಿಯ ॥

ಧರಣಿಪತಿ ! ಕೇಳ್ ಬಹಳ ಲಜ್ಜಾ ।
ಭರದ ಭಯದಲಿ ಬೆಮರಿಡುತ ಕುಚ ।
ಭರದಿ ಮೇಲುದ ಜಾರೆ ಜೋಡಿಸಿ ನಿಮಿರ್ದು ನಡುನಡುಗಿ ॥

ತರುಣಿ ನಿಜತನುಪರಿಮಳದಿ ಮಿಗೆ ।
ಹೊರೆದ ಹೂವಿನದಂಡೆಯನು ನೃಪ ।
ವರನ ಕೊರಳಲಿ ಹಾಕಿದಳು ಜಯ ! ಎನೆ ಸುರಸ್ತೋಮ ॥

ಕೊರಳ ಹೂವಿನ ದಂಡೆಯಲಿ ನಿಜ ।
ಕರದ ಭಾರಿಯ ಧನುವಿನಲಿ ಮೆಯ್ ।
ಪರಿಮಳದ ನಿಟ್ಟಿಸಳುಗಂಗಳ ಕೆಲದ ಯುವತಿಯಲಿ ॥

ವರನ ಪರಿ ಹೊಸತಾಯ್ತು ಹೊತ್ತನು ।
ಹರನ ಹಗೆ ಹಾರುವರಯನು ನ ।
ಮ್ಮರಸಿ ತಾ ಹಾರುವಿತಿಯೆಂದರು ನಗುತ ಚಪಳೆಯರು ॥

End:

ಕರಯುಗದ ಚಮ್ಮಟಿಗೆ ವಾಹೆಯ ।
ಲರಸ ರಥವೇರಿದನು ಮುಕ್ತಾ ।
ಭರಿತಬಾರಿಯ ಸತ್ತಿಗೆಯ ಪಲ್ಲವಿಸಿದನು ಭೀಮ ॥
ಹರಿಯುಭಯ ಪಾರ್ಶ್ವದಲಿ ಸಿತಚಾ ।
ಮರವ ಚಿಮ್ಮಿದನರ್ಜುನನು ಬಂ ।
ಧುರದ ಹಡಪದ ಹೆಗಲಲ್ಯೈದಿದರರ್ಜುನಾನುಜರು ॥
[ಪವುರ] (ಪೌರ)ಜನಪುರಜನ ನೃಪಾಲಕು ? ।
ವಾರಸಚಿವ ಪಸಾಯಿತರು ಪರಿ ।
ವಾರಮಂತ್ರಿಪ್ರಮುಖಸೂರಿಸಮಾಜರೊಗ್ಗಿನಲಿ ॥
ತೇರಬಳಿ ವಿಡಿದ್ಯೈದಿದರು ಮುರ ।
ವೈರಿ ವಿರಹರಿದೂತವದನಾಂ ।
ಬೋರುಹರ ಸಂತೈಸಿ ಬೀಳ್ಕೊಟ್ಟನು ಕೃಪಾಜಲಧಿ ॥
[ಆ](ಅ)ಧಿನೃಪರು(ಗಳು) ಕುಹಕಿಗಳು ಸಲೆ ।
ಸರಸಹೃದಯರು ಧರ್ಮಶೀಲರು ।
ಪರರ ನೋವನು ನಿಮ್ಮದೆಂಬಿರಿಯಾದಡೊಂದಿಹುದು ॥
ಅರೆಘನಾರೋಗಣೆ ವಿಹಾರದೊ ।
ಳಿರು ಳುಹಗಲರಮನೆಯ . ಯಿಧಾನದಲಿ । ?
ಬೆರಸಿಹುದೆಂದು ಮುರರಿಪು ನುಡಿದನು ಯಿವರಿಗೆ ॥ ?
ನಾಲಗೆಗಳ [ಸಂದಾರಿ] ( ) ಗುಣ ನಾ ।
ಮಾ[ವ]ಳಿಯ(ನು) ಹೊಗಳಿದುವು ಕಂಗಳು ।
ನೀಲಮೇಘಶ್ಯಾಮನಲಿ ಬೆಚ್ಚುವು[ನ] ( ) ಹಾರದಲಿ ॥
ಬಾಲಕೇಳೀಕಥನವೃತ್ತಿಯ ।
ಮಾಳ . ಲಿಪು . . . ಬ . ।
ಸಾಲಭಂಜಿಕೆಯಂದವಾದರುಕೃ[ಪ್ಣಾ](ಷ್ಣ) ವಿ[ಹಾ](ಹ)ರದಲಿ ॥

Colophon:

ಇತಿ ಶ್ರೀಮಹಾಭಾರತೇ ಶತಸಹಸ್ರಸಂಹಿತಾಯಾಂ ಆದಿಪರ್ವಣಿ ಖಾಂ[ಡಾ](ಡವ)ವನ ದಹನ, ಇಂದ್ರಾಪಜಯ, ಅಚ್ಯುತಾರ್ಜುನಪ್ರತಾಪವ[ರ್ಣನಾಂ](ರ್ಣನಂ) ಶ್ರೀ . . . ಚ್ಯನೂ . ಅಂತು ಸಂಧಿ ೪೧ ಕ್ಕಂ ಪದನು ೨೯೪೪ ಕ್ಕಂ [ಶ್ಲೋಕಕ್ಕಂ] ಆದಿಪರ್ವದ ಪುಸ್ತಕ ಸಮಾಪ್ತಂ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರುಷಂಗಳು ೧೬೫೪ ನೆಯ ಪರೀಧಾವಿ ನಾಮ ಸಂ॥ ರದ ಮಾರ್ಗಶಿರ [ಶಾ](ಶು) ೧ ಆದಿತ್ಯ ಸ್ವಾಲ್ಲಿ ಆರಂಭಮಾಡಿ ಬರೆದಲ್ಲಿ ಪಾಲ್ಗುಣ ಬ॥ ೭ ಆದಿವಾರಕೆ ಪುಸ್ತಕ ಸಮಾಪ್ತ. ಈ ಪುಸ್ತಕ ಬರದ [ಶೇನ](ಶ್ಯಾನು)ಭೋಗರು ಬದನೆ ಹಾಳು ಕುಲಕ[ರ್ಣಿ](ರ್ಣಿ) ನಾರಾಯಣಪ್ಪನ ಪುತ್ರ ಗೋವಿಂದಯ್ಯನ [ಸು](ಸ್ವ) ಹಸ್ತಬರಹ. ಇದರ ಪ್ರತಿ ನೋಡಿ ಬರವುದಕೆ ತಂದಿದ್ದ ಪುಸ್ತಕ ಕನಕಗಿರಿ ಕುಲಕರ್ಣಿ ಹಿರೆ ಕೆಂಚಪ್ಪನ ಪುತ್ರ ನರಸಿಂಗರಾಯನು ಬರೆದ ಪ್ರತಿ ಈ ಪ್ರತಿ ಮೇಲೆ ಬರೆದಿದೆ. ಸೊ.

ತಪ್ಪಂ ಬಳೆದಂ ಕುಜಡ ।
ನಪ್ಪಂ ಬರೆದಾತನೆಂದು ಬಯ್ಯಲ್ವೇಡಾ ॥
ತಪ್ಪಂ ಶುದ್ಧಮುಮಕ್ಕುಂ ।
ತಪ್ಪುಳ್ಳೊಡೆ ತಿದ್ದಿಕೊಳ್ವುದುತ್ತಮಪುರುಷರ್ ॥

(ವಿ-ವಿ.)—

ಆದಿಪರ್ವವು ಮಾತ್ರವೇ ಸಮಗ್ರವಾಗಿದೆ. ಆದರೆ ಇದರಲ್ಲಿ ೪೧ ಅಧ್ಯಾಯಗಳಿವೆ, ಇತರ ಹಸ್ತ ಪ್ರತಿಗಳಲ್ಲಿ ೨೦ ಅಧ್ಯಾಯಗಳೇ ಇವೆ. ಬೆಂಗಳೂರಿನಲ್ಲಿಯೂ, ಮಂಗಳೂರಿನಲ್ಲಿಯೂ ಅಚ್ಚಾಗಿರುವ ಪ್ರತಿಗಳಲ್ಲಿಯೂ ಇಪ್ಪತ್ತು ಅಧ್ಯಾಯಗಳು ಮಾತ್ರವೇ ಇವೆ. ಬರವಣಿಗೆ ಚೆನ್ನಾಗಿದೆ. ಅಲ್ಲಲ್ಲಿ ಕೆಲವು ತಪ್ಪುಗಳೂ ಇವೆ. ಪ್ರತಿ ಬಹಳ ಶಿಥಿಲವಾಗಿದೆ. ಮೇಲೆ ವರ್ಣಿತವಾಗಿರುವ ಗ್ರಂಥವೇಸರಿ. ಮುದ್ರಿತ ಗ್ರಂಥಗಳಂತೆಯೇ ಇದರಲ್ಲಿಯೂ ಪರ್ವದ ಕೊನೆಯಲ್ಲಿ ಖಾಂಡವವನದಹನದ ಕಥೆಯೇ ವರ್ಣಿತವಾಗಿದೆ. ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಮುದ್ರಿತವಾಗಿ ಪ್ರಕಟಿತವಾಗಿರುವ ಪ್ರತಿಗಿಂತಲೂ ಇದರಲ್ಲಿ (ಕೆಲವು) ಅಧ್ಯಾಯದ ಆದ್ಯಂತಗಳಲ್ಲಿ ಪದ್ಯಗಳು ಹೆಚ್ಚಾಗಿವೆ.

No. 30. ಭಾರತಕಥಾಮಂಜರಿ.

BHĀRATAKATHĀMAÑJARI.

Substance, Śrītāla. Size, 25½ × 2 inches. Pages, 64. Lines, 11 on a page. Character, Kanarese. Condition, fair. Appearance, very old. Mode of writing, good and free from mistakes.

Contains the Ādiparva complete.

Same work as the above.

(ವಿ-ವಿ.)—

ಆದಿಪರ್ವ ಸಮಗ್ರ. ನಾಂದೀ ಸಂಧಿಯೂ ಸೇರಿ ೨೦ ಸಂಧಿಗಳಿವೆ. ಬರವಣಿಗೆ ಅತ್ಯುತ್ತಮವಾದುದು. ತಪ್ಪುಗಳಿಲ್ಲ. ಮೇಲೆ ವರ್ಣಿತವಾಗಿರುವ ಗ್ರಂಥವೇಸರಿ. ಇದರ ಆದಿಯಲ್ಲಿ ಐರಾವತದ ಸಂಧಿ ಇದೆ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಶ್ಲಾಘ್ಯವಾದ ಪಾಠಭೇದಗಳಿವೆ. ಶೈಥಿಲ್ಯವೂ ಗ್ರಂಥಘಾತವೂ ಇಲ್ಲ.

No. 31. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 15¾ × 1½ inches. Pages, 140. Lines, 8 on a page. Character, Kanarese. Condition, very much injured. Appearance, very old. Mode of writing, good but not free from mistakes.

Contains the Ādiparva almost complete.

Same work as the above.

(ವಿ-ವಿ.)—

ಆದಿಪರ್ವದಲ್ಲಿ ಕಡೆಯ ಸಂಧಿಯಲ್ಲಿ ಕೆಲವು ಪದ್ಯಗಳ ಹೊರತು ಗ್ರಂಥವು ಸಂಪೂರ್ಣವಾಗಿದೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳು ಅಷ್ಟಾಗಿಲ್ಲ. ಗ್ರಂಥವು ಅತಿ ಶಿಥಿಲವಾಗಿದೆ. ಇದು ಮೇಲೆ ಉದಾಹೃತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 32. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 18½ × 1¼ inches. Pages, 122. Lines, 5 on a page. Character, Kanarese. Condition, much injured. Appearance, very old. Mode of writing, very good and free from mistakes.

Contains the Adhyāyas 1—7 complete, 8th wants the end and 9th wants the beginning in the Ādiparva.

Similar to the work described under No. 28 ante. The name of the author is not given.

Beginning:

ವೇದಪಾರಾಯಣದ ಫಲ ಗಂ ।
ಗಾದಿತೀರ್ಥಸ್ನಾನಫಲ ಕೃ ।
ಛ್ರಾದಿತಪಸಿನ ಫಲವು ಜ್ಯೋತಿಷ್ಟೋಮಯಾಗಫಲ ॥
ಮೇದಿನಿಯನೊಲಿದಿತ್ತ ಫಲ ವ ।
ಸ್ತ್ರಾದಿಕನ್ಯಾದಾನಫಲವಹು ।
ದೀಮಹಾ (ದಾದರದಿ) ಭಾರತದೊಳೊಂದಕ್ಷರವ ಕೇಳ್ವರಿಗೆ ॥

ಹೇಮಖುರಶೃಂಗಾರ ಭರಣದಿ ।
ಕಾಮಧೇನುಸಹಸ್ರಕಪಿಲೆಯ ।
ಸೋಮಸೂರ್ಯಗ್ರಹಣದಲಿ ಸುರನದಿಯ ತೀರದಲಿ ॥
ಶ್ರೀಮುಕುಂದಾರ್ಪಣವೆನುತ ಶತ ।
ಭೂಮಿದೇವರಿಗಿತ್ತ ಫಲವಹು ।
ದೀಮಹಾ ಭಾರತದೊಳೊಂದಕ್ಷರವ ಕೇಳ್ದರಿಗೆ ॥

ಚೋರನಿಂದಿಸಿ ಶಶಿಯ ಬಯ್ದಡೆ ।
ಕ್ಷೀರವನು ಕ್ಷಯರೋಗಿ ಕಳಿದರೆ ।
ವಾರಣಾಸಿಯ ಕಳವನಿಂದಿಸಿ ನಕ್ಕೊಡೇನಹುದು ? ॥
ಭಾರತ(ದ ಸು)ಕಥಾ ಪ್ರಸಂಗವ ।
ಕ್ರೂರಕರ್ಮಿಗಳೆತ್ತ ಬಲ್ಲರು ।
ಘೋರತರಪಾತಕವ [ಕೆಡಿ] ನೂಕುವುದೆಂದನಾಮುನಿಪ ।

ಸುರನದಿಯು ನಿರ್ಮಲವು ಸರಸತಿ ।
ಯರಿವು ಧರಣಿಯ ಪರಮಸ್ಥೈರಣೆ ।
ಗಿರಿಸುತೆಯು ಸೌಭಾಗ್ಯ, ಮೋಕ್ಷ(ದ)ವಧುವಿನಾನಂದ ॥
ಸುರಪತಿಯರ್ೈಶ್ವರ್ಯ, ಮಂತ್ರೋ ।
ಚ್ಚರಣೆಗಳ ನಿಜಶಕ್ತಿ, ಪೀತಾಂ ।
ಬರನ ವಕ್ಷದ ಲಕ್ಷ್ಮಿ ! ಕೊಡು ನಮಗಿಷ್ಟಸಂಪದವ ॥
ಅಚತುರ್ವದನೋ ಬ್ರಹ್ಮಾ ದ್ವಿಬಾಹುರಪರೋ ಹರಿಃ ।
ಅಫಾಲಲೋಚನಶ್ಶಂಭುಃ ಭಗವಾನ್ ಬಾದರಾಯಣಃ ॥
ಶ್ರೀವನಿತೆ ಯರಸನೆ! ವಿಮಳ ರಾ ।
ಜೀವಪೀಠನ ಪಿತನೆ ! ಜಗಕತಿ ।
ಪಾವನನೆ ! ಸನಕಾದಿಸಜ್ಜನನಿಕರದಾತಾರ ! ।
ರಾವಣಾಸುರಮಥನ ! ಶ್ರವಣ ಸು ।
ಧಾವಿನೂತನ ಕಥನಕಾರಣ !
ಕಾವ್ಯದಾನತ್ರಜನವ ಗದುಗಿನ ವೀರನಾರಯಣ ! ॥

* * * *

ಒಂದು ಪರ್ವವ ಕೇಳದೊಡೆ ಸಾ ।
ಕೊಂದು ಸಂಧಿಯು ಕೇಳದೊಡೆ ಸಾ ।
ಕೊಂದು ಸಂಧಿಯೊಳೊಂದು ಪಥವನು ಕೇಳದೊಡೆ ಸಾಕು ॥
ಒಂದು ಪದ(ದ್ಯ) ದೊಳೊಂದು ಪಾದದೊ ।
ಳೊಂದು ಅಕ್ಷರ ಕೇಳದವರಿಗೆ ।
ಕುಂದದೀವನು ಶ್ರೀಯು ಗದುಗಿನ ವೀರನಾರಯಣ ॥

Colophon :

ಇತಿ ಶ್ರೀಮಹಾಭಾರತೇ ಶತಸಹಸ್ರಸಂಹಿತಾಯಾಂ ಆದಿಪರ್ವಣಿ ನಾಂದೀಪದ ಸಮಾಪ್ತಂ.

ರಾಗ ॥ ಶಾಂತಮಲಹಲಿ.

ರಾಯ ಜನಮೇಜಯಗೆ ವೈಶಂ ।
ಪಾಯ[ಮುನಿ] (ನನು) ಹೇಳದನು (ಮುನಿ) ದ್ವೈ ।
ಪಾಯನನು ಬಣ್ಣಿಸಿದ ಭಾರತವರ ಕಥಾಮೃತವ ॥
ಸೂತನೈತಂದವನು ಜಗದ್ವಿ ।
ಖ್ಯಾತ ಸನಕ(ಸ)ಮುಖ್ಯಮುನಿಸಂ ।
ಘಾತಪಾವನನೈಮಿಶಾರಣ್ಯಕವನಾಂತರಕೆ ॥
ಆತನನು ಕಂಡುದು ತಪಸ್ವಿ ।
ವ್ರಾತ ಕುಶಲಕ್ಷೇಮಮಧುರ ।
ಪ್ರೀತಿವಚನಾಮೃತದಿ ಸಂಭಾವನೆಯ ಮಾಡಿದರು ॥
ಪರಮ ಪೌರಾಣಿಕ ಶಿರೋಮಣಿ ! ।
ಬರವದೆತ್ತಣದಾಯ್ತು ? ಕೌತುಕ ।
ವರಕಥಾ ಪೀಯೂಷಪಾನವಿಶೇಷವೇನುಂಟು ? ॥

ಚರಿತ್ರಚತ್ತುರಾಶ್ರಮಾತಪೋನಿ ।
ಷ್ಮರಿಗೆ ವಿಶ್ರಮಮೈಭ್ಯಾದೃಶ ।
ದರುಶನವು ನಮಗೆಂದು ನುಡಿದರು ಲೋಮಹರುಷಿಣಿಯ ॥

ವಂದಿಸಿದೆನೈ ಷ್ಮರತಪೋಧನ ।
ವೃಂದ ! ಚಿತ್ತೈಸೆಂದು ನಾನೇ ।
ನೆಂದು ನುಡಿವುದು ಕೌತಕಾಮೃತರಸದಕಡುಗಡಲ ।

ಹಿಂದೆ ಹೇಳಿದುದೆಲ್ಲ ಕೇಳ್ವಡೆ ।
ಮುಂದೆ ಹೊಸತಿದು ನಿಗಮಶತವಿದ ।
ರೊಂದೊರೆಗೆ ಸರಿಬಾರದೆಂದನು ಸೂತ ಕೈಮುಗಿದು ॥

ಕೇಳಿದನು ಜನಮೇಜಯ ಕ್ಷಿತೀ ।
ಪಾಲಕನು ಕೃತಸರ್ಪಯಜ್ಞ ।
ಸ್ಥೂಲಪಾಪವಿಘಾತಿಗೋಸುಗವೀಮಹಾಕಥೆಯ ॥

ಕೇಳಿದೆನು ನಾನಲ್ಲಿ ಮುನಿಜನ ।
ಮೌಳಿಮಂಡಿತಚರಣಕಮಲವಿ ।
ಶಾಲವೇದವ್ಯಾಸಕೃತಿಭಾರತಕಥಾಮೃತವ ॥

* * * *

ಕೊಂದದಾ ನೃಪನೆಂದು ಮಾಡಿದ ।
ಮಂದಿರದಿ ತಾ ಸರ್ಪಯಾಗವ ।
ಹಿಂದುಗಳೆಯದೆ ದ್ವಿಜರ ಮಂತ್ರದಿ ಸರ್ಪಕುಲಗಳನು ॥

ತಂದು ಕೆಡೆಹಲಿಕೆಂದು ; ಯಿಂದ್ರನ ।
ಹಿಂದೆ ಹೊಕ್ಕನು ತಕ್ಷನಾಕ್ಷಣ ।
ವಂದ ವಿಟ್ಟರು ಬಳಿಕವಿಪ್ರರು ಮಂತ್ರಕಿಂತೆಂದು ॥

ವರಸುರೇಶನ ಹಿಂದೆ ಹೊಕ್ಕನು ।
ಭರದಿ ತಕ್ಷಕ ಮಂತ್ರಪುಂಜಕೆ ।
ಮರಳಿ ಮುನಿಗಳಿಗರುಹೆ ಮಂತ್ರಕೆ ಮುನಿಗಳೆಸಿರಿದರು ॥

ನಿರುತ ತಕ್ಷನನಿಂದ್ರಸಹಿತ ।
ಧ್ವರಕೆ ಹಾಯಿಕು ಯೆನಲು ಮಂತ್ರವು ।
ಮರಳಿ ಯಿಂದ್ರನ ಕಟ್ಟಿತಂದವು ತಕ್ಷಕನ ಸಹಿತ ॥

ಸುರಪ ತಕ್ಷಕ ಸಹಿತವಾಕ್ಷಣ ।
ವೆರಸಿ ತದ್ವರಮಂತ್ರದಿಂದವೆ ।
ನಿರುತರಾದರು ಯಿಂದ್ರತಕ್ಷಕರಾಹುತಿಯ ಕೂಡಲು ॥

ಬಂದರಿಬ್ಬರ ಕಟ್ಟಿ ಮಂತ್ರವು ।
ತಂದು ಆಹುತಿಗೊಡುವ ಸಮಯಕೆ ।
ಸಂದಿದನು ಆಸ್ತಿಕನು ಶ್ರುತಿಯಲಿ ಯಜ್ಞಪುರುಷನನು ॥

ಅಂದು ಭೂಸುರವೃಂದ ನೋಡಲು ।
ಚೆಂದದಲಿ ತಾತುಷ್ಟಿ ವಡಿಸಿದ ।
ರೆಂದನ್ಯೆ ತಾನಗ್ನಿದ್ವಿಜನಸು ಬೇಡಿಕೊಳ್ಳೆನಲು ॥
ಕಟ್ಟಿತಂದಾಹುತಿಯು ಕುಡಲಿಕೆ ।
ನೆಟ್ಟನಾಸ್ತಿಕನಿಂದು ಪುನರಪಿ ।
ವಿಷ್ಣುವನು ತಾನೆನೆದು ನೋಡಿದ ದ್ವಿಜಸಮೂಹವನು ॥
ಮುಟ್ಟಿಹೊಗಳದು ವೇದಋಕ್ಕಿನ ।
ಸೃಷ್ಟಿಹಾಸದ ನಾಲ್ಕು ಬಾರಿಯು ।
ಸೃಷ್ಟಿಯೊಳು ತಾನಾ ಮಹಾತ್ಮನು ಅರ್ಭಕಾಭ್ಯದಲಿ ॥
ಹೊಗಳಲಿಕೆ ಪಡಿವೃಂದ ನೋಡಲು ।
ನಿಗಮ ಮಂತ್ರಾಕ್ಷರಕೆ ರಿಸಿಗಳು ।
ಬಗೆದುದನು ಬೇಡೆನಲು ಆಸ್ತಿಕನವರಿಗಿಂತೆಂದ ॥
ಬಗೆವುದೊಂದೆಸಗಿಲ್ಲ ವೀಕ್ಷಣ ।
ನಿಗಮಮಂತ್ರವು ಕಟ್ಟಿಕೊಂಡಿಹ ।
ಜಗವರಿಯಲೀ ಯಿಂದ್ರ ತಕ್ಷಕರಿವರ ಬಿಡಿ ಯೆಂದ ॥
ವಿನಯದಲಿ ಆಸ್ತಿಕನು ಬೇಡಿದ ।
ತನಗೆ ಕುಡಿಂಯಾಹುತಿಯು ನಾಕದ ।
ಜನಪತಿಯು ನೀವುರಗ ತಕ್ಷಕರಿವರಬಿಡಿಯೆನಲು ॥
ಮುನಿಗಳಾಹಾ ! ಎನುತ ಕೊಟ್ಟರು ।
ಅನಲಗಿಕ್ಕಿದಡೇನು ? ಭೂಸುರ ।
ಜನರಿಗಿಕ್ಕಿದಡೇನು ಸರಿಘೇವೆಂದು ಮನಮುಟ್ಟಿ ॥

End :

ನಿಲುಕಿ ಹೊರಿಗಂಬಿಯಲಿ ಭೂಸುರ ।
ಬಳಗವನು ನೂಕಲಿಕೆ ಚಾಪವ ।
ನಳಿನಸಂಭವಸುತರು ಜಯವಿಜಯರಿಗೆ ಕೋಪಿಸುತ ॥
ಎಲೆಲೆ ! ದ್ವಾರಿಕರೆ ತಮ್ಮನು ।
ನಳಿನನಾ(ಭನ ಕಾಣಲೀಸಿರೆ)
(ಬ)ಳಿಕೆನುತ ನೀವಿನ್ನು ದೈತ್ಯರ ಕುಲದಿ ಜನಿಸುವುದು ॥
ಅವರು ಬೆದರಿಯೆ ಹರಿಗೆ ಬಿನ್ನಹ ।
ಭವನ ವೊಳಯಕೆ ಹೋಗಿ ನುಡಿಯ(ಲು) ।
ಭುವನರಕ್ಷಕನೆಂದನವರಸು ನೀವು ಮುರುಳಾಗಿ ॥
(ಭವಗೆ ಸರಿ ಸನ) ಕಾದಿಮುನಿಗಳು ।
ನವಗೆ ಮತ್ತವರಧಿಕಪ್ರಿಯರು ।
ಅವರ ಕರೆಕರೆಯೆಂದು ಲಕ್ಷ್ಮಿಯು ಕಯ್ಯ ಕರೆಸಿದನು ॥
ತಾಯಿ ಮಕ್ಕಳ ತಂದು ತಂದೆಯು ।
ಕಾಯದಲಿ ಕುಳ್ಳಿರಿಸು (ವಂದದಿ) ।
(ಶ್ರೀಯು ತ)ಂದಳು ಹರಿಯ ಹೊರೆಯಿಕೆ ದಿವ್ಯಯೋಗಿಗಳ ।

ಕಾಯದಲಿ ತೆಗೆದಪ್ಪಿ ಕರುಣದಿ ।
ಬಾಯ ತಂಬುಲವಿಕ್ಕಿ ಬಾಗಿಲ ।
ಕಾಯುವರು ಕಡುಮೂರ್ಖರಿಂತಿದು ನಮಗೆ ಪುರುಷಾರ್ಥ ॥
(೬೦) ದೊಡ್ಡವರುಗಳನ್ನು ನುತಿಯಿಸೆ ।
ಕುಂದು ಹೆಚ್ಚನು ನೀವು ಕಾಂಬುದು ।
ಮಂದರೋದರ ! ಎನಲು ದೇವನು ಕಂಡ(ನದ ಕೊಂದ) ॥
ಇಂದು ಸನಕಾದಿಗಳ ಶಾಪವು ।
ಬಂದುದೇ ಜಯವಿಜಯ ರಿಬ್ಬರಿ ।
ಗಿಂದು . . . . ॥

(ವಿ-ವಿ.)—

ಮಹಾಭಾರತದ ಆದಿಪರ್ವದಲ್ಲಿ ೧ ರಿಂದ ೭ ಅಧ್ಯಾಯಗಳು ಸಂಪೂರ್ಣವಾಗಿವೆ. ೮ ನೆಯ ಅಧ್ಯಾಯದ ಕೊನೆಯಲ್ಲಿ ಕೆಲವು ಪದ್ಯಗಳೂ ೯ ನೆಯ ಅಧ್ಯಾಯದ ಆದ್ಯಂತಗಳಲ್ಲಿ ಕೆಲವು ಪದ್ಯಗಳೂ ಇಲ್ಲ. ಪ್ರತಿ ಬಹಳ ಶಿಥಿಲವಾಗಿದೆ. ಅಲ್ಲಲ್ಲಿ ಗ್ರಂಥಪಾತಗಳೂ ಇವೆ. ಬರವಣಿಗೆ ಅತ್ಯುತ್ತಮವಾದುದು, ತಪ್ಪುಗಳಲ್ಲವೆನ್ನಬಹುದು. ಇದರಲ್ಲಿ ಸರ್ಪಯಾಗದ ಕಥೆ ಮುಂತಾದ ಕೆಲವು ಹೆಚ್ಚು ವಿಷಯಗಳಿವೆ. ಗ್ರಂಥವು ಸಂಪೂರ್ಣವಾಗಿ ದೊರೆಯದ ಕಾರಣ ಇದರ ವಸ್ತುಸ್ಥಿತಿಯನ್ನು ಇಂತೆಯೇ ಸರಿಯೆಂದು ನಿಶ್ಚಯಿಸಿ ಹೇಳಲು ಸಾಧ್ಯವಿಲ್ಲ. ಅಲ್ಲಲ್ಲಿ ಕೆಲವು ಸಂಸ್ಕೃತ ಶ್ಲೋಕಗಳನ್ನೂ ಶ್ರುತಿಸ್ಮೃತಿ ವಚನಗಳನ್ನೂ ಉದಾಹರಿಸಿರುತ್ತಾನೆ. ಕುಮಾರವ್ಯಾಸನು ಬರೆದ ಭಾರತದ ಪದ್ಯಗಳೇ ಹೇರಳವಾಗಿವೆ. ಆದುದರಿಂದ ಮೊತ್ತಮೊದಲು ಕುಮಾರವ್ಯಾಸನು ಬರೆದ ಭಾರತಕ್ಕೂ ಈಗ ಪ್ರಚಾರದಲ್ಲಿರುವುದಕ್ಕೂ ಎಷ್ಟೋ ವ್ಯತ್ಯಾಸವಿರುವುದೆಂದು ಊಹಿಸಬಹುದಾಗಿದೆ. ಈ ಪ್ರತಿಯನ್ನು ನೋಡಲಾಗಿ ಕುಮಾರವ್ಯಾಸನು ಸಂಸ್ಕೃತ ಭಾರತದಲ್ಲಿರುವಂತೆಯೇ ಕನ್ನಡಿಸಿರಬಹುದೆಂತಲೂ, ಸರಿಯಾದ ಮೂಲಪ್ರತಿಯು ದೊರೆಯದಿರುವುದರಿಂದಲೇ ಈ ರೀತಿಯ ವ್ಯತ್ಯಾಸಕ್ಕೆ ಅವಕಾಶವುಂಟಾಯಿತೆಂತಲೂ ಹೇಳಬಹುದು. ಮಿಕ್ಕ ವಿಷಯಗಳನ್ನು ೨೮ ನಂಬರಿನಲ್ಲಿ ನೋಡಿ ತಿಳಿಯುವುದು.

No. 33. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, $13\frac{3}{8} \times 1\frac{1}{4}$ inches. Pages, 220. Lines, 6 on a page. Character, Kanarese. Condition, injured. Appearance, old. Mode of writing, fair, but not free from mistakes.

Contains the Ādiparva almost complete.

Same work as the above. By Nārāyaṇappa. For other particulars vide No. 28 ante.

(ವಿ-ವಿ.)—

ಆದಿಪರ್ವದಲ್ಲಿ ದ್ರೌಪದೀಸ್ವಯಂವರದ ವರೆಗೆ ಮಾತ್ರವೇ ಇದೆ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಶಿಥಿಲ. ಪುರಾತನ ಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದೆ ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 34. ಭಾರತಕಥಾಮಂಜರಿ. BHĀRATAKATHĀMAÑJARI.

Substance, palm-leaf. Size, 20 × 1⅗ inches. Page, 6. Lines, 5 on a page. Character, Kanarese. Condition, very much injured. Appearance, very old. Mode of writing, good and free from mistakes.

Contains a small portion in the Ādiparva.

Same work as the above. By Nārāyaṇappa. For other particulars vide No. 28 ante.

(ವಿ-ವಿ.)—

ಆದಿಪರ್ವದಲ್ಲಿ ಮೊದಲಿನ ಕೆಲವು ಪದ್ಯಗಳು ಮಾತ್ರವೇ ಇವೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಅತಿ ಶಿಥಿಲ. ಪುರಾತನ ಪ್ರತಿ. ಪೂರ್ತಿ ವರ್ಣಿತವಾಗಿರುವ ಗ್ರಂಥವೇ ಸರಿ ಮಿಕ್ಕ ವಿಷಯಗಳನ್ನು ಹಿಂದಿನ ೨೮ ನಂಬರಿನಲ್ಲಿ ನೋಡಿ ತಿಳಿಯುವುದು.

No. 35. ಭಾರತಕಥಾಮಂಜರಿ. BHĀRATAKATHĀMAÑJARI.

Substance, palm-leaf. Size, 14¼ × 1⅓ inches. Pages, 168. Lines, 5 on a page. Character, Kanarese. Condition, injured and many leaves are broken. Appearance, old. Mode of writing, good and free from mistakes.

Contains from the sixth Sandhi to the end of the Ādiparva.

Same work as the above. By Nārāyaṇappa. For other particulars vide No. 28 ante.

(ವಿ-ವಿ.)—

ಆದಿಪರ್ವ ಸಮಗ್ರ. ಆದರೆ ಮೊದಲಿನ ಐದು ಸಂಧಿಗಳಿಲ್ಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಶಿಥಿಲವಾಗಿದೆ. ಕೆಲವು ಪತ್ರಗಳು ಮುರಿದುಹೋಗಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದೆ ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 36. ಭಾರತಕಥಾಮಂಜರಿ. BHĀRATAKATHĀMAÑJARI.

Substance, palm-leaf. Size, 18¾ × 1⅓ inches. Pages, 237. Lines, 6 on a page. Character, Kanarese. Condition, injured. Appearance, old. Mode of writing, good but not free from mistakes.

Contains the Sabhāparva complete.

Same work as the above. By Nārāyaṇappa. For other particulars see under No. 28 ante.

Beginning :

ಸಭೆಯೊಳೋಲಗದೊಳು ವಿರಿಂಚಿ ।
ಪ್ರಭುವಿನನುಮತದಿಂದ ಧರಣೀ ।
ವಿಭು ಮಹಾಕ್ರತು ರಾಜಸೂಯವನೊಲಿದು ಕೈಕೊಂಡ ॥
ಕೇಳು ಜನಮೇಜಯ ! ಧರಿತ್ರೀ ।
ಪಾಲ ! ಖಾಂಡವ ವನದ ವಹ್ನಿ ।
ಜ್ವಾಲಿ ತೆಗೆದುದು ಕೂಡೆ ಹೊಗೆದುದು (ಹೊದರ) ಹೊಸಮೆಳೆಯ ॥
ಮೇಲುಕಾಳಗದುಬ್ಬಿನಲಿ ಸಿರಿ ।
ಲೋಲಸಹಿತರ್ಜುನನು ವಿಕ್ರಮ ।
ಕೇಳಿ[ಪರಿ]ಸಂತೋಷದಲಿ ಮರಳಿದನೆಂದು ಪಟ್ಟಣಕೆ ॥

* * * *

ಕಳುಹಿದನು ಸುರಮುನಿಯನುದರದೊ ।
ಳಿಳಿದು ದಂತಸ್ತಾಪ ಯಜ್ಞದ ।
ಬಲುಹ ನೆನೆದಡಿಗಡಿಗೆ ಕಂಪಿಸಿ ಕಯ್ಯ ಗಲ್ಲದಲಿ ॥
ಒಲಿದೊಲಿದು ಬಿಡೆ ಭಾವದಲಿ ಕಳೆ ।
ವಳಸಿ ಪುದುಳಸಿ ಮತ್ತೆ ಭೂಪತಿ ।
ತಿಲ್ಕ ಚಿಂತಿಸಿ ನೆನೆದ ಗದುಗಿನ ವೀರನರಯಣನ ॥

Colophon :

ಪ್ರಥಮಸಂಧಿ ಸಮಾಪ್ತಂ.
ಬಲಿಮಥನ ಫಲುಗುಣರು ಸಹಿತ ।
ಗ್ಗಳೆಯನೇ ಕಾಂಗದಲಿ ರಣದಲಿ ।
ಕಲಿ ಜರಾಸಂಧನನು ಸೀಳಿಯೆ ಬಿಸುಟನಾ ಭೀಮ ॥

* * * *

ತುಸಮೊದಲು ಚತುರಾಸ್ಯ ಪರ್ಯಂ ।
ತೆಸೆವುದೈ ಭುವನದಲಿ ಜೀವ ।
ಪ್ರಸರವಿದ್ದುದು ದುಃಖಸೌಖ್ಯದ ತಾರತ್ರಮ್ಯದಲಿ ॥
ಉಸುರು ಪಸರಣವಿಲ್ಲದೆನ್ನು ।?
ಬ್ಬಸದ ಭೀತಿಯ ಜೇಗೆ ಮಿಗೆ ದಾ ।
ಹಿಸುವುದೈ ಕಾರುಣ್ಯನಿಧಿ! ಯೆಂದೊರಲಿದಳು ತರಳೆ ॥
ನಂದಗೋಪಕುಮಾರ ! ಗೋಪೀ ।
ವೃಂದವಲ್ಲಭ ! ದೈತ್ಯಮಥನ ! ಮು ।
ಕುಂದ ! ಮುರಹರ ! ಭಕ್ತವತ್ಸಲ ! ಧೀನಕೃಪಾನಿಧಿಯೆ ! ।
ನೊಂದೆನೈ ನುಗ್ಗಾದೆನೈ ಗೋ ।
ವಿಂದ ! ಕೃಪೆಮಾಡೆನುತ ಪೊ ।
ರ್ಣೇಂದುಮುಖಿ ಹಲುಬಿದಳು ಹಲತೆರದಿಂದಲಚ್ಯುತನ ॥
ಇತ್ತ್ರದ್ವಾರಾವತಿಯೊಳಗೆ ದೇ ।
ವೋತ್ತಮನು ಭಕುತರಿಗೆ ತನ್ನನು ।
ತೆತ್ತು ಬದುಕುವನೆಂಬ ಪರಮವ್ರತದ ನಿಶ್ಚಯನು ॥

ಚಿತ್ರದಲಿ ನೆಲೆಗೊಳಿಸಿ ರುಕುಮಿಣಿ ।
ಸತ್ಯಭಾಮೆಯರೊಳು ಸಮೇಳದ ।
ನೆತ್ರಗಾರಿಯು ಹರಹಿ ಹಾಸಂಗಿಗಳ ದಾಳಿಸುತ ॥

ದೂತರೈದಿದರಿವರ ಸೂರೆಯು ।
ಕೈತವಕೆಗರು ಕೃತಕವಾರ್ತೆ ।
ಭೀತಪುರಜನ ಮೊಗದ ದುಗುಡದ ದಡ್ಡಿಗಳನುಗಿದು ॥

ಬೀತುದಿಂದ್ರನ ಬಲುಹು ವಿಗಡನ ।
ವೀತಿ ಹೋತ್ರನ ವಿಲಗತಿದ್ದಿ ವಿ ।
ದೂತರಿಪು ಬಲ ಬಂದನಿದೆ ಯೆಂದರು ಮಹೀಪತಿಗೆ ॥

* * *

ಕಲಹವೇ ಕಂದೆರವೆಟ್ಟಿಪಿಸುಣರ ।
ಕಲಿಗೆ ಕಡುನೋಟಾಟವೆ ಕದನ ।
ಕೆಳೆಯರನು ಕಾದಿಸುವುದೆ ತನ್ನಂಗದುದ್ಯೋಗ ॥

ಹುಳುಕತನವೇ ಶಿಷ್ಯಗುರುಗಳ ।
ಕೊಳೆಗೊಳಗೆ ಮಸೆವೃತ್ತಲಿಪ್ಪುದು ।
ಕುಲದ ವಿದ್ಯೆಯೆನಿಪ್ಪ ನಾರದಮುನಿಗೆ ಪೊರಮಟ್ಟು ॥
ಬಂದನರಮನೆಗಾಗಿ ಮುನಿಯುನು ।
ವಂದಿಸಿದುದಾಸ್ಥಾನವಿದಿರಲಿ ।
ಬಂದು ಬಿಜಯಂಗೈಸಿ ತಂದರು ಸಿಂಹವಿಷ್ಟರಕೆ ॥
ಸಂದ ಮಧುಪರ್ಕಾದಿ ಸತ್ಕೃತಿ ।
ಯಿಂದ ಪೂಜಿಸಿ ವಿನಯದಲಿ ನಸುನಗು ।
ತೆಂದನವನೀಪಾಲನಾ ಮುನಿಕುಲಶಿರೋಮಣಿಗೆ ॥
ಕುಶಲವೇ ? ನಿಮ್ಮಂಘ್ರಿ ನಮಗಿಂ ।
ದೊಸಗೆಯಾದದು ನಿಮ್ಮ ದರುಶನ ।
ವಸಮ ಸಂಸೃತಿವಹ್ನಿದಗ್ಧರಿಗಮೃತವರ್ಷವಲೆ ॥
ಪಶುಪತಿಯು ಪರಮೇಷ್ಠಿಯು ಮುರ ।
ದ್ವಿಷನ ಸಾಮರ್ಥ್ಯದ ಸಗಾಢದ ।
ಯೆಸಕ ನಿಮಗುಂಟೆಂದು ಕೊಂಡಾಡಿದನು ನಾರದನು ॥
ಕುಶಲವೆಮಗಿಂದೈದೆ ನೀನ್ನೀ ।
ವಸುಮತೀವದುಗೊಳ್ಳದ್ಯೈ ಶೋ ।
ಭಿಸುವ ವೈಭವದಾಜ್ಞೆಯಲಿ ವರ್ಣಾಶ್ರಮಾಚಾರ ।
ದೆಸೆದೆಸೆಗಳೆಮಳಾಗ್ನಿಹೋತ್ರ ।
ಪ್ರಸರದೂಮಜ್ವಾಲೆಗಳ ನಿಂ ।
ದಿಸರಲೇ ದುರ್ಜನರು ಸುಜನರಸೆಂದನಾ ಮುನಿಪ ॥

* * *

ಮುನಿಗಳೇ ಮಾಣಿಯರು ; ಮಂತ್ರಾಂ ।
ಗನೆಯರೋಲಗಕಾರ್ತಿಯರು ; ಸುರ ।
ಜನವು ಕಿಂಕರಜನರು ; ಸೂರ್ಯಾದಿಗಳೆ ಸಮುಬಲರು ॥
ಘನ ಚತುರ್ದಶ ವಿದ್ಯೆ ಪಾಠಕ ।
ಮನೆಯ ವೈತಾಳಿಕರು ; ಪದ್ಮಾ ।
ಸನನ ಪರುಠವವಾ ಸಭೆಗೆ ಸರಿಯಾವುದೈ ? ನೃಪತಿ ! ॥
ಇನಿಬರಾಸ್ಥಾನದಲಿ ಸುಕೃತಿಗ ।
ಳೆನಿಪ ತೇಜಸ್ವಿಗಳು ಗಡ ಸುರ ।
ಮುನಿ ! ಹರಿಶ್ಚಂದ್ರಂಗೆ ಸಾರಿದ ಸುಕೃತ ಫಲವೇನು ! ।
ಜನಪನುಪಥೆಗದೇನು ನಿಷ್ಕೃತ ।
ವೆನಲು ನಕ್ಕನು ರಾಜಸೂಯದ ।
ಘನವವನರಿಯಾ ಧರ್ಮನಂದನ ! ಎಂದನಾ ಮುನಿಪ ॥
ಆ ಮಹಾಕ್ರತುವರವ ನೀ ಮಾ ।
ಡಾ ಮಹೇಶ್ವರ ! ಸನ್ನಿಧಿಯಲಿ ನಿ ।
ರಾಮಯನು ನಿಮ್ಮಯ್ಯನಿಹನು ಸತೇಜವಲಿ ಬಳಿಕ ॥
ಸೋಮವಂಶದ ರಾಯರೊಳಗು ।
ದ್ದಾಮನಹ ಬಲುಗೈ ಕುಮಾರ ।
ಸ್ತೋಮ ನೀವಿರಲಯ್ಯಗೇನರಿದೆಂದನಾ ಮುನಿಪ ॥
ಮುನಿಯ ಮಾತಿನ ಬಲೆಗೆ ಸಿಲುಕಿತು ।
ಜನಪತಿಯ ಚೈತನ್ಯಮೃಗವಾ ।
ತನ ವಚೋವರುಷದಲಿ ನನೆದುವು ಕರಣವೃತ್ತಿಗಳು ॥
ಮನದಲಂಕುರವಾಯ್ತು ನಾಲಗೆ ।
ಕೊನೆಯಲಿರಡೆಲೆಯಾಯ್ತು ಯಜ್ಞದ ।
ನೆನಹು ಧಾರಣೆಯಲ್ಲಿ ಬಂದುದು ಧರ್ಮನಂದನನ ॥
ಆದಿಯಲಿ ನಾವ್ ನಿಮಗೆ ಹೇಳಿದು ।
ದೈದೆ ನಿನ್ನಯ ಚಿತ್ತದಲ್ಲಿ ನೆಲೆ ।
ಯಾದುದೇ ನಾಕಿನ್ನು ಸುಖಿಯಾಗೆಂದು ಧರ್ಮಜನ ॥
ಮೈದಡವಿ ಭೀಮಾರ್ಜುನರನೊಲಿ ।
ದಾದರಿಸಿ ದ್ರೌಪದಿಯ ಪಾಲಿಸಿ ।
ಮೇದಿನೀಪತಿ ನೇಮವೇ ನಮಗೆಂದನಾ ಮುನಿಪ ॥

ಕೇಳಿದನು ಮುರವೈರಿ ತನ್ನಯ ।
ಮೇಳದೈವರ ಸತಿಯ ಹುಯ್ಯಲ ।
ನಾಳನೊಂದವಮಾನವಾಳ್ದಂಗೆಂಬ ಕೃಪೆಯಿಂದ ॥

ಕೋಳುವೋದುವೆ ಪಾಂಡುಪುತ್ರರ ।
ಬಾಳು ಕೇಳಕಟೆನುತ ಲಕ್ಷ್ಮೀ ।
ಲೋಲ ಚಿಂತಿಸಿ ನುಡಿದ ರುಕ್ಮಿಣಿ ದೇವಿಗೀ ಹದನ ॥

ಕ್ರೂರ ದುರ್ಯೋಧನನು ದ್ರುಪದ ಕು ।
ಮಾರಿ ಪಾಂಚಾಲಿಯನು ಸಭೆಯೊಳು ।
ಸೀರೆಯನು ಸುಲಿಯಲ್ಕೆ ಕಾಯ್ಯ ಕೃಷ್ಣಯೆಂದೆನುತ ॥
ನಾರಿಯೊರಲಿದಳಾಕೆ ಯುಟ್ಟ ।
ಸೀರೆ ಸೆಳೆಯಲು ಬಳಿಕಲಕ್ಷಯ ।
ಸೀರೆಯಾಗಲಿಯೆಂದ ಗದುಗಿನ ವೀರನಾರಯಣ ॥

End :

ಅರಸ ! ಕೇಳಾಶ್ಚರ್ಯವನು ಗಜ ।
ಪುರದ ಬೀದಿಯೊಳವರು ಬರುತಿರೆ ।
ಮರುಳನಾ ದುಶ್ಶಾಸನನು ಹರಿತಂದನೇಡಿಸುತ ॥
ಬೆರಳನಾಡಿಸಿ ಹೋದರೇ ಹೋ ।
ದಿರಿ ವಿಪಿನ ತ್ರಳ್ಳಿಯನೆ ಬಿಟ್ಟಿಗೆ ।
ಸರಿದುಪೆತ್ತ್ರಗಳೆನುತ ಬಂದನು ಹಿಂದೆ ಪವನಜನ ॥
ತಿರುಗಿ ಕಂಡನು ಭೀಮನುಬ್ಬಿದ ।
ಹರುಷ ಹೃದಯನ ಮನದ ರೋಷದೊ ।
ಳರಸನನು ನೋಡಿದನು ಭೂಪತಿ ಮೊಗದ ಸನ್ನೆಯಲಿ ॥
ತಿರುಹಿದನು ತಮ್ಮನನು ಗದೆಯಲಿ ।
ತಿರುಗಿ ಹಾಯ್ಕಿ ಹಿಡಿದು ಮಾರುತಿ ।
ಯರಸನಾಜ್ಞೆಯೊಳಂಜಿ ನಡೆದನು ಭೂಪ ಕೇಳೆಂದ ॥
ಪುರವ ಹೊರವಂಟವರು ಗಂಗಾ ।
ವರನದಿಯ ತೀರದಲಿ ನಿಂದರು ।
ಪರಿಜನವ ಕಳುಹಿದರು ಧೃತರಾಷ್ಟ್ರನ ಪಸಾಯಿತರ ॥
ಗುರುಜನಕೆ ಪೊಡವಟ್ಟು ಬೀಳ್ಕೊಂ ।
ಡರು ನದೀಜ ದ್ರೋಣ ಕೃಪರನು ।
ಕರೆದು ಕುಂತಿಯ ನಿಲಿಸಿದರು ವಿದುರನ ನಿವಾಸದಲಿ ॥
ಇರವು ಹನ್ನೆರಡಬುದ ವನದೊಳು ।
ಶರಭಭೇರುಂಡಾದಿದನುಜೋ ।
ತ್ಕರರ ಬಾಧೆಯನಂತಕರಿಸುವ ನಮ್ಮ ಬುದ್ಧಿಗಳ ॥
ಪರುಠವಣೆ ತಾನಿಲ್ಲಗಹುದೈ ।
ಹರಿಯ ಕರುಣವಬುಂಟು ನಿನಗೆಂ ।
ದರಸನನು ಹರಸಿದರು ಗುರುಭೀಷ್ಮಾದಿಸಜ್ಜನರು ॥
ಕಳುಹಿ ಮರಳಿಯೆ ವಿದುರನರಸನ ।
ನಿಳಯಕೈತಂದನು ಕುಮಾರರ ।
ಕಳುಹಿ ಬಂದ್ಯೆ ತಮ್ಮ ! ಮತವೇನಾ ಯುಧಿಷ್ಠಿರನ ॥
ಉಳಿಪವರ ಹದನೇನು ? ದ್ರೌಪದಿ ।
ಲಲನೆ ಯೇನೆಂದಳು ನಿಧಾನವ ।
ತಿಳಿದು ಬಂದ್ಯೆ ಹೇಳೆನುತ ಧೃತರಾಷ್ಟ್ರ ಬೆಸಗೊಂಡ ॥

ಮಾನಿಪ ನೋಡುತ ಹೋದನಗ್ನಿಯು ।
ವಿನುತ ಸೂಕ್ತವನೆತ್ತಿಗೈದಾವಿ ।
ನನಿಲಜನು ದುಗುಡದಲಿ ಫಲುಗುಣ ಯಮಳರೊಂದಾಗಿ ॥
ವನಿತೆಯನು ಮುಂದಿಟ್ಟು ಹೊರವಂ ।
ಟನು ಯುಧಿಷ್ಠಿರನೃಪತಿ ನಿಯುತದಿ ।
ನೆನವುತಿದ್ದನು ವೀರನಾರಾಯಣನ ಪದಯುಗವ ॥

Colophon:

ಅಂತು ಸಂಧಿ ೧೨ ಕ್ಕಂ ಪದನು ೧೨೫೬ ಕ್ಕಂ ಮಂಗಳಂ.

ಇದಿ ಶ್ರೀಮದಚಿಂತ್ಯಗದುಗಿನವೀರನಾರಾಯಣಚರಣಾರವಿಂದಮಕರಂದಮಧುಪಾನಪರೀಕ್ಷಿತ ವಚಷ್ಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕ ಭಾರತ ಕಥಾಮಂಜರಿಯೊಳ್ ಸಭಾ ಪರ್ವಂ ಸಂಪೂರ್ಣಂ.

(ವಿ.ವಿ.)—

ಸಭಾಪರ್ವ ಸಮಗ್ರವಾಗಿದೆ. ಬರವಣಿಗೆ ಶುದ್ಧವಾದುದು. ತಪ್ಪುಗಳೂ ಅಲ್ಲಲ್ಲಿ ಇವೆ. ಗ್ರಂಥವು ಶಿಥಿಲವಾಗಿದೆ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೩೬ ನಂಬರಿನಲ್ಲಿ ನೋಡಿ ತಿಳಿಯುವುದು. ಮುದ್ರಿತ ಪ್ರತಿಗಿಂತಲೂ ಈ ಪ್ರತಿಯಲ್ಲಿ ಉತ್ತಮವಾದ ಪಾಠಭೇದ ಗಳೂ ಅಲ್ಲಲ್ಲಿ ಕೆಲವು ಹೆಚ್ಚು ಪದ್ಯಗಳೂ ಕಂಡುಬರುತ್ತಿವೆ.

No. 37. ಭಾರತಕಥಾಮಂಜರಿ.
BHĀRATAKATHĀMAÑJARI.

Subtsance, Śrītāla. Size, $25\frac{1}{2} \times 2$ inches. Pages, 71, Lines, 10 on a page. Character, Kanarese. Condition, fair. Appearance, old. Mode of writing, good and free from mistakes.

Contains the Sabhāparva complete.

Same work as the above; By Nārāyaṇappa. For other particulars vide No. 36 ante.

(ವಿ-ವಿ.)—

ಸಭಾಪರ್ವ ಸಮಗ್ರ. ಸಂಧಿಗಳು ಹದಿನಾರು. ಬರವಣಿಗೆ ಅತ್ಯುತ್ತಮವಾದುದು. ತಪ್ಪುಗಳು ವಿಶೇಷವಾಗಿಲ್ಲ. ಶೈಥಿಲ್ಯ ಗ್ರಂಥಪಾತಗಳಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಶ್ಲಾಘ್ಯವಾದ ಪಾಠಭೇದಗಳಿವೆ ಮಿಕ್ಕ ವಿಷಯ ಗಳನ್ನು ೩೬ ನಂಬರಿನಲ್ಲಿ ನೋಡಿ ತಿಳಿಯುವುದು.

No. 38. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, $15\frac{3}{4} \times 1\frac{1}{2}$ inches. Pages, 176. Lines, 8 on a page. Character, Kanarese. Condition, very much injured. Appearance, very old. Mode of writing, good but not free from mistakes.

Contains the Sabhāparva complete.

Same work as the above. By Nārāyaṇappa. For other particulars vide No. 36 ante.

Date of transcription—Tuesday the 14th day, of the bright fortnight of the lunar month Āśvayuja in the year Sādhāraṇa.

Name of the scribe—Nañjappa who copied this MS. for one Gurikāra Mādayya.

(ವಿ.ವಿ.)—

ಸಭಾಪರ್ವವು ಸಂಪೂರ್ಣವಾಗಿದೆ. ಕಡೆಯ ಒಂದು ಓಲೆಯಲ್ಲಿ ಅರಣ್ಯಪರ್ವದ ಕೆಲವು ಪದ್ಯಗಳಿವೆ. ಬರವಣಿಗೆ ಚೆನ್ನಾಗಿದೆ. ಗ್ರಂಥವು ಅತಿ ಶಿಥಿಲವಾಗಿದೆ. ಗ್ರಂಥದ ಕಡೆಯಲ್ಲಿ "ಸಾಧಾರಣ ಸಂವತ್ಸರದ ಆಶ್ವಯುಜ ಶುದ್ಧ ೧೪ ಅಂಗಾರಕ ವಾರ ಸಾಂಖ್ಯ? ಗುರಿಕಾರರು ಮಾದಯ್ಯನವರಿಗೆ ನಂಜಪ್ಪನು ಬರೆದುಕೊಟ್ಟ ಸಭಾಪರ್ವ ಸಮಾಪ್ತಂ" ಎಂಬುದಾಗಿ ಬರೆದಿದೆ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಉತ್ಕೃಷ್ಟವಾದ ಪಾಠಭೇಧಗಳು ಅನೇಕವಾಗಿ ಕಂಡುಬರುತ್ತಿವೆ. ಉಳಿದ ವಿಷಯಗಳನ್ನು ೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 39. ಭಾರತಕಥಾಮಂಜರಿ.

BHĀRĀTAKATHĀMAÑJARI.

Substance, palm-leaf. Size, $14\frac{1}{2} \times 1\frac{1}{8}$ inches. Pages, 148. Lines, 7 on a page. Character, Kanarese. Condition, much injured. Appearance, very old. Mode of writing, good but not free from mistakes.

Contains nine Sandhis in the Sabhāparva, but wants the first Fol.

Same work as the above. By Nārāyaṇappa. For other particulars vide No. 36 ante.

(ವಿ.ವಿ.)—

ಮೊದಲನೆಯ ಪತ್ರವಿಲ್ಲ. ಸಭಾಪರ್ವದಲ್ಲಿ ಮೊದಲಿನ ಒಂಭತ್ತು ಸಂಧಿಗಳು ಮಾತ್ರವೇ ಇವೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳೂ ಇವೆ. ಅತಿಶಿಥಿಲ. ಪುರಾತನ ಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 40. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, $14\frac{1}{4} \times 1\frac{1}{4}$ inches. Pages, 72. Lines, 5 on a page. Character, Kanarese. Condition, injured. Appearance, old. Mode of writing, good and free from mistakes.

Contains the Sandhis 1—5 complete and 6th Sandhi incomplete in the Sabhāparva.

Same work as the above; by Nārāyaṇappa. For other particulars vide No. 36 ante.

(ವಿ-ವಿ).

ಸಭಾಪರ್ವದಲ್ಲಿ ಮೊದಲಿನ ಐದು ಸಂಧಿಗಳು ಸಮಗ್ರವಾಗಿಯೂ ಆರನೆಯ ಸಂಧಿ ಅಸಮಗ್ರವಾಗಿಯೂ ಇದೆ. ಬರವಣಿಗೆ ಅತ್ಯುತ್ತಮವಾದುದು. ತಪ್ಪುಗಳಿಲ್ಲ. ಶೈಥಿಲ್ಯವಿದೆ. ಪುರಾತನವಾದ ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 41. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, 18 × 1½ inches. Pages, 50. Lines, 10 on a a page. Character, Kanarese. Condition, much injured. Appearance, old. Mode of writing, good and free from mistakes.

Contains from the 14th stanza of the 5th Sandhi and breaks off from the 29th stanza of the 16th Sandhi in the Sabhāparva.

Same work as the above. By Nārāyaṇappa. For other particulars see under No. 36 ante.

(ವಿ.ವಿ.)—

ಅಸಮಗ್ರ. ಸಭಾಪರ್ವದಲ್ಲಿ ಐದನೆಯ ಸಂಧಿಯ ೧೪ ನೆಯ ಪದ್ಯದಿಂದ ಹದಿನಾರನೆಯ ಸಂಧಿಯ ೨೯ ನೆಯ ಪದ್ಯದ ವರೆಗೆ ಮಾತ್ರವೇ ಇದೆ. ಬರವಣಿಗೆ ಅತ್ಯುತ್ತಮವಾಗಿದೆ. ತಪ್ಪುಗಳಿಲ್ಲ. ಅತಿಶಿಥಿಲವಾಗಿದೆ. ಮೇಲೆ ವರ್ಣಿತವಾಗಿರುವ ಗ್ರಂಥವೇ ಸರಿ. ಉಳಿದ ವಿಷಯಗಳನ್ನು ೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No 42. ಭಾರತಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, 17½ × 1½ inches. Pages, 26. Lines, 10 on a a page. Character, Kanarese. Condition, injured. Appearance, old. Mode of writing, good and free from mistakes.

Contains the chapters 1 and 2 only in the Sabhāparvan.

Same work as the above ; by Nārāyaṇappa. For other particulars see under No. 36 ante.

(ವಿ.ವಿ).—

ಸಭಾಪರ್ವದಲ್ಲಿ ಮೊದಲಿನ ಎರಡು ಸಂಧಿಗಳು ಮಾತ್ರವೇ ಸಂಪೂರ್ಣವಾಗಿವೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲವಾಗಿದೆ. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 43. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 14 × 1¾ inches. Pages, 12. Lines, 6 on a page. Character, Kanarese. Condition, slightly injured. Mode of writing, good and free from mistakes.

Contains a small portion in the beginning of the Sabhāparva.

Same work as the above. By Nārāyaṇappa. For other particulars see under No. 36 ante.

(ವಿ.ವಿ.)—

ಸಭಾಪರ್ವದ ಆದಿಯಲ್ಲಿ ಸ್ವಲ್ಪ ಭಾಗ ಮಾತ್ರವೇ ಇದೆ. ಬರವಣಿಗೆ ಶ್ಲಾಘ್ಯವಾದುದು. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲ. ಹಿಂದೆ ವರ್ಣಿತವಾಗಿರುವ ಭಾಗವೇಸರಿ. ಮಿಕ್ಕ ವಿಷಯಗಳನ್ನು ೩೬ ನಂಬರಿನಲ್ಲಿ ನೋಡಿ ತಿಳಿಯುವುದು.

No. 44. ಭಾರತ ಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 18¼ × 1¼ inches. Pages, 251. Lines, 6 on a page Character, Kanarese. Condition, slightly injured. Appearance, old. Mode of writing, good and free from mistakes.

Contains the Araṇyaparva complete.

A rendering in Kanarese in the Bhāminiṣaṭpadi metre, describing the story of the Araṇyaparva of the Sanskrit Mahābhārata: by Kumāravyāsa. For other particulars see under No. 28 ante.

Beginning:

ಸೂ॥ ಸಕಲರಾಜ್ಯವ ನುಳಿದಿವರು ಕಾ।
ವ್ಯಕೆಮಹಾಕಾನನದೊಳಗೆ ಕೀ।
ಚಕಕುಲಾಂತಕ ಕೆಡಹಿದನು ಕಿವಿಸ್ಮಿರದಾನವನ॥

ಕೇಳು ಜನಮೇಜಯ! ಧರಿತ್ರೀ।
ಪಾಲ! ಗಂಗಾತೀರದಲಿ ಭೂ।
ಪಾಲಕರು ಗುರುಭೀಷ್ಮವಿದುರಾದ್ಯಖಿಳಬಾಂಧವರ॥
ಬೀಳುಕೊಟ್ಟರು ಗಜಪುರದ ಜನ।
ಜಾಲವನು ಕಳುಹಿದರು ಗಂಗಾ।
ಕೂಲದುತ್ತರಭಾಗದಲಿ ಮಾಡಿದರು ವಿಶ್ರಮವ॥
ನಿಲಿಸೆ ನಿಲ್ಲದೆ ಬಂದರರಸನ।
ಬಳಿಯಲಗ್ಗದ ಮಂಡಲೇಶರ।
ರೊಲಿದು ಸಾಕಿದ ರಾಜಪುತ್ರರು ಹಲವು ಮನ್ನಣೆಯ॥

ಬಲು ಭಟರು ಬಾಹತ್ತರದ ನಿ ।
ಶ್ಚಲನಿಯೋಗಿಗಳಾಶ್ರಮಿಗಳ ।
ಗ್ಗಳಿಯ ವಿಪ್ರಸ್ತೋಮ ಬಂದುದು ಕೋಟಿ ಸಂಖ್ಯೆಯಲಿ ॥

ತಿರುಗಿ ಕಂಡನು ಭೂಮಿ ಭಾರದ ।
ನೆರವಿಯನು ಮೊಗಿನಲಿ ಬೆರಳ ।
ಟ್ಟರಸ ತಲೆದೂಗಿದನು ಸುಯ್ದನು ಬಯ್ದು ದುಷ್ಕೃತವ ॥

ಧರಣಿ ಸೇರಿದುದಹಿತರಿಗೆ, ಕರಿ ।
ತುರಗರಥವಿಮಗಿಲ್ಲ, ವಿಪಿನದ ।
ಪರಿಬವಣೆಗಿವರೇಕೆ ಬೆಸಗೊಳು ಭೀಮ ನೀನೆಂದ ॥

ನಿಲ್ಲಿರೈ ದ್ವಿಜನಿಕರ ಕಳುಹಿಸಿ ।
ಕೊಳ್ಳಿರೈ ಪುರವರ್ಗ ನೇಮವ ।
ಕೊಳ್ಳಿರೈ ಪರಿವಾರ ಮಕ್ಕಳತಂಡ ಮೊದಲಾಗಿ ॥

ಎಲ್ಲಿಮಳೆ ಮರಗಾಡು ಪಲ್ಲವ ।
ಫುಲ್ಲಫಲಪಾನೀಯಪೂರಿತ ।
ವೆಲ್ಲ ರಾಯನ ಸೆಜ್ಜೆಯರಮನೆಯೆಂದನಾ ಭೀಮ ॥

* * * *

ಡೆಂಡಣಿಸಿ ಸುರವೈರಿ ದೊಪ್ಪನೆ ।
ದಿಂಡುಗೆಡೆದನು ನೀಲಶೈಲದ ।
ದಂಡಿಕಾರನ ದೇಹಗರ್ತದ ರಕ್ತನಿರ್ಝರವ ॥

ದೊಂಡೆಗರುಳನ ಬಾಯಜೋಲಿನ ।
ಕುಂಡಲಿತಕರ ಜಂಘೆಗಳ ಬಿಡು ।
ಮುಂಡೆಗೆದರಿನ ಖಳನ ಕಂಡುದು ಭೂಸುರವ್ರಾತ ॥

ಅರಸ ! ಹೇಳುವುದೇನು ? ಹೋರಿದ ।
ನರಗಳಿಗೆ ಕೊಂಡಾಡಿ ಬಳಿಕೆ ।
ಟ್ಟೊರಸಿ ಹುಡಿಯಲಿ ಹೂಳಿದನು ಕಿರ್ಮೀರದಾನವನ ॥

ಬೆರಸಿತೀ ವಿಪ್ರಾಶ್ರಮವೀ ಮುನಿ ।
ವರಿಯರೀ ಕಾಮಿನಿಯರೀ ನೃಪ ।
ವರನ ಪರಿಕರವಾ ಮಹಾಕಾಮ್ಯಕ ವನಾಂತರವ ॥

ಕಳತು ಬಿಟ್ಟುದು ಕೂಡೆ ಹರಹಿನ ।
ಹಳುವಲೀ ದ್ವಿಜನಿಕರ ರಚಿಸಿದ ।
ತಳರಗುಡಿಗಳ ಪರ್ಣಶಾಲೆಯ ಭದ್ರಭವನಿಕೆಯ ॥

ಮೆಳೆಯ ಮಂಟಪ ಹೊದರುದುರುಗಲ ।
ನೆಳಲ ಚೌಕಿಗೆ ವಿಪುಳವಬಸಂ ।
ಕುಲದೊಳೋಲಗಶಾಲೆ ಮೆರೆದುದು ಧರ್ಮನಂದನನ ॥

ಆ ಸಕಲ ಸಾಮ್ರಾಜ್ಯ ಲಕ್ಷ್ಮಿ ವಿ ।
ಲಾಸದರಮನೆಗಳನು ಮರೆಸಿದು ।
ದೀ ಶರಭ ಶಾರ್ದೂಲಸೇವಿತಘೋರಕಾಂತಾರ ॥
ಆ ಸುಧಾಕಲಿತಾನ್ನವನು ಫಲ ।
ರಾಶಿಯಾದುದು ಗೇಯರಸವಿ ।
ನ್ಯಾಸವನು ಮಧುಮಕ್ಷಿಕವ್ರಜಜಂಬುಕಧ್ವಾನ ॥
ದಿನಪ ಕೃಪೆಮಾಡಿದನಲ್ಲೈ ಕಾಂ ।
ಚನಮಯದ ಭಾಂಡವನು ಬಳಿಕಾ ।
ವನಜಮುಖಿ ಮಾಡಿದ ಸುಪಾಕದ ಷಡುರಸಾನ್ನದಲಿ ॥
ಮುನಿಜನಕೆ ಪರಿಜನಕೆ ಭೂಸುರ ।
ಜನಕೆ ತುಷ್ಟಿಯಮಾಡಿ ಭೂಪತಿ ।
ಬನದೊಳರ್ದನು ವೀರನಾರಾಯಣನ ಕರುಣದಲಿ ॥

Colophon :

ಇಂತು ಪ್ರಥಮಸಂಧಿ ಸಂಪೂರ್ಣಂ.

ಸಕಲ ಯದುಬಲಸಹಿತ ಭಕ್ತ ।
ಪ್ರಕರಪಾಲಕನೊಲವು ಮಿಗೆ ಕಾ ।
ಮ್ಯಕಮಹಾಕಾನನಕೆ ಬಿಜಯಂಗೈದನಸುರಾರಿ ॥
ಅರಸ ! ಕೇಳೈ ದ್ವಾರಕಾಪುರ ।
ವರಕೆ ಬಂದುದಾ ವಾರ್ತೆ ಪೀತಾಂ ।
ಬರನ ಬಹಳಾಸ್ಥಾನದಲಿ ವರ್ತಿಸಿದುದಡಿಗಡಿಗೆ ॥
ಧರೆಸಹಿತ ನಿಜವಸ್ತುವಾಹನ ।
ಪುರದ ವಿಭವವ ಬಿಸುಟು ಭಾರಿಯ ।
ಪರಿಭವದಿ ನಟ್ಟಡವಿಯೊಕ್ಕರು ಪಾಂಡುಸುತರೆಂದು ॥

* * *

ಎಲವೊ ರಾಯನ ಹೇಳಿಕೆಯೊಳಂ ।
ಡಲೆದೆನೆನ್ನನು ಚಿತ್ರಸೇನಕ ।
ನಲುಗಿನಟ್ಟಪು ಕಾಮಶರವೆನ್ನಂತರಂಗದಲಿ ॥
ಒಲಿದು ಬಂದಬಲೆಯರ ಧಿಕ್ಕರಿ ।
ಗಳೆವುದೇ ವಿಟಧರ್ಮವಕಟಾ ।
ತಿಳಿಯಲಾ ತಾನಾವಳೆಂಬುದನೆಂದಳಿಂದುಮುಖಿ ॥
ಶಿವಶಿವಾ ! ಮಾತೇಕೆ ಕಾಮನ ।
ಬವಣೆಯಲಿ ನೀವರಿಯದಿರೆ ವಾ ।
ಸವನ ನೇಮವು ಚಿತ್ರಸೇನನ ನುಡಿಗಳಂತಿರಲಿ ॥
ಎವಗಕರ್ತವ್ಯದಲಿ ಮನಸಂ ।
ಭವಿಸುದೆ ? ನೀವೆಮ್ಮ ವಂಶೋ ।
ದ್ಭವಕೆ ಜನನಿಯಲಾ (ಎನುತೆ) ಕಯ್ಮುಗಿದು ಕೊಡಮುಟ್ಟಿ ॥

ನಾರಿ ! ನೀಪೂರ್ವದಲಿ ನಮ್ಮ ಪು ।
ರೂರವನ ಸತಿ ನಿನಗೆ ಬಳಿಕ ಕು ।
ಮಾರ ಜನಿಸಿದ ನಾಯುವಾತ್ರನೊಳದಿಸಿದನು ನಹುಷ ॥
ವೀರರಾಜಪರಂಪರೆಯು ಬರ ।
ಲಾರಿಗಾವುದಿಸಿದೆವು ನಮ್ಮ ವಿ ।
ಚಾರಿಸಿದಿದಿಲ್ಲಾ ಎನುತ ವಿನಯದಲಿ ನರ ನುಡಿದ ॥
ಪ್ರಣವದರ್ಥವಿಚಾರವೆತ್ತಲು ।
ಗಣಿಕೆಯರ ಮನೆಯಲಿ ಸ್ವರಾಕ್ಷರ ।
ಗಣಿತಲಕ್ಷಣವೆತ್ತ ? ರತಿಕೇಳೀವಿಧಾನದಲಿ ।
ಒಣಗು ಭಾರತವರ್ಷದವಧಿರ ।
ಭಣಿತೆಯುಮ್ಮಿ ದೇವಲೋಕಕೆ ।
ಸಣಭಿಸಾರವೆ ಚೈತ್ರರಥದೊಳಗೆಂದಳಿಂದುಮುಖಿ ॥

End :

ನೀವು ಪಾಂಡವರೆಂದು ನಿಮ್ಮನ ।
ದಾವ ಮಾನವರರಿಯದಿರಲಿ ಮ ।
ಹಾವಿಭವದಲಿ ಬೆಳಗುವುದು ಬಳಿಕವನಿಮಂಡಲವ ॥
ದೈವಬಲ ನಿಮಗುಂಟು ಮೇಣಿ ।
ನ್ನಾವುದರಿದಿಲ್ಲೆಂದು ತನುಜನ ।
ನೋವಿ ಮನ್ನಿಸಿ ಬೀಳುಕೊಟ್ಟನು ಪಾಂಡುನಂದನರ ॥
ಅರಣಿಯನು ತಂದಿತ್ತು ಧರಣೀ ।
ಸುರನ ಮನ್ನಿಸಿ ಮುನಿಗಳನು ಭೂ ।
ಸುರರ ಸಚಿವರ ಪರಿಕರರ ಧೌಮ್ಯಾದಿ ಮಂತ್ರಿಗಳ ॥
ವರಸುಭದ್ರಾದೇವಿ ಪಾಂಚಾ ।
ಲರನು ಧೃಷ್ಟದ್ಯುಮ್ನ ಮೊದಲಾ ।
ಗಿರೆ ನಿಜಾಪ್ತರನವರವರ ಮಂದಿರಕೆ ಕಳುಹಿದನು ॥
ಕಾಲದವಧಿಯು ಕಡೆ[ಯಲಾ] (ಯೊಳಗೆ) ।
ಕಾಲಾಂತಕನ ಕೃಪೆ ಪಡೆದು (ಸಂ) ।
ಲೀಲೆಯಲಿ ಮಹೀಪಾಲಕರು ತಮ್ಮಾಶ್ರಮಕೆ ನಡೆತಂದು ॥
ಮೇಲಣಾಜ್ಞಾತವನು ಪಂಥದ ।
ಮೇಲೆ ನೋಡಲುಬೇಕೆನುತ ಭೂ ।
ಪಾಲ ಚಿಂತಿಸಿ ನೆನೆವುತಿರ್ದನು ವೀರನಾರಯಣನ ॥
ಹರಿ ! ನಮೋ ಜಯ, ಭಕ್ತಧಘಸಂ ।
ಹರ ! ನಮೋ ಜಯ, ಸಕಲ ಭುವನೇ ।
ಶ್ವರ ! ನಮೋ ಜಯ, ಕೃಷ್ಣ ! ಕೇಶವ ! ವಿಷ್ಣು ! ವಾಮನನೆ ! ॥
ಪರಮಪುಣ್ಯಶ್ಲೋಕ ! ಜಯ, ಜಗ ।
ಭರಿತ ! ನಿರ್ಮಳರೂಪ ! (ಜಯ ಜಯ), ।
(ಕರುಣಿ) ! ರಕ್ಷಿಸು ರಾಯ ! ಗದುಗಿನ ವೀರನಾರಯಣ ! ॥

Colophon :

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧುಪಾನಪರೀಕ್ಷಿತವಚಷ್ಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕಭಾರತಕಥಾಮಂಜರಿಯೊಳ್ ಅರಣ್ಯಪರ್ವಂ ಸಮಾಪ್ತಂ.

(ವಿ-ವಿ.)—

ಅರಣ್ಯಪರ್ವ ಸಮಗ್ರ. ಬರೆವಣಿಗೆ ಉತ್ತಮವಾದದು. ತಪ್ಪುಗಳು ಕಡಿಮೆ. ಸ್ವಲ್ಪ ಶಿಥಿಲ. ಮುದ್ರಿತ ಗ್ರಂಥಕ್ಕಿಂತಲೂ ಇದರಲ್ಲಿ ಅಲ್ಲಲ್ಲಿ ಶ್ಲಾಘ್ಯವಾದ ಪಾಠಭೇದಗಳು ಕಂಡುಬರುತ್ತಿವೆ. ಕೆಲವು ಕಡೆ ಪದ್ಯಗಳೂ ಹೆಚ್ಚಾಗಿವೆ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 45. ಭಾರತ ಕಥಾಮಂಜರಿ- BHĀRATAKATHĀMAÑJARI.

Substance, Śrītāla. Size, 25½ × 2 inches. Pages, 58. Lines, 14 on a page. Character, Kanarese. Condition, fair. Appearance, very old. Mode of writing, very good and free from mistakes.

Contains the Araṇyaparva complete.

Same work as the above. By Nārāyaṇappa. For other particulars see under No. 44 ante.

(ವಿ-ವಿ.)—

ಅರಣ್ಯಪರ್ವ ಸಮಗ್ರ. ಸಂಧಿಗಳು ೨೦. ಬರವಣಿಗೆ ಅತ್ಯುತ್ತಮವಾದುದು. ತಪ್ಪುಗಳು ಅಷ್ಟಾಗಿ ಕಂಡುಬರುವುದಿಲ್ಲ. ಶೈಥಿಲ್ಯವೂ ಗ್ರಂಥಪಾತವೂ ಇಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಮುದ್ರಿತ ಪ್ರತಿಗಿಂತಲೂ ಉತ್ತಮವಾದ ಪಾಠಭೇದಗಳು ಇದರಲ್ಲಿವೆ. ಮಿಕ್ಕ ವಿಷಯಗಳನ್ನು ೪೪ ನಂಬರಿನಲ್ಲಿ ನೋಡಿ ತಿಳಿಯುವುದು.

No. 46. ಭಾರತಕಥಾಮಂಜರಿ- BHĀRATAKATHĀMAÑJARI.

Substance, palm-leaf. Size, 11¼ × 1½ inches. Pages, 202. Lines, 5 on a page. Character, Kanarese. Condition, fair. Appearance, old. Mode of writing, fair but not free from mistakes.

Contains the Sandhis 1—9 in the Araṇyaparva.

Same work as the above. By Nārāyaṇappa. For other particulars see under No 44 ante.

(ವಿ-ವಿ.)—

ಅರಣ್ಯಪರ್ವದಲ್ಲಿ ಒಂಭತ್ತು ಸಂಧಿಗಳು ಮಾತ್ರವೇ ಇವೆ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಶೈಥಿಲ್ಯವೂ ಗ್ರಂಥಪಾತವೂ ಇಲ್ಲವೆನ್ನಬಹುದು. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಮಿಕ್ಕ ವಿಷಯಗಳನ್ನು ಹಿಂದಿನ ೪೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 47. ಭಾರತ ಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, $15\frac{1}{2} \times 1\frac{9}{16}$ inches. Pages, 82. Lines, 7 on a page. Character, Kanarese. Condition, much injured. Appearance very old. Mode of writing, good and free from mistakes.

Contains the Sandhis 1—8 complete and the 9th incomplete in the Araṇyaparva.

Same work as the above ; by Nārāyanappa. For other particulars see under No. 44 ante.

(ವಿ-ವಿ.)—

ಅಸಮಗ್ರ. ಭಾರತಾಂತರ್ಗತವಾದ ಈ ಅರಣ್ಯಪರ್ವದಲ್ಲಿ ಒಂದರಿಂದ ಎಂಟು ಸಂಧಿಗಳು ಸಮಗ್ರವಾಗಿಯೂ ಒಂಭತ್ತನೆಯ ಸಂಧಿ ಅಸಮಗ್ರವಾಗಿಯೂ ಇವೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಲ್ಲ. ಪುಸ್ತಕವು ಅತ್ಯಂತ ಶಿಥಿಲವಾಗಿದೆ. ಮೇಲೆ ಉದಾಹೃತವಾಗಿರುವ ಗ್ರಂಥವೇಸರಿ. ಮಿಕ್ಕ ವಿಷಯಗಳನ್ನು 44 ನಂಬರಿನಲ್ಲಿ ನೋಡುವುದು.

No. 48. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, $14\frac{1}{4}$—$1\frac{1}{4}$ inches. Pages, 66. Lines, 7 on a page. Character, Kanarese. Condition, Slightly injured. Appearance old. Mode of writing, good but not free from mistakes. The other works herein are (1) Maggigalu (2) Śṛṅgāradahādugalu Gantisakuna.

Contains the Indrakīlaparva complete.

A portion of the Araṇyaparva in the Mahābhārata, narrating the story that led to the combat between Śiva disguised as a hunter and Arjuna, while the latter was doing penance in the Indrakīla mountain for obtaining the Pāśupatāstra and the manner in which Arjuna got this Astra from Śiva, who, pleased with the devotion and valor of the devotee, revealed himself to Arjuna.

Beginning :

ಸೂ ॥ ಭಜಿಸಿದನು ನರನಿಂದ್ರಕೀಲದೊ ।
ಳಜಸುರಾರ್ಚಿತಚರಣಕಮಲನ ।
ತ್ರಿಜಗದಧಿಪತಿಯನು ಮಹಾ ನಟರ್ಕ್ಷಯ ಧೂರ್ಜಟಿಯ ॥
ಕೇಳು ಜನಮೇಜಯಧರಿತ್ರೀ ।
ಪಾಲ ಪಾಂಡುಕುಮಾರರಡವಿ(ಯ) ।
ಪಾ[ಳ](ಳ)ಯಲಿ ಪಳುಕವಿಸಿದರು ಪದಯುಗಪರಿಭ್ರಮವ ॥
ಲೋಲಲೋಚನೆಸಹಿತ ತತ್ಕ್ಕಲ ।
ಶೈಲದಲಿ ತದ್ವಿಪಿನದಲಿ ತ ।
(ಕ್ಕಲ)ವ . ಳ ತೀದಲಿ ತೊಳಲಿದರು ಬೇಸಱದೆ ॥

ಫಲವ್ಯಗಾವಳ ಸ[ವ](ವೆ)ದು [ಬ](ದಿ)ನ್ನೀ ।
ಹಳುವ ನಾಕಿನ್ನೊಂದರಣ್ಯಾ ।
ಸ್ಥಳವ ನೋಡಲಿ ಕಟಕ ನಡೆಯಲಿ ವಿಪ್ರಸಂಕುಲವ ॥
ಸುಲಭವೀ ವನವೆಂದು ತಮ್ಮೊಳು ।
ತಿಳದು ಪಾರ್ಥಯುದಿಷ್ಠಿರರು ಮುನಿ ।
ಕುಲಸಹಿತ ನೆಲವಿನಲಿ ಹೊಕ್ಕರು ದ್ವೈತಕಾನನವ ॥
ಅರಸ ಕಳುಹಿದ ದೂತನಾ ಗಜ ।
ಪುರವ ಹೊಕ್ಕು ತದೀಯನಾಶರ್ಿ ।
ಭರಿಣೇಷವನಱಿದು ಬಂದನು ಕಂಡೆನವನಿಪನ ॥
ಕುರುನೃಪಾಲನ ಸಿರಿಯನಾತನ ।
ಪರಿಯನಾತನ ಬಲುಹನಾತನ ।
ಯಿರವನರುಹಿದನಬುಜಮುಖಿಪವನಜರು ಕಳವಳಿಸೆ ॥
ಮೂವಲಿಸಿದಳು ದೃಪದತನುಜೆ ವೃ ।
ಕೋದರನ ಪಲುಗುಣನ ಧರ್ಮಜ ।
ನಾದಿಯಾದ್ವೈವರನು ಕೌರವನೃಪನ ಪತಿಕರಿಸಿ ॥
ಆದೊಡಿದೆ ಕುರುರಾಯವಂಶ ।
ಚ್ಛೇದಧೀರಕುಠಾರ(ವಿನುತ)ವೃ ।
ಕೋದರನು ತೂಗಿದನು ಗದೆಯನು ಗಾಢಕೋಪದಲಿ ॥

* * * *

ಹರಡೆ ವಾಮದೊಳುಲಿಯೆ ಮಧುರ ।
ಸ್ವರದಲಪಸವ್ಯದಲಿ ಹಸು[ಜನ](ಬನ) ।
[ಬಲ](ಸರ) ಸಮಾಹಿತವಾಗೆ ಸೂರ್ಯೋದಯಾದ ಸಮಯದಲಿ ॥
ಹರಿಣ ಭಾರದ್ವಾಜನುಡಿಕೆಯ ।
ಸರಟನಕುಲನ ತಿದ್ದುಗಳ ಕು ।
ಕ್ಕುರನ ತಾಳಿನ ಶಕುನವನು ಮನ್ನಿಸುತ ನಡೆತಂದ ॥
ನೀಲಕಂಠನ ಮನದ ಬಯಕೆಗೆ ।
ನೀಲಕಂಠನೆ ಬಲಕೆ ಬಂದನು ।
ಮೇಲು ಪೋಗಿನ ಸಿದ್ಧಿ ದೈತ್ಯಾಂತಕನ ಕರುಣವಲಿ ॥
ಕಾಲಗತಿಯಲಿ ಬಳಿಕ ಪರರಿಗೆ ।
ಕಾಲಗತಿಯನು ಕಾಂಬೆನೈಸಲೆ ।
ಶೂಲಧರನೇ ಬಲ್ಲನೆನುತೈತಂದನಾ ಪಾರ್ಥ ॥

* * * *

ಮಗನೆ ನಿನ್ನಯ ಮನದ ನಿಷ್ಠೆಗೆ ।
ಸೊಗಸಿದೆನು ಹಿರಿದಾಗಿ ಹರನಿ ।
ಲ್ಲಿಗೆ[ಯು ತಾನೇ]ಬರಲಿ ಕರುಣಿಸಲಿ ನಿನ್ನ ಮನೋಭಿವಾಂಛಿತವ ॥

ಹಗೆಗೆ ಹ[ರು](ರಿ) ವಹುದೆಂದು ಸುರಮೌ ।
ಳಿಗಳ ಮಣಿ ಸರಿದನು ವಿಮಾನದ ।
ನಗಧರನ ಮೈದುನನ ಮಹಿಮೆಯನಿನ್ನು ಕೇಳೆಂದ ॥

Colophon:

ಅಂತು ಸಂಧಿ ೩ಕ್ಕಂ ಮಂಗಳಮಹಾ.

ಸೂ ॥ ಮುನಿನಿಕರ ಬಿನ್ನೈಸೆ ಕರುಣಾ ।
ವನಧಿ ಶಂಭು ಕಿರಾತಮಯರೂ ॥
ಪಿನಲಿ ಹೊಕ್ಕನು ಬನದೊಳೆಚ್ಚನು ಮೂಕದಾನವನ ॥
ಮರಳದನು ದೇವೇಂದ್ರನತ್ತಲು ।
ಹರನೊಡನೆ ಹೊರೆಯೆತ್ತಿದಂತಃ ।
ಕರಣ ಹಿಗ್ಗಿತು ಹುದುಗಿದನು ಬಹಿರಂಗಭಾವನೆಯ ॥
ಧರಣಿ ಮೊದಲೆನೆ ಭೂತಪಂಚಕ ।
ಮರುತಪಂಚಕವಿಷಯಧಿಂದ್ರಿಯ ।
ಕರಣವಿಪ್ಪತ್ತೈದು ತತ್ವಾತ್ಮಕನ ಭಾವಿಸಿದ ॥

* * * *

ಈಡ್ಡಿರಿದುದೊಂದೊಂದರಲಿ ಹೊಗೆ ।
ಝಾಡಿಝುಳಪಿ[ಸಿ](ಸು) ವುರಿಗಳಲಿ ಸರ ।
ಳೋಡಿದುದು ಗಾಂಢಿವವನೊದೆದು ಮಹೇಶನಿದಿರಿನಲಿ ॥
ಕಾಡಿದರೆ ಕಾರುಣ್ಯನಿಧಿ ಕೊಂ ।
ಡಾಡುತಿರ್ದನು ಪಾರ್ಥನಂಬಿನ ।
ಮೂಡಿಗೆಯ ಸಂವರಣೆ ಸವೆದುದು ಸವೆಯದಾಟೋಪ ॥
ಎಲೆಕಿರಾತ್ರ ಕಿರಾತರೊಳಗ ।
ಗ್ಗಳೆಯನಹೆಯೋ ದೇವದಾನವ ।
ರೊಳಗೆ ಸೈರಿಸಿ ನಿಲುವನಾವನು ನಮ್ಮ ವಿಲಗದಲಿ ॥
ಅಳುಕದಿರು ಕಲಿಯಾಗೆನುತ್ರ ತುದಿ ।
ಹಿಳುಕ ಮಂತ್ರಿಸಿ ದಿವ್ಯಬಾಣಾ ।
ವಳಿಗಳಲಿ ಬಾಲೇಂದುಮೌಳಿಯನೆಚ್ಚನಾ ಪಾರ್ಥ ॥

End:

ಎಮಗೆ ಮಗನರ್ಜುನನು ನೀನಿಂ ।
ದೆಮಗೆ ಸೊಸೆಯಹುದಾತ್ರನಂತ್ರ ।
ಸ್ತೈಮಿರವನು[ಕೆ] (ತೊ)ಳೆ ನಿನ್ನ ಕುಚಯುಗಕಾಂತಿಲಹರಿಯಲಿ ॥
ಕಮಲಮುಖಿ ನೀ ಕಮಲಪಾಶನು ।
ಭ್ರಮರ ! ನೀ ಸುರವನದ (ಸಿರಿ) ಮಧು ।
ಸಮಯವರ್ಜುನನೆಂದು ಬೆಸಸಿದನಮರಪತಿಯೆಂದ ॥
ಕೇಳುತಿರೆ ರೋಮಾಂಚ ಲಜ್ಜೆಯ ।
ಜೋಳ ಯೊದ್ದುದು ಝೋಂಪಿಸಿತು ಪ್ರಳ ।
ಕಾಳಚಯವನು ಫಂಶಿಸಿಧುದನುರಾಗದಭಿಮಾನ ॥

ಮೇಲೆ ಮೇಲಭಿಲಾಷೆ ಧೈರ್ಯವ ।
ಚಾಳಿವಿಸೆ ಪರಿತೋಷಪೂರಣ ।
ದೇಳುವುಳುಗಾಯ್ತುತ್ತರಕೆ ನಸು ಬಾಗಿದಳು ಶಿರವ ॥

ಆತನುತ್ತಮನಾಯಕನು ವಿ ।
ಖ್ಯಾತೆ ನೀ ಸುರಲೋಕದಲಿ ಲ ।
ಜ್ಜಾತಿಶಯವೇಕಿಲ್ಲಿನಾನೇ ನಿಮ್ಮ ಪರಿವಾರ ॥

ಸ್ತೋತಡೆಯು ದಿಟ ಭಂಗವಿಲ್ಲ ಪು ।
ರಾತನದ ನಳನಹುಷಭರತಯ ।
ಯಾತಿನೃಪರೊಳಗೀತ ವೆಗ್ಗಳನಬಲೆ ಕೇಳೆಂದ ॥

ರಾಯನಟ್ಟಿದ ನೇಮ ಗಡ ರಮ ।
ಣೀಯುವಲ್ಲಾ ನಿನ್ನ ನುಡಿ ಕಮ[ಲ] ।
ನೀಯುತರವಿದು ನಿನ್ನ ರಚನೆ ಮಹಾನುಭಾವವಲೆ ॥

ಆಯಿತಿನು ನೀವೇಳಿ ಯೆಂದಬು ।
ಜಾಯತಾಕ್ಷಿ ಮನೋತ್ಸವದಿ ನಾ ।
ರಾಯಣನ ವೈದುನನ ಬರೆದಳು ಚಿತ್ರಭಿತ್ತಿಯಲಿ ॥

Colophon :

ಅಂತು ಸಂಧಿ 6 ಕ್ಕಂ ಮಂಗಳಂ.

ವಿ.ವಿ.—

ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಶಿವನನ್ನು ಮೆಚ್ಚಿಸಿ ಪಾಶುಪತವನ್ನು ಪಡೆದ ಕಥೆಯು ವರ್ಣಿತವಾಗಿದೆ. ಶಿಥಿಲ. ತಪ್ಪು ಕಡಿಮೆ. ಇದನ್ನು ರಚಿಸಿದ ಕವಿಯ ವಿಷಯ ಮೊದಲಾದುವುಗಳನ್ನು ೪೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇಂದ್ರಕೀಲವಿಜಯಸಂಧಿ ಸಮಗ್ರ, ಪಾಂಡವರ ಅರಣ್ಯವಾಸದಲ್ಲಿ ಅರ್ಜುನನು ವೇದ ವ್ಯಾಸರ ಉಪದೇಶದಂತೆ ಇಂದ್ರಕೀಲಪರ್ವತಕ್ಕೆ ಹೋಗಿ ತಪಸ್ಸು ಮಾಡುತ್ತಿರುವಾಗ ಅವನ ತಪಸ್ಸಿಗೆ ಮೆಚ್ಚಿದ ಪರಮೇಶ್ವರನು ಕಿರಾತ ರೂಪದಿಂದ ಬರಲು ಇಬ್ಬರಿಗೂ ಒಂದು ಹಂದಿಯ ಬೇಟೆಯ ವಿಷಯವಾಗಿ ಮಾತು ನಡೆದು ಯುದ್ಧವಾಗುವ ಸಂದರ್ಭದಲ್ಲಿ ಪರಮೇಶ್ವರನು ಅರ್ಜುನನ ಪರಾಕ್ರಮಕ್ಕೆ ಮೆಚ್ಚಿ ಪಾಶುಪತಾಸ್ತ್ರವನ್ನು ಅನುಗ್ರಹಿಸಿದ ಕಥೆಯು ಇದರಲ್ಲಿ ವರ್ಣಿತವಾಗಿದೆ. ಇದು ಕುಮಾರವ್ಯಾಸನ ಅರಣ್ಯಪರ್ವದ ಒಂದು ಭಾಗ. ಬರೆವಣಿಗೆ ಚೆನ್ನಾಗಿದೆ. ಅಶುದ್ಧ; ಸ್ವಲ್ಪಶಿಥಿಲ. ಪುರಾತನ ಪ್ರತಿ. ಇದರಲ್ಲಿ ಮಗ್ಗಿಗಳೂ, ಶೃಂಗಾರದ ಹಾಡ್ಯಗಳೂ ಸೇರಿವೆ. ಮಿಕ್ಕ ವಿಷಯಗಳನ್ನು ೪೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 49. ಭಾರತ ಕಥಾಮಂಜರಿ-

BHĀRATAKATHĀMAÑJARI

Substance, Palm-leaf. Size, $14 \times 1\frac{1}{4}$ inches. Pages 34. Lines, 7 on a page Character, Kanarese, Condition, injured. Appearance, old. Mode of writing, good and free from mistakes.

Contains the Indrakīlavijayasandhi incomplete.

Same work as the above; by Nārāyaṇappa

ವಿ.ವಿ —

ಅರಣ್ಯಪರ್ವದಲ್ಲಿ ಇಂದ್ರಕೀಲ ವಿಜಯದ ಭಾಗವು ಮಾತ್ರವೇ ಇದೆ. ಅಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ೪೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 50. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, $20\frac{3}{4} \times 1\frac{9}{16}$ inches. Pages, 256. Lines, 8 on a page. Character, Kanarese. Condition, most injured. Appearance, very old.

Contains from the 12th stanya of Sabhāpaıva to the end of Aranyaparva.

Same work as the above.

ವಿ.ವಿ.—

ಸಭಾಪರ್ವದ ೧೨ ನೆಯ ಪದ್ಯದಿಂದ ಅರಣ್ಯಪರ್ವ ಪೂರ್ಣವಾಗಿ ಇದೆ. ಅತ್ಯಂತ ಶಿಥಿಲ, ಅಕ್ಷರಗಳು ಚೆನ್ನಾಗಿವೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಈ ಗ್ರಂಥದ ವಿಷಯವಾಗಿ ಹೆಚ್ಚು ಬಯಸುವವರು ೨೮, ೪೪ ನೆಯ ನಂಬರುಗಳನ್ನು ನೋಡತಕ್ಕದ್ದು.

No. 51. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, $18\frac{1}{4} \times 1\frac{1}{4}$ inches. Pages, 136. Lines, 6 on a page. Character, Kanarese. Condition, Slightly injured. Appearance, old. Mode of writing, good and free from mistakes.

Contains the Virāṭaparva complete.

A rendering in Kanarese of the Virāṭaparva of the Sanskrit Mahābhārata; by Nārāyaṇappa. For other particulars regarding the author, see under No. 28 *ante*.

Beginning:

ಕಾಯಿದರು ಸತ್ಯವನು ವನವಾ ।
ಸಾಯತವ ನೆರೆ ಗೆಲಿದು ಪಾಂಡವ ।
ರಾಯರೋಲೈಸಿದರು (ಬಂದು ವಿರಾಟನಗರಿಯಲಿ) ॥
ಕೇಳು ಜನಮೇಜಯ ! ಧರಿತ್ರೀ ।
ಪಾಲ! ನೃಪಜನವುನಿಜಸಂಗಳ ।
ಬೀಳು ಕೊಟ್ಟನು ಭೂಮಿಪತಿ ಬಲವಂದು ಹುತವಹನ
ಮೇಲು ಶಕುನದ ಚಾರುನಿನದವ ।
ನಾಲಿಸುತ ಸೋದರರು ಸಹಿತ ವ ।
ನಾಲಯುವ ಹೊರವಂಟು ಸಾರಿದರೊಂದು ವಟಕುಜವ ॥
ಬಂದು ವಟಕುಜದಡಿಯಲನಿಬರು ।
ನಿಂದು ದ್ರೌಪದಿ ಸಹಿತ ಬಳಲಿಕೆ ।
ಯಿಂದ ವಿಶ್ರಮಿಸಿದರು ಚಿಂತಿಸಿ ಧರ್ಮನಂದನನು ॥
ಹಿಂದೆ ಹನ್ನೆರಡಬುದ ಸವೆದುವು ।
ಮುಂದಣನುವಿನ್ನೇನು ಗತಿ ಬಳಿ ।
ಕೊಂದು ವರುಷಜ್ಞಾತವಾಸಕ್ಕಾವ ಠಾವೆಂದ ॥

ಬಡಗಲವರದು ಮೂಡಣರಸುಗ ।
ಳೊಡಗೆಣೆಯರಾಗಿಹರು ತೆಂಕಣ ।
ಕಡಿಯುವರು ಕಂಡಿಹರು ಕೆಲಬಲದವರು ಕೊಂಡೆಯರು ॥
ಪಡುವಣವರತಿ ಕೃಶರು ತಮಗಿ ।
ನ್ನಡಗಿರಲು ತೆರಹಾವುದೆಂದೆನೆ ।
ನುಡಿದನರ್ಜುನದೇವನವನೀಪತಿಗೆ ವಿನಯದಲಿ ॥
ಒಳತವನು ಹೊಕ್ಕಿರಿದು ಕೌರವ ।
ರೊಳಗೆ ಹಗೆಯಾಗಿಹನು ಕೀಚಕ ।
ಬಲವಿರಾಟಂಗವನ ದೆಸೆಯಲಿ ಭಯವಿಹೀನವದು ॥
ಮುಳಿದು ಹೇಳಿಕೆಯಾನ ರವಿಸುತ ।
ಕಲಿ ತ್ರಿಗರ್ತಾದಿಗಳೆನಿಪ ಮಂ ।
ಡಳಿಕರನು ಕೈಕೊಳ್ಳದಾಳುವರವರು ಪಶ್ಚಿಮವ ॥
ನೃಪತಿ ನಿಶ್ಚಯಿಸಿದನು ಮತ್ಸ್ಯ ।
ಧಿಪನ ನಗರಿಯೊಳಲ್ಲಿ ಸ್ಥೈರಿಸಿ ।
ಕೃಪಣ ತನದಲಿ ನೂಕ ಬೇಹುದು ನುಡಿದ ವತ್ಸರವ ॥
ಗುಪಿತವೇಂ ತಳವಡುವುದಾಶ್ರಯ ।
ದಪದೆಸೆಯುಸೆಂತಾನುವಿರಿ ನಿ ।
ಷ್ಕೃಪೆಯೊಳಾನೆಂತೆಂಬೆನೆಂದನು ಧರ್ಮನಂದನನು ॥
ದೇವ! ನಿಮ್ಮಾಯತವ ನಿಃಪೆಮ ।
ಗಾವ ವೇಷದ ವಿವರವೆಂಬುದ ।
ನೀವು ಬೆಸಸುವುದೆಂದು ಭೀಮಾರ್ಜುನರು ಬಿನ್ನೈಸೆ ॥
ನಾವು ಭೂಸುರವೇಷದಲಿ ಸಂ ।
ಭಾವಿತರು ಮತ್ತಲ್ಲಿ ಸನ್ನ್ಯಾ ।
ಸಾವಲಂಬನ ಕಂಕನೆಂಬಭಿಧಾನ ತನಗೆಂದ ॥
ವಲಲನೆಂಬಭಿಧಾನದಲಿ ನೃಪ ।
ನಿಳಯವನು ಸಾರುವೆನೆನುತಲಾ ।
ಚಲನ ಸುತ ಬಿನ್ನೈಸಿದನು ನಾಟ್ಯಾಂಗವೇಷವನು ॥
ಫಲುಗುಣನು ಹಯಗೋನಿವಾಸ ।
ಸ್ಥಳವಿಲಾಸಿತರೆಂದು ಯಮಳರು ।
ಲಲನೆ ಬಿನ್ನಹ ಮಾಡಿದಳು ಸೈ[ಳೀಂ](ರಂ)ಧ್ರಿವೇಷವನು ॥

* * *

ಅತುಳಬಲ ಗಂಧರ್ವರೈವರು ।
ಪತಿಗಳೆನಗುಂಟೆನ್ನ ಚಿತ್ತಕೆ ।
ಖತಿಯ ಮಾಡಿದರೊಂದು ವರುಷವು ಬಿಡುವೆನವರುಗಳ ॥
ಸತತವಾ ಕುಂತೀಕುಮಾರರ ।
ಸತಿಯು ನಾನೋಲೈಸುವೆನು ಬಳಕವ ।
ರತಿಗಹನವನನಿಷ್ಟರಾ[ದರೆ] (ಗಲು) ತನಗೆ ಬರವಾಯ್ತು ॥

ಎನಲು ಮೆಚ್ಚಿದಳಾ ವಿರಾಟನ ।
ವನಿತೆ ವೀರರ ವಧುವನಾಸಖಿ ।
ಬನದೊಳಗೆ ನೇಮಿಸಿದಳನಿಬರಿಗಾಯ್ತು ನಿರ್ವಾಹ ॥
ಮನದ ಭಗೆಯುಡಗಿದುವು ಮ ।
ತ್ಸ್ಯನ ಪುರಾಂತರದೊಳಗೆ ಮೈಮರೆ ।
ದನುಪಮಿತಭುಜಸತ್ವರಿದ್ದರು ಭೂಪ ಕೇಳೆಂದ ॥
ಕೌರವೇಂದ್ರನ ಮನೆಯ ಮಲ್ಲರ ।
ತೋರ ಹತ್ತರ ಮುರಿದನಘಟಸ ।
ಮೀರಸುತನೆಂದರಿಕೆಯಾಗದೆ ಗೆಲಿದು ಬದುಕಿದರು ॥
ವೀರನಾರಾಯಣನ ಕರುಣದ ।
ವಾರಿಧಿಯ ಕಾಲುವೆಯ ಭಾಗ್ಯದ ।
ಚಾರು ಶಾಲೀವನದ ವೀರರು ತೊಳಗಿ ಬೆಳಗಿದರು ॥

Colophon :

ಇಂತು ಪ್ರಥಮ ಸಂಧಿ.

ಕೌರವನ ಮದದಾನೆಯೆನಿಸುವ ।
ವೀರಮಲ್ಲನ ತೋರ ಹಸ್ತವ ।
ಮಾರುತಾತ್ಮಜ ಮುರಿದು ಮೆರೆದನು ಬಾಹು ವಿಕ್ರಮವ ॥

* * * *

ಜವನ ಮೀಸೆಯ ಮುರಿದನೋ ಭೈ ।
ರವನ ದಾಡೆಯನಲುಗಿದನೋ ಮೃ ।
ತ್ಯುವಿನ ಮೇಲುದ ಸೆಳೆದನೊ ಕೇಸರಿಯ ಕೆಣಕಿದನೋ ॥
ಬವರವನು ಕೆಣಕಿದನಲಾ ಕೌ ।
ರವನಕಟ ಮರುಳಾದನೆಂದಾ ।
ಯುವತಿಯರ ಮೊಗನೋಡಿಯುತ್ತರ ಬಿರುದ ಕೆದರಿದನು ॥
ಆರೊಡನೆ ಕಾದುವೆನು ? ಕೆಲಬರು ।
ಹಾರುವರು ಕೆಲರಂತಕನ ನೆರೆ ।
ಯಾರವರು ಕೆಲರಧಮಕುಲದಲಿ ಜನಿಸಿ ಬಂದವರು ॥
ವೀರರೆಂಬವರಿವರು ಮೇಲಿ ।
ನ್ನಾರು ಹೆಸರುಂಟಾರೊಳೆಂದು ಕು ।
ಮಾರನೊಣಗೊಬ್ಬಿನಲಿ ನುಡಿದನು ಹೆಂಗಳದಿರಿನಲಿ ॥
ಪೊಡವಿಪತಿಗಳು ಬಂದು ತುರುಗಳ ।
ಹಿಡಿವರೇ ಲೋಕದಲಿ ಯಧಮರ ।
ಬಡಮನದ ಮನ್ನೆಯರ ವೈಸಿರಿ[ಯ]ಕೌರವನೊಳಾಯ್ತು ॥
ಕಡೆಗೆ ದುರ್ಯಶವುಳಿವುದಲ್ಲದೆ ।
ಕೊಡುವೆನೇ ಗೋಧನವನೆನ್ನಲಿ ।
ತೊಡಕಿ ಜಯಿಸುವನಾವನೆಂದನು ಖಂಡೆಯವ ಜಡಿದು ॥

ಬಲವ ಮುರಿವೆನು ಹಸ್ತಿನಾಪುರ ।
ದೊಳಗೆ ಪ್ರಾಣಾಂತರವನಿಕ್ಕುವೆ ।
ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ ॥
ಗೆಲವ ತಹೆನೆಂದುತ್ತರನು ಕೋ ।
ಮಲೆಯರಿದಿರಲಿ ಬಾಯ್ಗೆ ಬಂದುದ ।
ಗಳಹುತಿರ್ದನು ಬೇಕು ಬೇಡೆಂಬವರ್ಗಳಿಲ್ಲೆಂದ ॥
ಅರಿಯೆನೇ ಗಾಂಗೇಯನನು ನಾ ।
ನರಿಯದವನೇ ದ್ರೋಣ ಕುಲದಲಿ ।
ಕೊರತೆಯೆನಿಸುವ ಕರ್ಣನೆಂಬವನೆನಗೆ ಸಮಬಲನೇ ? ॥
ಬರಿಯ ಬಯಲಾಡಂಬರದಲಾ ।
ತುರುವ ಹಿಡಿದರೆ ತನ್ನ ಹೆಂಡಿರ ।
ಸೆರೆಯ ತಾರದೆ ಮಾಣೆನೆಂದನು ನಾರಿಯರ ನಡುವೆ ॥
ನುಡಿದು ಫಲವೇನಿನ್ನು ಸಾರಥಿ ।
ಮಡಿದ ನಿನ್ನಿನ ಬವರದಲಿ ತಾ ।
ನುಡುಹನಾದೆನು ಶಿವಶಿವಾ ! ಇಂದೆನ್ನ ಕೈಮನಕೆ ॥
ಗಡಣಿಸುವ ಸಾರಥಿಯನೊಬ್ಬನ ।
ಪಡೆದೆನಾದೊಡೆ ಕೌರವೇಂದ್ರನ ।
ಪಡೆಗೆ ಹಬ್ಬವ ಮಾಡುವೆನು ತೋರುವೆನು ಕೈಗುಣವ ॥
ಸಾರಥಿಯ ಶಿವ ಕೊಟ್ಟನಾದರೆ ।
ಮಾರಿಗುಬ್ಬಸ (ವಾಗ) ದಂತಕ ।
ನೂರು ಹಿಗ್ಗದೆ ದೊಳ್ಳು ನೊಕದೆ ರಣಪಿಶಾಚರಿಗೆ ॥
ದೋರೆಗರುಳಿನ ದಾನವಿಯರೊಡ ।
ಲಾರೆ ನೊಕದೆ ಕಡಿದು ದೊಂಡೆಯ ।
ಭೂರಿ ಭೇತಾಳರಿಗೆ ಹೋಹದೆ ಬರಿದೆ ರಣಕೆಂದ ॥

End:

ಕನಕಮಣಿಗಳ ತೊಟ್ಟ ಜಾಜಿಯ ।
ನನೆಯ ಆದಳಿಕೆಯಲಿ ಮದನನ ।
ಮೊನೆಯ ಖಾಡಾಖಾಡಿ ಕಾತಿಯರ್ಗೈದೆ ಹೊಯ್ಹೊಯ್ದು ॥
ದನುಜಹರನರಸಿಯರು ಕುಂತೀ ।
ತನಯರರಸಿಯರೊಡನೆ ಮತ್ಸ್ಯನ ।
ವನಿತೆಯರು ಪಾಂಚಾಲಿನಿಯರೋಕುಳಿಯನಾಡಿದರು ॥
ಧರಣಿ ನನೆದುದು ಗಂಧರಸಕ ।
ಸ್ತೂರಿಯ ಪನ್ನೀರುಗಳ ಹೊನಲೊಡ ।
ವೆರಸಿ ದೆಸೆ ಕಂಪಿಟ್ಟುದಂಬುಧಿ (ಘನ) ತುಷಾರದಲಿ ॥
ತರಣಿ ಪರಿಮಳಸಿದನು ಪವನನ ।
ಸುರಭಿತನವಕ್ಸ್ತೂರಿಯಿ ಗಗನದ ।
ಪರಮಸೌರಭ ಕರೆಸಿಕೊಂಡುದು ಸಕಲಸುರಕುಲವ ॥

ಬಳುವಳಿಯನಖಿಳಾವನೀಮಂ ।
ತಳೆವನೆನುಪಮಕೋಶವರ್ಗದ ।
ಲಲನೆಯರ ಗಜವಾಜಿ ರಥವ ಪದಾತಿ ಗೋವ್ರಜವ ॥
ಅಳಿಯಗಿತ್ತು ವಿರಾಟನೃಪ ಯದು ।
ಕುಲವನಾಪಾಂಚಾಲ ಚೈದ್ಯಾ ।
ವಳಿಯನುತ್ತಮವಸ್ತುವಾಹನದಿಂದ ಮನ್ನಿಸಿದ ॥
ಆದುದಭಿಮನ್ಯುವಿನ ಮದುವೆ ಮ ।
ಹಾದರಯಂಬುಧಿ ಕೃಷ್ಣರಾಯನ ।
ಪಾದದರುಶನವಾಗಲಿವ್ವಡಿಸಿತ್ತು ನಮ್ಮುದಯ ॥
ಮೇದಿನಿಯ ನಾವ್ರೊತ್ತೆಯಿಟ್ಟೆವು ।
ಕಾದುಕೊಂಡೆವು ಸತ್ಯವನು ಮೇ ।
ಲಾದುದನು ನೀಕರುಣಿಸೆಂದರು ವೀರ ನರಯಣನ ॥

Colophon:

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣ ಚರಣಾರವಿಂದ ಮಕರಂದ ಮಧು ಪಾನ ವಚಷ್ಟಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಭಾರತ ಕಥಾಮಂಜರಿಯೊಳ್ ವಿರಾಟಪರ್ವಂ ಸಮಾಪ್ತಂ ॥

(ವಿ.ವಿ.)—

ವಿರಾಟಪರ್ವವು ಸಮಗ್ರವಾಗಿದೆ. ಬರವಣಿಗೆ ಶ್ಲಾಘ್ಯವಾದುದು. ತಪ್ಪುಗಳು ಅಷ್ಟಾಗಿಲ್ಲ. ಸ್ವಲ್ಪ ಶಿಥಿಲವಾಗಿದೆ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಅನೇಕ ಸ್ಥಳಗಳಲ್ಲಿ ಉತ್ತಮವಾದ ಪಾಠಭೇದಗಳು ಕಂಡುಬರುತ್ತವೆ. ಅಲ್ಲಲ್ಲಿ ಕೆಲವು ಹೆಚ್ಚು ಪದ್ಯಗಳೂ ಇವೆ. ಇದರ ಕವಿಯ ವಿಷಯವನ್ನು ಹಿಂದೆ ವರ್ಣಿತವಾಗಿರುವ ೨೮ ನಂಬರಿನಲ್ಲಿ ನೋಡಿ ತಿಳಿಯುವುದು.

No. 52. ಭಾರತ ಕಥಾಮಂಜರಿ.
BHĀRATAKATHĀMAÑJARI.

Substance, palm-leaf. Size, $11\frac{1}{2} \times 1^{1}$ inches. pages, 190. Lines, 7 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Virāṭaparva complete. In the beginning there are ten stanzas relating to the Piṭhikāsandhi of the Ādiparva.

Same work as the above; by Nārāyaṇappa. For other particulars see under No. 50, ante.

(ವಿ.ವಿ.)—

ವಿರಾಟಪರ್ವವು ಸಮಗ್ರವಾಗಿದೆ. ಗ್ರಂಥದ ಆದಿಯಲ್ಲಿ ಪೀಠಿಕಾ ಸಂಧಿಯ ಹತ್ತು ಪದ್ಯ ಗಳಿವೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲದಿಲ್ಲ. ಸ್ವಲ್ಪ ಶಿಥಿಲ ಗ್ರಂಥಪಾತವಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 53. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, 15⅓ × 1⅓ inches. pages, 108. Lines, 7 on a page. Character, Kanarese. Condition, much injured. Appearance, very old. Mode of writing, good and free from mistakes.

Contains the Virāṭaparva complete.

Same work as the above ; by Nārāyaṇappa. For other particulars see under No 50, ante.

(ವಿ.ವಿ.)—

ವಿರಾಟಪರ್ವವು ಸಮಗ್ರವಾಗಿದೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಗ್ರಂಥವು ಅತಿ ಶಿಥಿಲವಾಗಿದೆ. ಮೇಲೆ ಉದಾಹೃತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯುಗಳನ್ನು ೫೦ ನೆಯ ನಂಬರಿನಲ್ಲಿ ತಿಳಿಯುವುದು.

No. 54. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, 16⅓ × 1⅓ inches. pages, 154. Lines, 7 on a page Character, Kanarese. Condition, injured. Appearance, old. Mode of writing, good and free from mistakes.

Contains the Virāṭaparva complete.

Same work as the above ; by Nārāyaṇappa. For other particulars see under No. 50, ante.

Date of transcription:—Sunday the seventh day of the dark fortnight of the lunar month Kārttika in the year Nandana.

Name of the scribe :—Hiretimmappa (son of Brahmadīkṣita and grandson of Timmappa of Gummagaṭṭa) who copied for Śāmbhaṭṭa of Bañjagere.

(ವಿ.ವಿ.)—

ವಿರಾಟಪರ್ವ ಸಮಗ್ರವಾಗಿದೆ. ಬರೆವಣಿಗೆ ಉತ್ತಮವಾದುದು. ತಪ್ಪುಗಳಿಲ್ಲ. ಶಿಥಿಲವಾಗಿದೆ. ಗ್ರಂಥಪಾತಗಳು ಅಷ್ಟಾಗಿಲ್ಲ. ಪುರಾತನ ಪ್ರತಿ. ಮುದ್ರಿತ ಪ್ರತಿಗಿಂತಲೂ ಪಾಠಭೇದಗಳು ಅನೇಕವಾಗಿವೆ. ಹಿಂದೆವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯುಗಳನ್ನು ಹಿಂದಿನ ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಪುಸ್ತಕದ ಮೊದಲಲ್ಲಿ ‘ ನಂದನ ಸಂವತ್ಸರದ ಜ್ಯೇಷ್ಠ ಬ . . . ನಿವಾರದಲ್ಲು .‹ . ಪುಸ್ತಕ ಬರಿವುದಕ್ಕೆ ಶುಭಮಸ್ತು ” ಎಂದೂ,

“ ಕೊನೆಯಲ್ಲಿ. ಸ್ವಸ್ತಿಶ್ರೀ ಜಯಾಭ್ಯುದಯ ಶಾಲೀ . . . . . ಸೆ ನಂದನ ಸಂವತ್ಸರದ ಕಾರ್ತಿಕ ಬ ೭ ಆದಿವಾರದಲ್ಲೂ ಶ್ರೀಮತು ಗುಮ್ಮಗಟ್ಟಿ ಯಜಮಾನ ಕೋನಪ್ಪನ ಪುತ್ರ ತಿರುಮಲಭಟ್ಟರ ಪುತ್ರರಾದ ಅಪ್ಪಯ್ಯ ವೆಂಕಟಯ್ಯ . . . . ದಿಯಾದಂಥ ತಿಮ್ಮಪ್ಪನ ಪುತ್ರ ಬ್ರಹ್ಮದೀಕ್ಷಿತರ ಕುಮಾರ ಹಿರೆತಿಮ್ಮಪ್ಪನು ಬಂಜಗೆರೆ ಯಜಮಾನ ಶಾಂಭಟ್ಟರ ಪುತ್ರ ಪೌತ್ರಾಭಿವೃದ್ಧಿಯಾದಂಥ . . . . . . ಗಲಿ ಎಂದು, ಪುತ್ರ ಪೌತ್ರಾಭಿ ವೃದ್ಧಿ

ರಸ್ತು ಹರಿಕೆ ಮಾಡಿ ಅವ . . . . ತ್ರಿಸಂಧ್ಯಾಕಾಲದಲ್ಲಿ ಅನೇಕಾಶೀರ್ವಾದವಾಗಲಿ ಎಂದು ಆಯುಷ್ಯಾಭಿವೃದ್ಧಿಯಾಗಲಿ ಎಂದು . . . . ಹಾ ಶ್ರೀ" ಎಂದಿಗೆ.

No. 55. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 20 × 1⅜ inches. Pages, 70. Lines, 5 on a page. Character, Kanarese. Condition, very much injured. Appearance, very old. Mode of writing, good and free from mistakes.

Begins on fol 1*a*. The other works here in are .—(1) Bhāgavata 36*a*. (2) Svargārōhaṇaparva (Bhāratāntargata) 63*a*. (3) Harivilāsa-caritre (Sāngatya) 147*a*.

Contains the Virāṭaparva 5 to 10 Sandhis complete.

Same work as the above ; by Nārāyaṇappa. For other particulars see under No. 50, ante.

(ವಿ-ವಿ.)—

ವಿರಾಟಪರ್ವದಲ್ಲಿ ೪ ರಿಂದ ೧೦ ಸಂಧಿಗಳಿವೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳು ಅಷ್ಟಾಗಿ ಇಲ್ಲ. ಅತಿಶಿಥಿಲ. ಪುರಾತನ ಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಇದರೊಡನೆ ಭಾಗವತ, (೨) ಸ್ವರ್ಗಾರೋಹಣಪರ್ವ (ಭಾರತಾಂತರ್ಗತ), (೩) ಹರಿವಿಲಾಸ ಚರಿತ್ರೆ (ಸಾಂಗತ್ಯ) ಗಳಿವೆ. ಮಿಕ್ಕ ವಿಷಯಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 56. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 14¼ × 1¼ inches. Pages, 126. Lines, 5 on a page. Character, Kanarese. Condition, injured. Appearance, old. Mode of writing, fair but not free from mistakes.

Wants the Sandhis 1 and 2 and a small portion in the beginning of the 3rd Sandhi of the Virāṭaparva ; otherwise complete.

Same work as the above ; by Nārāyaṇappa. For other particulars see under No. 50, ante.

Date of transcription :—Tenth day of the lunar month Āśvayuja in the year Viśvāvasu.

Name of the scribe :—Tirumalayya, son of Kōnēri seṭṭy, grandson of Kētāpeḍi seṭṭy.

(ವಿ-ವಿ.)—

ವಿರಾಟಪರ್ವ ಸಮಗ್ರ. ಆದರೆ ಮೊದಲಿನ ಎರಡು ಸಂಧಿಗಳೂ ಮೂರನೆಯ ಸಂಧಿಯಲ್ಲಿ ೭೦ ಪದ್ಯಗಳೂ ಇಲ್ಲ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಸ್ವಲ್ಪ ಶಿಥಿಲ. ಹಿಂದೆ

ವರ್ಣಿತವಾಗಿರುವ ಗ್ರಂಥವೇಸರಿ. ಮಿಕ್ಕ ವಿಷಯುಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಪುಸ್ತಕದ ಕೊನೆಯಲ್ಲಿ "ವಿಶ್ವಾವಸು ಸಂವತ್ಸರದ ಆಶ್ವೀಜ ಶು ೧೦ ರಲ್ಲು ಶ್ರೀಮತು ಕೆತಾವೆಡಿ ಶೆಟ್ಟಿಯ ಮಗ ಕೋನೇರಿ ಶೆಟ್ಟಿಯ ಮಗ ತಿರುಮಲಯ್ಯ ಬರೆದ ವಿರಾಟ ಪರ್ವ ಪುಸ್ತಕಕ್ಕೆ ಶುಭಮಸ್ತು" ಎಂದು ಬರೆದಿದೆ.

No. 57. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, $14\frac{3}{4} \times 1\frac{1}{4}$ inches. Pages, 187. Lines, 7 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Virāṭaparva complete.

Same work as the above. For other particulars see under No. 50, ante.

(ವಿ.ವಿ.)—

ಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳು ಅಷ್ಟಾಗಿಲ್ಲ. ಸ್ವಲ್ಪ ಶಿಥಿಲವಾಗಿದೆ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಮಿಕ್ಕ ವಿಷಯುಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 58. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, $20 \times 1\frac{1}{4}$ inches. Pages, 66. Lines, 5 on a page. Character, Kanarese. Condition, much injured. Mode of writing, good but not free from mistakes.

Begnis on fol. 1*a*. The other works herein are Bhāgavata 36*a*. (2) Svargārōhaṇaparava 63 (*a*).

Contains Sandhis 1 to 10 complete in the Virāṭaparva. The folios are in disorder.

Same work as the above ; by Nārāyanappa. For other particulars see under No. 50, ante.

(ವಿ.ವಿ.)—

ವಿರಾಟಪರ್ವದಲ್ಲಿ ಒಂದರಿಂದ ಹತ್ತು ಸಂಧಿಗಳು ಇವೆ. ಈಸಂಧಿಗಳ ಬಗ್ಯೆ ೧, ೮೧ ನೆಯ ಓಲೆಗಳನ್ನು ನೋಡುವುದು. ಓಲೆಗಳು ಅಸ್ತವ್ಯಸ್ತವಾಗಿವೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳೂ ಇವೆ. ಅತಿ ಶಿಥಿಲ. ಗ್ರಂಥಪಾತವೂ ಇದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಮಿಕ್ಕ ವಿಷಯುಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಭಾಗವತ ದಶಮ ಸ್ಕಂಧದ ಒಂದು ಭಾಗವೂ ಸ್ವರ್ಗಾರೋಹಣ ಪರ್ವವೂ ಇದರೊಡನಿವೆ.

No. 59. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, Śrītāla. Size, 25⅓ × 2 inches. Pages, 44. Lines, 10 on a page. Character, Kanarese. Condition, fair. Appearance, very old. Mode of writing, very good and free from mistakes.

Contains the Sandhis 1–9 complete and 85 stanzas in the 10th Sandhi of the Virāṭaparva.

Same work as the above; by Nārāyaṇāppa. For other particulars see under No. 50, ante.

(ವಿ.ವಿ.)—

ವಿರಾಟಪರ್ವ ಅಸಮಗ್ರ (ಮೊದಲಿನ ಒಂಭತ್ತು ಸಂಧಿಗಳು ಸಮಗ್ರವಾಗಿವೆ. ಹತ್ತನೆಯ ಸಂಧಿಯಲ್ಲಿ ೮೫ ಪದ್ಯಗಳು ಮಾತ್ರವೇ ಇವೆ. ಬರವಣಿಗೆ ಶ್ರೇಷ್ಠವಾದುದು. ತಪ್ಪುಗಳಿಲ್ಲ. ಶೈಥಿಲ್ಯವೂ ಗ್ರಂಥಪಾತವೂ, ಇಲ್ಲ. ಮುದ್ರಿತ ಪ್ರತಿಗಿಂತಲೂ ಉತ್ತಮವಾದ ಪಾಠಭೇದಗಳು ಈ ಪ್ರತಿಯಲ್ಲಿ ಹೇರಳವಾಗಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 60. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 18¼ × 1¼ inches. Pages, 138. Lines, 6 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Udyōgaparva complete.

A rendering in Kanarese of the Udyōgaparva of the Sanskrit Mahābhārata; by Nārāyaṇappa. For other particulars regarding the author vide No. 28 ante. Date of transcription:—The fifth day of the bright fortnight of the lunar month Mārgaśira in the year Kīlaka.

Name of the scribe:—Kṛṣṇayya, son of Lakṣmīramaṇappa, who was the Sthānika (a paid servant in a temple to assist the Pūjāri) in the temple of the God Lakṣmīramaṇasvāmi in the Mysore fort.

Beginning:

ನಂಬಿದವರಿಗೆ ತನ್ನ ತೆತ್ತಿಹೆ ।।
ನೆಂಬ ಬಿರುದನು ಮೆರೆದು ಭಕ್ತರ ।
ಕುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರಿ ॥
ಕೇಳು ಜನಮೇಜಯ ಧರಿತ್ರೀ ।
ಪಾಲ ಕುಂತೀತನುಜರುನ್ನತ ।
ಲೀಳೆಗೆಯನೇನೆಂಬೆನ್ನೆ ಕಾರುಣ್ಯಸಿಂಧುವಲಾ ॥

ಶ್ರೀಲತಾಂಗಿಯ ರಮಣನಿನಿಬರೊ ।
ಳಾಳೊಡೆಯರಾರೆಂಬ ಭೇಧವ ।
ಬೀಳುಕೊಟ್ಟೀ ನಡಿಸುತಿರ್ದನು ತನ್ನ ಮೈದುನರ ॥
ಹೋಲಿಕೆಗೆ ಬಾಯ್ಬಿಡುವ ವೇದವ ।
ತಾಳಿಗೆಗಳೊಣಗಿದುವು ಘನತೆಯ ।
ಮೇಲೆ ತನ್ನಯ ಘನತೆಯೆಂಬುದನತ್ತ ಬೇರಿರಿಸಿ ॥
ಕಾಲಿಗೆರಗುವನಾ ಯುಧಿಷ್ಠಿರ ।
ನೇಳಲೊಡನೇಳುವನು ಕೃಷ್ಣನ ।
ಲೀಲೆ ಯನುಪಮವೆಂದು ವೈಶಂಪಾಯಮುನಿ ನುಡಿದ ॥
ಒಡನೆಯಾರೋಗಿಸುವನೈವರ ।
ನಡುವೆಯೊಂದಾಸನದೆ ಕುಳ್ಳಿಹ ।
ಗಡಣದಿಂ(ದೊಂದಾ)ಗಿ ಪಟ್ಟವ ಕಯ್ಗೊಯಿದು ನಗುವ ॥
ಮಡದಿ ಲಕ್ಷ್ಮಿಗೆ ಮಗ ವಿರಿಂಚಿಗೆ ।
ಪಡೆಯಬಾರದ ಸಂದ ಸಲುಗೆಗ ।
ಳೆಡೆಯ ನರರಿಗೆ ದೊರಕಿತೆನಲೇನೆಂಬೆ ಭಾಗ್ಯವನು ॥
ಒಂದು ದಿನ ಪ್ರೊಡ್ಡೋಲಗದೊಳೈ ।
ತಂದು ನಿಖಿಳಾವನಿಯ ರಾಯರ ।
ಮಂದೆಯಲಿ ಮುರವೈರಿ ನುಡಿದನು ರಾಜಕಾರಿಯವ ॥
ಹಿಂದೆ ಜೂಜಿನ ವಿಲಗದಲಿ ಮನ ।
ನೊಂದರಿವರಡವಿಯಲಿ ಧರೆಯಿ ।
ನ್ನೊಂದು ಸೇರುವುದೇನು ಹದನೀ ಪಾಂಡುತನಯರಿಗೆ ॥
ದೇವ! ನೀನೇ ಬಲ್ಲೆ ನಿನ್ನಯ ।
ಭಾವನೀಧರ್ಮಜನ ಬಹುಮಾ ।
ನಾವಮಾನವ ಹೊರಿಗೆ ನಿನ್ನದು ಹರಣ ಭರಣದಲಿ ॥
ನೀವು ಬಲ್ಲಿರಿ ಕಾಲೊಳೊದೆದುದ ।
ನೋವಿ ತಲೆಯಲಿ ಹೊತ್ತು ನಡೆಸುವ್ರೊ ।
ಡಾವು ಬಲ್ಲೆವು ಜೀಯ ! ಎಂದನು ದ್ರುಪದಭೂಪಾಲ ॥
ಕಳುಹುವುದು ಶಿಷ್ಟರನು ಧರಣೀ ।
ತಳ[ಕೆ](ವ) ಬೇಡಿಸುವಲ್ಲಿ ಸಾಮವ ।
ಬಳಸುವುದು ಭೀಷ್ಮಾದಿಗಳಿಗಟ್ಟುವುದು ವಿನಯದಲಿ ॥
ತಿಳಿವುದಾತನ ನೆಲೆಯನಲ್ಲಿಂ ।
ಬಳಿಕ ನಯವಿಲ್ಲೆಂದೊಡಾಹವ ।
ದೊಳಗೆ ಕೈದೋರುವುದು ಮತವೆಂದನು ಮುರಧ್ವಂಸಿ ॥
ಎಲೆಮುರುಳೆ ಮುರವೈರಿ ! ಕೌರವ ।
ರೊಲಿವರೇ ಈ ಹದನ ? ಧರ್ಮಜ ।
ನಿಳೆಯ ಸೋತನು ಜೂಜುಗಾರರಮೋರೆ ಮಾರ್ಗದಲಿ ॥

ನೆಲನನಾಳ್ವಡೆ ಮತ್ತೆ ಗೆಲಿದೇ ।
ಕೊಳಲಿ ಪೋಣ್ ಕಾದಲಿ ಸುಯೋಧನ ।
ನೊಳಗೆ ತಪ್ಪಿಲ್ಲೆಂದು ನುಡಿದನು ನಸುನಗುತ್ತ ಬಲರಾಮ ॥
ಲೇಸನಾಡಿದೆ ರಾಮ ! ಬಳಿಕೇ ।
ನಾ ಸುಯೋಧನನಧಮನೇ ನೀ ।
ಮೀಸನೇರಿಸಿಕೊಂಡು ನುಡಿವೈ ಮತ್ತೆ ಕೆಲಬರಲಿ ॥
ಆಸುರದ ಕತ್ತಲೆಯು ಕಟಕ ಮು ।
ಹಾಸರಾಯುವು ಗೂಗೆಗಳಿಗುಪ ।
ಹಾಸವೇ ದಿಟವೆಂದು ಸಾತ್ಯಕಿ ನಗುತ ಖತಿಗೊಂಡ ॥

* * * *

ದೇವಮಾತ್ರವೆ ನೀವು ದೇವರ ।
ದೇವರೊಡೆಯರು ಹೊಗಳುವೊಡೆ ನೀ ।
ದಾವಳಿಗಳೆಳೆವಲ್ಲ ಸಾಕಾ ಮಾತ್ರವಂತಿರಲಿ ॥
ನಾವು ಭಕ್ತರು ಭಕ್ತಭೃತ್ಯರು ।
ನೀವು ಸಾರಥಿಯಾಗಿ ಭೃತ್ಯರ ।
ಕಾವುದೆಂದರ್ಜುನನು ಹಣೆಚಾಚಿ(ದನು) ಹರಿಪದಕೆ ॥
ಎನಲು ನಸುನಗುತೆತ್ತಿ ಸಾರಥಿ ।
ತನವ ಕೈಕೊಂಡನು ಕೃಪಾಳುವಿ ।
ನನುನಯವ ನಾನೆತ್ತ ಬಲ್ಲೆನು ಭೃತ್ಯವರ್ಗದಲಿ ॥
ತನಗಹಂಕೃತಿಯಿಲ್ಲ ವೈರೋ ।
ಚನನ ಪಡಿಹಾರಿಕೆ ಕಿರೀಟಿಯು ।
ಮನೆಯ ಬಂಡಿಯ ಬೋವುತನವೆಲೆ ನೃಪತಿ ! ಕೇಳೆಂದ ॥

Colophon :

ಇಂತು ಪ್ರಥಮಸಂಧಿ ಸಮಾಪ್ತಂ.

ಬಂದು ಕಂಡನು ಸಂಜಯನು ಯಮ ।
ನಂದನನನಲ್ಲಿಂದೆ ಮರಳಿದು ।
ಬಂದು ಕೌರವನೃಪತಿಗರುಹಿದನವರ ಮಾತುಗಳ ॥

* * * *

ನೋಡಿದನು ಮನದಣಿಯೆ ಮಿಗೆಕೊಂ ।
ಡಾಡಿದನು ಬೀದಿಯಲಿ ಹರಿದೆಡೆ ।
ಯಾಡಿದನು ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ ॥
ಕೂಡೆ ಕುಣಿದನು ಮನೆಯ ಮುರಿದೀ ।
ಡಾಡಿದನು ಮೆಯ್ಮರೆದು ಹರುಷದ ।
ಗಾಡಿಕೆಯೊಳಪ್ರತಿಮನೆಸೆದನು ಭಕ್ತಿಕೇಳಿಯೊಳು ।

ಹಸಿದು ನಾವೈತಂದೊಡೀ ಪರಿ ।
ವಸಗಿ ಕಾಣಿದಾಡಿದೊಡೆ ಮೇಣೀ ।
ವಸತಿಯನು ನೀ ಮುರಿದು ಬಿಸುಟರೆ ನಮಗೆ ತಣಿವಹುದೇ ? ॥

ವಸುಮತೀವಲ್ಲಭರು ಮಿಗೆ ಪ್ರಾ ।
ರ್ಥಿಸಿದರೊಲ್ಲದೆ ಬಂದೆವೈ ನಾ ।
ಚಿಸದಿರೈ ಬಾ ವಿದುರ! ಎನುತೊಳಹೊಕ್ಕನಸುರಾರಿ ॥

* * * *

ತೊಲಗಿದಸು ಬಂದಂತೆ ತರಣಿಯು ।
ಹೊಳಹು ಸೋಂಕಿದ ಚಕ್ಕವಕ್ಕಿಯು ।
ಬಳಗದಂತಿರೆ ಕೃಷ್ಣರಾಯನ ಬರವ ತಾ ಕೇಳ್ದು ॥

ಪುಳಕ ಪಸರಿಸೆ ಪರಮಹರುಷವ ।
ತಳೆದು ದೇವನ ಕಾಣಿಕೆಯ ಕಂ ।
ಗಳಗೆ ಕಡುಲೋಲುಪ್ತಿ ಮಿಗೆ ಹರಿತಂದಳಾ ಕುಂತಿ ॥

ಬರವ ಕಂಡಸುರಾರಿ ಮಂಚದೊ
ಳಿರದೆ ಡಿಮ್ಮನೆ ನಿಂದು ನರರಾ ।
ಚರಣೆಗಳ ನಾಟಕವ ತಾನೇ ನಟಿಸಿ ತೋರಿಸಿದ ॥

ಹಿರಿಯರಿಗೆ ತಾ ಹಿರಿಯನೆನಿಸುವ ।
ಗರುವತನುವನು ಬಿಸುಟು ಕುಂತಿಗೆ ।
ಕರವ ಮುಗಿದೆರಗಿದನು ಸನಕಾದಿಗಳು ನಗುತಿರಲು ॥

ಅಮಿತಕರುಣಾಸಿಂಧುವಿನ ಪದ ।
ಕಮಲದಲಿ ತಾನೆರಗಿ ಪುಳಕೋ ।
ದ್ಗಮದ ಪಾವನತರವ ಸುಖಸಂರಂಭದೊಳು ಮುಳುಗಿ ॥

ಗಮಿಸಲರಿಯವು ಗರುವ ವೇದ ।
ಪ್ರಮಿತಿಗಳು ನೀನೆಂತು ನಡೆತಂ ।
ದೆಮಗೆ ಗೋಚರನಾದೆಯೆನುತವೆ ಹೊಗಳಿದಳು ಕುಂತಿ ॥

ದೇವಕಿಯು ವಸುದೇವನನು ಬಲ ।
ದೇವನನಿರುದ್ಧಾದಿಯಾದಾಭೂ ।
ಪಾವಳಿಯ ಸುಕ್ಷೇಮಕುಶಲವ ಕುಂತಿ ಬೆಸಗೊಳಲು ॥

ದೇವ ನಗೆಮೊಗದಿಂದವರ ವಸು ।
ದೇವದೇವಕಿಯಾದ ಯಾದವ ।
ರಾ ವಿಲಾಸಮಹೀಶರಿರವನು ಕುಂತಿಗರುಹಿದನು ॥

ಯಮತನುಜನಧಿಕನು ಹಿಡಿಂಬಾ ।
ರಮಣನತಿ ಬಲ್ಲಿದನು ಪಾರ್ಥನ ।
ವಿಮಲವಿಗ್ರಹ ಲೇಸು ಸಕಲಮಹೀಶಪರಿವೃತರು ॥

ಸುಮಳರಿರವತಿ ಚೆಲುವ್ರು ನೇಹದ ।
ರಮಣಿಯಾಕೆಯು ಸುತರು ಸುಮಹೋ ।
ದ್ಯಮರು ಕೇಳೆಂದಸುರರಿಪು ಕುಂತಿಗೆ ನಿಯಾಮಿಸಿದ ॥

ನರನ ಮಗನಭಿಮನ್ಯು ಕುಶಲನು ।
ವರ ಸುಭದ್ರಾದೇವಿ ಮೊದಲಾ ।
ಗಿರಲು ಬಾಂಧವರೆಲ್ಲ ಜೀವಂತರು ನಿಧಾನವಿದು ॥

ಪರಮ ಮಿತ್ರರು ತಮ್ಮೊಳೊಂದಾ ।
ದರು ದ್ರುಪದ ಮೂರಕ್ಷೋಣಿಯಿವರಿಗೆ ।
ನೆರವು ಬಂದನು ರಾಜ್ಯಕಾರ್ಯದ ಬಳಕೆ ಲೇಸೆಂದ ॥

*　　　*　　　*　　　*

ಮಾಡು ಸಂಧಿಯನೆಮ್ಮ ವಚನಕೆ ।
ಕೋಡದಿರು ಸವಿಮಾತುಗಳ ನಿನ ।
ಗಾಡುವವರಿಗೆ ಚಿತ್ತಗೊಡದಿರು ಹಿಸುಣ ಹೊಗಿಸದಿರು ॥

ನಾಡ ನಾಲಗೆಗೆಳೆಯರೆಂದುದು ।
ಮಾಡದಿರು ಪಾಂಡವ ನೃಪಾಲರ ।
ಕೂಡೆ ಬಾಳ್ವುದು ಪಥ್ಯವೆಂದನು ಮತ್ತೆ ಮುರವೈರಿ ॥

ಅವರಿಗಿಂದ್ರಪ್ರಸ್ಥದಲಿ ರಾ ।
ಜ್ಯವನು ಕುಲಸಹಿತಿತ್ತು ಪಾಂ ।
ಡವಪ್ರತಿಷ್ಠಾಚಾರ್ಯನೆಂಬೀ ಬಿರುದ ಸೂಸಿದರೆ ॥

ಅವನಿಯಲಿ ನಿನ್ನೊಡನೆ ತಲೆದೋ ।
ರುವ ನೃಪಾಲಕರಿಲ್ಲ ನುಡಿಗಳು ।
ಕಿವಿಗೆ ಕರ್ಕಶವೀಗಳಾದರೆ ಮುಂದೆ ಲೇಸೆಂದ ॥

ನೀತಿಗಾಲಯ ನಿಮ್ಮ ಸಿರಿ ವಿ ।
ಖ್ಯಾತಿಗಿದು ನೆಲೆ ಸಕಲಸೌಖ್ಯ ।
ವ್ರಾತಕಿದು ಸದ್ವಿಜವೆನಿ(ಸಿ)ತು ಕುರುಕುಲಾನ್ವಯವು ॥

ಭೂತಳದ ಲೋಲುಪತೆಯೊಳು ಕುಲ ।
ಘಾತಕರು ತಾವೆಂಬ ಕೀರಿತಿ ।
ಗೋತು (ನೀಂ) ನೆಲೆಯಾಗದಿರು ಕೇಳೆಂದು ಹರಿ ನುಡಿದ ॥

ಧರೆಯ ನೃಪರಿಗೆ ಹಸ್ತಿನಾಪುರ ।
ದರಮನೆಯ ಬಾಗಿಲೊಳು ಸಮಯವು ।
ದೊರಕಲಂತದು ಪುಣ್ಯವೆಂಬೀ ಸಾರ್ವಭೌಮರಿಗೆ ॥

ಸಿರಿಗೆ ಪಾಂಡವರನ್ಯರಾದರೆ ।
ಮೆರೆಯಲರಿಯದು ನಿನ್ನ ಸಿರಿ ಕಾ ।
ತರಿಗತನವನು ಮಾಣು ಕೇಳೆಂದಸುರರಿಪು ನುಡಿದ ॥

ಯಮಜ ನಿನಗೊಳ್ಳಿದನು ಫಾರ್ಥನ ।
ಮಮತೆ ನಿನ್ನಲಿ ಹಿರಿದು ಭೀಮನ ।
ತಮದ ನುಡಿ ಹಿಂಗಿದುವು ನಕುಲನು ನಿನ್ನೊಳೆರಡರಿಯ ॥
ತಮತಮಗೆ ತಮ್ಮೈವರುರೆ ನಿ ।
ನ್ನಮಲವಚನವ ಹಾರುತಿಹರಾ ।
ಭ್ರಮಿತ(ತ)ನವ(ನು) ಮಾಡದಿರು [ನೀಂ]ಸೋದರರ ಸಲಹೆಂದ ॥
ಧರ್ಮಜನ ಕಡುಮೋಹವೆಂಬುದು ।
ನಿಮ್ಮ ಚರಣದಲಿರಲಿ ಭೀಮನ ।
ಬಿಮ್ಮು ತಮ್ಮೊಳಗಿರಲಿ ಫಲುಗುಣನೊಲುಮೆಯಂತಿರಲಿ ॥
ಎಮ್ಮ ಭೂಮಿಯೊಳರೆಯ ಬೇಡುವ ।
ರೆಮ್ಮ ಬಂಧುಗಳಲ್ಲ ಸಂಧಿಗೆ ।
ತಮ್ಮನೊಡಬಡನೆಂದು ದುಶ್ಶಾಸನನ ನೋಡಿದನು ॥

End :

ಕೇಳು ಜನಮೇಜಯ ! ಧರಿತ್ರೀ ।
ಪಾಲ ! ಬೀಡಿನಿತಕ್ಕೆ ಬಿಗಿದುದು ।
ಮೇಳವದ ಬಲುಹೊದಕೆ ಹೊರವಳಯದಲಿ ಕಲುಕೋಟೆ ॥
ಮೇಲೆ ಪಡಿಯಗಳಾಶ್ರಯಕೆ ಮುಳು ।
ವೇಲಿ ದೀಹದ ಸಿಂಹ ಶರಭ ।
ವ್ಯಾಳ ಶಾರ್ದೂಲಾವಳಿಯ ಸುಯ್ದಾನವೊಪ್ಪಿದುದು ॥
ಎರಡು ಬಾಗಿಲ ಸೂತ್ರದಲಿ ವಿ ।
ಸ್ತರಿಸಿದಂಗಡಿ ಸೋಮವೀಧಿಯ ।
ಹರಿಯ ವೀಧಿಯಲವರವರ ಪಾಳೆಯಕೆ ಮುರಿವುಗಳ ॥
ಸುರರು ನಿಚ್ಚಸಚಾರದಿನ್ನುಳಿ ।
ದರಿಗೆ ಗೋಚರವಹುದೆ ಕೌಂತೇ ।
ಯರ ಸಮಗ್ರದ ಬೀಡು ಕುರುಭೂಮಿಯಲಿ ರಂಜಿಸಿತು ॥
ಬಲದ ಮುಂಗುಡಿ ಭೀಮನದು ಪಿಂ ।
ಗಲಿಯಲಾತನ ಕಾಹು ಬೀಡಿನ ।
ವಳಯದಾರೈಕೆಗಳು ಸಾತ್ಯಕಿ ನಕುಲಪಾರ್ಥರಿಗೆ ॥
ಬಲಮಹಾಂಬುಧಿಯೊಳಗಿರುಳು ಮೋ ।
ಲ್ತಳೆವರಿಕೆ ಹೈಡಿಂಬನದು ಪಾಂಡವ ।
ರಾಳವು ಗದುಗಿನ ವೀರನಾರಾಯಣನ ಸುಯ್ದಾನ ॥

Colophon :

ಇತಿ ಶ್ರೀಮದಚಿಂತ್ಯಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧುಪಾನ ಪರೀರಕ್ಷಿತವಚಷ್ಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕ ಭಾರತಕಥಾಮಂಜರಿಯೊಳುದ್ಯೋಗಪರ್ವಂ ಸಮಾಪ್ತಂ ॥

(ವಿ-ವಿ.)—

ಉದ್ಯೋಗಪರ್ವವು ಸಮಗ್ರವಾಗಿದೆ. ಬರವಣಿಗೆ ಉತ್ತಮವಾದುದು. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲವಾಗಿದೆ. ಅಲ್ಲಲ್ಲಿ ಉತ್ತಮವಾದ ಪಾಠಭೇದಗಳಿವೆ. ಮುದ್ರಿತ ಪ್ರತಿಯಲ್ಲಿ ಕಾಣಬಾರದ ಕೆಲವು ಹೊಸಪದ್ಯಗಳೂ ಇವೆ. ಕವಿಮುಂತಾದ ವಿಷಯವನ್ನು ೨೮ ನಂಬರಿನಲ್ಲಿ ನೋಡಿ ತಿಳಿಯುವುದು.

ಗ್ರಂಥಾಂತ್ಯದಲ್ಲಿ ಈ ರೀತಿ ಬರೆದಿದೆ :—

"ಕೀಲಕ ಸಂವತ್ಸರದ ಮಾರ್ಗಶಿರ ಶುದ್ಧ ೫ ಲು — ಬರೆದಾತ ಮಹಿಶೂರ ನಗರದ ಲಕ್ಷ್ಮೀರಮಣ ಸ್ವಾಮಿಯವರ ದೇವಸ್ಥಾನದ ಸ್ಥಾನಿಕ ಲಕ್ಷ್ಮೀರಮಣಪ್ಪನವರ ಮಗ ಕೃಷ್ಣಯ್ಯನು ತಾನು ತನಗೆ ಬರೆದ ಭಾರತ ಪುಸ್ತಕ . . . . ಮಂಗಳಂ.

No. 61. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, Śritāla. Size. 25½ × 2 inches. Pages, 56. Lines, 13 on a page Character, Kanarese. Condition, fair. Appearance, very old. Mode of writing, good and free from mistakes.

Contains the Udyōgaparva complete.

Same work as the above ; by Nārāyaṇappa. For other particulars see under No. 60, *ante.*

(ವಿ-ವಿ.)—

ಉದ್ಯೋಗಪರ್ವ ಸಮಗ್ರವಾಗಿದೆ. ಹನ್ನೆರಡು ಸಂಧಿಗಳಿವೆ ಬರವಣಿಗೆ ಶ್ರೇಷ್ಠವಾದುದು ತಪ್ಪುಗಳು ಇಲ್ಲವೆನ್ನಬಹುದು. ಶೈಥಿಲ್ಯವೂ ಗ್ರಂಥಪಾತವೂ ಇಲ್ಲ. ಮುದ್ರಿತ ಪ್ರತಿಗಿಂತಲೂ ಉತ್ತಮವಾದ ಪಾಠ ಭೇದಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ. ಸರಿ ಮಿಕ್ಕ ವಿಷಯಗಳನ್ನು 60 ನಂಬರಿನಲ್ಲಿ ನೋಡಿ ತಿಳಿಯುವುದು.

No. 62. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, 16½ × ½ inches. Pages, 73. Lines, 7 on a page. Character, Kanarese. Condition, fair. Appearance, old. Mode of writing, good but not free from mistakes. The other works herein are (1) Kariyabantanakathe and Hādugalu, etc.

Contains the Udyōgaparva complete.

Same work as the above; by Nārāyanappa. For other particulars see under No. 60 *ante.*

Name of the scribe.—Tippayya son of Mōti Rāmappa of Koṭṭūru village.

(ವಿ-ವಿ·)—

ಉದ್ಯೋಗಪರ್ವವು ಸಮಗ್ರವಾಗಿದೆ· ಬರೆವಣಿಗೆ ಚೆನ್ನಾಗಿದೆ· ತಪ್ಪುಗಳೂ ಇವೆ. ಶೈಥಿಲ್ಯವೂ ಗ್ರಂಥ ಪಾತಗಳೂ ಇವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ· ಮಿಕ್ಕ ವಿಷಯಗಳನ್ನು ೬೦ ನಂಬರಿನಲ್ಲಿ ನೋಡುವುದು· ಗ್ರಂಥದ ಆದಿಯಲ್ಲಿ "ಮೊಟ್ಟೆಯ ರಾಮಪ್ಪನ ಕುಮಾರ ತಿಮ್ಮಪ್ಪಯ್ಯ ಬರೆದ ಉದ್ಯೋಗಪರ್ವ . . . . " ವೆಂದು ಬರೆದಿದೆ· ಉದ್ಯೋಗಪರ್ವದ ಕಡೆಯಲ್ಲಿ (೧) ಕರಿಯ ಬಂಟನ ಕಥೆ (೨) ಹಾಡುಗಳು (೩) ವೈದ್ಯ ವಿಷಯಗಳೂ ಇವೆ.

No. 63. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, Śrītāla. Size, $14 \times 2\frac{1}{4}$ inches. Pages, 60. Lines, 14 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Udyōgaparva complete.

Same work as the above; by Nārāyanappa. For other particulars see under No. 60 *ante*.

(ವಿ-ವಿ·)—

ಉದ್ಯೋಗಪರ್ವವು ಸಮಗ್ರವಾಗಿದೆ. ಹನ್ನೆರಡು ಸಂಧಿಗಳು. ಬರೆವಣಿಗೆ ಚೆನ್ನಾಗಿದೆ· ತಪ್ಪುಗಳು ಅಷ್ಟಾಗಿ ಕಂಡು ಬರುವುದಿಲ್ಲ. ಸ್ವಲ್ಪ ಶಿಥಿಲವಾಗಿದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೬೦ ನಂಬರಿನಲ್ಲಿ ನೋಡಿ ತಿಳಿಯುವುದು·

No. 64. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, Śrītāla. Size, $25\frac{1}{2} \times 2$ inches. Pages, 50. Lines, 10 on a page. Character, Kanarese. Condition, fair. Appearance, very old. Mode of writing, good and free from mistakes.

Contains the Bhîsmaparva complete.

A rendering in Kanarese of the Bhismaparva of the Sanskrit Mahābhārata; by Nārāyaṇappa. For other particulars see under No. 28, *ante*.

Beginning :

ವೈರಿಭಟಕುಲವಿಲಯರುದ್ರನು ।
ದಾರತೇಜೋಭದ್ರನಾ ಭಾ ।
ಗೀರಥೀಸುತ ಧರಿಸಿದನು ಕುರುಸೇನೆಗೊಡೆತನವ ॥
ಕೇಳು ಜನಮೇಜಯ ! ಧರಿತ್ರೀ ।
ಪಾಲ ! ಕೌರವರಾಯನಲ್ಲಿಗೆ ।
ಕಾಳಗದ ಕಾತರಿಗರಿವರಿಟ್ಟ್ಯದರು ಸುಭಟರನು ॥

ಕೇಳಿದನು ಕುರುಭೂಮಿಯಲಿ ರಿಪು ।
ಜಾಲದುದಯಾಸನೆಂದು ಕುರುಕುಲ ।
ಮೌಳಿ (ತನ್ನಯ ಬಳಿಗೆ) ಕರೆಸಿದನಾಪ ಮಂತ್ರಿಗಳ ॥
ರವಿಜಗುರುಸುತಶಲ್ಯಕಲಶೋ ।
ದ್ಭವರು ಸೌಬಲರಾದಿಯಾದವ ।
ರವನಿಪಾಲನ ಕಂಡರಂದೇಕಾಂತಭವನದಲಿ ॥
ಅವನಿಪತಿ! ಹದನೇನು ? ರಿಪುಪಾಂ ।
ಡವರ ಬೀಡಿನ ಗುಪ್ತದನುವಾ ।
ನವನು ಚಿತ್ತೈಸಿದಿರೆ ಬೆಸಸುವುದೆನಲು ನೃಪ ನುಡಿದ ॥
ಸಂದಣಿಸಿ ಕುರುಭೂಮಿಯಲಿ ತಾ ।
ಮಂದಿ ಬಿಟ್ಟುದು ನಾಡೆಗಾವಳಿ ।
ಬಂದುದಲ್ಲಿಗೆ ಕಳುಹಿದರು ದೂತರನು ದುರ್ಜನರು ॥
ನಂದಗೋಪನ ಮಗನ ಕೊಂಡೆಯ ।
ದಿಂದ ಕಲಿಯೇರಿದರೆ ಕೃಪಣರ ।
ಕೊಂದಡಹುದಪಕೀರ್ತಿ ಯಿದಕಿನ್ನೇನು ಹದನೆಂದ ॥
ಭೂರಿ ನೆರೆದುದು ನಾಡಗಾವಳಿ ।
ಭಾರ ಧೃಷ್ಟದ್ಯುಮ್ನನದು ಗಡ ।
ಬಾರದೈವನ ಜೋಕೆ ಮಂದಿಯ ಕಾಹುಕಟ್ಟು ಗಡ ॥
ಧಾರಿಣಿಯ ಲಂಪಟರ ಕದನವ ।
ಹಾರಿ ಬಂದರು ಗಡ ಕೃತಾಂತನ ।
ಭೂರಿ ಭೂತದ ಧಾತುವಾಯಿತು ಲೇಸೆಲೈ ಯೆಂದ ॥

* * * *

ಆರತಿಯನೆತ್ತಿದರು ತಂದು ।
ಪ್ಪಾರತಿಯ ಸೂಸಿದರು ನೃಪಪುರ ।
ವಾರವೆಲ್ಲವು ಬಂದು ಕಂಡುದು ಕಾಣಿಕೆಯ ನೀಡಿ ॥
ಕೌರವೇಂದ್ರನ ಬಹಳ ಸೇನಾ ।
ಭಾರ ಭೀಷ್ಮಂಗಾಯ್ತು ಸಮರದ ।
ವೀರಪಟ್ಟವನಾಂತನಾಚಾರ್ಯಾದಿಗಳು ನಲಿಯೆ ॥
ಈ ನದೀನಂದನನ ಬಲದಲಿ ।
ಸೇನೆ ಶಿವಗಂಜುವುದೆ ಕುಂತೀ ।
ಸೂನುಗಳಿಗಾರಣ್ಯ[ವೇ](ಜಪ)! ಇನ್ನವರಿಗಿಳೆಯೇಕೆ ? ॥
ಮಾನನಿಧಿ ಭೀಷ್ಮಂಗೆ ಸಮರಸ ।
ಮಾನಭಟನಿನ್ನಾವನೆಂದು ಮ ।
ನೋನುರಾಗದ ಮೇಲೆ ಕೌರವರಾಯ ಬಣ್ಣಿಸಿದ ॥
ಎಲೆ ಮರುಳೆ ಭೂಪಾಲ ಕೌರವ ।
ಕುಲಪಿತಾಮಹನಹುದು ಧರ್ಮಂ ।
ಗಳೆ ವಿಪರಿಣತನಹುದು ಕಾಳಗವೆತ್ತ ಇವನೆತ್ತ ? ॥

ಗಳೆದ ಗುಳೆದ ದೊರೆಯು ಛಟಿಸುಂ ।
ಡಲಿಯೊಳಗೆ ಮನ್ನಣೆಯ ಹೇಳ್ಕೈ ।
ಕಳಿದ ಹರೆಯನಿಗೆಂದು ಗಹಗಹಿಸಿದನು ಕರ್ಣ ॥

ತೊಗಲು ಸಡಲಿದ ಗಲ್ಲ ಬತ್ತಿದ ।
ಹೆಗಲು ನರುಕಿದ ನರೆತ ಮೀಸೆಯು ।
ಜಗುಳ್ದ ಹಲುಗಳ ಹಾಯ್ದಲವುಗಳ ನೆಗ್ಗಿದವಯವದ ॥

ಅಗಿಯಲಲುಗುವ ತಲೆಯ ಮುಪ್ಪಿನ ।
ಮುಗುದನಿವ ಸೇನಾಧಿಪತಿ ನೀ ।
ನಗೆಯ ಸುರಿದೈ ರಾಯ ಕಟಕದೊಳೆಂದನಾ ಕರ್ಣ ॥

ಇಲ್ಲಿ ಭೀಷ್ಮರು ರಾಘವನ ಬಲ ।
ದಲ್ಲಿ ಜಾಂಬವರುಭಯವೀರರು ।
ಬಲ್ಲಿದರು ಬಳಿಕುಳಿದ ಸುಭಟರ ಶೌರ್ಯವೊಪ್ಪವುದೇ ? ॥

ನಿಲ್ಲು ನೀ ಕೊಂಡೆಳಸುವರೆ ಹಗೆ ।
ಯಲ್ಲಿಗೊಪ್ಪಿಸಿ ಕೊಲಿಸಲೇತಕೆ ।
ಬಿಲ್ಲಿನಲಿ ಬಡಿದಡ್ಡಗೆಡಹುವೆನೆಂದನಾ ಕರ್ಣ ॥

ಹಾ ! ನುಡಿಯದಿರು ನಿನ್ನ ಹವಣಿನ ।
ಮಾನಸನೆ ಸುರಸಿಂಧುಜನು ।
ತಾನೀ ಮೇಲನರಿಯದೆ ನುಡಿವೆ ಜವ್ವನದುಬ್ಬುಗೊಬ್ಬಿನಲಿ ॥

ನೀನೆ ಸರಿಯೇ ರಾಮಕಟಕದ ।
ಸೇನೆಯನು ತಲೆಗಾಯ್ದ ಜಾಂಬವ ।
ಗೇನು ಕೊರತೆಯನುತ್ತ ಜರೆದನು ಗರುಡಿಯಾಚಾರ್ಯ ॥

* * * *

ಹರಿಯ ಬಲವೆಂದಣ್ಣನಂಘ್ರಿಗೆ ।
ಶಿರವ ಚಾಚಿ ನಿಜಾಯುಧವ ವಿ ।
ಸ್ತರಿಸಿ ಪವನಜಪಾರ್ಥಮಾದ್ರೀಸುತರು ರಥವೇರಿ ॥

ಧುರಕೆ ನಡೆದರು ದ್ರುಪದಸಾತ್ಯಕಿ ।
ವರವಿರಾಟಾದಿಗಳು ಚೂಣಿಯೊ ।
ಳುರವಣಿಸಿದರು ಸೇನೆ ನಡೆದುದು ಮುಂದೆ ಸಂದಣಿಸಿ ॥

ಬಳಿಕ ಧೃಷ್ಟದ್ಯುಮ್ನನಾಜ್ಞೆಯೊ ।
ಳಳವಿಗೊಟ್ಟುದು ಸೇನೆ ಮೂಡಣ ।
ಜಲಧಿಗಾಂತುದು ಪಶ್ಚಿಮೋದಧಿಯೆಂಬ ರಭಸದಲಿ ॥

ಪಳಹರದ ತೋಮರದ ಕುಂತಾ ।
ವಳಿಯ ಚಮರಚ್ಛತ್ರಮಯಸಂ ।
ಕುಳದಿನಾದುದು ಭೂತಲಾಕಾಶಗತವಾಗಿ ॥

ಇಂತು ಪ್ರಥಮ ಸಂಧಿಸಮಾಪ್ತಂ.

ಸಾಮದಲಿ ರಿಪುಬಲದ ಸುಭಟ ।
ಸ್ತೋಮವನು ತನ್ನೊಳಗುಮಾಡಿಸಿ ।
ಭೂಮಿಪತಿ ಯಮನಂದನನು ಸಂಗ್ರಾಮಕನುವಾದ ॥

* * * *

ರಾಯ ರಿಪುದಳಗಂಡ ಕೌರವ ।
ರಾಯದಳಶೃಂಗಾರ ಮಲೆವರಿ ॥
ರಾಯಮರ್ದನನೆಂದು ಬಿರುದಿನಲುಲಿವ ಕಹಳೆಗಳ ॥
ಜೇಯ ಜಯಜಯಯೆಂಬ ಪಂಡಿತ ।
ಗಾಯಕರ ಮಧ್ಯದಲಿ ಬಿರಳನ ।
ನಾಯಕವ ತಿರುಹುವನು ಕರ್ಣನು ಪಾರ್ಥ ನೋಡೆಂದ ॥

ವೀರನಭಿಮನ್ಯುವಿನ ಪೊಲು ರಣ ।
ಧೀರನೀತನ ನೋಡು ಕರ್ಣಕು ।
ಮಾರಕನು ವೃಷಸೇನನಗ್ಗದ ಚಿತ್ರಸೇನಕರು ॥
ಚಾರುಲಕ್ಷಣರವರು ನೂರು ಕು ।
ಮಾರಕರು ದುರ್ಯೋಧನಾತ್ಮಜ ।
ರಾರುಣನು ಕೈಕೊಳ್ಳರವದಿರು ಸುಬಲನಂದನರು ॥

ತೋರದಲಿ ಕುಲಗಿರಿಯ ಸತ್ವದ ।
ಸಾರದಲಿ ವಜ್ರವನು ದನಿಯಲಿ ।
ಕಾರಬರಸಿಡಿಲಂದವಿದೆ ಯೇನೆಂದು ಮಾಡಿದನೋ ॥
ವಾರಿಜೋದ್ಭವನೆನಲು ಜೋಡಿಯ ।
ಭಾರಿ ರಂಜೆಯ ಕಯ್ಯ ಖಡುಗದ ।
ವಾರಣದ ಬಲಮಧ್ಯದಲಿ ಭಗದತ್ತ ನೋಡೆಂದ ॥

ಪೊಗರುಗುವ ಶೂಲಿಗೆಯ ಸುಪತಾ ।
ಕೆಗಳ ಸಿಂಧದ ಹೊಳೆವ ಹೊಂಗಂ ।
ಬುಗೆಯ ಘಾಟದ ಹಯದ ಸೂತರ ಗಳೆದ ಗರ್ಜನೆಯ ।
ಅಗಿವ ಚೀತ್ಕಾರದ ಛಡಾಳದ ।
ವಿಗಡರಥಿಕರ ರಹಿಯ ರಥರಾ ।
ಜಿಗಳ ನೋಡೈ ಪಾರ್ಥ ಭೂರಿಶ್ರವನ ಸೈನ್ಯವಿದು ।
ಕರಿಘಟೆಯ ಕೂಲದಲಿ ಹಯರಥ ।
ನರರ ತೆರೆಮಾಲೆಯಲಿ ಬಿಲುಸೆರ್ಝು ।
ಲ್ಲರಿಯ ಬುದ್ಬುದತತಿಯ ಲಸ್ತ್ರದ ಕಿಡಿಯ ವಡಬನಲಿ ॥
ಬಿರುದ ರಾಯರ ತಲೆದಿ ವಾಜಿಯ ।
ಲರಿಬಲಾರ್ಣವ ಗಜರು ಮಿಗಿಲ ।
ಳ್ಳರಿವುತಿದೆ ಬಹುವಿಧದ ವೀರಾದ್ಭುತದ ಲಹರಿಯಲಿ ॥

ಆಳುಮಯವಖಿಲೋರ್ವಿ ಪದಹತ ।
ಧೂಳಿಮಯವಾಕಾಶ ರಥತುರ ।
ಗಾಳಿಮಯ ದಿಗುಜಾಲವೇನೆಂಬೆನು ಮಹಾದ್ಭುತವ ॥
ಕಾಳಗಕೆ ನೀನಲ್ಲದವನಿಯೊ ।
ಳಾಳ ಕಾಣೆನು ಪಾರ್ಥ! ಸಾಕೆ ।
ನ್ನೇಳು ಬಾಣವ ತೂಗಿ ಮಾತಾಡಿಸು ಮಹಾಧನುವ ॥
ಎಲೆ ಧನಂಜಯ! ಹಗೆಯ ಹೆಚ್ಚಿದ ।
ಹಳುವವಿದೆಯೋ ವಜ್ರಸುತ! ನಿ।
ನ್ನಳವಿಯೊಳು ತರುಬಿದ ಸುಯೋಧನಸೈನ್ಯಗಿರಿನಿಕರ ॥
ಎಲೆ ಸಮೀರಜನನುಜ! ರಿಪುಬಲ ।
ವಿಲಘುಮೇಘನಿಕಾಯವಿದೆ ಭುಜ ।
ಬಲವ ತೋರೈ ತಂದೆ! ನೋಡುವೆನೆಂದನಸುರಾರಿ ॥

* * *

ಫೂತುರೇ ಕಲಿಪಾರ್ಥ! ವೀರ ।
ವ್ರಾತಮಯವಾಯ್ತವನಿ ಕಾರ್ಮುಕ ।
ಭೂತನಾಥನ ಗರುಡಿಯಲ್ಲಾಕಲಿತವನೆ ನಿನಗೆ ॥
ಆತುಕೊಳ್ಳದರೆ ಯೆನುತ್ತ ಕಪಿ ।
ಕೇತನನ ಶರಹತಿಯನಾಂತಾ ।
ಮಾತು ಹೆಚ್ಚಿತು ಕಡಿದು ಬಿಸುಟನು ಕೃಷ್ಣ ಬೆರಗಾಗೆ ॥
ಆ ಸಮಯದಲಿ ರಣದೊಳೊದಗಿದ ।
ರಾ ಸುಯೋಧನ ಶಲ್ಯನಾ ದು ।
ಶ್ಶಾಸನನು ಕೃಪಶಕುನಿಗುರುಸುತನಾದಿಯಾದವರು ॥
ಸೂಸಿದರು ಸರಳುಗಳನರ್ಜುನ ।
ಘೋಸಿಯಾದನು ಯಿಳೆಯ ಮೇಘದ ।
ಮೊಸಲಿನ ಮಳೆಗಾಲವೆನೆ ಮೋಹಿದುವು ಶರವರ್ಷ ॥
ಕುದುರೆ ಕಂಗೆಟ್ಟುವು ಮುರಾರಿಯ ।
ಹೃದಯ ಚಂಚಲವಾಯ್ತು ಗಾಲಿಗ ।
ಳದುರಿದುವು ಗರುವಾಯಿಗೆಟ್ಟನು ಮೇಲೆ ಹನುಮಂತ ॥
ಹೆದರಿದರು ನಾಯಕರು ಪಾಂಡವ ।
ರಥವು ಮುರಿದುದು ಸುರರು ಚಿಂತಿಸಿ ।
ಕುದಿದರರ್ಜುನಪಕ್ಷಪಾತವ್ಯರ್ಥವಾಯ್ತೆನುತ ॥
ತೆರಳುವನೆ ಬಿಲುಗಾರರಿಗೆ ಬರ ।
ಗುರುವಲಾ ಕಲಿಪಾರ್ಥನನಿಬರ ।
ಸರಳ ಕಡಿದನು ಕೃಪನನೆಚ್ಚನು ಗುರುಸುತನ ರಥವ ॥
ಉರುಳಗೆಡೆದನು ಶಲ್ಯನನು ಹೇ ।
ವರಿಸಲೆಚ್ಚನು ಕೌರವನ ಬೇ ।
ರುರದಲಂಬನು ಸೇಳಿದನು ಸಮರಥನ ॥

End :

ಬವರದೊಳಗೌಚಿತ್ಯಪರಿಪಾ ।
ಕವನು ಬಲ್ಲಿರಿ ಕೌರವರ ಪಾಂ ।
ಡವರ ವೃತ್ತಾಂತದ ರಹಸ್ಯದ ನೆಲೆಯನರಿದಿಹಿರಿ ॥
ನಿಮಗೆ ಬೇರೊಂದಿಲ್ಲ ನಾವ್ ಹೇ ।
ಳುವಮು ಕೃಷ್ಣನ ನೇಮವನು ಮಾ ।
ಡುವನು ತದ್ರೋಣಾದಿ ಸುಭಟರ ಕಳುಹಿದನು ಭೀಷ್ಮ ॥
ಬೀಳುಕೊಂಡರು ರಾಯರಿಬ್ಬರು ।
ಪಾಳೆಯಂಗಳಲಿತ್ತ ಪಡುವಣ ।
ಶೈಲವಿಪುಲಸ್ತಂಭದೀಪಿಕೆಯಂತೆ ರವಿ ಮೆರೆದಾ ॥
ಮೇಲು ಮುಸುಕಿನ ಹೊತ್ತ ದುಗುಡದ ।
ತಾಳಿಕೆಯ ದುಮ್ಮಾನ ಜಲಧಿಯ ।
ಕಾಲುವೆಗಳೆನೆ ಕೌರವರು ಹೊಕ್ಕರು ನಿಜಾಲಯುವ ॥
ಇವರು ಭೀಷ್ಮನ ಬೀಳುಕೊಂ ।
ಡುತ್ಸವದ ಹರುಷದಲೊಮ್ಮೆ ಗಂಗಾ ।
ಭವಗೆ ತಪ್ಪಿದ ದುಗುಡ ಭಾರದೊಳೊಮ್ಮೆ ಚಿಂತಿಸುತ ॥
ಕವಲು ಮನದಲಿ ಕಂಪಿಸುತ ಶಿಬಿ ।
ರವನು ಹೊಕ್ಕರು ನಿಖಿಳಸೇನಾ ।
ನಿವಹಸಹಿತವ್ರು ವೀರನಾರಾಯಣನ ಕರುಣದಲಿ ॥

ಅಂತು ಸಂಧಿ ೧೦ ಸಮಾಪ್ತಂ.

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧುಪಾನ ಪರಿರಕ್ಷಿತ ವಚಷ್ಷಟ್ಪದನಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕ ಭಾರತಕಥಾಕುಸುಮವಲ್ಲರಿಯೊಳ್ ಭೀಷ್ಮಪರ್ವ ಸಮಾಪ್ತಂ ॥

(ವಿ-ವಿ.)—

ಭೀಷ್ಮಪರ್ವವು ಸಮಗ್ರವಾಗಿದೆ. ೧೦ ಸಂಧಿಗಳು. ಬರೆವಣಿಗೆ ಶ್ರೇಷ್ಠವಾದುದು; ತಪ್ಪುಗಳಲ್ಲವೆನ್ನಬಹುದು. ಶೈಥಿಲ್ಯವೂ ಗ್ರಂಥ ಪಾತವೂ ಇಲ್ಲ. ಮುದ್ರಿತಪ್ರತಿಗಿಂತಲೂ ಉತ್ತಮವಾದ ಪಾಠಾಂತರಗಳು ಇದರಲ್ಲಿ ಹೇರಳವಾಗಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೬೮ ನಂಬರಿನಲ್ಲಿ ನೋಡಿ ತಿಳಯುವುದು.

No. 65 ಭಾರತಕಥಾಮಂಜರಿ.

BHĀRATAKATHĀMAÑJARI.

Substance, Śritāla. Size, $14\frac{1}{4} \times 2\frac{1}{4}$ inches. Pages, 38. Lines 14 on a page. Character, Kanarese. Condition, slightly injured. Mode of writing, good and free from mistakes.

Contains the Sandhis 1—5 complete and 1—15 stanzas of the 6th Sandhi in the Bhismaparva.

Same work as the above ; by Nārāyaṇappa. For other particulars see under No. 64, ante.

(ವಿ-ವಿ·)—

ಭೀಷ್ಮಪರ್ವದಲ್ಲಿ ಮೊದಲಿನ ಐದು ಸಂಧಿಗಳು ಸಮಗ್ರವಾಗಿಯೂ, ಆರನೆಯ ಸಂಧಿಯಲ್ಲಿ ೧೫ ಪದ್ಯಗಳೂ ಇವೆ· ಬರವಣಿಗೆ ಉತ್ತಮವಾದುದು· ತಪ್ಪುಗಳು ಇಲ್ಲವೆನ್ನಬಹುದು· ಸ್ವಲ್ಪ ಶಿಥಿಲವಾಗಿದೆ· ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ· ಮಿಕ್ಕ ವಿಷಯಗಳನ್ನು ೬೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು·

No. 66. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, $8\frac{1}{4} \times 1\frac{1}{2}$ inches. Pages, 62. Lines, 7 on a page. Character, Kanarese. Condition, injured. Appearance, old. Mode of writing, good but not free from mistakes.

Contains a portion in the beginning of the Bhīṣmaparva.

Same work as the above ; by Nārāyaṇappa. For other particulars see under No. 28, *ante*.

(ವಿ-ವಿ.)—

ಭೀಷ್ಮಪರ್ವದ ಮೊದಲಿನಲ್ಲಿ ಕೆಲವು ಭಾಗ ಮಾತ್ರವೇ ಇದೆ. ಬರವಣಿಗೆ ಚೆನ್ನಾಗಿದೆ. ಶಿಥಿಲ. ತಪ್ಪುಗಳಿವೆ. ಗ್ರಂಥಪಾತವಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು·

No. 67. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, $11\frac{1}{4} \times 1\frac{5}{8}$ inches. Pages, 28. Lines, 5 on a page. Character, Kanarese. Condition, fair. Appearance, old. Mode of writing, fair but not free from mistakes.

Contains a portion in the beginning of the Bhīṣmaparva :

Same work as the above ; by Nārāyaṇappa. For other particulars see under No. 28, *ante*.

(ವಿ-ವಿ.)—

ಭೀಷ್ಮಪರ್ವದಲ್ಲಿ ಮೊದಲಿನ ಸ್ವಲ್ಪಭಾಗವೇ ಇದೆ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ· ಶೈಥಿಲ್ಯ ಗ್ರಂಥಪಾತಗಳಿಲ್ಲವೆನ್ನಬಹುದು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು·

No. 68. ಭಾರತ ಕಥಾಮಂಜರಿ.

BHĀRATAKATHĀMAÑJARI.

Substance, Śrītāla. Size, 25½ × 2 inches. Pages, 68. Lines, 12 on a page. Character, Kanarese. Condition, fair. Appearance, very old. Mode of writing, good and free from mistakes.

Contains the Drōṇaparva complete.

A rendering in Kanarese of the Drōṇaparva of the Sanskrit Mahā-Bhārata; by Nārāyaṇappa. For other particulars see under No. 28, *ante*.

Beginning:

ರಾಯಕಟಕಪಿತಾಮಹನಂತರು ।
ವಾಂಛಾಲಭಿಷೇಕವನು ಕೌರವ । (?)
ರಾಯ ಮಾಡಿಸಿ ಪತಿಕರಿಸಿದನು ಕುಂಭಸಂಭವನ ॥
ಸೋಲಿಸಿಕೆ ಕರ್ಣಾಮೃತದ ಮಳೆ ।
ಗಾಲ ನಿಮ್ಮಯ ಕಿವಿಗಳನು ನೆರೆ ।
ಕೇಳದೈ ಕೌರವನ ಕದನದ ಬಾಲಕೇಳಿಗಳ ॥
ಹೇಳುವುದು ತಾಪೇನ ಕೆಂಗರಿ ।
ಗೋಲ ಪುಂಜದ ಮಹಿಮುನಿರವನು ।
ಮೇಳು ಪೋಗಿನ ಕಥೆಯನವಧಾನದಲಿ ಕೇಳೆಂದ ॥
ಬತ್ತಿತಂಬುಧಿ ನಿನ್ನಮಗ ಹೊಗ ।
ವತ್ತಕಾದುದು ನೆಲನು ನೃಪತಲೆ ।
ಗೊತ್ತಿ ಹೊಗಲೊಳಕೊಳ್ಳದಂಬರವೇನನುಸುರುವೆನು ॥
ಮಿತ್ತು ನಿಮಗೊಲಿದಿಹಳು ಬಳಿಕಿ ।
ನ್ನುತ್ತರೋತ್ತರವೆಲ್ಲಿಯದು ಪೆರೆ ।
ಚಿತ್ತವಿಸುವುದು ದ್ರೋಣ . . ಂಗಾಯ್ತು ಹರುವೆಂದ ॥
ಅಯ್ದು ದಿವಸದೊಳಹಿತ ಬಲವನು ।
ಹೊಯ್ದು ಹೊಡೆಕಟ್ಟಿಡಿ ರಿಪುಗಳೊ ।
ಳೆಯ್ದಿ ದೊರೆಗಳನಿರಿದು ಮೆರೆದು ಮಹಾಪರಾಕ್ರಮವ ॥
ಕಯ್ದುಕಾರರ ಗುರು ಛಡಾಳಿಸಿ ।
ಮೆಯ್ದೆಗೆದು ನಿರ್ಜರರ ನಗರಿಗೆ ।
ಹಾಯ್ದನೆನಲುರಿ ಜಠರದಲಿ ಮೋಹರಿಸಿತವನಿಪನ ॥

* * * *

ಅರಸ! ಬೇಡೈ ವರವನೆನ್ನನು ।
ಕರೆದು ಪತಿಕರಿಸಿದ ಬಳಿಕ ತಾ ।
ಬರಿದೆ ಹೋಹೆನು ಮೆಚ್ಚಿದೆನು ನುಡಿಬೇಡತನವೇಕೆ ? ॥
ಹೊರಹೊಗದೆ ಹೇಳೆನಲು ನಗೆಮೊಗ ।
ವರಳೆ ಪೊಂಪುಳಯೋಗಿ ಕೌರವ ।
ರರಸ ನುಡಿದನು ಕಟ್ಟಿಕೊಡಿ ಧರ್ಮಜನ ತನಗೆಂದು ॥

ಮರಣ ಮಳಿತ್ರಾನುಗ್ರಹ(ವ) ನೀ ।
ಧರಿಸಬೇಹುದೆ ಮಗನೆ ಪಾರ್ಥನ ।
ಪರಿಯನರಿಯಾ ಹಿಡಿಯಲೀವನೆ ಧರ್ಮನಂದನನ ॥
ಬರಿದೆಬೇಡಿದೆ ಮಗನೆ ನೋಕದ ।
ವರವ ವಚನಿಸಿ ಮಾಡದಿಹ ಬಾ ।
ಹಿರರು ನಾವಲ್ಲೆನಲು ಕೌರವರಾಯನಿಂತೆಂದ ॥
ಕೊಡುವೊಡಿದು ವರವಲ್ಲದಿದ್ದರೆ ।
ನುಡಿಗೆ ಮೊಳೆಹೊದ್ದುವುದೆ ನಿಮ್ಮಕ ।
ತೊಡುಕನೋಲುವನಲ್ಲ ನೀವೇ ಬಲ್ಲಿರೆನೆ ನಗುತ ॥
ಹಿಡಿದು ಬಗಿವೆನು ಪಾರ್ಥನನು ಕೆಲ ।
ಕಡೆಗೆ ತಪ್ಪಿದ ಧರ್ಮಪುತ್ರನ ।
ಬಿಡೆನು ನಿನ್ನಯ ಪುಣ್ಯದಳತೆಯ ಕಾಣಬಹುದೆಂದ ॥
ನಾಕಿದೊಳ್ಳಿತು ಚಾಪಯಂತ್ರಪಿ ।
ನಾಕಿಯೇರಿಸಿ ನುಡಿದ ನುಡಿಯಿದು ।
ಕಾಕಹುದೆ ಕೈಕೊಂಡನೆನುತವನೀಶ ಹರುಷದಲಿ ॥

ಆಕೃಪಾದಿಮಹಾಪ್ರಧಾನಾ ।
ನೀಕವನು ಕಳುಹಿದನು ಮನೆಗೆ ದಿ ।
ವಾಕರನ ಹೆಡತಲೆಗೆ ಹಗರಿಕ್ಕಿದನು ಚಂದ್ರಮನ ॥

ಜಗ ವಿರಾಜಿತವಾಯ್ತು ಕುಮುದಾ ।
ಳಿಗಳ ಬಾಗಿಲು ಹೂಡಿದುವು ಸೊ ।
ರೆಗಳು ಕವಿದುವು ತುಂಬಿಗಳು ಸಿರಿವಂತನರಮನೆಗೆ ॥

ಉಗಿದುವಂಬುದವನು ಮಯೂಖಾ ।
ದಿಗಳು ಭುವನದ ಜನದ ಕಂಗಳ ।
ತಗವು ಬಿಟ್ಟುದು ಸೆರೆಯ ಬಿಟ್ಟುವು ಜಕ್ಕವಕ್ಕಿಗಳ ॥

Colophon:

ಇಂತು ಪ್ರಥಮಸಂಧಿ ಸಮಾಪ್ತಂ ॥

ಕಡುಗಿ ಬರೆ ದ್ರುಪದಜನ ತೇರನು ।
ಕಡಿದು ಸಮರಥರುಗಳ ಸೋಲಿಸಿ ।
ಕೊಡನ ಮಗ ಧರ್ಮಜನ ಪಿಡಿಯಲು ಬಿಡಿಸಿದನು ಪಾರ್ಥ ॥

ಬೆಳಗು ಬೆಸಲೊದುದು ಗಗನವುಂ ।
ಡಲವು ತಿಮಿರನ ಸತಿಯ ಪ್ರೋಲೆಯ ।
ಕಳಚಿದುದು ಮಧುಪಂ(ಗಳುಳಿದುವು) ಕೈರವಾದಿಗಳ ॥

ಜಲಜ ನಗುತಿದ್ದುದು ಪಯೋದಧಿ ।
ಕಳಕಳವ ನುಂಗಿತು ರಥಾಂಗಾ ।
ವಳ ಮ [ನೋಹರವಾಗ] ನಂಗೊಳ ಉಡರ್ದನುದಯಾಚಲಕೆ ದಿನಕರನು ॥

ಸೂಳು ಮಿಗಿಲಳ್ಳಿರಿವ ಪುರುನಿ ।
ಸ್ವಾಳಜಯವದ್ರಿಗಳ ಹೆಡೆತಲೆ ।
ಸೀಳೆ ಸಿಡಿಲೇಳಿಗೆಯಲೆದ್ದುವು ನಿಖಿಲವಾದ್ಯರವ ॥

ಆಳು ನೆರೆದುದು ನೆಲ ಕುಸಿಯೆ ರಥ ।
ಜಾಲ ಜರಿದುದು ಹಣ್ಣಿದಾನೆಯ ।
ಸಾಲು ಮೆರೆಯಲು ಕುಣಿಯುತೆದ್ದುವು ಕೊಡೆ ತೇಜಗಳು ॥

* * * *

ಗಾಯವಡೆದನು ದ್ರುಪದ ಮತ್ಸ್ಯನ ।
ಬಾಯೊಳೊಕ್ಕುದು ರಕುತ ತೆಕ್ಕೆಯೊ ।
ಳಾಯುಧಂಗಳನೊಪ್ಪಿಸಿದರಿಳಿದೋಡಿದರು ರಥವ ॥

ನಾಯಲಾಡನು ಧೃಷ್ಟಕೇತು ವಿ ।
ಧಾಯಿಗೆಟ್ಟನು ಭೋಜನಿತ್ತಲು ।
ರಾಯನಲ್ಲಿಗೆ ರಥವ ದುವ್ವಾಳಿಸಿದನಾ ದ್ರೋಣ ॥

ತೀರಿತಿನ್ನೇನವನಿಪನ ಸಂ ।
ಸಾರವಿನ್ನರಗಳಿಗೆಯಲಿ ಗಾಂ ।
ಧಾರಿ ನೆರೆನೋಂಪಿಯಲಿ ಪಡೆದಳು ಕೌರವೇಶ್ವರನ ।

ನಾರ ಹೇಳುವ ಸಾಹಸಿಗರೆಂ ।
ದಾರುತಿರೆ ಬಳಕಿತ್ತಲಾಹವ ।
ಧೀರಸಾತ್ಯಕಿಭೀಮಪಾರ್ಥಕುಮಾರರನುವಾಯ್ತು ॥

ಗೆಲಿದನೀಗುರು ಭಾಪು ! ದ್ರೋಣನ ।
ಬಲುಹು ಭರ್ಗನ ಸಿರಿ ಯುಧಿಷ್ಟಿರ ।
ಸಿಲುಕಿದನಲಾ ಶಿವಶಿವಾ ! ಕಲಿಕರ್ಣ ನೋಡೆನುತ ॥

ಉಳಿದು ದುರ್ಯೋಧನನನೀಕ್ಷಿಸ ।
ಲಲಗು ಭುಜಬಲ ಭಾನುನಂದನ ।
ನಳುಕದೀಮಾತುಗಳನೆಂದನು ನೀತಿಸಮ್ಮತವ ॥

ಗೆಲುವು ನಮಗೆಲ್ಲಿಯದು ? ಧರ್ಮಜ ।
ಸಿಲುಕುವುದು ತಾನಿಲ್ಲ, ಕೃಷ್ಣನ ।
ನೆಳಲು ದಿಟವುಂಟಾದರೊಳಗಾಗರು ವಿರೋಧಿಗಳು ॥

ನೆಲನ ತಿಣ್ಣವ ತಿದ್ದಲೋಸುಗ ।
ಸುಳಿದನರಿಯಾ ! ಕೃಷ್ಣನಾತನ ।
ಬಲದವರಿಗೆಂತಹುದು ಬಾಧೆಗಳೆಂದನಾ ಕರ್ಣ ॥

ಗಿರಿಯ ಕೊರಳಿಗೆ ವಜ್ರಮಣಿಯಾ ।
ಭರಣವೇ ದಳ್ಳುರಿಯ ಜೋಡುಗ ।
ಳರಗಿನೋಲೆಯಕಾರರಿಗೆ ಸುಯಿಧಾನವೇ ನೃಪತಿ ॥

ವರತಿಮಿರರಾಜಂಗೆ ಮಂಗಳ ।
ಕರವೆಯಾರತಿ ಕೃಷ್ಣಭಕ್ತರ ।
ಪರಿಭವವು ಜೀವರಿಗೆ ಪಥ್ಯವೆ ? ಯೆಂದನಾ ಕರ್ಣ ॥

ಇರಲಿ ಮೋಣಾದ್ಧರದಲಿ ಹತ್ತಿರ ।
ವಿರಲಿ ತನ್ನವರೆಂದರಾಗಲೆ ।
ಹರಹಿಕೊಂಬನು ಕೃಷ್ಣಗದು ತನಗೇರಿಸಿದ ಭಾಷೆ ॥

ಹರಿ ಸಮೀಪದೊಳಿಲ್ಲ ದ್ರೋಣಂ ।
ಗರಸ ಸಿಲುಕಿದನೆಂದು ಬಗೆದೈ ।
ಮರುಳೆ ಮುರವೈರಿಯ ಕಟಾಕ್ಷದ ಕಾಪು ಬಲುಹೆಂದ ॥

ಆ ಹದನದಂತಿರಲಿ ನಮ್ಮ ।
ಯೂಹವಕೆ ಕಲಿಭೀಮಸಾತ್ಯಕಿ ।
ರೂಹುದೋರಿದರೇ ಘಟೋತ್ಕಚಪಾರ್ಥಸುತರೊಡನೆ ॥

ಸಾಹಸಿಕರೊಗ್ಗಾಯ್ತು ದ್ರೋಣಂ ।
ಗೀ ಹದನು ಭಾರಂಕವೀಗಳೆ ।
ಬೇಹ ಸುಭಟರ ಕಳುಹು ಕಾಳಗಕೆಂದನಾ ದ್ರೋಣ ॥

ಎನಲು ನೂಕಿದನರಸ ದುಶ್ಶಾ ।
ಸನಜಯುದ್ರಥಬೇಹವರಗುರು ।
ತನುಜಕೃಪಮಾದ್ರೀಶಭಗದತ್ತಾದಿಗಳು ಸಹಿತ ॥

ತನತನಗೆ ನಾಯಕರು ದ್ರೋಣನ ।
ಮೊನೆಯ ಬಲಿದರು ಹಿಡಿ ಯುಧಿಷ್ಠಿರ ।
ಜನಪತಿಯನೆನುತುರುಬಿದರು ತರುಬಿದರು ಪರಬಲವ ॥

ಘಡಘಡಾರೋ ಧರ್ಮಪುತ್ರನ ।
ಹಿಡಿವವರು ಬಾಯ್ಬಡಿಕರಿವದಿರು ।
ಗೆಡೆದರೇನಹುದೆನುತ ಹೊಕ್ಕನು ಭೀಮ ಬಳಸರಿಸಿ ॥

ಕಡಲ ಮುರಹಿನ ಬಹಳ ಲಹರಿಯ ।
ಲೊಡೆಮುರಿದ ಮಂದರಥಲೋಲವ ।
ಗಡಿಸಿ ಹೊಕ್ಕನು ಭೀಮ ಗಾಢದ ಗದೆಯ ಹೊಯ್ಲಿನಲಿ ॥

ಗದೆಯ ಘೋರಾಘೋರಿಕ್ಕಾರನ ।
ನಿದಿರುಗೊಂಡಳು ದೆಸೆದೆಸೆಗೆ ಹ ।
ಬ್ಬಿದುದು ಬಲನೆಡೆಜೋಡು ಬಲುಭಾರಣೆಯ ಪಾತಕರು ॥

ಮದಗಜದ ನಿಟುವರಿಯ ತೇರಿನ ।
ಕುದುರೆಕಾರರ ಕಾಹಿನಲಿ ಕೆ ।
ಬ್ಬಿದುದು ನಿಬ್ಬರವಾಗಿ ಬಹುವಿಧವಾದ್ಯ ನಿರ್ಘೋಷ ॥ (?)

* * * *

ಮಳೆಗೆ ಮೊಗದಿರುಹುವನೆ ವಡಬಾ ।
ನಲನೆಂಬಪ್ಪೊ ನಿನ್ನಂಬು ತಾಗಿದೆ ।
ಡೆಳುಕುವೆನೆ ತಾಹೆನುತ ರವಿಸುತನೆಚ್ಚನತಿರಥನ ॥

ಹಿಳಿಕು ಕವಿದುವು ಭಟನ ಕಯ್ಮೆಯ್ ।
ಗಳಲಿ ಪುಳುಗಿದುವಿರುಳು ಮರದಲಿ ।
ಕೊಳೆದು ಮುತ್ತಿದ ಮಿಂಚುಹುಳುವಿನ ಮಿನುಗಿನಂದದಲಿ ॥

ಹೂಣೆಗರು ಕೆಲಕೆಲಬರಿನದಿರ ।
ಗೋಣಕೊಯ್ದರೆ ಯಿವರ ಜೀವದ ।
ಕೇಣಿಗಾರರು ಭೀತಿಗೊಂಡರು ಭೀಮಫಲುಗುಣರು ॥

ಮಾಣರಿವದಿರು ಮತ್ತೆ ರಣವನು ।
ಕಾಣೆನಿದಕಿನ್ನೇಪೆನೆನುತ ।
ಕ್ಷೀಣಭುಜಬಲನೆಚ್ಚು ಕಡಿದನು ಸೂತಜನ ರಥವ ॥

ಕೈದು ಮುರಿಯಲು ಮುಂದೆ ನೂಕದೆ ।
ಹಾಯ್ದನೀ ರವಿಸೂನು ಬಳಿಕಡೆ ।
ಹಾಯ್ದು ಹಿಡಿದನು ಬವರವನು ಕರ್ಣಾತ್ಮಜನು ಕಡುಗಿ ॥

ಅಯ್ದು ಬಾಣದೊಳವನ ಕೊರಳನು ।
ಕೊಯ್ದನರ್ಜುನಸೂನುಪಾತನ ।
ನೊಯ್ದರಂತಕದೂತರದ್ಭುತವಾಯ್ತು ಸಂಗ್ರಾಮ ॥

ಘಾಯವಡೆದನು ಶಲ್ಯ ರವಿಸುತ ।
ನಾಯುಧವ ಬಿಸುಟೈದಿದನು ಕುರು ।
ರಾಯನನುಜನು ಬದುಕುವನೆ ಮೈಯೆಲ್ಲ ಬಾಣಮಯ ॥

ಸಾಯದುಳಿದವರಿಲ್ಲ ಮಿಕ್ಕಿನ ।
ನಾಯಕರೊಳಕಟೆಂದು ಕುರುಬಲ ।
ಬಾಯಬಿಡೆ ಶಲ್ಯನ ಕುಮಾರನು ಹೊಕ್ಕನಾಹವವ ॥

End:

ಬಂದು ವೇದವ್ಯಾಸಮುನಿ,ಗುರು ।
ನಂದನನ ಸಂತೈಸಿ ಪಾರ್ಥಮು ।
ಕುಂದರುಗಳಾವಿಂಗುಲಿ ನರನಾರಾಯಣಾಹ್ವಯದಿ ॥

ಸಂದ ಋಷಿಗಳ ಭೂಮಿಭಾರವ ।
ನೊಂದುಪಾಯದಲಪಹರಿಸಲ್ಕೆ ।
ತಂದ ಹದನನು ತಿಳುಹಿ ಬಂಪನು ಫಲುಗುಣನ ಹೊರೆಗೆ ॥

ನರನ ಚಿತ್ತಗ್ಲಾನಿಯನು ಪರಿ ।
ಹರಿ[ಸುವ] (ಸಿದ) ನು ಕೂಲದಲಿ ಮುಂಕೊಂ ।
ಡರಿಬಲವ ನಿ[ರ](ರಿದಾ)ತನಾರೆನಲಿಂದುಧರನೆಂದು ॥

ಹರನ ಕರಣದ ಹದನನೀತಂ ।
ಗೊರೆದು ಶತರುದ್ರೀಯುವನು ವಿ ।
ಸ್ತರಿಸಿ ಬಿಜಯಂಗೈದನಾ ಮುನಿಪತಿ ನಿಜಾಶ್ರಮಕೆ ॥
ಬಿಸುಟ ಕೈದುವನೆಲ್ಲವನು ಕೈ ।
ವಶವ ಮಾಡಿತು ಸೇನೆ ಲಜ್ಜಾ ।
ರಸಕೆ ಗುರಿಯಾಯ್ತಮ್ಮ ಮರಳಿದು ಹರುಷಮಾಯರಸಕೆ ॥
ಮುಸುಕುದಲೆಯಲಿ ಮುರಿದುದದು ಭಯ ।
ರಸದರಹಿಯಲಿ ತಿರುತಿರುಗಿ ತಿವಿದುರವಿ ? ।
ಮುಸುಡ ಮುರುಹಿನ ರಾಗದಲಿ ಬೀಳ್ಕೊಂಡನಂಬರವ ॥
ಆವ ಶರದಲಿ ಕೊರತೆ ? ನಿನ್ನವ ।
ರಾವ ಬಲದಲಿ ಕುಂದು ? ಭುವನದೊ ।
ಳಾವನೈ ಸಮ ಜೋಡಿ ನಿನ್ನರಮನೆಯ ಸುಭಟರಿಗೆ ? ॥
ಆವನಿದ್ದೇನಹುದು ? ಜಗದಧಿ ।
ದೈವದಲಿ ಸೆಣಸಿದಿರಿ ಪಾಂಡವ ।
ಜೀವಿಯೆಂದರಿದರಿದು ಗದುಗಿನ ವೀರನರಯಣನ ॥

ಅಂತು ಸಂಧಿ ೧೯ ಕ್ಕಂ ಮಂಗಳಂ.

ದ್ರೋಣಪರ್ವಂ ಸಮಾಪ್ತಂ ॥

Colophon :

(ಇತಿ ಶ್ರೀಮದಚಿಂತ್ಯಗದುಗಿನ ವೀರನಾರಾಯಣನ ಚರಣಾರವಿಂದಮಕರಂದ ಮಧುಪಾನ ಪರಿರಕ್ಷಿತವಚಷ್ಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸ ಯೋಗೀಂದ್ರವಿರಚಿತಮಪ್ಪ ಕರ್ನಾಟಕ ಭಾರತಕಥಾಕುಸುಮವಲ್ಲರಿಯೊಳ್ ದ್ರೋಣಪರ್ವಂ ಸಮಾಪ್ತಂ.)

(ವಿ-ವಿ.)—

ದ್ರೋಣಪರ್ವ ಸಂಪೂರ್ಣ. ೧೯ ಸಂಧಿಗಳು. ಬರವಣಿಗೆ ಉತ್ತಮವಾದುದು. ತಪ್ಪುಗಳು ಅಷ್ಟಾಗಿ ಇಲ್ಲ. ಶೈಥಿಲ್ಯವೂ ಗ್ರಂಥ ಪಾತ್ರವೂ ಇಲ್ಲ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಅನೇಕ ಪಾಠ ಭೇದಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೆ. ಮಿಕ್ಕ ವಿಷಯಗಳನ್ನು ೬೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 69. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 15¼ × 1¼ inches. Pages, 301. Lines, 6 on a page. Character, Kanarese. Condition, injured. Appearance, old. Mode of writing, good and free from mistakes.

Contains the Drōṇaparva complete.

Same work as the above; by Nārāyanappa. This MS. contains many good readings not found in the printed edition. For other particulars see under No. 28, *ante.*

(ವಿ.ವಿ.)—

ದ್ರೋಣಪರ್ವ ಸಮಗ್ರವಾಗಿದೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಶಿಥಿಲ ಗ್ರಂಥಪಾತವಿಲ್ಲ. ಮುದ್ರಿತಪ್ರತಿಗಿಂತಲೂ ಶುದ್ಧವಾದ ಪಾಠಾಂತರಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಅಲ್ಲಲ್ಲಿ ಕೆಲವು ಪದ್ಯಗಳೂ ಭಿನ್ನವಾಗಿರುವಂತೆ ತೋರಿಬರುತ್ತವೆ.

No. 70. ಭಾರತ ಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, $15\frac{1}{4} \times 1\frac{1}{4}$ inches. Pages, 207. Lines, 6 on a page. Character, Kanarese. Condition, injured. Appearance, old. Mode of writing, good and free from mistakes.

Contains the Drōṇaparva complete.

Same work as the above; by Nārāyaṇappa. For other particulars see under No. 28, *ante.*

(ವಿ.ವಿ.)—

ದ್ರೋಣಪರ್ವ ಸಮಗ್ರ. ಬರವಣಿಗೆ ಸಾಮಾನ್ಯ. ತಪ್ಪುಗಳಿಲ್ಲ. ಶಿಥಿಲ, ಗ್ರಂಥಪಾತವಿಲ್ಲ. ಪುರಾತನ ಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 71. ಭಾರತ ಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, $13\frac{1}{2} \times 1$ inch. Pages, 292. Lines, 5 on a page. Character, Kanarese. Condition, very much injured. Appearance, very old. Mode of writing, fair and free from mistakes.

Contains the Drōṇaparva without the beginning and end.

Same work as the above; by Nārāyaṇappa. For other particulars see under No. 28, *ante.*

(ವಿ.ವಿ.)—

ದ್ರೋಣಪರ್ವದ ಆದ್ಯಂತಗಳಿಲ್ಲ. ಬರವಣಿಗೆ ಶ್ಲಾಘ್ಯವಾದುದು. ತಪ್ಪುಗಳಿಲ್ಲ. ಅತಿ ಶಿಥಿಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 72. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 9 × 1½ inches. Pages, 104. Lines, 6 on a page. Character, Kanarese. Condition, slightly injured. Appearance, very old. Mode of writing, very good and free from mistakes.

Contains the Sandhis 1-5 in the Drōṇaparva but wants 1 leaf in the beginning.

Same work as the above ; by Nārāyaṇappa For other particulars see under No. 28, *ante*.

(ವಿ.ವಿ.)—

ಅಸಮಗ್ರ ದ್ರೋಣಪರ್ವದ ಆದಿಯಲ್ಲಿ ಒಂದು ಪತ್ರವಿಲ್ಲ. ಮೊದಲಿನ ಐದು ಸಂಧಿಗಳು ಮಾತ್ರವೇ ಇವೆ. ಬರವಣಿಗೆ ಅತ್ಯುತ್ತಮವಾದುದು. ಸ್ವಲ್ಪ ಶಿಥಿಲವಾಗಿದೆ. ಗ್ರಂಥಾಂತ್ಯದಲ್ಲಿ "ರಾಮಾಯಣಾಂತರ್ಗತ ವಿಭೀಷಣಬುದ್ಧಿ"ಯ ಆರಂಭದ ಒಂದೆರಡು ಪದ್ಯಗಳಿವೆ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 73. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, palm-leaf. Size, 12 × 1⅛ inches. Pages, 192. Lines, 5 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Sandhis 1–8 complete and the 9th incomplete in Drōṇaparva.

Same work as the above ; by Nārāyaṇappa. For other particulars see under No. 28, *ante*.

(ವಿ.ವಿ.)—

ದ್ರೋಣಪರ್ವದಲ್ಲಿ, ಮೊದಲಿನಿಂದ ಎಂಟು ಸಂಧಿಗಳು ಸಮಗ್ರವಾಗಿವೆ. ಒಂಬತ್ತನೆಯ ಸಂಧಿ ಅಸಮಗ್ರವಾಗಿದೆ. ಬರವಣಿಗೆ ಉತ್ತಮವಾದುದು. ಸ್ವಲ್ಪ ಶಿಥಿಲವಾಗಿದೆ. ಗ್ರಂಥ ಪಾತವಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮುದ್ರಿತ ಪ್ರತಿಗಿಂತಲೂ ಪಾಠಭೇದಗಳು ಅನೇಕವಾಗಿವೆ. ಮಿಕ್ಕ ವಿಷಯಗಳನ್ನು ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 74 ಭಾರತಕಥಾಮಂಜರಿ-

BHĀRATAKATHĀMAÑJARI.

Substance, Śrītāla. Size, 25½ × 2 inches. Pages, 76. Lines, 12 on a page. Character, Kanarese. Condition, fair. Appearance, very old. Mode of writing, good and free from mistakes.

Contins the Karṇaparva complete.

A rendering in Kanarese of the Karnaparva of the Sanskrit Mahābhārata; by Nārāyaṇappa. For other particulars see under No. 28, *ante*.

Beginning :

ರಾಯಕಟಕಾಚಾರಿಯನ ತರು ।
ವಾಯ ಸೇನಾಪಟ್ಟವನು ರಾ ।
ಧೇಯ [ತಾ] (ನಲಿ) ವಿರಚಿಸಿದ ಮುದದಲಿ ಕೌರವರ ರಾಯ ॥
ಕೇಳು ಜನಮೇಜಯ ! ಧರಿತ್ರೀ ।
ಪಾಲ ! ತಿರುಗಿತು ಬಲವೆರಡು ನಿಜ ।
ಪಾಳೆಯಕೆ ಪರಿತೋಷಖೇದಸ್ತಿಮಿತವಿಗ್ರಹರು ॥
ಕೋಲ ಗುರುವಿನ ಮರಣವಾರ್ತಾ ।
ಕಾಲಸರ್ಪನ ತಂದು ಸಂಜಯ ।
ಹೇಳಗೆಯ ನೀಡಾಡಿದನು ಧೃತರಾಷ್ಟ್ರನಿದಿರಿನಲಿ ॥
ಬೆದರಿತಾಯಾ ಸ್ಥಾನ ಧಿಗಿಲೆಂ ।
ದುದು ಧರಾಧೀಶ್ವರನ ತಂದೆಯ ।
ಹೃದಯದಲಿ ಹುರುಳಿ[ಯ]ನು ಬಳಕುಳದವರ ಮೋರೆಗಳ ॥
ಕುದಿದುದಂತಃಕರಣವರಸನ ।
ಕದಪು ಕೈಯ್ಯಲಿ ಕೀಲಿಸಿತು ಹೇ ॥
ಳದನು ಸಂಜಯ ಮತ್ತೆ ಮೇಲಣ ರಣದ ವಾರ್ತೆಯನು ॥
ಗುಡಿಯ ಕಟ್ಟಿಸು ಜೀಯ ! ಬರೆತುದು ।
ಕಡಲು ಮರಿದುದು ಮೇರು ಕರಗಿತು ।
ಪೊಡವಿ ಬಿದ್ದುದು ಭಾನುಮಂಡಲವಹಹ ವಿತಳದಲಿ ॥
ಮಡಿದುದೈ ನಿನ್ನಾನೆ ನಿನ್ನ ।
ಗ್ಗಡದ ಭಟ ಬೀಳ್ಕೊಂಡನೈ ।
ಖಡಿವಡೆದನೈ ಕಲಿಕರ್ಣನೊಸಗೆಯ ಮಾಡಹೇಳೆಂದ ॥
ಮೊದಲಲಿದ್ದುದು ಜೀವಕಳೆ ಹೃದ ।
ಯದಲಿ ಹೃದಯವನೊದೆದು ಮಿಗೆ ಕಂ ।
ಠದಲಿ ನಿಂದುದು ಮೆಯ್ಮರೆದು ಮಲಗಿದನು ಮಂಚದಲಿ ॥
ಕೆದರಿತೆಲ್ಲಿಯದಲ್ಲಿ ರಾಯನ ।
ಹದನನರುಹಿದರೊಳಗೆ ರಾಣಿಯ ।
ರೊದರಲಂತಃಪುರದಲುಕ್ಕಿತು ಶೋಕರಸಜಲಧಿ ॥
ಬಾಯ ಬಸುರಿನ ನೊಸಲ ಹೊಯ್ಲಿನ ।
ರಾಯನರಸಿಯರತ್ತೆಯಿದಿರಲಿ ।
ಹಾಯಿದರು ಭೀತಿಗಳನೊದರಿದರೊಡನೆ ದೆಸೆಯದುರೆ ॥
ರಾಯನಾವೆಡೆ ? ಜೀಯ ! ಕಲಿರಾ ।
ಧೇಯನಾವೆಡೆ ? ನೂರುಮಕ್ಕಳು ।
ಬೀಯವಾದರೆ ಮಾವ ! ಯೆಂದರು ಸೊಸೆಯರಡಿಗೆಡೆದು ॥

ರವ್ರುಕುಳವನದನೇನ ಹೇಳುವೆ । ?
ನವನಿಪತಿಯಾ ಕರ್ಣ ಮೊದಲಾ ।
ದವರ ರಾಣೀವಾಸ ಬಹಳಾಕ್ರಂದನಧ್ವನಿಯು ॥
ಕವಿದುದೊಳ ಸೂರೇಗು ಕೋಟೆಯು । ?
ತವಕಿಗರು ಗದಬಜಿಸೆ ಕೆತ್ತ್ರವು । ?
ಭವನ ......ಕವಾಟ ತತಿ ಕಾಳ್ಗಾಯ್ತು ಗಜನಗರ ॥
ನೆರೆದುದೆಲ್ಲಿಯುದಲ್ಲಿ ಸೂರೆಗೆ ।
ಹರಿದುದೆಲ್ಲಿಯುದಲ್ಲಿ ಮದಮ ।
ತ್ಸುರದ ಜಗಳಕೆ ಸೂಳೆ ಭಂಟರು ಹೊಯ್ದುರೊಳಗೊಳಗೆ ॥
ಅರಮನೆಯೊಳಾ ಬೊಬ್ಬೆ ಹಸ್ತಿನ ।
ಪುರದೊಳೀ ಬೊಬ್ಬಾಟ ವಿನ್ನುಳ ।
ದರಸುಗಳ ಪಾಡಾವ್ರುದೆಂದನು ಮುನಿ ನೃಪಾಲಂಗೆ ॥

* * * *

ಕರೆಸಿದನು ಭೂಸುರರನಾದುಂ ।
ಬರದ [ಮಗೆ]ಮಡಿವರ್ಗ(ವನು) ದರ್ಭಾಗ್ರಂ ।
ಕುರಸಿತಾಕ್ಷತೆ ದವಳಸರ್ಷಪವರಫಲಾವಳಿಯು ॥
ತರಿಸಿದನು ಹೊಂಗಳಸತತಿಯುಲಿ ।
ವರನದೀಪಾರಿಗಳ ನಾಡಂ ।
ಬರದ ಲಗ್ನಯುಲಿಯೊದರಿದುವ್ರು ನಿಸ್ಸಾಳಕೋಟಿಗಳು ॥
ವಿರಚಿಸಿತು ಪಟ್ಟಾಭಿಷೇಕೋ ।
ತ್ಕರುಷ ಮಂತ್ರಾಕ್ಷತೆಯು ಮಳೆಗಳ ।
ಕರೆದರವನೀಸುರ(ರು) ಜಯರವ ಮೇಘಘೋಷದಲಿ ॥
ಗುರುಸುತಾದಿಮಹಾಪ್ರಧಾನರು ।
ದರುಶನವ ನೀಡಿದರು ಕರ್ಣನ ।
ಬಿರಿದಿನುಬ್ಬಟೆಲಹರಿ ಮಸಗಿತು ವಂದಿಜಲಧಿಯಲಿ ॥
ಅರಳಿತರಸನ ವದನ ಶಕುನಿಗೆ ।
ಹರುಷ ಮಿಗೆ ದುಶ್ಶಾಸನಂಗು ।
ಬ್ಬರಿಸೆ ರೋಮಾವಳಿ ವಿಕರ್ಣಾದಿಗಳ ಮನ ನಲಿಯೆ ॥
ಗುರುಜಕೃಪಕೃತವರ್ಮಶಲ್ಯಾ ।
ದ್ಯರಿಗೆ ಹೊಸಕದೊಲವ್ರು ಮಿಗಿಲಾ ।
ಗಿಗಲು ಕರ್ಣನೆ ಪಟ್ಟವಾಯಿತ್ತು ನೃಪತಿ ಕೇಳೆಂದ ॥
ನಾರಿಯರು ಮಣಿರತ್ನದೊಡಿಗೆಯು ।
ಭಾರಿಯರು ಕಂದರ್ಪವನಸಹ ।
ಕಾರಿಯರು ನೆರೆದಡಿಗಿ ಕೈಕೈಮುಂಚಿ ತಮತಮಗೆ ॥
ವೀರಸೇಸೆಯನಳವಡಿಸಿ ರತು ।
ನಾರತಿಯ ?ನೆತ್ತಿದರು ನಿಜವರಿ ।
ವಾರವ್ರೋಲಾಡಿದುದು ಬಹಳಾನಂದಜಲಧಿಯಲಿ ॥

Colophon :

ಇಂತು ಪ್ರಥಮಸಂಧಿ ಸಂಪೂರ್ಣಂ॥

ಭೀಮವಿಕ್ರಮ ಕುರುಬಲದೊಳು ।
ದ್ದಾಮ ಕರ್ಣಾಹವದೊಳಗ್ಗದ ।
ಕ್ಷೇಮ ಧೂರ್ತನೃಪಾಲಕನ ಕೆಡಹಿದನು ಕಲಿಭೀಮ ॥
ಮಗನು ದಳಪತಿಯಾದ ಗಡ! ಕಾ ।
ಳಗವ ನೋಡುವೆನೆಂಬವೊಲ. ।
ಜಗದಗ್ಗದಲಿ ನೆರೆಕಡಿತವಿಕ್ಕಿತು ತಿಮಿರವನದೊಳಗೆ ॥
ಹೊಗರು ಕುವಲಯಕಳಿಯ ಸೊಂಪಿನ ।
ನಗೆ ಸರೋರುಹಕೊಗೆಯೆ ವಿರಹದ ।
ಢಗೆ ರಥಾಂಗಕ್ಕಳಿಯೆ ರವಿಯುದಯಾಚಲಕೆ ಬಂದ ॥
ಸೂಳುಮಿಗಿಲಳ್ಳಿರಿದ ವ್ರುರುನಿ ।
ಸ್ಸಾಳಕೋಟಿಗಳುದಯದಲಿ ದಿಗು ।
ಜಾಲ ಜರಿಯಲು ಜಾಡಿ ಗೆದರುವ ಗವ್ರುರು ಗಹಳೆಗಳ ॥
ತೂಳುವರೆಗಳ ರಾಯ ಗಿಡಗನ ।
ಗೋಳೆ ಘೋಷದ ರಭಸವವನಿಯ ।
ಗೀಳೆ ನಡೆದುದು ಸೇನೆ ರವಿನಂದನನ ನೇಮದಲಿ ॥
ಮೋಹರಿಸಿತಿದು ನಡೆದು ಮಕರ ।
ವ್ಯೂಹದಲಿ ಬಳಿಕರ್ಧಚಂದ್ರ ।
ವ್ಯೂಹದಲಿ ಬಂದೊಡ್ಡಿ ನಿಂದುದು ಪಾಂಡುಸುತಸೇನೆ ॥
ಮೋಹರಿಸಲೊಡೆವೆರಸಿ ಹೊಯ್ವರು ।
ಗಾಹುಗತ್ತಕವನುಳಿದು ಚೂಣಿಯ ।
ಸಾಹಸಿಗರು ಸನಾಮರೈದಿದರೆರಡು ಥಟ್ಟಿನಲಿ ॥

* * * *

ರಣಕೆ ಕೊಂಬವೆ ಕರ್ಣನಿದನಾ ।
ರೆಣಿಸುವರು ದುಷ್ಕರ್ಮಶೇಷದ ।
ಋಣನಿಬದ್ಧರುಕಂಡು ಮಾಡುವ್ರುದೇನು ಕೌರವರು ॥
ರಣಮನೋರಾಗದಲಿ ದಳಸಂ ।
ದಣಿಯ ನಿಲಿಸಿದನತಿರಥರ ಲಾ ।
ವಣಿಗೆಗೊಂಡನು ಕರ್ಣ ಪರಿವಾರಕ್ಕೆ ಕೈಮುಗಿದ ॥
ನೊಂದವರು ನಿಲಿ ಸ್ವಾಮಿ ಕಾರ್ಯಕೆ ।
ನಿಂದು ಗಳಿವರು ಮರಳಿ ಮನೆಗಳ ।
ಹಿಂದಣಾಶೆಯ ಹೇಮಹರಿಕರಿಗಿಂದು ಮಹನವಮಿ ॥
ನಿಂದರೊಳ್ಳಿತು ನೃಪನ ದೆಸೆಯಲಿ ।
ತಂದು ಕಲೆಯುಳ್ಳವರು ಕಾಳಗ ।
ವಿಂದು ಬೆಟ್ಟಿತು ಬೀಳುಕೊಂಬುದು ಭೀತಿ ಬೇಡೆಂದ ॥ ?

* * * *

ಧನುವಿನಲಿ ಸಾತ್ಯಕಿಯು ದ್ರುಪದನ ।
ತನಯನನು ತೇರಿನಲಿ ಮಾದ್ರೀ ।
ತನಯನನು ಸಾರಥಿಗಳಲಿ ಜೋಡಿನಲಿ ಪವನಜನ ॥
ಬನುಗನವರವರಂಗದಲಿ ಕೈ ।
ಮನವ ಖಂಡಿಸಿ ಸಕಲರಿಪು ಸಾ ।
ಧನವನೊಬ್ಬನೆ ಕರ್ಣ ಗೆಲಿದನು ನೃಪತಿ । ಕೇಳೆಂದ ॥
ಮುಂಮುಗೆಟ್ಟುದು ದೊರೆಗಳನೆ ರವಿ ।
ನಂದನನ ರಥಕಾಗಿ ಸೇನಾ ।
ವೃಂದ ಕವಿದುದು ಚೇಕಿತಾನಕ ಮಧ್ಯಸೃಂಜಯರು ॥
ಸಂದಣಿಸಿ ಪಾಂಚಾಲ ಕೇರಳ ।
ಮಂದ ಮಗಧದ್ರವಿಡವಂಗವು ।
ಳಂದ ಬಲಬಹುಳಾಬ್ಧಿ ಮುತ್ತಿತು ಮತ್ತೆ ಮೂದಲಿಸಿ ॥
ಒದೆವ ಮಂದರವನು ತರಂಗದ ।
ಉದಧಿ ಹೊಯ್ವಂದದಲಿ ಹೊಕ್ಕವು ।
ಕುದುರೆ ತೂಳದಾನೆ ಕವಿದರು ರಥಿಕರೊಳಬಿದ್ದು ॥
ಒದರಿ ವಿವಿಧಾಯುದದ ಕಾಲಾ ।
ಳ್ಸೆಡಗಿ ಕೈದೋರಿಸಿದರನಿಬರ ।
ಸದೆದನೊಬ್ಬನೆ ಕರ್ಣ ಕೆದರಿದನಾ ಮಹಾಬಲವ ॥
ಬೀಳುವಂಬಿನ ಹೊಯ್ವ ಖಡ್ಗದ ।
ತೂಳುವಾನೆಯ ನೂಕಿ ತಾಗುವ ।
ಶೂಲಿಗೆಯ ಖಂಡಿಸುವ ವಂಕಿಯ ನೆಡುವ ಭಲ್ಲಿಯದ ॥
ಬೀಳುವಿಟ್ಟಿಯ ಮುರಿವ ಪರಿಘದ ।
ಗಾಳಿಸುವ ಪರಶುವಿನ ಧಾಳಾ ।
ದೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಸಿನಲಿ ॥

End :

ಅರಸ ನೀ ಸೈರಿಸಿದಲಾ ಶಂ ।
ಕರವಿರಿಂಚಾದಿಗಳು ಕರ್ಣನ ।
ಪರಮಸುಕೃತವ ಕಂಡು ಕೊಂಡಾಡಿದರು ಅಕಟನುತ ॥
ಎರಡು ಥಟ್ಟಿನ ದುಃಖಮಯ ಸಾ ।
ಗರವನದನೇನೆಂಬೆ ಫಲುಗುಣಾ ।
ತಿರುಗಿದನು ಪಾಳೆಯಕೆ ದುಮ್ಮಾನದಲಿ ಹರಿಸಹಿತ ॥
ಇತ್ತ ಪರವಶವಾದ ರಾಯನ ।
ತೆತ್ತಿಗರು ದಂಡಿಗೆಯೊಳೀತನ ।
ನೆತ್ತಿ ತಂದರು ಪಾಳೆಯಕೆ ದುಸ್ಥಿತಿಯ ಮೇಳಯಕೆ ॥

ತೆತ್ತನೇ ಮಗನಸುವನಕಟಿನು ।
ತೊತ್ತಿ ಚಿಂತಾರಾಗದಲಿ ಕಡ ।
ಲತ್ತ ಬಿದ್ದನು ಬಿಸುಟನಂಬುಜಮಿತ್ರನಂಬರವ ॥
ದ್ಯುಮಣಿ ಕರ್ಣದ್ಯುಮಣಿಸಹಿತ ।
ಸ್ತಮಿಸೆ ಕಮಲಿನಿ ಕೌರವನ ಮುಖ ।
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ ।
ಅಮಲ ಚಕ್ರಾಂಗಕ್ಕೆ ಭೂಪೋ ।
ತ್ತಮನ ವಿಜಯಾಂಗನೆಯರಗಲಿಕೆ ।
ಸಮನಿಸಿತು ಕೇಳಯ್ಯ ಜನಮೇಜಯ ಮಹೀಪಾಲ ॥

Colophon :

ಅಂತು ಸಂಧಿ ೨೭ ಕ್ಕಂ ಮಂಗಳಂ.

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧುಪಾನಪರಿರಕ್ಷಿತವಚಟ್ಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಶ್ರೀಮತ್ಕರ್ಣಾಟಕಭಾರತಕಥಾಕುಸುಮಮಂಜರಿಯೊಳ್ ಕರ್ಣಪರ್ವಂ ಸಮಾಪ್ತಂ.

(ವಿ.ವಿ.)—.

ಕರ್ಣಪರ್ವ ಸಮಗ್ರ. ೨೭ ಸಂಧಿಗಳು. ಬರವಣಿಗೆ ಶ್ಲಾಘ್ಯವಾದುದು. ತಪ್ಪುಗಳಿಲದಿಲ್ಲ. ಶೈಥಿಲ್ಯ ಗ್ರಂಥ ಪಾತವಿಲ್ಲ. ಮುದ್ರಿತಪ್ರತಿಗಿಂತಲೂ ಇದರಲ್ಲಿ ಉತ್ತಮವಾದ ಪಾಠಭೇದಗಳು ಅನೇಕವಾಗಿವೆ. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೨೮ ನಂಬರಿನಲ್ಲಿ ನೋಡಿ ತಿಳಿಯುವುದು.

No. 75. ಭಾರತ ಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 14 × 1¼ inches. Pages, 270. Lines, 6 on a page. Character, Kanarese. Condition, injured. Appearance, very old. Mode of writing, not bad and not free from mistakes.

Contains the Karṇaparva complete.

Same work as the above; by Nārāyaṇappa. For other particulars see under No. 28, *ante*.

(ವಿ.ವಿ.)—೭

ಕರ್ಣಪರ್ವ ಸಮಗ್ರ. ಇಪ್ಪತ್ತೇಳು ಸಂಧಿಗಳು. ಬರವಣಿಗೆ ಸಾಮಾನ್ಯ. ಅಲ್ಲಲ್ಲಿ ತಪ್ಪುಗಳೂ ಇವೆ. ಶೈಥಿಲ್ಯವಿದೆ. ಗ್ರಂಥಪಾತವಿಲ್ಲ. ಮೇಲೆ ಉದಾಹೃತವಾದ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ಮತ್ತು ೭೪ ನೆಯ ನಂಬರುಗಳಲ್ಲಿ ನೋಡಿ ತಿಳಿಯುವುದು.

No. 76. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, palm-leaf. Size, 14 × 1¼ inches. Pages, 212. Lines, 7 on a page. Character, Kanarese. Condition, injured. Appearance, old. Mode of writing, good and free from mistakes.

Contains the Karṇaparva complete.

Same work as the above; by Nārāyaṇappa. For other particulars see under No. 28, *ante*.

Date of transcription :—Monday the thirteenth day of the bright fortnight of the lunar month Āśvayuja in the year Ānanda.

Name of the scribe :—Veṅkappa, son of Ālūra Māgaḍayya.

(ವಿ.ವಿ.)—

ಕರ್ಣಪರ್ವವು ಸಮಗ್ರವಾಗಿದೆ. ಬರವಣಿಗೆ ಒಳ್ಳೆಯದು. ಶುದ್ಧವಾದ ಪ್ರತಿ. ಮೊದಲಿನ ೭ ಪತ್ರಗಳು ಇಲ್ಲ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಗ್ರಂಥವು ಅಲ್ಲಲ್ಲಿ ಸ್ವಲ್ಪ ಶಿಥಿಲವಾಗಿದೆ. ಗ್ರಂಥದ ಕೊನೆಯಲ್ಲಿ ಈ ರೀತಿ ಬರೆದಿದೆ. "ಆನಂದ ಸಂವತ್ಸರದ ಆಶ್ವೀಜ ಶುದ್ಧ ೧೩ ಚಂದ್ರವಾರ ಆಲೂರ ಮಾಗಡಯ್ಯನ ಮಗ ವೆಂಕಪ್ಪನು ಬರೆದ ಕರ್ಣಪರ್ವಕ್ಕೆ ನಿರ್ವಿಘ್ನಮಸ್ತು . . . ." ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 77. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, Śrītāla. Size, 6¾ × 1⅝ inches. Pages, 62. Lines, 11 on a page. Character, Kanarese. Condition, injured. Appearance, old. Mode of writing, good and free from mistakes.

Contains the Sandhis 1 – 6 complete and the 7th incomplete in the Karṇaparva.

Same work as the above; by Nārāyaṇappa. For other particulars see under No. 28, *ante*.

(ವಿ.ವಿ.)—

ಕರ್ಣಪರ್ವದಲ್ಲಿ ಮೊದಲಿನ ಆರು ಸಂಧಿಗಳು ಸಮಗ್ರವಾಗಿಯೂ ಏಳನೆಯ ಸಂಧಿಯಲ್ಲಿ ೨೧ ಪದ್ಯಗಳೂ ಇವೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಶಿಥಿಲವಾಗಿದೆ. ಗ್ರಂಥಪಾತವಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೨೮ ಮತ್ತು ೭೪ ನೆಯ ನಂಬರುಗಳ ನೋಡಿ ತಿಳಿಯುವುದು.

No. 78. ಭಾರತ ಕಥಾಮಂಜರಿ-
BHĀRATAKATHĀMAÑJARI.

Substance, Śrītāla. Size, 25½ × 2 inches. Pages, 10. Lines, 12 on a page. Character, Kanarese. Condition, fair. Appearance, very old. Mode of writing, good and free from mistakes.

Contains the Śalyaparva complete.

A rendering in Kanarese of the Śalyaparva of the Sanskrit Mahābhārata; by Nārāyaṇappa. For other particulars see under No. 28, *ante*

Beginning:

ರಾಯ ! ಕೇಳ್ಳೈ ಕದನದಲಿ ರಾ ।
ಧೇಯನವಸಾನದ ಕಡೆಗೆ ಕೌರವ ।
ರಾಯದಳಪತಿಯಾಗಿ ಹೊಕ್ಕನು ಶಲ್ಯನಾಹವವ ॥
ದ್ಯುಮಣಿ ಕರ್ಣದ್ಯುಮಣಿ ಸಹಿತ ।
ಸ್ತಮಿಸೆ ಕಮಲಿನಿ ಕೌರವನ ಮುಖ ।
ಕಮಲ ಬಾಡಿತು ತಿಮಿರಹೆಚ್ಚಿತು ಶೋಕತಮದೊಡನೆ ॥
ಅಮಲ ಚಕ್ರಾಂಗಕ್ಕೆ ಭೂಪೋ ।
ತ್ತಮನ ವಿಜಯಾಂಗನೆಯುರಗಲಿಕೆ ।
ಸಮನಿಸಿತು ಕೇಳಯ್ಯ ಜನಮೇಜಯಮಹೀಪಾಲ ! ॥
ಹೇಳಿರೇ ಭೀಷ್ಮಾದಿಸುಭಟರು ।
ಮೇಲುದಾಯವ ಬಲ್ಲವರು ಹೆ ।
ಚ್ಚಾಳುತನದಲಿ ಹೋಗಿ ಕಂಡಿರೆ ಹಗೆಗೆ ಹರಿಯುಗಳ ॥
ಮೇಲಣಾಹವದೊಳಗೆ ದೇಹವ ।
ಬೀಳುಕೊಟ್ಟನು ಕರ್ಣಶಲ್ಯನು ।
ಮೇಲೆ ದೊರೆಯೇನಾದನೆಂಬುದನರಿಯೆನಾನೆಂದ ॥
ಮರುಳೆ ಸಂಜಯ ! ಗಾಳಿಯಲಿ ಕುಲ ।
ಗಿರಿಯ ಬೈಸಿಕೆ ಜಾರುವುದೆ ಹುಲು ।
ಮೊರಡಿಗಳ ಪಾಡೇನು ? ಬೀತುದು ಕರ್ಣನೊಡ್ಡವಣೆ ॥
ಕುರುಪತಿಯ ಪಾಡೇನು ? ಮಾದ್ರೇ ।
ಶ್ವರನ ಮತ್ಸರವೇನು ? ನಾಕಂ ।
ತಿರಲಿ ಸವರಿಕೆ ಕೌರವಾನ್ವಯವೆಂದನಂಧನೃಪ ॥
ಬೇಯುದಿನ್ನೆದೆ ಶೋಕವಹ್ನಿಯ ।
ಬಾಯಲಕಟಾ ಕರ್ಣ ಕೌರವ ।
ರಾಯನಳುವಿನೊಳುಳಿದ ಪುತ್ರದ್ರೋಹಿಗಳು ನಾವು ॥
ಸಾಯಿಸುವ ನಾವಂಜಿತೆನಗೆ ಚಿ ।
ರಾಯು ಕೊಡಲಿಕ್ಕಿದನು ಮಾರ್ಕಂ ।
ಡೇಯ ಮುನಿಯಾಯುಷ್ಯವೆನಗೆಂದರಸು ಬಿಸುಸುಯ್ದ ॥
ಹದುಳಿಸೈ ರಾಜೇಂದ್ರ ! ನೀ ಬಿ ।
ತ್ತಿದ ವಿಷದ್ರುಮ ಫಲಿತವಾದುದು ।
ಬೆದರಲೇಕಿನ್ನನುಭವಿಸು ಸಾಕುಳಿದ ಮಾತೇನು ? ॥
ಕದನದಲಿ ಸುತನಿಧಿಯ ಹೋಗಾ ।
ಡಿದೆ ನಿಜಾನ್ವಯಕಲ್ಪತರುವನು ।
ಮದಕರಿಗೆ ಮಾರಿದೆಯೆನುತ ನುಡಿಸಿದನು ಭೂಪತಿಯ ॥

ಮಲಗಿಸಿದನುರಿವೇಳ್ವ ವಕ್ಷ ।
ಸ್ಥಳವನೇರಿಸಿದನು ಶೋಕಾ ।
ನಲನತಾಪಕೆ ತಂಪನೆರೆದನು ನೀತಿಯುಮರಸದ ॥
ಅಳಲ ಶಮಮಾಡಿದನು ಬೀಸುತ ।
ಲಳವಿಯಲಿ ಗುರು ಕರ್ಣಶಲ್ಯರ ।
ಕಳವಿನಲಿ ಕಟ್ಟಾಳು ಬಹುಳಾಭ್ಯಾಸಿ ತಾನೆಂದ ॥
ಅಹುದು ಸಂಜಯ ! ಶೋಕಶಿಖಿ ನೆರೆ ।
ದಹಿಸದೆಂದನು “ ಬೆಂದವಸ್ತುಗೆ ।
ದಹನವುಂಟೇ ” ಎಂಬ ನಾಣ್ಣುಡಿ ನನ್ನೊಳಾದುದಲಾ ॥
ಮಿಹಿರಸುತ ಸುತನಿಂದ ಕುಲಕೇ ।
ಳ್ದಹಿಸಿಬಂದುದು ಶಲ್ಯಕೌರವ ।
ರಹೆಲಿ ನೆಗ್ಗಿದರೆಂದು ವಿಸ್ತರವಾಗಿ ಹೇಳೆಂದ ॥

* * * *

ತಾಯಿ ಹೆರಳೇ ಮಗನ ನಿನ್ನನು ।
ನಾಯಕನೆ ಲೋಕೈಕವೀರನು ।
ತಾಯಲಾ ನಿನ್ನವ್ವೆಯಾಲೆ ಮೊಲೆವಾಲ ಬಲುಹಿನಲಿ ॥
ರಾಯನೀ ಕ್ಷತ್ರಿಯನು ಸೇನೆಯ ।
ತಾಯೆನುತ ತೂಪಿರಿಪು ಕಮಲದ ।
ಳಾಯತಾಂಬಕನಪ್ಪಿಕೊಂಡನು ಧರ್ಮನಂದನನ ॥
ಸಂದುದೈ ಹದಿನೇಳುರಾತ್ರಿಗ ।
ಳಂದಿನಿರುಳಾಸೆಯನೆ ನಿರ್ಭಯ ।
ದಿಂದ ನಿದ್ರಾಭ್ಯಾಸನಿರ್ಭರಪೂರ್ಣಹರುಷದಲಿ ॥
ನಿಂದುದೀ ನಮ್ಮವರ ರಾಧಾ ।
ನಂದನನ ವಧೆಗೋಸುಗರವಾವ ।
ದಿಂದಮಾಡಿದ ಭಾಷೆಸಂದುದೆ ? ಭೂಪ ಕೇಳೆಂದ ॥
ಆ ಶಿಖಂಡಿಯ ತೋರಿ ಸರಳನ ।
ಹಾಸಿಗೆಯಲೊಬ್ಬನನು, ಮಾತಿನ ।
ವಾಸಿಯಿಂದೊಬ್ಬನನು ಮುನ್ನಿನ ಕುಲವನೆಚ್ಚರಿಸಿ ॥
ಘಾಸಿಮಾಡಿದ ನೊಬ್ಬನನು ಧರ ।
ಣೀಶ ಚೇಷ್ಟೆಯೊಳೊಬ್ಬನನು ಕೃಪೆ ।
ಯೇಸು ಘನವೋ ವೀರನಾರಾಯಣಗೆ ಭಕುತರಲಿ ॥

Colophon:

ಇಂತು ಪ್ರಥಮಸಂಧಿ ಸಮಾಪ್ತಂ ॥

ಗಂಡುಗಲಿ ಕದನ ಪ್ರಚಂಡ ನ ।
ಖಂಡ ಭುಜಬಲ ಧರ್ಮಸುತ ।
ಮುಂಕೊಂಡು ರಣದಲಿ ಕಾದಿ ನೊಂದನು ಮದ್ರರಾಜನಲಿ ॥

*　　*　　*　　*

ಅರಸ ! ಕೇಳೈ ಶಲ್ಯಪಾರ್ಥರ ।
ಶರವಿಧಾನವನವರ ಬಾಣಾಂ ।
ತರವನವರಂಬುಗಳ ಬಹುಳಾಡಂಬರ ಧ್ವನಿಯು ॥

ನಿರುಪಮದ ಸುಘ್ರೌಡಿಯನು ದು ।
ರ್ಧರಶಿಲೀಮುಖಸರ್ಗಬಂಧ ।
ಸ್ಫುರಣವನು ತೋರಿಸಿದರವರು ರಣಾಂತರಂಗದಲಿ ॥

ಇಸುವನರ್ಜುನನರ್ಜುನಾಸ್ತ್ರವ ।
ಕುಸುರಿದರಿದನು ಶಲ್ಯ ಶಲ್ಯನ ।
ವಿಶಿಖವನು ಮುರಿವ(ನು) ಧನಂಜಯನಾ ಧನಂಜಯನ ॥

ಮುಸಕವನು ಮಾದ್ರೀಶನುರೆ ಜೋ ।
ಡಿಸುವನಾ ಮಾದ್ರೀಶನಂಬಿನ ।
ಹಸರವನು ಹರಿಗಡಿದನರ್ಜುನನನಗಣಿತಾಸ್ತ್ರದಲಿ ॥

ಕಂಡರೀ ಶಲ್ಯಾರ್ಜುನ(ರ) ಕೋ ।
ದಂಡಸಾರಶ್ರುತ ರಹಸ್ಯದ ।
ದಂಡಿಯನು ಕುರುರಾಯ ಕಲಿಸಿದನಾಗ ತನ್ನವರ ॥

ಗಂಡುಗಲಿಗಳು ವೀರಸಿರಿಯುಲಿ ।
ಮಿಂಡರೋಕರೆ ನಗೆಯ ಬಿರುದಿನ ।
ಭಂಡರೋ ನೀವಾರೆನುತ ಮೂದಲಿಸಿದನು ಭಟರ ॥

ದಳಪ ಕರೆ ದಳಪತಿಗೆ ಕಾಳಗ ।
ಬಲುಹು ಪಾರ್ಥನ ಕೂಡೆ ಗುರುಸುತ ।
ನಳವಿಗೊಡಲಿ ಸುಶರ್ಮ ತಾಗಲಿ ಭೋಜಗೌತಮರು ॥

ನಿಲಲಿ ಸುಭಟರು ಬೇಗಲಾಪರ ।
ಬಲಕೆ ಜಾರುವ ಜಯಸಿರಿಯ ಮುಂ ।
ದಲೆಯ ಹಿಡಿಹಿಡಿಯೆನುತ ಹೆಕ್ಕಳಿಸಿದನು ಕುರುರಾಯ ॥

ನೂಕಿದನು ಶಲ್ಯಂಗೆ ಪಡಿಬಲ ।
ದಾಕೆವಾಳರ ಗುರುಸುತಾದ್ಯರು ।
ನೂಕಿದರು ಶರಜಾಲದಿಂದರ್ಜುನನ ತೆಗೆಸೆನುತ ॥

ಆಕೆವಾಳರು ಪಟುಭಟರು ಬರ ।
ಲೀಕೆ ಘನವ್ಯಾಕುಳರು ತಪ್ಪೆ ।
ಲ್ಲೀಕೆನುತ ಕೈಚಳಕದಲಿ ತೆಗೆದೆಚ್ಚನಾ ಪಾರ್ಥ ॥

ಮುರಿಯೆ ಸುತ ಮಾದ್ರೀಶ್ವರನ ಹೊ ।
ಕ್ಕುರುಬಿದನು ಗುರುಸುತನ ಸೂತ್ರನ ।
ನಿರಿದು ಸಮಸಪ್ತಕರ ಸೋಲಿಸಿ ಕೃಪನನೊಡೆಹೊಯ್ದು ॥

ತರುಬಿದನು ಕುರುಪತಿಯನರ್ಜುನ ।
ನೊರಲಿಸಿದನೀ ಸೈನ್ಯಸುಭಟರ ।
ನೆರೆವಣಿಗೆ ನಿಪ್ಪಸರದಲಿ ಮಸುಕಿತು ಧನಂಜಯನ ॥

ಅರಸಕೇಳತ್ತಲು ಮಹೀಪತಿ ।
ಯರಸಿದನು ಮಾದ್ರೀಶ್ವರನ ಬಲು ।
ಸರಳ ಸುರಿವುತ ನಡೆದನಾತನ ರಥದ ಸಮ್ಮುಖಕೆ ॥

ಧರೆಗೆ ಕಾಮಿಸಿದಿರಿ ಸುಯೋಧನ ।
ನರಸಲಾ ಬಲುಧಾತ್ರಿ ನಮ್ಮ ।
ಲ್ಲರಿಗೆ ಹುದುವಿಲ್ಲೆನುತ ಕವಿಕವಿದೆಚ್ಚನವನಿಪನ ॥

ಮಾವ ! ನಮಗಾಡಂಬರದ ನಿ ।
ಭಾರ್ಗವವೇತಕೆ ? ಕೌರವನೊಳೆನ ।
ಗೀ ವಸುಧೆ ಹುದುವಿಲ್ಲ ನಮಗೇಕಾಧಿಪತ್ಯವಿದು ? ॥

ನೀವು ಕೌರವಪಳದ ಭಾರದ ।
ಲಾವಹದನೋ ಭಾಣಸೃಷ್ಟಿಕ್ರ್ಯ ।
ತಾವಧಾನವ ತೋರೆನುತ ನೃಪನೆಚ್ಚು ಬೊಬ್ಬಿರಿದ ॥

ಬರಿಯ ಬೊಬ್ಬಾಟವೊ ! ಶರಾಳಿಯೊ ।
ಳರಿದು ಗೆಲುವೆಯನುಂಟು ಧರಣಿಯೊ ।
ಳೆರಕ ಗಡ ! ನಿಮ್ಮೈವರಿಗೆ ದ್ರೌಪದಿಯ ಸಮಭಾಗೆ ॥

ಹೊರಗು ಗಡ ! ಕುರುರಾಯನಾಗಳೆ ।
ಮರುದಿವಸ ಜಯಶ್ರೀಮುಡಿಗೆ ನೀ ।
ರೆರೆವ ಘಟವೆಂತೆನುತ ತೆಗೆತೆದೆಚ್ಚನಾ ಶಲ್ಯ ॥

ಕಡಿದು ಬಿಸುಟನು ಶಲ್ಯನಸ್ತ್ರವ ।
ನಡಿಗಡಿಗೆ ಕೂರಂಬುಗಳಲವ ।
ಗಡಿಸಿದನು ನೃಪ ಶಲ್ಯನನು ಶರಹತಿಯ ಸಂಹರಿಸಿ ॥

ಒಡನೊಡನೆ ಕೈಚಳಕದೆಸುಗೆಯ ।
ಕಿಡಿಯಲಂಬಿನ ಧಾರೆ ಧಟ್ಟಿಸಿ ।
ಕೆಡಸಿದುವು ನೃಪಶರರಥಾಶ್ವವನೊಂದು ನಿಮಿಷದಲಿ ॥

End:

ಮರಳ ಪಂಚದ್ರೌಪದೇಯರ ।
ಪರಿಭವಿಸಿದನು ಧರ್ಮಪುತ್ರನ ।
ತೆರಳಸಿದ ಸಹದೇವನಕುಲರ ಮತ್ತೆನೋಯಿಸಿದ ॥

ವರಯುಧಾಮನ್ಯೂತ್ತ ಮೌಜ(ಸ) ।
[ಹೊ](ರು)ರುಳಸಿದನವನಿಯಲಿ ಭೀಮಾ ।
ದ್ಯರಿಗೆ ಭೀತಿಯ ಬೀರಿ(ದನು ಬೇಗದಲಿ)[ಬೆರೆಸಿದನು] ಕುರುರಾಯ ॥

ಕೆದರುತಿದೆ ನಮ್ಮವರ ಬಲ ದೆತೋ ।
ರಥಟು ಸಿಕ್ಕಿತು ರಾಯನೊಬ್ಬನೆ ।
ಕದನದಲಿ ಕೈದೋರಿ ಖಂಡಿಸಿದನು ಮಹಾರಥರ ॥
ಹೊದರು ತಳಿತುದು ಲಗ್ಗೆವರೆ ಮ॰ ।
ನದಲಿ ಮಗುಳ್ಸವು ಪಾರ್ಥ ! ದಿವ್ಯಾ ।
ಯುಧದಿ ಕೈಮಾಡೆಂದು ನುಡಿದನು ವೀರನಾರಯಣ ॥

Colophon:

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದಮಕರಂದಮಧು ಪಾನಪರಿರಕ್ಷಿತವಚಷ್ಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕಭಾರತಕಥಾಕುಸುಮವಲ್ಲರಿಯೊಳ್ ಶಲ್ಯಪರ್ವಂ ಸಮಾಪ್ತಂ ॥

(ವಿ-ವಿ.)—

ಶಲ್ಯಪರ್ವ ಸಮಗ್ರ. ಮೂರು ಸಂಧಿಗಳು. ಬರವಣಿಗೆ ಉತ್ತಮವಾದುದು. ತಪ್ಪುಗಳು ಅಷ್ಟಾಗಿಲ್ಲ. ಶಿಥಿಲ. ಗ್ರಂಥ ಪೂತವಿಲ್ಲ. ಮುದ್ರಿತ ಪ್ರತಿಗಿಂತಲೂ ಇದರಲ್ಲಿ ಶ್ಲಾಘ್ಯವಾದ ಪಾಠಭೇದಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೨೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 79. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, paper. Size, 12 × 8½ inches. Pages, 21. Lines, 18 on a page. Character, Kanarese. Condition, slightly injured. Appearance, very old. Mode of writing, not good and not free from mistakes.

Contains the Śalyaparva complete.

Same work as the above; by Nārāyaṇappa. For other particulars see under No 28, *ante*.

(ವಿ-ವಿ.)—

ಶಲ್ಯಪರ್ವ ಸಮಗ್ರವಾಗಿದೆ. ಬರವಣಿಗೆ ಅಷ್ಟು ಉತ್ತಮವಾದುದಲ್ಲ. ತಪ್ಪುಗಳಿವೆ. ಸ್ವಲ್ಪ ಶಿಥಿಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದೆ ಉದಾಹೃತವಾಗಿರುವ ೨೮ ಮತ್ತು ೭೮ ನೆಯ ನಂಬರುಗಳಲ್ಲಿ ನೋಡಿ ತಿಳಿಯುವುದು.

No. 80. ಭಾರತ ಕಥಾಮಂಜರಿ-

BHĀRATAKATHĀMAÑJARI.

Substance, Śrītāla. Size, 25½ × 2 inches. Pages, 26. Lines, 16 on a page. Character, Kanarese. Condition, fair. Appearance, very old. Mode of writing, good and free from mistakes.

Contains the Gadāparva complete.

At the end of the work there are some stanzas relating to Draupadīsvayamvara.

A rendering in Kanarese of the Gadāyuddhaparva of the Sanskrit Mahabhāratā; by Nārāyaṇappa. For other particulars see under No. 28, *ante.*

Beginning:

ಶಲ್ಯನವಸಾನದಲಿ ಕೌರವ ।
ಮಲ್ಲ ರಣದಲಿ ಕಾದಿ ಮರಳಿದು ।
ನಿಲ್ಲದಡಗಿದನಿತ್ತ ಸಂಜಯ ಬಂದನಾಹವಕೆ ॥
ಕೇಳು ಧೃತರಾಷ್ಟ್ರಾವನಿಪ ! ಸಿರಿ ।
ಲೋಲಸಹಿತರ್ಜುನನು ಸೇನಾ ।
ಜಾಲವನು ಸಂಹರಿಸಿ ದೊರೆಸುಯೋಧನವೆಂತೆನುತ ॥
ಆಳೊಳಗೆ ಬೆರಸಿದನು ಕುರುಭೂ ।
ಪಾಲಕನ ಥಟ್ಟಿನಲಿ ಶಸ್ತ್ರ ।
ಜ್ವಾಲಿಗಳ ಕೆದರಿದನು ಹೊದರಿನ ಹಿಂಡ ಹರಿಗಡಿದು ॥
ಎಲವೊ ಕಪಟದ್ಯೂತಕೇಳೀ ।
ಕಲುಷಿತಾಂತಃಕರಣ ! ನಿನ್ನೀ ।
ಬಲಕೆ ಪತಿ ನೀನೋ ಕೃಪಾಚಾರಿಯನೊ ಗುರುಸುತನೊ ? ॥
ಖಳಸುಶರ್ಮನೋ ? ಶಕುನಿಯೋ ? ನಿ ।
ನ್ನಳವರೊಡಹುಟ್ಟಿದರೊ ? ರಾಜಾ ।
ವಳಿಯೊಳಾರಳಲಿಗರು ? ನಿನಗೆನುತೆಚ್ಚನಾ ಪಾರ್ಥ ॥
ಅರಸ ! ಕೇಳೈ ಮೂರು ಸಾವಿರ ।
ಕರಿಘಟೆಗಳಿಪ್ಪತ್ತು ಸಾವಿರ ।
ತುರಗರಥದಳವೆರಡು ಸಾವಿರ ಲಕ್ಕ ಪಾಯದಳ ॥
ಅರಸುಗಳು ಮುನ್ನೂರು ನಿಮ್ಮದು ।
ಕುರುಬಲದ ವಿಸ್ತಾರ ಕೌರವ ।
ಧರಣಿಪತಿ ! ಏಕಾದಶಾಕ್ಷೋಹಿಣಿಯಶೇಷವಿದು ॥
ಕರಿಘಟೆಗಳೈನೂರು ಮೂವ ।
ತ್ತೆರಡು ಸಾವಿರ ಪಾಯದಳ ಸಾ ।
ವಿರದ ನೂರು ವರೂಥದೊಳು ನಿನ್ನವನಿಪತಿಸಹಿತ ॥
ತುರುಕ ಬರ್ಬರ ಪಾರಸೀಕರ ।
ತುರಗವೈಸಾವಿರ ಸಹಿತ ನೋ ।
ಹರಿಸಿ ನಿಂದನು ದಟ್ಟಿನ ಬಲದ ಹೀಹೆಯಲಿ ॥
ನೂರು ರಥವಿನ್ನೂರು ಗಜವೈ ।
ನೂರು ಹಯ ಸಾವಿರದ ಮು ।
ನ್ನೂರು ಸುಭಟರು ಸಹಿತ ಮೋಹರದೆಡೆವ ಬಾಹೆಯಲಿ ॥
ತೋರಿದನು ಕೃತವರ್ಮ, ಕೃಪರೈ ।
ನೂರು ಗಜ ಗುರುತನುಜ ಸಹಿತೀ ।
ಮೂರುದಳಕೊತ್ತಾಗಿ ನಿಂದನು ಕೌರವರ ರಾಯ ॥

ಕವಿದುದಿದು ದುವ್ವಾಳಿಯಲಿ ರಥ ।
ನಿವಹ ಬಿಟ್ಟರು ಕುದುರೆ ಸೂಳಯೊ ।
ಳವಗಡಿಸಿ ತೂಳದುವು ಹೇರಾನೆಗಳು ಸಂದಣಿಸಿ ॥
ಸವಡಿಗೈಯ್ಯಂಬುಗಳ ನೆರೆ ಕೈ ।
ತವಕಿಗರು ತರಬಿದರು ಬಲುಬಿ ।
ಲ್ಲವರು ದೊರೆ ಮುಂತಾಗಿ ಸವರಿತು ಮಿಕ್ಕ ಸಬಳಿಗರು ॥
ರಣಪಟೀ[ವೇ](ಚ್ಛೇ) ದಿಗಳು ಮಿಗೆ ನಿಂ ।
ದಣಿಸಿತಾ ಕುರುಸೇನೆ ವಾದ್ಯ ।
ಧ್ವನಿಗಳಭ್ರವ ನೊದೆದುಲುಬ್ಬುವ ಬೊಬ್ಬೆಗಳ ಬಳಿಯು ॥
ಕುಣಿದವಂದರ್ಜುನನ ರಥ ಮುಂ ।
ಕಣಿಯಲಾರೋಹಕರು ರಥಹಯ ।
ಹೆಣಗಿದುವು ರಥದೊಡನೆ ಚಂದದ ಖುರದ ಕೊಯ್ಲಿನಲಿ ॥

* * * *

ಅರಸ ! ಕೇಳೈ ಕೌ ವೇಂದ್ರನ ।
ನರಸುತರ್ಜುನ ಭೀಮ ಸಾತ್ಯಕಿ ।
ಧರಣಿಪತಿ ಸಹದೇವ ನಕುಲರು ಕೂಡೆ ಕಳನೊಳಗೆ ॥
ತಿರುಗಿವರು ಬಳಿಕೆತ್ತಲೀ ಮೋ ।
ಹರವ, ಧೃಷ್ಟದ್ಯುಮ್ನ ಸೃಂಜಯ ।
ರೊರಸಿದರು ನಿಶ್ಶೇಷವೆನೆ ಕೌರವ ಚತುರ್ಬಲವ ॥
ಧರಣಿಪತಿ ! ಕೇಳಿನ್ನು ಮೇಲಣ ।
ಧುರದ ವೃತ್ತಾಂತವನು ಕುರುಪತಿ ।
ಯಿರವನರಿಯೆನು ಕಂಡುಬಹೆನೇ ನಿಮ್ಮನುಜ್ಞೆಯಲಿ ॥
ಗುರುತನುಜ ಕೃಪ ಭೋಜ ಶಕುನಿಗ ।
ಳರಸನನು ಪರವೇಷ್ಟಿಸಿದರಿದ ।
ನರಿದು ಬಹೆನೆನೆ ಕಳುಹಿದನು ಧೃತರಾಷ್ಟ್ರ ಸಂಜಯನ ॥

Colophon :

ಪ್ರಥಮ ಸಂಧಿ ಸಮಾಪ್ತಂ ॥

ಸಕಲ ಬಲ ನುಗ್ಗಾಯ್ತು ಸಮಸ ।
ಪ್ತಕರು ಮಡಿದರು ಪಾರ್ಥಶರದಲಿ ।
ಶಕುನಿಯನು ಸೀಳಿದನು ಸಂಗ್ರಾಮದಲಿ ಸಹದೇವ ॥
ಕೇಳು ಜನಮೇಜಯ ! ಧರಿತ್ರೀ ।
ಪಾಲ ! ಸಂಜಯ ಬಂದು ಕುರುಭೂ ।
ಪಾಲಕನ ನರಸಿದನು ಸಂಗರರಂಗ ಭೂಮಿಯೊಳು ॥
ಮೇಲು ಸಾಯಿದಾನದ ತುರಂಗದ ।
ಜಾಲ ಸಹಿತಗಲದಲಿ ಕುರು ಭೂ ।
ಪಾಲನಾವೆಡೆಯೆನುತ ಬೆಸಗೊಳುತರಸಿದನು ನೃಪನ ॥

ವಂದಿಗಳು ನಿಸ್ಸಾಳ ಬಡಿಕರ ।
ಮುಂದಿ ಹಡಪಿ ಗಜಾಹಿಸೂತ್ರರ ।
ಸಂದಣಿಗಳೌಕಿದುವು ಗಜಹಯಸಂಧಿದಾಯಕರು ॥
ನಿಂದುದಿದಸಂಖ್ಯಾತವನಿಬರ ।
ನಂದು ಸಂಜಯು ಕರೆದು ಕೇಳದ ।
ನಿಂದುಕುಲಸಂಭವನ ಕಂಡಿರೆ ! ಕೌರವೇಶ್ವರನ ॥
ಕೂಡೆ ಸಂಜಯನರಸಿದನು ಸುಯಿ ।
ಜೋಡಿನವು ನಾನೂರು ಕುದುರೆಯು ।
ಕೂಡೆ ಕೌರವನೃಪನ ಕಾಣದೆ ಕಣನ ಚೌಕದಲಿ ॥
ನೋಡುತಿರೆ ಸಾತ್ಯಕಿ ಚತುರ್ಬಲ ।
ಗೂಡಿಗವಿದನು ಹಯಬಲವ ಪುಡಿ ।
ಮಾಡಿದನು ನಾನೂರ ಕೊಂದನು ಸರಳ ಸಾರದಲಿ ॥
ಹಿಡಿದು ಸಂಜಯನನು ವಿಭಾಡಿಸಿ ।
ಕೆಡಹಿದನು ಬಲುರಾವುತರ ನವ ।
ಗಡವ ಕೇಳದು ದ್ರೋಣಸುತ ಕೃತವರ್ಮ ಗೌತಮರು ॥
ಘಡಘಡೆಲವೋ ಸಂಜಯನ ಬಿಡು ।
ಬಿಡು ಮದೀಯಮಹಾಶರಕೆ ತಲೆ ।
ಗೊಡುವ್ರೊಡಿದಿರಾಗೆನುತ ತರುಬಿದರವರು ಸಾತ್ಯಕಿಯ ॥
ಕೋಡ ಕಯ್ಯಲಿ ತಿರುಹಿ ಕೃಪ ಕೈ ।
ಮಾಡಿವನು ಕೃತವರ್ಮನೆಸುಗೆಯ ।
ಹಾಡಿಬಿಡುವೀ ಬರವ ಬಲ್ಲವರಾರು ಸಮರದಲಿ ॥
ನೋಡಲೀತನ ಗರುಡಿಯುಲಿ ವಿಶ್ರಮ ।
ಮಾಡಿದವನೈನೂರು ಗಜವ ವಿ ।
ಭಾಡಿಸಿದನದ ಹೊಗಳ[ಲು ನಾ](ಲಾ)ವನು ? ದ್ರೋಣನಂದನನ ॥

* * * *

ಇದೆ ಸರೋವರವೊಂದು ಸನಿದೂ ।
ಕವಲಿ ಭುವನಖ್ಯಾತ ತನ್ಮ ।
ಧ್ಯದಲಿ ಮುಳುಗಿಹೆನೊಂದು ದಿನಪರ್ಯಂತ ಸಲಿಲದಲಿ ॥
ಕದನದಲಿ ಕೌಂತೇಯರನು ಯಮ ।
ಸದನದಲಿ ತೋರುವೆನು ತಾನೆಂ ।
ಬುದು ರಹಸ್ಯವು ಜನನಿ ಜನಕರಿಗರುಹು ನೀನೆಂದ ॥
ತೆಗೆಸು ಪಾಳೆಯವೆಲ್ಲವನು ಗಜ ।
ನಗರಿಗೈದಿಸು ರಾಣಿಯರ ದಂ ।
ಡಿಗೆಯ ಕಳುಹಿಸು ಸೂತಸುತದುಶ್ಶಾಸನಾದಿಗಳ ॥
ಹಗೆಯ ವಿಜಯುವ ಹರಹಡಿರು ನಂ ।
ಬುಗೆಯ ನುಡಿಯಲಿ ಭಾನುಮತಿಯರ ।
ಬಗೆಯ ಸಂತೈಸೆಂದು ಬೋಳೈಸಿದನು ಸಂಜಯನು ॥

ಎನುತ ಸಂಜಯಸಹಿತ ಕೌರವ ।
ಜನಪ ಬಂದನು ತತ್ಪುರೋವರ ।
ಕನಿಲನಿದಿರಾದನು ಸುಗಂಧದ ಶೈತ್ಯಪೂರದಲಿ ॥

ತನುವಿನಾಪ್ಯಾಯನದಿನಂತ ।
ರ್ಮನಕೆ ಪಲ್ಲಟವಾಯ್ತು ಭೀಮನ ।
ಜನಕನರಿದನು ತನ್ನ ಗುಪ್ತಸ್ಥಾನಸಂಗತಿಯ ॥

* * * *

ಕುರುಪತಿಯ ಬೀಳ್ಕೊಂಡು ಸಂಜಯ ।
ತಿರೆಳಿದನು ತನಗಾದ ಹಿಂದಣ ।
ಪರಿಭವವ ನೆನೆದಡಿಗಡಿಗೆ ಕಂಪಿಸುತ ಮನದೊಳಗೆ ॥
ಧುರದ ಮಧ್ಯದಲೊಬ್ಬನೇ ನಡೆ ।
ತರುತ ಭೂತಾವಳಿಯನೀಕ್ಷಿಸಿ ।
ಗುರುವ ನೆನೆದನು ಕೇಳು ಜನಮೇಜಯಮಹೀಪಾಲ ॥

ಬರುತ ಸಂಜಯ ದೂರದಲಿ ಕೃಪ ।
ಗುರುಸುತರ ಕೃತವರ್ಮಕನ ಕಂ ।
ಡತಿರಥಿಕರಿವರಲ್ಲಲೆ ಶಿವ ಶಿವ ! ಮಹಾದೇವ ! ॥
ಭರತಕುಲ ಮೊದಲೊಂದು ಬಳಿಕಾ ।
ಯ್ತುರಡು ಕವಲೊಬ್ಬರಿಗೆ ಜಯವಿ ।
ಸ್ತರಣ ಗದುಗಿನ ವೀರನಾರಾಯಣನ ಕರುಣದಲಿ ॥

* * * *

ಏಳು ಕೌರವರಾಯ ಸಲಿಲ ।
ವ್ಯಾಳನೇ ? ನೀನಕಟ ! ಸಲಿಲದೊ ।
ಳಾಳುವರೆ ಕಾಳಾಯ್ತು ನಿನ್ನಲಿ ಗರುವ ಶಶಿವಂಶ ॥
ಕಾಳಗದೊಳದ್ದಿದೆ ಸಹೋದರ ।
ಜಾಲಪುತ್ರಜ್ಞಾತಿ ಬಂಧು ನೃ ।
ಪಾಲರನು ನೀ ನೀರೊಳಣಗಿದೆ ಕಷ್ಟವಾಯ್ತೆಂದ ॥

ಜ್ಞಾತಿಮಾತ್ಸರ್ಯದಲಿ ಬಂದ ।
ಖ್ಯಾತಿವಿಖ್ಯಾತಿಗಳು ನಿಮಗನು ।
ಜಾತರಲ್ಲಾ ನಾವು ನಿರ್ಮಳ ಸೋಮವಂಶದಲಿ ॥
ಭೀತಿಯಲಿ ನೀ ನೀರಹೊಕ್ಕೊಡೆ ।
ಮಾತು ತಾಗದೆ ನಮ್ಮನಕಟಾ ! ।
ಬೂತುಗಳ ಕಯ್ಬಯ್ಗೆ ಬಂದೈ ಭೂಪ ನೀನೆಂದ ॥

ನಾಡೊಳರ್ಧವ ಕೊಡದೆ ಹೋದೊಡೆ ।
ಬೇಡಿದೈವರೂರುಗಳ ಬೇಡಿದ ।
ರೋಡಿಸಿದಲೈ ಸೂಜಿಯಗ್ರಪ್ರಮಿತಧಾರಿಣಿಯ ॥

ಕೂಡೆ [ನೀ](ನಾ) ಕೊಡೆನೆಂದು ದರ್ಪವ ।
ಮಾಡಿ ಸಕಲಮಹಾರಥರ ಹೋ ।
ಗಾಡಿ ಹೊಕ್ಕೆ ಜಲವನಾವೆಡೆ ನಿನ್ನ ಛಲವೆಂದ ॥

ಹೇಳದರಲಾ ಭೀಷ್ಮ[ದಿ] ವಿದುರರು ।
ಮೇಲುದಾಯವ ಬಲ್ಲವರು ನೀ ।
ಕೇಳಬರಿದೇಕಾದಶಾಕ್ಷೋಹಿಣಿಯು ತಡೆಗಡಿಸಿ ॥

ಕಾಳಗವನೊಟ್ಟೈಸಿ ನೀರೊಳು ।
ಬೀಳುವ್ರುದ ನಿನಗಾರು ಬುದ್ಧಿಯು ।
ಹೇಳದರು ನುಡಿ ನುಡಿಸುಯೋಧನನೆಂದನಾ ಭೂಪ ॥

ಕಂಡೆವಂದೊಬ್ಬನ ಪಲಾಯನ ।
ಪಂಡಿತ್ರನನುತ್ತರನನಾತನ ।
ಗಂಡಸಾದ್ಯೈ ನೃಪ! ಪಲಾಯನ ಸಿರಿಯು ಸೂರೆಯಲಿ ॥

ಭಂಡರಿಬ್ಬರು ಭೂಮಿಪರೊಳಾ ।
ಖಂಡನೆನೆ ನೀ ಮುಗಿಲು ಸಲಿಲದ ।
ಕುಂತವನು ಹೊಕ್ಕನೆ ? ವಿರಾಟಜನೆಂದನಾ ಭೂಪ ॥

* * * *

ವಿಷವನಿಕ್ಕಿದೆ ಹಾವಿನಲಿ ಬಂ ।
ಧಿಸಿದೆ ಮಡುವಿನಲಿ ನೂಕಿ ಬಳಕು ।
ಬ್ಬಸವ ಮಾಡಿದೆ ಎಂದು ಮನ ಮುನಿಸಾಗೆ ಬಾಲ್ಯದಲಿ ॥

ವಸತಿಯಲಿ ಬಳಿಕಗ್ನಿದೇವರ ।
ಪಸರಿಸಿದೆ ಪುಣ್ಯದಲಿ ನಾವ್ ಜೀ ।
ವಿಸಿದೆವಡಗಿದಡಿನ್ನು ಬಿಡುವೆವೆ ? ನೃಪತಿ ! ಏಳೆಂದ ॥

ಎಲವೊ ! ರಾಯನ ಪಟ್ಟದರಸಿಯ ।
ಸುಲಿಸಿದಾ ಛಲವೆಲ್ಲಿ ಹಗೆಗಳ ।
ಹಳುವದಲಿ ಹೊಗಿಸಿದೆನೆನಿಪ ಸ್ವಾಮ್ಯನ ತಾನೆಲ್ಲಿ ? ॥

ಖಳಶಿರೋಮಣಿ ! ನಿನ್ನ ತಲೆಗೂ ।
ದಲಲಿ ಕೈಗಳ ಕಟ್ಟಿ ಖೇಚರ ।
ರೆಳೆಯೆ ಬಿಡಿಸಿದರಾರು ? ಕೌರವ ! ಎಂದನಾ ಭೀಮ ॥

ಭೀಮನೆನೆ ಭುಗಿಲೆಂಬ ರೋಷದ ।
ತಾಮಸವ ಬೀಳ್ಕೊಟ್ಟೆಯಲಿ ನಿ ।
ರ್ನಾಮವಾಯಿತೆ ಬಿರುದು ಪಾಂಡವ ತಿಮಿರ ರವಿಯೆಂಬ ॥

ಭೀಮವರ ದಾವಾಗ್ನಿ ! ಪೌರವಡು ।
ಭೀಮಭಾಸ್ಕರರಾಹು ! ಪೌರವಡು ।
ಭೀಮಗರ್ಜನೆ ಮಧುರಗೀತವೆ ? ನೃಪತಿ ಕೇಳೆಂದ ॥

End:

ಘೋರ ನಿಶಿಯಲಿ ಶಶಿಯ ಬೈದರೆ ।
ಕ್ಷೀರವನು ವಿಷರೋಗಿ ಹಳಿದರೆ ।
ವಾರಣಾಸಿಯ ಹೆಳವ ನಿಂದಿಸಿ ನಕ್ಕಡೇನಹುದು ? ॥
ಭಾರತದ ಕಥನಪ್ರಸಂಗವ ।
ಕ್ರೂರಕರ್ಮಿಗಳೆತ್ತ ಬಲ್ಲರು ? ।
ಘೋರತರ ಕಾರವವ ಕೆಡಿಸುಗು ಕೇಳ್ದ ಸಜ್ಜನರ ॥

ಅಂತು ಸಂಧಿ ೧೩ ಕ್ಕಂ ಮಂಗಳಂ ॥

Colophon:

ಇತಿ ಶ್ರೀಮದಚಿಂತ್ಯಗದುಗಿನವೀರನಾರಾಯಣನ ಚರಣಾರವಿಂದಮಕರಂದಮಧುಪಾನಪರಿರಕ್ಷಿತಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಕಭಾರತಕಥಾಮಂಜರಿಯೊಳ್ ಗದಾಪರ್ವಂ ಸಮಾಪ್ತಂ ॥

(ವಿ-ವಿ.)—

ಗದಾಯುದ್ಧಪರ್ವವು ಸಮಗ್ರವಾಗಿದೆ. ಬರವಣಿಗೆ ಉತ್ತಮವಾದುದು ತಪ್ಪುಗಳಿಲ್ಲವೆನ್ನಬಹುದು. ಶೈಥಿಲ್ಯವೂ ಗ್ರಂಥಪಾತವೂ ಇಲ್ಲ. ಮುದ್ರಿತ ಪ್ರತಿಗೂ ಇದಕ್ಕೂ ಅನೇಕ ಸ್ಥಳಗಳಲ್ಲಿ ಪಾಠಭೇದಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೭೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 81. ಭಾರತಕಥಾಮಂಜರಿ.

BHĀRATAKATHĀMAÑJARI.

Substance, palm-leaf. Size, 16 × $1\frac{1}{4}$ inches. Pages, 159. Lines, 7 on a page. Character, Kanarese. Condition, much injured. Appearance, very old. Mode of writing, good and not free from mistakes.

Contains the Śāntiparva complete.

A rendering in Kanarese of the Śāntiparva of the Sanskrit Mahābhārata; The author Timmappa who wrote the last Parvas (i.e. from Shāntiparva to Svargārōhaṇaparva) of the Mahābhārata is said to have written this work at the instance of King Kṛṣṇadēvarāya of Vijayanagar who ruled from 1509--1529 A.D. The author was the son of Bhānukavi alias Bhāskarakavi of Bhāradvāja gōtra and a poet in the court of Kṛṣṇadēvarāya. For other particulars regarding the genealogy of the king Kṛṣṇadēvarāya see the extracts given below.

Beginning:

ಶ್ರೀಲಲನೆಯರ ಕುಚಯುಗಂಗಳ ।
ಮೇಲೆಸೆವ ಕುಂಕುಮವು ಪತ್ತಿ ವಿ ।
ಶಾಲವಕ್ಷವು ಸಂಜೆವೆರಗಿದ ಗಗನಿಯಂತೆಸೆಯೆ ॥

ಲೀಲೆಯಲಿ ನಿಜಭಕ್ತಜನಕನು ।
ಕೂಲನೆನಿಸುವ ವೆಂಕಟೇಶನು ।
ಪಾಲಿಸಲಿ ನರಸೇಂದ್ರನಾತ್ಮಜಕೃಷ್ಣರಾಯನನು ॥
ಶ್ರೀಮಹಿಮೆಯಿಹ ದಕ್ಷಿಣಾಂಗದಿ ।
ವಾಮಭಾಗವನಪ್ಪಿಯಾತ್ಮಾ ।
ರಾಮಸುಖಿಯೆಂದೆನಿಪ ಪಂಪಾಪತಿ ವಿರೂಪಾಕ್ಷ ॥ (೯)

ಕಾಮಿತಾರ್ಥವ ಕೊಡುತ ಬಹಳ ।
ಪ್ರೇಮದಲಿ ರಕ್ಷಿಸಲಿ ನೃಪನು ।
ಶ್ರಾಮ ನರಸನೃಪಾಲನಂದನಕೃಷ್ಣರಾಯನನು ॥

* * * *

ಪೆಸರು ವಡೆದಿಹ ತುಳುವ ವಂಶದೊ ।
ಳೆಸವ ಭುಜಬಲತಿಮ್ಮನೃಪನುದ ।
ಯಿಸಿದನಾಭೂಪತಿಯ ಪುಣ್ಯದ ಫಲವಿದೆಂಬಂತೆ ॥

ಕುಸುಮಸಾಯಕರೂಪನಾಶ್ರಿತ ।
ವಿಸರರಕ್ಷಕನಬ್ಧಿವಲಯಿತ ।
ವಸುಧೆಗಧಿಪತಿ ಯೀಶ್ವರಕ್ಷಿತಿನಾಥ ಜನಿಯಿಸಿದ ॥

ಆತ ಮಾಡಿದನೇಕಸುಕೃತ ।
ವ್ರಾತಗಳನಿನ್ನೇನ ಹೇಳುವೆ ।
ಭೂತಳಕೆ ತಾಕಲ್ಪಭೂರುಹನಾಗಿಯುಪಕರಿಸಿ ॥

ಶ್ರೀತರುಣಿಯುರುಕೃಪೆಯಲಧಿಕ ।
ಖ್ಯಾತನನು ಘನಭಾಗ್ಯಜನಪುರು
ಹೂತನನು ನರಸಕ್ಷಮಾಧಿಪರತ್ನವನು ಪಡೆದ ॥

ಆ ನರಸಭೂವರನ ಶೌರ್ಯವ ।
ನೇನನೆಂಬೆನು ಸಕಲವಸುಧಾ ।
ಜಾನಿಗಳ ನಿಜಭೃತ್ಯವರ್ಗದೊಳ್ಳೈದೆ ನಿಲಿಸಿದನು ॥

ದೀನಜನದಾರಿದ್ರ್ಯಘಣಿಕುಲ ।
ವೈನತೇಯನು ನಿಚ್ಚಲತಿಸು ।
ಮ್ಮಾನದಲ್ಲಿ ಷೋಡಶಮಹಾದಾನಗಳ ವಿರಚಿಸಿದ ॥

ಆತ ಕೊಳ್ಳದ ದುರ್ಗವೊಂದಿ ।
ಲ್ಲಾತನಾಳದ ರಾಜ್ಯವೊಂದಿ ।
ಲ್ಲಾತ ಮಾಡದ ದಾನಧರ್ಮಾವಳಿಗಳೊಂದಿಲ್ಲ ॥

ಆತನರಿಯದ ವಿದ್ಯೆಯೊಂದಿ ।
ಲ್ಲಾತ ಸುಖಿಸದ ಭೋಗವೊಂದಿ ।
ಲ್ಲೀತೆರದಿ ಭುಜಶಕ್ತಿಯಿಂದಾಳಿದನು ಭೂತಳವ ॥

ಸಿರಿಯು ಪಾಣಿಗ್ರಹಣದೋಷದಿ ।
ಹರಿಯೊಡನೆ ವಿನೋದನಾದಡೆ ।
ಹಿರಿಯು ಹದ್ದದನೊಯ್ದನೆಂಬುದು ಭೂಪ್ರಸಿದ್ಧವಲೆ ॥

ವರ ಪತಿವ್ರತೆ ನಾಗಮಾಂಬೆಯು ।
ಕರವ ಪಿಡಿದಾ ನೆರಸಭೂಪತಿ ।
ಧರೆಯ ನಾಳ್ದನು ಬಾಳ್ದನಧಿಕಪ್ರಮೋದದಲಿ ॥

ನವದಶೈಕಾದಶದ ಸಂಖ್ಯೆಯು ।
ಧವರ ನೆರೆವರಿಸಿದ್ದ ವಾಜ್ಮ
ಶಿವೆಯುರೆಣೆಯ ನಾಗಮಾಂಬಾಸತ್ಪತಿವ್ರತೆಗೆ॥

ಸವಡಿ ಸ[ವ]ತಿಯರ ಕಾಣೆವೆನುತೀ ।
ಭುವನದಲಿ ಸತ್ಕೀರ್ತಿ ದುಗ್ಧಾ ।
ರ್ಣವ ವಿರಾಜಿಸುತಿರ್ಪುದಾಚಂದಾರ್ಕಪರ್ಯಂತ ॥

ಪ್ರಕೃತಿ ಪುರುಷನಿನಾದ ಜಗದ ।
ರ್ಭಕನೊ ಭಾವಿಸೆ ಮೇಣು ಗಂಗಾ ।
ಪ್ರಕಟಕಾಶೀಶ್ವರನಿನಾದತಿಪುಣ್ಯಾ ತಾನೆನಲು ॥

ಸುಕೃತಫಲದಲಿ ನಗಸಭೂಪಾ ।
ಲಕಗೆ ಸತ್ಸತಿಯೆನಿಪ ನಾಗಾಂ ।
ಬಿಕೆಗೆ ಜನಿಸಿದ ಕೃಷ್ಣರಾಯನುದಾರಗುಣಯುತನು ॥

ಲಲಿತ ನಂದನದಲ್ಲಿ ಸುರತರು ।
ಬಳೆವ ತೆರದಲಿ ವೀರ ವಿತರಣ ।
ಬೆಳೆದುದಾತನ ಕೂಡೆ ಬೆಳೆದುದು ಕೀರ್ತಿಲತೆಯೊಡನೆ ॥

ಬಳಿಕ ವಿದ್ಯಾನಗರಿಯಲಿ ಭುಜ ।
ಬಲದೆ ಪಟ್ಟವ ಕಟ್ಟಿ ಕೊಂಡಾ ।
ಯಿಳೆಯನಾಳದನಖಿಳಕರ್ಣಾಟಾಧಿಪತಿಯಾಗಿ ॥

* * * *

ಘೂತು ! ಭಾರದ್ವಾಜ ಕುಲ ವಿ ।
ಖ್ಯಾತ ! ಪದವಾಕ್ಯಪ್ರಮಾಣ ।
ಜ್ಞಾತಿಶಯವಿಖ್ಯಾತಭಾನುಕವೀಂದ್ರನಾತ್ಮಜನ ॥

ಪ್ರೀತಿಯಲಿ ತಿಮ್ಮಣನ ಕರೆದು ವಿ ।
ನೂತನಾಧಿಕವಸ್ತ್ರಭೂಷ ।
ವ್ರಾತಗಳ ಕೊಟ್ಟೊಡನೆ ಮನ್ನಿಸಿ ಬಳಿಕಮಿಂತೆಂದ ॥

ಲೀಸೆನಿಸಿ ಮೊದಲಾ ಕುಮಾರ ।
ವ್ಯಾಸದಶಪರ್ವಗಳ ಬೇಳದ ।
ಭಾಸುರವಿದೆಂದೆನಿಸಿ ಭಾರತದುಳದ ಪರ್ವಗಳ ॥

ನೀ ಸಕಲ ಜನಮೆಚ್ಚುವಂತೆ ವಿ ।
ಲಾಸದಲಿ ಪೇಳೆಂದೆನುತಲುಪ ।
ದೇಶಿಸಿದ ನರಸೇಂದ್ರನಾತ್ಮಜ ಕೃಷ್ಣರಾಜನೃಪ ॥
ಸುರನದಿಯು ಯಮುನಾತರಂಗಿಣಿ ।
ಬೆರೆಸಿ ಹರಿವಂದದಲಿ ಕವಿಕುಂ ।
ಜರಕುಮಾರವ್ಯಾಸನುರುವಾಗ್ಮಹರಿಯೊಡನೀಗ ॥
ಸರಿಯೆನಿಸಿ ನೀಕೂಡಿಸೈ ಸುರು ।
ಚಿರಭವತ್ಕವಿತಾಪ್ರವಾಹವ ।
ಪರಮಪುಣ್ಯನಿಧಾನವಹುದೆನುತಲಿ ನಿರೂಪಿಸಿದ ॥
ಎನೆ ಹಸಾದವೆನುತ್ತ ಕೈಕೊಂ ।
ಡನಘಭಾರತಕಥೆಯು ಕಟವೆಯು ।
ಜನಪ ನರಸಯಕೃಷ್ಣರಾಯನಿಗಂಕಿತವ ಮಾಡಿ ॥
ಮನವೊಲಿದು ಕವಿ ಭಾನುಭಟ್ಟನ ।
ತನುಜ ತಿಮ್ಮಣನಖಿಳ ವಿದ್ವ ।
ಜ್ಜನ ನಲಿವವೊಲು ಪೇಳ್ದ ಮುಂದಣ ವರಕಥಾಮೃತವ ।

Colophon:

ಇಂತು ಪೀಠಿಕಾ ಸಂಧಿ ಸಮಾಪ್ತಂ ॥

ಮುನಿಜನದನುಜ್ಞೆಯಲಿ ಗಂಗಾ ।
ತನುಜನಿದ್ದೆಡೆಗೈದಿ ಯಮುನಂ ।
ದನನು ಕೇಳಿದನಧಿಕವೆನಿಸುವ ರಾಜಧರ್ಮಗಳ ॥
ಕೇಳು ಜನಮೇಜಯ ಧರಿತ್ರೀ ।
ಪಾಲ! ವೈಶಂಪಾಯನನನತಿ ।
ಲೀಲೆಯಲಿ ಮುಂದಾದ ಭಾರತ ಕಥೆಯ ಪದ್ಧತಿಯ ॥
ಹೇಳು ವಿಸ್ತರದಿಂದ ಮುನಿಕುಲ ।
ಮೌಳಿ ನನಗೆನೆ ಹರುಷದಲಿ ಭೂ ।
ಪಾಲಕನ ಕೊಂಡಾಡಿ ಬಳಿಕಿಂತೆಂದನಾ ಮುನಿಪ ॥
ಆದೊಡಾಲಿಸು ನೃಪತಿ ಕೌರವ ।
ರಾದಿಯಾದರಿಭೂಪರನು ಕುರು ।
ಮೇದಿನೀ ಸ್ಥಳದಲ್ಲಿ ತಾ ಹದಿನೆಂಟು ದಿನದೊಳಗೆ ॥
ಕಾದಿ ಕೊಂದಿಭಪುರಿಯ ಪಟ್ಟದೊ ।
ಳಾ ದಯಾನಿಧಿ ಧರ್ಮಪುತ್ರನು ।
ಸೋದರರು ಸಹಿತಿರುತ ನೆನೆದನು ಸಕಲ ಬಂಧುಗಳ ॥
ಪುರುಷ ಕಾಣದ ಸತಿಯ ಚೆಲುವಿಕೆ ।
ಯರಿಮಹೀಶ್ವರರರಿಯದವನೀ ।
ಶ್ವರನ ವಿಕ್ರಮ ಬಂಧುಸಂತತಿ ಬಂದು ಕಂಡೊಡನೆ ॥

ಹಿರಿದು ಸಂತೋಷಿಸದ ಸಂಪದ ।
ಗುರುಹಿರಿಯರಹುರೆನ್ನದವನಾ ।
ಚರಣೆ ನಿಷ್ಫಲವೆಂದು ದರ್ಮಜ ನೆನೆದು ದುಃಖಿಸಿದ ॥
ಕಳೆದ ಕೈದುಗಳೊರೆಗಳೋ, ಪರಿ ।
ಮಳೆಗಳಿಲ್ಲದ ಪೂಗಳೋ, ಗತ ।
ಜಲತಟಾಕಾಬ್ಜಗಳೋ, ಮೌಕ್ತಿಕರಹಿತ ಶುಕ್ತಿಗಳೋ ॥

ವಿಲಸದರ್ಥವಿಹೀನಶಬ್ದಂ ।
ಗಳೊ ಸುಯೋಧನಕರ್ಣಮುಖ್ಯರ ।
ನಿಳಯುಗಳೊ ಯೆನುತರಸು ಸುಯ್ದನು ಬಂಧುಗಳ ನೆನೆದು ॥

ಕೊಡುವ ದಾನಿಯು ಕೊಂದು ಮೂರ್ಖನ ।
ನಡೆರ್ಪ್ಪ ಬೇಡುವರುಂಟೆ ? ಲೋಕವ ।
ಬಿಡದೆ ಸಲಹುವ ನೃಪನನಿರಿವರ ಸೇರಿದವರುಂಟೆ ? ॥
ಕಡು ಮುಳಿದು ಬಾಂಧವರನೆಲ್ಲರ ।
ಕೆಡಹಿದಾತನ ಕೂಡೆ ಸಲೆ ಕೊಳು ।
ಕೊಡೆ(ಯು) ಬಯಸುವರುಂಟೆ ? ಯೆನುತವನೀಶ ಚಿಂತಿಸಿದ ॥

ಹಿರಿಯ ಧೃತರಾಷ್ಟ್ರನು ಮಹೀತಳ ।
ದರಸುತನವನು ಮಾಡೆ ಸೇವಾ ।
ನಿರತನಾದನು ತನಗೆ ಪಿತನಹ ಪಾಂಡು ಭೂವರನು ॥
ಮರುಳರಾನ್ ಧೃತರಾಷ್ಟ್ರನಿರುತಿರೆ ।
ಧರೆಯ ಭಾಗಕೆ ಕಾದಿ ತತ್ತ್ರನು ।
ಜರನು ಕೊಲುವುದಿದಾವ ಧರ್ಮವೆನುತ್ತ ಚಿಂತಿಸಿದ ॥
ಶಿವಶಿವಾ ! ದತ್ತಾಪಹಾರದ ।
ತವಕದಲಿ ನಿಜಬಂಧುವರ್ಗವ ।
ಸವರಿ ಸೆಳೆದೆವು ಹುಟ್ಟುಗುರುಡನ ಕಯ್ಯ ಕೋಲುಗಳ ॥

ಅವನಿಯೊಳಗೆನ್ನವೊಲು ಕಡುಪಾ ।
ಪವನು ಮಾಡಿದರುಂಟೆ ಶಶಿಕುಲ ।
ದವರೊಳಗೆ ಮುನ್ನೇನೆನುತ ಮರುಗಿದನಂದು ಯಮಸೂನು ॥

ಸಾಯಬಾರದ ತೆರದಲಾ ಗಾಂ ।
ಗೇಯಗಿತ್ತನು ವರವ ಶಂತನು ।
ಗಾಯಲಿತ್ತನು ವರವನಾತಗೆ ಪಿತೃವಧವ ಮುರಿದು ॥
ರಾಯತನ ಧೃತರಾಷ್ಟ್ರಗಿರೆಲ ।
ನ್ಯಾಯದಲಿ ವರ್ತಿಸಿದೆನಕಟಕ ।
ಟೀಯವಸ್ಥೆಯ ಮಾಡಿ ಕೆಡಿಸಿದೆನಮಲ ಶಶಿಕುಲವ ॥
ಗುರುವರನ ಕಲಶಜನ ಕೊಂದೆವು ।
ಗುರುಹನನ ಸದ್ಬ್ರಹ್ಮವಧೆಯುಂ ।
ಬೆರಡು ಸಿದ್ಧಿಸಿತೆನಗೆ ಮೂಜಗವರಿಯಲಿನ್ನೇನು ? ॥

ಹಿರಿಯ ಧೃತರಾಷ್ಟ್ರಂಗೆ ಸರಿಮಹಿ ।
ಗುರವಣಿಸಿ ಗುರುದಾರಗಮನವ ।
ವಿರಚಿಸಿದೆವಂಜದ ಮಹಾಪಾತಕಿಗಳಾವೆಂದ ॥

End:

ಸುರನದೀಸುತ ! ತನ್ನ ಚಿತ್ತಕೆ ।
ಪರಮಶಾಂತಿಯದಾಯ್ತು ನೀ ನಿ ।
ಸ್ತರಿಸಿದುತ್ತಮವೆನಿಪ ಪುಣ್ಯಾಖ್ಯಾನಜಾಲದಲಿ ॥

ವರಮುನೀಂದ್ರರು ಮೆಚ್ಚುವಂತೀ ।
ಪರಿಯುಲುಜ್ವಲಬೋಧವಿದು ಸ ।
ರ್ವರಿಗೆ ದೃಢವಪ್ಪಂತೆ ತಿಳುಹಿದೆ ಲೇಸು ಲೇಸೆಂದ ॥

ಪಲವು ತೆರದಲಿ ಧರ್ಮಸಂಶಯ ।
ಗಳನು ಯಮನಂದನನು ಕೇಳ್ದುದ ।
ಕೊಲಿದು ಗಂಗಾಸೂನು ಧರ್ಮರಹಸ್ಯವಿಸ್ತರವ ॥
ತಿಳುಹಿದಂದಕೆ ಮೆಚ್ಚಿ ಸಂಯಮ ।
ತಿಲಕರಿಂದಿಗೆ ಹೋಗಿಬಹೆವಾವ್ ।
ಬಳಕಲೆನುತ್ತೈದಿದರು ತಂತಮ್ಮಾಶ್ರಮಂಗಳಗೆ ॥
ದ್ಯುಮಣಿಯಸ್ತಾಚಲವ ಸಾರುವ ।
ಸಮಯವಾದುದು ನಾಳೆ ಬಹೆವೆಂ ।
ದಮರನದಿಯಾತ್ಮಜಗೆ ವಂದಿಸಿ ಬಳಿಕ ಬೀಳ್ಕೊಂಡು ॥
ಯಮತನೂಭವನೇರಿ ರಥವನು ।
ಕಮಲನೇತ್ರನ ನೇಮದಲಿ ನಿ ।
ರ್ಗಮಿಸಿದನು ಗಜಪುರಕೆ ಧೃತರಾಷ್ಟ್ರಾದಿಗಳು ಸಹಿತ ॥
ತರಣಿ ಪಶ್ಚಿಮ ದಿಶೆಯ ನೀರಾ ।
ಕರದೊಳಗೆ ಮುಳುಗಿದನು ತತ್ಕ್ಷಣ ।
ಪರಮ ಬೋಧಾನ್ವಿತನೆನಿಸಿ ನಿಜವಿಮಲಚಿತ್ತದಲಿ ॥
ನರಸನೃಪಸುತಕೃಷ್ಣರಾಯನ ।
ಕರುಣದಲಿ ರಕ್ಷಿಸುವ ವೇಂಕಟ ।
ಗಿರಿಪತಿಯ ಚರಣಗಳ ನೆನೆವುತಲಿರ್ದನಾಭೀಷ್ಮ ॥

Colophon:

ಅಂತು ಸಂಧಿ ಹತ್ತಕ್ಕಂ ಮಂಗಳಂ.

ಇತಿ ಶ್ರೀವೇಂಕಟನಾಥ ಶ್ರೀಪಾದಭಕ್ತಿಯುಕ್ತತಿಮ್ಮಣಾರ್ಯವಿರಚಿತಭಾರತಕಥೆ
ಯೊಳ್ ಶಾಂತಿಪರ್ವಂ ಸಮಾಪ್ತಂ ॥

(ಎ.ಎ.)—

ಭಾರತಾಂತರ್ಗತಶಾಂತಿ ಪರ್ವವು ಸಮಗ್ರ. ಹತ್ತು ಸಂಧಿಗಳು. ಬರವಣಿಗೆ ಚೆನ್ನಾಗಿದೆ. ತಪ್ಪುಗಳು ಅಷ್ಟಾಗಿಲ್ಲ. ಶಿಥಿಲವಾಗಿದೆ, ಕವಿ ಭಾರದ್ವಾಜಗೋತ್ರದ ತಿಮ್ಮಣಾರ್ಯನೆಂಬ ಬ್ರಾಹ್ಮಣನು.

ಈತನ ತಂದೆ ಪದವಾಕ್ಯಪ್ರಮಾಣಜ್ಞನಾದ ಭಾನುಭಟ್ಟನೆಂಬವನು. ಕ್ರಿ.ಶ. 1509-1529 ರ ವರೆಗೆ ವಿಜಯನಗರದ ಸಿಂಹಾಸನಾಧಿಪತಿಯಾಗಿದ್ದ ಕೃಷ್ಣರಾಯನ ಅಪ್ಪಣೆಯಂತೆ ಈ ಗ್ರಂಥವನ್ನು ತಾನು ಮುಂದಕ್ಕೆ ಬರೆದು ಪೂರ್ತಿಗೊಳಿಸಿರುವುದಾಗಿ ಕವಿಯು ಹೇಳಿಕೊಂಡಿದ್ದಾನೆ. ಕೃಷ್ಣರಾಯನ ವಂಶವೃಕ್ಷವು ಸಂಗ್ರಹವಾಗಿ ಪೀಠಿಕಾ ಸಂಧಿಯಲ್ಲಿ ವರ್ಣಿತವಾಗಿದೆ. ಮಿಕ್ಕ ವಿಷಯಗಳನ್ನು ಉದಾಹೃತವಾಗಿರುವ ಗ್ರಂಥಭಾಗಗಳಿಂದ ತಿಳಿಯಬಹುದು.

No. 82. ಭಾರತಕಥಾ ಕುಸುಮವಲ್ಲರಿ.

BHĀRATAKATHĀKUSUMAVALLARI.

Substance, palm-leaf. Size, 12 × 1¼ inches. Pages, 189. Lines, 7 on a page. Character, Kanarese. Condition, injured. Appearance, old. Mode of writing, good but not free from mistakes.

Contains the Śāntiparva complete.

Same work as the above; by Timmaṇṇa. For other particulars see under No. 81, *ante*.

(ವಿ.ವಿ.)—

ಶಾಂತಿಪರ್ವ ಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳು ಅಷ್ಟಾಗಿ ಕಾಣಬರುವುದಿಲ್ಲ. ಶಿಥಿಲ. ಗ್ರಂಥಪಾತವೂ ಕೆಲವು ಮಟ್ಟಿಗೆ ಇದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿ ತಿಳಿಯುವುದು.

No. 83. ಭಾರತ ಕಥಾಕುಸುಮವಲ್ಲರಿ.

BHĀRATAKATHĀKUSUMAVALLARI.

Substance, palm-leaf. Size, 12 × 1¼ inches. Pages, 215. Lines, 7 on a page. Character, Kanarese. Condition, much injured. Appearance, very old. Mode of writing, good but not free from mistakes.

Contains the Ānuśāsanikaparva complete.

A rendering in Kanarese of the Ānuśāsanikaparva of the Sanskrit Mahābhāratā; by Timmaṇṇa. For other particulars see under No. 81, *ante*.

Beginning :

ತಿಳುಹಿದನು ದರ್ಮಜಗೆ ಭೀಷ್ಮನು ।
ಕೊಲೆಗೆ ಮನುಜನು ಕರ್ತನೆಂಬುದ ।
ಲಲಿತವೆನಿಸಿರ್ದತಿಥಿಸತ್ಕಾರದ ಮಹಾಫಲವ ॥

ಕೇಳು ಜನಮೇಜಯ! ಧರಿತ್ರೀ ।
ಪಾಲ! ಮರುದಿನ ಧರ್ಮಸುತನತಿ ।
ಲೀಲೆಯಲಿ ಧೃತರಾಷ್ಟ್ರ ಹರಿ ಭೀಮಾರ್ಜುನರು ಸಹಿತ ॥
ಮೇಳದಲಿ ಪೊರಮಟ್ಟು ವರಮುನಿ ।
ಜಾಲಪರಿವೃತನಾಗಿ ರಂಜಿಪ ।
ಕೂಲಪತಿಗು ಕುಮಾರನಿದ್ದೆಡೆಗಾಗಿ ನಡೆತಂದ ॥
ಮುನಿಜನಕೆ ವಂದಿಸಿ ನದೀನಂ ।
ದನನ ಪದಯುಗಕೆರಗಿಯಾ ಯಮ ।
ತನುಜನುಚಿತಸ್ಥಾನದಲಿ ಕುಳ್ಳಿರ್ದು ಕೈಮುಗಿದು ॥
ಮನದ ಸಂಶಯ ಬಿಡುವವ್ರೊಲು ನೀ ।
ನೆನಗೆ ತಿಳುಹಿದ ಸಕಲಧರ್ಮವ ।
ಘನಮನೋವ್ಯಥೆಯೊಂದು ಬಿಡದಿದೆ ಯೆನುತಲಿಂತೆಂದ ॥
ಮದಿಸಿ ದುರ್ಯೋಧನನು ಬಹು ಲೋ ।
ಭದಲಿ ಧರೆಯನು ಹಂಚಿ ಕೊಡಲೊ ।
ಲ್ಲದೆ ರಣವನೆನ್ನೊಡನೆ ಬಲಿದನು ರಾಜ್ಯಕಾಂಕ್ಷೆಯಲಿ ॥
ಅಧಟುತನವನು ಬಿಡದೆ ನಾ ಕಾ ।
ದಿದೆನು ಕೆಳೀ ಯುಬ್ಬರಿಂದಳ ।
ದುದು ಸುಹೃನ್ನೃಪಸಮಿತಿ ಯಿದರನುತಾಪ ಬಿಡದೆಂದ ॥
ಎನಲು ಗಂಗಾತನುಜನಿಂತೆಂ ।
ದನು ಬಳಿಕ ವಧಿಸುವೊಡೆ ಕರ್ತನು
ಮನುಜನಲ್ಲದು ತಥ್ಯವಿದಕಿತಿಹಾಸವೊಂದುಂಟು ॥
ನಿನಗೆ ಹೇಳುವೆ ಕೇಳು ಗೌತಮಿ ।
ಯೆನಿಪ ಭೂಸುರಕಾಂತೆ ಯಿಹಳಾ ।
ವನಿತೆಯಾತ್ಮಜನುರಗನಿಂದೆಯ್ದಿದನು ಪಂಚತೆಯ ॥
ಮಗನ ಮರಣವ ನೋಡಿ ಬಳಿಕಾ ।
ಮೃಗನಯನೆಯಳುತಿಗಲು ತತ್ಪ ।
ನ್ನಗವನಾಸಮಯದಲಿ ರಜ್ಜುವಿನಿಂದ ಮಿಗಿ ಕಟ್ಟಿ ॥
ತೆಗೆದು ತಂದು ಕಿರಾತನೊಬ್ಬನು ।
ಮಿಗೆ ಪ್ರಳಾಪಿಪ ಸತಿಗೆ ತೋರಿಸಿ ।
ಹಗೆಯ ಮರಳಿವೆನಿದನು ಕೊಲುವೆನು ನೋಡು ನೀನೆಂದ ॥
ಎಂದೊಡಾ ದ್ವಿಜವನಿತೆ ನೋಡಿ ಪ್ರ ।
ಳಂದಕನನೀ ಫಣಿಯ ಕೊಲಬೇ ।
ಡೆಂದು ನೀನೆಲೆಯಣ್ಣ! ಹೋಗಲಿ ಬಿಡುಬಿಡೆಂದನಲು ॥
ಇಂದುವದನೆಯ ನುಡಿಯ ನಾಲಿಸಿ ।
ಯಂದು ಶಬರನು ನಿನ್ನ ಮಗನನು ।
ಕೊಂದ ಹಾವಿದು ಬಿಡುವುದನುಚಿತ ವಧಿಸಬೇಕೆಂದ ॥

* * * *

ಎಲೆ ಯುಧಿಷ್ಠಿರ ! ನಿನ್ನ ಮನದಲಿ ।
ನಿಲಿಸುವುದು ನೀನೀ ಕಥೆಯು ನಿ ।
ರ್ಮಲತರಾಭಿಪ್ರಾಯವನು ಕೇಳ್ವತಿಥಿಸಂಚಯವ ॥
ಒಲಿದು ಪೂಜಿಸುವುದೆ ಗೃಹಸ್ಥಗೆ ।
ಲಲಿತ ಧರ್ಮವಿದಕ್ಕೆ ಮಿಗೆವೆ ।
ಗ್ಗಳಿಪ ಧರ್ಮಗಳಿಲ್ಲವೆಂದಾ ಭೀಷ್ಮ ಹೇಳಿದನು ॥
ಧರೆಯೊಳೀ ಯಿತಿಹಾಸವನು ಕೇ ।
ಳ್ದರಿಗೆ ಬಹುಶುಭವಹುದೆನುತಲಾ ।
ಸುರಸರಿತ್ಸುತನರುಹಿ ನರಸಯ ಕೃಷ್ಣರಾಯನಿಗೆ ॥
ಸಿರಿಯ ಕೊಡುತಿಹ ವೇಂಕಟಾಧೀ ।
ಶ್ವರನ ಕೃಪೆಯುಳ್ಳವಗೆಯೊಪರಿ ।
ಪರಮಧರ್ಮಗಳಹುದೆನುತಲಾ ಧರ್ಮಸುತ ನಲಿದ ॥

Colophon:

ಇಂತು ಪ್ರಥಮ ಸಂಧಿ ಸಮಾಪ್ತಂ ॥

ಗಂಗೆಯಾತ್ಮಜ ಕೇಳ್ದನಿಂದ್ರಮ ।
ತ್ರಂಗವಾದವ ದೈವ ಪೌರುಷ ।
ದಂಷ್ಟ್ರವಣೆಗಳನಾಶ್ರಿತನ ಸದ್ಗುಣಕದಂಬಕವ ॥
ಕೇಳು ಜನಮೇಜಯ ಧರಿತ್ರೀ ।
ಪಾಲ! ದೇವವ್ರತನ ಧರ್ಮಜ ।
ಕೇಳಿದನು ಧರಣೀಶ್ವರತ್ವವ ಗಳಿಸಿಕೊಳಬಹುದೇ ? ॥
ಹೇಳ ಕರಣತ್ರಯದಲದ ನಾ ।
ನಾಲಿಸುವೆನೆನಲಾಗ ದಶನಾ ।
ಜಾಲರುಚಿ ಕೌಮುದಿಯಂತೆ ಕವಿಯಲು ಬೀಷ್ಮನಿಂತೆಂದ ॥

* * * *

ಅರಸ ! ಕೇಳಾದಿಯಲಿ ಲೋಕದ ।
ತರುಣಿಯರು ನಿರ್ಮಾಯರೆನಿಸುತ ।
ಪರಮಸಾಧ್ವಿಯರಾಗಿ ಸಾಧುಗಳಾಗಿ ವರ್ತಿಸಲು ॥
ನರರನಿಬರದರಿಂದ ನಿರ್ಗತ ।
ದುರಿತರಾಗಿ ನಿಜೇಚ್ಛೆಯಿಂದಲಿ ।
ಸುರಪದವ ಪಡೆವುತ್ತಲಿಪ್ಪರನಂತ ಮಹಿಮೆಯಲಿ ॥
ಅದಕಸೂಯಾಗ್ರಸ್ತರಾದರು ।
ತ್ರಿದಶರಂಬುಜಯೋನಿಯೆಡೆಗೆ ।
ಯ್ದಿದರು ಬಳಿಕೀ ಸ್ಥಿತಿಯ ಬಿನ್ನೈಸಿದರು ವಿಧಿ ಕೇಳ ॥
ಸುದತಿಯರೊಳುರುಮಾಯೆಗಳನಿರಿ ।
ಸಿದನು ಕಾಮವ ವೆಗ್ಗಳವ ಮಾ ।
ಡಿದನವರಿಗದರಿಂದ ಪುರುಷರು ಮೋಹಿಸುತ್ತಿಹರು ।

ಬಳಿಕ ಕಾಮಕ್ರೋಧ ಮೊದಲಾ ।
ದಲಘುದೋಷಂಗಳನು ಬೆರಸಿದ ।
ರಿಳೆಯ ನರರು ಮಹಾನುಭಾವತೆಗೆಟ್ಟುದನು ನೋಡಿ ॥

ನಲಿದರಾ ನಿರ್ಜರರು ಭುವನದ ।
ಲಲನೆಯರು ಮಾಯೆಯಲಿ ನೆರೆಹೆ ।
ಚ್ಚಳವೆನಿಸಿ ತಾವದಕೆ ವಶವಲ್ಲೆನಿಸಿಕೊಂಡಿಹರು ॥

ಎನುತ ಬೋಧಿಸಿ ದೇವಶರ್ಮ್ಮ ।
ವನಿಸುರನ ಶಚಿರುಚಿಯೆನಿಪ ಕಾ ।
ಮಿನಿಗೆ ಶಕ್ರನು ಬಂದು ಮೋಹಿಸಿ ತದ್ದ್ವಿಜಾಗ್ರಣಿಯ ।

ಅನಘನೆನಿಸುವ ಶಿಷ್ಯವಿಪುಲ ।
ಭ್ಯನು ಬಳಿಕ ನಿಜಯೋಗಬಲದಲಿ ।
ವನಿತೆಯನು ಕಾವಂದವನು ವಿಸ್ತರಿಸಿದನು ಭೀಷ್ಮ ॥

ಪಲಬರಿಹರಸತಿಯರು ಧಾತ್ರಿಯೊ ।
ಳಿಲೆ ಯುಧಿಷ್ಠಿರ ! ಕೇಳು ಭಾವಿಸೆ ।
ಫಲಿತಸಾಧ್ವಿಯರಿಲ್ಲವೆನಬಾರದುಂಟವರು ॥

ಕುಲವು ಧರ್ಮ್ಮವು ಕೆಡದವೊಲು ನಿ ।
ರ್ಮ್ಮಲವೆನಿಪ ವರ್ತ್ತನವು ಬಡೆದಿಹ ।
ರಿಳೆಯವರ ಕತದಿಂದಲಭಿವೃದ್ಧಿಯನು ಪಡೆದಿಹುದು ॥

ಜನಪ ! ಪಾತಿವ್ರತ್ಯವುಳ್ಳಂ ।
ಗನೆಯರಿಗೆ ದೈವಕ್ಕೆ ಬೇರೆಂ ।
ದೆನಲುಬಾರದು ಕೇಳು ಚಾತುರ್ವರ್ಗಗಳು ಸತಿಯಿಂದ ।

ಗಳಸಿಕೊಂಬನು ಪುರುಷನೆಂಬುದ ।
ತಿಳುಹಿ ಮಿಗೆ ಕನ್ಯಾವರಣವಿಧಿ ।
ಗಳನು ಯಮನಂದನಗೆ ವಿಸ್ತರವಾಗಿ ಬೋಧಿಸಿದ ? ॥

ಒಲಿದು ವಿಪ್ರರು ನಾಲ್ಕು ಜಾತಿಗ ।
ಳಲಿ ವಿವಾಹವ ಮಾಡಿಕೊಂಬುದು ।
ಸಲುವುದೆಂಬುದು ಕ್ಷತ್ರಿಯನು ಜಾತಿತ್ರಯಂಗಳಲಿ ॥

ಸಲೆ ವರಿಸಬಹುದೆಂಬುದನು ನಿ ।
ರ್ಮ್ಮಲವೆನಿಸಿದೂರುಜನು ಜಾತಿಗ ।
ಳೊಳಗೆರಡರಲ್ಲಿ ವರಿಸುವುದ ವಿವರಿಸಿದನಾಭೀಷ್ಮ ॥

ಧರಣಿಸುರನಿಗೆ ಶೂದ್ರ ಕನ್ಯೆಯ ।
ವರಿಸಬಹುದೆಂದೊಂದು ಮತ ಕೇಳ್ ।
ವರಿಸಬಾರದು ದೋಷವಹುದೆಂ[ದೆಂಬು]ದೊಂದು ಮತವಿಹುದು ॥

ಪಿರಿಯರಾ ಶೂದ್ರಜೆಯ ಕಾಮಿಸಿ ।
ವರಿಸಲೊಲ್ಲರು ಮಗನು ಹುಟ್ಟಲು ।
ನರಕ ಪಿತೃಗಳಗಹುದು ದ್ವಿಜತನವಿಲ್ಲವವಗೆನುತ ॥

ಎಂದು ಬೋಧಿಸಿದನು ವಿವಾಹದ
ಚಂದವನು ವಿಸ್ತರಿಸಿ ವಿಪ್ರಗೆ ।
ನಂದನರು ಹನ್ನೆರಡು ವಿಧರೆಂಬುದನು ತಾನರುಹಿ ॥
ದಂದವೆನಿಸಿದ ಕೌಲನಿತಂಬಿನಿ ।
ಯಿಂದ ಜನಿಯಿಸಿದವನು ವರಸುತ ।
ವೃಂದದೊಳಗತ್ಯಧಿಕನೆಂಬುದ ಭೀಷ್ಮ ತಿಳುಹಿದನು ॥
ಬಳಿಕ ಸಹವಾಸದಲಿ ದರ್ಶನ ।
ಗಳಲಿ ಮೋಹ ಸುಸ್ನೇಹದಂದವ ।
ಲಲಿತಗೋಮಾಹಾತ್ಮ್ಯವನು ನೀ ತಿಳುಹು ನನಗೆಂದ ॥
ಒಲಿದು ಕೌಂತೇಯಾಗ್ರಜನು ನುಡಿ ।
ಯಲು ಮುದದಿನದನಾಲಿಸುತ ನಿ ।
ರ್ಮಲಚರಿತ್ರಸಾಗಿರ್ದ ಗಂಗಾತನುಜನಿಂತೆಂದ ॥

End :

ಘನಬಲಾನ್ವಿತನೆನಿಸಿದಾ ಭೀ ।
ಷ್ಮನು ಶಿಖಂಡಿಯು ಕಯ್ಯಲಿಂತಹು ।
ದನು ನಿರೀಕ್ಷಿಸಿ ಮತ್ತೆಯುಳದಿದ್ದನು ಧರಿತ್ರಿಯಲಿ ॥
ತನುವು ಭಾವಿಸೆ ವಜ್ರಮಯವಹು ।
ದೆನಗೆನುತ ವುಗುರಿನಲಿ ಕಂಬನಿ ।
ಯನು ಮಿಡಿವುತಾ ಗಂಗೆ ಮಿಡುಕಿದಳಧಿಕ ಶೋಕದಲಿ
'ಇನಿತು ಬಗೆಯಲಿ ಗಂಗೆ ಮರುಗುವು ।
ದನು ನಿರೀಕ್ಷಿಸಿ ಧರ್ಮಜಾದಿಗ ।
ಳನಿಬರಾಸಮಯದಲಿ ನಡುಗಿದರಧಿಕಭೀತಿಯಲಿ ॥

ತನತನಗೆ ಪರಿಜನಗಳೆಲ್ಲಾ ।
ಮನದೊಳಗೆ ಭಯವಿಸ್ಮಯಂಗಳು ।
ಜನಿಸಿತಾವೇಳೆಯಲಿ ಗಂಗೆಗೆ ಕೃಷ್ಣನಿಂತೆಂದ ॥
ನಿನಗೆ ಶೋಕವಿದೇಕೆ ? ನಿನ್ನಯ ।
ತನುಜ ಹೋದನು ಪರಮಗತಿಗಾ ।
ತನು ವಸುಗಳೊಳಗೊಬ್ಬನೀ ಧರಣಿಯಲಿ ಶಾಪದಲಿ ॥
ಮನುಜರೂಪದಿ ಭರತವಂಶದಿ ।
ಜನಿಸಿದನು ಘನಮಹಿಮನಾಭೀ ।
ಷ್ಮನಿಗೆ ನೀನೀ ಪರಿಯಲಳಲುವುದುಚಿತವಲ್ಲೆಂದ ॥
ಆತನಾಹವದಲಿ ಶಿಖಂಡಿಗೆ ।
ಸೋತವನೆ ಬಿಡಿ ಶಿವಶಿವಿನ್ನೀ ।
ಮಾತದೇತಕೆ ? ಜಯಿಸಲರಿಯರು ವಾಸವಾದಿಗಳು ॥
ಶ್ವೇತತುರಗನ ವೀರ್ಯಬಾಣ ।
ವ್ರಾತಗಳೆ ಮೃದುಶಯನವಾಗೆಸು ।
ಖಾತಿಶಯತೆಯಲೊರಗಿದನು ರಣಧೀರನಹನೆಂದ ॥

ಭುವನಜನವರಿವಂದದಲಿ ಮೃ ।
ತ್ಯುವನು ಗೆಲಿದಾಕೆಯ ನಿಜಾಧೀ ।
ನವನು ಮಾಡಿಕೊಳುತ್ತಲಿರ್ದು ವಿರಕ್ತಿ ಜನಿಯಿಸಲು ॥

ದಿವಿಜಲೋಕಕೆ ಪೋದನಧಿಕೋ ।
ತ್ಸವದಲಾತ್ಮೇಚ್ಛೆಯಲಿ ಭೀಷ್ಮನು ।
ಹವಣಿಡಲು ವಶವಲ್ಲವಾತನ ಮಹಿಮೆಯೆನಗೆಂದ ॥

ಎಂದು ಗಂಗಾದೇವಿಗಾಗೋ ।
ವಿಂದನಿ ರೀತಿಯಲಿ ಬೋಧಿಸಿ ।
ಯಂದು ತನ್ಮಾನಸದ ಬಹುದುಃಖವನು ಬಿಡಿಸಿದನು ॥

ಅಂದವಾಗಿರಲಾ ಪರಾಶರ ।
ನಂದನನು ಘನತತ್ವವಚನಗ ।
ಳಿಂದ ಭಾಗೀರಥಿಗೆ ಯಾನಂದವನು ವಿರಚಿಸಿದ ॥

ಬಳಿಕಲುಳಿದಾತ್ಮೀಯಪಾಂವನ ।
ಸಲಿಲಮಧ್ಯವ ಹುಗುತ ಗಂಗಾ ।
ಲಲನೆ ಕೃಷ್ಣಾದಿಗಳಿಗಾಶೀರ್ವಾದವನು ಮಾಡಿ ॥

ಕಳುಹಿದಳು ಪ್ರಿಯದಿಂದ ಮುನಿಸಂ ।
ಕುಲಗಳೊಡನೆಯ್ತರಲು ಸುರಶೈ ।
ವಲಿನಿಯನು ಪೊರಮಟ್ಟು ಬಂದನು ಕುರುಕುಲೋದ್ಭವನು ॥

ಎನುತ ವೈಶಂಪಾಯನನು ಶಂ ।
ತನುತನೂಜನ ವೃತ್ತವೆಲ್ಲವ ।
ಮನವೊಲಿದು ಜನಮೇಜಯಕ್ಷಿತೀಪಾಲಕಗೆ ಹೇಳಿ ॥

ಜನಪನರಸಯ್ಯಕೃಷ್ಣರಾಯನ ।
ನನಿಶ ಸಲಹುವ ವೇಂಕಟಾದ್ರೀ ।
ಶನ ವಿನೋದ ಕ್ರಿಯೆಗಳೆಲ್ಲಿದೆಂದು ತಿಳುಹಿದನು ॥

Colophon:

ಅಂತು ಸಂಧಿ ೧೧ ಕ್ಕಂ ಮಂಗಳಂ ॥

ಇತಿ ಶ್ರೀವೇಂಕಟನಾಥಶ್ರೀಪಾದಭಕ್ತಿಯುಕ್ತತಿಮ್ಮಣಾರ್ಯವಿರಚಿತಭಾರತಕಥೆಯೊಳಾನುಶಾಸನಿಕಪರ್ವಂ ಸಮಾಪ್ತಂ ॥

(ವಿ-ವಿ.)—

ಆನುಶಾಸನಿಕಪರ್ವ ಸಮಗ್ರ. ಸಂಧಿಗಳು ಹನ್ನೊಂದು. ಬರೆವಣಿಗೆ ಸಾಮಾನ್ಯ. ತಪ್ಪುಗಳೂ ಉಂಟು. ಶಿಥಿಲ. ಗ್ರಂಥಪಾತಗಳೂ ಉಂಟು. ಕವಿ ತಿಮ್ಮಣಾರ್ಯ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೮೧ ನಂಬರಿನಲ್ಲಿ ನೋಡಿ ತಿಳಿಯುವುದು.

No 84. ಭಾರತ ಕಥಾಕುಸುಮವಲ್ಲರಿ.
BHĀRATAKATHĀKUSUMAVALLARI.

Substance, palm-leaf. Size, 16 × 1¼ inches. Pages, 46. Lines, 7 on a page. Character, Kanarese. Condition, much injured. Appearance, very old. Mode of writing, good and free from mistakes.

Contains the Sandhis 1—5 complete and Sandhi 6 incomplete in the Ānuśāsanikaparva.

Same work as the above ; by Timmaṇṇa for other particulars see under No. 81, *ante.*

(ವಿ.ವಿ.)—

ಆನುಶಾಸನಿಕ ಪರ್ವದಲ್ಲಿ ಒಂದರಿಂದ ಐದು ಸಂಧಿಗಳು ಪೂರ್ಣವಾಗಿವೆ. ಆರನೆಯ ಸಂಧಿ ಅಸಮಗ್ರ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳು ಇಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ೮೧ ಮತ್ತು ೮೩ ನೆಯ ನಂಬರುಗಳಲ್ಲಿ ನೋಡಿ ತಿಳಿಯಬಹುದು.

No. 85. ಭಾರತ ಕಥಾಕುಸುಮವಲ್ಲರಿ.
BHĀRATAKATHĀKUSUMAVALLARI.

Substance, palm-leaf. Size, 12 × 1¼ inches. Pages, 38. Lines, 7 on a page. Character, Kanarese. Condition, slightly injured. Appearance, very old. Mode of writing, good but not free from mistakes.

Contains only one Sandhi in the Āśvamēdhikaparva.

A rendering in Kanarese of the Āśvamēdhikaparva of the Sanskrit Mahābhārata ; by Timmaṇṇa. For other particulars see under No. 81, *ante.*

Beginning :

ಕುರುಕುಲೋತ್ತಮನಹ ಯುಧಿಷ್ಠಿರ ।
ಧರಣಿಪಾಲಕನಶ್ವಮೇಧಾ ।
ಧ್ವರವ ನೀಮಾಡೆಂದು ವೇದವ್ಯಾಸಮುನಿ ನುಡಿದ ॥
ಕೇಳು ಜನಮೇಜಯಧರಿತ್ರೀ ।
ಪಾಲ ! ಭೀಷ್ಮರಿಗುದಕಕರ್ಮವ ।
ಲೀಲೆ ಮಿಗೆ ವಿಧಿಪೂರ್ವವೆನಲಾಚರಿಸಿ ಧರ್ಮಜನು ॥
ಮೇಲೆ ಗಂಗೆಯನುತ್ತರಿಸಿ ಮಹಿನಿ ।
ಜಾಲಹರಿಧೃತರಾಷ್ಟ್ರಮುಖ್ಯರ ।
ಮೇಳದಲಿ ತತ್ತೀರದೆ (ಶಕ್ಯಾ)[ಮಾತ್ರಾ]ಗಳೈತಂದ ॥
ಬಳಸಿದುಮ್ಮಳಕೆಯಲಿ ಹೃದಯವ ।
ಬಲಿದು ಬಲುಶೋಕದಲಿ ಲೋಚನ ।
ಜಲವು ತೊಟ್ಟಿಡೆ ಬಿಟ್ಟುಚಿತಧೈರ್ಯ(ವನು)ಗೌರವವ ॥

ಕಳವಳಿಸಿ ಬಸವಳಿದು ಮಿಗೆ ಡೆಂ ।
ಡಳಿಸಿ ಯಮನಂದನನು ಬಿದ್ದನು ।
ಕೆಳಗೆ ದಾರುಣಬಾಣಘಾತದಿ ಬೀಳ್ವ ಗಜದಂತೆ ॥

ಎಲೆಲೆ ! ಹಿಡಿ ಹಿಡಿ ಬಿದ್ದನವನಿಪ ।
ತಿಲಕನೆನುತಸುರಾರಿಯೊದರಲು ।
ಕಳವಳಸುತ್ತನಿಲಜನು ಬೇಗದಲೆತ್ತಿಯಾ ನೃಪನ ॥

ಬಳಿಕ ನೆಲದಲಿ ಹಾಸಿ ಚೇಲಾಂ ।
ಚಲದಲಾತನ ಕುಳ್ಳಿರಿಸಿದನು ।
ಬಳಿಯೆ ಬಹುಭಯಬಂದು ಮುತ್ತಿದರರ್ಜುನಾನುಜರು ॥

ಹರಿಯುಚಿತವಚನದಲಿಯಾ ಭೂ ।
ವರನ ಸಂತೈಸಿದನು ತದನಂ ।
ತರದಲಂತಕಸುತನೆಡೆಗೆ ಧೃತರಾಷ್ಟ್ರನೈತಂದು ॥

ಕರತಳದಿ ಮೈದಡವಿ ಬಿಡು ಬಿಡು ।
ಮರುಳುಮಗನೆಯಪಾರ ಶೋಕೋ ।
ತ್ತರಗಳಿಲ್ಲವನೆಂದು ಮತ್ತಾದರದೊಳಂತೆಂದ ॥

ತನುಜ ! ಕೇಳ್ ಸುಕ್ಷತ್ರಧರ್ಮವಿ ।
ದೆನಿಪವೊಲು ಕೈಕೊಂಡೆ ನೀ ಸೋ ।
ದಿನಿಯ ಮನದುಮ್ಮಳಿಕೆ (ಯನು) ಮಾಣಿ(ಸಿದೆಯೆ)ಲ್ಲವನು ॥

ಅನುಜರೊಡನುರುರಾಜ್ಯಲಕ್ಷ್ಮಿಯ ।
ನನುಭವಿಸು ಗತಶೋಕನಾಗೆಂ ।
ದೆನುತ ಹಲವಂದದಲಿ ಸಂತೈಸಿದನು ಧೃತರಾಷ್ಟ್ರ ॥

ಕುಮತಿ ದುರ್ಯೋಧನನು ವಿದುರ ।
ಪ್ರಮುಖರಾಡಿದ ನುಡಿಯ ಕೇಳದೆ ।
ಸಮದನಾಗಿಯಧರ್ಮಪಥದಲಿ ಚಲಿಸಲಿನಿತಾಯ್ತು ॥

ಎಮಗದಕೆ ನೋವಿಲ್ಲ ಶೋಕ ।
ಭ್ರಮೆಯಿನಿತು ಗಾಂಧಾರಿಗಿಲ್ಲೆಲೆ ।
ಯಮತನುಜ ನೀನೆಮ್ಮನಿಬ್ಬರ ನೋಡಿ ಮರೆಯೆಂದು ॥

ಎಂದು ಧೃತರಾಷ್ಟ್ರಾವನೀಶ್ವರ ।
ಬಂದು ಬೋಧಿಸೆ ಮತ್ತೆಯಾ ಯಮ ।
ನಂದನನು ಶೋಕವನು ಬಿಡದಿರೆ ನುಡಿದನಸುರಾರಿ ॥

ಇಂದಿದೇತಕೆ ದುಃಖ ? ಬಾಂಧವ ।
ವೃಂದವತ್ತಡೆ ಮೃತಜನಕೆ ಫಲ ।
ವಂದವಹ ಸಂತಾಪವಹುದಿನ್ನಳಲಬೇಡೆಂದ ॥

ಎಲೆ ಯುಧಿಷ್ಠಿರ ! ನಿನ್ನ ಬಂಧುಗ ।
ಳಳಿದು ಕದನದೊಳಾ ಫಲದೊಳ ।
ಗ್ಗಳವೆನಿಸಿದತ್ಯೂರ್ಧ್ವಲೋಕಕೆ ಪೋದರವರಾಗ ॥

ಅಳಲಬೇಡದರಿಂದ ಲವರಿಗೆ ।
ಪಲವು ತೆರನಲಿ ದುಃಖಿಸಿದ ರವ ।
ರುಳಿದು ಬಹರೇ ತಿಳಿದಿದನು ಗತಶೋಕನಾಗೆಂದ ॥

ಕೇಳುತಕ್ಕುದನೆಲ್ಲವನು ನೆರೆ ।
ಕೇಳದೆಯಲಾ ಭೀಷ್ಮನಿಂದವೆ ।
ಕೇಳಿ ಮತ್ತೆಯು ಮನದೊಳಗೆ ಮರುಗುವುದು ಸಲ್ಲದಿದು ॥

ಹೇಳರೇ ಅತಿ ಹಿತವೆನಿಪ ವಾ ।
ಕ್ಯಾಳಿಗಳನಾ ವ್ಯಾಸನಾರದ ।
ರಾಲಘಿತವಚನಗಳ ಮರೆದಿಂತಳಲಬೇಡೆಂದ ॥

ಅರಸ ! ಬಹು ವಕ್ಕಣೆಯನಿಂತಾ ।
ದರಿಸಿ ಮಾಡು ಮಹಾಧ್ವರವನ ।
ಚ್ಚರಿಯಿದೆಂಬಂದದಲಿ ದೇವತೆಗಳಿಗೆ ಪಿತೃಗಳಿಗೆ ॥
ಪರಮಹರುಷವ ಮುಟ್ಟಿಸವನಿಯ ।
ವರರ ಧರ್ಮದಿ ಸಲಹು ನೀ ನಂ ।
ಬರನು ರಕ್ಷಿಸು ಪೂಜಿಸತಿಥಿವ್ರಜವನನವರತ ॥
ಎನುತ ಹರಿಬೋಧಿಸಲು ಯಮನಂ ।
ದನನು ವಿನಯದಿ ನುಡಿದ ಕೇಳಿಲೆ ।
ದನುಜಹರ ! ನಿನ್ನಯ ದೃಢಪ್ರೇಮಗಳು ದೃಢವಾಗಿ ॥
ಅನವರತ ವಿಹುದೆನ್ನೊಳೆನ್ನನು ।
ಘನವೆನಿಸಿ ರಕ್ಷಿಸಿದವೀಗಳು ।
ವನಕೆ ಹೋಹುದೆ ಪ್ರಿಯದನುಜ್ಞೆಯ ಕೊಟ್ಟು ಕಳುಹೆಂದ ॥
ವನಕೆ ಹೋಗಧೆ ನಿಂದೆನಾದರೆ ।
ಮುನಿದು ಕರ್ಣಪಿತಾಮಹಾದಿಗ ।
ಳನು ವಧಿಸಿದ ಕ್ರೂರಕರ್ಮಕೆ ಶಾಂತಿಯೆಂತಹುದು ? ॥
ಘನವೆನಿಸಿದಘವಪ್ಪುದಿನ್ನೇ ।
ನನು ರಚಿಸಲಡೆಗುವುದು ಹೇಳೆಂ ।
ದೆನುತ ಧರ್ಮಜ ನುಡಿಯೆ ಪಾರಾಶರ್ಯನಿಂತೆಂದ ॥
ಎಲೆ ನೃಪತಿ ! ನಾವ್ ನಿನಗೆ ಮೊದಲೇ ।
ತಿಳುಹಿದತಿಹಿತವಾಕ್ಯವೆಲ್ಲವು ।
ಸಲೆ ಕಿವಿಗಳನು ಹೊಗವಲಾ ಸದಸತ್ಕ್ರಿಯೆಗಳಿಯ ॥
ಒಲಿದು ಮಾಡಿಸುವಾವನೀಶನು ।
ಕಲುಷಕರ್ಮದ ಶಂಕೆಯುಳ್ಳೊಡೆ ।
ಮುಲಘು ತಾನಧ್ವರಗಳಿಂದದ ಕಳೆಯಬಹುದೆಂದ ॥
ಅರಸ ! ಕೇಳಶ್ವಮೇಧಾ ।
ಧ್ವರವ ಬಹುದಕ್ಷಿಣೆಯನಿತ್ತಾ ।
ದರಿಸಿ ಮಾಡದ ಅರಿಭವದ ಚಿಂತಾನುತಾಪದಲಿ ॥ (?)

ಹರವುವುವು ರಘುರಾಮನಂದದಿ ।
ಭರತನಂದದಿ ದಾನದಲಿ ತ ।
ತ್ಪರನೆನಿಸು ನೀನೆಂದು ವೇದವ್ಯಾಸ ಬೋಧಿಸಿದಾ ॥

* * * . *

ಮನುಜಪತಿ ! ಕೇಳೈ ಮರುತ್ತಾ ।
ವನಿಪನುರ್ವಿಗೆ ಬರುತ ನಾರದ ।
ಮುನಿಯನೀಕ್ಷಿಸಿ ದಾರಿಯಲಿ ಭಯಭಕ್ತಿಯಿಂದಾಗ ॥
ವಿನುತನಾಗಿರಲಾತವಕ್ಷ್ಠಂ ।
ದ್ರನು ನುಡಿದ ಕಡು ದುಗುಡವಡಸಿದೆ ।
ಮನದೊಳೆಲ್ಲಿಗೆ ಹೋಗಿ ಬರುತಿಹೆಯದನು ಹೇಳೆಂದ ॥
ಅಡಸಿದೀ ಚಿತ್ತದ ವಿಷಾದವ ।
ಬಿಡಿಸುವೆನು ಹೇಳೆನೆ ಮರುತ್ತನು ।
ನುಡಿದನೆ [ಸ್ನಾದರದಿ] (ನ್ನಧ್ವರಕೆ) ನೀನಾಚಾರ್ಯನಾಗೆಂದು ॥
ಒಡಬಡಿಸಿದನು ಗುರುವನಾತನು ।
ಕಡುಜರಿದು ಕಳುಹಿದನು ದೈನ್ಯ ।
ಕ್ಕೆಡೆಯೆನಿಸಿ ನಾಬಂದೆ ಯೆನಲಾ ಮುನಿಪನಿಂತೆಂದ ॥
ಅನಿಮಿಷರ ಗುರು ಬಾರನೆಂಬೀ ।
ಮನದ ಚಿಂತೆಯದೇತಕಾಂಗಿರ ।
ಸನ ಕನಿಷ್ಠಾತ್ಮಜನು ಸಂವರ್ತಾಖ್ಯ ಮುನಿವರನು ॥
ಘನವೆನಲು ಗುರುವಿಂದ ವೈಕೃತಿ ।
ಯನು ಪಡೆದು ಸಕಲವನು ಬಿಟ್ಟಾ ।
ತನು ದಿಗಂಬರನಾಗಿ ವೈರಾಗ್ಯದಲಿ ಚರಿಸುವನು ॥
ಆ ಮಹೀಪನ ಬಳಿಗೆ ಹೋಗೆಲೆ ।
ಭೂಮಿಪಾಲ ಭವನ್ಮುಖಕೆ ಸು ।
ಪ್ರೇಮದಿಂದುಪದರ್ಶಕತ್ವವ ಧರಿಸಬೇಕೆಂದು ॥
ನೀ ಮುದದಲಭ್ಯರ್ಥಿಸೆಂದಾ ।
ತಾಮರಸಭವಸೂನು ಬೋಧಿಸ ।
ಲಾ ಮುನಿಪನೊಡನಾಗ ತನ್ನೃಪಮುಖ್ಯನಿಂತೆಂದ ॥

* * *

End:

ಹೊರಲು ತಕ್ಕ ಸುವರ್ಣಗಳ ತಲೆ ।
ಹೇರೆಗಳಲಿ ಹೊತ್ತಡಕೆ ವಿಪ್ರರು ।
ಹೊರಲು ಬಾರದೆ ನಿಕ್ಕ ಭೂರಿಸುವರ್ಣರಾಶಿಗಳ ॥
ನೆರೆಯನುಳಿತಾವಲ್ಲಿ ಹೂಳಹು ।
ಧರಿದು ಕಾಲಾಂತರದೊಳದನಾ ।
ರರಸಿ ಕಾವರು ಕಂಡವರ ಧನವೆಂದು ಹೇಳದರು ॥

ಎಲೆ ಯುಧಿಷ್ಠಿರ ನೃಪತಿ ! ಮಿಗೆ ವೆ ।
ಗ್ಗಳವೆನಿಸಿದಾ ಹೇಮಸಂಚಯ ।
ಗಳೆನು ನೀನೇತಂದು ವರಹಯಮೇಧಯಾಗವನು ॥

ಬಲಿದು ವಿರಚಿಸಿ·ಸಕಲ ದೇವತೆ ।
ಗಳಿಗೆ ತೃಪ್ತಿಯ ಮಾಡು ಬಹುವಿಧ ।
ಕಲುಷವಡಗುವುದೆಂದು ವೇದವ್ಯಾಸನರುಹಿದನು ॥

ಕ್ಷಿತಿಪ ! ನೀ ನಿನ್ನಶ್ವಮೇಧ ।
ಕ್ರತುವ ಬೇಗದೆ ಮಾಡು ಬಂಧು ।
ಪ್ರತತಿಯನು ಕೊಂದಘಕದಂಬಕವೆಲ್ಲವನು ಜಯಿಸು ॥

ಚತುರ ನರಸಯ ಕೃಷ್ಣರಾಯನು
ಪತಿಯೆನಿಪ ಶೇಷಾಧಿನಾಥನು ।
ಹಿತನು ನಿನಗುರು ಸುಕೃತಸಿದ್ಧಿಪುದೆಂದನಾವ್ಯಾಸ ॥

ಸಂಧಿಸಮಾಪ್ತಂ—ಮಂಗಳಂ.

Colophon:

(ವಿ.-ವಿ.)—

ಆಶ್ವಮೇಧಿಕ ಪರ್ವದಲ್ಲಿ ಒಂದನೆಯ ಸಂಧಿ ಮಾತ್ರವೇ ಇದೆ. ಬರೆವಣಿಗೆ ಒಳ್ಳೆಯದು. ತಪ್ಪುಗಳಿವೆ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಭೀಷ್ಮನಿರ್ಯಾಣಾನಂತರ ಧರ್ಮಪುತ್ರನ ಶೋಕವನ್ನು ಇಳುಹಲು ಕೃಷ್ಣವ್ಯಾಸಧೃತರಾಷ್ಟ್ರಾದಿಗಳು ಸೇರಿ ಅಶ್ವಮೇಧಯಾಗವನ್ನು ಮಾಡಿದಲ್ಲಿ ಬಂಧುಗಳನ್ನು ಕೊಂದುದರಿಂದುಂಟಾದ ಪಾಪವು ಅಳಿಯುವುದೆಂದು ಬೋಧಿಸಿದ ಕಥೆಯು ಮಾತ್ರವೇ ಇದೆ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೮೧ ನಂಬರಿನಲ್ಲಿ ನೋಡಿ ತಿಳಿಯುವುದು.

No. 86. ಭಾರತಕಥಾಕುಸುಮವಲ್ಲರಿ-

BHĀRATAKATHĀKUSUMAVALLARI.

Substance, Śrītāla. Size, $10\frac{1}{2} \times 1\frac{5}{8}$ inches. Pages, 124. Lines, 7 on a page. Character, Kanarese. Condition, slightly injured. Appearance very old. Mode of writing, good but not free from mistakes.

Contains the Svargārōhaṇaparva complete.

A rendering in Kanarese by Timmaṇa of the Svargārōhaṇaparva of the Sanskrit Mahābhārata. For other particulars see under No. 81, *ante*.

Beginning:

ರಾಯತನವನು ಬಿಟ್ಟು ಪಾಂಡವ ।
ರಾಯರೈವರು ಕಲಿಯುಗಂ ಬರೆ ।
ರಾಯಪಟ್ಟವನೊಲಿದು ಕಟ್ಟಿದರಾ ಪರೀಕ್ಷಿತಗೆ ॥

ಕೇಳು ಜನಮೇಜಯನೆ ಲಕ್ಷ್ಮೀ ।
ಲೋಲ ತೆರಳದ ಬಳಿಕ ಪಾಂಡು ನೃ ।
ಪಾಲತನುಜರು ಸಕಲ ಧರಣಿಯ ವೈಮನಸ್ಯದಲಿ ॥
ಆಳುತಿರಲಾ ತ್ರಿಂಪುರಬ್ಧಿಗೆ । (?)
ನೋಡೆ ಬಂದುದು ಕಲಿಯ ಕಾಲದ ।
ಕಾಲುಮೆಟ್ಟಿಗೆ ತೆರಳತಾ ದ್ವಾಪರವು ಬೇಗದಲಿ ॥

ಕಲಿಯುಗಂ ಬರಬರಲಧರ್ಮದ ।
ಬಲುಹು ಬಲಿದನ್ಯಾಯ ದುಸ್ಥಿತಿ ।
ಹಲವುಮಾತೇನಿನ್ನು ದುರ್ನೀತಿ ದುಸ್ಸ್ಥಿತಿಯು ॥
ನೆಲೆಗಳಾಯ್ತೆಂಬುದನು ಕೇಳಿದು ।
ಕಲಿಯುಧಿಷ್ಠಿರನೃಪತಿ ಮನದೊಳ ।
ಗಳುಕಿ ಭಯದಲಿ ಚರರ ಕಳುಹಿದನೆಂದು ಪುರದೊಳಗೆ ॥

ಹರದ ಮಾತಿನ ಹದನ [ಕಂಡೆನ] ತಿಳಿದೆವು ।
ಗರುಹುವುದು ನೀವೆನಲು ನಡೆದಾ ।
ಚರರಮಾರದೇವಾಲ್ಯಘನತರ ಧರ್ಮಶಾಲೆಯಲಿ ॥
ಕೆರೆ ಮರಂಗಳ ಹೊದ್ದದಾಶ್ರಾಂ ।
ತ್ರರಗಳಹ ಠಾವಿನಲಿ ಶುದ್ಧಿಯ ।
ನಿರುತವನು ತಾವರ್ಥಿಸಿದರತಿಗುಪ್ತದಲಿ ಬಹುಚರರು ॥

ಸೂಳೆಗೇರಿಗಳೊಳಗೆ ವಾರ್ತೆಯ ।
ನಾಲಿಸಿದರು ಕುಲಾಲಭವನವಿ ।
ಶಾಲಗಳ ನೆರೆಹೊದ್ದಿದರು ಚಿಪ್ಪಿಗಗೇರಿ ಮೊದಲಾದ ॥
ಮಾಲೆಗಾರರ ಕೇರಿಯೊಳು ನಿಂ ।
ದಾಲಿಸುತ ನಡೆತರುತ ಘಟಗಳ ।
ಮಾರುವರ ಕೇರಿಗಳ ಪೊಕ್ಕರು ವಾರ್ತೆಗಾಚರರು ॥

ಕಂದ ಕೇಳ್ಳೈ ಗಜಪುರದಿ ಬಹು ।
ಮಂದಿಗಳ ನುಡಿಗಳನು ಚರ ।
ರಂದು ಕೇಳುತ ಬರಬರಲು ಮಳೆಯಾಯ್ತು ಕಲಿಯುಗದ ॥
ಸಂದ ಭಾಗ್ಯರು ಪಾಂಡುನಂದನ ।
ರುನ್ನತಾನಂದಾಬ್ಧಿಯಿಂದಿರ ।
ಲಂದು ಬಂದುದು ಕಲಿಯುಘನ[ದುದಯ] ದುಸ್ಸಹದ ಸಂರಂಭ ॥

(ಸಂದಭಾಗ್ಯರು ಪಾಂಡುಸುತರಾ ।
ನಂದ ಪಾರಾವಾರ ದೊಳಗಿರ ।
ಲಂದು ಬಂದುದು ದುಸ್ಸಹದ ಕಲಿಯುದಯ ಸಂರಂಭ ॥)
ಪನ್ನಗಾಧಿಪನಿರ್ಮಥನ ಕೇ ।
ಳನ್ನು ಹೇಳುವೆ ನಿನಗೆನುತ ಸಂ ।
ಪನ್ನ ಮುನಿಪತಿ ಹೇಳಿದನು ಕಲಿಯುಗದ ವಿಸ್ತರವ ॥

ಅನ್ಯಮಯ ಪಾದವನು ಬಗೆವೊಡೆ ।
ಗನ್ನಗತಕವ ಕಳೆವುದಾದರೆ ।
ತನ್ನಪರಿಜನವಾಗಿ ನಡೆದನು ಧರಣಿಯಗಲದಲಿ ॥

ಭೂತಳಾಧಿಪ !. ಕೇಳು ಹೇಳುವೆ ।
ಜಾತಿ ಸಂಕರವಕ್ಕು ವಂಚನೆ ।
ಭೀತಿಯಾರಡಿ ಬಂದಿದಳವ್ರುಳಕವರೆ ಹೊಲೆಯೆಂಬ ॥

ಖ್ಯಾತಿಯುಪಕೀರ್ತಿಗಳೆನಿಪ ದು ।
ನ್ನೀತಿಗಳ ಕೂಡಿಯೆ ಸಧರ್ಮದ ।
ಪಾತನಾಡದಿರೆನುತ ಕಲಿಯುಬ್ಬಿನಲಿ ಮುನಿಪತಿಯು ॥ (?)

ಪಿಗಡ ತನದಿಂದ್ಯೈದೆ ದ್ವಾಪರ ।
ಯುಗವ ಬೇಗದೆ ಮುತ್ತಿ ತವಕದೆ ।
[ಭರದೆ]ಜಗವಗಲದಲಿ ಕೂಡೆ ನುಡಿದನು ಕಲಿಕೆಯವಗುಣವ ॥

ಜಗವನೆಲ್ಲವ ಕೂಡಿ ನಡೆಯಲಿ ।
ಮಿಗುವ ಧರ್ಮವ ಕಾಣೆನಾ ಕಲಿ ।
ಯುಗವು ಕಿದುರ್ತುಳವಲ್ಲ ಸತ್ಯವೆ ಪಥ್ಯತರವೆಂದ ॥

ರಾಯ ಕೇಳ್ಳೈ ಕಲಿಕೆ ಬಂದ ಮ ।
ಹಾಯತವ ಹೇಳುವೆನು ತನ್ನಯ ।
ತಾಯ ನೆತ್ತಿಯಮೇಲೆ ಮೊಟ್ಟೆಯ ಹೊರಿಸಿ ನಿಜಸತಿಯು ॥

ನೋಯದಂತಿರೆ ಹಯವನೇರಿಸಿ ।
ಬಾಯ ವಾಘೆಯ ಜತನವೆನ್ನುತ ।
ರಾಯ ಬೈಯುತ ನಡೆದು ಹೊಕ್ಕನು ಕಲಿಕೆ ಧರಣಿಯಲಿ ॥

ಈ ಹದನವಾರ್ತೆಯನು ಕೇಳದು ।
ಬೇಹಕಾರರು ಬಂದು ಯಮಜಂ ।
ಗೂಹಿಸಲು ದುಸ್ಸ್ಥಿತಿಯುಕ್ತಕಲಿಯುಗ ಬಂದುದಕಟೆನುತ ॥

ರಾಹುತುಡುಕಿದ ಚಂದ್ರಬಿಂಬದ ।
ಗಾಹಿನಂತಿರೆ ಪಿಡಿದ ವ್ಯಥೆಯಲಿ ।
ಸಾಹಸೋನ್ನತ   ಬೇಸತ್ತ ಮನನಾದ ॥

ಅವನಿಪಾಲಕ ! ಕೇಳು ಧರ್ಮಜ ।
ಶಿವಶಿವಾ ಯೆಂದೆನುತ ಸುಯಿದನು ।
ವಿವಿಧದುಸ್ಥಿತಿಯುಕ್ತಕಲಿಯುಗೆ ಬಂದುದಕಟೆನುತ ॥

ಹವಣಿಸಿತು ಕೃಷ್ಣಾವತಾರವು ।
ಭುವನದೊಳಗಾವಿರಲು ನಮ್ಮನು ।
ಭವಣಿಗೆಯ ಬರಿಸುವುದಲಾ ಯೆ(ಂದೆ)ನುತ ಚಿಂತಿಸಿದ ॥

*   *   *   *

ದಾನಸಮ್ಮಾನದಲಿ [ನೆಲೆಸಿದ] (ಸರ್ವರ) ।
ದೀನತನವನು ಬಿಡಿಸಿ ಧರ್ಮಜ ।
ನೂನ ಧನವನು ಕೊಟ್ಟುಸಲಹಿದನಖಿಳಯಾಚಕರ ॥
ವೈನತೇಯನೃಪತಿಯು ಕೂ[ಡೆ](ಡುವ) ।
[ಯೋ ಸಮ](ಸೂನು)ರಾಗವ ನೆನೆದು ಕುಂತೀ ।
ಸೂನುಗಳು ಹಿಮಗಿರಿಯ ಪಯಣವ ನೆನೆದರೊಗ್ಗಿನಲಿ ॥

Colophon :

ಇಂತು ಸಂಧಿ ಒಂದಕ್ಕಂ ಮಂಗಳಂ ॥

ಸಕಲಭೂಪರ ನಾಪ್ರಧಾನಾ ।
ನಿಕರವನು ಪರಿಜನಂಗಳ ।
ಸುಕರವೆನಲೊಪ್ಪಿಸಿ(ಯೆ) ಕೊಟ್ಟನು (ವರ)ಪರೀಕ್ಷಿತಗೆ ॥

* * * *

ಅರಸ ! ಕೇಳಾಶ್ಚರ್ಯವನು ಮುರ ।
ಹರನ ಕರುಣವನಿನ್ನು ಪಾಂಡವ ।
ರರಸಗಾದ ವಿಪತ್ತ ಪರಿಹರಿಸಿದನು ಬೇಗದಲಿ ॥

ಶರಧಿಮಧ್ಯದೊಳರಲಿ ಮೇಣಾ ।
ಗಿರಿಗುಹಾಂತರಗಹ್ವರಂಗಳ ।
ಲಿರುತ ನೆನೆಸಿದರಲ್ಲಿ ಹರಿ ಸಲಹುವನು ಕರುಣದಲಿ ॥

ಸ್ಥಾವರದ ಜಂಗಮದ ಚತುರ್ವಿಧ ।
ಜೀವರಾಶಿಗಳೊಳಗೆ ತಾನೇ ।
ತೀವಿ ತೋರಿದ ಸರ್ವಮಯನೆಂದೆನಿಪ ಶ್ರುತಿಮತವಾ ॥
ಭಾವಿಪತಿನಿಜವೆನಿಪ ಭಾವದ ।
ಲಾವನನುಚರರೊಳಗೆ ಭೀತಿಯ ।
ತೀವಿ ತೋರಿದನಸುರಮರ್ಧನನರಸ ಕೇಳೆಂದ ॥
ಬಳಿಕ ದ್ರುಪದಾತ್ಮಜೆಯ ವೃಷಭನ ।
ಬಳಿಗೆ ತಂದರು ಸತಿಯನೊಬ್ಬಳ ।
ಸೆಳೆದು ತಂದೆವು ಜೀಯ ಚಿತ್ತೈಸೆನಲು ಖಳರಾಯ ॥
ಅಳುಕಿದನು ಮನದೊಳಗೆ ಕಲಹವ ।
ಬಲಿದು ತಂದಿರೊ ಈಕೆಯುವರೇ ।
ಕಳುಹಿಬಿಟ್ಟರೊ ಹೇಳಿ ನೀವೆಂದರಸ ಬೆಸಗೊಂಡ ॥
ದೇವಚಿತ್ತೈಸಾವ ಕಲಹವ ।
ತಾವುಮಾಡರು ನಮ್ಮೊಳಗೆ ಮೇ ।
ಣಾವ ಬಲುಹನು ತೋರರವದಿರು ಮೀರಿ ಹೋಗುತಿರೆ ॥
ನಾವು ಕಂಡಡಹಾಯ್ದು ಹೆದರಿಸಿ ।
ಯೀ ವಧುವ ಸೆಳೆತಂದೆವೆನ್ನಲು ।
ದೇವಿಯನು ಕೊಂಡಾಯ್ದು ಬಿಡಿ ತನ್ನವರ ಹೊರಗೆಂದ ॥

* * * *

End:

ಹರಿಹರ ಬ್ರಹ್ಮಾದಿ ದೇವರು ।
ಕರುಣಿಸಲಿ ನಿನಗೆಂದು ಮುನಿಪತಿ ।
ತಿರುಗಿದನು ತನ್ನಾಶ್ರಮಕೆ ಜನಮೇಜಯನು ಬಳಿಕ ॥
ಪರಮವಿಭವದಲೀ ಧರಿತ್ರಿಗೆ ।
ಪಿರಿಯರಸು ತಾನಾಗಿ ನಿಜಪುರ ।
ದರಮನೆಯ (ವರ) ಸಿಂಹಪೀಠದೊಳಂದು ಮೆರೆದಿರ್ದ ॥
ಹಿಂದೆ ನಹುಷಯಯಾತಿಭರತರ ।
ಚಂದವನು ನೆರೆಮಿಕ್ಕ । (?)
ನಂದ ದುಷ್ಯಂತನ ಪುರೂರವ ಪುರುಮಹೀಪತಿಯ ॥
ನಿಂದುದಧಿಕ ಸತ್ಯವೆಂಬ ಸುಧರ್ಮ ।
ನಂದವರ ಪರೀಕ್ಷಿತ । (?)
ರಂದವೆನೆ ಜನಮೇಜಯನು ಹೊರೆದನು ಮಹೀತಳವ ॥
ಈ ಮಹಾಭಾರತದ ಕಥೆಯನು ।
ಭೂಮಿಯೊಳಗಾರಾದೊಡೆಯು ಮಿಗೆ ।
ನೇಮದಲಿ ಪೇಳಿದರೆ ಕೇಳ್ದರೆ ಮನದ ನಿಜಮತದಿ ॥
ಕಾಮಹಿತ ಕರುಣಿಸುವನವರಿಗೆ ।
ಪ್ರೇಮದಲಿ ಮೋಕ್ಷವನು ಘನನಿ ।
ಸ್ಸೀಮರಹರಿದಸರಿದು ಭಜಿಪುದು ಪಾಂಡವರ ಕಥೆಯ ॥

Colophon:

ಇಂತು ಸಂಧಿ ಒಂಭತ್ತಕ್ಕಂ ಮಂಗಳಮಹ ॥
ಇಂತು ಸ್ವರ್ಗಾರೋಹಣಪರ್ವ ಸಮಾಪ್ತಂ ॥

(ವಿ-ವಿ.)—

ಸ್ವರ್ಗಾರೋಹಣಪರ್ವ ಸಂಪೂರ್ಣ. ಒಂಬತ್ತು ಸಂಧಿಗಳು. ಬರೆವಣಿಗೆ ಒಳ್ಳೆಯದು. ತಪ್ಪುಗಳು ಹೆಚ್ಚು. ಸ್ವಲ್ಪ ಶಿಥಿಲ. ಕಲಿಯ ಪ್ರಾದುರ್ಭಾವವನ್ನು ನೋಡಿ ಖತಿಗೊಂಡ ಪಾಂಡವರು ಪರೀಕ್ಷಿತನಿಗೆ ರಾಜ್ಯಾಧಿಕಾರವನ್ನು ಒಪ್ಪಿಸಿ ಮಹಾ ಪ್ರಸ್ಥಾನಮಾಡಿದ ಕಥೆಯು ಇದರಲ್ಲಿ ಸಂಗ್ರಹವಾಗಿ ವರ್ಣಿತವಾಗಿದೆ. ಈ ವರೆಗೆ ಮುದ್ರಿತವಾಗಿರುವ ಪುಸ್ತಕದ ಈ ಪರ್ವದಲ್ಲಿ ಒಂದೇ ಸಂಧಿಯಿದೆ. ಮಿಕ್ಕ ವಿಷಯಗಳನ್ನು ೮೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 87. ಭಾರತಕಥಾಕುಸುಮವಲ್ಲರಿ.

BHĀRATAKATHĀKUSUMAVALLARI.

Substance, palm-leaf. Size, 20 × 1⅝ inches. Pages, 89. Lines, 5 on a page. Character, Kanarese. Condition, very much injured. Appearance, very old. Mode of writing, good but not free from mistakes.

Begins on fol. 63*a*. The other works here in are:—(1) Virāṭaparva (Bhāratāntargata) 1*a*. (2) Bhāgavata 36*a*. (3) Harivilāsacaritre (Sangatya) 147*a*.

Contains the Svargārōhaṇaparva complete.

Same work as the above; by Timmaṇa. For other particulars see under No. 81, *ante*.

(ವಿ.-ವಿ.)—

ಸ್ವರ್ಗಾರೋಹಣಪರ್ವ ಸಮಗ್ರ. ಬರವಣಿಗೆ ಚೆನ್ನಾಗಿದೆ. ಅತಿ ಶಿಥಿಲ. ಪುರಾತನ ಪ್ರತಿ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಇದರೊಡನೆ ವಿರಾಟಪರ್ವ (ಭಾರತಾಂತರ್ಗತ), ಭಾಗವತ, (ನಿತ್ಯಾತ್ಮ ಶುಕಯೋಗಿ ಕೃತ. ಅಸಮಗ್ರ), ಹರಿವಿಲಾಸ ಚರಿತ್ರ (ಸಾಂಗತ್ಯ, ಅಸಮಗ್ರ) ಗಳೂ ಇವೆ. ಮಿಕ್ಕ ವಿಷಯಗಳನ್ನು ೮೧ ಮತ್ತು ೮೬ ನಂಬರುಗಳ ನೋಡಿ ತಿಳಿಯುವುದು.

No. 88. ಭಾರತ ಕಥಾಕುಸುಮವಲ್ಲರಿ-
BHĀRATAKATHĀKUSUMAVALLARI.

Substance, palm-leaf. Size, 13⅛ × 1⅜ inches. Pages, 152. Lines, 6 on a page. Character, Kanarese. Condition, injured. Appearance, very old. Mode of writing, good but not free from mistakes.

Contains the Svargārōhaṇaparva complete.

Same work as the above; by Timmaṇa. For other particulars vide No. 81, *ante*.

Name of the scribe:—Vaḍḍēdhāḻi Tirumaladēvaru.

(ವಿ.-ವಿ.)—

ಸ್ವರ್ಗಾರೋಹಣ ಪರ್ವ ಸಮಗ್ರವಾಗಿದೆ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಪುರಾತನ ಪ್ರತಿ. ಶಿಥಿಲ. ಗ್ರಂಥಪಾತವಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಆದರೆ ಇದು ಮತ್ತು ಮೇಲಿನ ಎರಡು ಪ್ರತಿಗಳಲ್ಲಿ ಒಂದೊಂದಕ್ಕೂ ಕೆಲವೆಡೆ ಹೆಚ್ಚಾಗಿ ಪಾಠಭೇದಗಳು ತೋರಿಬರುವುವು. ಕವಿ ತಿಮ್ಮಣ್ಣ. ಮಿಕ್ಕ ವಿಷಯಗಳನ್ನು ೮೧ ಮತ್ತು ೮೬ ನೆಯ ನಂಬರುಗಳ ನೋಡಿ ತಿಳಿಯುವುದು. ಪುಸ್ತಕದ ಆದಿಯಲ್ಲಿ "ಒಡ್ಡೇಧಾಳಿ ತಿರುಮಳದೇವರು ಬರೆದ ಪುಸ್ತಕ" ಎಂದಿದೆ.

No. 89. ಭಾರತ (ವಚನ)-
BHĀRATA (PROSE).

Substance, Śrītāla. Size, 19¼ × 2 inches, Pages, 930. Lines, 8 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Ādiparva complete.

A rendering in Kanarese prose of the Sanskrit Mahābhārata; by Kaḷale Nanjarāja younger brother of Dēvarāja, son of Vīrarāja and grandson of Doḍḍarāja of Bhāradvājagotra. The author was a commander-in-chief under king Kṛṣṇarāja of Mysore in the Śaka year 1664 corresponding to 1741-42 A.D and the work was written at the instance of the court poets of king Kṛṣṇarāja. For other particulars see

the extracts given below. The work is also called Nanjarājavāṇîvilāsa after the name of the author. The other works of this author are Hālāsyamāhātmya, Śivabhaktavilāsa and Bhadragirimāhātmya besides some works in Telugu.

Beginning:

ವೃತ್ತ ॥ ಶ್ರೀಗೌರೀಕುಚಕುಂಭಕುಂಕುಮರಜಃಪಂಕಾಂಕಿತೋರಸ್ಥಸ್ಥಳಂ ।
ವಾಗೀಶಾದಿಸುರೇಂದ್ರಮೌಳಿಮಣಿರುಜ್ಞೀರಾಜಿತಾಂಘ್ರಿದ್ವಯಂ ॥
ರಾಗಾತೀತಮುನೀಂದ್ರಮಾನಸಲಸತ್ಪಂಕೇರುಹೇಂದಿಂದಿರಂ ।
ಈ(?)ಗೆ ಶ್ರೀನಗರಾಧಿರಾಜನನಿಶಂ ಸರ್ವಾರ್ಥ(ಸಂ) ಸಿದ್ಧಿಯಂ ॥
ವೃತ್ತ ॥ ಜಲಜಾತಪ್ರಭವಾದಿಸರ್ವವಿಬುಧರ್ ಜಾತಾಧಿಕಪ್ರೇಮದಿಂ ।
ಕಲಶಾಂಭೋಧಿಯನೊಂದುಗೂಡಿ ಮಥಿಸಲ್ ಕಲ್ಪದ್ರುಚಿಂತಾಮಣೀ ॥
ವಿಲಸತ್ಕೌಸ್ತುಭಕಾಮಧೇನುಕಮಲಾಪೀಯೂಷಸಂದೋಹದಿಂ ।
ಲಲಿತಾಂಗಂ ದ್ವಿಜರಾಜನಲ್ಲುದಿಸಿದಂ ಲೋಕೈಕಮೋದಾಸ್ಪದಂ ॥

ಸ್ವಸ್ತಿಶ್ರೀವಿಜಯಾಭ್ಯುದಯಶಾಲೀವಾಹನಶಕವರ್ಷಂಗಳು ೧೬೬೪ ನೆಯ ಸಂದವರ್ತಮಾನವಾದ ದುಂದುಭಿಸಂವತ್ಸರದಲ್ಲಿ ಚಂದ್ರವಂಶಾಂಬುಧಿರಾಕಾಸುಧಾಕರನಾಗಿ ಮಹಾರಾಜಾಧಿರಾಜ ರಾಜಪರಮೇಶ್ವರರಾಜಮಾರ್ತಾಂಡಪ್ರೌಢಪ್ರತಾಪಾಪ್ರತಿಮವೀರನರಪತಿ ಬಿರುದೆಂತೆಂಬರಗಂಡ ಬಿರುದಾಂಕಿತಶಂಖಚಕ್ರಮಕರಮತ್ಸ್ಯಹನುಮದ್ಗರುಡಗಂಡಭೇರುಂಡಸಿಂಹಶರಭಸಾಳ್ವಭೂವರಾಹಾದಿನಾನಾವಿಧಧ್ವಜಬಿರುದಾಂಕಿತನಾಗಿ ವಿನತಾಶೇಷದೇಶಾಧೀಶಕೋಟೀರಕೋಟಿಮಣಿಘೃಣಿಶ್ರೇಣಿನೀರಾಜಿತಚರಣಾರಾಜೀವನಾಗಿ, ಸತದಲ್ಲಿ ಹರಿಶ್ಚಂದ್ರನಾಗಿ, ಸೌಂದರ್ಯದಲ್ಲಿ ಮದನನಾಗಿ, ಸಮರದಲ್ಲಿ ಪರಶುರಾಮನಾಗಿ ಮಾಂಧಾತೃಯಯಾತಿನಹುಷದಿಲೀಪಪ್ರಮುಖಾನೇಕಚಕ್ರವರ್ತಿಸಂಸ್ತೂಯಮಾನಸದ್ಗುಣಗಣಾಭಿರಾಮನಾಗಿ, ಸಕಲಮಹಾದಾನಕರಣಚಾತುರೀಧುರೀಣನಾಗಿ, ನಿಖಿಲಧರ್ಮಪ್ರಜಾಸಂರಕ್ಷಣವಿಚಕ್ಷಣನಾಗಿರುವ ಚಿಕ್ಕದೇವರಾಜಭೂಪಾಲನಿಗೆ ಪ್ರಪೌತ್ರನಾಗಿ, ಕದನದಲ್ಲಿ ಕಿರೀಟಿಯಾಗಿ, ಕಾಂತಿಯಲ್ಲಿ ಸೂರ್ಯನಾಗಿ, ನೀತಿಕಾರ್ಯನಿರ್ವಾಹಕನಾಗಿ ನಿಖಿಲವಿಮತಭೂಪಾಲವಿನಮಿತಚರಣಕಮಲನಾಗಿ, ವಿಖ್ಯಾತಖ್ಯಾತಿಸಂಪನ್ನನಾಗಿ, ಪರಾಕ್ರಮ ಕಂಠೀರವನಾದ ಕಂಠೀರವನರಭೂಪಾಲನಿಗೆ ಪೌತ್ರನಾಗಿ, ನಿಖಿಲವಿಬುಧಜನಜೇಗೀಯಮಾನನಿರುಪಮಗುಣಮಣಿನಿಕರರತ್ನಾಕರನಾಗಿ, ದಾನಕ್ಷಾತ್ರಾಧೀಶ್ವರನಾಗಿ, ಸೌಶೀಲ್ಯವಾತ್ಸಲ್ಯಸೌಜನ್ಯಸತ್ಯವ್ರತಸಂಪನ್ನನಾಗಿ, ಧೈರ್ಯಸ್ಥೈರ್ಯಶೌರ್ಯೌದಾರ್ಯಗಾಂಭೀರ್ಯಶಾಲಿಯಾಗಿಸಕಲಸುರಭೂಸುರಪರಿಚರಣವಿಚಕ್ಷಣನಾಗಿ, ರೂಪಜಿತನಳಕೂಬರಕಂತುಜಯಂತವಸಂತನಾಗಿ, ಪ್ರತಾಪನಿರ್ಜಿತಚಂಡಮಾರ್ತಂಡನಾಗಿ ಅಂಗವಂಗಕಳಿಂಗಕಾಶ್ಮೀರಕಾಂಭೋಜಸೌವೀರಸೌರಾಷ್ಟ್ರಗೌಡದ್ರವಿಡಾದಿಸಕಲದೇಶಸಮಾಗತಸಾಮಂತನರಪತಿಕಿರೀಟಕೋಟಿಖಚಿತನವರತ್ನಪ್ರಭಾನೀರಾಜಿತಚರಣಾಂಭೋಜಯುಗಳನಾಗಿ, ಸಕಲಜನಸಂರಕ್ಷಣಾರ್ಥವಾಗಿ ಅವತರಿಸಿದ ಕೃಷ್ಣನೋಪಾದಿಯಲ್ಲಿರುವ ಕೃಷ್ಣರಾಜೇಂದ್ರನಿಗೆ ಪುತ್ರನಾಗಿ, ದೇವಮಾಂಬಾಗರ್ಭಶುಕ್ತಿಮುಕ್ತಾಮಣಿಯಾಗಿ ಆತ್ರೇಯಸಗೋತ್ರದ ಆಶ್ವಲಾಯನಸೂತ್ರಋಕ್ಶಾಖಾನುವರ್ತಿಯಾದ ಶ್ರೀ ಕೃಷ್ಣರಾಜಭೂಪಾಲಕನು ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢನಾಗಿ ಪೃಥ್ವೀಸಾಮ್ರಾಜ್ಯಂಗೆಯ್ಯುತ್ತಿರಲು ಅವರ ಸೇನಾಧಿಪತಿಗಳ ವಂಶವಾದ ಚಂದ್ರವಂಶದಲ್ಲಿ ಭಾರದ್ವಾಜಗೋತ್ರಾಶ್ವಲಾಯನಸೂತ್ರಋಕ್ಶಾಖಾನುವರ್ತಿಯಾದ ತಿಮ್ಮರಾಜೇಂದ್ರನು ಜನಿಸಿದನು.

ಅಂತಾ ತಿಮ್ಮರಾಜೇಂದ್ರನಿಗೆ ಕಾಂತರಾಜೇಂದ್ರನು ಉದಿಸಿದನು. ಆ ಕಾಂತರಾಜೇಂದ್ರನಿಗೆ ದೊಡ್ಡರಾಜೇಂದ್ರನುದಿತನಾಗಿ ಮಹಿಸೂರ ಸೇನಾಧಿಪತಿಯಾಗಿ ಜೇಜೇ ಘೋಟ ಪ್ರಮುಖಾನೇಕಾರಾತಿಕೋಟಿಯ ಸೊಕ್ಕಂ ಮುರಿದು ಜಗದ್ವಿಖ್ಯಾತಮಾದ ಕೀರ್ತಿಯಂ ಪಡೆದನು. ಆ ದೊಡ್ಡರಾಜೇಂದ್ರಂಗೆ ವೀರರಾಜೇಂದ್ರನು ಜನಿಸಿವೀರರೊಳಗೆ ಅಗ್ರೇಸರನಾಗಿ ವಿಮತಭೂಪಾಲರಂ ಖಂಡಿಸಿ, ವಿವಿಧ ಗೋಪುರಪ್ರಾಕಾರಗಳಂ ಕಟ್ಟಿಸಿ, ವಿಶೇಷಧರ್ಮವ್ರತಪರಾಯಣನಾಗಿ ವಿಖ್ಯಾತಿಯಂ ಪಡೆದನು. ಆ ವೀರರಾಜೇಂದ್ರಂಗೆ ದೇವರಾಜೇಂದನುದ್ಭವಿಸಿ ಮಹಿಸೂರ ಸೇನಾಧಿಪತಿಯಾಗಿ ಸದಾಚಾರಸಂಪನ್ನನಾಗಿ ಸತ್ಯವ್ರತಪರಾಯಣನಾಗಿ ಸಕಲಕವಿಬುಧಜನಸಂಸ್ತೂಯಮಾನನಾಗಿ, ಸಮರ ನಿಶ್ಯಂಕನಾಗಿ, ಸಕಲಪರಬಲನಿವಹಜಲಧರಪಟಲಪ್ರಚಂಡಮಾರುತನೆಂದು ವಿಖ್ಯಾತಕೀರ್ತಿಸಂಪನ್ನನಾದನು. ಆ ದಳಪತಿ ದೇವರಾಜೇಂದ್ರಂಗೆ ಅನುಜನಾಗಿ ಸಕಲ ಸದ್ಗುಣಗಣಾಲಂಕೃತನಾದ ಕಳಲೆ ನಂಜರಾಜೇಂದ್ರನು ಒಂದು ದಿವಸದಲ್ಲಿ ಪ್ರಾತಃಕಾಲದಲ್ಲಿ ಸಂಧ್ಯಾವಂದನಾದಿ ಕೃತ್ಯಗಳಂ ನೆರವೇರಿಸಿ ಶಿವಪೂಜಾಗೃಹದಲ್ಲಿ ಶೈವಾಗಮೋಕ್ತವಿಧಾನದಿಂದ ಶಿವಾರ್ಚನೆಯಂ ಮಾಡಿ, ಸಕಲತಂತ್ರಸ್ವತಂತ್ರರಾಗಿ, ಚತುಷ್ಷಷ್ಟಿಕಲಾಪ್ರವೀಣರಾಗಿರುವ ವಿದ್ವಾಂಸರೊಡನೆ ಸಕಲಕಥಾಪ್ರಸಂಗಗಳಂ ಮಾಡುತ್ತಿರಲು ಸಮಸ್ತ ವಿದ್ವಜ್ಜನರೂ ನಂಜರಾಜೇಂದ್ರನಂ ಕಂಡು, ನೀವು ಸಕಲನಿಗಮಾಗಮಪುರಾಣಾರ್ಥಗಳಂ ವಿಚಾರಿಸಿ, ಹಾಲಾಸ್ಯಮಾಹಾತ್ಮ್ಯ, ಶಿವಭಕ್ತವಿಲಾಸ, ಭದ್ರಗಿರಿಮಾಹಾತ್ಮ್ಯ ಮೊದಲಾದ ಶೈವಪುರಾಣಂಗಳಂ ಕರ್ಣಾಟಕಭಾಷೆಯಿಂದ ಟೀಕಿಸಿದುದರಿಂದ ಸಕಲ ಲೋಕೋಪಕಾರಮಾದುದು ಸರಿ. ಎಲ್ಲಾ ಲೋಕದಲ್ಲಿ ಐದನೆಯ ವೇದವೆಂಬ ಮಹಾ ಭಾರತವಂ ಟೀಕಿಸಿದರೆ ಅದು ಸಕಲಲೋಕೋಪಕಾರಮಾಗಿ ಕೀರ್ತಿಸಂಪಾದಕಮಾಗಿ ಆಚಂದ್ರಾರ್ಕಸ್ಥಾಯಿಯಾಗಿರುವುದು. ಆದರಿಂದ ಈ ಮಹಾ ಭಾರತವಂ ಟೀಕಿಸಬೇಕೆನಲು ಆ ನಂಜರಾಜೇಂದ್ರನು ಮಹಾ ಪ್ರಸಾದವೆಂಪು ಒಡಂಬಟ್ಟು, ನಂಜರಾಜೇಂದ್ರನು ತಾನು ರಚಿಸುವಂಥಾ ಗ್ರಂಥಕೆ ನಿರ್ವಿಘ್ನಪರಿಸಮಾಪ್ತಿಗೋಸುಗ ಶಿಷ್ಟಾಚಾರಪರಿಪ್ರಾಪ್ತಶಿವಧ್ಯಾನರೂಪಮಂಗಳವನಾಚರಿಸೀ ಸರಸ್ವತೀವಿಘ್ನೇಶ್ವರರಿಗೆ ಪ್ರಣಮಿಸಿ, ಕುಮಾರಸ್ವಾಮಿಯಂ ಭಜಿಸಿ, ನಂದೀಶ್ವರಭೃಂಗೀಶ್ವರವೃಷಭೇಶ್ವರರಂ ಸ್ತುತಿಸಿ ವೇದಸಮಾನವಾದ ಮಹಾಭಾರತವಂ ಮಾಡಿದ ವೇದವ್ಯಾಸಮುನೀಶ್ವರಂಗೆ ನಮಸ್ಕಾರವಂ ಮಾಡಿ ಶೈವಭಾಷ್ಯಪ್ರವರ್ತಕರಾದ ಶ್ರೀಕಂಠಾಚಾರ್ಯರಂ ಭಜಿಸಿ, ಹರದತ್ತ ಪ್ರಮುಖಾನೇಕಾಚಾರ್ಯರಿಗೆ ಪೊಡಮಟ್ಟು, ಭೂಸುರೋತ್ತಮರಾದ ಸಾಂದರೇಶ್ವರಾಚಾರ್ಯಗುರುಗಳಿಗೆ ಅಭಿವಂದನಮಂ ಮಾಡಿ ಇನ್ನೂ ಅಶೇಷವಿದ್ವಜ್ಜನರಂ ನಮಸ್ಕರಿಸಿ ನಂಜರಾಜವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯಟೀಕನ್ನು ಮಾಡುವುದಕ್ಕೆ ಪ್ರಾರಂಭಿಸಿದನು. ಅದೆಂತೆನೆ :—

ಶ್ಲೋ ॥ ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಂ ।
ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ ॥
ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಂ ।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ ॥

ಶ್ರೀಮದಶೇಷಜಗಜ್ಜನನಾದಿಕಾರಣಸ್ವರೂಪನಾಗಿ, ಅವಾಙ್ಮನಸಗೋಚರನಾಗಿ, ಅಪ್ರಮೇಯನಾಗಿರುವ ಪರಬ್ರಹ್ಮನಿಂದ ಪರಿಕಲ್ಪಿತಮಾದ ಜಗತ್ತಿನಲ್ಲಿ ಪರಮಕಾರುಣಿಕನಾಗಿ, ಷಡ್ಗುಣೈಶ್ವರ್ಯಸಂಪನ್ನನಾಗಿರುವ ಪರಾಶರಸುತನಾದ ವೇದವ್ಯಾಸಮಹಾಮುನೀಶ್ವರನು—

ನಾಲ್ಕು ವೇದಂಗಳು, ಆರು ಅಂಗಂಗಳು, ಪೂರ್ವಮೀಮಾಂಸೆ, ಉತ್ತರಮೀಮಾಂಸೆ, ನ್ಯಾಯಶಾಸ್ತ್ರ, ಪುರಾಣಂಗಳು, ಧರ್ಮಶಾಸ್ತ್ರಂಗಳೆಂಬ ಹದಿನಾಲ್ಕು ವಿದ್ಯೆಗಳ ರಹಸ್ಯಗಳು ಪ್ರತ್ಯೇಕವಾಗಿರುವುದರಿಂದ ಮಂದಮಧ್ಯಮಬುದ್ಧಿಗಳಿಗೆ ಗ್ರಹಿಸುವುದಕ್ಕೋಸ್ಕರ ಅಶಕ್ಯವಾದ್ದರಿಂದ ಅವರ ಅನುಗ್ರಹಕ್ಕೋಸ್ಕರ ಚತುರ್ದಶವಿದ್ಯಾಸ್ಥಾನಗಳ ರಹಸ್ಯಂಗಳನ್ನು ಒಂದೇ ಕಡೆಯಲ್ಲಿ ತೋರಿಸುವುದಕ್ಕೋಸ್ಕರ ಮಹಾಭಾರತವೆಂಬ ಇತಿಹಾಸವ ಮಾಡಿದಂ[ಥಾ](ತಹ)ವನಾದನು. ಅದೆಂತೆನೆ :—

ಪರಮಪಾವನವಾದ ನೈಮಿಶಾರಣ್ಯದಲ್ಲಿ ಶೌನಕಮಹಾಮುನೀಶ್ವರನು ಹನ್ನೆರಡು ವರ್ಷಗಳು ಮಾಡುವುದಕ್ಕೆ ಯೋಗ್ಯವಾದ ಸತ್ರಯಾಗವನ್ನು ಮಾಡುತ್ತಿರಲು, ಒಂದಾನೊಂದು ಸಮಯದಲ್ಲಿ ತಪೋನಿಷ್ಠರಾದ ಮುನಿಶ್ರೇಷ್ಠರೊಡನೆ ವಿನೋದದಿಂದ ಸತ್ಕಥಾ ಪ್ರಸಂಗಗಳಂ ಮಾಡುತ್ತಿರಲು ಆ ಸಮಯದಲ್ಲಿ ರೋಮಹರ್ಷಣನೆಂಬ ಮುನೀಶ್ವರನ ಮಗನಾದ ಉಗ್ರಶ್ರವಸ್ಸೆಂಬ ಸೂತ್ರಪೌರಾಣಿಕನು ಬರಲು, ಸಕಲ[ವಾದ] ಋಷಿಗಳು ಸತ್ಪುರುಷಕಥೆಗಳನ್ನು ಕೇಳುವುದಕ್ಕೋಸ್ಕರ ಆಸೆಯುಳ್ಳವರಾಗಿ, ತಂಡತಂಡವಾಗಿ ಸೂತಪೌರಾಣಿಕನಂ ಕಂಡು, ಸುತ್ತಿಕೊಂಡು ಕುಳಿತಿರಲು, ಸೂತಪೌರಾಣಿಕನು ಆ ಋಷಿಗಳಿಗೆ ನಮಸ್ಕಾರವಂ ಮಾಡಿ, ಕುಶಲಪ್ರಶ್ನೆಯನ್ನು ಮಾಡಿ, ಅವರಿಂದ ಸ್ತುತಿಸಲ್ಪಟ್ಟವನಾಗಿ ಆ ಋಷಿಗಳ ಅನುಮತಿಯಿಂದ ಸುಖಾಸನದಲ್ಲಿ ಕುಳಿತಿರಲು ಆ ಋಷಿಗಳಲ್ಲಿ ಒಬ್ಬೊಬ್ಬ ಋಷೀಶ್ವರನು ಸೂತ್ರಪೌರಾಣಿಕನ ಕಥೆಗಳಂ ಕೇಳುವ ಸಂಗತಿಗೋಸ್ಕರ ಎಲೈ ಸೂತನಂದನನೆ !

ಇಷ್ಟು ದಿವಸವು ಎಲ್ಲಿದ್ದಿರಿ ? ಈಗ ಎಲ್ಲಿಂದಿಲ್ಲಿಗೆ ಬಂದಿರಿ ? ಎಂದು ಕೇಳಲಾಗಿ ಆ ಸೂತನಂದನನು ಋಷಿಗಳಂ ನೋಡಿ, ಕೇಳಿರೈ ಮಹಾಋಷಿಗಳಿರಾ ! ಪರೀಕ್ಷಿನ್ಮಹಾರಾಯನ ಮಗನಾದ ಜನಮೇಜಯರಾಯನು ಸರ್ಪಯಾಗವಂ ಮಾಡುವ ಸಮಯದಲ್ಲಿ ವೇದವ್ಯಾಸಮಹಾಮುನೀಶ್ವರನಿಂದ ರಚಿಸಲ್ಪಟ್ಟ ಮಹಾಭಾರತದಲ್ಲಿರುವ, ನಾನಾಪ್ರಕಾರಂಗಳಾಗಿ ವಿಚಿತ್ರಗಳಾದ ಪುಣ್ಯ ಕಥೆಗಳನ್ನು ವೈಶಂಪಾಯನ ಮಹಾ ಮುನೀಶ್ವರನು ತನ್ನ ಶಿಷ್ಯನಾದ ಜನಮೇಜಯರಾಯನಿಗೆ ವಿಸ್ತಾರವಾಗಿ ಉಪದೇಶ ಮಾಡುತ್ತಿರಲು ಆ ಕಥೆಗಳನ್ನು ಕೇಳಿ ಸಂತೋಷಪಟ್ಟು, ಅಲ್ಲಿಂದ ಹೊರಟು, ಸಕಲಪುಣ್ಯತೀರ್ಥಗಳನ್ನೂ ಸಕಲ ದೇವಾಲಯಗಳನ್ನೂ ಕಂಡು, ಕೌರವಪಾಂಡವರು ಅನ್ಯೋನ್ಯವು ಜಗಳವಾಡಿದ ಕುರುಕ್ಷೇತ್ರದಲ್ಲಿರುವ ಸ್ಯಮಂತಪಂಚಕವೆಂಬ ಪುಣ್ಯ ತೀರ್ಥದಲ್ಲಿ ಸ್ನಾನವಂ ಮಾಡಿ, ಸತ್ರಯಾಗವಲ್ಲಿ ಮಹಾನುಭಾವರಾಗಿ, ಬ್ರಹ್ಮನಿಷ್ಠರಾಗಿ, ಸೂರ್ಯಾಗ್ನಿತೇಜೋವಿರಾಜಮಾನರಾಗಿ ಜಪತಪೋಹೋಮವ್ರತಪರಾಯಣರಾಗಿರುವ ನಿಮ್ಮ ದರ್ಶನದಿಂದ ಕೃತಾರ್ಥನಾಗಬೇಕೆಂದು ಇಲ್ಲಿಗೆ ಬಂದೆನು ನೀವು ನಿತ್ಯಕರ್ಮಂಗಳಂ ಮಾಡಿಕೊಂಡು ಸುಖವಾಗಿರುವುದರಿಂದ ರಾಜರ್ಷಿಚರಿತ್ರಗಳಲ್ಲಿಯಾದರೂ, ಬ್ರಹ್ಮರ್ಷಿಚರಿತ್ರಗಳಲ್ಲಿಯಾದರೂ, ಧರ್ಮಕಥೆಗಳಲ್ಲಿಯಾದರೂ ನಿಮಗೆ ಅಭೀಷ್ಟವಾದ ಕಥೆಗಳಂ ಕೇಳಿಸಿ ಬುದ್ಧಿಗಲಿಸಬೇಕೆಂದು ಪ್ರಾರ್ಥಿಸಲು, ಆ ಸೂತಪೌರಾಣಿಕನ ವಾಕ್ಯವಂ ಕೇಳಿ ಸಕಲ ಋಷಿಗಳೂ ಸಂತೋಷಪಟ್ಟು, ವ್ಯಾಸಮುನಿಪ್ರಣೀತವಾಗಿ, ಬ್ರಹ್ಮರ್ಷಿಸುರಪೂಜಿತವಾಗಿ, ವಿಚಿತ್ರಪರ್ವಸಮೇತವಾಗಿಯೂ, ಗಂಭೀರಂಗಳಾದ ಅರ್ಥಗಳೊಡನೆ ಕೂಡಿ, ನಿಖಿಲವೇದಾರ್ಥಸಂಗ್ರಹವಾಗಿ, ನಾನಾಶಾಸ್ತ್ರಾರ್ಥಗಳ ಅರ್ಥಗಳೊಡನೆ ಕೂಡಿ, ಸಕಲಧರ್ಮಪ್ರತಿಪಾದಕವಾಗಿ, ಕಲುಷವಿಲ್ಲದೆ ಇರುವ ಮಹಾಭಾರತ್ರದಲ್ಲಿರುವ ಕಥೆಗಳನ್ನು ವ್ಯಾಸಮಹಾಮುನೀಶ್ವರನ ಅಪ್ಪಣೆಯಿಂದ ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನಲ್ಲಾ ಆ ಕಥೆಗಳನೆಲ್ಲಾ ನಮಗೆ ಹೇಳಬೇಕೆಂದು ಸೂತಪೌರಾಣಿಕನಂ ಕೇಳಲು, ಆ ಸೂತಪೌರಾಣಿಕನು

ಋಷಿಗಳ ವಾಕ್ಯಮಂ ಕೇಳಿ, ಸಂತೋಷಪಟ್ಟವನಾಗಿ ಮಂಗಳಾಚರಣಪೂರ್ವಕವಾಗಿ ಋಷಿಗಳಿಗಭೀಷ್ಟವಾದ ಅರ್ಥವನ್ನು ಹೇಳುವುದಕ್ಕೋಸ್ಕರ ಜಗದೀಶ್ವರನ ನಮಸ್ಕಾರಾತ್ಮಕವಾದ ಮಂಗಳವಂ ಮಾಡಿದನದೆಂತೆನೆ:—

* * * *

Colophon:

ಇಂತು ಕರ್ಣಾಟಭಾಷಾವಿರಚಿತವಾದ ಶ್ರೀಮಹಿಸೂರು ಸೇನಾಧಿಪತಿ ದೊಡ್ಡರಾಜಪೌತ್ರವೀರರಾಜತನುಜಕಳಲೆನಂಜರಾಜವಿರಚಿತವಾದ ನಂಜರಾಜವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷಗ್ರಂಥಸಂಖ್ಯೆಯುಳ್ಳ ಸಂಹಿತೆಯಲ್ಲಿ ಆದಿಪರ್ವದಲ್ಲಿ ಅನುಕ್ರಮಣಿಕಾಧ್ಯಾಯಾರ್ಥನಿರೂಪಣವು ಸಮಾಪ್ತಂ.

ಅನಂತರದಲ್ಲಿ ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳು ಸೂತಪೌರಾಣಿಕನನ್ನು ಕುರಿತು ಪ್ರಶ್ನೆಮಾಡಿದರು. ಅದೆಂತೆನೆ:—ಎಲೈಯ್ಯಾ ಸೂತನಂದನನೆ! ಪೂರ್ವದಲ್ಲಿ ಸ್ಯಮಂತಪಂಚಕವೆಂಬ ತೀರ್ಥದಲ್ಲಿ ನೀನು ಸ್ನಾನಮಾಡಿದೆನೆಂದು ಹೇಳಿದೆಯಲ್ಲಾ! ಅದರ ವೃತ್ತಾಂತವನ್ನೂ ಅದರ ಮಹಿಮೆಯನ್ನೂ ಹೇಳಬೇಕೆಂದು ಪ್ರಾರ್ಥಿಸಲು ಅವರನ್ನು ಕುರಿತು ಸೂತಪೌರಾಣಿಕನು ಇಂತೆಂದ(ನು).

End:

ಆ ಯಜ್ಞೇಶ್ವರನು ಈ ಪ್ರಕಾರವಾಗಿ ಇಪ್ಪತ್ತೊಂದು ದಿವಸಗಳು ಖಾಂಡವವನವನ್ನು ದಹಿಸಿ ಅಲ್ಲಿರುವ ಸಮಸ್ತಜಂತುಸಮೂಹಗಳನ್ನು ಭಕ್ಷಿಸಿ, ಮೇದಸ್ಸನ್ನೂ ನೆತ್ತರನ್ನೂ ಕುಡಿದು ಅಪರಿಮಿತವಾದ ಸಂತೋಷದಿಂದ ಹಿಗ್ಗಿ, ಕೃಷ್ಣಾರ್ಜುನರನ್ನು ನೋಡಿ, ಎಲೈ ಪುಣ್ಯಪುರುಷರುಗಳಿರಾ! ನಿಮ್ಮ ಭುಜಬಲದ ಸಹಾಯದಿಂದ ನನ್ನ ಹೃದಯವು ಸಂತೋಷಪಡುವಹಾಗೆ ಯಥೇಚ್ಛವಾಗಿ ಭಕ್ಷಿಸಿದೆನು. ನೀವು ನನ್ನ ಅಪ್ಪಣೆಯಿಂದ ನಿಮ್ಮ ಸ್ಥಳಕ್ಕೆ ಸುಖವಾಗಿ ಹೋಗಿ ಎಂದು ನುಡಿದು, ಅರ್ಜುನನನ್ನು ನೋಡಿ, ಈ ಗಾಂಡೀವವೆಂಬ ಮಹಾಧನುಸ್ಸನ್ನೂ ಅಕ್ಷಯತೂಣೀರಗಳನ್ನೂ ನಿನಗೆ ಕೊಟ್ಟವನಾದ್ದರಿಂದ ಈ ಸಾಧನಗಳಿಂದ ಯುದ್ಧದಲ್ಲಿ ಶತ್ರುಗಳನ್ನು ಸುರಾಸುರಗಂಧರ್ವಸಮೇತವಾಗಿ ಜಯಿಸುತ್ತಿದ್ದು—ಎಂದು ಹೇಳಿ ಯಥೇಚ್ಛವಾಗಿ ಹೋಗಲು, ಆ ಬಳಿಕ ಕೃಷ್ಣಾರ್ಜುನರೂ ಮಯನೂ ಪರಸ್ಪರಾಲಿಂಗನಗಳಿಂದ ಸಂತೋಷಪಡುತ ಯಮುನಾತೀರದಲ್ಲಿ ಸುಖವಾಗಿ ಕುಳಿತುಕೊಂಡಿದ್ದರು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದ ಅರ್ಥವನ್ನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಸೂತಪೌರಾಣಿಕನು ವಿವರಿಸಿದನು.

Colophon:

ಇಂತು ಕರ್ಣಾಟಕಭಾಷಾವಿರಚಿತವಾದ ಶ್ರೀಮಹಿಸೂರ ಸೇನಾಧಿಪ ದೊಡ್ಡರಾಜಪೌತ್ರ, ವೀರರಾಜತನುಜ, ದಳಪತಿ ದೇವರಾಜಾನುಜ, ಕಳಲೆ ನಂಜರಾಜವಿರಚಿತವಾದ ನಂಜರಾಜವಾಣೀವಿಲಾಸ ವೆಂಬ ಮಹಾಭಾರತ ತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷಗ್ರಂಥಸಂಖ್ಯೆಯುಳ್ಳ ಸಂಹಿತೆಯಲ್ಲಿ ಆದಿಪರ್ವದಲ್ಲಿ ಸಂಭವಪರ್ವದಲ್ಲಿ ಖಾಂಡವದಾಹದಲ್ಲಿ ಶಾರ್ಙ್ಗಕೋಪಾಖ್ಯಾನದಲ್ಲಿ ಇಂದ್ರಾಗ್ನಿವರಪ್ರದಾನವೆಂಬ ನೂರತೊಂಭತ್ತೆಂಟನೆಯ ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳಮಹಾ ॥

ಅನಂತರದಲ್ಲಿ ವೈಶಂಪಾಯನ ಮುನೀಶ್ವರನು ಜನಮೇಜಯನನ್ನು ಕುರಿತು ಇಂತೆಂದನು :—

*   *   *   *

ತತಜಲಧಿನಿಷಂಗಾ ದಕ್ಷಜಾರ್ಧೀಕೃತಾಂಗಾ ।
ಸಿತಜಲದನಿಭಾಂಗಾ ಶೀತಭಾನೂತ್ತಮಾಂಗಾ ॥
ಸತತಧೃತಕುರಂಗಾ ಸಾಧುಲೋಲಾಂತರಂಗಾ ।
ದಿತಿಜಮದವಿಭಂಗಾ ದಿವ್ಯನಂಜುಂಡಲಿಂಗಾ ॥

ಇತೀ ಶ್ರೀಮದಮಿತನಮಿತಾಂಭೋಜಸಂಭವಜಂಭಾರಿಪ್ರಮುಖನಿಖಿಳಸುರಾಸುರವಂದ್ಯಮಾನ ಗರಳಪುರಾಧಿನಾಥಚರಣಾರವಿಂದಸೇವಾಸಮಾಸಾದಿತಗೀರ್ವಾಣಾಂಧ್ರಕರ್ಣಾಟಕಾದಿನಾನಾಭಾಷಾ ವಿಶೇಷಕಾವ್ಯಚಾತುರೀಧುರೀಣಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರರಾಜಮಾರ್ತಂಡ ಪ್ರೌಢಪ್ರತಾಪಾಪ್ರತಿಮವೀರನರಪತಿಬಿರುದೆಂತೆಂಬರಗಂಡಬಿರುದಾಂಕಿತ ಶಂಖಚಕ್ರಮಕರಮತ್ಸ್ಯಹನೂಮದ್ಗರುಡಗಂಡಭೇರುಂಡಸಿಂಹಶರಭಸಾಳ್ವಾದಿನಾನಾ ವಿಧಧ್ವಜಾಂಕಿತಸಕಲದೇಶಾಧೀಶಕಿರೀಟಕೋಟಿಮಣಿಘೃಣೀನೀರಾಜಿತಚರಣಯುಗಳಯಾದವವಂಶತಿಲಕ ಮಹಿಸೂರಕೃಷ್ಣರಾಜಸೇನಾಧಿಪತಿ ದೊಡ್ಡರಾಜಪೌತ್ರ, ವೀರರಾಜತನೂಜದೇವರಾಜಾನುಜಮದೇಭಪಂಚಾನನ, ದಾನಕ್ಷಾತ್ರಾಧೀಶ್ವರ, ಹನುಮಧ್ವಜಬಿರುದಾಂಕಿತಶಿವಪೂಜಾದುರಂಧರಭಾರದ್ವಾಜಗೋತ್ರಾಶ್ವಲಾಯನಸೂತ್ರ ಋಕ್ಶಾಖಾಧ್ಯಾಯುಕವಿಬುಧಜನವಿಧೇಯರಾಜನಾನ್ಯರಾಜಶ್ರೀಕಳಲೆನಂಜರಾಜವಿರಚಿತವಾಗಿ ಕರ್ಣಾಟಭಾಷಾವಿರಚಿತವಾದ ನಂಜರಾಜವಾಣೀವಿಲಾಸವೆಂಬ ಭಾರತತಾತ್ಪರ್ಯಟೀಕಿನಲ್ಲಿ ಆದಿಪರ್ವಂ ಸಮಾಪ್ತಂ ॥

(ವಿ.ವಿ.)—

ವ್ಯಾಸಮಹಾಮುನಿಪ್ರಣೀತವಾದ ಮಹಾಭಾರತದ ಕನ್ನಡವಚನಾನುವಾದರೂಪವಾಗಿರುವ ಈ ಗ್ರಂಥವು ಮೈಸೂರು ಸಂಸ್ಥಾನದಲ್ಲಿ ಶಾ. ಶ. ೧೬೬೪ (ಕ್ರಿ. ಶ. ೧೭೪೧-೪೨ ದುಂದುಭಿ ಸಂವತ್ಸರ) ದಲ್ಲಿ ಸೇನಾಪತಿಯಾಗಿದ್ದ ಕಳಲೆ ನಂಜರಾಜ ವಿರಚಿತವಾದುದು. ಆದಿಪರ್ವ ಸಮಗ್ರ. ೧೯೯ ಅಧ್ಯಾಯಗಳು. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲ. ಮಿಕ್ಕ ವಿಷಯಗಳನ್ನು ಮೇಲೆ ಉದಾಹೃತವಾಗಿರುವ ಗ್ರಂಥಭಾಗದಿಂದ ನೋಡಿ ತಿಳಿಯತಕ್ಕದು. ಒಂದೊಂದು ಅಧ್ಯಾಯದರ್ಥವೂ ಸಂಸ್ಕೃತ ಭಾರತದ ಕಥೆಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಪರಿವರ್ತಿತವಾಗಿದೆ.

No. 90. ಭಾರತ (ವಚನ).

BHĀRATA (PROSE).

Substance, palm-leaf. Size, 11⅓ × 1 inches. Pages, 40. Lines, 5 on a page. Character, Kanarese. Condition, slightly injured. Appearance, old. Mode of writing, not bad, but contains mistakes.

Contains a portion in the beginning of the Sambhavaparva.

A rendering in kanarese prose of the Sambhavaparva of the Sanskrit Mahābhārata. The name of the author is not given.

Beginning :

ಶಂತನುಚಕ್ರವರ್ತಿಪುತ್ರನಾದ ವಿಚಿತ್ರವೀರ್ಯನಪುತ್ರನಾಗಿ ಸ್ವರ್ಗಸ್ಥನಾದ ಬಳಿಕ ವಿಚಿತ್ರವೀರ್ಯನ ಜನನಿಯಾದ ಸತ್ಯವತಿ ಭೀಷ್ಮನ ಕುರಿತು ನೀನು ರಾಜ್ಯವನಾಳು ಎಂದು ಹೇಳಲಾಗಿ, ಭೀಷ್ಮನು ತಾನು ರಾಜ್ಯವನಾಳಲೊಲ್ಲೆ ಎಂದು ಪ್ರತಿಜ್ಞೆಮಾಡಿ ಇದ್ದೇನೆ. ರಾಜ್ಯವು ಅರಾಜಕವಾಗಬಾರದು. ತಾನೊಂದು ಉಪಾಯುವ ಪೇಳುವೆನು. ಕೇಳು. ಅದಾವುದೆಂತೆನೆ ; ಪೂರ್ವದಲ್ಲಿ ಪರಶುರಾಮನಿಂದ ಕ್ಷತ್ರಕುಲ ಹಿಂಗಲಾಗಿ, ಬ್ರಾಹ್ಮಣರು ಕ್ಷತ್ರಿಯಸ್ತ್ರೀಯರುಗಳಲ್ಲಿ ಪ್ರವರ್ತಿಸಿ ಕ್ಷತ್ರಿಯರ ಕುಲವುಂಟು ಮಾಡಿದರು. ಹಾಗೆ ಬಲಿಯೆಂಬರಸು ಅಪುತ್ರನಾದ ಕಾರಣ ಸುದೇಷ್ಣೆಯೆಂಬ ತನ್ನ ಸ್ತ್ರೀಯಲ್ಲಿ ದೀರ್ಘತಮನೆಂಬ ಋಷಿಯಿಂದ ಸಂತಾನವನ್ನು ಪಡೆದನು. ಎಲೆ ಸತ್ಯವತಿ ! ನೀನು ಆರೀತಿ ವಿಚಿತ್ರ ವೀರ್ಯನ ಸ್ತ್ರೀಯಲ್ಲಿ ಗುಣವಂತನಾದ ಬ್ರಾಹ್ಮಣನಿಂದ ಸಂತಾನವು ಆಗುವವರೆಗೂ ಉಪಾಯುವ ಕಾಣೆ ಎಂದು ಭೀಷ್ಮಂ ಪೇಳಿದರ್ಥವನು ಸತ್ಯವತಿ ಕೇಳಿದಳೆಂದು ವೈಶಂಪಾಯನನು ಜನಮೇಜಯನಿಗೆ ಪೇಳಿ ಮುಂದೆ ನಡೆದ ವಿಧವು ಅದೆಂತೆನೆ :—

ಕೇಳು ಭೂಪ ! ಧರ್ಮದಿಂದಲೂ ಯುಕ್ತಿಯಿಂದಲೂ ಅರ್ಥದಿಂದಲೂ ಸಹಿತವಾದ ಭೀಷ್ಮನ ಮಾತು ಕೇಳಿ ಮರಳಿ ನುಡಿದಳು. ಅದೆಂತೆನೆ ; ಎಲೆ ಭೀಷ್ಮ ! ಉಚಥ್ಯನ ಮಗನಾದ ದೀರ್ಘತಮನು ನಡಿಸಿದ ವೃತ್ತಾಂತದಲ್ಲಿ ಪುರಾಣಸಿದ್ಧವಾದ ಶ್ರುತಿ ಯುಂಟು. ಅದೇ ನೀ ಪೇಳಿದೆ. ಎಲೆ ಪುತ್ರನೆ ! ಈ ಭರತಕುಲ ಜ್ಯೇಷ್ಠನೂ ಗುಣಶ್ರೇಷ್ಠನೂ ನೀನು. ನಿನ್ನ ತಂದೆ ವಾಕ್ಯವು ನಿನಗೆ ಹೇಗೆ ಕರ್ತವ್ಯವೋ ನನ್ನ ಮಾತೂ ನಿನಗೆ ಕರ್ತವ್ಯ. ನಿನ್ನ ಒಡಹುಟ್ಟಿದನಾದ ವಿಚಿತ್ರವೀರ್ಯನು ನಿನಗೆ ಪ್ರಿಯನು. ಅವನು ಬಾಲಕನಾಗಿ ಸ್ವರ್ಗಸ್ಥನಾದನು. ಆತನ ಪೆಂಡತಿ(ಯ)ರಿವರು ಕಾಶಿರಾಯನ ಮಕ್ಕಳು. ಶುಭಮುಳ್ಳವರು. ರೂಪಯವ್ವನಗಳಿಂದ ಸಂಪನ್ನೆಯರು. ಪುತ್ರಕಾಮುಕೆಯರು. ಇವರಲ್ಲಿ ಪುತ್ರರನ್ನು

* * * *

ಭೀಷ್ಮನವರಿಬ್ಬರಿಗೂ ಜಾತಕರ್ಮ ಮೊದಲಾದ ಕ್ರಿಯೆಗಳನು ಬ್ರಾಹ್ಮಣರಿಂದ ಮಾಡಿಸಿದನು. ಅಂಬಿಕಾಪುತ್ರನಾದ ಧೃತರಾಷ್ಟ್ರರಾಯನು ಕುರುಡನಾದಂಥಾದ್ದು ನೋಡಿ ಸತ್ಯವತಿ, ಅಂಬಿಕೆಗೆ ಇನ್ನೊಬ್ಬ ಮಗನ ಕೊಡು ಎಂದು ವ್ಯಾಸನ ಕರದು ಕೇಳಿದಳು. ತಾಯಿ ಪೇಳಿದ ಮಾತು ಕೇಳಿ, ಅಂಬಿಕೆ ನಿಯಮದಿಂದಿದ್ದು, ಎನ್ನ ರೂಪವನ್ನು ನೋಡುತಲಿದ್ದರೇ ಆಗ ಅವಳಿಗೆ ಧರ್ಮಶಾಸ್ತ್ರಾರ್ಥತತ್ವಜ್ಞನ್ನಾದ ಕುಮಾರನ್ನಾದಾನು ಎಂದು ವ್ಯಾಸರು ತಾಯಿ ಕುರಿತಾಡಿದರು. ಅದು ಕೇಳಿ ಸತ್ಯವತಿ ಅಂಬಿಕೆಗೆ ಋತುಕಾಲವಾದಾಗ್ಗ ಇನ್ನೊಬ್ಬ ಪುತ್ರನ ಪಡೆವುದಕ್ಕೆ ವ್ಯಾಸರ ನೋಡುತ ಇಲ್ಲೇ ಇರು ಎಂದಳು. ಅಂಬಿಕೆ ವ್ಯಾಸರರೂಪವನ್ನೂ ಗಂಧವನ್ನೊ ಸ್ಮರಿಸಿಕೊಂಡು ಅತ್ತೆಯ ಮಾತು ಕೇಳದೆ ದಾಸಿಗೆ ಚೆನ್ನಾಗಲಂಕರಿಸಿ ದೇವತಾ ಕುಮಾರಿ ರೀತಿ ಸಮಳಾದ ದಾಸಿಯನ್ನು ವ್ಯಾಸರಿದ್ದೆಡೆಗೆ ಕಳುಹಿಸಿದಳು. ಆ ದಾಸಿ ಋಷೀಶ್ವರನು ಬರಲಾಗಿ ಎದ್ದು ವಂದಿಸಿ ಸತ್ಕಾರವಂ ಮಾಡಿ ಅಪ್ಪಣೆ ತೆಗೆದುಕೊಂಡು

* * * *

ಬಳಿಕ ಅವಳಲ್ಲಿ ದೃತರಾಷ್ಟ್ರನಿಗೂ ಪಾಂಡುವಿಗೂ ತಮ್ಮನಾದ ವಿದುರನೆಂಬ ಮಗನು ವ್ಯಾಸರ ಮಗ ಹುಟ್ಟಿದನು. ವಿದುರನ ಸ್ವರೂಪವನ್ನು ಪೇಳುತಲಿದ್ದಾರೆ. ಕೇಳು ಭೂಪ! ಮಹಾತ್ಮನಾದ ಮಾಂಡವ್ಯನ ಶಾಪದಿಂದ ಯಮನು ಅರ್ಥತತ್ವಜ್ಞನಾಗಿ ಕಾಮಕ್ರೋಧವಿವರ್ಜಿತನಾಗಿ ವಿಚಿತ್ರವೀರ್ಯನ ಪೆಂಡತಿ[ೀ](ಯ)ಲ್ಲಿ ವ್ಯಾಸರಿಂದ ಹುಟ್ಟಿದನು. ದೇವಪುತ್ರರಿಗೆ ಸಮರಾದ ಪುತ್ರರು ಪುಟ್ಟಿದರು. ಅವರು ಸುಖದಿಂದಿರಲಾಗಿ ಕೌರವರು ಕುರುಕ್ಷೇತ್ರದಲ್ಲಿ ಅಭಿವೃದ್ಧರಾದರು ಇನ್ನೂ ಪುತ್ರರ ಹುಟ್ಟಿಸು ಎಂದು ಸತ್ಯವತಿ ಪೇಳಲಾಗಿ, ಇನ್ನು ಎನಗೆ ಹೀಗೆ ಪೇಳಬೇಡ ಎಂದು ಪೇಳಿ, ತಾಯಿ ಋಣವನ್ನು ಪರಿಹರಿಸಿಕೊಂಡು ತಾಯಿಗೆ ಬಹಳ ರಹಸ್ಯಗಳಂ ಪೇಳಿ ಸತ್ಯವತಿ ನೋಡುತಿರಲಾಗಿ ಅಂತರ್ಧಾನವ[ನ್ನು ಐದಿ](ನೈದ್ದಿ)ದನು—ಎಂದು ವೈಶಂಪಾಯನನು ಜನಮೇಜಯಂಗೆ ಪೇಳಿದ ಬಳಿಗಧ್ಯಾಯಸಮಾಪ್ತಿ.

End:

ಮಗಳಾದ, ಶಕುನಿಯೊಡಹುಟ್ಟಿದಳನ್ನು ದೃತರಾಷ್ಟ್ರರಾಯಗೆ ಕೊಟ್ಟು ಬಳುವಳಿಯನ್ನು ಕೊಟ್ಟು ಭೀಷ್ಮನಿಂದ ಪೂಜಿತನಾಗಿ ತನ್ನ ಪಟ್ಟಣಕ್ಕೆ ಬಂದನು. ಕೇಳು ಜನಮೇಜಯ! ಗಾಂಧಾರಿ ತನ್ನ ಸದ್ಗುಣಗಳಿಂದ ಕೌರವರಿಗೆ ಸಂತೋಷವಂ ಮಾಡಿಸಿದಳು. ಪತಿವ್ರತಪರಾಯಣಳಾಗಿ ಸ್ವಲ್ಪವಾದರೂ ಪತಿಗಪರಾಧವನ್ನು ಮಾಡಿದಳಲ್ಲ. ಮತ್ತೊಬ್ಬ ಪುರುಷನನ್ನು ನೋಡಿದವಳಲ್ಲ. ವಾಕ್ಯದಿಂದಲಾದರೂ [ಅಲ್ಲಾ] ಅವಳ ಪತಿ ಚೆಲುವನೆಂದು ಪೇಳಿದವಳಲ್ಲ. ಗಾಂಧಾರಿಯ ತಂಗಿಯರು ಸತ್ಯವ್ರತಳು, ಸತ್ಯಸೇನೆ, ಸುಧೇಷ್ಣೆ, ಅರ್ಥಸಹಿತೆ, ಇಂದ್ರಶ್ರವೆ, ಸುಭದ್ರೆ, ನಿಕೃತಿ, ಶುಭವಹೆ, ದಶಾಷ್ಣೆ ಎಂದು ಪೆಸರುಳ್ಳವರು. ಈ ಹತ್ತು ಮಂದಿಯನ್ನೂ ದೃತರಾಷ್ಟ್ರರಾಯಗೆ ಸುಬಲ ಕೊಟ್ಟನು, ದೃತರಾಷ್ಟ್ರರಾಯನು ಒಡಹುಟ್ಟಿದವರಲ್ಲಿ ಹತ್ತು ಮಂದಿ ಸ್ತ್ರೀಯರುಗಳನ್ನೂ ಪಾಣಿಗ್ರಹಣವನ್ನು ಮಾಡಿಕೊಂಡನು, ಬಳಿಕ ಭೀಷ್ಮನು ಶಸ್ತ್ರಬಲದಿಂದ ನೂರುಮಂದಿ ಸ್ತ್ರೀಯರ ಕೊಂಡು ಬಂದು ದೃತರಾಷ್ಟ್ರರಾಯಗೆ ಕೊಟ್ಟನು—ಎಂದು ವೈಶಂಪಾಯನನು ಜನಮೇಜಯಂಗೆ ಪೇಳಿದ ಬಳಿಗಧ್ಯಾಯಸಮಾಪ್ತಿ.

Colophon:

ಇತೀ ಶ್ರೀ ಕರ್ಣಾಟಕ ಭಾಷಾ ವಿರಚಿತ ಸಂಭವಪರ್ವ ಟೀಕಾಯಾಂ ಷಟ್ಪಂಚಾಶೋಧ್ಯಾಧ್ಯಾಯಃ. ಪಾಂಡುರಾಯಗೆ ಕುಂತಿಯ ವಿವಾಹವಾದ . . ನು ಕುಂತೀಲಿ ಕರ್ಣನು ಹುಟ್ಟಿದ ರೀತಿ ಜನಮೇಜಯಂಗೆ ವೈಶಂಪಾಯನನು ಪೇಳುತಲಿದ್ದಾ. ಈ ಅಧ್ಯಾಯದಲ್ಲಿ:—ಅದೆಂತೆನೆ, ಕೇಳು ಜನಮೇಜಯ! ವಸುದೇವನ ತಂದೆ ಶೂರನೆಂಬವನಿದ್ದನು, ಆತಗೆ ಪೃಥೆಯೆಂಬ ಮಗಳು ರೂಪದಿಂ ಅಪ್ರತಿಮಳು. ಶೂರರಾಯನು, ತನ್ನ ಸೋದರತ್ತೆಯ ಮಗನಾದ ಕುಂತಿಭೋಜನು ಅಪುತ್ರನಾದ ಕಾರಣ ತನಗೆ ಮೊದಲು ಹುಟ್ಟಿದ ಮಗಳನ್ನು ನಿನಗೆ ಕೊಟ್ಟೇನೆಂದು ಮೊದಲೇ ಹೇಳಿದ್ದನಾದ ಕಾರಣ, ಪೃಥೆಹುಟ್ಟಲು ಕುಂತಿಭೋಜಗೆ ಮಗಳಾಗಿಕೊಟ್ಟನು. ಆ ರೀತಿ ಭೋಜನು ಬ್ರಾಹ್ಮಣರಿಗೆ ಅನ್ನಪಾನಂಗಳ ಕೊಟ್ಟು, ಅವರ ಸೇವೆಮಾಡು ಎಂದು ಮಗ್ಗಳಿಗೆ ಕಟ್ಟಳೆ ಮಾಡಿದನು, ದೂರ್ವಾಸನೆಂಬ ಮಹಾತ್ಮನಾದ ಅತಿಕ್ರೋಪಿಷ್ಠನಾದ ಋಷಿಗೆ ಎಚ್ಚರಿಕೆ ಇತ್ತು ಸೇವೆಮಾಡಿ ಸಂತೋಷವಂ ಪಡಿಸಿದಳು. ಸಂತುಷ್ಟನಾದ ದುರ್ವಾಸನು ನೀನು ಯಾವ ದೇವತೆಯನ್ನು ಈ ಮಂತ್ರವನ್ನು ಪೇಳಿ ಕರೆದರೆ ಆ ದೇವತೆ ನಿನ್ನ ಬಳಿಗೆ ಬಂದು ನಿನ್ನಲ್ಲಿ ಮಗನ ಪುಟ್ಟಿಸುವನು ಎಂದು ಆ ಕುಂತಿ ಕುರಿತು ಪೇಳಿ ಆ ಮಂತ್ರವನ್ನು ಉಪದೇಶವನ್ನು ಮಾಡಿದನು. ಕೆಲವು ದಿನಗಳಾಗಲಾಗಿ ಮದುವೆ ಇಲ್ಲದ ಮೊದಲೇ ಕುಂತಿ ಮಂತ್ರದಿಂ ಸೂರ್ಯನ ಕರೆದಳು. ಬಳಿಕ ಸೂರ್ಯನು ಮೇಘದಂತರದಿಂದ ಬಂದು ವಿಸ್ತಾರವಾದ ನೇತ್ರಂ

ಗಳುಳ್ಳ ಕುಂತಿಯು ಬಳಿಗೆ ಬಂದನು. ಆಗ ಕುಂತಿ ಅದ್ಯದ್ಭುತನಾದ ಸೂರ್ಯನಕಂಡು ಆಶ್ಚರ್ಯವನು ಪಟ್ಟು ಯಾರು ? ಯಾಕೆ ಬಂದೆ ? ಎಂದು ಕೇಳಿದಳು. ಅದು ಕೇಳಿ ಸೂರ್ಯನು ಕುಂ

. . . .

(ವಿ.ವಿ.)—

ಸಂಭವಪರ್ವದಲ್ಲಿ ಧೃತರಾಷ್ಟ್ರಾದಿಗಳ ಉತ್ಪತ್ತಿಯು ಕಥೆ ಮೊದಲು ಕುಂತಿಯು ಹುಟ್ಟಿದ ಕಥೆಯು ವರೆಗೆ ಮಾತ್ರವೇ ಇದೆ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಸ್ವಲ್ಪ ಶಿಥಿಲ. ಗ್ರಂಥ ಪಾತವಿಲ್ಲ. ಈ ವಚನ ಭಾರತವನ್ನು ಪರಿವರ್ತಿಸಿದವರಾರೆಂದು ಹೇಳಲು ಸಾಧ್ಯವಿಲ್ಲ. ಭಾಷೆಯು ಅಷ್ಟು ಸಮರ್ಪಕವಾದುದೆಂದು ಹೇಳಲಾಗದು.

No. **91**. ಭಾರತ (ವಚನ)-

BHĀRATA (PROSE).

Substance, palm-leaf. Size, 16 × 1⅜ inches. Pages, 156. Lines, 6 on a page. Character, Kanarese. Condition, slightly injured. Appearance, very old. Mode of writing, not bad and not free from mistakes.

Contains from the 71st Adhyāya upto 111th Adhyāya in the Sabhāparva.

A rendering in Kanarese prose of the Sabhāparva of the Sanskrit Mahābhārta. The name of the author is not given.

Beginning:

ಜನಮೇಜಯರಾಯನ ಕುರಿತು ವೈಶಂಪಾಯನ ವಾಕ್ಯವು :—ಕೇಳು ಜನಮೇಜಯನೆ ! ಅನಂತರವು ಕೋಪದಿಂದ ಚಲಿತವಾದ ಸಮುದ್ರಸಮಾನವಾದ ನೃಪಸಮೂಹಮಂ ಕಂಡು, ಕುರುಪಿತಾಮಹನಾದ ಭೀಷ್ಮನ ಕುರಿತು ಇಂದ್ರನು ಬ್ರಹ್ಮದೇವನ ಕೇಳಿದ ರೀತಿ ಒಂದು ವಾಕ್ಯವಂ ಪೇಳಿದನು. ಅದೆಂತೆನೆ :—ಈ ನೃಪಸಾಗರವು ಕೋಪದಿಂದ ಚಲಿಸುತಲಿದೆ. ಈ ಅರ್ಥದಲ್ಲಿ ನನಗೆ ನಡೆಯುಲಿಕ್ಕೆ ಪ್ರಯೋಜನವೇನು ? ಎಂದು ಕೇಳಲಾಗಿ ಭೀಷ್ಮರು ಉತ್ತರ ಹೇಳಿದರು. ಎಲೆ ಕುರುಶ್ರೇಷ್ಠನೆ ! ಭಯವು ಏನು ? ಹೆದರಬೇಡ. ಶುನಕವು ಸಿಂಹವ ಸಂಹರಿಸಲರಿಯದು. ಎಲೆ ಯುಧಿಷ್ಠಿರನೆ ! ಸಿಂಹವು ನಿದ್ರೆಯಂ ಮಾಡುವ ಸಮಯದಲ್ಲಿ ಶುನಕಂಗಳು ಕೂಡಿದ ರೀತಿಯಲ್ಲಿ ಈ ನೃಪರು ಯಾದವಶ್ರೇಷ್ಠನ ಸಮೀಪದಲ್ಲಿ ಕೂಗುತಲಿಧಾರೆ. ಈ ಕೃಷ್ಣನು ಅವರ ಲಕ್ಷ್ಯವಂ ಮಾಡಲಿಲ್ಲ. ಈ ಪ್ರಕೃತದಲ್ಲಿ ಶ್ರೀಕೃಷ್ಣನು ಸಿಂಹಸಮಾನನು. ಈ ಶಿಶುಪಾಲನು ಶುನಕಸಮಾನನು. ಇವನು ಸಕಲ ನೃಪರನ್ನು ನರ(ಕ)ವ (?) ನೆಯ್ದಸಲಿಚ್ಛೈಯಿಸಿ ಇಂಥಾ ದುರ್ವಾಕ್ಯಂಗಳಂ ನುಡಿಯುತಲಿಧಾನೆ. ಎಲೆ ಯುಧಿಷ್ಠಿರನೆ ! ಇವನು ತನ್ನ ತೇಜಸ್ಸನ್ನು ಶ್ರೀಕೃಷ್ಣನ ಕುರಿತು [ಐದಿ](ಎಯ್ದ)ಸಬೇಕೆಂದು ಇಚ್ಛೈಯಿಸುತ್ತಲಿದ್ದಾನೆ. ಶ್ರೀಕೃಷ್ಣನು ಶಿಶುಪಾಲನಲ್ಲಿಹ ತೇಜಸ್ಸನ್ನು ಸಕಲನೃಪರೂ ನೋಡುತ್ತ ಇರಲಾಗಿ ತನ್ನಲ್ಲಿ ಐಕ್ಯವಂ ಮಾಡುವುದಕ್ಕೋಸ್ಕರ ಇಚ್ಛೈಯಿಸುತಲಿದಾನೆ. ಶಿಶುಪಾಲನ ಬುದ್ಧಿ ಇಂಥಾದ್ದು. ಚತುರ್ವಿಧವಾದ ಜನರುಗಳಿಗೂ ಶ್ರೀಕೃಷ್ಣನು ಗತಿಯಾದವನು. ಇಂತು ಭೀಷ್ಮನ ವಾಕ್ಯಮಂ ಕೇಳಿ ಚೇದಿದೇಶಾಧಿಪತಿಯಾದ ಶಿಶುಪಾಲನು ಭೀಷ್ಮರ ಕುರಿತು ಕೆಲವು ನಿಷ್ಠುರವಾಕ್ಯಗಳ ನುಡಿದನು—ಎಂದು ವೈಶಂಪಾಯನಋಷಿ ಪೇಳಿದರು.

Colophon :

ಇದು ಎಪ್ಪತ್ತೊಂದನೆಯ ಅಧ್ಯಾಯದ ಟೀಕು.

ಶಿಶುಪಾಲನ ವಾಕ್ಯವು—ಕುಲಾಧಮನಾದ ಎಲೆ ಭೀಷ್ಮನೆ! ನೀನು ವೃದ್ಧನಾಗಿದ್ದು ಅನೇಕವಾದ ಮಾಯೋಪಾಯಂಗಳಿಂದ ಈ ನೃಪರಭಯವ ನೆಯ್ಸುವುದು ಏನು ಕಾರಣ?

*　　　*　　　*　　　*

ಪುತ್ರಸಮೇತನಾದ ದ್ರೋಣನು ಮಹಾಧನುರ್ಧರನು ಸಹಾಯವಾಗಿರುತ್ತಿದ್ದಾನೆ. ಕರ್ಣನು ಮಹಾರಥಿಕನು, ನಿನಗೆ ಮಿತ್ರನು. ಕರ್ಣನು ಒರ್ವನೇ ಸೋಮಕ ಸಮೇತರಾದ ಪಾಂಡವರನ್ನು ಜಯಿಶಿಯಾನು. ಮಿಕ್ಕಾದ ಸಹಾಯಂಗಳಿಂದಲೇನು ಪ್ರಯೋಜನವು? ಭೀಷ್ಮನು ಪುರುಷಶ್ರೇಷ್ಠನು. ಕೃಪನು ಮಹಾರಥಿಕನು. ಜಯದ್ರಥನು ಬಲಿಷ್ಠನು. ಭಯಂಕರವಾದ ಪರಾಕ್ರಮವುಳ್ಳ ಸೋಮದತ್ತಕನು ಸೋದರಸಮೇತ[ಮಾ]ನಾಗಿ ಬಹುಪ್ರತಾಪಿ. ನೀನು ಸಮಸ್ತವಾದ ಭೂಮಿಯನ್ನು ಜಯಿಸೈ. ನೀನು ಕೇಳದರೆ ನಾನು ಒಂದು ವಿಶೇಷಮಂ ಪೇ[ಳೆ](ಳುವೆ)ನು. ಈ ಮುಂದೆ ಹೇಳಲ್ಪಡುವ ಪಾಂಡವರು ಸಂಹರಿಸಲ್ಪಟ್ಟರೆ ನಿನಗೆ ಸಮಸ್ತವಾದ ಭೂಮಿಯೂ, ಸಮಸ್ತವಾದ ಅರಸುಗಳೂ ಸಭೆಯೂ ಅಧೀನವಾದೀತು. ಅರ್ಜುನನು, ವಾಸುದೇವನು, ಭೀಮನು, ಧರ್ಮರಾಯನು, ನಕುಲನು, ಸಹದೇವನು, ಪುತ್ರಸಮೇತನಾದ ದ್ರುಪದರಾಯನು ಯುದ್ಧದಲ್ಲಿ ದೇವತೆಗಳಿಂದಲಾದರೂ ಜಯಿಸುವುದಕ್ಕೆ ಶಕ್ಯರಲ್ಲ. ಮಹಾರಥಿಕರು. ಮಹಾಧನುರ್ಧರರು. ಅಸ್ತ್ರಗಳನ್ನು ಬಲ್ಲವರು. ಯುದ್ಧದಲ್ಲಿ ಮದಿಸಿದವರು. ಅಲ್ಲಿ ನಾನು ಒಂದು ಉಪಾಯವನ್ನು ಬಲ್ಲೆನು. ಅದೆಂತೆನೆ :—

ಎಲೆ ದುರ್ಯೋಧನನೆ! ಧರ್ಮರಾಯನ ಕುರಿತು ಅದು ಪೇಳ್ವೆ ಎನಲಾಗಿ ದುರ್ಯೋಧನನು ಅಪ್ರಮಾದದಿಂದ ಶತ್ರುಗಳನ್ನೂ ಮಿಕ್ಕಾದ ಅರಸುಗಳನ್ನೂ ಯಾವ ಉಪಾಯದಿಂದ ಜಯಿಸೇನೋ ಆ ಉಪಾಯವು ಎನಗೆ ಪೇಳ್ವೆ ಎಲೆ ಶಕುನಿ! ಎನಲಾಗಿ, ಶಕುನಿಯು ಕುಂತೀ ಸುತನಾದ ಧರ್ಮರಾಯನು ದ್ಯೂತದಲ್ಲಿ ಪ್ರಿಯವುಳ್ಳವನು. ಆಡಲರಿಯ. ನಿನ್ನಿಂದ ಧರ್ಮರಾಯನು ದ್ಯೂತಕ್ಕೆ ಕರೆಯಲ್ಪಟ್ಟವನಾಗಿ ಬಂದಾನು. ನೆತ್ತವು ಹಾಕುವುದರಲ್ಲಿ ಎಲ್ಲಿ ಎನಗೆ ಮೂರು ಲೋಕಗಳಲ್ಲಿ (?)ಸಮಾನರಿಲ್ಲ. ಅದು ಕಾರಣದತ್ತಣಿಂ ನೀನು ಜೂಡಕ್ಕೆ ಕರಿಯ್ಯೆ. ಕರೆದರೆ ಅಕ್ಷಕುಶಲತ್ವದಿಂ ಸಮಸ್ತವಾದ ರಾಜ್ಯವೂ ನಿನ್ನ ಅಧೀನವಾದೀತು. ಹೀಗೆಂದು ನೀನು ಧೃತರಾಷ್ಟ್ರಂಗೆ ಪೇಳು—ಎಂಬ ಶಕುನಿಯ ವಾಕ್ಯಮಂ ಕೇಳಿ ದುರ್ಯೋಧನನು ಕೌರವಶ್ರೇಷ್ಠನಾದ ಧೃತರಾಷ್ಟ್ರಂಗೋಸ್ಕರವೂ ನೀನೇ ಪೇಳ್ವೆ ಶಕುನಿಯೇ! ಎಂದು ವೈಶಂಪಾಯನನು ಜನಮೇಜಯಂಗೆ ಪೇಳದ ಕಥಾವೃತ್ತಾಂತವು.

Colophon :

ಇದು ಸಭಾಪರ್ವದ ದ್ಯೂತಯೋಜನೋಪಾಯವೆಂಬ ಎಂಭತ್ತು ನಾಲ್ಕನೆಯ ಅಧ್ಯಾಯದ ಟೀಕು.

ದುರ್ಯೋಧನನ ದೆಸೆಯಿಂದ ರಾಜಸೂಯಯಾಗವನ್ನೂ ಧರ್ಮರಾಯನ ಸಂಬಂಧವಾದ ವೈಭವವನ್ನೂ ಕೇಳಿ ಶಕುನಿಯು ದುರ್ಬುದ್ಧಿಯುಳ್ಳವನಾಗಿ ದುರ್ಯೋದನನ ಅನುಮತಿಯಿಂದ ಹಸ್ತಿನಾಪಟ್ಟಣಕ್ಕೆ ನಡೆದನು. ಈ ದುರ್ಯೋದನನ ಪ್ರಯೋಜನವು ಮಾಡಬೇಕು ಎಂದು ದೃಢವಾದ ಬುದ್ಧಿಯನ್ನು ಮಾಡಿದನು.

End :

ಆವ ದ್ರೌಪದಿಯ ಕೇಶಂಗಳು ರಾಜಸೂಯದಲ್ಲಿ ಮಂತ್ರಪೂತಂಗಳಾದ ಅವಭೃಥಸ್ನಾನದ ಜಲಂಗಳಿಂ ನೆನಹಿಹವ್ರೋ [ಪೂರ್ವದಲ್ಲಿ,] ಅಂಥಾ ಕೇಶಂಗಳು ಪೊಂಡವರ ಪರಾಕ್ರಮವು ವ್ಯರ್ಥವಾಗಿ ದುಶ್ಶಾಸನನಿಂದಂ ಗ್ರಹಿಸಲ್ಪಟ್ಟವು. ಕಾಲಗತಿಯು ಆವ ಪುರುಷರ್ಗೆ ತಪ್ಪಿಸಿಕೊಳ್ಳಬಹುದು ? ಬಳಿಕ ದುಶ್ಶಾಸನನು ವಕ್ರಕೇಶಂಗಳುಳ್ಳ ದ್ರೌಪದಿಯನ್ನು ಸಭಾ ಸಮೀಪಕ್ಕೆ ತಂದು ಜಗದೇಕವೀರರಾದ ನಾಥರುಳ್ಳ ದ್ರೌಪದಿಯನನಾಥೆಯಾದ ಸ್ತ್ರೀಯಂತೆ, ಆರ್ತೆಯಾದ ದ್ರೌಪದಿಯನ್ನು ದುಷ್ಟವಾಯುವು ಕದಳೀಸ್ತಂಭವ ಕೆಡಹಿದ ರೀತಿಯೆ ತನ್ನ ಕರದಿ ಸೆಳೆದನು. ಆ ರೀತಿ ದುರಾತ್ಮನಿಂದ ಸೆಳೆಯಲ್ಪಟ್ಟು ಬಗ್ಗಿದ ತನ್ನ ದೇಹವುಳ್ಳ ದ್ರೌಪದಿಯು ಎಲೆ ದುರಾತ್ಮನೆ ! ನಾನು ರಜಸ್ವಲೆಯಾಗಿದ್ದೇನೆ. ಒಂದೇ ವಸ್ತ್ರಧಾರಿಣಿಯಾಗಿದ್ದೇನೆ. ಎನ ಸಭೆಯನೆಯ್ದಿಸಬೇಡ—ಎಂದ ಬಳಿಕ್ಕಂ ದುಶ್ಶಾಸನನು ಅತಿ ನೀಲವರ್ಣಂಗಳಾದ ಕೇಶಂಗಳಲ್ಲಿ ಕೈಹಾಕಿ ದೇವೇಂದ್ರ, ಕೃಷ್ಣ, ವಿಷ್ಣು, ಅರ್ಜುನರ ಮೊದಲಾಗಿ ದ್ರೌಪದಿಗೆ ರಕ್ಷಕರೆಂದು ಎಣಿಸದೆ, ದುಃಖದಿಂದ ಕೂಗುವ ದ್ರೌಪದಿಯನ್ನು ಕುರಿತು, ಎಲೆ ದ್ರೌಪದಿಯೆ ! ನೀನು ರಜಸ್ವಲೆಯಾಗಿದ್ದರೂ, ಏಕವಸ್ತ್ರಧಾರಿಣಿಯಾಗಿದ್ದರೂ, ವಸ್ತ್ರವಿಲ್ಲದೆ ಇಹವಳಾದರೂ, ಜೂಜದಲ್ಲಿ ನಮ್ಮಿಂದ ಜಯಿಸಲ್ಪಟ್ಟವಳಾಗಿ ನಮಗೆ ದಾಸಭಾವವನೆಯ್ದಿದ ಬಳಿಕ ನಿನಗೆ ಬಹುಮಾನವೆಲ್ಲಿ ? ಎಂದು ಮಹಾಕ್ರೂರವಾಕ್ಯಮಂ ಪೇಳದನು. ಬಳಿಕ ದುಶ್ಶಾಸನನಿಂದ ಕಂಪಿಸಲ್ಪಟ್ಟ, ಪ್ರಕೀರ್ಣವಾದ ಕೇಶಂಗಳುಳ್ಳ, ಜಾರುವ ವಸ್ತ್ರವುಳ್ಳ, ಕ್ರೋಧದಿಂ ದಹಿಸುವ ಹೃದಯವುಳ್ಳ ದ್ರೌಪದಿಯು ಲಜ್ಜೆಯುಳ್ಳವಳಾಗಿ ಒಂದು ವಾಕ್ಯವಂ ಪೇಳದಳು. ಈ ಸಭೆಯಲ್ಲಿ ಸಭಾಪತಿಗಳು ಸಮಸ್ತವಾದವರು ಶಾಸ್ತ್ರವ ಬಲ್ಲವರು. ದೇವೇಂದ್ರಂಗೆ ಸಮಾನರು. ಸಂಸ್ಥಾನದವರು. ಗುರುಗಳು ಇವರ ಮುಂದೆ ನಾನು ನಿಲ್ಲಲಾಗೆ. ಎಲೆ . . . .

(ವಿ-ವಿ.)—

(ಸಭಾಪರ್ವದಲ್ಲಿ, ರಾಜಸೂಯ ಸಭೆಯಲ್ಲಿ ಶಿಶುಪಾಲನು ಭೀಷ್ಮಾದಿಗಳನ್ನು ಜರೆದ ಕಥೆಮೊದಲು, ದ್ಯೂತಸಭೆಯಲ್ಲಿ ದುಶ್ಶಾಸನನು ದ್ರೌಪದಿಯನ್ನು ಮುಡಿ ಹಿಡಿದೆಳೆದು ಸಭೆಗೆ ತಂದ ಕಥೆಯವರೆಗೆ ಮಾತ್ರವೇ ಇದೆ ಅಸಮಗ್ರ. ಬರವಣಿಗೆ ಸಾಮಾನ್ಯ. ತಪ್ಪುಗಳಿವೆ. ಸ್ವಲ್ಪ ಶಿಥಿಲ. ಪುರಾತನ ಪ್ರತಿ. ಇದನ್ನು ಪರಿವರ್ತಿಸಿದವರಾರೆಂದು ಹೇಳುವುದಕ್ಕೆ ಯಾವ ಆಧಾರಗಳೂ ದೊರೆತಿಲ್ಲ. ಕಳಲೆನಂಜರಾಜ ವಿರಚಿತವಾದ ವಚನ ಭಾರತ ಮತ್ತು ಜಣಕರಾಜನು ಬರೆದಿರುವ ವಚನ ಭಾರತಗಳಿಗಿಂತಲೂ ಬೇರೊಂದು ಪರಿವರ್ತನವೆಂತಲೇ ಹೇಳಬಹುದಾಗಿದೆ. ಭಾಷಾಶೈಲಿಯು ವ್ಯಾಕರಣ ಮರ್ಯಾದೆಯನ್ನನುಸರಿಸಿಯೇ ಬರೆಯಲ್ಪಟ್ಟುದಾದರೂ ಲೇಖಕರ ಪ್ರಮಾದದಿಂದ ಭಾಷೆಯು ಬಹಳವಾಗಿ ಭ್ರಷ್ಟವಾಗಿದೆ.

No. 92. ಭಾರತ (ವಚನ).
BHĀRATA (PROSE).

Substance, palm-leaf. Size, $16 \times 1\frac{3}{8}$ inches. Pages, 10. Lines, 6 on a page. Character, Kanarese. Condition, injured. Appearance, old. Mode of writing, bad and full of mistakes.

Contains the 102 nd Adhyāya only of the Sabhāparva.

Similar to the work described above ; the name of the author is not given.

ದುಶ್ಯಾಸನನು ನಾಚಿ ಶಾಂತನಾದನು· ಅಂತಿರ್ಪ ದುಶ್ಶಾಸನನ ಕಂಡು ಭೀಮಸೇನನು ಕ್ರೋಧದಿಂ ವ್ಯಕ್ತವಾಗಿ ತೋರುವ ತುಟಿಗಳುಳ್ಳವನಾಗಿ, ಇವನ ತೋಳನ್ನು ನಾನು ಗದೆಯಿಂದ ಚೂರ್ಣ್ಣವಂ ಮಾಡಿಯೇನು. ಎಲೆ ಲೋಕವಾಸಿಗಳಾದ ಕ್ಷತ್ರಿಯರುಗಳಿರಾ! ಈ ಎನ್ನ ವಾಕ್ಯವನ್ನು ಕೇಳಿರೈ. ಈ ನಾ(ನು) ಹೇಳುವದು ಮೊದಲು ಆವ ಮನುಷ್ಯನಿಂದಂ ಪೇಳಲ್ಪಡಲಿಲ್ಲ. ಇನ್ನು ಮುಂದೆಯೂ ಹೇಳಲ್ಪಡದು· ಅದೆಂತೆನೆ:—

ಈ ರೀತಿಯಾಗಿ ನಾನಿವನ ಸಂಹರಿಸದೆ ಬಿಟ್ಟನಾದರೆ ಸತ್ಯವು ಸಹ ತಪ್ಪಿ ತಾನು ಪಾರಗತಿಯು ನುಗ್ಗದೆ ಹೋದೇನು· ಈ ಪಾಪಾತ್ಮನಾದ, ದುರ್ಜಾತಿಯಾದ ದುಶ್ಶಾಸನನ ಎದೆಯನ್ನು ಸೀಳಿ ರಕ್ತವಂ ಕುಡಿದೇನು. ಇದು ತಪ್ಪಿದರೂ ಅಲ್ಲದೆ ದೋಷವೆಂಬು ಸಭಾಮಧ್ಯದಲ್ಲಿ ಪ್ರತಿಜ್ಞೆಯಂ ಮಾಡಿದನು. (?) ಈ ರೀತಿ ಲೋಕಕ್ಕೆ ಸಂತೋಷವಂ ಮಾಡಿಯೇನು—ಎಂಬ ಭೀಮನ ವಾಕ್ಯಮಂ ಕೇಳಿ ದುರ್ಯೋದನನ ನಿಂದಿಸುತ್ತಂ ಬಹು ಸ್ತೋತ್ರಮಂ ಮಾಡಿದಳು.

ಬಳಿಕ ರೋಮಹರ್ಷಣವಾದ ನಿಂದಾಶಬ್ದವು ಸಭೆಯಲ್ಲಿರ್ಪ ಅರಸುಗಳಲ್ಲಿ ಉಂಟಾದುವು. ಪಾಂಡವರಂ ಕುರಿತು ಕೌರವರ ನಿಂದಿಸಿದರು· ಕೌರವರು ದ್ರೌಪದಿಯು ಮಾಡಿದ ಪ್ರಶ್ನೆಯಲ್ಲಿ ಕಿಂಚಿತ್ತೂ ಹೇಳಲಿಲ್ಲ. ಬಳಿಕ ಸಜ್ಜನನಾದ ಸರ್ವಧರ್ಮಜ್ಞನಾದ ವಿದುರನು ಧೃತರಾಷ್ಟ್ರನಂ ನಿಂದಿಸುತ್ತಂ ತನ್ನ ಬಾಹುವನೆತ್ತಿಕೊಂಡು ತಮ್ಮೊಳಗೆ ತಾವು ಮಾತನಾಡುವ ಸಭಾಪತಿಗಳಂ ನಿವಾರಿಸಿ ಕೂಗಿ ಒಂದು ವಾಕ್ಯವಂ ಪೇಳಿದನದೆಂತೆನೆ :—

ದ್ರೌಪದಿಯು ಪ್ರಶ್ನೆಯ ಮಾಡಿ ಅನಾಥೆಯು ರೀತಿಯೆ ಅಳುತ್ತಿಧಾಳೆ. ಎಲೆ ಸಭಾಪತಿಗಳಿರಾ ! ನೀವು ಆ ಪ್ರಶ್ನೆಯಲ್ಲಿ ಉತ್ತರವಂಕೊಡದೆ ಇಹ ಕಾರಣ ಇಲ್ಲಿ ಧರ್ಮ ಕೆಡಿಸಲ್ಪಟ್ಟಿತು· ಈ ಸಭಾಮಧ್ಯದಲ್ಲಿ ಜ್ವಲಿಸುವ ಅಗ್ನಿಯ ರೀತಿ ಈ ದ್ರೌಪದಿಯಿಂ ಪ್ರಶ್ನೆಪ್ರಾಪ್ತವಾಗಿವೆ. ಇಂತ ಪ್ರಶ್ನೆಯನ್ನು ನಿಷ್ಟ.

End :

ಈ ಸಮಸ್ತವಾದ ಕುರುರಾಯರು, ಮಕ್ಕಳು ಸೊಸೆಯುಳ್ಳವರು. ಎನ್ನ ವಾಕ್ಯವಂ ಕೇಳಿ ಈ ಪ್ರಶ್ನೆಯನ್ನು ಯಥಾರ್ಥವಾಗಿ ಪೇಳಿರೈ. ಎಲ್ಲಿ ವೃದ್ಧರಿಲ್ಲವೋ ಅದು ಸಭೆಯಲ್ಲ. ಆರು ಧರ್ಮವನ್ನು ಸೇಳರೋ ಅವರು ವೃದ್ಧರಲ್ಲ. ಎಲ್ಲಿ ಸತ್ಯವಿಲ್ಲವೋ ಅದು ದರ್ಮವಲ್ಲ. ಮಿತಿ ತಪ್ಪಿದ್ದೂ ದರ್ಮವಲ್ಲ. ಈ ರೀತಿಯಾಗಿ ಪೇಳುತ್ತಂ ತನ್ನ ಪತಿಗಳನ್ನು ಮರಳಿ ಮರಳಿ ನೋಡುತ್ತಿಹ ದ್ರೌಪದಿಯನ್ನು ದುಶ್ಶಾಸನನು ನಿಷ್ಠುರಗಳಾದ ಅಪ್ರಿಯಗಳಾದ ವಾಕ್ಯಂಗಳನ್ನು ನುಡಿದನು. ಕ್ಲೇಶಪಡುವ, ರಜಸ್ವಲೆಯಾದ, ಜಾರಿದ ವಸ್ತ್ರವುಳ್ಳ ದ್ರೌಪದಿಯನ್ನು ಕ್ಲೇಶಪಡುತ್ತಿಧಾಳೆಂದು ಭೀಮಸೇನನು ದರ್ಮರಾಯಂಗೆ ಕೋಪ[ಬಾಹೋಂ[(ವು ಬರುವ ಹಾ)ಗೆ ಮಾಡಿದನು ಎಂದು ವೈಶಂಪಾಯನನು ಜನಮೇಜಯಂಗೆ ಪೇಳಿದ ಕಥಾವೃತ್ತಾಂತಂ ॥

Colophon :

ಇದು ಸಭಾಪರ್ವದಲ್ಲಿ ದ್ರೌಪದಿಯ ಕೇಶಗ್ರಹಣವೆಂಬ ನೂರ ಎರಡನೆಯ ಅಧ್ಯಾಯದ ಟೀಕು.

ಭೀಮನವಾಕ್ಯ, ಎಲೆ ಧರ್ಮರಾಯನೆ! ಲೋಕದಲ್ಲಿ ವೇಶ್ಯೆ ಜಾರಸ್ತ್ರೀಯರು ಮೊದಲಾದವರು ಉಂಟಾದರೂ ಜೂಜದಲ್ಲಿ ಅವರು ಮೊದಲಾಗಿ ಕೊಟ್ಟವರಿಲ್ಲ. ನಿನಗೆ ದಯಾಲೇಶವಿಲ್ಲ.

*　　*　　*　　*

ಎಲೆ ಭೀಮನೆ! ಇಂತಿರ್ಪ ದುರ್ವಾಕ್ಯವು ನಿನಗೆ ಎಂದೂ ಬಂದದಿಲ್ಲ. ಪರರಿಂದ ಧರ್ಮರಹಸ್ಯವು ತಿಳಿಯಲ್ಪಡಲಿಲ್ಲ. ಪರರು ಧರ್ಮವಂ ಬಯಸುವರಲ್ಲ. ನೀನು ಉತ್ತಮ ಧರ್ಮವ ನಾಚರಿಸೈ. ಧರ್ಮತತ್ಪರನಾದ ಜ್ಯೇಷ್ಠನಾದ ಯುಧಿಷ್ಟಿರನು ಅತಿಕ್ಷಮಿಯು. ಆತನು ಪರರಿಂದ ಕರೆಯಲ್ಪಟ್ಟವನಾಗಿ ಹೋಗಬೇಕು ಎಂದು ಕ್ಷತ್ರಧರ್ಮವ ಸಂಸ್ಮರಿಸುತ್ತಂ ಪರನ ಕುರಿತು ಜೂಜವಾ . . . .

(ವಿ-ವಿ.)—

ಸಭಾಪರ್ವದಲ್ಲಿ ನೂರ ಎರಡನೆಯ ಅಧ್ಯಾಯವು ಸಮಗ್ರವಾಗಿಯೂ ನೂರ ಮೂರನೆಯ ಅಧ್ಯಾಯದ ಪ್ರಾರಂಭದಲ್ಲಿ ಸ್ವಲ್ಪಭಾಗವೂ ಇವೆ. ಬರೆವಣಿಗೆ ಚೆನ್ನಾಗಿಲ್ಲ. ಶಿಥಿಲ. ಪುರಾತನಪ್ರತಿ. ತಪ್ಪುಗಳೂ ಇವೆ. ಮೇಲೆ ವರ್ಣಿತವಾಗಿರುವ ಗ್ರಂಥವನ್ನು ಹೋಲುತ್ತದೆ. ಕವಿಯಾರು ಎಂಬುದಾಗಿ ತಿಳಿಯಬರುವುದಿಲ್ಲ. ಭಾಷೆಯು ಶುದ್ಧವಾದುದಲ್ಲ.

No. 93. ಭಾರತ (ವಚನ).
BHĀRATA (PROSE).

Substance, Śrītāla. Size, 19 × 1¾ inches. Pages, 236. Lines, 10 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Sabhāparva complete.

A rendering in Kanarese prose of the Sabhāparva of the Sanskrit Mahābhārata; by Kalale Nanjarāja. For other particulars see under the previous No.

Beginning:

ಕಂದ ॥ ಅಗಣಿತಗುಣ ರತ್ನಾಕರ ।
ನಿಗಮಾಗಮವೇದ್ಯ ಹೃದ್ಯ ನಿರ್ಮಲಚರಿತಾ ॥
ಸುಗಣಾಂತರಂಗ ಭಾಸುರ ।
ನಗರಾಜ ಸುತಾಹೃದೀಶ ನಂಜುಂಡೇಶಾ ! ॥

ವಚನ ॥ ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮಹರ್ಷಿಗಳನ್ನು ಕುರಿತು ಇಂತೆಂದನು :—ಕೇಳಿರೈ ಮಹರ್ಷಿಗಳಿರಾ !

ಆ ಬಳಿಕ ಜನಮೇಜಯರಾಯನು ವೈಶಂಪಾಯನ ಮುನೀಶ್ವರನಂ ನೋಡಿ, ಎಲೈ ವೈಶಂಪಾಯನ ಮುನೀಶ್ವರನೆ! ಜಯಶೀಲನಾದ ಅರ್ಜುನನು ಖಾಂಡವವನದಲ್ಲಿ ಯಜ್ಞೇಶ್ವರನ ದೆಸೆಯಿಂದ ಆ ಮಯನನ್ನು ತಪ್ಪಿಸಿ, ರಕ್ಷಿಸಿದ ಬಳಿಕ ಏನು ಮಾಡಿದನು ? ಅದನ್ನೆಲ್ಲವನ್ನೂ ಸವಿಸ್ತಾರವಾಗಿ ಹೇಳಬೇಕೆನಲು ವೈಶಂಪಾಯನ ಮುನೀಶ್ವರನಿಂತೆಂದನು :—

ಕೇಳು ಜನಮೇಜಯನೆ! ನಿಮ್ಮ ವಂಶದ ಚರಿತವನ್ನು ಹೇಳುತ್ತಲಿದ್ದೇನೆ. ಸಾವಧಾನಚಿತ್ತನಾಗಿ ಕೇಳು. ಸರ್ವಾಸ್ತ್ರವಿಶಾರದನಾದ ಅರ್ಜುನನು ಈ ಪ್ರಕಾರದಿಂದ ಆ ಮಯನನ್ನು ರಕ್ಷಿಸಿ, ಧನುಶ್ರೇಷ್ಟವಾದ ಗಾಂಡೀವವನ್ನೂ ಅಕ್ಷಯಬಾಣಗಳುಳ್ಳ ಬತ್ತಳಿಕೆಗಳನ್ನೂ, ಮಿಕ್ಕಾದ ರಾಯರಿಗೆ ದುರ್ಲಭವಾದ ದಿವ್ಯಾಸ್ತ್ರಗಳನ್ನೂ ಬಿಳೀ ಕುದುರೆಗಳೊಡನೆ ಕೂಡಿದ ಪತಾಕಾಲಂಕೃತವಾದ ದಿವ್ಯರಥವನ್ನೂ ಯಜ್ಞೇಶ್ವರನ ಅನುಗ್ರಹದಿಂದ ಕೈಕೊಂಡು ಸಂತೋಷಪಡುತ್ತ, ಮಯನೊಡನೆ [ಸಹ] ಸುಖವಾಗಿರುವ ಸಮಯದಲ್ಲಿ ಮಯನು ತನಗೆ ಅರ್ಜುನನು ಮಾಡಿದ ಉಪಕಾರವನ್ನು ಸ್ಮರಿಸುತ್ತ, ಕೈಮುಗಿದು ಬಹುಪ್ರಕಾರವಾಗಿ ಸ್ತುತಿಸಿ, ಶ್ರೀ ಕೃಷ್ಣಸ್ವಾಮಿಯ ಸಮೀಪದಲ್ಲಿ ಅರ್ಜುನನಂ ನೋಡಿ, ಎಲೈ ವೀರಶ್ರೇಷ್ಠನೆ! ಖಾಂಡವವನದಲ್ಲಿ ಯಜ್ಞೇಶ್ವರನು ಜ್ವಾಲಾ ಸಮೂಹದಿಂದ ದಹಿಸುವ ಸಮಯದಲ್ಲಿ ಕೃಷ್ಣಸ್ವಾಮಿಯು ರಕ್ಷಿಸಬೇಡಾ ಎಂದು ತಡೆದರೂ ದಯೆಯಿಂದ ನನ್ನ ಪ್ರಾಣಸಂರಕ್ಷಣೆಯನ್ನು ಮಾಡಿದಂಥಾ ನಿನಗೆ ನಾನು ಏನು ಪ್ರತ್ಯುಪಕಾರಮಂ ಮಾಡಿಯೇನು? ಆದರೂ ದಾನವರಿಗೆ ವಿಶ್ವಕರ್ಮನಾದ ನಾನು ಮತ್ತೊಬ್ಬರಿಗೆ ಅಸಾಧ್ಯವಾಗಿ ಆಶ್ಚರ್ಯಕರವಾಗಿ ಪ್ರಿಯವಾದ ಒಂದು ಸಭೆಯನ್ನೂ ವಸ್ತುವಿನನ್ನೂ (?) ನಿರ್ಮಿಸಿ ತಂದು ಒಪ್ಪಿಸಬೇಕೆಂದು ನಿಶ್ಚಯಿಸಿದ್ದೇನೆ—ಎನಲು ಅರ್ಜುನನು ಒಂದು ಮುಹೂರ್ತಮಾತ್ರ ಯೋಚಿಸಿ, ಮಾಯೋಪಾಯಜ್ಞನಾದ ಮಯನನ್ನು ನೋಡಿ, ಮಂದಸ್ಮಿತದಿಂದ, ಎಲೈ ಮಯನೆ! ನಾನು ಒಬ್ಬನಿಗೆ ಉಪಕಾರವನ್ನು ಮಾಡುವುದೇ ಹೊರತು, ಅದಕ್ಕಾಗಿ ಅವನ ದೆಸೆಯಿಂದ ಪ್ರತ್ಯುಪಕಾರವನ್ನು ಪಡೆಯುವುದು ನನ್ನ ವ್ರತವಲ್ಲ. ನೀನು ಸಕಲವನ್ನೂ ಕೊಟ್ಟ ಹಾಗೆಯೇ ಸರಿ. ನಮಗೆ ಅನ್ಯೋನ್ಯವಾಗಿ ಸ್ನೇಹವಿರುವುದೇ ಸಾಕು ನಿನಗೆ ಸಕಲ ಸೌಖ್ಯವು ಆಗಲಿ, ಯಥೇಚ್ಛವಾಗಿ ಹೋಗು—ಎನಲು,

* * * *

ಆ ಬಳಿಕ ಕೃಷ್ಣಾರ್ಜುನರು ಮಯನನ್ನು ಕರೆದುಕೊಂಡು ಹೋಗಿ ಧರ್ಮರಾಯನಿಗೆ ಕಾಣಿಸಿ ಆ ವೃತ್ತಾಂತವನ್ನು ಹೇಳಲು ಧರ್ಮರಾಯನು ಆತನನ್ನು ಕೂತುಕೊಂಬುವ ಹಾಗೆ ಕಟ್ಟುಮಾಡಿ, ಯಥೋಚಿತವಾಗಿ ಬಹುಮಾನವನ್ನು ಮಾಡಲು, ಮಯನು ಸಂತೋಷಪಟ್ಟು ಮೊದಲು ದಾನವರ ಚರಿತ್ರಗಳನ್ನು ವಿಶದವಾಗಿ ಹೇಳುತ್ತ, ಕೆಲವು ದಿವಸಂಗಳದ್ದು ಒಂದು ಶುಭದಿನದಲ್ಲಿ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡಿ, ಪಾಯಸಾನ್ನದಿಂದ ಅನೇಕಮಂದಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ಅವರಿಗೆ ಬಹುಪ್ರಕಾರವಾಗಿ ಧನವನ್ನು ಕೊಟ್ಟು ವಿಶ್ವಕರ್ಮನನ್ನು ಸ್ಮರಿಸಿ, ಕೃಷ್ಣಾರ್ಜುನರ ಅಪ್ಪಣೆಯಿಂದ ದರ್ಮರಾಯನಿಗೆ ಸಕಲ ಋತುಸಂಪತ್ತಿಯುಳ್ಳಂಥಾದ್ದಾಗಿ ದಿವ್ಯರೂಪವುಳ್ಳಂಥಾ ಒಂದು ಸಭಾವನವನ್ನು ನಿರ್ಮಿಸುವುದಕ್ಕೆ ಎಣಿಸಿ, ನಾಲ್ಕು ದಿಕ್ಕುಗಳಲ್ಲಿ ಹತ್ತುಸಾವಿರ ಹಸ್ತಪ್ರಮಾಣವುಳ್ಳ ಭೂಮಿಯನ್ನು ಅಳತೆಮಾಡಿದನು ಎಂದು ವೈಶಂಪಾಯನ ಮುನೀಶ್ವರನು ಜನಮೇಜಯರಾಯನಿಗೆ ತಿಳುಹಿಸಿದನೆಂದು ಸೂತ್ರಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮಹರ್ಷಿಗಳಿಗೆ ನಿರೂಪಿಸಿದನು.

Colophon:

ಇಂತು ಕರ್ಣಾಟ ಭಾಷಾವಿರಚಿತವಾದ ಶ್ರೀಮಹಿಸೂರ ಸೇನಾಧಿಪ ದೊಡ್ಡರಾಜಪೌತ್ರ, ವೀರರಾಜತನೂಜ, ದಳಪತಿ ದೇವರಾಜಾನುಜ, ಕಳಲೆ ನಂಜರಾಜವಿರಚಿತವಾದ ವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯಟೀಕೆನಲ್ಲಿ ವ್ಯಾಸಕೃತವಾದ ಲಕ್ಷಗ್ರಂಥಸಂಖ್ಯೆಯುಳ್ಳ ಸಂಹಿತೆಯಲ್ಲಿ ಸಭಾಪರ್ವದಲ್ಲಿ ಸಭಾಕರಣವೆಂಬ ಮೊದಲನೆಯ ಅಧ್ಯಾಯಾರ್ಥ ಸಮಾಪ್ತಂ.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು ಇಂತೆಂದನು :—

* * * *

ಸಹದೇವನ ಕರೆದು ಕೃಷ್ಣಸ್ವಾಮಿಗೆ ಪೂಜೆಯನ್ನು ಮಾಡು ಎನಲು, ಆತನು ಹಸುವನ್ನೂ ಅರ್ಘ್ಯವನ್ನೂ ಮಧುಪರ್ಕವನ್ನೂ ಕೃಷ್ಣಸ್ವಾಮಿಗೆ ಕೊಟ್ಟು, ಆತನ ಪಾದಗಳನ್ನು ಮುಟ್ಟಿ ನಮಸ್ಕಾರಮಾಡಲು, ಆ ಕೃಷ್ಣಸ್ವಾಮಿ[ಯು](ಯು ಸಹದೇವನ)ನ್ನು ತಬ್ಬಿಕೊಂಡು ಶಿರಸ್ಸನ್ನು ಆಘ್ರಾಣಮಾಡುತ, ಅತನ ಕುಶಲ ಪ್ರಶ್ನೆಯನ್ನು ಮಾಡಲು, ಮಾದ್ರೀಸುತನು ನಿಮ್ಮ ಕಟಾಕ್ಷದಿಂದ ಸಕಲವೂ ಕುಶಲವೆಂದು ನುಡಿಯುವ ಸಮಯದಲ್ಲಿ ಸಮಸ್ತರಾದ ಅರಸುಗಳು ಒಬ್ಬೊಬ್ಬರೂ ಮುಖಗಳ ನೋಡುತ ಏನೂ ಎನಲಾರದೆ ಸುಮ್ಮನೆ ಇರಲು, ಆ ಸಮಯದಲ್ಲಿ ಶಿಶುಪಾಲನು ಕೋಪೋದ್ದೀಪಿತನಾಗಿ ಆತನನ್ನು ಪೂಜಿಸಿದುದಕ್ಕೆ ಸಹಿಸಲಾರದೆ, ಧರ್ಮರಾಯನನ್ನೂ, ಭೀಷ್ಮನನ್ನೂ ನಿಂದಿಸುತ್ತ ಸಭೆಯಲ್ಲಿರುವವರನ್ನು ನೋಡಿ ; ಯಾರನ್ನು ಪೂಜಿಸುವೆನೆಂದು ಕೇಳುವಂಥಾವನು ಒಂದು ವಿಜಾತಿಯಲ್ಲಿ ಹುಟ್ಟಿದಂಥಾವನು, ಈತನನ್ನು ಪೂಜಿಸು - ಎಂದು ನೇಮಿಸುವಂಥಾವನು ಒಂದು ನದೀಮಗನು, ಪೂಜೆಯನ್ನು ತಕ್ಕೊಂಬಂಥಾವನು ಗೊಲ್ಲನು, ಪೂಜೆಮಾಡುವಂಥಾವನು ಒಂದು ಜಾತ್ಯಂತರದಲ್ಲಿ ಹುಟ್ಟಿದಂಥಾವನು, ಹೀಗೆ ಅಷ್ಟು ಮಂದಿಯೂ ವಿಜಾತಿಯವರೆ ಕೂಡಿದ್ದರೂ ಇದು ಬಹು ಚೆಂದವಾಯಿತು. ಮಹಾಕುಲ ಸಂಭವರಾದ ಈ ಅರಸುಗಳು ಸುಮ್ಮನೇ ಇದಾರೆ, ಎಂದು ಹಾಸ್ಯವನ್ನು ಮಾಡುತ, ಮತ್ತು ಧರ್ಮರಾಯನನ್ನು ಕುರಿತು ಮಹಾನುಭಾವರಾದಂಥಾ ಅರಸುಗಳಿರಲು, ಈ ಅರಸುಗಳ ಮಹಾತ್ಮ್ಯವನ್ನು ತಿಳಿದೋ, ತಿಳಿಯದೆಯೋ, ಉಪೇಕ್ಷೆಯಿಂದಲೋ ಇಂಥಾವರನ್ನು ಬಿಟ್ಟು ಯಾವವನನ್ನು ಪೂಜಿಸಿದೆ. ಲೋಕದಲ್ಲಿ ಪೂಜ್ಯರಮಾಹಾತ್ಮ್ಯವನ್ನು ತಿಳಿಯದೇ ಹೋಗುವುದೂ, ತಿಳಿದು ಉಪೇಕ್ಷೆಯನ್ನು ಮಾಡುವುದೂ ಈ ಎರಡು ವಿನಾಶಕ್ಕೆ ಕಾರಣವಾಗಿರುವುದು. ಈ ಎರಡರೊಳಗೆ ಯಾವುದನ್ನು ಕುರಿತು ಮಾಡಿದೆ ?

End :

ಮೊದಲು ಆ ಪ್ರತಾಪಶಾಲಿಯಾದ ಜರಾಸಂಧನನ್ನು ಭೀಮನು ಬಾಹು ಯುದ್ಧದಿಂದ ಕೊಂದದ್ದು ನೀನು ಅರಿಯೆಯಾ ? ಅದರಿಂದ ಈ ಪಾಂಡವರ ಕೂಡೆ ಸ್ನೇಹಮಾಡಿಕೊಂಬುವುದು ಉಭಯಪಕ್ಷದವರಿಗೂ ಲೇಸು - ಎಂದು ಈ ಪ್ರಕಾರದಿಂದ ಧರ್ಮಾರ್ಥಸಹಿತವಾಗಿ ನುಡಿಯಲು, ನಾನು ಪುತ್ರಸ್ನೇಹಮೋಹಿತನಾಗಿ ಕೇಳದೆ ಹೋದೆನು. ಎಂದು ಧೃತರಾಷ್ಟ್ರನು ವಿದುರನಿಗೆ ಹೇಳಿದನು - ಎಂದು ವೈಶಂಪಾಯನಮಹಾಮುನೀಂದ್ರನು ಜನಮೇಜಯ ರಾಯನಿಗೆ ತಿಳುಹಿದನು - ಎಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮಹಾಮುನಿಗಳಿಗೆ ನಿರೂಪಿಸಿದನು.

Colophon :

* * * *

ಅನಂತರದಲ್ಲಿ ವೈಶಂಪಾಯನ ಮುನೀಶ್ವರನು ಜನಮೇಜಯರಾಯನಂ ಕುರಿತು ಇಂತೆಂದನು :—ಕೇಳು ಜನಮೇಜಯನೆ ! ಈ ಸಭಾಪರ್ವದ ಅರ್ಥವನ್ನು ಸಂಕ್ಷೇಪವಾಗಿ ಹೇಳುತ್ತಲಿದ್ದೇನೆ, ಖಾಂಡವವನದಹನಾನಂತರದಲ್ಲಿ ಮಯನು ಕೃಷ್ಣಾರ್ಜುನರ ಸನ್ನಿಧಾನಕ್ಕೆ ಬಂದದ್ದು, ಕೃಷ್ಣನು ದ್ವಾರಕಾ ಪಟ್ಟಣಕ್ಕೆ ಹೋದದ್ದು, ಮಯನು ದಿವ್ಯ ಸಭಾಭವನವನ್ನು ನಿರ್ಮಿಸಿ ಪಾಂಡವರಿಗೆ ತಂದು ಕೊಟ್ಟದ್ದು, ಆ ಸಭಾಭವನದಲ್ಲಿ ಓಲಗದಲ್ಲಿರುವ ಪಾಂಡವರ ಸನ್ನಿಧಾ

ನಕ್ಕೆ ಸಮಸ್ತರಾದ ಅರಸುಗಳೂ ಋಷೀಶ್ವರರೂ ಬಂದದ್ದು, ನಾರದನು ಬಂದದ್ದು, ರಾಜನೀತಿಯ ಪ್ರಶಂಸೆ, ಇಂದ್ರಾದಿ ಲೋಕಪಾಲಕರ ಸಭಾವರ್ಣನೆ, ಹರಿಶ್ಚಂದ್ರನ ಮಾಹಾತ್ಮ್ಯವನ್ನು ಹೇಳಿದ್ದು, ರಾಜಸೂಯ ಯಾಗಮಾಡಬೇಕೆಂಬ ಇಚ್ಛೆ, ಕೃಷ್ಣಸ್ವಾಮಿಯು ಬಂದದ್ದು, ರಾಜವಂಶಗಳು ಹುಟ್ಟಿದ್ದು, ಜರಾಸಂಧನ ವೈಭವ, ಆ ಪರಾಕ್ರಮವರ್ಣನೆ, ಅರ್ಜುನನು ತನ್ನ ಶೌರ್ಯವನ್ನು ಧರ್ಮರಾಜನಿಗೆ ತಿಳಿಸಿದ್ದು, ಜರಾಸಂಧನು ಹುಟ್ಟಿದ ಪ್ರಕಾರವು, ಚಂಡಕೌಶಿಕನು ಜರಾಸಂಧನಿಗೆ ವರವನ್ನು ಕೊಟ್ಟದ್ದು, ಹಂಸಡಿಂಭಕರ ವಧೆ, ಕೃಷ್ಣ, ಬೀಮಾರ್ಜುನರು ಜರಾಸಂಧನ ವಧಾರ್ಥವಾಗಿ ಹೊರಟದ್ದು, ದೀರ್ಘತಮೋಪಾಖ್ಯಾನವು, ಗಿರಿವ್ರಜಪಟ್ಟಣವನ್ನು ಪ್ರವೇಶಿಸಿದ್ದು, ಬೀಮ ಜರಾಸಂಧರ ಮಲ್ಲಯುದ್ಧಾರಂಭ, ಕೃಷ್ಣಜರಾಸಂಧರಿಗೆ ವಿರೋಧ ಬಂದ ಪ್ರಕಾರ, ಕಂಸನ ವೃತ್ತಾಂತವು, ಕೃಷ್ಣಚರಿತ್ರೆಯು, ಬೀಮಜರಾಸಂಧರ ಬಾಹುಯುದ್ಧವು, ಜರಾಸಂಧನು ಪರಲೋಕಕ್ಕೆ ಹೋದದ್ದು, ಅತನ ಕುಮಾರನಿಗೆ ಪಟ್ಟವನ್ನು ಕಟ್ಟಿದ್ದು, ಅರಸುಗಳ ಕಷ್ಟವನ್ನು ಸೆರೆಯ ದೆಸೆಯಿಂದ ಬಿಡಿಸಿದ್ದು, ಇಂದ್ರಪ್ರಸ್ಥಪ್ರವೇಶ, ಕೃಷ್ಣನು ದ್ವಾರಾವತೀಪಟ್ಟಣಕ್ಕೆ ಹೋದದ್ದು, ರಾಜಸೂಯ ಯಾಗಾರಂಭವು, ಬೀಮಾರ್ಜುನ, ನಕುಲ, ಸಹದೇವರ ದಿಗ್ವಿಜಯ, ಸಕಲಧನರತ್ನಕಾಂಚನಪ್ರಾಪ್ತಿಯು, ಕೃಷ್ಣನು ಬಂದದ್ದು, ರಾಜಸೂಯ ಯಾಗವನ್ನು ಮಾಡಿದ್ದು, ಆ ಸಮಯದಲ್ಲಿ ಸಕಲರಾದ ಅರಸುಗಳು ಕಪ್ಪಗಳನ್ನು ತಂದು ಕೊಟ್ಟದ್ದು, ಕೃಷ್ಣನಿಗೆ ಅಗ್ರಪೂಜೆ ಮಾಡಿದ್ದು, ಶಿಶುಪಾಲನು ನಿಂದಿಸಿದ್ದು, ಸಹದೇವನ ಕೋಪ, ಬೀಮನು ಧರ್ಮರಾಜನಿಗೆ ಕೃಷ್ಣನ ಮಹಾತ್ಮ್ಯವನ್ನು ತಿಳಿಸಿದ್ದು, ಪೌಷ್ಕರಾವತಾರವು, ಜಗದುತ್ಪತ್ತಿಪ್ರಕಾರವು, ಮಧುಕೈಟಭಸಂಹಾರವು, ವರಾಹಾವತಾರವು, ನೃಸಿಂಹಾವಿರ್ಭಾವವು, ವಾಮನಾವತಾರವು, ದತ್ತಾತ್ರೇಯಾವಿರ್ಭಾವವು, ಕಾರ್ತವೀರ್ಯಾರ್ಜುನಚರಿತ್ರೆ, ಪರಶುರಾಮಪ್ರಾದುರ್ಭಾವವು, ರಾಮಾವತಾರವರ್ಣನೆ, ತಾರಕಾಸುರಯುದ್ಧ, ಪ್ರಜಾಭಾರಪೀಡಿತಳಾದ ಭೂದೇವಿಯು ನಾರಾಯಣನ ಸನ್ನಿಧಾನಕ್ಕೆ ಹೋಗಿ ತನ್ನ ಬಾಧೆಯನ್ನು ಹೇಳಿಕೊಂಡದ್ದು, ಬಲರಾಮಾವಿರ್ಭಾವವು, ಕೃಷ್ಣಾವತಾರವು, ದೇವತೆಗಳೆಲ್ಲಾ ಅರಸುಗಳಾಗಿ ಭೂಮಿಯಲ್ಲಿ ಹುಟ್ಟಿದ್ದು, ಕೃಷ್ಣನ ದಿವ್ಯಚರಿತ್ರೆ, ಕಂಸನ ಸಂಹಾರ, ದೇವೇಂದ್ರನು ಬಂದದ್ದು, ನರಕಾಸುರವಧೆ, ಕೃಷ್ಣನು ಹದಿನಾರುಸಾವಿರ ಕನ್ಯೆಯರನ್ನೂ ವಿವಾಹಮಾಡಿಕೊಂಡದ್ದು, ದ್ವಾರಕಾವರ್ಣನೆ, ಕೃಷ್ಣವೈಭವ ಪ್ರಶಂಸೆ, ಬಾಣಾಸುರನ ಗರ್ವಭಂಗ, ಬೀಷ್ಮನ ಮೇಲೆ ಶಿಶುಪಾಲನು ಮೊದಲಾದ ಅರಸುಗಳು ಕೋಪಿಸಿಕೊಂಡದ್ದು, ದುಶ್ಶಕುನಲಕ್ಷಣ, ಕೃಷ್ಣ ಶಿಶುಪಾಲರ ದ್ವಂದ್ವಯುದ್ಧ, ಶಿಶುಪಾಲ ವಧೆ, ರಾಜಸೂಯ ಸಮಾಪ್ತಿ, ಸಮಸ್ತ ಅರಸುಗಳನ್ನೂ ಅವರವರ ದೇಶಗಳಿಗೆ ಕಳುಹಿಸಿದ್ದು, ಕೃಷ್ಣನು ದ್ವಾರಕೆಗೆ ಹೋದದ್ದು, ಸಭಾಭವನದಲ್ಲಿ ದುರ್ಯೋಧನನು ಭಂಗಪಟ್ಟದ್ದಕ್ಕೆ ಬೀಮಸೇನನು ಮೊದಲಾದವರು ಹಾಸ್ಯಮಾಡಿದ್ದು, ಆ ಪಾಂಡವರ ವೈಭವವನ್ನು ನೋಡಿ ದುರ್ಯೋಧನನು ದುಃಖಪಟ್ಟದ್ದು, ಶಕುನಿಯು ಸಂತವಿಟ್ಟದ್ದು, ದ್ಯೂತವಾಡಬೇಕೆಂದು ಧೃತರಾಷ್ಟ್ರನಿಗೆ ಅರಿಕೆಮಾಡಿದ್ದು, ಆ ಧೃತರಾಷ್ಟ್ರನು ಆಡಬೇಡ ಎಂದು ಹೇಳಿದ್ದು, ದುರ್ಯೋಧನನು ರಾಜಸೂಯಮಹತ್ವವನ್ನೂ ಪಾಂಡವರ ಮಹಾವೈಭವವನ್ನೂ ಧೃತರಾಷ್ಟ್ರನಿಗೆ ತಿಳಿಸಿದ್ದು, ಆ ಧೃತರಾಷ್ಟ್ರನು ಜೂಜಾಡಬೇಡವೆಂದು ಬುದ್ಧಿ ಹೇಳಿದ್ದು, ವಿದುರನೀತಿ, ವಿಧಿಪ್ರೇರಿತನಾಗಿ ಧೃತರಾಷ್ಟ್ರನು ವಿದುರನನ್ನು ಕಳುಹಿಸಿ ಪಾಂಡವರನ್ನು ಕರೆಯಿಸಿದ್ದು, ದ್ಯೂತಾರಂಭವು, ಆ ಸಮಯದಲ್ಲಿ ವಿದುರನು ಧೃತರಾಷ್ಟ್ರನಿಗೆ ನೀತಿ ಹೇಳಿದ್ದು, ದ್ಯೂತ(ನ)ಸಮಾಪ್ತಿ, ದ್ರೌಪತಿಯ ಭಂಗ, ವಸ್ತ್ರಾಪಹರಣ, ಬೀಮಾರ್ಜುನರು ಕೋಪದಿಂದ ಪ್ರತಿಜ್ಞೆಗಳನ್ನು ಮಾಡಿದ್ದು, ಕೌರವಗೃಹದಲ್ಲಿ ದುಶ್ಶಕುನ, ಧೃತರಾಷ್ಟ್ರನು ದ್ರೌಪದಿಗೆ ವರಗಳನ್ನು

ಕೊಟ್ಟದ್ದು, ಪಾಂಡವರು ದಾಸಭಾವವಿಮುಕ್ತರಾಗಿ ತಮ್ಮ ಪಟ್ಟಣಕ್ಕೆ ಹೋದದ್ದು, ಪುಣ್ಯಾಥ ನನು ಧೃತರಾಷ್ಟ್ರನಿಗೆ ಅರ್ಜುನಪ್ರತಾಪವನ್ನು ವಿಸ್ತಾರವಾಗಿ ಹೇಳಿದ್ದು, ತಿರುಗಿ ದ್ಯೂತವಾಡಿ ದ್ದು, ಪಾಂಡವರಿಗೆ ವಿದುರನು ನೀತಿವಾಕ್ಯಗಳನ್ನು ತಿಳುಹಿಸಿದ್ದು, ಪಾಂಡವರ ವನವಾಸಗಮನ, ಪೌರಜನಂಗಳು ದುಃಖಿಸಿದ್ದು, ನಾರದನು ಕೌರವವಿನಾಶವನ್ನು ಹೇಳಿದ್ದು, ಧೃತರಾಷ್ಟ್ರನ ಮಕ್ಕಳು ಭಯಪಟ್ಟು ದ್ರೋಣಾಚಾರ್ಯರ ಶರಣುವನ್ನೈದಿದುದು, ಆ ದ್ರೋಣನು ಅರ್ಜುನನ ಪ್ರತಾಪವನ್ನು ತಿಳುಹಿಸಿದ್ದು, ಸಂಜಯನೀತಿ ಇವು ಮೊದಲಾದ ಕಥೆಗಳೊಡನೆ ಕೂಡಿ ೧೧೫ ಅಧ್ಯಾಯಗಳುಳ್ಳ ಸಭಾಪರ್ವವನ್ನು ಕೇಳಿದವರು, ಓದಿದವರು, ಬರೆದವರು.

* * * *

ಇತಿ ಶ್ರೀಮದಮಿತನಮಿತಾಂಭೋಜಸಂಭವಜಂಭಾರಿಪ್ರಮುಖನಿಖಿಲಸುರಾಸುರವಂದ್ಯಮಾನ ಗರಳಪುರಾಧಿನಾಥಚರಣಾರವಿಂದಸೇವಾಸಮಾಸಾದಿತಗೀರ್ವಾಣಾಂಧ್ರಕರ್ಣಾಟಾದಿನಾನಾ ಭಾಷಾ ವಿಶೇಷಕಾವ್ಯರಚನಾಚಾತುರೀಧುರೀಣ ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ರಾಜಮಾ ರ್ತಾಂಡ, ಪ್ರೌಢಪ್ರತಾಪಾಪ್ರತಿಮವೀರನರಪತಿಬಿರುದೆಂತೆಂಬರಗಂಡಬಿರುದಾಂಕಿತಶಂಖಚಕ್ರಮ ಕರಮತ್ಸ್ಯಹನೂಮದ್ಗರುಡಗಂಡಭೇರುಂಡಸಿಂಹಶರಭಸಾಳ್ವಾದಿನಾನಾವಿಧ ಧ್ವಜಬಿರುದಾಂಕಿತ ಸಕಲದೇಶಾಧೀಶಕಿರೀಟಕೋಟಿಮಣಿಘೃಣಿನೀರಾಜಿತಚರಣಯುಗಳಯಾದವವಂಶತಿಲಕಮಹೀಶೂ ರ ಕೃಷ್ಣರಾಜಸೇನಾಧಿಪದೊಡ್ಡರಾಜಪೌತ್ರ ವೀರರಾಜತನೂಜದಳಪತಿ ದೇವರಾಜಾನುಜಪರ ರಾಜಮದೇಭಪಂಚಾನನ, ದಾನಕ್ಷಾತ್ರಾಧೀಶ್ವರ ಹನುಮದ್ಧ್ವಜಬಿರುದಾಂಕಿತ ಶಿವಪೂಜಾಧುರಂ ಧರಭಾರದ್ವಾಜಸಗೋತ್ರಾಶ್ವಲಾಯನಸೂತ್ರ ಋಕ್ಶಾಖಾಧ್ಯಾಯಿಕವಿಬುಧಜನವಿಧೇಯರಾಜ ಮಾನ್ಯರಾಜಶ್ರೀ ಕಳಲೆ ನಂಜರಾಜವಿರಚಿತವಾಗಿ ಕರ್ಣಾಟಭಾಷಾವಿರಚಿತವಾದ ನಂಜರಾಜ ವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯಟೀಕಿನಲ್ಲಿ ಸಭಾಪರ್ವಂ ಸಂಪೂರ್ಣಂ.

(ವಿ.ವಿ.)—

ಸಭಾಪರ್ವ ಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಸ್ವಲ್ಪ ಶಿಥಿಲ. ಗ್ರಂಥ ಪಾತವಿಲ್ಲ. ಹಿಂದೆ ವರ್ಣಿತವಾದ ಗ್ರಂಥದಂತೆಯೇ ಇದೂ ಕಳಲೆ ನಂಜರಾಜ ವಿರಚಿತವಾದು ದು. ಮಿಕ್ಕ ವಿಷಯಗಳನ್ನು ಹಿಂದಿನ ೯೩ ನೆಯ ನಂಬರಿನಲ್ಲಿ ನೋಡಿ ತಿಳಿಯತಕ್ಕದು.

No. 94. ಭಾರತ (ವಚನ).

BHĀRATA (PROSE).

Substance, Śrītāla. Size, $19\frac{3}{8} \times 1\frac{5}{8}$ inches. Pages, 76. Lines, 7 on a page. Character, Kanarese. Condition, injured. Appearance, old. Mode of writing, good and free from mistakes.

Contains from the middle of the first Adhyāya to the end of the 20th Adhyāya in the Sabhāparva.

[Same work as the above; by Kalale Nañjarāja.

(ವಿ.ವಿ.)—

ಸಭಾಪರ್ವದಲ್ಲಿ ಮೊದಲಿನ ಇಪ್ಪತ್ತು ಆಶ್ವಾಸಗಳವೆ. ಆದರೆ ಪ್ರಾರಂಭದಲ್ಲಿ ಮೊದಲನೆಯ ಓಲೆ ಯಿಲ್ಲ. ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಮಿಕ್ಕ ವಿಷಯಗಳನ್ನು ಹಿಂದಣ ೪೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 95. ಭಾರತ (ವಚನ)-

BHĀRATA (PROSE).

Substance, palm-leaf. Size, 14 × 1¼ inches. Pages, 44. Lines, 6 on a page. Character, Nandināgari. Condition, slightly injured. Appearance, old. Mode of writing, fair but not free from mistakes.

Contains the Sandhis 10—26 complete and 27th incomplete in the Sabhāparva.

A rendering in Kanarese prose of the Sabhāparva of the Sanskrit Mahābhārata. The name of the author is not given.

Beginning:

ಸರೊಡನೆ ಕಡ (?) ಪ್ರಭುವಾಗಿದ್ದಂಥ ಕುಬೇರನನ್ನು (?) ಅನುಭೋಗಿಸುತ್ತಿದ್ದನು:— ನಿಧಿಗಳಿಗೆ ಶ್ರೇಷ್ಠವಾದ ಶಂಖಪದ್ಮಗಳು ಸಮಸ್ತವಾದ ನಿಧಿಗಳನ್ನು ಕರಕೊಂಡ ದೇಹವಿಡಿದು ಉಪಾಸನ ಮಾಡುತ್ತಿಲ್ಲವು. ಖಿನ್ನನೆನಿಸಿಕೊಂಬ ಗಂಧರ್ವನಿಗೂ, ನರನೆನಿಸಿಕೊಂಬ ಗಂಧರ್ವರೂ, ಮಣಿಭದ್ರನೂ ಶ್ವೇತಭದ್ರನೂ, ಸ್ಥಾಣುವೂ, ಸೂರ್ಯಭಾನು (?) ವೂ ಶೋಣಕನೂ, ತಿಂದುಕನೂ, ದ್ರುಮನೂ, ಗಜಕರ್ಣನೂ, ವರಾಹಕರ್ಣನೂ ಪಾಥಕರ್ಣನೂ, ಪಾಥೋದಕನೂ, ಪುಷ್ಪಾನ . . . . ಶೋಣಿತಾಶನೂ ಪಿಶಾಚ ಧನನಿಕೇತನೂ, ಚಿತ್ರವಾಸನೂ, ಇನ್ನೂ ಅನೇಕ ಲಕ್ಷವುಂದಿ ಯಕ್ಷಗೂ ಮಹಾಲಕ್ಷ್ಮಿಯೂ (?) ನಳಕೂಬರರೂ ಹಿಮವತ್ಪರ್ವತನೂ, ಪಾಪಾರಿಯಾತ್ರನೂ, ವಿಂಧ್ಯಪರ್ವತ, ಕೈಲಾಸಪರ್ವತ, ಮಂದರಪರ್ವತ, ಮಲಯಪರ್ವತ, ದರ್ದರಪರ್ವತ, ಮಹೇಂದ್ರಪರ್ವತ, ಗಂಧಮಾದನ ಪರ್ವತ, ಇಂದ್ರಕೀಲ ಪರ್ವತ, ಸುಣಭಪರ್ವತ ಇನ್ನೂ ಅನೇಕ ಮಂದಿ (?) ಪರ್ವತಗಳೂ ಗುರ್ವೀಕರಿಸಿ ಮೇರುಪರ್ವತವನುಂದಿಟ್ಟುಕೊಂಡು ಮಹಾತ್ಮನಾದ ಕುಬೇರನನ್ನು ಉಪಾಸನೆ ಮಾಡುತ್ತಿದ್ದಾವು.

* * * *

ಇದೀಗ ಕುಬೇರನ ಸಬಾ ವೃತ್ತಾಂತ. ಅದು ಅಂತರಿಕ್ಷದಲ್ಲಿ ಇರುವುದು. ಇನ್ನು ಬ್ರಹ್ಮದೇವರ ಸಭೆಯನ್ನು ಹೇಳುವೆನು ಕೇಳು.

Colophon:

ಇತಿ ಸಭಾಪರ್ವಣಿ ದಶಮೋಧ್ಯಾಯ :—

ಎಲಿಲಾ ! . . . .

End :

ತದನಂತರದಲ್ಲಿ ಅಜಿತನಾದ ಜರಾಸಂಧನನ್ನು ಜೈಸಬೇಕಾಗಿ ಭೀಮಸೇನನು ಕೋಪದಿಂದ ಜರಾಸಂಧನನು ಹಿಡಿದನು.

Colophon :

ಇತಿ ಸಭಾಪರ್ವಣಿ ಷಡ್ವಿಂಶೋಧ್ಯಾಯ :—

ಆಗ ಭೀಮಸೇನನು ಜರಾಸಂಧನನ್ನು ಕೊಲಲಿಷ್ಟದಿಂದ ಸುಸ್ಥಿರವಾದ ಬುದ್ಧಿಯನ್ನು ಆಶ್ರೈಸಿ ಕೃಷ್ಣದೇವರ ಕೂಡೆ ಹೀಗೆಂದನು. ಶ್ರೀಹರಿಯೇ ಈ ಜರಾಸಂಧನು ನಿನ್ನ ಬಂಧುಗಳ ನಾಶವ ಮಾಡಿದನು. ಅದು ಕಾರಣವಾಗಿಯೂ, ಪಾಪಿಷ್ಠನಾದ ಕಾರಣವಾಗಿಯೂ ನನ್ನಿಂದ ವಿರೋಧವಮಾಡಲು ಯೋಗ್ಯನು. ಹೀಗೆಂದು ಭೀಮಸೇನನು ಹೇಳಲಾಗಿ ಕೃಷ್ಣದೇವರು ಪ್ರತಿಯಾಗಿ ನುಡಿದನು. ಎಲೈ! ಪುರುಷ ಶ್ರೇಷ್ಠನಾದ ಭೀಮಸೇನನೇ! ನೀನು ಜರಾಸಂಧನನ್ನು ಕೊಲ್ಲಬೇಕಾಗಿ ನಿನಗೆ ದೈವಲಬ್ಧವಾದ ಬಲವನ್ನೂ, ನಿನ್ನ ತಂದೆಯು ಸಾಮರ್ಥ್ಯವನ್ನೂ, ಈ ಹೊತ್ತು ಜರಾಸಂಧನ ವಧನಿಮಿತ್ತವಾಗಿ ನಮಗೆ ತೋರಿಸು (?)

* * * *

ಭೀಮಸೇನನ ನಾದದಿಂದಲೂ ಜರಾಸಂಧನ ನಾದದಿಂದಲೂ, ಹಿಮವತ್ಪರ್ವತವೆಲ್ಲವೂ ಒಡೆದು ಹೋಯಿತೋ, ಭೂಮಿಯೆಲ್ಲವೂ ಬಿರಿದು ಹೋಯಿತೋ ಎಂದು ಮಾಗಧರೆಲ್ಲರೂ ಯುದ್ಧಾಂಗಣಕ್ಕೈತಂದು ಒಂದು ಕೈಯಿಂದ ಕೈ ಹಿಡಿದುಕೊಂಡು ಮತ್ತೊಂದು ಕೈಯಿಂದ ಕಾಲ ಹಿಡಿದುಕೊಂಡು ಹೊಯ್ದರು.

(ವಿ-ವಿ)—

ಸಭಾಪರ್ವದಲ್ಲಿ ೧೦ ರಿಂದ ೨೬ ಅಧ್ಯಾಯಗಳು ಇವೆ. ೨೭ ನೆಯದು ಅಸಮಗ್ರ. ಅಲ್ಲದೆ ಅಧ್ಯಾಯಗಳು ಅನುಸ್ಯೂತವಾಗಿಲ್ಲ. ಬರವಣಿಗೆ ಸಾಮಾನ್ಯ. ಲಿಪಿ ನಂದಿನಾಗರಿ. ಶಿಥಿಲ. ಗ್ರಂಥಪಾತವಿದೆ. ತಪ್ಪುಗಳುಂಟು. ಕವಿಯಾರೆಂಬುದು ಈ ಗ್ರಂಥದಿಂದ ಸೂಚಿತವಾಗುವುದಿಲ್ಲ.

No. 96. ಭಾರತ (ವಚನ).

BHĀRATA (PROSE).

Substance, Śritala. Size, 12×2 inches. Pages, 230. Lines, 9 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Adhyāyas 1–56 in the Araṇyaparva.

A rendering in Kanarese prose of the Sanskrit Mahābhārata: by Jakkabhūpāla also known as Jakaṇanāyaka son of Juñjarāja. It is stated that he belonged to a royal family and lived in 1620 A.D.

Beginning :

ಕಂದ ॥ ಪರ[ಮ] ಸೌಗಂಧಿಕ[ದ] ಪುಷ್ಪವ।
ನರಸಿಗೆ[ೞ]ತಹೆನೆಂದು ಹೊ[ೞ]ಗು ತ[ಲ]ರೆವಟ್ಟೆಯೊಳೌ ॥
ದರದಿಂ ಭೀಮನು ಕಂಡಂ।
ಮರುತಾತ್ಮಜನಂ ಸುವರ್ಣಕದಳೀ ವನದೊಳ್ ॥

ವಚನ ॥ ಅದೆಂತೆಂದೊಡೆ, ಎಲೈ ವೈಶಂಪಾಯನಮುನೀಶ್ವರಾ! ಬದರಿಕಾಮೂಲದ ನಾರಾಯಣಾಶ್ರಮದಲ್ಲಿ ಧರ್ಮರಾಯನು ತಮ್ಮಂದಿರು ಸಹಿತ ಅರ್ಜುನನಂ ಕಾಣಬೇಕೆಂದು ಆತುರದಿಂದ ಆರು ರಾತ್ರಿಯಲ್ಲಿರ್ದು ಮುಂದೆ ಆ ಪರ್ವತದ ಪಲವು ಗಿಣಿಕೋಗಿಲೆಗಳಿಂದ ಅತ್ಯಂತ ಮನೋಹರವಾದ ನೆಳಲುಗಳುಳ್ಳ ವೃಕ್ಷಂಗಳುಳ್ಳ, ತಿಳಿ ಜಲಂಗಳುಳ್ಳ ಸರೋವರಗಳಿಂದ, ಅಲ್ಲಿ ಕಮಲಕಲ್ಹಾರೋತ್ಪಲಗಳಿಂದೊಪ್ಪುತಿರ್ಪ ವನಂಗಳಲ್ಲಿ, ಪಾಂಡವರು ವಿಹರಿಸುತ್ತಲಿರುತಿರ್ಪ ಸಮಯದಲ್ಲಿ ಅತ್ಯಾಶ್ಚರ್ಯವಾದ ಪುಣ್ಯಗಂಧವಾಗಿ ಸರ್ವರ ಮನಕ್ಕೆ ಆನಂದವ ಹುಟ್ಟಿಸುವುದೊಂದು ದಿವ್ಯಪರಿಮಳವಾಯುವು ಈಶಾನ್ಯದ ದಿಕ್ಕಿನಿಂದ ಸಹಸ್ರಪತ್ರ ದಿವ್ಯಗಂಧಮನುಳ್ಳದೊಂದು ತಾವರೆಯ ಪುಷ್ಪವು ವಾಯು ವಶದಿಂದ ಬಂದು ಇವರುಗಳ ಮುಂದೆ ಬೀಳಲು, ದ್ರೌಪದಿಯದಂ ಕಂಡು ಅತಿಸಂತಾಪದಿಂದ ಭೀಮಸೇನನ ಮೊಗಮಂ ನೋಡಿ ಇದೊಂದು ಅಪೂರ್ವವಾದ ಪರಿಮಳದ ಪುಷ್ಪವನ್ನು ಕಂಡು ತನ್ನ ಮನಸ್ಸಿಗೆ ಸಂತೋಷವಾಯಿತು. ಈ ಪುಷ್ಪವು ನಮ್ಮ ಧರ್ಮರಾಯರಿಗೆ, ಕೊಟ್ಟೇನು. ಇಂತಪ್ಪ ದಿವ್ಯ ಪುಷ್ಪಗಳನ್ನು ಕಾಮ್ಯಕವನಕ್ಕೆ ಕೊಂಡುಹೋಗಬೇಕು. ತನ್ನ

* * * *

ದೇವೇಂದ್ರನು ಗುಡಿ ತೋರಣಂಗಳಂ ಕಟ್ಟಿಸಿ, ತಾನು ರಾಜಬೀದಿಯಲ್ಲಿ ಬರುತ್ತಿರಲು ದೇವೇಂದ್ರನು ಇದಿರಾಗಿ, ಬರಲು ತಾನು ರಥವನಿಳಿದು ಪಾದಾಕ್ರಾಂತನಾಗಲು ಕಯ್ಪಿಡಿದು ಎತ್ತಿ ತೆಗೆದಪ್ಪಿ ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡನು. ಅಲ್ಲಿ ದೇವಗಂಧರ್ವರೊಡನೆ ಶಸ್ತ್ರಾಸ್ತ್ರಸಾಧನೆಯುಂ ಮಾಡುತ್ತ ವಿಶ್ವಾವಸುವಿನ ಕುಮಾರನಾದ ಚಿತ್ರಸೇನನೊಡನೆ ಸಖ್ಯಮಂ ಮಾಡಿ ಅವರೊಳುಳ್ಳ ಗಾಂಧರ್ವ ವಿದ್ಯೆಯುಂ ಅಭ್ಯಾಸಿಸಿ, ದೇವೇಂದ್ರನ ಅಮರಾವತಿಯಲ್ಲಿ ಅನೇಕ ಗೀತವಾದ್ಯನಾಟ್ಯಶಬ್ದಂಗಳಂ ಕೇಳುತ್ತ ಅಪ್ಸರಾಂಗನೆಯರ ನೃತ್ತಮಂ ನೋಡುತ್ತ ಅಮರೇಂದ್ರಂ ನೋಡಿ, ಹಸಿದನು ಎಂದು ಅರಮನೆಗೆ ಕರೆದು ಕೊಂಡುಹೋಗಿ ಷಡ್ರಸಾನ್ನಭೋಜನವಂ ಮಾಡಿಸಿ ಕರ್ಪೂರವೀಳೆಯಮಂ ಕೊಟ್ಟು, ಬಿಡಾರಕ್ಕೆ ಕಳುಹಲು, ತಾನು ಬಿಡಾರಕ್ಕೆ ಬಂದು ಮಂಚದ ಮೇಲೆ ಪವಡಿಸಿರ್ಪ ಸಮಯದಲ್ಲಿ ದೇವೇಂದ್ರನು ಚಿತ್ರಸೇನನಂ ಕರೆಯಿಸಿ, ಊರ್ವಸಿಯುಂ ಬಿಡಾರಕ್ಕೆ ಕಳುಹಲು, ಊರ್ವಸಿಯು ಅನೇಕ ದಿವ್ಯಾಭರಣ ದಿವ್ಯಪರಿಮಳಗಳನ್ನುಳ್ಳ ಪುರುಳಿಯಂತೆ ಬಿಡಾರಕ್ಕೆ ಬರಲು ನಾನು ಎಚ್ಚೆತ್ತು ಇದಿರೆದ್ದು ಸಾಷ್ಟಾಂಗದಿಂ ಪೊಡಮಟ್ಟು, ತಾವುಗಳು ಮಗನ ಮೇಲೆ ಪ್ರಿಯವಾಗಿ ನೋಡಬಂದಿರಿ. ಬದುಕಿದೆನು—ಎಂದು ಕೈಮುಗಿದುಕೊಂಡು ಪುತ್ರಭಾವದಲ್ಲಿ ನಿಂತಿದ್ದನು. ಊರ್ವಸಿಯು ಮುಳಿದು ಶಾಪವಂ ತನಗೆ ಕೊಟ್ಟು ಪೋದಳು. ಇತ್ತಲು ತಾನು ಶಾಪಭೀತನಾಗಿರಲು, ದೇವೇಂದ್ರನು ಬಂದು, ಎಲೆ ಧನಂಜಯ! ನಿನ್ನ ಮನಸ್ಸು ನೋಡಬೇಕೆಂದು ಕಳುಹಿದೆನು. ನಿನ್ನ ದೃಢಬುದ್ಧಿಗೆ ಮೆಚ್ಚಿದೆನು. ನೀನೇನೂ ಚಿಂತಿಸಬೇಡ. ಊರ್ವಸಿ ಕೊಟ್ಟ ಶಾಪಕ್ಕೆ ನೀನೇನೂ ಚಿಂತಿಸಬೇಡ. ನಿಮ್ಮ ಅಜ್ಞಾತವಾಸವೊಂದು ವರ್ಷ ಶಾಪವಿರಲಿ. ಮೇಲೆ ತೊಲಗಲಿ—ಎಂದೇ ವರವಂಕೊಟ್ಟು ತೆಗೆದಪ್ಪಿ ದೇವೇಂದ್ರನು ತನ್ನ ಅರಮನೆಗೆ ಹೋಗಲು, ಎಲೆ ಧರ್ಮರಾಯ! ತನಗೆ ಯಾವುದರ ಮೇಲಣ ಆಸಕ್ತಿಗಳೂ ಇಲ್ಲದೆ ಅಸ್ತ್ರಗಳ ಮೇಲೆ ಅಭಿಲಾಷೆಯಾಗಿರುತ್ತಿರಲು ಅದಂ ಚಿತ್ರಸೇನನೊಡನೆ ಸಖ್ಯಮಂ ಮಾಡಿ, ಅವರಲ್ಲಿ ಉಳ್ಳ ಗಂಧರ್ವವಿದ್ಯೆವನಭ್ಯಾಸಿದೆ, ಅದಂ ದೇವೇಂದ್ರನರಿದು ಸಂತುಷ್ಟನಾಗಿ ತನ್ನನ್ನು ಮೈದಡಹಿ, ಎಲೆ ಮಗನೆ! ಅನೇಕ ದಿವ್ಯಾಸ್ತ್ರಗಳನ್ನು ಸಾಧಿಸಿ ಪಡೆದೆ. ಇನ್ನು ನಿನ್ನೊಡನೆ ಯುದ್ಧಕ್ಕೆ ದೇವರ್ಕಳಾದಡಂ ನಿಲಲಾರದೆಂಬಾಗ ಮನುಷ್ಯರೊಂದು ಲೆಕ್ಕವೇ? ನೀನು ಅಪ್ರಮೇಯನು.

End:

ಧೃತರಾಷ್ಟ್ರನು ದುರ್ಯೋಧನನ ಪಯಣವನ್ನೊಡಂಬಟ್ಟು ಕಳುಹಿದಾಕ್ಷಣವೇ ಕರ್ಣ, ಶಕುನಿಸಮಸ್ತಬಲಸಹಿತವಾಗಿ ದುರ್ಯೋಧನನು ಒಡಹುಟ್ಟಿದವರ ಸಹಿತ ರಾಣಿವಾಸಂಗಳ ಸಹಿತವಾಗಿ ಎಂಟುಸಾವಿರ ರಥ, ಮೂವತ್ತುಸಾವಿರ ಗಜ, ತೊಂಭತ್ತುಸಾವಿರ ತುರಗ, ಅಸಂಖ್ಯಾತವಾದ ಕಾಲಾಳ್ಗಳು, ಲೆಕ್ಕವಿಲ್ಲದ, ಬಂಡಿಗಳಲ್ಲಿ ವೈಶ್ಯರು ವ್ಯವಹಾರಿಗಳು ನೋಟಕರಾದ ಪುರಜನ ಸಹಿತವಾಗಿ ಹೊರವಂಟು ಅನೇಕ ವಾದ್ಯದ ಘೋಷಣದಿಂದ ಸಮುದ್ರ ಮೊರೆವಂತೆ ಘೋಷಯಾತ್ರೆಗೆ ಹೊರವಂಟನೆಂಬೀ ವೃತ್ತಾಂತಮಂ ಜನಮೇಜಯಂಗೆ ವೈಶಂಪಾಯನ ಮುನೀಶ್ವರಂ ಕರುಣಿಸಿದನೆಂಬೀ ಕಥಾವೃತ್ತಾಂತಮಂ ಶೌನಕಾದಿಮುನಿಜನಂಗಳಿಗೆ ಸೂತಪೌರಾಣಿಕಂ ಪೇಳ್ದಂ.

Colophon:

ಈ ಪುಣ್ಯ ಕಥೆಯಂ ಸರ್ವತ್ರಜನಕ್ಕೆ ಸುಲಭವಾಗಿ ತಿಳವಂತೆ ಕರ್ಣಾಟಕವಚನರಚನೆಯಿಂ ಜುಂಜರಾಜಕುಮಾರ ಚಿಕ್ಕಭೂಪಾಲವಿರಚಿತಮಪ್ಪ ಪಂಚಮಶ್ರುತಿಯಾದ ಶ್ರೀ ಮಹಾಭಾರತದ ಅರಣ್ಯಪರ್ವದೊಳ್ ಘೋಷಯಾತ್ರೆ ವರ್ಣನಂ ಆಶ್ವಾಸ ೫೬ ಕ್ಕಂ ಮಂಗಳ ಮಹಾ.

" ಕಂದ "

ಪೊಡವಿಪತಿ ದರ್ಮಸುತನಿ ।
ರ್ದ್ದಡವಿಗೆ ಕುರುರಾಯ ಘೋಷಯಾತ್ರೆಯ ನೆವದಿಂ ॥
ನಡೆತಂದು ಚಿತ್ರಸೇನನ
ಹಿಡಿಕಟ್ಟಿಗೆ ಸಿಲುಕಿದಂದು ಬಿಡಿಸಿದ[ಂ]ಪಾರ್ಥಂ ॥

ವಚನಂ ॥ ಅದೆಂತೆಂದರೆ, ಎಲೈ ವೈಶಂಪಾಯಮುನೀಶ್ವರಾ ! ದುರ್ಯೋಧನನು ಸಮಸ್ತ ಬಲಸಹಿತನಾಗಿ ಘೋಷಯಾತ್ರೆಗೆ ಹೊರವಂಟನೆಂದು ನಿರೂಪಿಸಿದಿರಿ. ಅಲ್ಲಿಂದ ಮೇಲೆ ನಡೆದ ವೃತ್ತಾಂತಮಂ ಕರುಣಿಸಬೇಕೆಂದು ನುಡಿದ ಜನಮೇಜಯಂಗೆ ವೈಶಂಪಾಯನನಿಂತೆಂದಂ :—

ಎಲೆ ರಾಯಾ ! ದುರ್ಯೋಧನನು ಕರ್ಣ, ಶಕುನಿ, ದುಶ್ಶಾಸನ ಮೊದಲಾದ ಒಡಹುಟ್ಟಿದವರ ಸಹಿತವಾಗಿ ಹೊರವಂಟು ಎಲ್ಲಿ ಎಲ್ಲಿ ಆವ ಆವ ಠಾವಿನಲ್ಲಿ ಜೀವಧನ ಹಟ್ಟಿಗಳುಂಟು ಅಲ್ಲಲ್ಲಿಗೆ ಪುರುಷರುಗಳಂ ಕಳುಹಿಸಿ, ನೀರುನೆಳಲುಂಟಾಗಿರ್ದ ರಮಣೀಯಸ್ಥಾನಂಗಳಲ್ಲಿ ಬಿಡಾರಂಗಳಂ ಮಾಡಿ, ಪರ್ಯಾಯಗತಿಯಿಂದ ಗೋಹಟ್ಟಿಗಳನ್ನು ನೋಡುತ್ತ ಅಲ್ಲಿಗಲ್ಲಿಗೆ ಬೀಡನು ಬಿಡಿಸುತ್ತ ಹಟ್ಟಿಕಾರರು ತಂದು ಕೊಟ್ಟಂಥ ಹಾಲು ಮೊಸರು ತುಪ್ಪದುಲು ಪೆಗಳಂ ಕೈಕೊಂಡು ಅವರುಗಳಂ ಮನ್ನಿಸುತ್ತ ಪಾಂಡವರುಗಳಿಗೆ ತನ್ನ ಮಹದೈಶ್ವರ್ಯಮಂ ತೋರಬೇಕೆಂಬ ಅಭಿಪ್ರಾಯದಿಂದ ದ್ವೈತವನದ ಸಮೀಪದಲ್ಲಿ ಬರುತ್ತಿರ್ಪ ಕಾಲದಲ್ಲಿ.

* * * *

ಸೇನಾನಿಗಳು ಬಂದು ಗಂಧರ್ವರಂ ನೋಡಿ ಧೃತರಾಷ್ಟ್ರ ಕುಮಾರನಾದ ದುರ್ಯೋಧನರಾಯನು ಇಲ್ಲಿ ಬೀಡುಬಿಟ್ಟು ಈ ವನದಲ್ಲಿ ವಿಹರಿಸುವನು ಎಂದು ಸಮಸ್ತ ಬಲಸಹಿತ ಬರುತ್ತಾ ಇದ್ದಾನೆ . ನೀವೆಲ್ಲರೂ ತೊಲಗಿ ಹೋಹದು ಎಂದು ನುಡಿಯಲು . . . .

(ವಿ.ವಿ.)—

ಅರಣ್ಯಾ ಪರ್ವದಲ್ಲಿ ಒಂದರಿಂದ ೫೬ ಆಶ್ವಾಸಗಳು ಸಮಗ್ರವಾಗಿಯೂ ೫೭ ನೇಯ ಆಶ್ವಾಶವು ಅಸಮಗ್ರವಾಗಿಯೂ ಇವೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳೂ ಇವೆ. ಸ್ವಲ್ಪ ಶಿಥಿಲ. ಕ್ರಿ. ಶ. ಸುಮಾರು ೧೬೦೦ ರಲ್ಲಿದ್ದ ಚಕ್ಕಭೂಪಾಲ ಅಥವಾ ಚಕಣನಾಯಕನೆಂಬುವನು ಇದನ್ನು ಪರಿವರ್ತಿಸಿದವನು. ಈತನ ತಂದೆ ಜುಂಜರಾಜ, ಈತನು ರಾಜವಂಶದವನೆಂದು ತೋರುತ್ತದೆ. ಈತನ ವಿಷಯವಾಗಿ ಮಿಕ್ಕ ವಿಷಯಗಳಾವುವೂ ತಿಳಿಯಬರುವುದಿಲ್ಲ.

No. 97. ಭಾರತ (ವಚನ).

BHĀRATA (PROSE).

Substance, palm-leaf. Size, 11¼—1⅛ inches Pages, 94. lines, 5 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Adhyāyas 189—200 (Adhyāya 189 wants the beginning and Adhyāya 200 wants the end) in the Araṇyaparva.

A rendering in Kanarese prose of the Āraṇyaparva of the Sanskrit Mahābhārata. The name of the author is not given.

Beginning :

. . . . ಎಲೈ ! ಭರತಶ್ರೇಷ್ಠನೆ ! ಇಂತು ಲೋಕವು ಭಯಯುಕ್ತವಾಗಿ ಇರಲಾಗಿ ಸಪ್ತರ್ಷಿಗಳು ಮತ್ಸ್ಯದೊಡನೆ ಕೂಡಿದ ಮನುವ ಕಂಡವರಾದರು. ತಾವು ಆ ಪೋಡದಲ್ಲಿ ನಿಂತರು. ಆ ಮತ್ಸ್ಯವು ಆ ಪೋಡವನ್ನು ಸಮುದ್ರದಲ್ಲಿ ನಡೆಯಿಸಿತು. ಎಲೈ ! ಪುರುಷಶ್ರೇಷ್ಠನೆ! ಆ ಮತ್ಸ್ಯವು ಆ ಪೋಡವನ್ನು ಹಿಮವಚ್ಛಿಖರವನ್ನು ಕುರಿತು ನಡೆಯಿಸಿ ಆ ಮತ್ಸ್ಯವು ಋಷಿಗಳಂ ಕುರಿತು ಒಂದು ವಾಕ್ಯವಂ ನುಡಿಯಿತು. ಈ ಪೋಡವಂ ಹಿಮವಂತನ ಶಿಖರದಲ್ಲಿ ಕಟ್ಟಿ ಎಂದು ಮತ್ಸ್ಯವು ಹೇಳಲಾಗಿ ಋಷಿಗಳು ಆ ಪೊಡವಂ ಹಿಮವಂತನ ಶಿಖರದಲ್ಲಿ ಕಟ್ಟಿದರು. ಎಲೈ ! ಕುಂತೀ ಸುತನೆ ! ಹಿಮವಂತನ ಆ ಶಿಖರವು ನವಬಂಧನವೆಂದು ಹೆಸರುಂಟಾಗಿ ಈಗಲೂ ಲೋಕದಲ್ಲಿ ಪ್ರಸಿದ್ಧವಾಗಿ ಅದೆ. ಅನಂತರ ಮತ್ಸ್ಯವು ಆ ಋಷಿಗಳಂ ಕುರಿತು ಒಂದು ವಾಕ್ಯವಂ ಹೇಳಿತು. ತಾನು ಬ್ರಹ್ಮಸ್ವರೂಪನಾದವನು. ಎನಗಿಂತಲೂ ಅತಿಶಯನಾದವನಿಲ್ಲ. ನೀವು ಮತ್ಸ್ಯರೂಪಿಯಾದ ಎನ್ನಿಂದ ಇಂಥಾ ಭಯದಿಂದ ಬಿಡಿಸಲ್ಪಟ್ಟಿರಿ. ಮನುವಿನಿಂದಲೂ ದೇವರಾಕ್ಷಸರೊಡನೆ ಕೂಡಿದ ಪ್ರಜೆಗಳು, ಸಕಲಲೋಕಂಗಳು ಸೃಜಿಸಲ್ಪತಕ್ಕದು. ಚರಾಚರವಾದ ಜಗತ್ತು ತೀವ್ರವಾದ ತಪಸ್ಸಿಂದ ಇವನಿಗೆ ಪ್ರತ್ಯಕ್ಷವಾಗುವುದು. ಇನ್ನು ಅನುಗ್ರಹದಿಂದ ಸೃಷ್ಟಿಯು ಪ್ರಜೆಗಳು ಮೋಹವನೆಯ್ದುವುದಿಲ್ಲ. ಇಂತು ವಾಕ್ಯವಂ ಹೇಳಿ ಕ್ಷಣಮಾತ್ರದಲ್ಲಿಯೇ ಅಂತರ್ಧಾನವನೆಯ್ದಿತು· ಆ ವೈವಸ್ವತಮನು ಪ್ರಜಾ ಸೃಷ್ಟಿ ೧೦ ಮಾಡಬೇಕಾಗಿ ಮಹತ್ತಾದ ತಪಸ್ಸಂ ಮಾಡಿದನು. ತಪಸ್ಸಿನೊಡನೆ ಕೂಡಿ ಪ್ರಜಾಸೃಷ್ಟಿಯಂ ಮಾಡುವುದಕ್ಕೆ ಯತ್ನವಂ ಮಾಡಿದನು. ಎಲೈ ! ಭರತಶ್ರೇಷ್ಠನೆ ! ಮನುವು ಸಕಲ ಪ್ರಜೆಗಳನ್ನೂ ಯಥಾವತ್ತಾಗಿ ಸೃಜಿಸಿದನು. ಇದು ಮತ್ಸ್ಯ ಪುರಾಣವೆಂಬ ವೃತ್ತಾಂ

ತವು ಹೇಳಲ್ಪಟ್ಟಿತು. ಇದು ಸಕಲ ಪಾಪಹರವಾದುದು. ಆವನು ಈ ಪುರಾಣವಂ ಕೇಳು ತಲಿದ್ದಾನೆ, ಅವನು ಸುಖಯುಕ್ತನಾಗಿ ಸ್ವರ್ಗಲೋಕವನೆಯ್ದುವನು. ಇದು ಮಾರ್ಕಂಡೇಯರು ಧರ್ಮಪುತ್ರರಿಗೆ ಹೇಳಿದುದು. ವೈಶಂಪಾಯನರು ಜನಮೇಜಯನಿಗೆ ಹೇಳಿದರು.

Colophon :

ಇದು ಅರಣ್ಯಪರ್ವದಲ್ಲಿ ನೂರು ಎಂಬತ್ತೊಂಭತ್ತನೆಯ ಅಧ್ಯಾಯದ ಟೀಕು.

ವೈಶಂಪಾಯನನ ವಾಕ್ಯವು :—ಕೇಳು ! ಜನಮೇಜಯ ! [ವಾಕ್ಯವು :—]ಧರ್ಮ ಪುತ್ರನಾದ ಯುಧಿಷ್ಠಿರನು ತಪಸ್ವಿಯಾದ ಮಾರ್ಕಂಡೇಯರಂ ಕುರಿತು ವಿನಯಯುಕ್ತನಾಗಿ ಒಂದ ಪ್ರಶ್ನೆಯಂ ಮಾಡಿದನು. ಎಲೈ ! ಮಹಾಮುನಿಯೆ ನಿನ್ನಿಂದ ಅನೇಕಯುಗಸಹಸ್ರಂಗಳು ಕಾಣಲ್ಪಟ್ಟವು. ಮಹಾನುಭಾವನಾದ ಬ್ರಹ್ಮದೇವನು ಹೊರತಾಗಿ ಆಯುಸ್ಸಿನಲ್ಲಿ ನಿನ್ನ ಸಮಾನನಾದವನಿಲ್ಲ. ದೇವದಾನವರಿಂದ ವರ್ಜಿತವಾಗಿ ಈ ಲೋಕವು ಶೂನ್ಯವಾಗಿರುವ ಪ್ರಳಯಕಾಲದಲ್ಲಿ ನೀನು ಆ ಪರಬ್ರಹ್ಮರೂಪನಾದ ಸ್ವಾಮಿಯನೆಯ್ದುವೆ.

* * * *

ಅಯೋಧ್ಯಾ ಪಟ್ಟಣದಲ್ಲಿ ಪರೀಕ್ಷಿತ್ತೆಂಬ ನೃಪನು ಇಕ್ಷ್ವಾಕು ಕುಲದಲ್ಲಿ ಜನಿಸಿದಂಥಾವನು. ಆವನು ಸಾರಿ (?) ಮಾರ್ಗವಂ ಕುರಿತು ಹೋದನು. ಅವನು ಏಕಸ್ಥನಾಗಿ ಅಶ್ವಾರೂಢನಾಗಿ ಒಂದು ಮೃಗವಂ ಹಿಂದಟ್ಟಿದನು. ಆ ಮೃಗವು ಬಹುದೂರ ಎಳೆದುಕೊಂಡು ಹೋಯಿತು. ಅನಂತರ ಮಾರ್ಗದಲ್ಲಿ ಬಳಲಿದವನಾಗಿ ಕ್ಷುತ್ತೃಷ್ಣೆಗಳಿಂದ ಪೀಡಿತನಾಗಿ ಒಂದು ದೇಶದಲ್ಲಿ ವೃಕ್ಷಸಮೂಹವನ್ನು ನೋಡಿದನು. ಆ ವೃಕ್ಷಸಮೂಹದಲ್ಲಿ ಪ್ರವೇಶಿಸಿ ಅತಿ ರಮಣೀಯವಾದ ಸರಸ್ಸಂ ಕಂಡು ಅಶ್ವದೊಡನೆ ಸರಸ್ಸಂ ಪ್ರವೇಶಿಸಿ ಉದಕಪಾನವಂ ಮಾಡಿ ಅಶ್ವವ ಇಳಿದು ಸರಸ್ಸಿನತೀರದಲ್ಲಿ ಮಲಗಿದ್ದು ಮನೋಹರವಾದ ಗಾನವಂ ಕೇಳಿದನು. ಇಲ್ಲಿ ಮನುಷ್ಯರ ಗತಿಯಂ ಕಾಣೆನು. ಈ ಗಾನಧ್ವನಿಯಲ್ಲಿ ತೋರಿತ್ತು ಎಂದು ಚಿಂತಿಸಿದನು. ಚೆಲುವಿಕೆಯುಳ್ಳ (?) ಗಾನವಂ ಕೇಳಿ, ಆಕಾರವುಂಟಾಗಿ ಪುಷ್ಪಾಪಚಯವಂ ಮಾಡುತ್ತ ಗಾನಮಾಡುತ್ತಲಿಹ ಕನ್ಯೆಯಂ ಕಂಡು ನೀನು ಆವನ ಸಂಬಂಧವಾದವಳು ಎಂದು ಆ ಕನ್ಯೆಯಂ ಕುರಿತು ಕೇಳಿದನು. ಆ ಕನ್ಯೆಯು ತಾನು ಕನ್ಯೆಯೆಂದೇ ಉತ್ತರ ಕೊಟ್ಟಳು. ಅವಳಂ ಕುರಿತು ನೃಪನು ನಿನ್ನಿಂದ ತಾನು ಅಪೇಕ್ಷೆಯುಳ್ಳವನೆಂದು ಹೇಳಿದನು. ಆ ಕನ್ಯೆಯು ಹೇಳಿದಳು :—ತಾನು ಒಂದು ಸಮಯದಲ್ಲಿ ನಿನ್ನಿಂದ ಎಯ್ದುವುದಕ್ಕೆ ಶಕ್ಯವಾದವಳು. ಪ್ರಕಾರಾಂತದಲ್ಲಿ ಕೂಡದು ಎನಲಾಗಿ ಅಂಥಾ ಸಂಕೇತವೇನು ಎನಲಾಗಿ ಎನಗೆ ಉದಕವ ತೋರಬೇಡಾ ಎಂದು ಹೇಳಿದಳು. ಅ ನೃಪನು ಸಮ್ಮತಿಸಿ ಆ ಕನ್ಯಾಸಹಿತನಾಗಿ ಅಲ್ಲಿ ಇದ್ದನು. ಅನಂತರ ಆ ನೃಪನಂ ಸೇನೆಯು ಕುರಿತು ಅರಸಿಕೊಂಡು ಬಂತು ಆ ನೃಪನು ಸ್ವಸ್ಥನಾಗಿ ಆ ಕನ್ಯೆಯೊಡನೆ ಕೂಡಿ ದಂಡಿಗೆಯನೈದಿ ತನ್ನ ಪಟ್ಟಣಕ್ಕೆ ಹೋಗಿ ಆ ಕನ್ಯೆಯೊಡನೆ ಕೂಡಿ ಇದ್ದನು.

ಅನಂತರ ಆ ನೃಪನಿಗೆ ಮಂತ್ರಿಗಳ್ಗೆ ಸ್ತ್ರೀಯರುಗಳು ನೃಪನಂ ಕುರಿತು ಕೇಳಲಾಗಿ, ಉದಕವಿಲ್ಲದ ಸ್ಥಳದಲ್ಲಿ ಒಂದು ವನವ ನಿರ್ಮಿಸಿ ಎಂದು ಹೇಳಿದನು. ಅನಂತರ ಮಂತ್ರಿಯು ಉದಕವಿಲ್ಲದ ಒಂದು ವನವಂ ನೋಡಿ ನೃಪನ ಸಮೀಪವನೆಯ್ದಿ ಅಂಥಾ ವನವಂ ಕುರಿತು ಹೋಗು ಎಂದು ಹೇಳಿದನು. ಅ ಮಂತ್ರಿಯ ವಾಕ್ಯದಿಂದ ಕನ್ಯೆಯೊಡನೆ ಆ ವನವಂ ಪ್ರವೇಶಿಸಿದನು. [ಅಂಥಾ ವನದಲ್ಲಿ] ಆ ಕನ್ಯೆಯೊಡನೆ ಆ ವನದಲ್ಲಿ ಕ್ರೀಡಿಸುತ್ತಾ ಕ್ಷುತ್ತೃಷ್ಣೆಯಿಂದ ಪೀಡಿತನಾಗಿ ಆ ವನದಲ್ಲಿ ನಿರ್ಮಲವಾದ ಉದಕದೊಡನೆ ಕೂಡಿದ ಒಂದು ಬಾವಿಯಂ ಕಂಡು ಆ ಕನ್ಯೆಯನ್ನು ಕುರಿತು ಹೇಳಿದನು. ಈ ಬಾವಿಯಲ್ಲಿ ಇಳಿ. ಉದಕವು ಪಾನ

ಯೋಗ್ಯವಾದುದು ಎನಲಾಗಿ ಆ ಕನ್ಯೆಯು ಆ ನೃಪನ ವಾಕ್ಯಮಂ ಕೇಳಿ ಬಾವಿಯಲ್ಲಿಳಿದು ಮುಳುಗಿದಳು. ಮರಳಿ ಏಳಲಿಲ್ಲ. ಅಂಥಾ ಸ್ತ್ರೀಯನ್ನು ಕಾಣದೆ ಬಾವಿಯಲ್ಲಿ ಇಹ ಮಂಡೂಕಗಳಂ ಕಂಡು ಕೋಪಯುಕ್ತನಾಗಿ ಸಕಲ ಮಂಡೂಕ ವಧೆಯು ಮಾಡಲ್ಪಡಲಿ ಎಂದು ಆಜ್ಞಾಪಿಸಿದನು. ಅನಂತರ ಮಂಡೂಕ ವಧೆಯು ಮಾಡಲ್ಪಡಲಾಗಿ ಅನಂತರ ಮಂಡೂಕಗಳು ಭಯಯುಕ್ತವಾಗಿ ಮಂಡೂಕ ರಾಜನಿಗೆ ತಿಳಿಸಲು, ಅನಂತರ ಮಂಡೂಕ ರಾಜನು ಋಷಿವೇಷವಂ ಧರಿಸಿ ನೃಪನಂ ಕುರಿತು ಒಂದು ವಾಕ್ಯವು ಹೇಳಿದನು. ಎಲೈ ನೃಪನೆ ಕೋಪವನೆಯ್ದಬೇಡ. ನಿರಪರಾಧಿಗಳಾದ ಮಂಡೂಕಗಳಂ ವಧಿಸಬೇಡ. ಕೋಪವಂ ಬಿಡು. ಸಕಲಮಂಡೂಕವಧೆಯಂ ಮಾಡಬೇಕೆಂಬ ಪ್ರತಿಜ್ಞೆಯಂ ಬಿಡು. ಅಧರ್ಮವಂ ಮಾಡಬೇಡ ಎಂಬ ವಾಕ್ಯವಂ ಕೇಳಿ ನೃಪನು ಉತ್ತರ ಪೇಳಿದನು. ತಾನು ಈ ಅಪರಾಧವಂ ಕ್ಷಮಿಸುವುದಿಲ್ಲ. ದುರಾತ್ಮಗಳಾದ ಈ ಮಂಡೂಕಗಳಿಂದ ಎನ್ನ ಪ್ರಿಯೆಯು ಸಂಹರಿಸಲ್ಪಟ್ಟಳು. ಅದು ಕಾರಣ ಸಕಲಮಂಡೂಕವಧೆಯು ಮಾಡಲ್ಪಡತಕ್ಕದು. ಎನ್ನಿಂದ ನಿವಾರಿಸ ಬೇಡಾ ಎಂದು ಆ ನೃಪನ ವಾಕ್ಯವಂ ಕೇಳಿ [ಬ್ರಾಹ್ಮಣ್ಯವೇಷಧರನಾದ ಮಂಡೂಕರಾಜನು] ತಾಪಸವೇಷಧರನಾದ ಮಂಡೂಕರಾಜನು ಎಲೈ ! ನೃಪನೆ ! ಆಸನ್ನನಾಗು ಎಂದು ಪೇಳಿದನು. ತಾನು ಆಯುವೆಂಬ ಮಂಡೂಕಶ್ರೇಷ್ಠನು. ಈ ಕನ್ಯೆಯು ಎನ್ನ ಸುತೆಯಾದವಳು. ಅವಳು ಅನೇಕವಾದ ನೃಪರಂ ಮೋಸಮಾಡಿಹಳು ಎಂದು ನೃಪನಂ ಕುರಿತು ಹೇಳಿದನು. ಈ ವಾಕ್ಯವಂ ಕೇಳಿ ನೃಪನು ಆ ಕನ್ಯೆಯನ್ನು ಎನಗೆ ಕೊಡು ಎಂದು ಕೇಳಿದನು. ಅವನು ಆ ನೃಪನಿಗೆ ಸುತೆಯಂ ಕೊಟ್ಟನು. ಅನಂತರ ಈ ನೃಪನಂ ಕುರಿತು ಕನ್ಯೆಯು ಕುರಿತು ಒಂದ ವಾಕ್ಯವಂ ಹೇಳಿದನು. ಏನು ಕಾರಣ ನಿನ್ನಿಂದ ಅನೇಕ ನೃಪರು ವಂಚಿಸಲ್ಪಟ್ಟರು. ಅದ ಕಾರಣ ನಿನ್ನ ಸುತರು ಅಲ್ಲದೇ ಹೋಗಲಿ ಎಂದು ನುಡಿದನು. ಆ ನೃಪನು ಆ ಕನ್ಯೆಯಲಿ ಆಸಕ್ತವಾದ ಬುದ್ಧಿಯುಂಟಾಗಿ ಸಕಲೈಶ್ವರ್ಯವಂಪಡೆದು ಮಂಡೂಕಗಾಜನಂ ಕುರಿತು ಪೂಜೆಯಂಮಾಡಿ ನಿನ್ನಿಂದ ಅನುಗ್ರಹಿಸಲ್ಪಟ್ಟೆನು ಎಂದು ಹೇಳಿದನು. ಆ ಮಂಡೂಕರಾಜನ್ಯ ಕನ್ಯೆಯಂ ಆಜ್ಞಾಪಿಸಿ ಹೋದನು. ಕೆಲವು ಕಾಲಕ್ಕೆ ಆ ಕನ್ಯೆಯಲ್ಲಿ ಆ ನೃಪನಿಗೆ ಶಲ್ಲದಲ, ವಲರೆಂಬ ಮೂವರು ಸುತರು ಜನಿಸಿದರು. ಅವರುಗಳಲ್ಲಿ ಜೇಷ್ಠನಾದ ಶಲನೆಂಬುವನಂ ಕರೆದು ಪರೀಕ್ಷಿತ್ತು ರಾಜ್ಯದಲ್ಲಿ ಅಬಿಷೇಕವಂ ಮಾಡಿ ತಪಸ್ಸಂ ಕುರಿತು ವನಾಂತ್ರರಕೆ ಹೋದನು.

End :

ಸ್ತ್ರೀ ಯಾದವಳಿಗೆ ಯಜ್ಞಶ್ರಾದ್ಧದಾನಾದಿಗಳು ವ್ಯರ್ಥವು. ಅವಳಿಗೆ ಪತಿಶುಶ್ರೂಷೆಯುಂಟು ಅದರಿಂದಲೇ ಅವಳು ಸ್ವರ್ಗವನೆಯ್ದುವಳು. ಎಲೈ ! ಯುಧಿಷ್ಠಿರನೆ ! ಇಂಥಾ ಪ್ರಕರಣವಾಶ್ರೈಸಿ ಪತಿವ್ರತಾಸ್ತ್ರೀಯರುಗಳ ನಿಯಮವನ್ನು ಧರ್ಮವನ್ನು ಸಾವಧಾನವಾಗಿ ಕೇಳು ಎಂದು ಮಾರ್ಕಂಡೇಯರು ಹೇಳಿದರು.

Colophon :

ಇದು ಅರಣ್ಯಪರ್ವದಲ್ಲಿ ನೂರ ತೊಂಭತ್ತೊಂಬತ್ತನೆಯ ಅಧ್ಯಾಯದ ಕಥೆ.

* * * *

ಬ್ರಾಹ್ಮಣನಿಗೆ ಆವುದು ಶ್ರೇಯಸ್ಸಾಧನವಾಗಿಹುದು ಅದನು ಕೇಳು. ಅಧರ್ಮದಲ್ಲಿ ಮನಸ್ಸು ಮಾಡಬಾರದು, ಸ್ವಾಧ್ಯಾಯವನ್ನು ಭೂ . . . .

(ವಿ.-ಷಿ.)—

ಅರಣ್ಯಪರ್ವ ೧೯೦ ರಿಂದ ೧೯೯ ಅಧ್ಯಾಯಗಳು ಸಮಗ್ರ. ೧೯೮ ಮತ್ತು ೨೦೦ ನೆಯ ಅಧ್ಯಾಯಗಳು ಅಸಮಗ್ರಗಳು. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳು ವಿಶೇಷವಿಲ್ಲ. ಶೈಲಿ ಸಾಮಾನ್ಯ. ಸ್ವಲ್ಪ ಶಿಥಿಲವಾಗಿದೆ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿಯ ಬರುವುದಿಲ್ಲ.

No. 98. ಭಾರತ (ವಚನ).

BHĀRATA (PROSE).

Substance, palm-leaf. Size, $15\frac{3}{4} \times 1\frac{5}{8}$ inches. Pages, 308. Lines, 8 on a page. Character, Kanarese. Condition, slightly injured. Appearance, old. Mode of writing, not bad, but contains mistakes.

Contains from the middle of the 194th Adhyāya to the end of the Aranyaparva.

Similar to the work described above. The name of the author is not given.

Beginning:

. . . . . . ಂತವು ಮಂಡೂಕ ವಧೆಯಂ ಮಾಡಲ್ಪಡಲಾಗಿ ಅನಂತರವು ಮಂಡೂಕಂಗಳು ಭಯಯುಕ್ತವಾಗಿ ಮಂಡೂಕರಾಜನಿಗೆ ಹೇಳಿದುವು.

* * * *

ಅನಂತರವು ಶಲನು ಒಂದಾನೊಂದು ವೇಳೆಯಲ್ಲಿ ಬೇಂಟೆಯಾ(ಡಲು) ಹೋದನು. ಆಗ ಮೃಗವು ಸಿಕ್ಕದೇ ಇರಲಾಗಿ ರಥವನೇರಿ ಸಾರಥಿಯ ಕೂಡೆ ಶೀಘ್ರವಾಗಿ ರಥವಂ ನಡೆಯಿಸೆಂದು ಸೂತನಂ ಕುರಿತು ನುಡಿಯಲಾಗಿ, ಆ ಸಾರಥಿಯು ನೃಪನಂ ಕುರಿತು [ನುಡಿಯಲಾಗಿ] ಹೇಳಿದನು. ಎಲೈ ! ನೃಪನೆ ! ನಿರ್ಬಂಧವಂ ಮಾಡಬೇಡ. ಎಲೈ ! ನೃಪನೆ ! ವಾಮ್ಯಂಗಳೆಂಬ ಅಶ್ವಗಳನ್ನು ರಥದಲ್ಲಿ ಕಟ್ಟಲ್ಪಟ್ಟರೂ ಒಂದು ಮೃಗವೂ ನಿನ್ನಿಂದ ಗ್ರಹಿಸಲಶಕ್ಯವು ಎಂದು ಹೇಳಲಾಗಿ ನೃಪನು ಒಂದು ವಾಕ್ಯವಂ ಹೇಳಿದನು.

ಎಲೈ ! ಸಾರಥಿಯೆ ! ವಾಮ್ಯಂಗಳೆಂಬ ಅಶ್ವಗಳ ಎನಗೆ ಹೇಳು. ಅಲ್ಲದಿದ್ದರೆ ನಿನ್ನ ಹವಾಲ ಮಾಡುವೆ ಎಂದು ಹೇಳಲಾಗಿ ಆ ಸಾರಥಿಯು ಆ ರಾಜಭಯದಿಂದಲೂ ವಾಮದೇವ ಶಾಪದಿಂದಲೂ ಬೀತನಾಗಿ ನೃಪನಿಗೆ ಹೇಳಿದನು. ಮನೋವೇಗವುಳ್ಳ ವಾಮ್ಯಂಗಳೆಂಬ ಅಶ್ವಂಗಳು ವಾಮದೇವನ ಸಂಬಂಧವಾದುವು, ಎಂಬ ವಾಕ್ಯವಂ ಕೇಳಿ ಆ ನೃಪನು ವಾಮದೇವಾಶ್ರಮವಂ ಕುರಿತು ನಡೆಯೆಂದು ಆ ನೃಪನು ಆ ರೀತಿಯೇ ಆಗಲಿ ಎಂದು ಆ ಆಶ್ರಮವನೆಯ್ದಿ ಎಲೈ ! ಮಹಾನುಭಾವನೆ ! ಎನ್ನಿಂದ ಪ್ರಹರಿಸಲ್ಪಟ್ಟು ಒಂದು ಮೃಗವು ಓಡಿ ಹೋಗುತ್ತಲ್ಲದೆ ನಿನ್ನ ಅಶ್ವಗಳು ಎನಗೆ ಕೊಡು ಎನಲಾಗಿ ಆ ಋಷಿಯು ಈ ಅಶ್ವಂಗಳು ನಿನಗೆ ಕೊಡುತ್ತಲಿದ್ದೇನೆ. ನಿನ್ನ ಪ್ರಯೋಜನವಾದ ಬಳಿಕ ತಿರುಗಿ ಎನಗೆ ತಂದುಕೊಡು ಎಂದು ಹೇಳಿದನು. ಆ ರೀತಿಯೇ ಆಗಲೆಂಬ ಅಶ್ವಗಳನ್ನು ಸ್ವೀಕರಿಸಿ ಆ ನೃಪನು ಮೃಗವನ್ನು ಕುರಿತು ನಡೆಯುತ್ತ

ಒಂದು ವಾಕ್ಯವಂ ಹೇಳಿದನು. ಎಲೈ ಸಾರಥಿಯೇ ! ಈ ಅಶ್ವರತ್ನವು ಬ್ರಾಹ್ಮಣನಾದ ವಾಮದೇವನಿಗೆ ಕೊಡಲು ತಕ್ಕುದಲ್ಲ, ಎಂದು ನುಡಿದು ತನ್ನ ಪ್ರಯೋಜನವಾದ ಬಳಿಕ ಅಶ್ವಂಗಳನ್ನು ತನ್ನ ಅಂತಃಪುರದಲ್ಲಿ (?) ನಿಲ್ಲಿಸಿದನು.

ಅನಂತರ ವಾಮದೇವನು ಚಿಂತಿಸಿದನು. ರಾಜಪುತ್ರನು ಅಶ್ವರತ್ನಂಗಳನಪಹರಿಸಿ ಕೊಂಡು ತಿರುಗಿ ಕೊಡದೆ ಇದಾನೆ. ಇಂತು ಚಿಂತಿಸಿ ಒಂದು ಮಾಸವಾದ ಬಳಿಕ ಶಿಷ್ಯನಂ ಕರೆದು ಒಂದು ವಾಕ್ಯಮಂ ಪೇಳಿದನು ಎಲೈ ! ಆತ್ರೇಯನೆ ! ನೃಪನ ಸಮೀಪಕ್ಕೆ ಹೋಗಿ ಅಶ್ವ(ಗಳ)ಂಕೇಳು ಎನಲಾಗಿ, ಆ ಶಿಷ್ಯನು ನೃಪನಂ ಕುರಿತು ವಾಮದೇವನು ಕೋಪಯುಕ್ತನಾಗಿ ನೃಪನಂ ಕುರಿತು ಹೋಗಿ ಅಶ್ವಗಳಂ ಕೊಡು ಎಂದು ಕೇಳಿದನು. (?) ನೃಪನು ಕೊಡದವನಾದ (?) ವಾಮದೇವನು ಪೇಳಿದನು. ಎಲೈ ! ನೃಪನೆ ! ನಿನ್ನ ಪ್ರಯೋಜನವು ಸಾಂಗವಾಯಿತು. ಎನ್ನ ಅಶ್ವಂಗಳಂ ಕೊಡು. ವರುಣನು ಘೋರವಾದ ಪಾಶಂಗಳಿಂದ ನಿನ್ನ ಹಿಂಸೆಯಮಾಡದೇ ಇರಲಿ. ನೀನು ಕ್ಷತ್ರಿಯಶ್ರೇಷ್ಠನೆಂದು ಪೇಳುವರು ಎನಲಾಗಿ ನೃಪನು ಉತ್ತರವಂ ಹೇಳಿದನು. ಛಂದಸ್ಸುಗಳು ನಮ್ಮಂಥಾವರ ವಹಿಸುವುದು. ಅದಲ್ಲದೆ ಇಂಥಾ ವಾಹನಂಗಳು ನಮಗೆ ಉಂಟು ಎನಲಾಗಿ (?) ನೃಪನು ಹೇಳಿದನು. ನಾಲ್ಕು ಸಾಮಾನ್ಯಂಗಳಾದ ಅಶ್ವಗಳಾದರೂ ಗರ್ದಭಂಗಳಾದರೂ ವಹಿಸಲಿ. ಅಂಥಾ ವಾಹನಂಗಳೊಡದ (?) ತೀಕ್ಷ್ಣಂಗಳಾದ ಶೂಲಂಗಳು ಧರಿಸಿದ ಪುರುಷರು ನಿನ್ನ ಹಿಂಸೆಯಂ ಮಾಡಿ (?) ಮುಂಚೆ ಅಶ್ವಗಳ! ಕೊಡು ಎನಲಾಗಿ ನೃಪನು ಪೇಳಿದನು· ಎಲೈ ! ವಾಮದೇವನೆ! ಮನೋವಾಕ್ಕರ್ಮಗಳಿಂದಲೂ ಅವವರು ನಿನ್ನನ್ನು ಬ್ರಾಹ್ಮಣನೆಂದು ಪೇಳುವರು. ಇಂಥಾ ನಿನ್ನ ಅಪರಾಧವಂ ಸಹಿಸದೆ ಶೂಲಹಸ್ತರಾದ ಪುರುಷರು ನಿನ್ನ ಹತಮಾಡಲಿ ಎನಲಾಗಿ ವಾಮದೇವನು ಹೇಳಿದನು. ಎಲೈ . ನೃಪನೆ ! ಮನೋವಾಕ್ಕಾಯ ಕರ್ಮಗಳಿಂದ ಬ್ರಾಹ್ಮಣನಲ್ಲಿ ದ್ರೋಹವಂ ಮಾಡಬಾರದು, ಅವರು ಸಕಲ ಧರ್ಮಗಳನ್ನೂ ಬಲ್ಲವರಾದ ಕಾರಣ ಶ್ರೇಷ್ಠರಾಗುವರು ಎಂದು ಹೇಳಿದನು.

ಕೇಳು ! ಜನಮೇಜಯನೆ ! ವಾಮದೇವನಿಂದ ಇಂತು ನುಡಿಯಲ್ಪಡಲಾಗಿ ಭಯಂಕರ ರೂಪುಳ್ಳ ರಾಕ್ಷಸರು ಕಾಣಲ್ಪಟ್ಟರು. ಶೂಲಹಸ್ತರಾದ ರಾಕ್ಷಸರಿಂದ ವಧಿಸಲ್ಪಡುವ ನೃಪನು ಒಂದು ವಾಕ್ಯಮಂ ಪೇಳಿದನು. ಇಕ್ಷ್ವಾಕುವಂಶದವರು ಎನ್ನ ಬಿಟ್ಟರೂ ಇವರುಗಳಿಂದ ಸಂಹರಿಸಲ್ಪಟ್ಟ (?) ವಾಮದೇವನ ಅಶ್ವಂಗಳ ತಾನು ಬಿಡುವುದಿಲ್ಲ ಎನಲಾಗಿ, ರಾಕ್ಷಸರಿಂದಾ ನೃಪನು ಹತಮಾಡಲ್ಪಟ್ಟು ಭೂಮಿಯನೆಯ್ದಿದನು. ಅನಂತರ ಇಕ್ಷ್ವಾಕುವಂಶದಲ್ಲಿಹ ಪುರುಷರು ಹತನಾದ ನೃಪನಂ ಕಂಡು ಆತನ ತಮ್ಮನಾದ ದಳನೆಂಬುವನ ರಾಜ್ಯದಲ್ಲಿ ಅಭಿಷೇಕವಂ ಮಾಡಿದರು.

* * * *

ವಾಮದೇವನು ಆ ದಳನ ಸಮೀಪವನೆಯ್ದಿ ಒಂದು ವಾಕ್ಯವಂ ನುಡಿದನು. ಎಲೈ ! ನೃಪನೆ ! ನೀನು [ಅ]ಧರ್ಮದಿಂದ ಭಯವುಳ್ಳವನಾದರೆ ಎನ್ನ ಅಶ್ವಗಳಂ ಕೊಡೆನಲು ವಾಮದೇವನ ವಾಕ್ಯಮಂ ಕೇಳಿ ಆ ನೃಪನು ಕೋಪದಿಂದ ಆ ಸಾರಥಿಯ ಕೂಡೆ ನುಡಿದನು. ವಿಷದಿಂದ ನೆನೆಯಲ್ಪಟ್ಟ ಎನ್ನ ತೀಕ್ಷ್ಣವಾದ [ಎನ್ನ] ಬಾಣದಿಂದ ಪ್ರಹರಿಸು. ಆ ಬಾಣದಿಂದ ಹತನಾಗಿ ಭೂಮಿಯಲ್ಲಿ ಬಿದ್ದ ಇವನಂ ಶುನಕಂಗಳು ಭಕ್ಷಿಸುವುವು· ಆ ವಾಕ್ಯವಂ ಕೇಳಿ ವಾಮದೇವನು ಪೇಳಿದನು. ಎಲೈ ! ನೃಪನೆ ! ನಿನ್ನ ಪಟ್ಟಮಹಿಷಿಯಲ್ಲಿ ಜನಿಸಿದ ಹತ್ತು ವರುಷದ ಸುತನ ನಾಟಲ್ಲೆನು. ಆ ಬಾಣದಿಂದವನಂ ಸಂಹರಿಸೆನಲು ಆ ಬಾಣವು ಅಂತ:ಪುರದಲ್ಲಿ ಪ್ರವೇಶಿಸಿ ಆ ರಾಜಪುತ್ರನಂ : ಪ್ರಹರಿಸಿತು. ದಳನು ಆ ವಾಕ್ಯಮಂ ಕೇಳಿ ವಾಮದೇವ

ನಂ ಕುರಿತು ಒಂದು ವಾಕ್ಯವಂ ನುಡಿದನು. ಇಕ್ಷ್ವಾಕು ವಂಶದಲ್ಲಿ ಜನಿಸಿದ ನಾವು ಬ್ರಾಹ್ಮಣ ಹಿಂಸೆಯುಂ ಮಾಡುತಲಿದ್ದೇವೆ. ಒಂದು ಬಾಣವ ಪ್ರಹರಿಸಿ ವ್ಯರ್ಥವಾದರೂ ಮತ್ತೊಂದು ಬಾಣದಿಂದ ನೃಪರು ಎನ್ನ ಸಾಮರ್ಥ್ಯವ ಕಾಣಲಿ ಎನಲಾಗಿ ವಾಮದೇವನು ಪೇಳಿದನು. ಎಲೈ! ನೃಪನೆ! ನೀನು ಎನ್ನಂ ಕುರಿತು ಆವಬಾಣವಂ ತೊಡುತಲಿದ್ದಿ. ಆ ಬಾಣವಂ ಬಿಡುವುದಕ್ಕೆ ಸಮರ್ಥನಲ್ಲದೆ ಹೋಗುವೆ ಎನಲಾಗಿ ನೃಪನು ಪೇಳಿದನು. ಇಕ್ಷ್ವಾಕು ಸಂಬಂಧವಾದ ಜನಗಳು ನೋಡಲಿ, ಎಲೈ! ವಾಮದೇವನೆ! ಈ ಬಾಣವಂ ಬಿಡದೇ ಇದ್ದರೂ ತೊಟ್ಟ ಬಾಣವಂ ವ್ಯರ್ಥವಂ ಮಾಡಲರಿಯದು. ನಿನ್ನ ಜೀವಯುಕ್ತನಾಗಿ ಬಿಡುವುದಿಲ್ಲ. ಈ ಬಾಣದಿಂದ ತನ್ನ ಮಡದಿಯು ಹತವಂ ಮಾಡಿದರೂ ನೀನು ಪಾಪ ದಿಂದ ಬಿಡಲ್ಪಡುವುದಿಲ್ಲ, ಇಂತು ವಾಕ್ಯವಮಂ ಪೇಳಿ ಬಾಣವಂ ಬಿಡಿವುದರಲ್ಲಿ ಯತ್ನವಂ ಮಾಡಿದನು. ಆ ಸಮಯದಲ್ಲಿ ಆ ರಾಜಪುತ್ರಿಯು ವಾಮದೇವನು ಕುರಿತು ಹೇಳಿದಳು. ನಾವು ಬ್ರಾಹ್ಮಣರಲ್ಲ. ವಿಶ್ವಾಸವುಂಟಾಗಿ ಪುಣ್ಯಲೋಕಂಗಳನೆಯ್ದುವೆವು ಎಂದು ಪೇಳಲಾಗಿ ವಾಮದೇವನು ಪೇಳಿದನು. ಎಲೈ! ರಾಜಕನ್ಯೆಯೆ! ನಿನ್ನಿಂದ ರಾಜಕುಲವು ರಕ್ಷಿಸಲ್ಪಟ್ಟಿತು! ನಿನಗೆ ಬೇಡಿದ ವರವುಂ ಕೊಡುತ್ತಲಿದ್ದೇನೆ ಕೇಳು. ಸಕಲವಾದ ಭೂಮಿಯನ್ನೂ ನೀನೇ ಪ್ರತಿಪಾಲಿಸು ಎನಲಾಗಿ ರಾಜಪುತ್ರಿಯು ಹೇಳಿದಳು. ಎನ್ನ ಪತಿಯಾದವನು ಬ್ರಾಹ್ಮಣಾ ಪಮಾನಮಾಡಿದರೂ ಪ್ರಮಾದಪಾಪದಿಂದ ಬಿಡಲ್ಪಡಲಿ. ತಾನು ಪುತ್ರ ಬಂಧು ಸಹಿತೆಯಾಗಿ ತಾನು ಕ್ಷೇಮದಲ್ಲಿರುವೆನು. ಇದೇ ಎನಗೆ ವರವೆಂದು ಕೇಳಲಾಗಿ ವಾಮದೇವನು ಕನ್ಯೆಯ ವಾಕ್ಯವಂ ಕೇಳಿ ಆ ರೀತಿಯೇ ಆಗಲಿ ಎಂದು ಅಂಗೀಕರಿಸಿದನು. ಆ ನೃಪನು ಸಂತೋಷ ಯುಕ್ತನಾಗಿ ಅಶ್ವಗಳನ್ನು ವಾಮದೇವನಿಗೆ ಕೊಟ್ಟನು. ಎಂದು ಮಾರ್ಕಂಡೇಯರು ಯುಧಿಷ್ಠಿರನಿಗೆ ಪೇಳಿದ ವೃತ್ತಾಂತವ ವೈಶಂಪಾಯನರು ಜನಮೇಜಯರಾಯನಿಗೆ ಹೇಳಿದರು.

Colophon:

ಇದು ಅರಣ್ಯಪರ್ವದಲ್ಲಿ ನೂರತೊಂಭತ್ತ ನಾಲ್ಕನೆಯ ಅಧ್ಯಾಯದ ಟೀಕು.

ವೈಶಂಪಾಯನ ವಾಕ್ಯವು :—ಎಲೈ! ನೃಪನೆ! ಪಾಂಡವರು ಮಾರ್ಕಂಡೇಯರ ಬಳಸಿ ಕೊಂಡು ಇಂದ್ರದ್ಯುಮ್ನನ ಉಪಾಖ್ಯಾನವಂ ಕೇಳಿದರು

End:

ಎಲೈ! ದೇವಶ್ರೇಷ್ಠನಾದವನೆ! ನೀನು ಎನಗೆ ಸಂತುಷ್ಟನಾದರೆ ತಂದೆಯಾದ ನೀನು ಕೊಟ್ಟ ವರಂಗಳನೆಲ್ಲವನ್ನೂ ಎಯ್ದುವೆನು. ಲೋಭಮೋಹಕ್ರೋಧಂಗಳನ್ನು ಜೈಸುವೆನು. ತಪಸ್ಸಂತ್ಯಂಗಳಲ್ಲಿಯೂ ಎನ್ನ ಮನಸ್ಸು ಸ್ಥಿರವಾಗಲಿ ಎನಲಾಗಿ ಯಕ್ಷನು ಉತ್ತರವಂ ಪೇಳಿದನು.

ಎಲೈ! ಪಾಂಡು ಸುತನೆ! ನೀನು ಸಕಲಗುಣಸಂಪನ್ನನೂ ಧರ್ಮಯುಕ್ತನೂ ಆಗುವೆ. ಕೇಳು ಜನಮೇಜಯನೆ! ಯಮನು ಈ ವಾಕ್ಯವಂ ಕೇಳಿ ಅಂತರ್ಧಾನನಾದನು. ಪಾಂಡವರು ಸ್ವಸ್ಥವಾಗಿ ಬಳಲಿಕೆಯುಂ ಪರಿಹರಿಸಿಕೊಂಡು ಅರಣಿಸಹಿತವಾದ ಖಾಂಡವನ ಬ್ರಾಹ್ಮಣರಿಗೆ (?) ಕೊಟ್ಟರು. ಪುಣ್ಯ ವರ್ಧಕವಾದ ಯಮಧರ್ಮಸುತರ ಸಂವಾದವನ್ನು ಜಿತೇಂದ್ರಿಯನಾಗಿ ಪಠಿಸುವ ಪುರುಷನು, ಅಧರ್ಮದಲ್ಲಿಯೂ ಸುಹೃದ್ಭೇದದಲ್ಲಿಯೂ ಪರಸ್ತ್ರೀದರ್ಶನದಲ್ಲಿಯೂ ಪರದ್ರವ್ಯಾಪಹಾರದಲ್ಲಿಯೂ ಅಕೃತ್ಯಾಕರಣದಲ್ಲಿಯೂ ಈ ವರವ ಕೇಳು (?) ವಚನಂಗಳಗೆ ಮನಸ್ಸಿರದೆ ಧರ್ಮಾದಿಗಳಲ್ಲಿಯೇ ಬುದ್ಧಿ ಆಸಕ್ತವಾಗಿರಲಿ ಎಂದು ವೈಶಂಪಾಯನರು ಜನಮೇಜಯ ರಾಯನಿಗೆ ಪೇಳಿದರೆಂದು ಸೂತ ಪೌರಾಣಿಕರು ಶೌನಕಾದಿ ಮುನಿಗಳಗೆ ಪೇಳಿದ ಅರಣ್ಯ ಪರ್ವಕಥಾವೃತ್ತಾಂತವು.

Colophon:

ಇತಿ ಶ್ರೀ ಮಹಾಭಾರತೇ ಅರಣ್ಯಾಪರ್ವಣಿ ಇನ್ನೂರ ತೊಂಭತ್ತುನೂರನೆಯ ಅಧ್ಯಾಯದ ಟೀಕು.

ಅರಣ್ಯಾಪರ್ವಂ ಸಮಾಪ್ತಂ.

(ವಿ.ವಿ.)—

ಅರಣ್ಯಾಪರ್ವವು ನೂರತೊಂಭತ್ತ ನಾಲ್ಕನೆಯ ಅಧ್ಯಾಯದ ಮಧ್ಯದಿಂದ ಕೊನೆಯ ವರೆಗೂ ಇದೆ. ಬರೆವಣಿಗೆ ಕೆಟ್ಟುದಾಗಿಲ್ಲ. ಶೈಲಿ ಸಾಮಾನ್ಯ. ಸ್ವಲ್ಪ ಶಿಥಿಲ. ಕವಿಯಾರೆಂಬುದು ಈ ಗ್ರಂಥದಿಂದ ಸೂಚಿತವಾಗುವುದಿಲ್ಲ.

No. 99. ಭಾರತ ವಚನ.

BHĀRATA (PROSE).

Substance, palm-leaf. Size, $13\frac{1}{8} \times 1\frac{1}{4}$ inches. Pages, 162. Lines, 5 on a page. Character, Kanarese. Condition, very much injured. Appearance, old. Mode of writing, bad and full of mistakes.

Contains the Adhyāyas 6—29 complete and Adhyāya 30 incomplete in the Araṇyaparva.

Similar to the work described above. The name of the author is not given.

Beginning:

. . . . ತರಾಗಿದೆನರಾಗಿ ಇದಾರೆ ಎಂದು—ಎನ್ನ ಮನಸ್ಸು ಪ್ರೀತಿಯುಳ್ಳದಾಗಿದೆ. ಕೇಳು ಜನಮೇಜಯನೆ! ವಿ . . . . ನು ಮಾಡಿದವರಾಗಿ ಪರಮ ಸಂತೋಷವನ್ನು ಎಯ್ದಿದರು. ಎಂದು ವೈಶಂಪಾಯನನು ಜನಮೇಜಯಂಗೆ ಹೇಳಿದ . . . . . .

Colophon:

ಇತಿ ಕರ್ಣಾಟಕ ಭಾಷಾವಿರಚಿತಾರಣ್ಯಾಪರ್ವಟೀಕಾಯಾಂ ಷಷ್ಠೋಽಧ್ಯಾಯಃ

ವಿದುರನು ಮರಳಿ . . . . . . ಚಿತನಾಗಿ ಶಕುನಿ ಕರ್ಣ ಮೊದಲಾದವರ ಕೂಡಿ ಮಂತ್ರಾಲೋಚನೆಮಾಡಿ ಪಾಂಡವರ ಕೊಲ್ಲಬೇಕು ಎಂದು ತೆರಳಿ . . . .

* * * *

ಸತ್ಯಸಂಧನಾದ ಧರ್ಮರಾಯನು ಕೃಶನಾಗಿ ಇಂಥಾ ಮಾತು ಆಡಬೇಡಾ—ಎಂದು ನುಡಿದು ರಾಕ್ಷಸನ ನೋಡಿದನು. ಬಳಿಕ ಭೀಮನು ದೃಢವಾದ ಎಲೆಗಳಿಂದಲೂ ರಹಿತವಾದ ನೂರು ಗಾವುದ ಉದ್ದವಾದ ವೃಕ್ಷವನ್ನು ಕಿತ್ತನು. ಹಾಗೆ ಜಯಶಾಲಿಯಾದ ಅರ್ಜುನನು ವಜ್ರಕ್ಕೆ ಸಮವಾಗಿ ದೃಢವಾದ ಗಾಂಡೀವವೆಂಬ ಬಿಲ್ಲನ್ನು ನಿಮಿಷಮಾತ್ರದಲ್ಲೀ ಹೆದೆಯ ಸೇರಿಸಿದನು. ಆಗ ಭೀಮನು ಅರ್ಜುನನನ್ನು ನೀನು ಬರಬೇಡ ಎಂದು ನಿರಾಕರಿಸಿ ಮೇಘದೋಪಾದಿಯಲ್ಲಿ ಗರ್ಜಿಸುತಾ ಕಿಮ್ಮೀರನ ಸಮೀಪಕ್ಕೆ ಹೋಗಿ ಯುದ್ಧದಲ್ಲಿ ಓಡಬೇಡ—ನಿಂತವನಾಗು (ನಿಂತವ

ನಾಗು ?) ಎಂದು ನುಡಿದನು. ಬಳಿಕ ಅತಿಬಲಶಾಲಿಯಾದ ಭೀಮನು ಕೋಪಯುಕ್ತನಾಗಿ ತನ್ನ ಭುಜಬಡಿದುಕೊಂಡು ಕೈಯಿಂದ ಕೈಹೊಸಕಿಕೊಂಡು ತುಟಿಯನ್ನು ಕಚ್ಚಿಕೊಂಡು, ವೃಕ್ಷವೆಂಬ ಆಯುಧವನ್ನು ತೆಗೆದುಕೊಂಡು ಅವನಿಗೆ ಎದುರಾಗಿ ನಡೆದು ಇಂದ್ರನು ವಜ್ರವನ್ನು ಹಾಕಿದ ಹಾಗೆ ದೃಢವಾದ ವೃಕ್ಷವನ್ನು ಕಿರ್ಮ್ಮೀರನ ಶಿರಸ್ಸಿನಲ್ಲಿ ಹಾಕಿದನು. ಅದು ನೋಡಿ ರಾಕ್ಷಸನು ಆಶ್ಚರ್ಯಪಟ್ಟು ಕಾಣಿಸಿಕೊಂಡು ಭೀಮನಮೇಲೆ ಕೊಳ್ಳಿಗಳನ್ನು ಹಾಕಿದನು. ಯುದ್ಧ ಮಾಡುವುದರಲ್ಲಿ ಶ್ರೇಷ್ಠನಾದ ಭೀಮನು ಆ ಕೊಳ್ಳಿಗಳನ್ನು ಎಡದ ಕಾಲಿನಿಂದ ಒದ್ದನು. ಅವು ರಾಕ್ಷಸನಮೇಲೆ ಬಿದ್ದುವು. ಕಿರ್ಮ್ಮೀರನು ಯಮನೋಪಾದಿಯಲ್ಲಿ ಕುಪಿತನಾಗಿ ವೃಕ್ಷವನ್ನು ಕಿತ್ತು ಯುದ್ಧದಲ್ಲಿ ಭೀಮನಿಗೆ ಕಾಣಿಸಿಕೊಂಡನು. ಕೇಳು ! ಧೃತರಾಷ್ಟ್ರ ರಾಯ ! ಪೂರ್ವದಲ್ಲಿ ಐಶ್ವರ್ಯಾಪೇಕ್ಷೆಯಿಂದ ವಾಲಿಸುಗ್ರೀವರಿಗೆ ಹೇಗೆ ಯುದ್ಧವಾಯಿತೋ ಹಾಗೆ ಭೀಮಸೇನನಿಗೂ ರಾಕ್ಷಸನಿಗೂ ಯುದ್ಧವಾಯಿತು. ಆ ಯುದ್ಧದಲ್ಲಿ ಸಮಸ್ತವೃಕ್ಷಗಳೂ ಹೋದುವು. ಮದ್ದಾನೆಗಳಮೇಲೆ ಬಿದ್ದ ಕಮಲಗಳು ಯಾವ ರೀತಿಯಲ್ಲಿ ಚೂರ್ಣವಾಗಿ ಹೋಗುವುದೋ ಆ ರೀತಿಗೆ ಅವರಿಬ್ಬರ ಮೇಲೆ ಬಿದ್ದ ವೃಕ್ಷಗಳು ಚೂರ್ಣಗಳಾದುವು. ಮತ್ತು ಅವರ ಮೇಲೆ ಬಿದ್ದ ವೃಕ್ಷಗಳು ಭೂಮಿಯಲ್ಲಿ ಬಿದ್ದ ಜೀರ್ಣ ವಸ್ತ್ರಗಳು ಹೇಗೋ ಹಾಗೆ ಶಿಥಿಲವಾಗಿ ಹೋಗುವ ಶಿರಸ್ಸಿನದು ಹಾಗೆ ಜೀರ್ಣಗಳಾದುವು.

* * * *

ಗ್ರೀಷ್ಮಕಾಲ ಹೋದ ಬಳಿಕ ಫಲಪುಷ್ಪಗಳಿಂದ ಯುಕ್ತವಾದ, ಸಾಲ ಹುಣಿಸೆ, ಹಿಪ್ಪೆ, ಕದಂಬ ಮೊದಲಾದ ವೃಕ್ಷಗಳಿಂದ ಸಹಿತವಾದ ದ್ವೈತವನವನ್ನು ಕಂಡನು. ಆ ವನದ ಗೋಡು ಕಲ್ಲುಗಳಲ್ಲಿದ್ದ ವೃಕ್ಷಗಳಲ್ಲಿ ಧ್ವನಿಮಾಡುತಲಿದ್ದ ನೆಗಳನ್ನೂ, ಹಂಸಗಳನ್ನೂ, ಕೋಕಿಲೆ, ನವಿಲುಗಳನ್ನೂ ಧರ್ಮರಾಯನು ನೋಡಿದನು. ಹಾಗೆ ಪರ್ವತಕ್ಕೆ ಸಮಗಳಾದ ಹೆಣ್ಣು ಆನೆಗಳಿಂದ ಕೂಡಿದ ಮದ್ದಾನೆಗಳನ್ನು ಕಂಡನು. ಹೃದಯದಲ್ಲಿ ಪರಮಾತ್ಮನನ್ನು ಧರಿಸಿ ಮನೋಹರನಾದ ಜಡೆಗಳನ್ನು ಧರಿಸಿ ಧರ್ಮಾತ್ಮರಾದವರಿಗೆ ಆಶ್ರಯನಾದ ಧರ್ಮರಾಯನು ಆ ವನದಲ್ಲಿ ಸಿದ್ಧರ ಸಮೂಹವನ್ನೂ ಬಹಳ ಋಷಿಗಳನ್ನೂ ಕಂಡನು. ಮಹಾನುಭಾವನಾದ ಕೌರವ ಶ್ರೇಷ್ಠನಾದ ಧರ್ಮರಾಯನು ಬ್ರಾಹ್ಮಣ ಶ್ರೇಷ್ಠರನ್ನು ಚೆನ್ನಾಗಿ ಸಂತೋಷಪಡಿಸಿದನು. ಅತಿ ತೇಜಸ್ವಿಯಾದ ಪುರೋಹಿತನಾದ ಧೌಮ್ಯಾಚಾರ್ಯನು ಇಷ್ಟಿಗಳನ್ನೂ ಪಿತೃಗಳಿಗೆ ಮಾಡುವ ತ್ರಿತಿಗಳನ್ನೂ ಹಾಗೆ ಅವರ ವರ್ಣಾಶ್ರಮಗಳಿಗೆ ಉಚಿತವಾದ ಕರ್ಮಗಳನ್ನು ವನದಲ್ಲಿ ಪಾಂಡವರ ಕೈಯ್ಯಿಂ ಮಾಡಿಸಿದನು. ಕೇಳು ! ಜನಮೇಜಯ ! ರಾಜ್ಯವನ್ನು ಬಿಟ್ಟು ವನವಾಸವನ್ನು ಮಾಡುವ ಪಾಂಡವರ ಸಮೀಪಕ್ಕೆ ದೀರ್ಘಾಯುಷ್ಮಂತನಾದ ಅತಿ ಕಾಂತಿಸಂಪನ್ನನಾದ ಮಾರ್ಕಂಡೇಯನು ರಾಜ್ಯವನ್ನು ಬಿಟ್ಟು ವನವಾಸವನ್ನು ಮಾಡುವ ಶ್ರೀಮಂತರಾದ ಪಾಂಡವರ ಸಮೀಪಕ್ಕೆ ಬಂದನು. ಸರ್ವಜ್ಞನಾದ ಆ ಮಾರ್ಕಂಡೇಯನು ದ್ರೌಪದಿಯನ್ನೂ ಧರ್ಮರಾಯನನ್ನೂ, ಭೀಮಾರ್ಜುನರನ್ನೂ ನೋಡಿ ಮನಸ್ಸಿನಿಂದ ವನವಾಸವನ್ನು ಮಾಡಿದ ರಾಮಸ್ವಾಮಿಯನ್ನು ಸ್ಮರಿಸಿ ಆಶ್ಚರ್ಯವನ್ನು ಪಟ್ಟನು.

End :

ಧರ್ಮರಹಸ್ಯವನ್ನು ತಿಳಿದ ನಿನಗೆ ಈ ಹಾತನವೂ ಎಂದಿಗೂ ಕೆಡದ ಧರ್ಮಗಳೂ ಎಂದ ಧರ್ಮರಾಯನು ದ್ರೌಪದಿಯನ್ನು ಕುರಿತು ಹೇಳಿದನು, ಎಂಬ ಅರ್ಥ ವೈಶಂಪಾಯನನು (ಜನಮೇಜಯಂಗೆ ಹೇಳಿದ ಬಳಗೆ ಅಧ್ಯಾಯ ಸಮಾಪ್ತಿ—

Colophon :

ಇತಿ ಶ್ರೀ ಕರ್ಣಾಟಕಭಾಷಾವಿರಚಿತಾರಣ್ಯಪರ್ವಟೀಕಾಯಾಂ ಏಕೋನತ್ರಿಂಶೋಽಧ್ಯಾಯಃ

. . . . ಧರ್ಮಶ್ರೇಯಸ್ಕರ ಮಹುದು. ಆ ಧರ್ಮ ಐಶ್ವರ್ಯ ವಿದ್ದವನಿಗಲ್ಲದೆ ಬಾರದು. •

*   *   *   *

ಪ್ರಥಮದಲ್ಲಿ ಜಗದೀಶ್ವರನಿಗೆ ನಮಸ್ಕರಿಸುತ್ತಿದ್ದಾಳೆ . . . .

(ವಿ-ವಿ·)—

ಅರಣ್ಯಪರ್ವ 6 ರಿಂದ 29 ಅಧ್ಯಾಯಗಳವೆ. ಅನುಸ್ಯೂತವಾಗಿಲ್ಲ. 30 ನೆಯ ಅಧ್ಯಾಯವು ಅಸಮಗ್ರ. ಬರೆವಣಿಗೆ ಚೆನ್ನಾಗಿಲ್ಲ ಶಿಥಿಲ. ಗ್ರಂಥಪಾತಗಳುಂಟು. ತಪ್ಪುಗಳವೆ. ಕವಿಯಾರೆಂಬುದು ಈ ಗ್ರಂಥದಿಂದ ಸೂಚಿತವಾಗುವುದಿಲ್ಲ :—

No. 100. ಭಾರತ ವಚನ.

BHĀRATA PROSE.

Substance, Śrītāla. Size, 35⅜ × 2¼ inches. Pages, 614. Lines, 7 on a page. Character, Kanarese. Condition, slightly injured. Appearance, old. Mode of writing, good but contains mistakes.

Contains the Adhyāyas 1—188 complete and Adhyāya 189 incomplete in the Drōṇaparva.

A rendering in Kanarese prose of the story of the Drōṇaparva of the Sanskrit Mahābhārata; by Kaḷale Nañjarāja. For other particulars regarding the author and his genealogy see under No. 89 ante

Beginning :

ಕಂ॥ ವಿನಮಿತಸಕಲಸುರಾಸುರ ।
(ವಿನುತಗುಣ) ಸುಧಾತರಂಗ ! ಕಮನೀಯಾಂಗಾ ! ॥
ಧನದಸಖ ! ದಾನವಾಂತಕ ! ।
ಘನಸಂಸಿದ್ಧಿಪ್ರಕಾಶ ! ಗರಳಪುರೀಶಾ ! ॥

ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಂ ಕುರಿತು, ಕೇಳಿರೈ ! ಋಷಿಗಳಿರಾ !! ಆ ಬಳಿಕ ವೈಶಂಪಾಯನಮುನೀಂದ್ರನನ್ನು ನೋಡಿ ಜನಮೇಜಯರಾಯನನಿಂತೆಂದನು.

ಎಲೈ ! ವೈಶಂಪಾಯಮುನೀಂದ್ರನೆ !! ಅಸಮಾನಸಾತ್ವಿಕಗುಣವ ಮಾನಸೋತ್ಸಾಹವ, ಬಲವ, ಅಸ್ತ್ರವಿದ್ಯಾವಿಭವವ, ಪರಾಕ್ರಮವ ಉಂಟಾದ ದೇವವ್ರತನು ಶಿಖಂಡಿಯಿಂದ ಯುದ್ಧದಲ್ಲಿ ಬಿದ್ದನು—ಎಂದು ಕೇಳಿ ಧೃತರಾಷ್ಟ್ರನು ಶೋಕವ್ಯಾಕುಲಿತವಾದ ಅಂತಃ

ಕರಣವುಳ್ಳವನಾಗಿ ಯಾವ ಪ್ರಕಾರದಿಂದಿದ್ದನು ? ಭೀಷ್ಮದ್ರೋಣಪ್ರಮುಖರಥಿಕರ ಸಹಾಯದಿಂದ ಪಾಂಡವರನ್ನು ಜಯಿಸಿ ರಾಜ್ಯವನ್ನು ತೆಗೆದುಕೊಳ್ಳುತ್ತೇನೆ—ಎಂದು ಬಯಸುತ್ತಲಿರುವ ಸುಯೋಧನನು, ಧನುರ್ಧರಾಗ್ರೇಸರನಾದ ಭೀಷ್ಮನು ಮುರಿದ ಬಳಿಕ ಏನು ಮಾಡಿದನು ? ವಿವರಿಸು—ಎನ್ನಲು ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು, ಕೇಳು ! ಜನಮೇಜಯರಾಯನೆ !! ಆಗ ಧೃತರಾಷ್ಟ್ರನು ತನ್ನ ತಂದೆಯಾದ ಭೀಷ್ಮನು ಬಿದ್ದುದನ್ನು ಕೇಳಿ, ದುರ್ಯೋಧನನಿಗೆ ಇನ್ನು ಮೇಲೆ ಜಯವು ಹೋಗುವ ಸಮಯ ಕೂಡಿತೆಂದು ಎಣಿಸಿ, ಕಂಬನಿಗಳನ್ನು ಸುರಿಯಿಸುತ್ತ ಅತ್ಯಂತ ದುಃಖದಿಂದ ಪ್ರಲಾಪಿಸುತ್ತಿರುವಾಗ, ಮಹಾಪ್ರಾಜ್ಞನಾದ ಸಂಜಯನು ವ್ಯಾಸಪ್ರಸಾದಾತಿಶಯದ ದೆಸೆಯಿಂದ ಉಭಯಸೈನ್ಯಗಳ ವೃತ್ತಾಂತವನ್ನೂ ತಿಳಿದು ಪಾಳೆಯದಲ್ಲಿದ್ದು ಆ ರಾತ್ರಿ ಹಸ್ತಿನಾಪಟ್ಟಣಕ್ಕೆ ಬಂದು ರಾಜಮಂದಿರದ್ವಾರವನ್ನು ಸೇರಿ, ದ್ವಾರಪಾಲಕರಿಂದ ತಾನು ಬಂದುದನ್ನು ಧೃತರಾಷ್ಟ್ರನಿಗೆ ತಿಳುಹಿಸಿ, ಆತನ ಪಾದಂಗಳಿಗೆ ನಮಸ್ಕಾರವಂ ಮಾಡಿ, ಸವಿನಯವಾಗಿ ಕುಳಿತುಕೊಂಡಿರುವಲ್ಲಿ, ಆ ಧೃತರಾಷ್ಟ್ರನು ಸೂತನ ದಿಕ್ಕಿಗೆ ತಿರುಗಿ,

* * * *

ಧೃತರಾಷ್ಟ್ರನು ಬಿಸಿಯ ನಿಟ್ಟುಸಿರುಗಳನ್ನು ಬಿಡುತ್ತ ಸಂಜಯನಂ ಕುರಿತು, ಎಲೈ ಸೂತನಂದನನೆ ! ನಮ್ಮವರು ಆತನನ್ನು ರಕ್ಷಕನಾಗಿ ಎಣಿಸಿದ ಬಳಿಕ, ಕರ್ಣನು ಹಾಗೆ ಹೆದರಿದ ಸೈನ್ಯಗಳನ್ನು ತಿರುಗಿ ಹುರುಪು ಮಾಡಿಕೊಂಡು ಅವರ ಮನೋರಥಂಗಳು ವಿಫಲವಾಗದಿರುವ ರೀತಿ ಯುದ್ಧವನ್ನು ಮಾಡುವುದಕ್ಕೆ ಎಣಿಸುತ್ತಾನೆ. ನಾನು ಜೈಸುತ್ತೇನೆಂಬ ಮನಸ್ಸಿನಲ್ಲಿ ಯುದ್ಧನಿಶ್ಚಯವನ್ನು ಯಥಾರ್ಥವಾಗಿ ಮಾಡಿದ್ದೇನೆ. ಅದು ಏನಾಯಿತು ? ಎಂದು ಧೃತರಾಷ್ಟ್ರನು ಕೇಳಿದನೆಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ನಿರೂಪಿಸಿದರ್ಥವನ್ನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಸೂತಪುರಾಣಿಕನು ವಿವರಿಸಿದನು.

Colophon :

ಇಂತು ಕರ್ಣಾಟಭಾಷಾವಿರಚಿತವಾದ ಶ್ರೀಮಹೀಶೂರಸೇನಾಧಿಪ ದೊಡ್ಡರಾಜಪೌತ್ರ, ವೀರರಾಜತನುಜ, ದಳಪತಿದೇವರಾಜಾನುಜ ಕಳಲೆ ನಂಜರಾಜವಿರಚಿತವಾದ ನಂಜರಾಜವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥಸಂಖ್ಯೆಯುಳ್ಳ ಸಂಹಿತೆಯಲ್ಲಿ ದ್ರೋಣಪರ್ವದಲ್ಲಿ ಪ್ರಥಮಾಧ್ಯಾಯದರ್ಥನಿರೂಪಣಕ್ಕೆ ಮಂಗಳ ಮಹಾ.

ಅನಂತರದಲ್ಲಿ ವೈಶಂಪಾಯಮುನೀಂದ್ರನು ಜನಮೇಜಯರಾಯನನ್ನು ಕುರಿತು ಇಂತೆಂದನು. ಕೇಳು ಜನಮೇಜಯನೆ !

* * * *

ಆಗ ಅಭಿಮನ್ಯುವು ಅನೇಕಶತಸಹಸ್ರಸಂಖ್ಯೆಗಳುಳ್ಳ ರಥಗಜಾಶ್ವಪದಾತಿಗಳನ್ನೂ, ಸಂಹರಿಸುತ್ತ ನೂರುಮಂದಿ ಅರಸುಮಕ್ಕಳೊಡನೆ ಬಹುಮಂದಿ ಯೋಧರನ್ನೂ ಸಂಹರಿಸಲು, ದ್ರೋಣನು, ಕೃಪಾಚಾರ್ಯನು, ಕರ್ಣನು, ಅಶ್ವತ್ಥಾಮನು, ಬೃಹದ್ಬಲನು, ಕೃತವರ್ಮನು ಎಂಬ ಆರು ಮಂದಿ ಮಹಾರಥಿಕರೂ, ಸುಭದ್ರಾಪುತ್ರನನ್ನು ಸುತ್ತಿಮುತ್ತಿ ಕೊಳ್ಳಲು, ಆತನು ಹಿಮ್ಮೆಟ್ಟದೆ ಅವರ ಸಂಗಡ ತನ್ನ ಸಾಮರ್ಥ್ಯವಿದ್ದಷ್ಟು ಹೋರಾಡಿ, ಬೃಹದ್ಬಲನನ್ನು ಯಮಪಟ್ಟ

ಣಕ್ಕೆ ಕಳುಹಿಸಲು, ದ್ರೋಣನು ಮೊದಲಾದ ಮಿಕ್ಕಾದ ರಥಿಕರು ವಂಚನೋಪಾಯದಿಂದ, ಆತನಂ ವಿರಥನಂ ಮಾಡಲು, ಆ ಇಂದ್ರಪೌತ್ರನು ಗದಾಪಾಣಿಯಾಗಿ ಭೂಮಿಗೆ ಲಂಘಿಸಿ, ಅಲ್ಲಾಡುತ್ತಲಿರುವ ಶರೀರದೊಡನೆ ನಿಂತಿರಲು, ದುರಾತ್ಮನಾದ ದುಶ್ಶಾಸನಪುತ್ರನಾತನನ್ನು ಸಂಹರಿಸಬೇಕೆಂಬ ಇಚ್ಛೆಯಿಂದ ಗದಾಪಾಣಿಯಾಗಿ ಕಾಣಿಸಿಕೊಳ್ಳಲು, ಆ ಸುಭದ್ರಾಪುತ್ರನು ಶತ್ರುಗಳಿಗೆ ಭಯವೂ, ತನ್ನವರಿಗೆ ಸಂತೋಷವಾಗುವ ಹಾಗೆ ಅತಿಧೈರ್ಯಶಾಲಿಯಾಗಿ ಆ ಲಕ್ಷ್ಮಣನ ಮೇಲೆ ಬೀಳಲು, ಆ ಇರ್ವರೂ ಮಂಡಲಾದಿಚಿತ್ರಗತಿಗಳಿಂದ ಮೆರೆಯುತ್ತ ತಂದೆಗಳ ಹೆಸರುಗಳನ್ನೂ, ಸೋದರಮಾವಂದಿರ ಹೆಸರುಗಳನ್ನೂ, ಉಗ್ಗಳಿಸುತ್ತಾ ಪರಸ್ಪರ ಗದಾಪ್ರಹಾರಗಳಿಂದ ಹೊರಡುವ ರಕ್ತಪ್ರವಾಹದಿಂದ ಮದಧಾರೆಗಳಿಂದ ಪ್ರಕಾಶಮಾನಂಗಳಾದ ಮದ್ದಾನೆಗಳನ್ನನುಕರಿಸುತ್ತ ಸಕಲರಾಜಶ್ರೇಷ್ಠರೂ ಕಂಡು ಹೊಗಳುತ್ತಿರಲು, ಕೆಲವು ಹೊತ್ತು ಯುದ್ಧಮಾಡಿ ಗತಪ್ರಾಣರಾಗಿ ಇಂದ್ರಧ್ವಜಗಳೋಪಾದಿಯಲ್ಲಿ ನೆಲಕ್ಕೆ ಬೀಳಲು ನಿನ್ನ ಮಗನು ವೀರಸ್ವರ್ಗಕ್ಕೆ ಹೋದನು.

End.

ಪಾಂಡವಸೈನ್ಯಗಳು ಜಯವನ್ನೂ ಕೀರ್ತಿಯನ್ನೈದಿ ಸಂತೋಷದಿಂದ ಸಿಂಹನಾದಗಳನ್ನೂ ಕಿಲಿಕಿಲಾಧ್ವನಿಗಳನ್ನೂ ಮಾಡುತ್ತಾ, ನಮ್ಮ ಬಲಗಳನ್ನು ಓಡಿಸಲು ಕೌರವಯೋಧರು ದೀನವದನರಾಗಿ ಹಿಂದೆಮುಂದೆ ತೋರದೆ ಇಹಪರಸೌಖ್ಯಗಳೆರಡಕ್ಕೂ ತಪ್ಪಿದೆವೆಂದು ನಿಂದಿಸಿಕೊಳ್ಳುತ ಕಾಲ್ಬಂಟರ ಶರೀರಗಳ ಮಧ್ಯದಲ್ಲಿ ಬಿದ್ದಿರುವ ದ್ರೋಣಾಚಾರ್ಯನ ಶರೀರವನ್ನು ಕಾಣಲಾರದೆ ತತ್ತರ ಬೀಳುತ್ತಲಿದ್ದರು. ಅನಂತರದಲ್ಲಿ ಭೀಮಸೇನನು ಸಂತುಷ್ಟಾಂತಃಕರಣನಾಗಿ ಧೃಷ್ಟದ್ಯುಮ್ನನನ್ನು ತಬ್ಬಿಕೊಂಡು, ಕರ್ಣನು ದುರ್ಯೋಧನನು ಇಬ್ಬರೂ ಬಿದ್ದಾಗ ತಿರುಗಿ ನಿನ್ನನ್ನು ತಬ್ಬಿಕೊಳುತ್ತೇನೆ, ಎಂದು ನುಡಿದು, ಭೂಮಿಯು ಗಡಗಡ ನಡುಗುವ ಹಾಗೆ ಭುಜಾಸ್ಫಾಲನವಂ ಮಾಡಲು, ಆ ಮಹಾಧ್ವನಿಯನ್ನು ಕೇಳಿ ಕೌರವ ಸೈನಿಕರು ಕ್ಷತ್ರಧರವನ್ನು ಬಿಟ್ಟು ಓಡುವುದಕ್ಕೆ ತೊಡಗಿದರು, ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದರ್ಥವನ್ನು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ನಿರೂಪಿಸಿದರ್ಥವನ್ನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ಸೂತಪೌರಾಣಿಕನು ವಿವರಿಸಿದನು.

Colophon:

ಇಂತು ಕರ್ಣಾಟಕಭಾಷಾವಿರಚಿತವಾದ ಶ್ರೀಮಹಿಶೂರಸೇನಾಧಿಪ ದೊಡ್ಡರಾಜಪೌತ್ರ ವೀರರಾಜತನೂಜದಳಪತಿದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥ ಸಂಖ್ಯೆಯುಳ್ಳ ಸಂಹಿತೆಯಲ್ಲಿ ದ್ರೋಣಪರ್ವದಲ್ಲಿ ಐದನೇ ದಿವಸದ ಯುದ್ಧದಲ್ಲಿ ದ್ರೋಣ ವಧವೆಂಬ ೧೮೮ ನೆಯ ಅಧ್ಯಾಯದ ಅರ್ಥ ನಿರೂಪಣಕ್ಕೆ ಜಯ ಮಂಗಳ ಮಹಾ. —

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯನೆಂಬ ರಾಯನಂ ಕುರಿತು ಇಂತೆಂದನು.

* * * *

ಆಗ ಅಶ್ವತ್ಥಾಮನು ಮತ್ತೊಂದು ಠಾವಿನಿಂದ ಪ್ರವಾಹಕ್ಕೆದುರಾಗಿ ನಡೆಯುವ ಮೊಸಳೆಯೋಪಾದಿಯಲ್ಲಿ ಶಿಖಂಡಿ ಮೊದಲಾದ ಪ್ರಭದ್ರಕ ಪಾಂಡವ . . . . . .

(ಪ-ವಿ.)—

ಅಸಮಗ್ರ. ಸ್ವಲ್ಪ ಶಿಥಿಲ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳು ಕಡಿಮೆ. ಒಂದ ರಿಂದ ನೂರ ಎಂಭತ್ತೆಂಟು ಅಧ್ಯಾಯಗಳು ಪೂರ್ಣವಾಗಿಯೂ, ನೂರ ಎಂಭತ್ತೊಂಭತ್ತನೆಯ ಅಧ್ಯಾಯವು ಅಪೂರ್ಣವಾಗಿಯೂ ಇದೆ. ಕವಿಯು ಕಳಲೆ ನಂಜರಾಜ. ಉಳಿದ ವಿಷಯಗಳ ನ್ನು ಹಿಂದೆ ವರ್ಣಿತವಾಗಿರುವ ೮೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.—

No. 101. ಭಾರತ ವಚನ.

BHĀRATA PROSE.

Substance palm-leaf. Size, $18\frac{5}{8} \times 1\frac{3}{8}$ inches. Pages, 130. Lines, 6 on a page. Character, Kanarese. Condition, injured. Appearance, Old. Mode of writing, bad and contains mistakes.

Contains the Adhyāyas 1—32 (wants the beginning of the first Adhyāya and the end of the 32 Adhyāya) in the Karṇaparva.

A rendering, in Kanarese prose, of the story of the Karṇaparva of the Sanskrit Mahābhārata. The name of the author is not given.

Beginning:

ಮೊದಲು ಯಾವ ಪ್ರತಿಜ್ಞೆಯಂ ಮಾಡಿ ಇದ್ದನೋ ಆ ಪ್ರತಿಜ್ಞೆಯು ಸೇನಾಮುಖದಲ್ಲಿ ಭೀಮಸೇನನಿಂದ ಸಲಿಸಲು . . . . .

* * * *

ಅಷ್ಟುಪರ್ಯಂತರವೂ ಏನನ್ನೂ ಹೇಳದಿರು ಎಂದು ಅರಸು ಸುಮ್ಮನಿರಲು ಸಂಜಯನೂ ವಿದುರನೂ ಸುಮ್ಮನೆ ಇದ್ದವರಾದರು.

Colophon:

ಅಧ್ಯಾಯ ೧ ಕ್ಕೆ ಸಮಾಪ್ತಂ ॥
(ಒಂದನೆಯ ಅಧ್ಯಾಯಂ ಸಮಾಪ್ತಂ.)

ಆ ಮೇಲೆ ಜನಮೇಜಯನು ವೈಶಂಪಾಯನನನ್ನು ಪ್ರಶ್ನೆಮಾಡುತ್ತಾ ಇದ್ದಾನೆ.

* * * *

ಧೃತರಾಷ್ಟ್ರರಾಯನು ಸಂಜಯನಂ ಕುರಿತು ಪ್ರಶ್ನೆಮಾಡುತ್ತಿದ್ದಾನೆ ಎಲೈ ! ಸಂಜ ಯನೆ ! ತಮ್ಮ ಬಲದಲ್ಲಿ ಪಾಂಡವರಿಂದ ಕೊಲ್ಲಲ್ಪಟ್ಟವರೆನ್ನೆಲ್ಲಾ ಹೇಳುತ್ತೀಯಷ್ಟೇ ನಮ್ಮವರಿಂದ ಪಾಂಡವರಲ್ಲಿ ಕೊಲ್ಲಲ್ಪಟ್ಟು ಮಡಿಹಂತಹವರನ್ನು ವಿವರವಾಗಿ ಹೇಳು ಎನಲು ಸಂಜಯನು ಹೇಳುತ್ತಾ ಇದ್ದಾನೆ. ಎಲೈ ! ರಾಯ ! ಕೇಳು. ಯುದ್ಧದಲ್ಲಿ ವಿಚಕ್ಷಣರಾದ ಪರಾಕ್ರಮಶಾಲಿಗಳಾದ ದ್ರೋಣಬಲದೇಹಬಲಗಳನುಳ್ಳವರಾದ ಸತ್ಸಹಾಯ ಯುತರಾದ ಅಮಾತ್ಯನ ಹಿತರಾದ ನರಸಮೂಹಗಳನಾಶ್ರಯವನುಳ್ಳಂಥ ಸೋಪಸ್ಕರರಾದ ಗೋಪಾಲರುಗಳು ಮೊದಲಾದ ಅನೇಕಮಂದಿ ಅನುರಕ್ತರಾದಂಥವರು ಭೀಷ್ಮನಿಂದ ರಣ ದಲ್ಲಿ ಮಡಿದರು. ವೀರ್ಯಬಲಗಳಿಂದ ಅರ್ಜುನ ಸಮಾನನಾದಂಥ ಸತ್ಯಜಿತು ಎಂಬವನು ಸತ್ಯ ಸಂಧನಾದ ದ್ರೋಣನಿಂದ ಯುದ್ಧಭೂಮಿಯಲ್ಲಿ ಮಡುಹಲ್ಪಟ್ಟನು. ಇಪ್ಪ. ಪ್ರಹರ ಣ . . ಸಂಹಾರಕುಶಲರಾದ ನಿರಂತರಬದ್ಧವೈರರಾದ ಪಾಂಚಾಲ ಅರಸುಗಳು

ದ್ರೋಣನಿಂದ ಹತ್ರರಾಗಿ ಯಮಸದನವನ್ನೈದಿದರು. ಆ ಸಮಯದಲ್ಲಿ ವೃದ್ಧರಾದ ವಿರಾಟ ದ್ರುಪದರು ತಮ್ಮ ಕುಮಾರರು ಸಹಿತಮಿತ್ರಕಾರ್ಯಾರ್ಥವಾಗಿ ಪರಾಕ್ರಾಂತರಾಗಿ ದ್ರೋಣನಿಂದ ಯುದ್ಧದಲ್ಲಿ ಹತರಾದರು. ಯುದ್ಧದಲ್ಲಿ ಬಾಲ್ಯದಲ್ಲಿಯೇ ಅರ್ಜುನನಿಗೆ ಸಮಾನನಾದಂತಹ ಕೃಷ್ಣಬಲರಾಮರುಗಳಿಗೆ ಸಮಾನನಾದಂಥ ಪರಾಭಿಭವನಸಮರ್ಥರಾದಂಥ ಮಹಾರಣ ವಿಶಾರದನಾದಂಥ ಅಭಿಮನ್ಯುವು ಅರ್ಜುನನನ್ನು ಬಗೆಯದಂಥಾ ದ್ರೋಣ ಕರ್ಣ ಕೃಪಾಶ್ವತ್ಥಾಮ ದುಶ್ಶಾಸನ ಶಕುನಿಗಳಿಂದ ಸೋಲಲ್ಪಟ್ಟವನಾಗಿ ರಣಭೂಮಿಯಲ್ಲಿ ಮಹತ್ಕರ್ಮಗಳ ಮಾಡಿ ಅಲ್ಲಿಯೇ ಮಡಿದನು. ಅವನನಾರು ಕೊಂದರೆಂಬುದು ದುಶ್ಶಾಸನ ಕುಮಾರನು. ಯುದ್ಧವಮಾಡಿ ಅಭಿಮನ್ಯುವ (ನ್ನು) ರಥವ ಮುರಿದು ಕ್ಷತ್ರ ಧರ್ಮ ವ್ಯವಸ್ಥಿತನಾಗಿ ಒಂಟಿ ವೀರನಾಗಿ ನಿಂತಥಾವನನ್ನು ನೋಡಿ ರಣಭೂಮಿಯಲ್ಲಿ ವಧಿಸಿದನು. ಅಂಬಷ್ಠನು ಬಹು ಶ್ರೀಮಂತನಾದಂಥವನು. ಮಿತ್ರಕಾರ್ಯಾರ್ಥಿಯಾಗಿ ಅತಿಪರಾಕ್ರಮಿಯಾದಂಥವನಾಗಿ ದುರ್ಯೋಧನನ ಕುಮಾರನಾದ ಲಕ್ಷ್ಮಣನಕೂಡೆ ಯುದ್ಧವಂಮಾಡಿ ರಣದಲ್ಲಿ ಬಹುಸಾಹಸ ಕರ್ಮವಂ ಮಾಡಿ ಯಮಕ್ಷಯಗಾಮಿಯಾದನು. ಎಲೈ ! ಮಹಾರಾಯ ! ಕೇಳು ಬೃಹಂತನೆಂಬುವನು ದುಶ್ಶಾಸನ ಕೂಡೆ ಯುದ್ಧವಂ ಮಾಡಿ ಯಮಪುರಿಯಂ ಪೊಕ್ಕನು. ಸಮುದ್ರ ಮಧ್ಯವಾಸಿಯಾದ ಚಿತ್ರಸೇನನು ಪುತ್ರಸಹಿತನಾಗಿ ಯುದ್ಧದಲ್ಲಿ ಬಿದ್ದನು. ಮಣಿಮಾನೆಂಬುವನು ದಂಡಧರನೆಂಬುವನು ಎಂಬ ಇಬ್ಬರು ರಾಕ್ಷಸರಾಯರುಗಳು ಯುದ್ಧದಲ್ಲಿ ದುರ್ಮದರು ಪರಾಕ್ರಮಿಗಳು ಅವರು ಮಿತ್ರಕಾರ್ಯಾರ್ಥವಾಗಿ ಬಂದು ದ್ರೋಣನಿಂದ ವಧೆಯನ್ನೈದಿದರು.

End :

ಕೃಷ್ಣಾರ್ಜುನರಂ ಸಂಹರಿಸೇನು ಎಂದು ಇಚ್ಛೈಸುತಲಿದ್ದೀ. ಅದು ಅಬದ್ಧವು. ನರಿಯಿಂದ ಸಿಂಹಗಳು ಹತವಾದುದು ಕೇಳಲಿಲ್ಲವಲ್ಲ. ಅಪ್ರಾರ್ಥಿತವಾದ ಅರ್ಥವ ಪ್ರಾರ್ಥಿಸುತ್ತಲಿದ್ದಿ. ನಿನಗೆ ಹಿರಿಯರಿಲ್ಲವೆ. ಅಗ್ನಿಯಲ್ಲಿ ಬೀಳುವ ನಿನ್ನ ಅವರು ನಿವಾರಿಸುವರು ಇಲ್ಲವೆ ? ಕೃತ್ಯಾಕೃತ್ಯಂಗಳ ಅತ್ಯೆ (?) ಅದು ಕಾಲಪರಿಪಕ್ವವೇ ಸರಿ. ಜೀವಿತದಲ್ಲಿ ಅಪೇಕ್ಷೆಯಿದ್ದವನು ಎನ್ನಂ ಕುರಿತು ಅನರ್ಥಕರವಾದ ವಾಕ್ಯಂಗಳ ನುಡಿಯನು. ನಿನ್ನಭಿಲಾಷೆಯು ಇಂಥಾದ್ದು. ಸಮುದ್ರವ ದಾಟುವದಲ್ಲಿ ಕಂಠದಲ್ಲಿ ಪಾಷಾಣವ ಕಟ್ಟಿ ಹಸ್ತಗಳಿಂದ ದಾಟಿದರೀತಿ ಪರ್ವತಾಗ್ರದಿಂದ ಭೂಮಿಯನ್ನು ಕುರಿತು ಬೀಳುವ ರೀತಿ ನೀನು ಜಯವ ಅಪೇಕ್ಷಿಸಿದರೆ ಅನೇಕರಾದ ಯೋಧರಿಂದ ರಕ್ಷಿಸಲ್ಪಟ್ಟ ಅರ್ಜುನನೊಡನೆ ಯುದ್ಧಮಾಡು. ಧೃತರಾಷ್ಟ್ರನ ಹಿತವ . . . ನಿನಗೆ ವಧೆಯಿಲ್ಲದ ರೀತಿ ಪೇಳುತ್ತಲಿದೇನೆ. ನಿನಗೆ ಪ್ರಾಣದಲ್ಲಿ ಆಸೆಯಿದ್ದರೆ ಎನ್ನವಾಕ್ಯವಂ ಕೇಳು ಎನಲಾಗಿ ಕರ್ಣನು ಉತ್ತರ ಪೇಳುತಲಿದ್ದಾನೆ. ಎನ್ನ ಪರಾಕ್ರಮದಿಂದ ಉರುಡಿಸಲ್ಪಟ್ಟ ಯುದ್ಧದಲ್ಲಿ ಅರ್ಜುನನ ಪ್ರಾರ್ಥಿಸುತ್ತಲಿದೇನೆ. ಎನ್ನ ಶತ್ರುವಾದ ನೀನು ಸ್ನೇಹಿತರ ರೀತಿ ಭಯಪಡಿಸುತಲಿದ್ದೀ. ವಜ್ರಹಸ್ತನಾದ ದೇವೇಂದ್ರನಾದರೂ ಈ ಅಭಿಪ್ರಾಯದಿಂದ ಎನ್ನ ಮರಳಿಸಲಾರನು. ಮನುಷ್ಯನು ಪೇಳುವುದೇನು.—

Colophon :

ಇದು ಕರ್ಣಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯದ ಕಥೆ.

ಸಂಜಯವಾಕ್ಯವು :—ಮದ್ರದೇಶಾಧಿಪತಿಯಾದ ಶಲ್ಯನು ಕರ್ಣನ ಕೋಪಯುತನಂ ಮಾಡುತ್ತ ಒಂದು ವಾಕ್ಯವಂ ನುಡಿದನು ಅದೆಂತೆನೆ :—ಅಗ್ನಿಸಮಾನಂಗಳಾದ . ದೆಯಿಂದ ಬಿಡಲ್ಪಟ್ಟ ಹದ್ದುಗಳ ಗರಿಗಳುಳ್ಳ ಅರ್ಜುನನಿಂದ ಬಿಡಲ್ಪಟ್ಟ ಬಾಣಂಗಳು ಆವಾಗ ನಿನ್ನ ಬೆದಕುತ್ತಲದೋ ಎಲೈ ! ಕರ್ಣನೆ ! ಆಗ ಈ . . ಯು ನಿನ್ನ ಬಿಡುವುದು.

* * * *

ಎಲೈ! ಕರ್ಣನೆ! ಹುತ್ತದಲ್ಲಿ ಇರುವ ಮಹಾ ವಿಷಯುಕ್ತವಾದ ಕೃಷ್ಣಸರ್ಪವನೆಬ್ಬಿಸಿ ಮೋಹದಿಂದ ಅರ್ಜುನನ ಯುದ್ಧವ ಕುರಿತು ಕರೆಯುತಲಿದ್ದೀ. ಎಲೈ! ಕರ್ಣನೆ! ತೋಳವು ಕ್ರುದ್ಧವಾದ ಸಿಂಹವನ್ನೆದಿ ಗರ್ಜಿಸಿದ ರೀತಿ ಮೂಢನಾದ ನೀನು ಪಾರ್ಥನ ಕುರಿತು ಗರ್ಜಿಸುತಲಿದ್ದೀ. ಪಕ್ಷಿಶ್ರೇಷ್ಠನಾದ ವಿನತಾಸುತನಾದ ವೇಗವುಳ್ಳ . . . . . .

(ವಿ.ವಿ.)—

ಕರ್ಣಪರ್ವ 2 ರಿಂದ 31 ಅಧ್ಯಾಯಗಳು ಸಮಗ್ರ. | ಮತ್ತು 32 ನೆಯ ಅಧ್ಯಾಯಗಳು ಅಸಮಗ್ರ. ಬರೆವಣಿಗೆ ಚೆನ್ನಾಗಿಲ್ಲ. ಶಿಥಿಲ. ತಪ್ಪುಗಳಿವೆ. ಗ್ರಂಥಪಾತವುಂಟು. ಶೈಲಿ ಸಾಮಾನ್ಯ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿದು ಬರುವುದಿಲ್ಲ.

No. 102. ಭಾರತ ವಚನ.

BHĀRATA PROSE.

Substance, palm-leaf. Size, $18\frac{5}{8} \times 1\frac{3}{8}$ inches. Pages, 24. Lines, 6 on a page. Character, Kanarese. Condition, much injured. Appearance, old. Mode of writing, fair and free from mistakes,

Contains the Adhyāyas 64—67 complete, and Adhyāya 68 incomplete in the Karṇaparva.

Similar to the work described above. The name of the author is not known.

Beginning

ಸಂಜಯ ವಾಕ್ಯವು.—ಎಲೈ! ರಾಜಶ್ರೇಷ್ಠನೆ! ಕರ್ಣನಿಗೂ ಪಾಂಡವರಿಗೂ ಯಮಲೋಕವೃದ್ಧಿಕರವಾದ ಯುದ್ಧವು ಅಭಿವೃದ್ಧವಾಯಿತು. ಧನುಸ್ಸುಗಳು, ಬಾಣಪರಿಘಶೂಲಗದೆಗಳು ಇವು ಮೊದಲಿದ್ದು ಆಯುಧಗಳಂ ತೆಗೆದುಕೊಂಡು ಶೂರರಾದವರು ಯುದ್ಧಾರ್ಥವಾಗಿ ಸಂಚಾರವಾಡಿದರು. ದಿಕ್ಕುವಿದಿಕ್ಕು ಆಕಾಶ ಭೂಮಿಯನ್ನು ರಥಚಕ್ರಂಗಳ ಧ್ವನಿಯಿಂದಲೂ, ಧನಸ್ಸುಗಳ ಹೊಡೆಯ ಧ್ವನಿಯಿಂದಲೂ ಕೂಡಿದ ಸೇನೆಯು ಶತ್ರುಗಳ ಕುರಿತು ಯುದ್ಧಾರ್ಥವಾಗಿ ನಡೆಯಿತು. ಆ ಸೇನಾ ಧ್ವನಿಯ ಕೇಳಿ ಕೆಲವು ಬಹುಮಂದಿಯೋಧರು ಸಂತೋಷಯುಕ್ತರಾದರು. ಈ ಕುರುಪಾಂಡವರ ಕಲಹಾಂತ್ರರವನಪೇಕ್ಷಿಸಿದ ವೀರರು ವೀರರೊಡನೆ ಯುದ್ಧಮಂ ಮಾಡಿದರು. ಎಲೈ! ಭರತಶ್ರೇಷ್ಠನೆ! ಹೊಡೆಗಳ ಧ್ವನಿಯಿಂದಲೂ, ಪ್ರಹರಿಸಲ್ಪಟ್ಟ ಶಸ್ತ್ರಗಳ ಧ್ವನಿಯಿಂದಲೂ ನಡುವೆ ಸೇನಾಧ್ವನಿಯಿಂದಲೂ ಆ ಸೇನೆಗಳ ಧ್ವನಿಯಿಂದಲೂ (?) ಶೂರರ ಸಿಂಹನಾದಗಳನ್ನು ಗಜಂಗಳು ಕೇಳಿ ಭಯಂಕರವಾದ ಧ್ವನಿಯಂ ಮಾಡಿ ಯುದ್ಧಭೂಮಿಯಲ್ಲಿನಿಂದುವು.

* * * *

ರಾಹುತರು ರಥಿಕರಿಂದ ಹತರಾದರು. ರಾಹುತರಿಂದ ಮಾವುತರೊಡನೆ ಕೂಡಿದ ಪದಾತಿಗಳಿಂದ ಆನೆಗಳು ರಥಿಕರು ರಾಹುತರು ಶಕ್ತಿತೋಮರಖಡ್ಗಂಗಳಿಂದ ಸಂಹರಿಸಲ್ಪಟ್ಟರು.

ಅಶ್ವಾದಿಗಳು ಪದಾತಿಗಳೊಡನೆ ಕೂಡಿ ಹತವಾದುವು. ಆ ಯುದ್ಧದಲ್ಲಿ ಹತವಾದ ಶೂರರ ಮುಖಂಗಳು ಶರೀರಂಗಳು ಮರ್ದಿಸಲ್ಪಟ್ಟ ಪದ್ಮಂಗಳ ರೀತಿ ಆಯಿತು. ಎಲೈ ! ಭರತ ಶ್ರೇಷ್ಠನಾದ ನೃಪನೆ ! ಆ ಯುದ್ಧದಲ್ಲಿ ಸಂಹರಿಸಲ್ಪಟ್ಟ ಜನ . . ಶರೀರಂಗಳು ಉದಕವೇಗದಲ್ಲಿ ಹತವಾದ ನದೀತೀರಂಗಳ ರೀತಿ ಆಯಿತು ಎಂದು ಧೃತರಾಷ್ಟ್ರಂಗೆ ಸಂಜಯ ಹೇಳಿದ ಇದು ಕರ್ಣ ಪರ್ವದಲ್ಲಿ ಅರುವತ್ತನಾಲ್ಕನೆಯ ಅಧ್ಯಾಯದ ಟೀಕು.

Colophon.

ಇದು ಕರ್ಣಪರ್ವದಲ್ಲಿ ಅರುವತ್ತುನಾಲ್ಕನೆಯ ಅಧ್ಯಾಯ.

ಸಂಜಯನ ವಾಕ್ಯವು.—ಈ ಪ್ರಕಾರ . . ಯು ಯುದ್ಧಮಾಡುತ್ತಲಿರಲು ದುರ್ಯೋಧನನಿಂದ ಧೃಷ್ಟದ್ಯುಮ್ನ ಜಯಾರ್ಥವಾಗಿ ಕಳುಹಿಸಲ್ಪಟ್ಟ ಆನೆಗಳ ಸಮೂಹವು ಧೃಷ್ಟದ್ಯುಮ್ನನ ಸಮೀಪವನ್ನೈದಿತು.

* * * *

ಈ ಕೌರವ ಬಲವು ಅನೇಕವಾದ ಕಾರಣ ಭೀಮ ಸಾತ್ಯಕಿಗಳಿಂದ ನಿವಾರಿಸಲ್ಪಟ್ಟವರಾದರು. ಧರ್ಮರಾಯನ ಸಮೀಪವನ್ನು ಕುರಿತು ವರ್ಷಾಕಾಲದಲ್ಲಿ ಸಮುದ್ರವ ಕುರಿತು ನದೀಪ್ರವಾಹಂಗಳ ರೀತಿ ಬರುತ್ತಲಿದಾರೆ. ಕುಂತೀ ಪುತ್ರನಾದ ಯುಧಿಷ್ಠಿರನು. ಮೃತ್ಯುಮುಖದಲ್ಲಿ ಇದ್ದಾನೆ. . . . ಯುತ್ತಲಿದೇನೆ ದುರ್ಯೋಧನನೆಂಬ ಅಗ್ನಿಯಲ್ಲಿ ಆಹುತಿಯಂ ಮಾಡಲ್ಪಟ್ಟ ಪಾಂಚಾಲರ ನೋಡು.—ಈ ದುರ್ಯೋಧನನ ಪರಾಕ್ರಮವು ಇಂದ್ರನವು ಇಲ್ಲ. ಶೀಘ್ರವಾಗಿ ಬಾಣಂಗಳಂ ಪ್ರಹರಿಸುವ ಕ್ರೋಧಯುಕ್ತನಾದ ದುರ್ಯೋಧನನ ರೂಪವು ಅಂತಕನ ರೂಪವು ಅಂತಕನ ರೂಪದೋಪಾದಿ ಕಾಣಲ್ಪಡುತ್ತಲಿದೆ. ಸಿಂಹನಾದವಂ ಮಾಡುತ್ತಲಿದ್ದ ಅಶ್ವತ್ಥಾಮನ ಕರ್ಣನಬಾಣಂಗಳು ಪರ್ವತಂಗಳನ್ನು ಭೇಧನಂ ಮಾಡುವುದಕ್ಕೆ ಸಮರ್ಥವಾದುವು. ಈಗ ಕರ್ಣನಿಂದ ಧರ್ಮರಾಯನು ವಿಮುಖವಂ ಮಾಡಲ್ಪಟ್ಟನು. ಲಘುಹಸ್ತನಾದ ಪರಾಕ್ರಮಶಾಲಿಯಾದ ಯುದ್ಧದಲ್ಲಿ ಸಮರ್ಥನಾದ ಕರ್ಣನು ಯುದ್ಧದಲ್ಲಿ ಪಾಂಡವ ಶ್ರೇಷ್ಠನಾದ ಧರ್ಮರಾಯನ ನಿವಾರಿಸುವುದಕ್ಕೆ ಸಮರ್ಥನು.

End:

ಇಂದ್ರಂಗೆ ಅತಿಥಿಗಳಾದರು. ಎಲೈ ಧೃತರಾಷ್ಟ್ರನೆ ! ಪರಾಕ್ರಮಶಾಲಿಯಾದ ಅರ್ಜುನನು ಶೀಘ್ರವಂ ವ . . . ಡು ವೇಗವನ್ನೈದಿ ನಿನ್ನ ಸೈನಿಕರಂ ಹತಮಾಡಿದನು ಪುರುಷಶ್ರೇಷ್ಠನಾದ ಅರ್ಜುನನು . . . ಲ್ಪಟ್ಟ ಕೌರವಸೇನೆಯಂ ಸಂಹರಿಸಿದನು ಮತ್ತು ಪುರುಷಶ್ರೇಷ್ಠನಾದ ಅರ್ಜುನನು ಭ . ನವಾದ ಗಿಣ್ಣುಗಳುಳ್ಳ ಬಾಣಂಗಳಿಂದ ರಥತುರಗಪದಾತಿಗಳ ಹತಂಮಾಡಿದನು ಎಂದು ಸಂಜಯ ಹೇಳಿದನು.

Colophon:

ಇದು ಕರ್ಣಪರ್ವದಲ್ಲಿ ಅರುವತ್ತೇಳನೆಯ ಅಧ್ಯಾಯದ ಟೀಕು.

ಧೃತರಾಷ್ಟ್ರ ಪ್ರಶ್ನೆಯು.—ಎಲೈ ! ಸಂಜಯನೆ ! ಈ ಪ್ರಕಾರ ಧರ್ಮರಾಯನು ಮಾಜು . . ಸೈನಿಕರ ವಧೆಯಂ ಮಾಡಲ್ಪಡುವ ಎನ್ನ ಸೈನಿಕರೊಳಗೆ ಒಬ್ಬರನ್ನೂ ಕಾಣೆ ಎನ್ನ ಸುತರಿಗೆ ಜಯವ ಬಯಸಿರುವ ನಾನು ಈ ರೀತಿ ಸೈನಿಕರ ವಧೆಯಂ ಕೇಳಿ.

* * * *

ನಿನ್ನಿಂದ ಈ ದುರ್ಬುದ್ಧಿಯಾದ ಕರ್ಣನು ವಧೆಗೆ ಯೋಗ್ಯನು . ರಥಿಕ ಶ್ರೇಷ್ಠನಾದ ಈ ಕರ್ಣನೊಡನೆ ಯುದ್ಧದಲ್ಲಿ . . .

(ವಿ-ವಿ.)—
ಕರ್ಣಪರ್ವ 64 ರಿಂದ 67 ಅಧ್ಯಾಯಗಳು ಸಮಗ್ರ. 68 ನೆಯ ಅಧ್ಯಾಯವು ಅಸಮಗ್ರ. ಬರೆವಣಿಗೆ ಸಾಮಾನ್ಯ. ಶೈಲಿ ಸಾಮಾನ್ಯ. ತಪ್ಪುಗಳುಂಟು. ಅತಿಶಿಥಿಲ. ಕವಿಯಾರೆಂಬುದು ತಿಳಿಯಬರುವುದಿಲ್ಲ.

No 103. ಭಾರತ ವಚನ.
BHĀRATA PROSE.

Substance, Śrītāḷa. Size, 19¼ × 1⅞ inches. Pages, 340. Lines, 8 on a page. Character, Kanarese. Condition, slightly injured. Appearance, good. Mode of writing, good but not free from mistakes.

Contains the Śalyaparva complete

A rendering in Kanarese prose of the Sanskrit Mahābhārata ; by Kalale Nanjarāja. For other particulars see under No. 89 *ante*.

Beginning:

ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಂ ಕುರಿತು ಇಂತೆಂದನು :—ಎಲೈ ಋಷಿಗಳಿರಾ ! ಆ ಬಳಿಕ ವೈಶಂಪಾಯನ ಮುನೀಶ್ವರನು ಜನಮೇಜಯರಾಯನಂ ಕುರಿತು ಇಂತೆಂದನು :—ಕೇಳು ಜನಮೇಜಯನೆ ! ಆಗ ಧೃತರಾಷ್ಟ್ರನು ಇಷ್ಟು ಅಷ್ಟು ಎಂದು ಹೇಳುವುದಕ್ಕೆ ಅಶಕ್ಯವಾಗಿರುವ ಕ್ಲೇಶದಿಂದ ನಿಟ್ಟುಸಿರುಗಳಂ ಬಿಡುತ, ಬಾರಿಬಾರಿಗೂ ಕಣ್ಣುಗಳಂ ಕೊಡಹುತ ಚಿಂತಾಪರವಶತ್ವದಿಂದಿದ್ದು ಸಂಜಯನಂ ಕುರಿತು ಎಲೈ ಸೂತನಂದನನಾದ ಸಂಜಯನೆ ! ಪಾಂಡವರು ಹೇಗೆ ಯುದ್ಧಮಾಡಿದರು ? ಸ್ವಲ್ಪವಾದರೂ ಶ್ರಮವಿಲ್ಲದೆ ಸುಖವಾಗಿದ್ದಾರೆ ಎಂದು ಕೇಳಲ್ಪಡುತ್ತಲಿದೆ. ನನಗೆ ಇದಕ್ಕಿಂತಲೂ ದುಃಖವುಂಟೇ ? ಈ ರೀತಿಯಿಂದ ಮಕ್ಕಳ ದೆಸೆಯಿಂದ ಬಂದ ಮಕ್ಕಳ ವಧೆಯಿಂದ ಕೇಳಿದರೂ ಸಹಸ್ರ ಹೋಳಾಗದಿರುವುದರಿಂದ ತನ್ನ ಹೃದಯವು ವಜ್ರಮಯವಾಗಿರಬೇಕು ಎಂದು ಎಣಿಸುತ್ತೇನೆ. ಮೊದಲು ದುರ್ಯೋಧನನು ಮೊದಲಾದ ಕುಮಾರಕರು ಬಾಲ್ಯದಲ್ಲಿ ನುಡಿದ ತೊದಲ್ನುಡಿಗಳಂ ಕೇಳಿದ ಈ ಕಿವಿಗಳಿಂದ ಅವರು ಹತರಾದರು ಎಂದು ಕೇಳಬೇಕಾಯಿತು. ಅಂಧನಾದ್ದರಿಂದ ಅವರ ಅವಯವನ್ನು ತಿಳಿಯದಿದ್ದರೂ ಮನಸ್ಸಿನಲ್ಲಿ ಪುತ್ರವಾತ್ಸಲ್ಯವು ಅಧಿಕವಾಗಿರುವುದು. ಅವರು ಕ್ರಮಕ್ರಮದಿಂದ ಬಾಲ್ಯವನ್ನತಿಕ್ರಮಿಸಿ ಯೌವನವನ್ನೈದಿ ಐಶ್ವರ್ಯವನನುಭವಿಸುತ್ತಲಿದಾರೆ ಎಂದು ದಿನದಿನವೂ ಕೇಳು ತಲಿದ್ದೆನು. ಅಂಥಾ ನನ್ನ ಕುಮಾರಕರು ಪಾಂಡವರ ದೆಸೆಯಿಂದ ಇದ್ದ ಐಶ್ವರ್ಯಗಳನ್ನು ಹೋಗಿಸಿಕೊಂಡು, ಇರುವುದನ್ನು ಕೇಳಿ ಹೇಗೆ ಇರುವೆನು ! ಹೇಗೆ ಸಹಿಸುವೆನು. ಮತ್ತು ತನ್ನ ಮನಸ್ಸಿನಲ್ಲಿ ಸುಯೋಧನನಂ ಸ್ಮರಿಸಿ ಎಲೈ ಕುಮಾರಕನೆ ! ಅನಾಥನಾದ ನನಗೆ ನಾಥನಾಗುತ ಇಷ್ಟು ದಿವಸಗಳೂ ಪಾಲಿಸಿ ಕುರುಡನಾಗಿ ವೃದ್ಧನಾಗಿರುವ ನನ್ನನ್ನು ಬಿಟ್ಟು ಬಿಟ್ಟು ಹೋದರೆ ಯಾವಗತಿಯನೈದಲುಳ್ಳವನು ? ನಿನ್ನ ಜ್ಞಾತಿವರ್ಗಕ್ಕೆ ಯಾರು ದಿಕ್ಕಾಗುವರು ?

* * * *

ಆಚಾರ್ಯಪುತ್ರನು ಕಾಂಚನಪುಂಖಂಗಳಾದ ಹನ್ನೆರಡುಬಾಣಗಳಿಂದ ಅರ್ಜುನನಂ ಮುಚ್ಚಿ, ಹತ್ತು ತೀಕ್ಷ್ಣಬಾಣಗಳನ್ನು ವೃಷ್ಣಿಶ್ರೇಷ್ಠನಾದ ಶ್ರೀಕೃಷ್ಣಸ್ವಾಮಿಯ ಮೇಲೆ

ಪ್ರಯೋಗಿಸಲು, ಅರ್ಜುನನು ನಸುನಗುತ ಗಾಂಡೀವವನ್ನು ಹಸ್ತದಲ್ಲಿ ಕುಣಿಯಿಸುತ, ಗುರುಪುತ್ರನೆಂಬ ಗೌರವದಿಂದ್ಕೆಲವು (ಹೊತ್ತು) ಸುಮ್ಮನೆ ಇದ್ದು, ಆ ಬಳಿಕ ಆತನ ರಥಾಶ್ವಗಳನ್ನು ಕೆಡಹಿ, ಸಾರಥಿಯನ್ನು ಭೇದಿಸಿ ರಥವನ್ನು ವಿಶಕಲಿತಮಾಡಿ, ಮೂಗು ತೀಕ್ಷ್ಣಬಾಣಗಳನ್ನು ಆತನ ವಕ್ಷಸ್ಥಳದಲ್ಲಿ ಸೋಂಕೆ ಸೋಂಕದ ಹಾಗೆ ನೆಡಿಸಲು, ಅಶ್ವತ್ಥಾಮನು ಹತಾಶ್ವನಾದ ರಥದಮೇಲೆ ಇದ್ದುಕೊಂಡು ಪರಿಘಸಮಾನವಾದ ರಥಿಕ ಮುಸಲವನ್ನು ತಿರುಗಿಸಿ ಬೀಸಿಹಾಕಲು, ಸವ್ಯಸಾಚಿಯು ಕನಕಪಟ್ಟ ಶೋಭಿತವಾಗಿ ಶೀಘ್ರವಾಗಿ ಬರುವ ಆ ಮುಸಲವನ್ನು ನಾಲ್ಕು ತೀಕ್ಷ್ಣಬಾಣಗಳಿಂದ ಏಳುತುಂಡುಗಳಂ ಮಾಡಲು, ಅಶ್ವತ್ಥಾಮನು ಪರ್ವತಶಿಖರಸಮಾನವಾದ ಒಂದು ಪರಿಘವನ್ನು ತೆಕ್ಕೊಂಡು ಅರ್ಜುನನ ಮೇಲೆ ಪ್ರಯೋಗಿಸಲು, ಯಮಸೋಪಾದಿಯಲ್ಲಿ ಬರುತ್ತಲಿರುವ ಆ ಪರಿಘವನ್ನು ಅರ್ಜುನನು ನೋಡಿ ಐದು ಮಾರ್ಗ್ಗಣಗಳಿಂದ ಮಾರ್ಗ್ಗದಲ್ಲಿ ಭೇದಿಸಿ, ಅಷ್ಟರಲ್ಲಿ ಬಿಡದೆ ಮೂರು ಶರಗಳನ್ನು ಗಾಂಡೀವದಲ್ಲಿ ತೊಟ್ಟು ಧನುಷ್ಟಂಕಾರಗಳಿಂದ ಅರಸುಗಳ ಗುಂಡಿಗೆಗಳು ತಲ್ಲಣಿಸುವ ಹಾಗೆ ಅಡರಿಸಿ ದ್ರೋಣಪುತ್ರನನ್ನು ನೋಯಿಸಲು ಆತನು ಅದರಿಂದ ಅಧಿಕವಾಗಿ ನೊಂದು ತನ್ನ ಪೌರುಷಪ್ರಭಾವದಿಂದ ಮೂರ್ಛೆಹೋಗದೆ ನಿಂತಿರಲು, ಸುರಥನೆಂಬ ಮಹಾರಥನು ಆಚಾರ್ಯಪುತ್ರನನ್ನು ನಾರಾಚಪರಂಪರೆಗಳಿಂದ ಮುಚ್ಚುತ್ತ ಸಕಲರಾಜಲೋಕವೂ ನೋಡುತ್ತಿರಲು ರಥಘೋಷವನ್ನು ಮೆರೆಯಿಸುತ ಬಂದು ಉರವಣಿಸಿ, ಅತಿ ದೃಢವಾದ ಧನುಸ್ಸಿನಲ್ಲಿ ಕೃಷ್ಣಸಮಾನಂಗಳಾದ ಬಾಣಗಳನ್ನು ತೊಟ್ಟು ಅಡರಿಸಲು, ದ್ರೋಣಪುತ್ರನು ಕೋಲಿನಿಂದ ಬಡಿಯಲ್ಪಟ್ಟ ಸರ್ಪದ ತೆರದಿಂದ ಕೋಪಿಸಿಕೊಂಡು ಔಡುಕಚ್ಚಿ ಕಣ್ಣುಗಳನ್ನು ಗಂಟಿಕ್ಕಿಕೊಂಡು, ? ಹೆದೆಯನ್ನು ಸಾರಿಸುತ ಯಮದಂಡದ ಹಾಗೆ ಭಯಂಕರವಾದೊಂದು ಕಾಂಡವನ್ನು ತೊಟ್ಟು ಅಡರಿಸಲು, ಅದು ಸಿಡಿಲಿನ ಚಂದದಿಂದ ಆತನ ಹೃದಯವನ್ನು ಭೇದಿಸಿಕೊಂಡು ಭೂಮಿಯಲ್ಲಿ ಪ್ರವೇಶಿಸಲು, ಆ ವೀರಶ್ರೇಷ್ಠನು ವಜ್ರದಿಂದ ಕೆಡಹಲ್ಪಟ್ಟ ಪರ್ವತದ ರೀತಿಯಿಂದ ಬೀಳಲು ಪ್ರತಾಪದೀಪಿತನಾದ ಗುರುಪುತ್ರನು ಆತನ ರಥವನ್ನು ಏರಿಕೊಂಡು ಯುದ್ಧಸನ್ನದ್ಧರಾಗುತ ಸಂಶಪ್ತಕರೊಡನೆ ಕೂಡಿ ಅರ್ಜುನನ ಮೇಲೆ ಕಾಣಿಸಿಕೊಳ್ಳಲು ಆ ಅರ್ಜುನನೊಬ್ಬನಾದರೂ ಬಹುಮಂದಿಯೊಡನೆ ತೊಡರಿ ಮಧ್ಯಾಹ್ನಸಮಯದಲ್ಲಿ ಯಮಪಟ್ಟಣಕ್ಕೆ ಬಹುಪ್ರಜಾಸಮೃದ್ಧಿಯಂ ಮಾಡುವುದಕ್ಕೆ ಸಮರ್ಥವಾದ ಯುದ್ಧವನ್ನು ಮಾಡುತಿರಲು ಆ ಯುದ್ಧವು ದೇವದಾನವಯುದ್ಧದೋಪಾದಿಯಲ್ಲಿ ಸಕಲಲೋಕಂಗಳಿಗೂ ಆಶ್ಚರ್ಯವಾಗಿತ್ತು.

End :

ಆ ಬಳಿಕ ದುರ್ಯೋಧನನು ಕೃಪಾಚಾರ್ಯನನ್ನು ನೋಡಿ, ಕ್ಷತ್ರಿಯಧರ್ಮದಿಂದ ಪ್ರವರ್ತಿಸುತ್ತಲಿರುವ ಬ್ರಾಹ್ಮಣನು ಅರಸಿನ ಅಪ್ಪಣೆಯಿಂದ ಯುದ್ಧವನ್ನು ಮಾಡುವುದು. ಯುದ್ಧವನ್ನು ಮಾಡುವುದು ಉಚಿತವು ಎಂದು ಶಾಸ್ತ್ರಜ್ಞರು ಹೇಳುವುದರಿಂದ ನೀನು ನಿನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುವುದಕ್ಕೆ ಎಣಿಸಿದರೆ, ಆಚಾರ್ಯಪುತ್ರನನ್ನು, ನನ್ನ ಅಪ್ಪಣೆಯಿಂದ ಸೈನ್ಯಾಧಿಪತ್ಯಕ್ಕೆ ಅಭಿಷಿಕ್ತನನ್ನು ಮಾಡು ಎನಲು ಕೃಪಾಚಾರ್ಯನು ಆತನಿಗೆ ಸೈನ್ಯಾಧಿಪತ್ಯಕ್ಕೆ ಅಭಿಷೇಕವನ್ನು ಮಾಡಿದನು. ಈ ಪ್ರಕಾರವಾಗಿ ಅಭಿಷಿಕ್ತನಾಗಿ ಅಶ್ವತ್ಥಾಮನು ದುರ್ಯೋಧನನನ್ನು ತಬ್ಬಿಕೊಂಡು ಸಿಂಹನಾಧಗಳಿಂದ ದಿಕ್ಕುಗಳನ್ನು ಮೊಳಗಿಸುತ ಯುದ್ಧರಂಗಕ್ಕೆ ಹೊರಟನು. ಆ ಬಳಿಕ ದುರ್ಯೋಧನನು ಆ ರಾತ್ರಿಯಲ್ಲಿ ಅಶ್ವತ್ಥಾಮನ ವಾಕ್ಯಗಳನ್ನು ಸ್ಮರಿಸಿ ಸ್ಮರಿಸಿ ಸಂತೋಷಪಡುತಲಿದ್ದನು ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದ

ಅರ್ಥವನ್ನು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ವಿವರಿಸಿದನು ಎಂದು ಸೂತಪುರಾಣಿಕನು ನೈಮಿಶಾರಣ್ಯಕ್ಷೇತ್ರವಾಸಿಗಳಾದ ಶೌನಕಾದಿಋಷಿಗಳಿಗೆ ನಿರೂಪಿಸಿ ಸಿದನು.

Colophon :

ಇಂತು ಕರ್ಣಾಟಕಭಾಷಾವಿರಚಿತ್ರವಾದ ಶ್ರೀಮಹಿಸೂರಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜ ತನೂಜ ದಳಪತಿದೇವರಾಜಾನುಜ ಕಳಲೆ ನಂಜರಾಜ ವಿರಚಿತವಾದ ಶ್ರೀ ನಂಜರಾಜವಾಣೀವಿಲಾಸ ವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥಸಂಖ್ಯೆಯುಳ್ಳ ಶಲ್ಯ ಪರ್ವದಲ್ಲಿ ಅಶ್ವತ್ಥಾಮಸೇನಾಧಿಪತ್ಯಪಟ್ಟಾಭಿಷೇಕವೆಂಬ ೬೭ ನೆಯ ಅಧ್ಯಾಯಾರ್ಥನಿರೂಪಣಕ್ಕೆ ಜಯಮಂಗಳಂ.

ಮಾಲಿನಿ ॥ ಪುರಮಥನ ! ಗಣೇಂದ್ರಾ ! ಪುಣ್ಯಸಂಗಾಬ್ಧಿಚಂದ್ರಾ !
ಪರಶುಧರ ! ಮಹೇಶಾ ! ಫಾಲನೇತ್ರ ಪ್ರಕಾಶಾ ! ।
ಸರಸಜನವಿಧೇಯಾ ! ಸಾಮಗಾನೈಕ ಮಾಯಾ (ಲೋಲಾ) !
ಗರಳಪುರನಿಶಾಂತಾ ! ಕಾಳಿಕಾಪ್ರಾಣಕಾಂತಾ ॥

ಇತಿ ಶ್ರೀಮದಮಿತಾಂಭೋಜಸಂಭವಜಂಭಾರಿಪ್ರಮುಖನಿಖಿಲಸುರಾಸುರವಂದ್ಯಮಾನ ಗರಳಪುರಾಧಿನಾಥಚರಣಾರವಿಂದಸೇವಾಸಮಾಸಾದಿತಗೀರ್ವಾಣಾಂಧ್ರಕರ್ಣಾಟಕಾದಿನಾನಾಭಾಷಾವಿಶೇಷಕಾವ್ಯರಚನಾಚಾತುರೀಧುರೀಣ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ರಾಜಮಾರ್ತಾಂಡ ಪ್ರೌಢಪ್ರತಾಪಾಪ್ರತಿಮವೀರನರಪತಿ ಬಿರುದೆಂತೆಂಬರಗಂಡಬಿರುದಾಂಕಿತ ಶಂಖಚಕ್ರಮಕರಮತ್ಸ್ಯಹನೂಮದ್ಗರುಡಗಂಡಬೇರುಂಡಸಿಂಹಶರಭಸಾಳ್ವಭೂವರಾಹಾದಿ ನಾನಾವಿಧ ಧ್ವಜಬಿರುದಾಂಕಿತ ಸಕಲದೇಶಾಧೀಶಕಿರೀಟಕೋಟಿಮಣಿಶ್ರೇಣಿನೀರಾಜಿತಚರಣಯುಗಳಯಾದವ ವಂಶತಿಲಕ ಶ್ರೀಮಹಿಸೂರ ಕೃಷ್ಣರಾಜ ಸೇನಾಧಿಪದೊಡ್ಡರಾಜಪೌತ್ರ ವೀರರಾಜತನೂಜ ದಳಪತಿದೇವರಾಜಾನುಜ ಪರರಾಜಮದೇಭಪಂಚಾನನ, ದಾನಕ್ಷಾತ್ರಾಧೀಶ್ವರ ಹನುಮದ್ಧ್ವಜ ಬಿರುದಾಂಕಿತ ಶಿವಪೂಜಾಧುರಂಧರ ಭಾರದ್ವಾಜಸಗೋತ್ರಾಶ್ವಲಾಯನ ಸೂತ್ರ ಋಕ್ಛಾಖಾಧ್ಯಾಯಿ ವಿಬುಧಜನವಿಧೇಯ ರಾಜಮಾನ್ಯ ರಾಜಶ್ರೀ ಕಳಲೆ ನಂಜರಾಜ ಕವಿವಿರಚಿತವಾದ ಕರ್ಣಾಟಕಭಾಷಾವಿರಚಿತ್ರವಾದ ನಂಜರಾಜ ವಾಣೀ ವಿಲಾಸ ವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷೆ ಗ್ರಂಥ ಸಂಖ್ಯೆಯುಳ್ಳ ಸಂಹಿತೆಯಲ್ಲಿ ಶಲ್ಯಪರ್ವ ಸಂಪೂರ್ಣಂ ॥

(ವಿ.ವಿ.)

ಶಲ್ಯಪರ್ವ ಸಮಗ್ರವಾಗಿದೆ. ಬರೆವಣಿಗೆ ಚೆನ್ನಾಗಿ ಶುದ್ಧವೆಂದು ಹೇಳುವಂತಿಲ್ಲ. ಸ್ವಲ್ಪ ಶಿಥಿಲ. ಕವಿ ಮೇಲೆ ಹೇಳಿದ ಕಳಲೆಯ ನಂಜರಾಜ. ಮಿಕ್ಕ ವಿಷಯಗಳನ್ನು 89 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 104. ಭಾರತ ವಚನ.

BHĀRATA PROSE.

Substance, palm-leaf. Size, 17¼ × 1⅜ inches. Pages, 196. Lines, 8 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Śalyaparva complete.

A rendering in Kanarese prose describing the story of the Śalyaparva of the Sanskrit Mahābhārata : by Cikkadēvarāja, a well known king of Mysore, who ruled from 1672--1704 A.D He was a great patron of a number of poets and pandits and was well versed in Indian music and Sanskrit and Kanarese literature. His other works are Cikkadēvarājabinnapa, Gītāgōpāla, Bhāgavata vacana, Śēṣadharma etc. For other particulars *vide* Part II of the "Lives of Kannaḍa Poets" by Rao Bahadur R. Narasimhacārya, M.A.

Beginning:

ಶ್ಲೋ॥ ಲಕ್ಷ್ಮೀನಾರಾಯಣಂ ಪ್ರೋರ್ಣ।
ಪ್ರಜ್ಞಂ ಸತ್ಯವತೀಸುತಂ॥
ನತ್ವಾ ಕರೋಮಿ ಶಲ್ಯಸ್ಯ।
ಪರ್ವಣೋ ವಿವೃತಿಂಮುದೇ॥

ವೈಶಂಪಾಯನರು ಜನಮೇಜಯರಾಯನಂ ಕುರಿತು ಕರ್ಣಪರ್ವದಲ್ಲಿ ಶ್ರೀನಾರಾಯಣಾನುಗ್ರಹೋಪ್ರೋದ್ಬಲಿತನಾದ ಧನುರ್ಧರಾಗ್ರಗಣ್ಯನಾದ ಪರಭಟಪಟಲನಗಕುಠಾರನಾದ ಜಯಶೀಲನಾದರ್ಜುನನಿಂದ ಕರ್ಣನು ಹತ್ರನಾದನೆಂದು ನಿರೂಪಿಸಿ, ಈ ಶಲ್ಯಪರ್ವದಲ್ಲಿ ಮಹಾರಥಿಕನಾದ ಕರ್ಣನ ಪತನಾನಂತರದಲ್ಲಿ ಯುಧಿಷ್ಠಿರನಿಂದ ಶಲ್ಯನು ಹತನಾದರ್ಥವು ಹೇಳಲ್ಪಡುತ್ತದೆ.

ಈ ಪರ್ವ ಪ್ರಥಮೋಧ್ಯಾಯದಲ್ಲಿ ವೈಶಂಪಾಯನರು ಜನಮೇಜಯರಾಯನಂ ಕುರಿತು ಶಲ್ಯನ ವಧೆಯನ್ನು ಹೇಳುವಂಥವರಾಗಿ ತದುಪೋದ್ಘಾತವಾಗಿ, ದುರ್ಯೋಧನಾದಿ ಸಕಲರು ಹತ್ರರಾದ ತರುವಾಯದಲ್ಲಿ ಸಂಜಯನು ಹತ್ರರಾದ ಕೌರವರನ್ನು ನೋಡಿ, ಅತಿ ದುಃಖಿತನಾಗಿ ಧೃತರಾಷ್ಟ್ರನ ಸಮೀಪಕ್ಕೆ ಹೋಗಿ ಪುತ್ರನಿಧನವನ್ನು ಹೇಳಲಾಗಿ ಧೃತರಾಷ್ಟ್ರನು ಅತಿಶೋಕದಿಂದ ಪ್ರಲಾಪಿತನಾದನೆಂದು ಹೇಳಿದನೆಂಬರ್ಥವು ಹೇಳಲ್ಪಡುತ್ತದೆ.

ಜನಮೇಜಯರಾಯನು ವೈಶಂಪಾಯನನಂ ಕುರಿತು ಪ್ರಶ್ನೆಯಂ ಮಾಡುತ್ತಿದ್ದಾನೆ. ಎಲೈ! ಬ್ರಾಹ್ಮಣಶ್ರೇಷ್ಠನಾದ ವೈಶಂಪಾಯನನೆ!! ಅರ್ಜುನನಿಂದ ಯುದ್ಧದಲ್ಲಿ ಕರ್ಣನು ಹತನಾದ ತರುವಾಯದಲ್ಲಿ ಅಲ್ಪನಾಗಿಯುಳ್ಳಂತಹ ಕೌರವರು ಏನು ವ್ಯಾಪಾರವನ್ನು ಮಾಡಿದರು. ರಾಯನಾದ ದುರ್ಯೋಧನನು ಭಗ್ನವಾದ ಸೇನೆಯನ್ನು ನೋಡಿ, ಏನಾಲೋಚನೆಯನ್ನು ಮಾಡಿದನು. ಪಾಂಡವರು ತತ್ಕಾಲದಲ್ಲಿ ಯಾವ ವ್ಯಾಪಾರವನ್ನು ಮಾಡಿದರು, ಆ ವೃತ್ತಾಂತವನ್ನು ನನಗೆ ಹೇಳು. ಪೂರ್ವದ ರಾಯರುಗಳ ಮಹತ್ವಾದ ಚರಿತ್ರೆಯನ್ನು ಶ್ರವಣ ಮಾಡುವಂತಹ ನನಗೆ ತೃಪ್ತಿಯಾಗಲಿಲ್ಲವೆಂದು ಪ್ರಶ್ನೆಯಂ ಮಾಡಲಾಗಿ ವೈಶಂಪಾಯನರು ಉತ್ತರವನ್ನು ಹೇಳುತ್ತಲಿದ್ದಾರೆ.

ಎಲೈ! ಜನಮೇಜಯನೆ!! ಕರ್ಣನು ಹತ್ರನಾದ ತರುವಾಯದಲ್ಲಿ ದುರ್ಯೋಧನನು ಶೋಕಾರ್ಣವಮಗ್ನನಾಗಿ ಸಕಲದರಲ್ಲಿಯೂ ನೈರಾಶ್ಯವಂ ಮಾಡಿ, ಹಾ! ಕರ್ಣ!! ಹಾ! ಕರ್ಣ!! ಎಂದು ಬಹುವಿಧವಾಗಿ ಪ್ರಲಾಪಿಸುವಂತಹವನಾಗಿ ಹತಶೇಷರಾಯರುಗಳಿಂದ ಸಮೇತನಾಗಿ ಕಷ್ಟದಿಂದ ಪಾಳೆಯಕ್ಕೆ ಹೋದನು. ಪಾಳೆಯದಲ್ಲಿ ಸಂಪದಪೇಕ್ಷಿಗಳಾದ ರಾಯರುಗಳಿಂದ ಶಾಸ್ತ್ರನೀತಿಗಳಿಂದ ಸಂತವಿಸಲ್ಪಡುವಂತ್ರಹವನಾದನು.

* * * *

ಎಲೈ! ರಾಯನೆ!! ಪಾಂಡವರ ಸೇನೆಯಲ್ಲಿ ಪಂಚಪಾಂಡವರು ಶ್ರೀಕೃಷ್ಣದೇವರು ಸಾತ್ಯಕಿಯಿಂದಕೂಡಿ, ಏಳು ಮಂದಿಯುಳಿದರು. ದುರ್ಯೋಧನನಸೇನೆಯಲ್ಲಿ ಕೃಪಾಚಾರ್ಯರು, ಕೃತವರ್ಮ, ಅಶ್ವತ್ಥಾಮ ಇವರು ಮೂರುಮಂದಿ ಯುಳಿದರು. ಹದಿನೆಂಟು ಅಕ್ಷೋಹಿಣಿ ಸೇನಾಮಧ್ಯದಲ್ಲಿ ಮಹಾರಥಿಕರಾದ ಈ ಹತ್ತು ಮಂದಿಯುಳಿದರು. ಸಮಸ್ತರಾಯರುಗಳು ದುರ್ಯೋಧನನನ್ನು ಪುರಸ್ಕರಿಸಿಕೊಂಡು ಹತರಾದರು. ಸಕಲಜಗತ್ತು ಕಾಲನಿಯಾತ್ಮಕನಾದ ಪರಮಾತ್ಮನಿಂದಲೇ ಹತವಾಯಿತೆಂದು ಸಂಜಯನು ನುಡಿಯಲಾಗಿ, ಧೃತರಾಷ್ಟ್ರನು ಈ ಕ್ರೂರವಚನವನ್ನು ಕೇಳಿ ಅಬಲನಾಗಿ ಭೂಮಿಯಲ್ಲಿ ಬಿದ್ದನು.

ಧೃತರಾಷ್ಟ್ರನು ಮೂರ್ಛಿತನಾದ ತರುವಾಯದಲ್ಲಿ ವಿದುರನು, ಗಾಂಧಾರಿಯೇ ಮೊದಲಾದ ಸಕಲಕೌರವ ಸ್ತ್ರೀಯರೂ ಮೂರ್ಛಿತರಾಗಿ ಬಿದ್ದರು. ಆ ಸಮಯದಲ್ಲಿ ಧೃತರಾಷ್ಟ್ರ ಮಂದಿರದಲ್ಲಿದ್ದ ಜನರು ಅತಿಶೋಕಾರ್ಣವಮಗ್ನರಾಗಿ ನಿಶ್ಚೇಷ್ಟಿತರಾಗಿ, ಪಟದಲ್ಲಿದ್ದ ಚಿತ್ರದೋಪಾದಿಯಲ್ಲಿದ್ದರು. ಆ ಸಮಯದಲ್ಲಿ ಧೃತರಾಷ್ಟ್ರನು ಬಹು ಹೊತ್ತಿನ ಮೇಲೆ ವಿಲಂಬದಿಂದ ಚೈತನ್ಯಹೊಂದಿ (ಯೆಗ್ಗುದಿ) ಸಕಲದಿಕ್ಕುಗಳನ್ನೂ ನೋಡಿ ಕಂಪಿಸುವಂತಹವನಾಗಿ ವಿದುರನಂ ಕುರಿತು ಒಂದು ವಾಕ್ಯವನ್ನು ನುಡಿದನು.

ಮಹಾಪ್ರಾಜ್ಞನಾದ ವಿದುರನೆ! ನೀನು ಪುತ್ರಹೀನನಾದ ಅನಾಥನಾದ ತನಗೆ ಗತಿಯನ್ನು ಸರ್ವಪ್ರಕಾರದಿಂದಲೂ ತಿಳಿದಿದ್ದೆಯೆಂದು ನುಡಿದು ತಿರುಗಿ(ಯು) ಭೂಮಿಯಲ್ಲಿ ಬೀಳಲಾಗಿ ಅಲ್ಲಿದ್ದ ಬಂಧುಜನರು ಶೀತೋದಕದಿಂದ ಸೇಚನವನ್ನು ಮಾಡಿ, ವ್ಯಜನಂಗಳಿಂದ ಬೀಸಲಾಗಿ, ಅನಂತರದಲ್ಲಿ ಎದ್ದವನಾಗಿ ಪುತ್ರವ್ಯಸನದಿಂದ ದುಃಖಿತನಾಗಿ ಸುಮ್ಮನಿದ್ದನು. ಕುಂಭದಲ್ಲಿಡಲ್ಪಟ್ಟು ನಿಟ್ಟುಸಿರನ್ನು ಬಿಡುವ ಸರ್ಪದೋಪಾದಿಯಲ್ಲಿದ್ದ ಧೃತರಾಷ್ಟ್ರನಂ ಕಂಡು; ಸಂಜಯನು, ಗಾಂಧಾರಿ ಮೊದಲಾದ ನಾರಿಯರೂ ರೋದನ ಮಾಡಿದರು. ಅನಂತರ ಧೃತರಾಷ್ಟ್ರನು ಪುನಃ ಪುನಃ ಮೋಹಿತನಾಗುವಂತಹವನಾಗಿ ವಿದುರನಂ ಕುರಿತು ಮಾತನಾಡಿದನು.

ಎಲೈ! ವಿದುಗನೆ!! ಗಾಂಧಾರಿಯು ಮತ್ತು ಸಕಲಸ್ತ್ರೀಯರು, ಸ್ನೇಹಿತರು ಸಕಲರೂ ಹೋಗಲಿ ನನ್ನ ಮನಸ್ಸು ಅತಿಸಂತಪ್ತವಾಗಿದೆ ಯೆನಲಾಗಿ ವಿದುರನು ಗಾಂಧಾರಿ ಮೊದಲಾದ ಸ್ತ್ರೀಯರುಗಳನ್ನೂ ಮತ್ತು ಅಲ್ಲಿದ್ದ ಜನರನ್ನೂ ಹೊರಕ್ಕೆ ಕಳುಹಿಸಿ, ಪುನಃ ಪ್ರವೇಶವನ್ನು ಮಾಡಿ ಮಧುರವಾಕ್ಯದಿಂದ ಧೃತರಾಷ್ಟ್ರನಿಗೆ ಸಮಾಧಾನವನ್ನು ಮಾಡಲಾಗಿ ಧೃತರಾಷ್ಟ್ರನು ರೋದನವನ್ನು ಮಾಡುವ ಸಂಜಯನಂ ಕುರಿತು ಎಲೈ! ಸಂಜಯನೆ!! ನಿನಗೇನು ಗತಿಯೆಂದು ಮಾತನಾಡಿದನೆಂಬುದು ಅಧ್ಯಾಯಾರ್ಥ.

Colophon :

ಇತಿ ಮಹಾಭಾರತೇ ಶಲ್ಯಪರ್ವಣಿ ಪ್ರಥಮೋಧ್ಯಾಯಃ—

ಈ ಅಧ್ಯಾಯದಲ್ಲಿ ಧೃತರಾಷ್ಟ್ರನು ಬಹುಪ್ರಲಾಪಿಸಿ ದುರ್ಯೋಧನಾದಿಗಳ ವಿನಾಶಕ್ರಮವನ್ನು ಸಂಜಯನಂ ಕುರಿತು ಪ್ರಶ್ನೆಯನ್ನು ಮಾಡಿದನೆಂಬರ್ಥವು ಹೇಳಲ್ಪಡುತ್ತದೆ. ವೈಶಂಪಾಯನನು ಜನಮೇಜಯನನ್ನು ಕುರಿತು ಹೇಳುತ್ತಾನೆ.

* * * *

ಧೃಷ್ಟದ್ಯುಮ್ನನು ದುರ್ಯೋಧನನನ್ನು ಪರಾಜಿತವನ್ನು ಮಾಡಲಾಗಿ, ದುರ್ಯೋಧನನು ಕುದುರೆಯನ್ನೇರಿಕೊಂಡು ಓಡಿ ಹೋಗಲಾಗಿ ಧೃಷ್ಟದ್ಯುಮ್ನನು ಗಜಬಲಯುಕ್ತರಾದ ಪಾಂಡವರ ಸಮೀಪಕ್ಕೆ ಬಂದು ಕೌರವ ಸೇನೆಯನ್ನು ಕುರಿತು ಯುದ್ಧವಂ ಮಾಡುವ ಸಮಯದಲ್ಲಿ ಕೃಪಕೃತವರ್ಮಾಶ್ವತ್ಥಾಮರು ಆ ವಾಕ್ಯವಂ ಕೇಳಿ ಶಕುನಿಯು ಸಮೀಪಕ್ಕೆ ಹೋಗಲಾಗಿ ಆ ಧೃಷ್ಟದ್ಯುಮ್ನ ಮೊದಲಾದ ಪಾಂಡವಭಟರು ಕೌರವಸೇನೆಯನ್ನು ಕುರಿತು ಬರಲಾಗಿ ಕೌರವಬಲವು ವಿಮುಖವಾಯಿತು. ಆ ಸಮಯದಲ್ಲಿ ನಾನು ಪರಾಜಿತವಾದ ಕೌರವ (ಬಲ) ವನ್ನು ಜೀವಿತಾಶೆಯನ್ನು ತ್ಯಜಿಸಿ ಗಜತುರಗಪದಾತಿಯುಕ್ತನಾಗಿ ಕೃಪಕೃತವರ್ಮಾಶ್ವತ್ಥಾಮಶಕುನಿಗಳಿಂದ ಕೂಡಿ ದುರ್ಯೋಧನನನ್ನೊಂದು ಪಾರ್ಶ್ವದಲ್ಲಿಟ್ಟು ಧೃಷ್ಟದ್ಯುಮ್ನಸೇನೆಯಿಂದ ಯುದ್ಧವಂ ಮಾಡಿದೆನು. ಆ ಸಮಯದಲ್ಲಿ ನಾವು ಅರ್ಜುನ ಶರಂಗಳಿಂದ ಪೀಡಿತರಾಗಿ ರಣಮಂಡಲದಿಂದಲೂ ಪರಾಜಿತ್ರರಾಗಿ ಬರುತ್ತಿರುವ ಸಮಯದಲ್ಲಿ ಸಾತ್ಯಕಿಯು ರಥಿಕರಿಂದಲೂ ಯುಕ್ತನಾಗಿ ನನ್ನಂ ಕುರಿತು ಬರಲಾಗಿ ನಾನು ಧೃಷ್ಟದ್ಯುಮ್ನನ ದೆಸೆಯಿಂದತಿಪ್ರಯಾಸವಾಗಿ ವಾಹನರಹಿತನಾಗಿ ಓಡಿಬಂದ ನಾನು ನರಕದಲ್ಲಿ ಬೀಳುವ ಪಾಪಿಯೋಪಾದಿಯಲ್ಲಿ ಸಾತ್ಯಕಿಯು ಬಲದೊಳಗಿ ಬಿದ್ದೆನು. ಆ ಸಮಯದಲ್ಲಿ ನಾನು ಮುಹೂರ್ತಪರಿಯಂತ ಘೋರಯುದ್ಧವಂ ಮಾಡಲಾಗಿ, ಸಾತ್ಯಕಿಯು ನನ್ನ ಕವಚವನ್ನು ಭೇದಿಸಲಾಗಿ ನಾನು ಮೂರ್ಛಿತನಾಗಿ ಬಿದ್ದೆನು. ಆ ಸಮಯದಲ್ಲಿ ಭೀಮಾರ್ಜುನರು ಗದಾನಾರಾಚಗಳಿಂದ ನಗಸಮಗಜಗಳನ್ನು ಸಂಹರಿಸಲಾಗಿ ಬಿದ್ದ ಗಜಗಳಿಂದ ರಥಮಾರ್ಗವು ಪ್ರತಿಬದ್ಧವಾಗಲಾಗಿ ಮಹಾಬಲನಾದ ಭೀಮಸೇನನು ಗದೆಯಿಂದ ಗಜಗಳನ್ನು ತರಿದು ರಥಮಾರ್ಗವಂ ಮಾಡಲಾಗಿ ಕೃಪಕೃತವರ್ಮಾಶ್ವತ್ಥಾಮರು ರಥಿಕರ ಮಧ್ಯದಲ್ಲಿ ದುರ್ಯೋಧನನ್ನು ಕಾಣದೆ ಅರಸಿ ಬಹುಬಲಕ್ಷಯವಾಗಲಾಗಿ ಶಕುನಿಯು ಸಮೀಪದಲ್ಲಿದ್ದ ದುರ್ಯೋಧನನಿಗೆ ಲಜ್ಜಿತರಾಗಿದ್ದರು.

End:

ಬಲರಾಮನು ಪ್ರತ್ಯುತ್ಥಾನವಂ ಮಾಡಿ ನಾರದ ಋಷೀಶ್ವರನನ್ನು ಪೂಜಿಸಿ, ಕೌರವರ ವೃತ್ತಾಂತವನ್ನು ಪ್ರಶ್ನೆ ಮಾಡಲಾಗಿ ಸರ್ವಜ್ಞನಾದ ನಾರದನು (ಆದಂಥ) ಕುರುಕುಲಕ್ಷಯವನ್ನು ಯಥಾರ್ಥವಾಗಿ ಬಲರಾಮನೊಡನೆ ಹೇಳಲಾಗಿ, ಬಲರಾಮನು ದೀನವಾಕ್ಯದಿಂದ ನಾರದನಂ ಕುರಿತು ಮತ್ತೂ ಪ್ರಶ್ನೆಯಂ ಮಾಡಿದನು.

ಎಲೈ ! ನಾರದರೆ ! ಈ ಕ್ಷತ್ರಿಯ ಕುಲವು ಏನವಸ್ಥೆಯುಳ್ಳದ್ದಾಯಿತು. ಆರು ಆರಪಕ್ಷವಾಗಿದ್ದರು, ಆ ವೃತ್ತಾಂತವನ್ನು ನಾನು ಪೂರ್ವದಲ್ಲಿ ಯೋಗಕ್ಷೇಮದಿಂ ಕೇಳಿದ್ದೇನೆ. ಈಗ ವಿಸ್ತಾರದಿಂ ನೀವೇಳೆನಲಾಗಿ ನಾರದರು ಹೇಳುತ್ತಿದ್ದಾರೆ.

ಎಲೈ ! ಬಲರಾಮನೆ ! ಪ್ರಥಮದಲ್ಲಿ ಸೇನಾಧಿಪತಿಯಾದ ಭೀಷ್ಮನು ಹತನಾದನು. ಅನಂತರದಲ್ಲಿ ದ್ರೋಣನು ಹತನಾದನು ಆ ತರುವಾಯ ಕರ್ಣನೂ ಪುತ್ರನೂ (?) ಭೂರಿಶ್ರವನೂ ಹತರಾದರು. ಅನಂತರದಲ್ಲಿ ಶಲ್ಯನು ಹತನಾದನು. ಎಲೈ ! ಬಲರಾಮನೆ ! ಮತ್ತೂ ಬಹುವಾಗಿ ರಾಜರಾಜಪುತ್ರರು ಪ್ರೀತಿವಿಷಯಗಳನ್ನೂ ಪ್ರಾಣಗಳನ್ನೂ ತ್ಯಜಿಸಿ ದುರ್ಯೋಧನಹಿತಾರ್ಥವಾಗಿ ಯುದ್ಧಗಳಲ್ಲಿ ತಿರುಗದೆ ಹತರಾದರು. ಎಲೈ ! ಮಹಾಬಲಶಾಲಿಯಾದ ಬಲರಾಮನೆ ! ಕೌರವ ಸೇನೆಯಲ್ಲುಳಿದವರನ್ನು ಹೇಳುತ್ತೇನೆ, ಕೇಳು. ಕೃಪ ಕೃತವರ್ಮ ಪರಾಕ್ರಮಶಾಲಿಯಾದ ಅಶ್ವತ್ಥಾಮ ಈ ಮೂರುಮಂದಿಯೂ ಭಗ್ನಸೈನ್ಯರಾಗಿ ದಿಕ್ಕುದಿಕ್ಕುಗಳಿಗೆ ಓಡಿಹೋದರು ದುರ್ಯೋಧನನ ಸೈನ್ಯವು ಹತವಾಗಲಾಗಿ ಪದಾತಿಯು ಚದುರಿದ ತರುವಾಯದಲ್ಲಿ ಅತಿ ದುಃಖಿತನಾಗಿ ಕೃಷ್ಣದ್ವೈಪಾಯನವೆಂಬ ಸರೋವರವನ್ನು ಪ್ರವೇಶಮಾಡಿ ಜಲಸ್ತಂ

ಭನದಿಂದ ಉದಕದಲ್ಲಿ ಶಯನವಂ ಮಾಡುತ್ತಿರಲಾಗಿ, ಕೃಷ್ಣದೇವರಿಂದ ಸಹಿತರಾದ ಪಾಂಡವರು ಉಗ್ರವಾಕ್ಯಗಳಿಂದ ಮರ್ದಿಸಲಾಗಿ ಪಾಂಡವ ವಾಗ್ಬಾಣ ವಿದ್ಧನಾದ ಬಲಶಾಲಿಯಾದ ದುರ್ಯೋಧನನು ಮಹದ್ಗದೆಯನ್ನು ತೆಗೆದುಕೊಂಡು ಮಡುವಿನಿಂದ ಹೊರಕ್ಕೆ ಬಂದು, ಈಗ ಭೀಮಸೇನ (ನಿಂದ) ನೊಡನೆ ಅತ್ಯದ್ಭುತ ಯುದ್ಧವಂ ಮಾಡುತ್ತಿದಾನೆ. ಈಗ ಭೀಮದುರ್ಯೋಧನರಿಗತಿ ಭಯಂಕರ ಯುದ್ಧವಾಗುತ್ತಿದೆ. ನಿನಗೆ ನೋಡಬೇಕೆಂಬಭಿಲಾಷೆಯಿದ್ದರೆ ಶೀಘ್ರದಲ್ಲಿ ಹೋಗಿ ಶಿಷ್ಯನಯುದ್ಧವಂ ನೋಡೆನಲಾಗಿ ಬಲರಾಮನು ನಾರದ ವಾಕ್ಯವಂಕೇಳಿ, ಅಲ್ಲಿದ್ದ ಋಷಿಗಳಂ ಪೂಜಿಸಿ ತನ್ನ ಸಕಲಾನು ಚರರನ್ನೂ ದ್ವಾರಕಾಪಟ್ಟಣಕ್ಕೆ ಹೋಗೆಂದು ಕಳುಹಿಸಿ, ಹಿಮವತ್ಪರ್ವತದ ದೆಸೆಯಿಂದಿಳಿದು ಪ್ಲಕ್ಷಪ್ರಸರಣತೀರ್ಥದಿಂದಲು ಬಂದು ಬ್ರಾಹ್ಮಣರಿಂದ ಆಶೀರ್ವಾದ ಮಹಿಮೆಯಂ ಕೇಳಿ ಸುಪ್ರೀತ ಮನಸ್ಕನಾಗಿ ಮಹಾಬಲಶಾಲಿಯಾದ ಬಲರಾಮನು ಬ್ರಾಹ್ಮಣರ ಮುಂದೆ ಶ್ಲೋಕವಂ ದಾನ ಮಾಡುವಂತಹವನಾಗಿ ಸರಸ್ವತೀವಾಸಕ್ಕೆ ಸಮಾನವಾದ ಸರಸಿಯಿಲ್ಲ. ಸರಸ್ವತೀ ವಾಸಕ್ಕೆ ಸಮವಾದ ಪೂಜೆಯು ಇಲ್ಲ. ಸರಸ್ವತೀತೀರಕ್ಕಿಂತಲೂ ಭಿನ್ನ ದೇಶದಲ್ಲಿದ್ದ ಜನರು ನಿರಂತರವೂ ಸರಸ್ವತಿಯನ್ನೇ ಸ್ಮರಿಸುತ್ತಿದ್ದಾರೆ ಸರಸ್ವತಿಯು ಸರ್ವನದೀ ಮಧ್ಯದಲ್ಲಿ ಪೂಜ್ಯನದಿ. ಸರಸ್ವತಿಯು ಸರ್ವಲೋಕ ಸುಖವರ್ತ್ತಿನಿ. ನರರು ಸರಸ್ವತೀ ನದಿಯಲ್ಲಿ ಸ್ನಾನಮಾಡಿ ಸಕಲಪಾಪಗಳನ್ನೂ ಪರಿಹರಿಸಿಕೊಂಡು ಇಹಲೋಕ ಪರಲೋಕಗಳನ್ನೈದುತ್ತಾರೆಂಬ ಶ್ಲೋಕವನ್ನು ಬಲರಾಮನು ಹೇಳುವಂತಹವನಾಗಿ, ಭಕ್ತಿಯಿಂದ ಪುನಃ ಸರಸ್ವತೀ ನದಿಯನ್ನು ನೋಡುವಂತಹವನಾಗಿ ತುರಗಯುಕ್ತವಾದ ರಥವನ್ನು ಶೀಘ್ರದಲ್ಲಿಯೇರಿಕೊಂಡು ಯದುಪುಂಗವನಾದ ಬಲರಾಮನು ಶಿಷ್ಯರಾದ ಭೀಮದುರ್ಯೋಧನರ ಪ್ರಸಕ್ತವಾದ ಯುದ್ಧವಂ ನೋಡಬೇಕೆಂದು ಶೀಘ್ರಗಾಮಿಯಾದ ರಥದಿಂದ ಯುದ್ಧಭೂಮಿಗೆ ಬಂದನು.

ಎಲೈ ! ಜನಮೇಜಯನೆ ! ಈ ಪ್ರಕಾರ ಭೀಮದುರ್ಯೋಧನರಿಗೆ ಮಹಾಯುದ್ಧವಾಯಿತು. ಅನಂತರದಲ್ಲಿ ಧೃತರಾಷ್ಟ್ರನು ದುಃಖಾನ್ವಿತನಾಗಿ ಸಂಜಯನಂ ಕುರಿತು ಎಲೈ ! ಸಂಜಯನೇ ! ನನ್ನ ಪುತ್ರನಾದ ದುರ್ಯೋಧನನು ಭೀಮಸೇನನಿಂದ ಗದಾಯುದ್ಧವು ಪ್ರಾಪ್ತವಾಗಲಾಗಿ ಬಲರಾಮನು ಸಮೀಪಕ್ಕೆ ಬಂದನೆಂದು ಕೇಳಿ ಭೀಮಸೇನನನ್ನು ಕುರಿತು ಹೇಗೆ ಯುದ್ಧವಂ ಮಾಡಿದನೆಂಬುದು ಅಧ್ಯಾಯಾರ್ಥ. ಈ ಅಧ್ಯಾಯದ ತಾತ್ಪರ್ಯವೆಂತೆನೆ :—ಬಲರಾಮನು ಸರಸ್ವತೀನದೀಗತವಾದಸಕಲತೀರ್ಥಗಳಲ್ಲಿಯೂ ಸ್ನಾನದಾನಗಳು ಮಾಡಿ, ಸರಸ್ವತೀ ನದಿಯ ಮಹಾಮಹಿಮೆಯಂ ಕೇಳಿ ನಾರದಮುಖವಚನದಿಂದ ಕೌರವಬಲಕ್ಷಯವಂ ಕೇಳಿ, ತನ್ನನುಚರರನ್ನು ದ್ವಾರಕಾಪಟ್ಟಣಕ್ಕೆ ಕಳುಹಿಸಿ ಸರಸ್ವತೀ ನದಿಯಂ ಸ್ತೋತ್ರಮಾಡುವಂತಹವನಾಗಿ ಅತಿಜವರಥಯುತನಾಗಿ ಭೀಮದುರ್ಯೋಧನರ ಯುದ್ಧವಂ ನೋಡಬೇಕೆಂದು ಯುದ್ಧರಂಗಕ್ಕೆ ಬಂದನೆಂಬುದು ತಾತ್ಪರ್ಯ.

Colophon :

ಇತಿ ಮಹಾಭಾರತೇ ಶಲ್ಯಪರ್ವಣಿ ರಾಮತೀರ್ಥಯಾತ್ರಾಯಾಂ ಷಟ್ಪಂಚಾಶೋಧ್ಯಾಯಃ

ಶ್ಲೋ॥ ಭಾಷಾಯಾಂ ಶಲ್ಯಪರ್ವೇದಂ ।
ಕರ್ಣಾಟಕ್ಯಾಂ ಯಥಾಮತಿ ॥
ವಿವೃತಂ ಹರಿ ತುಷ್ಟ್ಯರ್ಥಂ ।
ದಯಾಂ ಕುರ್ವಂತು ಸೂರಯಃ ॥

ಇತಿ ಶಲ್ಯಪರ್ವ ಸಮಾಪ್ತಂ

॥ ಗದ್ಯ ॥

ಇದು ನಿದು ಸಕಲಸುರಾಸುರಮೌಳಿಮಣಿಶ್ರೇಣಿಮಂಜರಿಪಿಂಜರಿತಮುಕುಂದಪಾದಾರವಿಂದಮಕರಂದಧಾರಾಸಮೇಧಿತಮಧುಕರಾಯಮಾನ ನಿಜಾಂತರಂಗತ್ತರಂಗಕರಸಮುದಂಚಿತಶೀಕರಕುಸುಮಾವಳಿಸಮರ್ಪಣಸಮಾಕುಲಕಾವೇರೀಪೂರಪರಿತ ಪಶ್ಚಿಮರಂಗಪುರೀನಿಕೇತನ ಕೇತನಾಗ್ರನಿವೇಶಿತವಿನುತಾನಂದನಾವಲೋಕನನುಕಲಪಲಾಯಿತಸಮಸ್ತ ಸಾಮಂತನೃಪಸರ್ವಸ್ವಸಂಕ್ರಮಣ ದಕ್ಷಿಣ ದಕ್ಷಿಣೋತ್ತರಪೂರ್ವಪಶ್ಚಿಮಾಬ್ಧಿವೇಲಾವಲಯಿತಮಹೀತಲ ಮಹಿಶ್ರೋತ್ರಿಯಕುಲದಾರಿದ್ರ್ಯವಿದ್ರಾವಣೋನ್ನಿದ್ರ ಷೋಡಶ ಮಹಾದಾನಪಿಶ್ರಾಣನ ಶಾರದ ಶಾರದಾಹೃದಯಾನಂದಕಂದಳ ಸಾನುಷಾಂಗಿಸಂಗೀತಸಾಹಿತ್ಯಕಲಾಧರ ವಿಮಲಯಾದವಕುಲಕಲಶೋದಧಿಕಲಾಧರ ಶ್ರೀಮದ್ರಾಜಾಧಿರಾಜರಾಜಪರಮೇಶ್ವರಾ ಪ್ರತಿಮಘೌಢಪ್ರತಾಪ ಪ್ರತಿಮ ಶ್ರೀವೀರ ಚಿಕ್ಕದೇವರಾಯ ವಿರಚಿತಮಪ್ಪ ಕರ್ಣಾಟಕ ಭಾಷಾರಚಿತಮಪ್ಪ ಮಹಾಭಾರಥ ಕಥಾ ಬಿಪ್ಪಣದೊಳಾ ಶಲ್ಯಪರ್ವಂ ಸಮಾಪ್ತಂ.

(ವಿ.ವಿ.)—

ಶಲ್ಯಪರ್ವ ಸಂಪೂರ್ಣವಾಗಿದೆ. ವಿಶೇಷ ತಪ್ಪುಗಳಿಲ್ಲ. ಸ್ವಲ್ಪ ಶಿಥಿಲ. ಬರೆವಣಿಗೆ ಚೆನ್ನಾಗಿದೆ. ಕವಿ, ಚಿಕ್ಕದೇವರಾಜ. ಈತನು ಮೈಸೂರು ದೊರೆಗಳಲ್ಲಿ ಪ್ರಸಿದ್ಧನು. ಕ್ರಿ. ಶ. 1672—1704 ರ ವರೆಗೆ ರಾಜ್ಯಭಾರ ಮಾಡಿದನು. ಈತನು ಬಹಳ ಪರಾಕ್ರಮಿಯೆಂಬುದೂ, ವಿಧ್ವತ್ಪ್ರಭುವೆಂಬುದೂ, ವಿದ್ವಾಂಸರಿಗೆ ಪ್ರೋತ್ಸಾಹಕನೆಂಬುದೂ, ಸಂಗೀತಸಾಹಿತ್ಯಕೋವಿದನೆಂಬುದೂ ಈ ಪರ್ವದ ಕಡೆಯ ಗದ್ಯದಿಂದ ತಿಳಿಯಬರುತ್ತದೆ. ಭಾರತವಲ್ಲದೆ ಈತನು ಚಿಕ್ಕದೇವರಾಜಬಿನ್ನಪ, ಗೀತಗೋಪಾಲ, ಭಾಗವತ, ಶೇಷಧರ್ಮಗಳನ್ನೂ ಬರೆದಿರುವುದಾಗಿ ತಿಳಿಯಬರುತ್ತದೆ. ಉಳಿದ ಸಂಗತಿಗಳಾವುದಿದ್ದರೂ ಕರ್ಣಾಟಕ ಕವಿಚರಿತ್ರೆಯ ಎರಡನೆಯ ಸಂಪುಟವನ್ನು ನೋಡಿ ತಿಳಿಯುವುದು.

No. 105. ಭಾರತ ವಚನ.
BHĀRATA PROSE.

Substance, palm-leaf. Size, $17\frac{1}{4} \times 1\frac{3}{8}$ inches. Pages, 58. Lines, 8 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Gadāparva complete.

A rendering in Kanarese prose. of the story of the Gadāparva of the Sanskrit Mahābhārata by Cikkadēvarāja For other particulars see under No. 104.

Beginning:

ಸಂಜಯುವಾಕ್ಯವು—ಕೇಳು ! ನೃಪನೆ ! ನಿನ್ನ ಸುತನು ಪಾಂಡವರೊಡನೆ ವಿರೋಧವಂ ಮಾಡಿ ಅತಿರಥಿಕರಾದ ಭೀಷ್ಮದ್ರೋಣಕರ್ಣಾದಿಗಳ (ನ್ನು) ಹತವಂಮಾಡಿಸಿ, ಅವರಿಗಿಂತಲೂ ಸ್ವಲ್ಪಸಾಮರ್ಥ್ಯವುಳ್ಳ ಶಲ್ಯನಿಂದ ಜಯವನ್ನಪೇಕ್ಷಿಸಿ ಅಂಥಾ ಆಸೆ ವಿಫಲವಾದ ಬಳಿಕ ತಾನಾದರೂ ಕಾರ್ಯವಂ ಸಾಧಿಸುವೆನೆಂದು ಪಾಂಡವರೊಡನೆ ಗದಾಯುದ್ಧಕ್ಕೊಡಂಬಟ್ಟು ಬಲರಾಮನ

ಸಾನ್ನಿಧ್ಯವನ್ನೈದಿ ಗಧಾಯುದ್ಧವಂ ಮಾಡಿದ ವೃತ್ತಾಂತವಂ ಸಂಜಯನು ಧೃತರಾಷ್ಟ್ರನಿಗೆ ನಿರೂಪಿಸುತ್ತಿದಾನೆ. ಅದೆಂತೆನೆ :—ನಿನ್ನ ಸುತನಾದ ದುರ್ಯೋಧನನು ಗದಾಯುದ್ಧವಂ ಮಾಡುವಪೇಕ್ಷೆಯುಳ್ಳವನಾಗಿ ಬಲರಾಮಸಾನ್ನಿಧ್ಯವನ್ನೈದಿ ಬಾಹುಬಲವುಳ್ಳವನಾದ ಕಾರಣ ಪ್ರತಾಪಶಾಲಿಯಾದ ಕಾರಣ, ಉನ್ನತ ಸಂತೋಷಪಟ್ಟವನಾದ ಎಲೈ ! ಭರತಶ್ರೇಷ್ಠನೆ ! ದುರ್ಯೋಧನನು ಬಲರಾಮನಂ ನೋಡಿ ಉತ್ಕೃಷ್ಟವಾದ ಸಂತೋಷದೊಡನೆ ಕೂಡಿದವನಾಗಿ ಪ್ರತ್ಯುತ್ಥಾನವಂ ಮಾಡಿ ಧರ್ಮರಾಯನಂ ಕುರಿತು ಒಂದು ವಾಕ್ಯಮಂ ಪೇಳಿದವನಾದನು. ಅದೆಂತೆನೆ ;

ಎಲೈ ! ನೃಪನೆ ! ಬ್ರಹ್ಮಲೋಕದಲ್ಲಿ ಬ್ರಹ್ಮನ ಉತ್ತರವೇದಿಯಾಗಿ ಪ್ರಸಿದ್ಧವಾದ ಪವಿತ್ರವಾದ ಶ್ಯಮಂತ ಪಂಚಕ ಕ್ಷೇತ್ರವನ್ನು ಕುರಿತು ಈ ಸ್ಥಳದ ದೆಸೆಯಿಂದ ನಾವು ಹೋಗುವ ಸ್ಥಿತವಾದ ಅನಾದಿಸಿದ್ಧವಾದ ಪುಣ್ಯತಮವಾದ ಆಶ್ಯಮಂತ ಪಂಚಕಕ್ಷೇತ್ರದಲ್ಲಿ ಯುದ್ಧದಲ್ಲಿ ಮರಣವನ್ನೈದಿ ಸ್ವರ್ಗವನ್ನೈದುವೆಯೆನ್ನಲಾಗಿ ಕುಂತೀಸುತನಾದ ಧರ್ಮರಾಯನು ಹಾಗೆಯೇ ಅಂಗೀಕರಿಸಿ ಪ್ರತಾಪಶಾಲಿಯಾಗಿ ಅಭಿಮುಖನಾಗಿ ಸಮರ್ಥನಾಗಿ ಶ್ಯಮಂತಪಂಚಕ ಕ್ಷೇತ್ರವನ್ನೈ-

ಯ್ದಿದನು. ಬಳಿಕ ಎಲೈ ಭರತ ಶ್ರೇಷ್ಠನೆ ದುರ್ಯೋಧನನು ದೊಡ್ಡಿತ್ತಾದ ಗದೆಯನ್ನು ತೆಗೆದುಕೊಂಡು ಪಾದಚಾರಿಯಾಗಿ ಕಾಂತಿಯುಳ್ಳವನಾಗಿ ಪಾಂಡವರೊಡನೆ ಕೂಡಿ ಕೋಪದತ್ತಣಿಂ ಬಂದವನಾದನು. ಆ ಸಮಯದಲ್ಲಿ ಗದಾಪಾಣಿಯಾಗಿ ಬರುವ ಕವಚಧಾರಿಯಾದ ಸಂಹಾರಕನಾದ ದುರ್ಯೋಧನನಂ ನೋಡಿಯಂತರಿಕ್ಷಚರರಾದ ದೇವತೆಗಳು ಸ್ತೋತ್ರವಂ ಮಾಡಿದರು. ಆ ಕ್ಷೇತ್ರದಲ್ಲಿ ವಾದಕರಾದ ಮನುಷ್ಯರು ದುರ್ಯೋಧನನಂ ನೋಡಿ ಸಂತೋಷವನ್ನೈದಿದರು. ನಿನ್ನ ಸುತನಾದ ದುರ್ಯೋಧನನು ಪಾಂಡವರೊಡನೆ ಕೂಡಿ ಮತ್ತಗಜಕ್ಕೆ ಸಮಾನವಾದ ಬುದ್ಧಿಯುಳ್ಳಂಥವನಾಗಿ ಆ ಸ್ಥಲವನ್ನೈದಿದನು. ಬಳಿಕ ಶಂಖನಾದಂಗಳಿಂದಲೂ, ಭೇರೀಧ್ವನಿಗಳಿಂದಲೂ ಶೂರರ ಸಿಂಹನಾದಂಗಳಿಂದಲೂ ಸಮಸ್ತವಾದ ದಿಕ್ಕುಗಳು ಪೂರಿಸಲ್ಪಟ್ಟುವು. ವೀರಭಟರಿಂದ ಸಮಸ್ತವಾದ ದಿಕ್ಕುಗಳಲ್ಲಿ ವ್ಯಾಪ್ತವಾದ ಪೂರ್ವೋಕ್ತವಾದ ಸ್ಯಮಂತ ಪಂಚಕ್ಷೇತ್ರವನ್ನು ಕುರಿತು ಅಭಿಮುಖನಾಗಿ ನಿನ್ನಸುತನೆಯ್ದುತಿರಲಾಗಿ ಉತ್ತಮನಾದ ಸರಸ್ವತೀದಕ್ಷಿಣತೀರವನ್ನೈದಿ ಯಪರಿಮಿತರಾದತಿರಥರು ಆ ಕ್ಷೇತ್ರದಲ್ಲಿ ಯುದ್ಧಸನ್ನದ್ಧರಾದರು. ಬಳಿಕ ಮರ್ಮಜ್ಞನಾದ ಭೀಮನು ಮಹಾಕೋಟಿಯಾದ ಗದೆಯಂ ತೆಗೆದುಕೊಂಡು ಎಲೈ ! ಧೃತರಾಷ್ಟ್ರನೆ ಗರುಡನಿಗೆ ಸಮಾನವಾದ ರೂಪವನ್ನು ತಾಳಿದನು. ಎಲೈ ! ನೃಪನೆ ! ನಿನ್ನ ಮಗನು ಶಿರಃಕಚಪಚವು ಸುವರ್ಣವಿಕಾರವಾದ ಅಂಗ ಕವಚವುಳ್ಳವನಾಗಿ ಮಹಾಮೇರುಪನೋಪಾದಿಯಲ್ಲೊಪ್ಪಿದನು. ಭೀಮದುರ್ಯೋಧನರು ಅತಿವೀರರಾಗಿ ಯುದ್ಧಧಲ್ಲಿ ಯಾವ ಸಮಯದಲ್ಲಿ ಕೂಡಿದರೋ ಆ ಸಮಯದಲ್ಲಿ ಅವರಿಬ್ಬರೂ ಮತ್ತಗಜಗಳೋಪಾದಿಯಲ್ಲೊಪ್ಪಿದರು.

* * * *

ಬಳಿಕ ದುರ್ಯೋಧನನು ಶೃಂಜಯರೊಡನೆ ಕೂಡಿದ ಪ್ರಕಾಶಿಸುವ ಸೂರ್ಯನೋಪಾದಿಯಲ್ಲಿ ಧರ್ಮರಾಯನಂ ಕುರಿತು ಭೀಮನಿಗೂ ನನಗೂ ಈ ಗದಾಯುದ್ಧ ನಿರ್ಣಯಿಸಲ್ಪಟ್ಟಿತು. ನೀವು ಸಮಸ್ತವಾದ ಅರಸುಗಳ ಸಮೀಪದಲ್ಲಿ ಕುಳಿತು ಈ ಯುದ್ಧವಂ ನೋಡಿರೈ ಎಂದು ಹೇಳಿದನು. ಬಳಿಕ ಅದೇ ರೀತಿಯಲ್ಲಿ ಯುದ್ಧದರ್ಶನಾರ್ಥವಾಗಿ ಬಂದು ಕುಳಿತಿದ್ದ ರಾಜಮಂಡಲವನ್ನು ಆಕಾಶಮಾರ್ಗದಲ್ಲಿ ಪ್ರಕಾಶಿಸುವ ಸೂರ್ಯಮಂಡಲದೋಪಾದಿಯಲ್ಲಿ ಕಂಡವನಾದನು. ಆ ನೋಡುವ ಅರಸುಗಳಿಗೆ ವೆಗ್ಗಳವಾದ ಬಾಹುಬಲವುಳ್ಳ ಮಹಾವಿಷ್ಣುವಿಗೆ ಅಗ್ರಜನಾದ ಪೂಜ್ಯನಾದ ಬಲರಾಮನು ನೀಲಾಂಬರ ದ್ಯುತಿಯಾಗಿ ಶುಭ್ರವಾದ ದೇಹಕಾಂತಿಯುಳ್ಳವನಾಗಿ, ರಾಜಮಂಡಲದೊಳಗೆ ನಕ್ಷತ್ರಮಂಡಲದಲ್ಲಿ ಚಂದ್ರಮಂಡಲದೋಪಾದಿಯಲ್ಲಿ ಪ್ರಕಾಶಿಸಿದನು. ಬಳಿಕ

ಗದಾಪಾಣಿಗಳಾದ ದುರ್ಜಯರಾದ ಆ ದುರ್ಯೋಧನಭೀಮರು ಪರಸ್ಪರ ಉಗ್ರವಾಕ್ಯಗಳಿಂದ ಯುದ್ಧವಂ ಮಾಡುವರಾಗಿ ನಿರ್ಣಯವಂ ಮಾಡಿಕೊಂಡು ಮತ್ತೂ ಅನ್ಯೋನ್ಯ ಅಪ್ರಿಯ ವಾಕ್ಯಗಳನುಡುವರಾಗಿ ಆ ನರಶ್ರೇಷ್ಠರಿಬ್ಬರೂ ವೃತ್ರಾಸುರದೇವೇಂದ್ರರೋಪಾದಿಯಲ್ಲಿ ಕಾಣಲ್ಪಟ್ಟರು.

Colophon :

ಇದು ಗದಾಪರ್ವದಲ್ಲಿ ಮೊದಲನೆಯ ಅಧ್ಯಾಯ.

ವೈಶಂಪಾಯನರು ಜನಮೇಜಯನನ್ನು ಕುರಿತು ಹೇಳುವ ಕಥಾವೃತ್ತಾಂತವೆಂತೆನೆ :— ಎಲೈ ! ಜನಮೇಜನರಾಯನೆ ! ಬಳಿಕ ದುರ್ಯೋಧನಭೀಮರಿಗೆ ರೋಷಸಂಕುಲವಾದ ವಾಕ್ಕಲಹ ವಾಯಿತು.

* * * *

ಸಿಂಹದಿಂದ ಬಿದ್ದ ಮತ್ತಗಜದೋಪಾದಿಯಲ್ಲಿರುವ ದುರ್ಯೋಧನನನ್ನು ನೋಡಿ ಸಂತೋಷವುಳ್ಳ ರೋಮಾಂಚವುಳ್ಳವರಾಗಿ ಸೃಂಜಯರು ಸಹಾ ಪಾಂಡವರು ನೋಡಿದರು. ಬಳಿಕ ಪ್ರತಾಪಶಾಲಿಯಾದ ಭೀಮಸೇನನು ಬಿದ್ದ ಕುರುಶ್ರೇಷ್ಠನಂ ನೋಡಿ ಒಂದು ವಾಕ್ಯವಂ ನುಡಿದನು. ಎಂತೆನೆ.—ಸಭಾಮಧ್ಯದಲ್ಲಿ ದ್ರೌಪದಿಯ ವಸ್ತ್ರಾಪಹಾರವಂ ಮಾಡಿ, ಅವರು ಆ ನಮ್ಮನ್ನು ಪಶುಗಳೆಂದು ದುರ್ಬುದ್ಧಿಯುಳ್ಳ ಯಾವ ನೀನು ಹಾಸ್ಯವಂ ಮಾಡಿದೆಯೋ ಹಾಸ್ಯವಂ ಮಾಡಿದೆಯೋ ತತ್ಫಲವನ್ನನುಭವಿಸೆಂದು ವಾಮಪಾದದಿಂದ ಭೂಮಿಯನ್ನು ಬಡಿದು, ಅದೇ ರೀತಿ ಶತ್ರುವಾದ ಸುಯೋಧನನ ಶಿರಸ್ಸಿನಲ್ಲಿ ದ್ರೌಪದಿಯ ವಾಮಪಾದದಿಂದ ಪ್ರಹರಿಸಿ ಪರಬಲಭೇದಕನಾದ ಭೀಮನು ಕ್ರೋಧದೊಡನೆ ಕೂಡಿದವನಾಗಿ ಮತ್ತೊಂದು ವಾಕ್ಯವನ್ನು ನುಡಿದನವೆಂತೆನೆ:—ಕೇಳೈ ! ಧೃತರಾಷ್ಟ್ರನೆ ! ಯಾರು ಕೆಲವರು ನಮ್ಮನ್ನು ಪೂರ್ವದಲ್ಲಿ ಸೂರೆಸೂರೆಗೂ ಪಶುಗಳೆಂತ ವಸ್ಸಿನಿಂದು ಕುಣಿಯಿಸಿದರೋ ಅವರನು ನಾವೀಗ ಪಶುಗಳು ನೀವೆಂದು ಕುಣಿಯಿಸುತ್ತಿದ್ದೇವೆ. ನಮಗೆ ಜೂಜಿಲ್ಲ. ಅಕ್ಷದ ದ್ಯೂತವಿಲ್ಲ. ಮತ್ತೇನೆಂದರೆ ಶತ್ರುಗಳನು ಬಾಹುಬಲದಿಂದಲೇ ಸಂಹರಿಸುವೆನು ಎಂದು ಹೇಳಿ ಭೀಮನು ಸಮಸ್ತವಾದ ವೈರವನ್ನು ತೀರಿಸಿಕೊಂಡು ಭೀಮನು ನಗುವುಳ್ಳವನಾಗಿ, ಧರ್ಮರಾಯನನ್ನು ಕೃಷ್ಣನ, ಸೃಂಜಯರ, ಅರ್ಜುನನ ನಕುಲಸಹದೇವರಂ ಕುರಿತು ಒಂದು ಮಾತನ್ನು ಹೇಳಿದನೆಂತೆನ್ನೆ. ರಜಸ್ವಲೆಯಾದ ದ್ರೌಪದಿಯನ್ನು ಸಭೆಯಲ್ಲಿ ವಸ್ತ್ರಾಪಹರಣ ಮಾಡಿದರೋ ರಣದಲ್ಲಿ ಹತರಾದ ಧೃತರಾಷ್ಟ್ರನ ಮಕ್ಕಳನ್ನು ನೀವು ಸಮ್ಮುವಾದವರು ನೋಡಿ. ಯಾರು ಕೆಲವರು ಪೂರ್ವದಲ್ಲಿ ನಮ್ಮನ್ನು ಷಂಡತಿಲ ಸ್ವರೂಪರೆಂದು ಈ ಕ್ರೂರಸ್ವಭಾವವುಳ್ಳವರಾದ ಧೃತರಾಷ್ಟ್ರನ ಮಕ್ಕಳು ನಮ್ಮನ್ನು ಪರಿಹಾಸವಂ ಮಾಡಿದರೋ ಅವರು ನಮ್ಮ ದೆಸೆಯಿಂದ ಬಂಧುವರ್ಗದೊಡನೆ ಕೂಡಿ ಹತರಾದರು. ಇನ್ನು ಮೇಲೆ ನಾವು ಶತ್ರುಸಂಹಾರವಂ ಮಾಡಿದಬಳಿಕ ಸ್ವರ್ಗವನಾದರೂ ನರಕವನಾದರೂ ಎಯ್ದುವೆವು. ಬಳಿಕ ಭೂಮಿಯಲ್ಲಿ ಬಿದ್ದ ದುರ್ಯೋಧನನ ಶಿರಸ್ಸನ್ನು ವಾಮಪಾದದಿಂದ ತಾಡನವಂ ಮಾಡಿ ತನ್ನ ಸ್ಕಂಧಗತವಾದ ಗದೆಯನ್ನು ತೆಗೆದುಕೊಂಡು ಎಲೋ ! ನಿಕೃಷ್ಟನೆ ! ಎಂದು ಸಂಬೋಧನವಂಮಾಡಿಯೊಂದು ವಾಕ್ಯವಂ ನುಡಿದನು.

End :

ಬಳಿಕ ದುರ್ಯೋಧನನಂ ನೋಡಿ ದ್ರೋಣಾಚಾರ್ಯಪುತ್ರನಾದ ಅಶ್ವತ್ಥಾಮನು ಪ್ರಳಯ ಕಾಲಾಗ್ನಿಯೋಪಾದಿಯಲ್ಲಿ ಕ್ರೋಧದಿಂದ ಜ್ವಲಿಸಿದನು. ಬಳಿಕ ಕ್ರೋಧಾವಿಷ್ಟನಾಗಿ ಹಸ್ತ

ದಲ್ಲಿ ಹಸ್ತವನಿರಿಸಿಕೊಂಡು ಬಾಹ್ಯಗಳಿಂದ? (ಬಾಣಿಂದ) ಅವ್ಯಕ್ತವಾದ ವಾಕ್ಯದಿಂದೊಂದು ವಾಕ್ಯವಂ ನುಡಿದನದೆಂತೆನೆ. ಯುದ್ಧದಲ್ಲಿ ಕ್ರುದ್ಧರಾದ ಪಾಂಡವರಿಂದ ಎನ್ನ ತಂದೆ ಹತನಾದನು. ಅದರಿಂದಲು ನಾನು ಶೋಕವನ್ನು ಮಾಡಲಿಲ್ಲ. ಈಗ ನಿನ್ನ ದುರವಸ್ಥೆಯನ್ನು ನೋಡಿ ಕ್ಲೇಶವನ್ನೈದಿದೆನು. ಎಲೈ! ನೃಪನೆ! ಎನ್ನ ಸತ್ಯವಾಕ್ಯವಂ ಕೇಳೈ! ಎನ್ನ ಸಮಸ್ತವಾದ ಕ್ರತುಫಲದಾನ ಸತ್ಕರ್ಮಗಳಿಂದ ಕೃಷ್ಣನ ಮುಂದೆ ಪಾಂಚಾಲರನ್ನೂ ಪಂಚಪಾಂಡವರನ್ನೂ ಸಂಹರಿಸುತಲಿದ್ದೇನೆ. ಎಲೈ! ನೃಪನೆ! ನನಗೆ ಅನುಜ್ಞೆಯಂ ಕೊಡೈ! ಎನ್ನಲಾಗಿ ಆ ಅಶ್ವತ್ಥಾಮನ ವಚನವಂಕೇಳಿ ನಿನ್ನ ಮಗನು ಮನಃಪೂರಿತವಾಗಿ ಕೃಪಾಚಾರ್ಯನಂ ಒಂದು ವಾಕ್ಯವಂ ನುಡಿದನು. ಎಂತನೆ:—ಎಲೈ! ಆಚಾರ್ಯನೆ! ಜಲಪೂರಿತವಾದ ಕಲಶವಂತಾರೈ ಈ ಯಶ್ವತ್ಥಾಮಂಗೆ ಸೇನಾಪತ್ಯ ಪಟ್ಟಾಭಿಷೇಕವಂ ಮಾಡಬೇಕೆನಲಾಗಿ, ಆ ರೀತಿಯಲ್ಲಿಯೇ ದ್ರೋಣಾಚಾರ್ಯನು ಪೂರ್ಣ ಕಲಶ ಸಮೇತನಾಗಿ ದುರ್ಯೋಧನನ ಸಮೀಪವನ್ನೈದಿ ಆತನಪ್ಪಣೆಯಿಂದ ನೀನು ಕ್ಷತ್ರಕಾರ್ಯವಂ ಮಾಡಬಹುದೆಂದು ಅನೇಕಧರ್ಮಂಗಳಿಂದ ಅಶ್ವತ್ಥಾಮನಂ ಬೋಧಿಸಿ ಸೇನಾಪತ್ಯದಲ್ಲಿ ಯಭಿಷೇಕವಂ ಮಾಡಲಾಗಿ ಬಳಿಕ ಅಭಿಷಿಕ್ತನಾದ ಅಶ್ವತ್ಥಾಮನು ದುರ್ಯೋಧನನ ನಾಲಿಂಗನವನ್ನು ಮಾಡಿಕೊಂಡು, ಸಿಂಹನಾದಗಳಿಂದ ದಿಕ್ಕುಗಳನ್ನು ಪೂರಿಸುತ್ತಾ ನಡೆದ ಮೇಲೆ ದುರ್ಯೋಧನನು ರಕ್ತದಲ್ಲಿ ಮಗ್ನನಾಗಿ ಸರ್ವಪ್ರಾಣಿಭಯಂಕರವಾದ ಆ ರಾತ್ರಿಯೂ ಯುದ್ಧಭೂಮಿಯಿಂದ ಕಡೆಗೈದಿ ಶೋಕದಿಂದ ಸಂತಪ್ತವಾದ ಹೃದಯಗಳುಳ್ಳವರಾಗಿ ಚಿಂತೆಯು ನೈದಿದರೆಂದು ಸಂಜಯ ಧೃತರಾಷ್ಟ್ರನಿಗೂ ವೈಶಂಪಾಯನರು ಜನಮೇಜಯನಿಗೆ ಹೇಳದರೆಂದು ಸೂತಪುರಾಣಿಕರು ಶೌನಕಾದಿ ಋಷಿಗಳಿಗೆ ವಿಸ್ತರಿಸಿದ ಕಥಾಪ್ರಸಂಗವು.

Colophon:

ಇದು ಮಹಾಭಾರತದ ಗದಾಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ.

ಗದಾಪರ್ವಂ ಸಮಾಪ್ತಂ.

(ವಿ-ವಿ.)—

ಗದಾಪರ್ವ ಸಮಗ್ರ. ಬರವಣಿಗೆ ಚೆನ್ನಾಗಿದೆ. ತಪ್ಪುಗಳು ಕಡಿಮೆ. ಸ್ವಲ್ಪ ಶಿಥಿಲ. ಕವಿ, ಚಿಕ್ಕ ದೇವರಾಜ. ಈ ಪರ್ವದ ಕೊನೆಯಲ್ಲಿರಬೇಕಾದ ಗದ್ಯವು ಪ್ರತಿಯಲ್ಲಿಲ್ಲ. ಅದಕ್ಕೆ ಬದಲಾಗಿ ಸಭಾಪರ್ವದ ಕೊನೆಯಲ್ಲಿನ ಗದ್ಯಭಾಗವಿದೆ. ಮಿಕ್ಕ ವಿಷಯಗಳನ್ನು 104 ನೆಯ ನಂಬರಿನಲ್ಲಿ ನೋಡಿ ತಿಳಿಯಬೇಕು.

No. 106. ಭಾರತ ವಚನ.
BHĀRATA PROSE.

Substance, palm-leaf. Size, $17\frac{1}{4} \times 1\frac{3}{8}$ inches. Pages, 62. Lines, 8 on a page. Character, Kanarese. Condition, slightly injured. Appearance, old. Mode of writing, good, but not free from mistakes.

Contains the Sauptikaparva complete.

A rendering in Kanarese prose describing the story of the Sauptikaparva of the Sanskrit Mahābhārata: by Cikkadēvarāja. For other particulars see under No. 104 *ante*.

Beginning :

ಈ ರೀತಿ ಭೀಮನೊಡನೆ ಗದಾಯುದ್ಧವಂಮಾಡಿ ಭೂಮಿಯಲ್ಲಿ ಬಿದ್ದು, ಆ ಭೀಮನ ಗದಾಪ್ರಹಾರದಿಂದ ಪ್ರಾಪ್ತವಾದ ವೇದನೆಯಂ ಸಹಿಸಲಾರದಿರುವ ದುರ್ಯೋಧನನನ್ನು ಅಶ್ವತ್ಥಾಮ ಕೃತವರ್ಮಕೃಪರು ನೋಡಿ, ಯೂ ದುರ್ಯೋಧನನಿಂದ ಸೇನಾಧಿಪತ್ಯದಲ್ಲಿ ಅಶ್ವತ್ಥಾಮನು ಅನುಜ್ಞೆಯನ್ನೈದಿ ? ಕ್ರೋಧಾವಿಷ್ಟನಾಗಿ ಪಾಂಡವರನ್ನು ಸಂಹರಿಸಬೇಕೆಂದು ಪಾಳ್ಯವನ್ನೈದುವ ವೃತ್ತಾಂತವನ್ನು ಗದಾಪರ್ವದಲ್ಲಿ ಹೇಳಿ, ಬಳಿಕ ಪಾಳ್ಯವನ್ನೈದಿಯಲ್ಲಿ ಧೃಷ್ಟದ್ಯುಮ್ನ, ಉಪಪಾಂಡವರು ಮೊದಲಾದವರ ಸುಪ್ತಿಸಮಯದಲ್ಲಿ ಪಾಳೆಯ ಸಮೀಪವನ್ನೈದಿ, ಈ ಕೃತವರ್ಮ ಮೊದಲಾದವರುಗಳು ಸಂಹರಿಸುವ ವೃತ್ತಾಂತವಂ ಸೌಪ್ತಿಕ ಪರ್ವದಲ್ಲಿ ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಲಿದ್ದಾನೆ

ಸಂಜಯ ವಾಕ್ಯವು.—ಎಲೆ ಧೃತರಾಷ್ಟ್ರನೆ ! ಈ ಅಶ್ವತ್ಥಾಮನು ಮೊದಲಾದವರು ಸಮಸ್ತ ಮಾದವರುನ್ನು ದಕ್ಷಿಣಾಮುಖವನ್ನು ನಡೆದು ಅಸ್ತಮಯಪರ್ಯಂತರವೂ ಒಂದು ಪ್ರಾಂತದಲ್ಲಿದ್ದು ಅಸ್ತಮಯದಲ್ಲಿ ಪಾಳೆಯದ ಸಮೀಪವನ್ನೈದಿ ಎಚ್ಚತ್ತುಕೊಂಡು ಈ ಪಾಳೆಯದಲ್ಲಿರುವರೆಂದು ಭಯಪಟ್ಟವರಾಗಿ ಅಲ್ಲಿನ ದಾರಿಗಳನ್ನು ಬಿಟ್ಟು ಅಲ್ಲಿಗಹನಸ್ಥಳವನ್ನೈದಿ ಪ್ರಚ್ಛನ್ನರಾಗಿ ಪ್ರವೇಶಿಸಿ ಸೇನಾನಿವೇಶದ ಸಮೀಪದಲ್ಲಿ ನಿಂತು ತೀಕ್ಷ್ಣವಾದ ಶಸ್ತ್ರಗಳಿಂದ ಗಾಯ ಬಿದ್ದ ಕಾರಣ ಉಷ್ಣವಾಗಿ ನಿಟ್ಟುಸಿರು ಬಿಟ್ಟು, ಪಾಂಡವರಂ ಚಿಂತಿಸುತ್ತಿದ್ದರು ಪಾಂಡವಹಿತಾರ್ಥಿಗಳಾದವರ ಸಂತೋಷಧ್ವನಿಯಿಂದ ಭೀತರಾಗಿ, ಭಯದಿಂದ ಪ್ರಾಙ್ಮುಖರಾಗಿ ಓಡಿದರು ಅವರುಗಳು ಮುಹೂರ್ತಮಾತ್ರವೂ ಹೋಗಿ ಶ್ರಾಂತವಾದ ಗಾತ್ರಂಗಳುಳ್ಳವರಾಗಿ ನಿಶ್ವಾಸಿಕರಾಗಿ ಅದೃಶ್ಯರಾಗಿದ್ದು ನೃಪನಾದ ಸುಯೋಧನ ವಧೆಯಿಂದ ಸಂತಪ್ತರಾಗಿ ಕ್ರೋಧಾಮರ್ಷವಶಂಗತರಾಗಿ ಮುಹೂರ್ತಮಾತ್ರ ನಿಂತವರಾದರೆಂದು (ಹೇಳಿದ) ಸಂಜಯನನ್ನು ಕುರಿತು ಧೃತರಾಷ್ಟ್ರನು ಪ್ರಶ್ನೆಯನ್ನು ಮಾಡುತ್ತಲಿದ್ದಾನೆ :—

ಎಲೈ ಸಂಜಯನೆ ! ಭೀಮನಿಂದ ಅವಿಶ್ವಸನೀಯವಾದ ಪ್ರಯೋಜನವು ಮಾಡಲ್ಪಟ್ಟಿತು. ಆವ ಯುದ್ಧದಲ್ಲಿ ವಜ್ರಸಮಾನವಾದ ಶರೀರವುಂಟಾಗಿ ಸಕಲಭೂತಂಗಳಿಗೂ ಅವಧ್ಯನಾದ, ಹತ್ತುಸಾವಿರ ಆನೆಗಳ ಬಲವುಳ್ಳ ಎನ್ನ ಸುತನಾದ ಸುಯೋಧನನು, ಪಾಂಡವರಿಂದ ಸಂಹರಿಸಲ್ಪಟ್ಟನು. ಎಲೆ ಸಂಜಯನೆ ! ದೈವವನ್ನು ಅತಿಕ್ರಮಿಸುವುದಕ್ಕೆ ಮನುಷ್ಯರಿಂದ ಅಶಕ್ಯವು. ಏನು ಕಾರಣದಿಂದ ಪಾಂಡವರಿಂದ ಎನ್ನ ಸುತನು ಕೆಡಹಲ್ಪಟ್ಟನು ? ಎಲೆ ಸಂಜಯನೆ ! ಎನ್ನ ಹೃದಯವು ಪರ್ವತಸಮಾನವಾದ ಸಾರವುಳ್ಳದ್ದು. ಏನುಕಾರಣದಿಂ ಆವ ಹೃದಯವು ಹತರಾದ ನೂರುಮಂದಿ ಸುತರನ್ನು ಹತರೆಂದು ಕೇಳಿ ಸಾವಿರಪ್ರಕಾರವಾಗಿ ಒಡೆಯಲಿಲ್ಲ ? ಹತಪುತ್ರನಾದ ಎನಗೆ ಆವರೀತಿ ವೃದ್ಧಿಯುಂಟಾಗುವುದು ? ತಾನು ಪಾಂಡುಸುತನ ರಾಜ್ಯದಲ್ಲಿ ಇರಲೊಲ್ಲೆನು. ನೃಪನಾದ ಸುಯೋಧನನಿಗೆ ಪಿತನಾಗಿದ್ದು ತಾನೂ ನೃಪನಾಗಿ ಪಾಂಡುಸುತರಿಗೆ ಶಿಷ್ಯನಾಗಿ ಆವ ರೀತಿ ಇರುವೆನು ?

* * • * • *

ಹನ್ನೊಂದು ಅಕ್ಷೌಹಿಣೀಬಲಕ್ಕೆ ಪತಿಯಾದ, ಸತ್ಯಪರಾಕ್ರಮವುಳ್ಳ ಒಬ್ಬ ಸುಯೋಧನನು ಒಬ್ಬ ಭೀಮನಿಂದ ಹತನಾದನು. ಕ್ಷುದ್ರನಾದ ಅವನಿಂದ ಅತಿಕ್ರೂರಕರ್ಮವು ಮಾಡಲ್ಪಟ್ಟಿತು. ಸಕಲನೃಪರಿಗೂ ಮೂರ್ಧಾಭಿಷಿಕ್ತನಾದ ಅವನ ಶಿರಸ್ಸು ಪಾದದಿಂದ ಒದೆಯಲ್ಪಟ್ಟಿತು. ಪಾಂಚಾಲರು ಅಟ್ಟಹಾಸದಿಂದ ಸಿಂಹನಾದವನ್ನು ಮಾಡಿ ಶಂಖದುಂದುಭಿಧ್ವನಿಯಂ

ಮಾಡಿದರು. ಅವರುಗಳ ವಾದ್ಯಧ್ವನಿಯು ದಿಕ್ಕುಗಳಲ್ಲಿ ವ್ಯಾಪ್ತವಾಗುತ್ತಲಿದೆ. ಗಜಾಶ್ವಂಗಳ ಧ್ವನಿಗಳು ಶೂರರ ಸಿಂಹನಾದಧ್ವನಿಯು ಕೇಳಲ್ಪಡುತ್ತಿದೆ. ಪಶ್ಚಿಮ ದಿಕ್ಕಿನಲ್ಲಿ ಸಂತುಷ್ಟರಾಗಿ ಗರ್ಜಿಸುತ್ತಲಿಹ ಶೂರರ ಧ್ವನಿಯೂ ರಥನೇಮಿಧ್ವನಿಯೂ ಕೇಳಲ್ಪಡುತ್ತದೆ. ಪಾಂಡವರಿಂದ ಧೃತರಾಷ್ಟ್ರಸುತರಿಗೆ ವಧೆಮಾಡಲ್ಪಟ್ಟಿತು. ಅಂಥಾ ಮಹಾಯುದ್ಧದಲ್ಲಿ ಮೂರು ನಾಲ್ವರು ಮಾತ್ರವೇ. ಮಿಕ್ಕವರು ಕೆಲರು ನೂರು ಆನೆಗಳ ಬಲವುಳ್ಳವರು. ಸರ್ವಾಸ್ತ್ರಸಮರ್ಥರು. ಇಂತವರು ಪಾಂಡವರಿಂದ ಆವ ಕಾರಣ ಹತವಾದರು? ಅದರಿಂದ ಕಾಲಪರ್ಯಾಯವೆಂದು ವಿಚಾರಿಸುತ್ತಲಿದ್ದೇನೆ. ಅದುಕಾರಣ ದೈವಬಲವು ಅವಶ್ಯವಾದುದು. ಅತಿದುಷ್ಕರವಾದ ಯತ್ನವು ಮಾಡಿದರೂ ಅತಿಪ್ರಯಾಸ ಸಾಧ್ಯವಾದ ಈ ಪ್ರಯೋಜನದಲ್ಲಿ ಸಮರ್ಥರಾದರೆ ನಮಗೆ ಉಚಿತವಾದ ಅರ್ಥವಂ ಉಪದೇಶವಂ ಮಾಡಿರೆಂದು ಕೃಪ, ಕೃತವರ್ಮರ ಕುರಿತು ಅಶ್ವತ್ಥಾಮನು ಕೇಳಿದ ವೃತ್ತಾಂತವಂ ಸಂಜಯನು ಧೃತರಾಷ್ಟ್ರನಿಗೆ ಹೇಳಿದನು.

Colophon:

ಇದು ಸೌಪ್ತಿಕಪರ್ವದಲ್ಲಿ ಪ್ರಥಮಾಧ್ಯಾಯದ ಟೀಕು.

ಈ ರೀತಿ ಅಶ್ವತ್ಥಾಮನ ವಾಕ್ಯವಂ ಕೇಳಿ ಕೃಪನು ಉತ್ತರವನ್ನು ಪೇಳುತ್ತಲಿದ್ದಾನೆ:— ಎಲೆ ಮಹಾಭುಜಬಲವುಳ್ಳ ಅಶ್ವತ್ಥಾಮನೆ! ಹೇತುಯುಕ್ತವಾದ ನಿನ್ನ ವಚನವು ಸಮಸ್ತವೂ ಕೇಳಲ್ಪಟ್ಟಿತು. ಎನ್ನ ವಚನವನ್ನು ಕಿಂಚಿನ್ಮಾತ್ರ ಕೇಳು. ಎಂತೆನೆ:—

* * * *

ಆತುರನಾದವನಿಗೂ, ಕೋಪಿಷ್ಠನಾದವನಿಗೂ, ಅರ್ಥ ಚಿಂತೆಯಂ ಮಾಡುವವನಿಗೂ, ಮನ್ಮಥಕ್ರಾಂತನಿಗೂ ನಿದ್ರೆ ಎಲ್ಲಿಯದು? ಅಂಥಾ ನಾಲ್ಕೂ ಎನಗೆ ಪ್ರಾಪ್ತವಾಗಿರುವುದು ನೋಡು. ಆವ ನಾಲ್ಕನೆಯ ಭಾಗವು ನಿದ್ರೆಯಂ ಕೆಡಿಸುವುದೋ ಅಂಥಾದ್ದು ಎನಗೆ ಪ್ರಾಪ್ತವಾಯಿತು. ಇನ್ನು ಪಿತೃವಧಕ್ಕಿಂತಲೂ ಲೋಕದಲ್ಲಿ ದುಃಖಾಂತರವೇನಿದ್ದೀತು! ಅಂಥ ಪಿತೃವಧೆಯಂ ಸ್ಮರಿಸಿಕೊ. ಅಂಥ ಪಿತೃವಧೆಯಂ ಸ್ಮರಿಸುವ ಎನಗೆ ದಿವಾರಾತ್ರಿಗಳೂ ಹೃದಯವ ಭೇದಿಸಲು ಶಾಂತಿಯನ್ನೈದಲಿಲ್ಲ. ಆವ ಸಮಯದಲ್ಲಿ ಈ ಪಾಪಾತ್ಮರಿಂದ ಪ್ರತ್ಯಕ್ಷದಲ್ಲಿ ಎನ್ನ ತಂದೆಯು ಮೃತನಾದನೋ ಅಂಥಾವರುಗಳು ಎನ್ನ ಮರ್ಮಂಗಳಂ ಭೇದಿಸುತ್ತಲಿದ್ದಾರೆ. ಆವ ಪ್ರಕಾರದಲ್ಲಿ ಎನ್ನಂತಹ ಪುರುಷನು ಜೀವಿಸುವ! ಆವಕಾರಣ ಧೃಷ್ಟದ್ಯುಮ್ನನು ದ್ರೋಣನ ಹತವಂ ಮಾಡಿದನೆಂದು ಕೇಳಿದನು! ಅಂತಹ ಧೃಷ್ಟದ್ಯುಮ್ನನ ಸಂಹರಿಸದೆ, ನಾನು ಜೀವಿಸುವುದಿಲ್ಲ. ಅಂತಹ ಧೃಷ್ಟದ್ಯುಮ್ನನು ಪಿತೃವಧೆಯಂ ಮಾಡಿದುದರಿಂದ ವಧ್ಯನು. ಅವನೊಡನೆ ಕೂಡಿದವರಾರುಂಟೋ ಅವರೂ ವಧ್ಯರು. ಆವ ಪಾಪಾತ್ಮರಿಂದ ಭಗ್ನವಾದ ಊರುಪ್ರದೇಶವುಳ್ಳ ದುರ್ಯೋಧನನ ಪ್ರಲಾಪವು ಕೇಳಲ್ಪಟ್ಟಿತೋ ಅಂಥ ದುರ್ಮಾರ್ಗನು ಕ್ರೂರಹೃದಯನಾದರೂ ಆವನ ಹೃದಯವ ವಹಿಸಲಾರನು. ನಿರ್ದಯಾತ್ಮಕನಾದರೂ ಆವನ ನೇತ್ರಗಳಲ್ಲಿ ಅಂಥ ದೈನ್ಯದ ಪ್ರಲಾಪವಂ ಕೇಳಿ ಬಾಷ್ಪವು ಸುರಿಯವು! ಸ್ನೇಹಿತನಾದ ಈ ದುರ್ಯೋಧನನು ನಾನು ಜೀವಿಸಿರುವ ಸಮಯದಲ್ಲಿಯೇ ಮೃತನಾಗಿ ಉದಕವೇಗವು ಸಮುದ್ರದ ರೀತಿ ಎನ್ನ ಶೋಕವ ಐದಿಸುತ್ತಲಿದ್ದಾನೆ.

End:

ಈ ರೀತಿ ಭಗ್ನವಾದ ಊರುಪ್ರದೇಶಗಳುಳ್ಳ, ಕಷ್ಟವನನುಭವಿಸುತ್ತುಳ್ಳವನಾದರೂ ಸ್ವಲ್ಪಪ್ರಾಣಗಳುಳ್ಳ ದುರ್ಯೋಧನನ ಕುರಿತು ಅಶ್ವತ್ಥಾಮನು ಒಂದು ವಾಕ್ಯವಂ ಪೇಳಿದನು. ಎಲೆ

ದುರ್ಯೋಧನನೆ ! ಒಂದು ವಾಕ್ಯವಂ ಪೇಳುತಲಿದ್ದೇನೆ ಕೇಳು. ಪಾಂಡವರೈವರೂ ಕೃಷ್ಣನೂ ಸಾತ್ಯಕಿಯೂ ಕೂಡಿ . . . . ಈ ರೀತಿ ಸಂಜಯನಿಂದ ಹೇಳ . . . . . . ರು ಜನಮೇಜಯನಿಗೆ ಹೇಳಿದರು.

Colophon:

ಇತಿ ಶ್ರೀಮ . . . . ಸೌಪ್ತಿಕಪರ್ವದಲ್ಲಿ ಒಂಭತ್ತನೆಯ ಅಧ್ಯಾಯದ ಟೀಕು.

ಗದ್ಯ :— . . . . . . ಕರಾಯಮಾಣ ನಿಜಾಂತರಂಗ ತರಂಗಕರ ಸಮುದಂಚಿತ ಶೀಕರ ಕುಸುಮಾವಳೀಸಮರ್ಪಣ ಸಮಾ . . . . ರ ಪೂರ್ವಪಶ್ಚಿಮಾಬ್ಧಿವೇಲಾವಲಯಿತ ಮಹೀತಲ ಮಹಿತ ಶ್ರೋತ್ರಿಯ ಕುಲದಾರಿದ್ರ್ಯವಿದ್ರಾವಣೋ . . . . (ರಾ)ಜರಾಜ ರಾಜಾಧಿರಾಜ ರಾಜ ಪರಮೇಶ್ವರಾಪ್ರತಿಮ ಪ್ರೌಢಪ್ರತಾಪಾಪ್ರತಿಮವೀರನರಪತಿ ಚಿಕದೇವರಾಜವಿರಚಿತಮಪ್ಪ . . . .

(ವಿ-ಬಿ.)—

ಕೊನೆಯ ಓಲೆಯ ಅರ್ಧಭಾಗವು ಮುರಿದು ಹೋಗಿದೆ. ಇಲ್ಲವಾದರೆ ಸೌಪ್ತಿಕಪರ್ವವು ಸಮಗ್ರವೆನ್ನಬಹುದು. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳು ಬಹಳವಿವೆ. ಗ್ರಂಥಪಾತವುಂಟು. ಸ್ವಲ್ಪ ಶಿಥಿಲ. ಭಾಷೆಯು ಅಷ್ಟು ಶುದ್ಧವಾದುದಲ್ಲ. ಮಿಕ್ಕ ವಿಷಯಗಳನ್ನು ೧೦೪ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 107. ಭಾರತ ವಚನ.
BHĀRATA PROSE.

Substance, Śrītāḷa. Size, 19⅛ × 1⅛ inches. Pages, 72. Lines, 8 on a page. Character, Kanarese. Condition, slightly injured. Appearance, fair. Mode of writing, good but not free from mistakes.

Contains the Sandhis 1—10 complete and the eleventh Sandhi incomplete in the Sauptikaparva. Similar to the work described above, by Kaḷale Nanjarāja. For other particulars see under No. 89 *ante*.

Beginning:

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನಂ ಕುರಿತು ಇಂತೆಂದನು :—ಕೇಳು ನರೇಂದ್ರನೆ ; ಆ ಬಳಿಕ ಸೂರ್ಯನು ಪಶ್ಚಿಮಾಚಲವನ್ನು ಸೇರಲು ಕೃಪ, ಕೃತವರ್ಮ, ಅಶ್ವತ್ಥಾಮರು ದುರ್ಯೋಧನನ ವಾಕ್ಯಗಳನ್ನು ಸ್ಮರಿಸಿ ಭಯಪಟ್ಟು, ಕೆಲವುದೂರ ದಕ್ಷಿಣವಾಗಿ ನಡೆದು ಪಾಳ್ಯಕ್ಕೆ ಬಂದು, ವಾಹನಗಳ ದೆಸೆಯಿಂದ ಇಳಿದು ತಮ್ಮನ್ನು ಒಬ್ಬರೂ ಅರಿಯದೆ ಇರುವ ರೀತಿ ಹೊದೆಗಳಲ್ಲಿ ಮರೆಯಾಗಿ ಅವಿತುಕೊಂಡು ತೀಕ್ಷ್ಣಶಸ್ತ್ರಾಸ್ತ್ರಗಳಿಂದ

ಗಾಯಪಡೆದ ಶರೀರಗಳ ವೇದನೆಯನ್ನು ಸಹಿಸಲಾರದೆ ನಿಟ್ಟುಸಿರುಗಳಂ ಬಿಡುತ, ಜಯವನ್ನು ಪಡೆದು(ದ) ಪಾಂಡವರ ವೀರಾಲಾಪಗಳನ್ನು ಕೇಳುತ, ಇವರ ಬೆನ್ನಟ್ಟಿ ಬರುವರೋ ಎಂದು ಭಯಪಟ್ಟು ಆ ತಾವನ್ನು ಬಿಟ್ಟು ಮೂಡಣ ಮುಖವಾಗಿ ಹೋಗಿ ಶ್ರಮದಿಂದ ಕಂಗೆಟ್ಟು ಬಾಯಾರಿ ಕಾಂತಿಹೀನರಾಗಿ, ದುರ್ಯೋಧನನ ವಧದಿಂದ ಕ್ಲೇಶಪಟ್ಟು, ಕೋಪಿಸಿಕೊಂಡು ಮುಹೂರ್ತಮಾತ್ರವು ಅಲ್ಲಿದ್ದರು.

* * * *

ಆ ಗುರುಪುತ್ರನು ನಿಶಿತಶತಶಸ್ತ್ರಾಸ್ತ್ರಗಳನ್ನು ಒಮ್ಮಡಿಯಾಗಿ ಆ ಮಹಾಭೂತದಮೇಲೆ ಪ್ರಯೋಗಿಸಲು, ಸಮುದ್ರಜಲವನ್ನೂ ಹೀರುವ ಬಡಬಾಗ್ನಿಯೋಪಾದಿಯಲ್ಲಿ ಆ ಮಹಾಭೂತವು ಇವೆಲ್ಲವನ್ನೂ ನುಂಗಲು ಆ ಯೋಧಾಗ್ರೇಸರನು ಪ್ರಯೋಗಿಸಿದ ಶರಸಮೂಹಂಗಳು ನಿರರ್ಥಕಂಗಳಾಗಿ ಹೋದುದನ್ನು ನೋಡಿ ಉರಿಯುತ್ತಲಿರುವ ಅಗ್ನಿಜ್ವಾಲೆಗೆ ಸಮಾನವಾಗಿ ಒಂದು ರಥಶಕ್ತಿಯನ್ನು ಪ್ರಯೋಗಿಸಲು, ಅದು ಆ ಭೂತವನ್ನು ತಾಕಿ ಯುಗಾಂತಕಾಲದಲ್ಲಿ ಸೂರ್ಯಬಿಂಬವನ್ನು ತಾಕಿ ಚದರಿಬೀಳುವ ಕೊಳ್ಳಿಯೋಪಾದಿಯಲ್ಲಿ ತುಮುರುಗಳಾಗಿ ಹೋಗಲು ಅದನ್ನು ನೋಡಿ ಮತ್ತು ಸಂಗಡಲೇ ಆಕಾಶಕ್ಕೆ ಸಮಾನವಾಗಿಯೇ ಸುವರ್ಣಮಯವಾದ ಪಮರುವುಳ್ಳ ಒಂದು ದಿವ್ಯಶಕ್ತಿಯನ್ನು ಹುತ್ತಿನಲ್ಲಿರುವ ಮಹಾ ಸರ್ಪವನ್ನೂ ಹೊರಕೆ ತೆಗೆಯುವ ಹಾಗೆ ಒರೆಯ ದೆಸೆಯಿಂದ ತೆಗೆದು ಅದರ ಮೇಲೆ ಹಾಕಲು ಆ ಖಡ್ಗವು ಆ ಮಹಾಭೂತವನ್ನು ತಾಕಿ ಹತ್ತಿಯೋಪಾದಿಯಲ್ಲಿ ಹಾರಿ ಹೋಗಲು, ಮತ್ತು ಕ್ರೋಧವು ಹೆಚ್ಚಲು ಅಶ್ವತ್ಥಾಮನು ಚಲಿಸದೆ, ಇಂದ್ರಧ್ವಜದೋಪಾದಿಯಲಿ ಪ್ರಜ್ವಲಿಸುತಲಿರುವ ಒಂದು ಗದಾದಂಡವನ್ನು ಕಯ್ಯಲ್ಲಿ ಹಿಡಿದು ಗಿರಗಿರನೆ ತಿರಗಿಸಿ ಹಾಕಲು, ಆ ಮಹಾಭೂತವು ಅದನ್ನೂ ನುಂಗಲು ಆ ಬಳಿಕ ನಿರಾಯುಧನಾಗಿ ನಾಲ್ಕು ದಿಕ್ಕುಗಳಲ್ಲಿಯೂ, ಆಕಾಶದಲ್ಲಿಯೂ ವಿಷ್ಣುಮೂರ್ತಿಗಳು ತುಂಬಿರುವುದನ್ನು ನೋಡಿ ಅಂಥಾ ಅದ್ಭುತಕ್ಕೆ ಆಶ್ಚರ್ಯಪಟ್ಟು, ತನ್ನ ದಿವ್ಯಾಸ್ತ್ರಂಗಳೆಲ್ಲವೂ ವ್ಯರ್ಥಂಗಳಾಗಿ ಹೋದುದಕ್ಕೆ ತಪ್ತಹೃದಯನಾಗಿ ಚಿಂತಿಸುತ ಹಸುಗಳನ್ನೂ ಬ್ರಾಹ್ಮಣರುಗಳನ್ನೂ, ಅರಸುಗಳನ್ನೂ, ಸ್ತ್ರೀ ಜನಗಳನ್ನೂ, ಮಿತ್ರರನ್ನೂ ಒಡಹುಟ್ಟಿದವರನ್ನೂ, ಗುರುಜನವನ್ನೂ, ವೃದ್ಧರನ್ನೂ ಬಾಲರನ್ನೂ, ಅಂಧರನ್ನೂ, ಜಡರನ್ನೂ, ಭಯಪಡುವಂಥಾವರನ್ನೂ, ಶರಣಾಗತರನ್ನೂ, ಮತ್ತರನ್ನೂ, ಉನ್ಮತ್ತರನ್ನೂ, ಮೈಮರೆತಿರುವಂಥಾವರನ್ನೂ ಸುತ್ತಿಮುತ್ತಿಕೊಂಡು ಸಂಹರಿಸುವುದು ಯುಕ್ತವಲ್ಲ ಎಂದು ಪ್ರಿಯವಾಗುವ ಹಾಗೆ ಉಪದೇಶಿಸುವ ಮಿತ್ರವಾಕ್ಯಗಳನ್ನು ನಿರಾಕರಿಸಿ ಧರ್ಮಮಾರ್ಗವನ್ನು ತಪ್ಪಿ, ಇತರರಿಗೆ ಮಹಾಪ್ರಯತ್ನದಿಂದ ಹಿಂಸೆಯನ್ನು ಮಾಡುವ ಮನುಷ್ಯನು ಭಯದಿಂದ ಮಗುಚಿ ಬಂದರೆ, ಅದರ ದೆಸೆಯಿಂದ ಅಧಿಕವಾದ ಆಪತ್ತುಗಳನ್ನು ಎಯ್ದುವವನು ಎಂದು ದೊಡ್ಡವರು ಹೇಳುವರು ಹಾಗೆ ಶಸ್ತ್ರಾಸ್ತ್ರಸಮ್ಮತಂಗಳಾದ ಕೃಪಕೃತವರ್ಮವಚನಂಗಳನ್ನೂ ಕೇಳದೆ ಅತಿ ಘೋರವಾದ ಆಪತ್ತುಗಳನ್ನು ಅತಿಕ್ರಮಿಸುವುದಕ್ಕೋಸ್ಕರ ಅಧರ್ಮವನ್ನು ಮಾಡುವುದಕ್ಕೆ ಎಣಿಸಿ, ಅಪಜಯವನ್ನು ಪಡೆದೆನು ದೈವವನ್ನು ಎಣಿಸದೆ ಅಶಕ್ಯವಾದ ಕಾರ್ಯವನ್ನು ತನ್ನ ಶಕ್ತಿಯಿಂದ ನಿರ್ವಹಿಸುವುದಕ್ಕೆ ಯಾವ ಪುರುಷನು ಸಮರ್ಥನಾಗುವನು ? ಇಂಥಾ ಅನುಚಿತ ಕೃತ್ಯದಿಂದ ಭಯವು ಪ್ರಾಪ್ತವಾಯಿತು.

End :

ಆಗ ಧರ್ಮರಾಯನು ಶೋಕಾಕ್ರಾಂತಹೃದಯನಾಗಿ ಸಂಗಡ ಬರುತ್ತಿರಲು ಭೂತಗಣಾವೃತವಾದ ಮೊದಲಿದ್ದ ಪಾಳ್ಯವನ್ನು ಸೇರಿ ನೆತ್ತರಿಂದ ನೆನೆಯಲ್ಪಟ್ಟ ಮುಖವುಳ್ಳವರಾಗಿ,

ವಿಕಲಾಂಗರಾಗಿ, ವಿಚ್ಛಿನ್ನಮಸ್ತಕರಾದಂಥವರಾಗಿರುವ ಪುತ್ರ (ರ ಕಳೇಬರಗಳನ್ನು ನೋಡಿ) ಪ್ರಜ್ಞಾವಿಹೀನನಾಗಿ ಕ್ಲೇಶಪಡುವುದಕ್ಕೆ ತೊಡಗಿದನು. ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದ ಅರ್ಥವನ್ನು ವೈಶಂಪಾಯನಮುನೀಂದ್ರನು ಜನಮೇಜಯ ರಾಜನಿಗೆ ವಿಸ್ತರಿಸಿದನು. ಎಂದು ಸೂತಪುರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕಭಾಷಾವಿರಚಿತ್ರವಾದ ಮಹಿಸೂರಸೇನಾಧಿಪ ದೊಡ್ಡರಾಜಪೌತ್ರ ವೀರರಾಜತನೂಜ ದಳಪತಿದೇವರಾಜಾನುಜ ಕಳಲೆ ನಂಜರಾಜ ವಿರಚಿತ್ರವಾದ ನಂಜರಾಜ ವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಕೃತವಾದ ಲಕ್ಷ ಗ್ರಂಥ ಸಂಖ್ಯೆಯುಳ್ಳ ಸಂಹಿತೆಯಲ್ಲಿ ಸೌಪ್ತಿಕ ಪರ್ವದಲ್ಲಿ ಐಷಿಕದಲ್ಲಿ ಹತ್ತನೆಯ ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳಮಹಾ.

ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯಕ್ಷೇತ್ರವಾಸಿಗಳಾದ ಋಷಿಗಳಂ ಕಂಡು ಇಂತೆಂದನು :—

* * * *

ಈಗ ಧರ್ಮರಾಯನ ಸಮೀಪಕ್ಕೆ ಹೋಗಿ ಪ್ರಚಂಡಮಾರುತದಿಂದ ಚಲಿಸುವ ಬಾಳೆಯ ಮರದೋಪಾದಿಯಲ್ಲಿ ನಡುಗುತ ಕ್ಲೇಶವನ್ನೂ ಬಿಡ . - . .

(ವಿ-ವಿ.)—

ಸೌಪ್ತಿಕಪರ್ವವು ಅಸಮಗ್ರವಾಗಿದೆ. ಮೊದಲಿನಿಂದ ಹತ್ತು ಅಧ್ಯಾಯಗಳು ಸಮಗ್ರವಾಗಿಯೂ ಹನ್ನೊಂದನೆಯ ಅಧ್ಯಾಯದ ಆದಿಭಾಗದಲ್ಲಿ ಸ್ವಲ್ಪಭಾಗವೂ ಇದೆ. ಬರೆವಣಿಗೆ ಉತ್ತಮವಾದುದು. ತಪ್ಪುಗಳು ಅಷ್ಟಾಗಿಲ್ಲ. ಸ್ವಲ್ಪ ಶಿಥಿಲ. ಮೇಲೆ ಹೇಳಿದ ಕಳಲೆಯ ನಂಜರಾಜನೇ ಇದನ್ನೂ ಬರೆದವನು. ಮಿಕ್ಕ ವಿಷಯಗಳನ್ನು 89 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 108. ಭಾರತ ವಚನ.

BHĀRATA PROSE.

Substance, palm-leaf. Size, $17\frac{1}{4} \times 1\frac{3}{8}$ inches. Pages, 22. Lines, 8 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Aiṣikaparva Complete.

A rendering in Kanarese prose of the story of the Aiṣikaparva of the Sanskrit Mahābhārata; by Cikkadēvarāja of Mysore. For other particulars see under No. 104 *ante*.

Beginning :

ಪೂರ್ವೋಕ್ತಪ್ರಕಾರವಾಗಿ ಅಶ್ವತ್ಥಾಮನು ಶಿಬಿರವನ್ನು ಪ್ರವೇಶಿಸಿ ದೃಷ್ಟದ್ಯುಮ್ನನ್ನು, ಉಪಪಾಂಡವ ಮುಖ್ಯರಾದ ಸಮಸ್ತಪಾಂಡವಸಮಾಜವನ್ನೂ ಸಂಹರಿಸಿ, ದುರ್ಯೋಧನನ ಬಳಿಗೆ

ಬಂದು ಸಮಸ್ತನಾದ ವೃತ್ತಾಂತವನ್ನೂ ಪೇಳಲಾಗಿ ದುರ್ಯೋಧನನು ಕೇಳಿ ಮೃತನಾದ ಬಳಿಕ
ಆ ರಾತ್ರಿ ಅತಿಕ್ರಮಿಸಿದ ಬಳಿಕ ಧೃಷ್ಟದ್ಯುಮ್ನನ ಸಾರಥಿ ಪಾಂಡವರ ಬಳಿಗೆ ಬಂದು ಸೌಪ್ತಿ
ಕದಲ್ಲಿ ಮಾಡಿದ ಯುದ್ಧವೃತ್ತಾಂತವಂ ಪೇಳಿದ ನದೆಂತೆನೆ :—

ಎಲೆ ಧರ್ಮರಾಯನೆ ! ಸಮಸ್ತವಾದ ದ್ರೌಪದಿಯ ಮಕ್ಕಳು ಧೃಷ್ಟದ್ಯುಮ್ನ ಸಮೇತ
ರಾಗಿ, ಯುದ್ಧವು ತೀರಿತು ಎಂದು ನಿಶ್ಚಯವಂ ಮಾಡಿಕೊಂಡು ತಮ್ಮ ಪಾಳೆಯದಲ್ಲಿ ಮಲ
ಗಿದರು. ಕ್ರೂರವಾದ ಕೃಪಾಚಾರ್ಯನಿಂದಲೂ ಕೃತವರ್ಮನಿಂದಲೂ ದುಷ್ಪಾರಯಾದ ಅಶ್ವತ್ಥಾ
ಮನಿಂದಲೂ ಸಮಸ್ತವಾದ ಪಾಳೆಯವೂ ಸಂಹರಿಸಲ್ಪಟ್ಟಿತು. ಈ ಮೂರುಮಂದಿಯಿಂದ
ಲೂ ನಾನಾಪ್ರಕಾರಗಳಾದ ಆಯುಧಗಳಿಂದ ರಥಗಜತುರಗಂಗಳು ಸಹಸ್ರಪ್ರಕಾರವಾಗಿ ಖಂಡಿ
ಸಲ್ಪಟ್ಟಿತು. ಹತಶೇಷವಿಲ್ಲದ ಹಾಗೆ ಮಾಡಲ್ಪಟ್ಟಿತು. ಪಕ್ಷಿಗಳಿಂದ ವ್ಯಾಪ್ತವಾದ
ಪುಷ್ಪಫಲಾದಿಗಳಿಂದೊಪ್ಪುವ ವನಕ್ಕೆ ಕುಠಾರಗಳಿಂದ ಹೇಗೆ ಭೇದ ಬರುವುದೋ ಅದೇ ರೀತಿ
ಯಲ್ಲಿ ಶಿಬಿರವು ಛಿನ್ನವಾಯಿತು. ಎಂಬ ಅಶುಭವಾರ್ತೆಯನ್ನು ಕುಂತೀ ಪುತ್ರನಾದ ಧರ್ಮರಾ
ಯನು ಕೇಳಿ ಪುತ್ರಶೋಕವುಳ್ಳವನಾಗಿ ಭೂಮಿಯಲ್ಲಿ ಬಿದ್ದನು. ಬಳಿಕ ಹಾಗೆ ಬಿದ್ದ ಧರ್ಮರಾ
ಯನನ್ನು ಸಾತ್ಯಕಿ ಹಿಡಿದನು. ಬಳಿಕ ಭೀಮಸೇನಾರ್ಜುನರು ಸಹದೇವನಕುಲರೂ ಅದೇ
ರೀತಿಯಲ್ಲಿ ಶೋಕಪಟ್ಟರು. ಬಳಿಕ ಧರ್ಮರಾಯನು ಜ್ಞಾನವಂ ಸಂಪಾದಿಸಿಕೊಂಡು ಶೋ
ಕಯುಕ್ತವಾದ ವಾಕ್ಯದಿಂದ ಒಂದು ವಾಕ್ಯವಂ ಪೇಳಿದನದೆಂತೆನೆ :—

* * * *

ಪುತ್ರಭಾಗ್ಯವಿಲ್ಲದೆ ಶೋಕಿಸುವ, ಒಡಹುಟ್ಟಿದವರು ಮೊದಲಾದವರ ಹೋಗಲಾಡಿಸಿ
ಕೊಂಡಿಹ ದ್ರೌಪದಿಯನ್ನು ಕುರಿತು ನೀನು ಹೋಗು ಎನಲಾಗಿ, ನಕುಲನು ಧರ್ಮದಿಂದ ಧರಾ
ಸ್ಪದನಾದ ಧರ್ಮರಾಯನ ವಾಕ್ಯಮಂ ಕೇಳಿ, ದ್ರುಪದರಾಯ ನಗರವನ್ನು ಕುರಿತು ನಕುಲನು
ಹೋದ ಬಳಿಕ, ಈ ರೀತಿ ನಕುಲನಂ ದ್ರೌಪದಿಯ ಸಮೀಪಕ್ಕೆ ಕಳುಹಿದ ಧರ್ಮರಾಯನು ತನ್ನ
ಬಂಧುಗಳೊಡನೆ ಕೂಡಿಕೊಂಡು ರಣವ ಶೋಧಿಸುವುದಕ್ಕೆ ಭೂತಗಣ ಸಕಲವಾದ ಯುದ್ಧ
ಭೂಮಿಯು ಕುರಿತು ಹೋಗಿ ಅಶುಭಸ್ವರೂಪವಾದ ಪಾಳೆಯವನ್ನೂ ತನ್ನ ಪುತ್ರರನ್ನೂ ಮಿ
ತ್ರರನ್ನೂ ಬಂಧುಗಳನ್ನೂ ನೋಡಿ ರಕ್ತದಿಂದ ವ್ಯಾಪ್ತವಾದ ಮುಖಗಳೂ, ಮಡಿಯಲ್ಪಟ್ಟ
ದೇಹಗಳೂ, ಖಂಡಿಸಲ್ಪಟ್ಟ ಶಿರಸ್ಸುಗಳೂ ಉಳ್ಳವರನ್ನು ನೋಡಿ ಪರಮಧಾರ್ಮಿಕನಾದ ಧರ್ಮರಾ
ಯನು ದೈನ್ಯಾಸ್ಯವಂ ಮಾಡಿ ಸಮಸ್ತಜನ ಸಮೇತನಾಗಿ ಭೂಮಿಯಲ್ಲಿ ಬಿದ್ದನು.

Colophon ;

ಇದು ಐಷಿಕ ಪರ್ವದ ಪ್ರಥಮೋಧ್ಯಾಯವು.

ಬಳಿಕ ಆ ಶಿಬಿರದಲ್ಲಿ ಹತವಾದ ಪುತ್ರಪೌತ್ರ ಪಿತ್ರಾದಿಗಳನ್ನೂ ಕಂಡು ಧರ್ಮರಾಯನು
ದುಃಖವುಳ್ಳವನಾಗಿ ಅದೇ ರೀತಿಯಾಗಿ ಪುತ್ರಪೌತ್ರ ಭ್ರಾತ್ರಾದಿಗಳನ್ನೂ ಸ್ಮರಿಸಿಕೊಂಡು ಮ
ಹಾನುಭಾವನಾದ ಧರ್ಮರಾಯನಿಗೆ ಬಹು ಚಿತ್ತಕ್ಷೋಭೆಯಾಯಿತು :—

* * * *

ರಾಜಗೃಹಯಾದ ಅರ್ಜುನನು ನಿನ್ನನ್ನು ಸಂಹರಿಸನು. ನಿನ್ನ ಶಿರಸ್ಸಿನಲ್ಲಿರುವ ದಿವ್ಯಮ
ಣಿಯನ್ನವರಿಗೆ ಕೊಟ್ಟರೆ ತೆಗೆದುಕೊಂಡು ಹೋದಾರು ಎಂದು ವ್ಯಾಸಗೆ ನುಡಿಯಲಾಗಿ, ಪಾಂ
ಡವರು ಕೌರವರ ಸಮಸ್ತವಾದ ಮಣಿಗಳನ್ನೂ ಧನವನ್ನೂ ಅಪಹರಿಸಿದರು. ನನ್ನ ಶಿರೋ
ಮಣಿ ಮಾತ್ರವೊಂದುಳಿಯಿತು. ಈ ಮಣಿಯು ದೇಸಯಿಂದಲೇಯೆಸ. (?) ವ್ಯಾಧಿಕ್ಷುದ್ಭಯಂ

ಗಳಿಲ್ಲದೆ ದೇವತೆಗಳಿಂದಲೂ ರಾಕ್ಷಸರಿಂದಲೂ, ಪರ್ವತಗಳಿಂದಲೂ ಸರ್ಪಗಳಿಂದಲೂ ರಕ್ಷಸ್ಸುಗಳಿಂದಲೂ ನಾನುಭಯವನ್ನೈದದೆ ಇದ್ದೇನೆ. ಇದನ್ನು ನಾನು ಕೊಡುವುದಿಲ್ಲ. ನನ್ನ ತಂದೆಯು ಇದೇ ರೀತಿ ಕೊಡಬೇಡವೆಂದು ಹೇಳಿದ್ದನು. ಈ ಅಸ್ತ್ರವು ಪಾಂಡುಪುತ್ರರ ಗರ್ಭದಲ್ಲಿಯೂ ಉತ್ತರೆಯ ಗರ್ಭದಲ್ಲಿಯೂ ನಾನು ಪ್ರಯೋಗಿಸುವೆನು ಎಂದು ದ್ರೋಣಪುತ್ರನು ನುಡಿಯಲಾಗಿ ವ್ಯಾಸನು ದುಷ್ಟತ್ವವ ಮಾಡಿಕೊಂಡು ಒಂದು ವಾಕ್ಯವಂ ಪೇಳನನದೆಂತೆನೆ :— ಪಾಂಡುಪುತ್ರರ ಸ್ತ್ರೀಯರ್ಕಳಗರ್ಭದಲ್ಲಿ ಈ ಅಸ್ತ್ರವನು ಬಿಟ್ಟು ಸುಮ್ಮನಿ ರೈ ಎನಲಾಗಿ ಕೃಷ್ಣಸ್ವಾಮಿಯು ಪಾಂಡವರಿಗೆ ಹಿತವಬಯಸುವವನಾಗಿ ಒಂದು ವಾಕ್ಯವಂ ಪೇಳಿದನದೆಂತೆನೆ :—ಉತ್ತರೆಯ ಗರ್ಭವನ್ನು ಬಿಟ್ಟು ಮಿಕ್ಕದ ಗರ್ಭಗಳಲ್ಲಿ ಈ ಅಸ್ತ್ರಪ್ರಯೋಗಿಸಲ್ಪಡಲಿ. ನಾನು ಉತ್ತರೆಯ ಗರ್ಭದಲ್ಲಿರುವ ಶಿಶುವನ್ನು ಕೀರ್ತಿಶಾಲಿಯಾಗುವ ಹಾಗೆ ಅನೇಕ ಯಾಗಗಳು ಮಾಡುವ ಹಾಗೆ ದೀರ್ಘಾಯುವುಳ್ಳವನು ಆಗುವ ಹಾಗೆ, ರಾಜರ್ಷಿಯಾಗುವ ಹಾಗೆ ವರಪ್ರದಾನವಂ ಮಾಡಿದ್ದೇನೆ. ನೀನು ಮತ್ತೊಂದು ಪ್ರಕಾರ ಮಾಡಬೇಡ ಎಂದು ಪೇಳಿದ ಕೃಷ್ಣಸ್ವಾಮಿಯ ವಾಕ್ಯವಂ ಕೇಳಿದ ಅಶ್ವತ್ಥಾಮನು ಕೋಪವುಳ್ಳವನಾಗಿ ಉತ್ತರವಂ ಪೇಳಿದನದೆಂತೆನೆ :—ಎಲೈ ! ಕೇಶವನೆ ! ಪಕ್ಷಪಾತದಿಂದ ಯಾವುದು ಹೇಳಿದೆಯೋ ಈ ಕಾರ್ಯವು ಹಾಗೆ ಆಗಲರಿಯದು. ಯಾವ ಉತ್ಪತ್ತಿಯ ಗರ್ಭವನ್ನು ನೀನು ರಕ್ಷಿಸುವೆನೆಂದು ವರವನು ಕೊಟ್ಟಿದ್ದೀಯೋ ಅಲ್ಲಿಯೇ ನಾನು ಈ ಅಸ್ತ್ರವನ್ನು ಬಿಡುತ್ತಲಿದ್ದೇನೆ. ಎಂದು ಹೇಳಲಾಗಿ ಅಮೋಘವಾದ ಈ ನಿನ್ನ ಅಸ್ತ್ರವು ಪ್ರವೇಶಿಸಿ ಗರ್ಭಶಿಶುವಂ ಸಂಹರಿಸಲಿ. ನಾನು ಜೀವವನುಂಟುಮಾಡಿ ದೀರ್ಘಾಯುಸನ್ನು ಕೊಡುವೆನು ಎಂದು ಕೃಷ್ಣಸ್ವಾಮಿ ಹೇಳಲಾಗಿ ಕೋಪವುಳ್ಳವನಾಗಿ ಅಶ್ವತ್ಥಾಮನು ಪ್ರತ್ಯುತ್ತರವಂ ಹೇಳಿದನು.

End:

ಎಲೈ ! ಧರ್ಮರಾಯನೆ ಬಳಿಕ ಮಹಾದೇವನು ಭುವನತ್ರಯಗಳನ್ನೂ ಸವಿತನತೊಳ್ಳಳನು ? ಪೋಷನೆತಂತ್ರಗಳನ್ನು ಕೊಟ್ಟು ಮರಳಿ ಯಜ್ಞವನ್ನು ನಿರ್ಮಿಸಿದನು. ಆ ಮಹಾದೇವನ ದೆಸೆಯಿಂದಲೇ ಈ ಯಜ್ಞಾದಿ ಸಮಸ್ತವೂ ಈ ರೀತಿ ಸ್ಥಿರವಾಯಿತು. ಸಮಸ್ತವಾದ ಹವಿಸ್ಸುಗಳನ್ನೂ ದೇವತೆಗಳು ಭಾಗಗಳನ್ನು ಮಾಡಿಕೊಂಡರು. ರುದ್ರಭಾಗವನ್ನು ಮುಖ್ಯವಾಗಿ ಕಲ್ಪಿಸಿದರು. ಜಗತ್ಕರ್ತನಾದ ಮಹಾದೇವಂಗೆ ಕೋಪವು ಬಂದರೆ ಸಮಸ್ತವೂ ಭಗ್ನವಾಗುವುದು. ಪರಮೇಶ್ವರನು ಪ್ರಸನ್ನನಾದರೆ ಸಮಸ್ತವೂ ಸ್ವಚ್ಛವಾಗುವುದು. ಅದು ಕಾರಣದತ್ತಣಿಂ ಆ ಪರಮೇಶ್ವರನಿಂದಲೇ ನಿನ್ನ ಮಹಾರಥಿಕರಾದ ಮಕ್ಕಳು ಸಂಹರಿಸಲ್ಪಟ್ಟರು. ಮತ್ತೆ ಕೆಲವು ಪಾಂಚಾಲದೇಶಾಧೀಶ್ವರರು ಮಹಾದೇವನಿಂದಲೇ ಹತರಾದರು. ಇದು ಅಶ್ವತ್ಥಾಮನು ಮಾಡಿದರೂ ಮಾಡಿದ ಕಾರ್ಯವಲ್ಲ. ಮಹಾದೇವನ ಕಟಾಕ್ಷ ತಪ್ಪಿನಡೆದ ಕಾರ್ಯವು ಎಂದು ತಿಳಿದು ಮನಸ್ಸಿನಲ್ಲಿ ಕ್ಲೇಶವಮಾಡಿಕೊಳ್ಳಬೇಡವೆಂದು ಕೃಷ್ಣಸ್ವಾಮಿ ಧರ್ಮರಾಯನಂ ಕುರಿತು ಪೇಳಿದನೆಂದು ವೈಶಂಪಾಯನನು ಜನಮೇಜಯರಾಯನಿಗೆ ಹೇಳಿದ ಕಥಾವೃತ್ತಾಂತವು.

Colophon:

ಇದು ಐಷಿಕ ಪರ್ವದ ರುದ್ರಮಾಹಾತ್ಮ್ಯೆಯೆಂಬ ಹತ್ತನೆಯ ಅಧ್ಯಾಯದ ಟೀಕು ಐಷಿಕಪರ್ವಂ ಸಮಾಪ್ತಂ.—

" ಗದ್ಯ "

ಇದು ನಿದು ಸಕಲಸುರಾಸುರಮೌಳಿ ಮಣಿಘೃಣಿಮಂಜರೀಪಿಂಜರಿತಮುಕುಂದಪಾದಾರವಿಂದ ಮಕರಂದಧಾರಾ ಸಮೋಧಿತಮಧುಕರಾಯಮಾನ ನಿಜಾಂತರಂಗಕರಸಮುದಂಚಿತ

ಕುಸುಮಾವಳೀಸಮರ್ಪಣ ಕಾವೇರೀಪೂರಪರೀತಪಶ್ಚಿಮರಂಗಪುರೀನಿಕೇತನ ಕೇತನಾಗ್ರನಿವೇಶಿತವಿನತಾನಂದಾವಲೋಕನನುಕೆಲಪಲಾಯಿತ್ರಸಮಸ್ತಸಾಮಂತನೃಪಸರ್ವಸ್ವಸಂಕ್ರಮಣ ದಕ್ಷಿಣೋತ್ತರಸ್ಪೂರ್ವಶಿಷ್ಟಮಾಬ್ಧಿವೇಲಾವಲಯಿತ್ರಮಹೀತಲನುಹಿತಶ್ರೋತ್ರಿಯಕುಲ ದಾರಿದ್ರ್ಯ ವಿದ್ರಾವಣೋನ್ನಿದ್ರ ಷೋಡಶಮಹಾದಾನವಿಶ್ರಾಣನಶಾರದ ಶಾರದಾಹೃದಯಾನಂದಕಂದಳನಾನುಷಂಗಿ ಸಂಗೀತಸಾಹಿತ್ಯಕಲಾಧರನಿಮಲಯಾದವಕುಲಕಲಶೋದಧಿಕಲಾಧರ ಶ್ರೀಮದ್ರಾಜಾಧಿರಾಜರಾಜಪರಮೇಶ್ವರ ಪ್ರೌಢಪ್ರತಾಪ ಪ್ರತಿಮವೀರನರಪತಿ ಚಿಕ್ಕದೇವರಾಯ ವಿರಚಿಮಪ್ಪ ಕರ್ಣಾಟಕಭಾಷಾವಿರಚಿತ ಮಪ್ಪ ಮಹಾಭಾರತ ಕಥಾ ಟಿಪ್ಪಣದೊಳ್ ಸೌಪ್ತಿಕ ? (ಐಷಿಕ) ಪರ್ವಂ ಸಮಾಪ್ತಂ.

(ವಿ.ವಿ.)—

ಐಷಿಕ ಪರ್ವವು ಸಮಗ್ರ. ಅಕ್ಷರಗಳು ಚೆನ್ನಾಗಿವೆ. ತಪ್ಪುಗಳವೆ. ಸ್ವಲ್ಪಶಿಥಿಲ. ಗ್ರಂಥಪಾತವಿಲ್ಲ. ಕವಿ ಚಿಕ್ಕದೇವರಾಜ. ಮಿಕ್ಕವಿಷಯಗಳನ್ನು 104 ನೆಯ ನಂಬರಿನಲ್ಲಿ ನೋಡಿತಿಳಿಯುವುದು.

No. 109 ಭಾರತ ವಚನ-
BHĀRATA PROSE.

Substance, palm-leaf. Size, $17\frac{1}{4} \times 1\frac{3}{8}$ inches. Pages, 83. Lines, 8 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Strīparva complete.

A rendering, in Kanarese, of the story of the Strīparva of the Sanskrit Mahābārata by Cikkadēvarāja. For other particulars see under No. 104 *ante*.

Beginning:

(ದುರ್ಯೋಧನನು) ಭೀಮನಿಂದ ಹತನಾದ ಬಳಿಕ ಮಹಾದೇವಪ್ರಸಾದಿಂದ ಅಶ್ವತ್ಥಾಮನು ಶಿಬಿರದಲ್ಲಿದ್ದ . . . . . .

* * * *

ಲ್ಲ ಅದರಿಂದಲೇ ಬ್ರಹ್ಮದೇವನು ಈ ರೀತಿ ದುಃಖವನನುಭವಿಸುವ ಹಾಗೆ ನಿಯಮಿಸಿದನು. ಪಯುಸ್ಸು ಅತಿಕ್ರಮಿಸಿ ವಾರ್ಧಿಕ್ಯವು ಪ್ರಾಪ್ತವಾದುದು. ಈ ರೀತಿ ಸರ್ವಬಂಧುಮಿತ್ರಕ್ಷಯವೂ ದೈವವಶದಿಂದಲೇ ಪ್ರಾಪ್ತವಾಯಿತು ಎನ್ನದೆಸೆಯಿಂದ ದುಃಖವನನುಭವಿಸುವವನಾವನಿದಾನೆ. ಅದರಿಂದ ದೃಢವ್ರತರಾದ ಪಾಂಡವರೂ ಬ್ರಹ್ಮಲೋಕವನ್ನು ಕುರಿತು ನಡೆಯುವ ಎನ್ನನ್ನು ನೋಡಲಿ ಎಂದು ಧೃತರಾಷ್ಟ್ರನು ಸಂಜಯನ ಕೂಡೆ ಹೇಳಲಾಗಿ ಅನೇಕ ದುಃಖಾಕ್ರಾಂತನಾಗಿ ಪ್ರಲಾಪಿಸುತ್ತಿರುವ ಧೃತರಾಷ್ಟ್ರ ವಾಕ್ಯವಂ ಕೇಳಿ ಶೋಕನಿವಾರಕವಾದ ಒಂದು ವಾಕ್ಯವನ್ನು ನುಡಿದನು. ಎಲೈ ! ಧೃತರಾಷ್ಟ್ರನೇ ! ಸಕಲವಾದ ವೇದಾರ್ಥಗಳನ್ನೂ ಸಕಲ ಶಾಸ್ತ್ರಾರ್ಥಗಳನ್ನೂ ವೃದ್ಧರಿಂ ಕೇಳಿದ ನೀನು ಶೋಕವಂಮಾಡಲಾಗದು ಪೂರ್ವವುದಲ್ಲಿ) ಸೃಂಜಯನು ಪುತ್ರಶೋಕದಿಂದ ಪ್ರಲಾಪಿಸುತ್ತಿರಲಾಗಿ ಸಕಲವಾದ ಋಷಿಗಳೂ ಈ

ರೀತಿಯೋ ಶೋಕಶಾಂತಿಯ ನ್ನೈದಿಸಿದರು. ನಿನ್ನಸುತನು ಯೌವನಮದದಿಂದ ಮನ್ಮಥಾಕ್ರಾಂತನಾಗಿರುವ ಸಮಯದಲ್ಲಿ ನೀನೂ ಮಿತ್ರವಾಕ್ಯವನ್ನು ಕೇಳದೆ ಉಲ್ಲಂಘಿಸಿದವನಾದೆ. ಫಲವಿಘಾತವಂ ಮಾಡಿದೆ. ಧನಲುಬ್ಧನಾದ ನಿನ್ನ ಸುತನಿಂದ ಆವರ್ಥವೂ ಮಾಡಲ್ಪಟ್ಟದಲ್ಲ. ಅದೂ ಅಲ್ಲದೆ ನಿನಗೆ ದುಷ್ಟಬುದ್ಧಿಯಾದ ದುಶ್ಯಾಸನನು ಕರ್ಣನು, ಶಕುನಿಯೂ, ಸೈಂಧವನೂ ಇವರು ಮೊದಲಾದ ದುಷ್ಟಮಂತ್ರಿಗಳಿಂದ ಅಧಿಕವಾಗಿ ವೃದ್ಧಿಯ ನೈದುತ್ತಲಿಹ ಈ ರಾಜ್ಯವೂ ನಿನ್ನಸುತನಿಂದ ಶಲ್ಯಮಯವಾಯಿತು.

* * * *

ಅಮೃತವ ಮಕರಂದ ನೋಡಿಗ್ರಹಿಸದೆ ಬಳಿಕ ಆ ಮಧುಲೋಭದಿಂದ ಹೃಷ್ಟನಾಗಿ ಶೋಕಪಡುವ ಮನುಷ್ಯನ ರೀತಿ ಅತಿಕ್ರಮಿಸಿದ ಅರ್ಥದಲ್ಲಿ ಶೋಕವಂ ಮಾಡುವವನು ಅರ್ಥವನ್ನೂ ಸುಖವನ್ನೂ ಎಯ್ದಿದವನಿಲ್ಲ. ಆ ರೀತಿಯೋ ಶೋಕವಂ ಮಾಡುವವನು ಭಾಗ್ಯವನ್ನೂ ಜಯವನ್ನೈದುವುದಿಲ್ಲ. ತಾನೇ ಅಗ್ನಿಯ ಬೆಳಿಯಿಸಿ ಆ ಆಗ್ನಿಮಧ್ಯದಲ್ಲಿ ತಾನು ದಹಿಸಲ್ಪಡುತ್ತ ಪಶ್ಚಾತ್ತಾಪ ಪಡುವನು ಪಂಡಿತನಲ್ಲ. ಎಲೈ ! ನೃಪನೆ ನಿನ್ನಿಂದ ನಿನ್ನಸುತನಾದ ದುರ್ಯೋಧನನಿಂದ ಅರ್ಜುನನೆಂಬ ಅಗ್ನಿಹೋತ್ರವು ಹಿತವಾಕ್ಯೋಲ್ಲಂಘನೆಯೆಂಬ ವಾಯುವಿಂದ ಲೋಭವೆಂಬ ಆಜ್ಯದಿಂದ ಪ್ರಜ್ವಲಿಸಲ್ಪಟ್ಟಿತು. ಆ ರೀತಿ ಪ್ರಜ್ವಲಿಸಲ್ಪಟ್ಟ ಅರ್ಜುನಾಗ್ನಿಯಲ್ಲಿ ನಿನ್ನಸುತ್ರರು ಮಿಡಿತೆಗಳ ರೀತಿ ಬಿದ್ದರು. ಆ ರೀತಿ ಕೃಷ್ಣಾಗ್ನಿ ದಗ್ಧರಾದ ನಿನ್ನ ಸುತರನ್ನು ಕುರಿತು ನೀನು ಶೋಕವಂಮಾಡಲಾಗದು. ಕಣ್ಣೀರಿಂದ ವ್ಯಾಪ್ತವಾದ ಮುಖವನ್ನು ವಹಿಸಿದರೆ ಪಂಡಿತರು ಇದು ಶಾಸ್ತ್ರವಿರುದ್ಧವೆಂದು ನಿಂದಿಸುವರು. ಆ ಶೋಕಾಗ್ನಿಯು ಅಗ್ನಿಕಣಂಗಳ ರೀತಿ ಮನುಷ್ಯರನ್ನು ದಹಿಸುವುದು. ಅದು ಕಾರಣ ಕೋಪವನ್ನು ಬಿಟ್ಟು ಸ್ವಬುದ್ಧಿಯಿಂದ ದೇಹದೊಡನೆ ಆತ್ಮವಧರಿಸಿ ಸ್ವಸ್ಥನಾಗು. ಎಲೈ ! ಜನಮೇಜಯನೆ ಈ ರೀತಿ ಸಂಜಯನಿಂದ ಹೊರಡಿಸಲ್ಪಟ್ಟ ಧೃತರಾಷ್ಟ್ರನಂ ಕುರಿತು ವಿದುರನು ಒಂದು ವಾಕ್ಯವನಾಡಿದನು.

Colophon —

ಇದು ಮಹಾಭಾರತದಲ್ಲಿ ಸ್ತ್ರೀಪರ್ವದಲ್ಲಿ ಮೊದಲನೆಯ ಅಧ್ಯಾಯದ ಟೀಕು.

ಎಲೈ ! ಜನಮೇಜಯನೆ ! ಅಮೃತ ರಸಗಳನ್ನು ಸುರಿಸುವ ವಾಕ್ಯಗಳಿಂದ ಸಂತೋಷಪಡಿಸುತ್ತ, ಪುರುಷಶ್ರೇಷ್ಠನಾದ ಧೃತರಾಷ್ಟ್ರನಂ ಕುರಿತು ವಿದುರನು ಏನು ಹೇಳಿದನೊ ಅದು ನಿನಗೆ ಹೇಳುತಲಿದೇನೆ ಕೇಳು.

* * * *

ಸಮಸ್ತಪ್ರಾಣಿಗಳಿಗೂ ಉತ್ಕೃಷ್ಟವಾದುದು ಈ ಮಾರ್ಗವು. ಕ್ರೂರನಾದವನನ್ನೂ, ಭಯಪಟ್ಟವನನ್ನೂ, ಕಾಲಯಮನು ತನ್ನ ಲೋಕವನ್ನೈದಿಸುತ್ತಲಿದಾನೆ. ಶೂರನಾದವನು ಆ ಕಾಲಪುರುಷನೊಡನೆ ಯುದ್ಧವಂ ಮಾಡದೆ ಮಹಾಲೋಕವನ್ನೈದುತ್ತಲಿದಾನೆ. ಮತ್ತು ಯುದ್ಧದಲ್ಲಿ ಅನ್ಯೋನ್ಯವು ಯುದ್ಧಮಾಡದವನು ಮರಣವನ್ನೈದುತ್ತಲಿದಾನೆ. ಯುದ್ಧವಂ ಮಾಡಿದವನಾದೊಡೆ ಬದುಕುತ್ತಲಿದಾನೆ. ಅದು ಕಾರಣ ಕಾಲಪುರುಷನಗತಿಯನ್ನೈದಿದವರು ಯಾರೂ ಅತಿಕ್ರಮಿಸಲಾರರು. ಆ ರೀತಿ ಕಾಲಗತಿಯಿಂದ ಹತರಾದ ಈ ನಿನ್ನ ಸುತರು ಮೊದಲಾದವರನ್ನು ಕುರಿತು ನೀನು ಶೋಕವಂ ಮಾಡತಕ್ಕವನಲ್ಲ. ಹತವಾದವರು ಸಮಸ್ತರೂ ಸ್ವಾಧ್ಯಾಯಶೀಲರು. ಅವರು ದೃಢವ್ರತಗಳುಳ್ಳವರು. ಮತ್ತು ಯುದ್ಧಾಭಿಮುಖರಾಗಿ ಹತರಾ

ದರು. ಇಂಥಾ ಅವರುಗಳು ವೇದಶಾಸ್ತ್ರಂಗಳು ಪ್ರಮಾಣವಾದೊಡೆ ಸ್ವರ್ಗವನ್ನೈದುವರು. ಯಾವ ಪಕ್ಷದಲ್ಲಿ ಖೇದವು ಮಾಡತಕ್ಕುದಲ್ಲ. ಅವರುಗಳಿರುವ ಸಮಯದಲ್ಲಿ ತನ್ನ ದರ್ಶನ ವಿಷಯವಾಗಿದೆ ಹತ್ತರಾಗಿ ಈಗಲೂ ನಿನಗೆ ಪ್ರತ್ಯಕ್ಷರಾಗದೆ ಇದ್ದಾರೆ ಅವರುಗಳು ನಿನಗೆ ಆರು ? ಅವರುಗಳಿಗೆ ನೀನು ಯಾರು ? ಅಲ್ಲಿ ನಿನಗೆ ಚಿಂತಿಸುವುದಕ್ಕೆ ಅವಕಾಶವಿಲ್ಲ. ಯುದ್ಧದಲ್ಲಿ ಲೋಕರೀತಿ ಹತರಾದರೆ ಸ್ವರ್ಗವು—ಜಯಿಸಿದರೆ ಕೀರ್ತಿಯು—ಈ ಎರಡೂ ಅತ್ಯಂತಗುಣವೇ. ಇದರೊಳಗೆ ನಿಷ್ಫಲವೊಂದೆಂಬುದು ಸಾಹಸವು.

End:

ಕುಂತಿಯು ಶೋಕದಿಂದ ಕೃಶೆಯಾಗಿ ಲಜ್ಜೆಯಿಂದ ಮಂದವಾದ ವಾಕ್ಯದಿಂದ ಸುತ್ತರನ್ನು ಕುರಿತು ಒಂದು ವಾಕ್ಯವಂ ನುಡಿದಳು. ಮಹಾಧನುರ್ಧರನಾದ, ಶೂರನಾದ, ಮಹಾರಥಿಕರೊಳಗೆ ಶ್ರೇಷ್ಠನಾದ ಅವನು ಅರ್ಜುನನಿಂದ ಹತನಾದನೋ ಅವನನ್ನು ಸೂತಪುತ್ರನೆಂದೂ ರಾಧೇಯನೆಂದೂ ಪೇಳುವರು. ಅವನು ಸೇನಾಮಧ್ಯದಲ್ಲಿ ಸೂರ್ಯನೋಪಾದಿಯಲ್ಲಿ ಒಪ್ಪುವನು. ಅವನು ಪೂರ್ವವು ಸಕಲಸೇನೆಯನ್ನೂ ಹತಮಾಡಿ ಸಮಸ್ತವಾದ ದುರ್ಯೋಧನಸೇನೆಯನ್ನೂ ಸ್ವಾಧೀನಮಾಡಿಕೊಂಡು ಇರುವನೋ ಭೂಮಿಯಲ್ಲಿ ಅವನಿಗೆ ಸಮಾನವಾದವನಿಲ್ಲ. ಅವನು ನಿಮ್ಮ ಪ್ರಾಣಂಗಳಿಂದ ವಿಯೋಗವಂ ಮಾಡಲಾಗದೆಂದು ಎನ್ನಿಂದ ಪ್ರಾರ್ಥಿಸಲ್ಪಟ್ಟನು. ಯುದ್ಧದಲ್ಲಿ ಸಮರ್ಥನಾದ ಅವನಿಗೆ ಸಮಾನವಾದವನಿಲ್ಲ. ಅಣ್ಣನಾದ ಅಂಥ ಕರ್ಣನಿಗೆ ಉದಕಕ್ರಿಯೆಯಂ ಮಾಡಿರಿ. ಅವನು ನಿಮಗೆ ಜ್ಯೇಷ್ಠನು. ಸೂರ್ಯನಿಂದ ಕುಂಡಲಕವಚಧರನಾಗಿ ಜನಿಸಿದನೆಂದು ಕುಂತಿಯು ಪೇಳಲಾಗಿ, ಪಾಂಡವರು ಆ ವಾಕ್ಯವಂ ಕೇಳಿ ಕರ್ಣನಂ ಕುರಿತು ಶೋಕವಂ ಮಾಡಿ ಅತ್ಯಂತದುಃಖಿತರಾದರು. ಅನಂತರ ಕುಂತೀಸುತರಾದ ಯುಧಿಷ್ಠಿರನು ತಾಯಾದ ಕುಂತಿಯನ್ನು ಕುರಿತು ಒಂದು ವಾಕ್ಯವಂ ನುಡಿದನು. ಆವನ ಬಾಣದಿಂದ ಅರ್ಜುನನ ದೆಸೆಯಿಂದ ಇತರರಾದವರು ನಿಲ್ಲಲರಿಯರೋ, ಕುಂಡಲಕವಚಧರನಾದ, ಶೂರನಾದ, ಸೂರ್ಯಸಮಾನನಾದ ಅಂಥ ಕರ್ಣನು ನಿನಗೆ ಆವ ರೀತಿ ಸುತನಾದನು ? ಸುಯೋಧನನು ಅವನ ಭುಜಸಾಮರ್ಥ್ಯದಿಂದ ತಮ್ಮಲ್ಲಿ ವೈರವಂ ಮಾಡಿನೋ ಅಂಥ ಕರ್ಣನು ನಮಗೆ ಜ್ಯೇಷ್ಠನೆಂದು ಏನು ಕಾರಣದಿಂ ಪೇಳದೆ ಹೋದೆ ? ಮಹಾಧನುರ್ಧರನಾದ ಅಂಥ ಕರ್ಣನಂ ಅರ್ಜುನನಿಂದಲೂ ಇತರನಾದವನು ಸಂಹರಿಸಲರಿಯನು. ಅವನು ನಮಗೆ ಜ್ಯೇಷ್ಠನಾದವನು. ಶಸ್ತ್ರಧಾರಿಗಳೊಳಗೆ ಸಮರ್ಥನು. ಅಂಥಾವನ ನೀನು ಆವರೀತಿ ಪೆತ್ತವಳಾದೆ

*   *   *   *

ಧೃತರಾಷ್ಟ್ರನೂ ಉದಕಪ್ರದಾನವಂ ಮಾಡಿ ಭಾರ್ಯಾಸಹಿತನಾಗಿ ಗಂಗಾನದಿಯ ತಡಿಯಲ್ಲಿ ಸೇರಿದರೆಂದು ವೈಶಂಪಾಯನರು ಜನಮೇಜಯನಿಗೆ ಬುದ್ಧಿಗಲಿಸಿದರೆಂದು ಸೂತಪೌರಾಣಿಕರು ಶೌನಕಾದಿ ಮಹರ್ಷಿಗಳಿಗೆ ಹೇಳಿದರು.

Colophon:

ಇದು ಮಹಾಭಾರತಸ್ತ್ರೀಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯಾರ್ಥಂ ಸಮಾಪ್ತಂ.

ಸ್ತ್ರೀಪರ್ವಂ ಸಮಾಪ್ತಂ.

ಇದುನಿದು ಸಕಲಸುರಾಸುರಮೌಳಿಮಣಿಘೃಣಿಮಂಜರೀಪಿಂಜರಿತಮುಕುಂದಪಾದಾರವಿಂದಮಕರಂದಧಾರಾಸಮೇಧಿತ ಮಧುಕರಾಯಮಾಣ ನಿಜಾಂತರಂಗಕರಸಮುದಂಚಿತಶೇಖರ ಕುಸುಮಾವಳೀ ಸಮರ್ಪಣ ಸಮಾಕುಲ ಕಾವೇರೀಪುರಪರೀತಪಶ್ಚಿಮರಂಗಪುರೀನಿಕೇತನಾಗ್ರನಿವೇಶಿತ ವಿನತಾನಂದನಾವಲೋಕನನುಕಲ ಫಲಾಯಿತಸಮಸ್ತಸಾಮಂತನೃಪಸರ್ವ

ಸ್ಯಸಂಕ್ರಮಣ ದಕ್ಷಿಣೋತ್ತರ ಪೂರ್ವಪಶ್ಚಿಮಾಬ್ಧಿವೇಲಾವಲಯಿತಮಹೀತಲಮಹಿತಶ್ರೀ ತ್ರಿಯಕಾಲದಾರಿದ್ರ್ಯವಿದ್ರಾವಣೋನ್ನಿದ್ರ ಷೋಡಶಮಹಾದಾನ ವಿಶ್ರಾಣನ ಶಾರದಾಹೃದಯಾನಂದ ಕಂದಳನಾನುಷಂಗಿ ಸಂಗೀತಸಾಹಿತ್ಯಕಲಾಧರ ವಿಮಲಯಾದವಕಾಲಕಲಶೋದಧಿಕಲಾಧರ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರಾಪ್ರತಿಮಪ್ರೌಢಪ್ರತಾಪಾಪ್ರತಿಮಶ್ರೀ ವೀರನರಪತಿ ಚಿಕ್ಕದೇವರಾಯವಿರಚಿತ್ರಮಪ್ಪ ಕರ್ಣಾಟಭಾಷಾರಚಿತಮಪ್ಪ ಮಹಾಭಾರತ ಟಿಪ್ಪಣದೊಳ್.

ಸ್ತ್ರೀಪರ್ವಂ ಸಮಾಪ್ತಂ.

(ವಿ. ವಿ.)—

ಸ್ತ್ರೀಪರ್ವ ಸಮಗ್ರ. ಬರೆವಣಿಗೆ ಚೆನ್ನಾಗಿದೆ. ಶೈಥಿಲ್ಯಗ್ರಂಥ ವಾಗಿದೆ. ಆದಿಯಲ್ಲಿ ಸ್ವಲ್ಪಘಾತವಾಗಿದೆ. ತಪ್ಪುಗಳಿವೆ ಭಾಷೆಶುದ್ಧವಾದುದಲ್ಲ. ಮಿಕ್ಕವಿಷಯಗಳನ್ನು 104 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 110. ಭಾರತ ವಚನ.

BHĀRATA PROSE.

Substance, Śrītāḷa. Size, $25\frac{1}{2} \times 2\frac{1}{8}$ inches. Pages, 446. Lines, 8 on a page. Character, Kanarese. Condition, slightly injured. Appearance, old. Mode of writing, good and free from mistakes.

Contains the Adhyāyas 1—186 complete and 187th Adhyāya incomplete in the Ānuśāsanikaparva.

A rendering in Kanarese prose describing the story of the Ānuśāsanikaparva of the Sanskrit Mahābhārata: by Kaḷale Nanjarāja. For other particulars regarding the author and his genealogy see under No. 89 ante.

Beginning:

ಕಂದ ॥ ಭಾವಜಗರ್ವಜ (ವಿ)ಭಂಜನ ।
ಪಾವನಕರಿಚರ್ಮಚೇಲ ಭವಭಯಹರಣಾ ॥
ದೇವೋತ್ತಮಾಸುರಾಂತಕ ।
ದೇವಾ ನಂಜುಂಡಲಿಂಗ ದಿವ್ಯಾಪಾಂಗಾ ॥

ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿಋಷಿಗಳಂ ಕುರಿತು ಇಂತೆಂದನು :— ಎಲೆ ಋಷಿಗಳಿರಾ ಮಹನೀಯ ಚರಿತ್ರನಾದ ಜನಮೇಜಯನಂ ನೋಡಿ ವೈಶಂಪಾಯನನಿಂತೆಂದನು. ಕೇಳು ಜನಮೇಜಯನೆ ! ಆ ಪ್ರಕಾರವಾಗಿ ಗಂಗಾನಂದನನು ಶರತಲ್ಪದಲ್ಲಿ ಪವಡಿಸಿಕೊಂಡಿದ್ದು ಯೋಗನಿಷ್ಠೆಯಿಂದ ಇರುವ ಸಮಯದಲ್ಲಿ ಯುಧಿಷ್ಠಿರನು ಆತನಿಗೆ ವಿನಯಪೂರ್ವಕವಾಗಿ ಅಭಿವಾದನವಂ ಮಾಡಿ, ಎಲೈ ಕುರುಪಿತಾಮಹನೆ ! ನನ್ನ ಮನಸ್ಸಿನಲ್ಲಿರುವ ಖೇದವನ್ನು ಪರಿಹರಿಸುವುದಕ್ಕೆ ನೀನು ರಾಜಧರ್ಮಗಳನ್ನೂ ಸೂಕ್ಷ್ಮಗಳಾದ ಮೋಕ್ಷಧರ್ಮಗಳನ್ನೂ ಎಷ್ಟು ಹೇಳಿದರೂ ನನ್ನ ಹೃದಯವು ಲೇಶಮಾತ್ರವಾದರೂ ಪ್ರಜ್ಞೆನ್ನೈದಲಿಲ್ಲಾ. ನಾನಾವಿಧಗಳಾದ ಬಾಣಗಳಿಂದ ಗಾಯಪಡೆದು ನಿರಂತರವೂ ವರ್ಷಸುತ್ತಲಿರುವ ನೀಲಮೇಘದ

ಹಾಗೂ ಗೈರಿಕಾದಿಧಾತುಗಳಿಂದಲೂ ತೊರೆಗಳಿಂದಲೂ ಒಪ್ಪುತಲಿರುವ ಪರ್ವತದೇಶಾದಿಯಲ್ಲಿಯೂ ನಿಬಿಡವಾದ ರಕ್ತಧಾರೆಗಳೊಡನೆ ಗೂಡಿದ ನಿನ್ನ ಶರೀರದಲ್ಲಿ ಈ ತೀವ್ರವೇದನೆಯು ಬಂದದ್ದಿಲ್ಲವೂ ನಿನ್ನ ನಿಮಿತ್ತವಲ್ಲವೇ ? ಕಾಮಕ್ರೋಧಪರವಶರಾಗಿ ಇಂಥಾ ನಿಂದ್ಯ ಕೃತ್ಯಗಳಂ ಮಾಡಿದ ದುರ್ಯೋಧನಾದಿಧೃತರಾಷ್ಟ್ರಪುತ್ರರೂ, ಪುತ್ರಬಾಂಧವಸಮನ್ವಿತರಾದ ನಾವೂ, ಮಿಕ್ಕಾದ ಅರಸುಗಳೂ, ಇನ್ನು ಮೇಲೆ ಯಾವ ಗತಿಯನ್ನು ಐದತಕ್ಕಂಥಾವರು. ಈ ತೆರೆದಿಂದ ಸಮಸ್ತಬಂಧುವರ್ಗಕ್ಕೂ ಮಿತ್ರಜನಕ್ಕೂ ಸಂಹಾರವೂ ಕ್ಲೇಶವೂ ಪ್ರಾಪ್ತವಾಗುವ ಹಾಗೆ ಮಾಡಿದ ನಮ್ಮ ಅನುಚಿತವ್ಯಾಪಾರಗಳನ್ನೂ ಯಾವಾಗಲೂ ಚಿಂತಿಸಿ ಕ್ಲೇಶಪಡುತಲಿರುವ ನನ್ನ ಮನಸ್ಸಿನಲ್ಲಿ ಯಾವ ಪ್ರಕಾರದಿಂದ ಉಪಶಾಂತಿ ಯುಂಟಾಗುವುದು ?— ಎನಲು, ಭೀಷ್ಮನಿಂತೆಂದನು :—

ಎಲೈ ಧರ್ಮನಂದನನೆ ! ಯುದ್ಧದಲ್ಲಿ ಸಮಸ್ತರಾಜಲೋಕವನ್ನೂ ಸಂಹರಿಸುವುದಕ್ಕೀಶ್ವರ ನಾನೇ ಮೂಲಕಾರಣವೆಂದು ಸ್ವಾತಂತ್ರ್ಯವನ್ನು ವಹಿಸಿ ಹೀಗೆ ಏಕೆ ಕ್ಲೇಶಪಡುತ್ತಲಿದ್ದೀ ? ಸಮಸ್ತ ಪ್ರಾಣಿಗಳೂ ಸುಖದುಃಖಗಳನ್ನೈದುವುದಕ್ಕೆ ಅವರವರ ದುಷ್ಕೃತಂಗಳೇ ಕಾರಣಗಳೆಂದು ತಿಳಿಯುಕೊ. ಈ ಅರ್ಥದಲ್ಲಿ ಒಂದು ಇತಿಹಾಸವನ್ನು ಹೇಳುತ್ತಲಿದ್ದೇನೆ ಕೇಳು.

ಪೂರ್ವಕಾಲದಲ್ಲಿ ಶಾಂತಿಯೂ ದಾಂತಿಯೂ ವುಳ್ಳ ಗೌತಮಿಯೆಂಬ ಒಬ್ಬ ಬ್ರಾಹ್ಮಣಸ್ತ್ರೀಯ ಕುಮಾರನು ಸರ್ಪದಿಂದ ಕಚ್ಚಲ್ಪಟ್ಟು ಕಾಲಧರ್ಮವನ್ನೈದಲು, ಅರ್ಜುನನೆಂಬ ಹೆಸರುಳ್ಳ ಒಬ್ಬ ಬೇಡನು ಆ ಸರ್ಪವನ್ನು ಉರುಲಾಕಿ ಹಿಡಿದು, ಆ ಬ್ರಾಹ್ಮಣಸ್ತ್ರೀಯ ಸಮಕ್ಷಮಕ್ಕೆ ತಂದು ಇರಿಸಿ ಈ ಬಾಲಕನನ್ನು ಕಚ್ಚಿದ ದುಷ್ಟಸರ್ಪವನ್ನು ಯಜ್ಞೇಶ್ವರನಲ್ಲಿ ಕೆಡಹಲೋ ? ಈ ಆಯುಧದಿಂದ ತುಂಡುತುಂಡಾಗಿ ಖಂಡಿಸಲೋ ? ಯಾವ ವಿಧದಿಂದ ಸಂಹರಿಸಲಿ ? ಈ ಬಾಲಕನನ್ನು ಸಂಹರಿಸಿದ ಈ ದುಷ್ಟಸರ್ಪವನ್ನು ಶೀಘ್ರವಾಗಿ ಸಂಹರಿಸ ಬೇಕು—ಎನಲು, ಗೌತಮಿಯು ಕಿರಾತನಂ ನೋಡಿ ಉದಕದಲ್ಲಿ ತೇಲಾಡುವ ತೆಪ್ಪೆಯ ವಿಧದಿಂದ ಮಹಾತ್ಮರು ಶೋಕಸಮುದ್ರದಲ್ಲಿ ಮುಳುಗದೆ ದಡವನ್ನು ಸೇರುವರು. ಅಧರ್ಮವನ್ನು ಮಾಡುವಂಥಾವರು ಕಬ್ಬಿಣದಿಂದ ನಿರ್ಮಿಸಲ್ಪಟ್ಟ ಶಸ್ತ್ರಗಳು ಉದಕದಲ್ಲಿ ಮುಳುಗುವ ಹಾಗೆ ನರಕದಲ್ಲಿ ಮುಳುಗುವರು—ಎಂದು ವಿದ್ವಾಂಸರು ಹೇಳುವರು. ಲೋಕದಲ್ಲಿ ಕರ್ಮವಶದಿಂದ ಬರತಕ್ಕಂಥಾ ಅರ್ಥವು ಪ್ರಾಪ್ತವಾದರೆ ಅನುಭವಿಸಬೇಕೇ ಹೊರತಾಗಿ ಮತ್ತೂ ಪಾಪಕ್ಕೆ ಆಲಯವಾಗುವನೂ ಉಂಟೇ ? ಈ ಸರ್ಪವನ್ನು ಸಂಹರಿಸಿದರೆ ಈ ಬಾಲಕನು ಬದುಕಲಾಪನೇ ?

* * * *

ಈ ಬಾಲಕನ ವಿನಾಶಕ್ಕೆ ಅವನ ಕರ್ಮವೂ ನನ್ನ ದುಷ್ಕೃತವೂ ಕಾರಣಂಗಳು. ಕಾಲಮೃತ್ಯು ಸರ್ಪಂಗಳು ಕಾರಣಗಳಲ್ಲ. ಈ ಸರ್ಪವಂ ಬಿಟ್ಟು ಕಾಲಮೃತ್ಯುಗಳಂ ಕಳುಹಿಸು ಎನಲು, ಅವನು ಅದೇ ಪ್ರಕಾರವೇ ಮಾಡಿ ರೋಷರಹಿತನಾದನು. ಈ ಗೌತಮಿಯೂ ಶೋಕವನ್ನು ಬಿಟ್ಟಿದ್ದಳು. ಆ ಪ್ರಕಾರವಾಗಿ ಸಕಲವಾದ ಅರಸುಗಳೂ ತಮ್ಮ ತಮ್ಮ ದುಷ್ಕೃತದಿಂದಲೇ ಕರ್ಮವನ್ನೈದಿದರೇ ಹೊರತಾಗಿ ನೀನೂ ದುರ್ಯೋಧನನೂ ಮಾಡಿದ ಕಾರ್ಯವಲ್ಲಾ. ಈ ಅರ್ಥವಂ ತಿಳಿದು ಇನ್ನು ಮೇಲೆಯಾದರೂ ಪರಿತಾಪವನ್ನೈದದೆ ಉಪಶಾಂತಿಯನ್ನೈದು ಎನಲು, ಯುಧಿಷ್ಠಿರನು ಆ ಇತಿಹಾಸವಂ ಕೇಳಿ ಸಂತಾಪವಂ ಬಿಟ್ಟು ಸಂತುಷ್ಟ ಹೃದಯನಾಗಿ ಇದ್ದನು—ಎಂದು ವೈಶಂಪಾಯನನು ಜನಮೇಜಯ ರಾಯನಿಗೆ ವಿಸ್ತರಿಸಿದನೆಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕಭಾಷಾವಿರಚಿತವಾಗಿ ಶ್ರೀಮಹೀಶೂರಸೇನಾಧಿಪ ದೊಡ್ಡರಾಜ ಪೌತ್ರ ವೀರರಾಜಪುತ್ರ ದಳವತಿದೇವರಾಜಾನುಜ ಕಳಲೆ ನಂಜರಾಜವಿರಚಿತವಾದ ನಂಜರಾಜವಾಣೀವಿಳಾಸ ವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸಸ್ಕೃತಮಾದ ಲಕ್ಷಗ್ರಂಥಸಂಖ್ಯೆಯುಳ್ಳ ಸಂಹಿತೆಯಲ್ಲಿ ಆನುಶಾಸನಿಕಪರ್ವದಲ್ಲಿ ಭೀಷ್ಮಯುಧಿಷ್ಟಿರ ಸಂವಾದದಲ್ಲಿ ಗೋತ್ರವ್ಯಾಖ್ಯಾನವೆಂಬ ಪ್ರಥಮಾಧ್ಯಾಯದ ಅರ್ಥನಿರೂಪಣಕ್ಕೆ ಮಂಗಳ ಮಹಾ ॥

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು ಇಂತೆಂದನು :—ಕೇಳು ಜನಮೇಜಯನೆ ! ಆ ಬಳಿಕ ಕೌಂತೇಯಾಗ್ರಜನು ಭೀಷ್ಮನಂ ಕುರಿತು ಎಲೈ ಪಿತಾಮಹನೆ ! ಸಕಲಶಾಸ್ತ್ರವಿಶಾರದನಾಗಿ ಬುದ್ಧಿಸಂಪನ್ನನಾದ ನಿನ್ನ ದೆಸೆಯಿಂದ ಈ ಇತಿಹಾಸವನ್ನು ಕೇಳಿ ನನ್ನ ಮನಸ್ಸಿಗೆ ಸಂತೋಷವಾಯಿತು. ಇನ್ನು ಮೇಲೆ ಧರ್ಮಾರ್ಥಯುಕ್ತಂಗಳಾದ ನಿನ್ನ ವಾಕ್ಯಂಗಳಂ ಕೇಳಲಿಕ್ಕೆ ಇಚ್ಛೆಯಿಸುತ್ತಲಿದ್ದೇನೆ.

* * * *

ಇವರಿಂದ ನಾನು ಹತವಾದ ಬಳಿಕ ನೀನು ದುಃಖಸಮುದ್ರದಲ್ಲಿ ಮುಳಿಗಿ ಎಷ್ಟು ತಪಿಸುವೆಯೋ ? ಹೇಗಾಗುವೆಯೋ ? ಏನು ಮಾಡುವೆಯೋ ? ಎಲೆ ಮಗುವೆ ! ನಿನ್ನನ್ನು ಬಿಟ್ಟು ಹೋಗುತಲಿದ್ದೇನೆ ಎಂದು ಮನುಷ್ಯನವಚನಗಳಿಂದ ಬಹುಪ್ರಕಾರವಾಗಿ ಪ್ರಲಪಿಸುತ್ತಲಿರುವ ಆ ಹಸುವಿನ ವಾಕ್ಯಗಳಂ ಕೇಳಿ ರಂತಿದೇವನು, ಅಧಿಕವಾಗಿ ಮನಸ್ಸಿನಲ್ಲಿ ಕ್ಲೇಶಪಟ್ಟು ಆ ಕ್ಷಣದಲ್ಲೇ ಸತ್ರಯಾಗವನ್ನು ನಿಲ್ಲಿಸಿದನು. ಆಗ ಬದುಕಿದ್ದ ಹಸುಗಳಿಂದ ಧೇನುಕುಲವು ತಿರುಗಿ ಅಭಿವೃದ್ಧಿಯನ್ನೈದಿತು. ಆ ರಾಯನ ಯಾಗದಲ್ಲಿ ಬ್ರಹ್ಮವಾದಿಗಳಾದ ಬ್ರಾಹ್ಮಣರಿಂದ ಮಂತ್ರಪೂರ್ವಕವಾಗಿ ಸಂಹರಿಸಲ್ಪಟ್ಟ ಹಸುಗಳು ಸರ್ವೋನ್ನತವಾದ ಗೋಲೋಕಕ್ಕೆ ಹೋದುವು. ಆ ಬಳಿಕ ರಾಜರ್ಷಿಶ್ರೇಷ್ಟನಾದ ರಂತಿದೇವನು ಗೋಸತ್ರವನ್ನು ಸಮಾಪ್ತವಂ ಮಾಡಿ ಸಂಪೂರ್ಣಗಳಾದ ದಕ್ಷಿಣೆಗಳಂ ಕೊಟ್ಟು ಮಹೋನ್ನತಕೀರ್ತಿಸಂಪನ್ನನಾಗಿ ದೇವೇಂದ್ರನೊಡನೇ ಸ್ನೇಹವನ್ನು ಮಾಡಿ, ಆ ಬಳಿಕ ಶಾಶ್ವತವಾದ ಸ್ವರ್ಗಲೋಕಕ್ಕೆ ಹೋದನು. ಆ ಬಳಿಕ ಫೇನಪನೆಂಬ ಮಹರ್ಷಿಯು ಗೋಶುಶ್ರೂಷೆಯನ್ನು ಮಾಡಿದವನಾದ್ದರಿಂದ ಗೋಲೋಕದಲ್ಲಿ ಅನೇಕಕಾಲ ದಿವ್ಯಭೋಗಗಳನ್ನನುಭವಿಸುತ್ತ ಸಂತೋಷವನ್ನೈದಿದನು. ರಂತಿದೇವನ ಯಾಗದಲ್ಲಿ ಹತಶೇಷಂಗಳಾದ ಹಸುಗಳು ವನದಲ್ಲಿ ಸಂಚರಿಸುತಲಿದ್ದವು. ಎಲೈ ಧರ್ಮರಾಯನೆ ! ಪರಮ ಪುಣ್ಯವಾದ ಫೇನಪನಚರಿತ್ರವನ್ನೂ ರಂತಿದೇವನ ಚರಿತ್ರವನ್ನೂ ವ್ಯಾಸ ಮುನೀಂದ್ರನ ದೆಸೆಯಿಂದ ನಾನು ಕೇಳಿದ ರೀತಿಯಿಂದ ನಿನಗೆ ತಿಳುಹಿಸಿದೆನು.

* * * *

ನಾನಾವಿಧಗಂಧಸಮೇತಂಗಳಾಗಿರುವ ಪುಷ್ಪಂಗಳು ದೇವಾಸುರ ಮನುಷ್ಯ, ಯಕ್ಷ, ರಾಕ್ಷಸ, ಪಿತೃಗಣಂಗಳಿಗೆ ಧರಿಸುವುದಕ್ಕೆ ಯೋಗ್ಯಂಗಳಾಗಿ ಒಪ್ಪುತಲಿರುವುವು ಅಲ್ಲಿ ಕಂಟಕ ರಹಿತಂಗಳಾದ ವೃಕ್ಷಲತಾ ಸಮೂಹಂಗಳಿಂದ ಹುಟ್ಟಿ ಧವಳವರ್ಣಂಗಳಾಗಿ, ಮನೋಹರ ಪರಿಮಳಯುಕ್ತಂಗಳಾಗಿರುವ ಸಂಪಿಗೆ, ಮಲ್ಲಿಗೆ, ಜಾಜಿ, ವಿರುವಾಜಿ, ಮೊಲ್ಲೆ, ತಾವರೆ, ನೈದಲು, ಶ್ರೀತುಲಸಿ ಮೊದಲಾದ ಪುಷ್ಪವಿಶೇಷಂಗಳು ದೇವಗಂಧರ್ವನಾಗ ಯಕ್ಷರಿಗೆ ಯೋಗ್ಯಂಗಳಾಗಿರುವುವು ರಕ್ತವರ್ಣಂಗಳಾಗಿ ತೀಕ್ಷ್ಣಗಂಧಸಮೇತಂಗಳಾಗಿ ಕಂಟಕ ಸಹಿತಂಗಳಾಗಿರುವ ದಾಸಿವಾಳದ ಹುವ್ವುಗಳು, ಮುತ್ತುಗದ ಹುವ್ವುಗಳು, ಉಮ್ಮತ್ತಿ ಮೊದಲಾದ ಹೂವುಗಳು ಶತ್ರುಮಾರಣಂಗಳಾದ ಆಭಿಚಾರ ಹೋಮಂಗಳಲ್ಲಿಯೂ, ದೈತ್ಯದಾನವ

ಯಕ್ಷ ರಾಕ್ಷಸಾದಿಪೂಜೆಗಳಲ್ಲಿಯೂ ಪ್ರಶಸ್ತಂಗಳಾಗಿರುವುವು. ಹೃದಯಾನಂದಕರಂಗಳಾಗಿ ಪರಿಮಳವುಳ್ಳಂಥಾದ್ದಾಗಿ ರಮಣೀಯವಾದ ವರ್ಣವುಳ್ಳಂಥಾದ್ದಾಗಿರುವ ಪುಷ್ಪಂಗಳು ಮನುಷ್ಯರಿಗೆ ಧಾರಣಯೋಗ್ಯಂಗಳು. ಮತ್ತು ಸ್ಮಶಾನದಲ್ಲಿಯೂ ದೇವಾಲಯದಲ್ಲಿಯೂ ಹುಟ್ಟಿದ ಪುಷ್ಪಂಗಳು ಪುಷ್ಟಿ ಕರ್ಮಗಳಲ್ಲಿಯೂ ವಿವಾಹಾದಿಗಳಲ್ಲಿಯೂ ಸ್ತ್ರೀಸಂಗಮ ಕಾಲದಲ್ಲಿಯೂ ಶ್ರೇಯಸ್ಸನ್ನು ಬಯಸತಕ್ಕ ಜನಂಗಳಿಗೆ ಧಾರಣಯೋಗ್ಯಂಗಳಲ್ಲ. ಮತ್ತೆ ಪರ್ವತ ಶಿಖರಗಳಲ್ಲಿಯೂ ಉದ್ಯಾನವನದಲ್ಲಿಯೂ ಹುಟ್ಟಿದ ಪುಷ್ಪಂಗಳು ದೇವತಾಯೋಗ್ಯಂಗಳಾಗಿರುವುವು. ಪುಷ್ಪಗಳು ಪರಿಮಳದಿಂದ, ದೇವತೆಗಳೂ ದರ್ಶನದಿಂದ ಯಕ್ಷ ರಾಕ್ಷಸರು ಅನುಭವದಿಂದ ಪನ್ನಗರು ಪರಿಮಳಸಂದರ್ಶನೋಪಭೋಗಗಳಿಂದ ಮನುಷ್ಯರು ತೃಪ್ತಿಯನ್ನೈದುವರು. ದೇವತೆಗಳು ಸಂತೋಷಪಟ್ಟರೆ ಸಂಕಲ್ಪಸಿದ್ಧಿಯನ್ನೂ ಸಕಲಭೋಗಗಳನ್ನೂ ಕೊಡುವರು. ಅಜ್ಞಾನ ಮೋಹಿತರಾಗಿ ತಮ್ಮನ್ನು ಅವಮಾನಿಸಿದ ಜನರ ಕುಲವನ್ನು ನಿಶ್ಶೇಷವಾಗಿ ದಹಿಸುವರು. ಅದು ಹಾಗಿರಲಿ ಇನ್ನು ಮೇಲೆ ಧೂಪದಾನಪ್ರಕಾರವನ್ನು ತಿಳುಹಿಸುತ್ತಲಿದ್ದೇನೆ.

End :

ಆತನ ರೂಪವನ್ನು ಪಾನಮಾಡುವನೋ ಪಾದಿಯಲ್ಲಿ ನೋಡುತ ಇಂತೆಂದನು :—ಎಲೈ ಧರ್ಮರಾಯನೆ ! ಈ ಅರ್ಥದಲ್ಲಿ ಪುರಾತ್ರನವಾದ ಒಂದು ಇತಿಹಾಸವುಂಟು. ಅದನ್ನು ವಿಸ್ತರಿಸಲಿಧೇನೆ ಕೇಳು ಎಂದು ನುಡಿದು ತನ್ನ ಸಮೀಪದಲ್ಲಿರುವ ಕೃಷ್ಣನಿಗೆ ನಮಸ್ಕಾರವನ್ನು ಮಾಡಿ, ಧರ್ಮರಾಯನಂ ಕುರಿತು ಇಂತೆಂದನು.

ಎಂದು ವೈಶಂಪಾಯನನು ಜನಮೇಜಯನಿಗೆ ವಿಸ್ತರಿಸಿದನು ಎಂದು ಸೂತ ಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

Colophon :

ಇಂತು ಕರ್ಣಾಟಕ ಭಾಷಾ ವಿರಚಿತವಾಗಿ ಮಹಿಶೂರ ಸೇನಾಧಿಪದೊಡ್ಡರಾಜಪೌತ್ರ ವೀರರಾಜತನೂಜ ದಳಪತಿದೇವರಾಜಾನುಜ ಕಳಲೆ ನಂಜರಾಜವಿರಚಿತ ನಂಜರಾಜವಾಣೀವಿಲಾಸವೆಂಬ ಮಹಾಭಾರತತಾತ್ಪರ್ಯ ಟೀಕಿನಲ್ಲಿ ವ್ಯಾಸ ಕೃತವಾದ ಲಕ್ಷ ಗ್ರಂಥ ಸಂಹಿತೆಯಲ್ಲಿ ಆನುಶಾಸನಿಕ ಪರ್ವದಲ್ಲಿ ನೂರ ಎಂಭತ್ತಾರನೆಯ ಅಧ್ಯಾಯದ ಅರ್ಥನಿರೂಪಣಕ್ಕೆ ಮಂಗಳ ಮಹ ॥

ಅನಂತರದಲ್ಲಿ ವೈಶಂಪಾಯ ಮುನೀಂದ್ರನು ಜನಮೇಜಯರಾಯನಂ ಕುರಿತು ಕೇಳು ಜನಮೇಜಯನೆ ! ಆ ಬಳಿಕೆ ಧರ್ಮರಾಯನು ಭೀಷ್ಮನಂ ಕುರಿತು ಎಲೆ ಪಿತಾಮಹನೆ ! ರಾಜೇಂದ್ರನೇ ! ಶ್ರೀಮಂತನಾದ ನಾರಾಯಣನು ಮೊದಲು ಪುತ್ರಾರ್ಥವಾಗಿ ಹನ್ನೆರಡು ವರ್ಷಗಳು ಮಾಡತಕ್ಕಂಥಾ ವ್ರತವನ್ನು ಮಾಡುವುದಕ್ಕೋಸ್ಕರ ದೀಕ್ಷಿಸಲು, ಆ ದೀಕ್ಷಿತನಾದ ಮಹಾ ಪುರುಷನನ್ನು ಸೇವಿಸುವುದಕ್ಕೋಸ್ಕರ ನಾರದನೂ, ಪರ್ವತನೂ, ವ್ಯಾಸ ಮುನೀಂದ್ರನೂ, ಕಾಶ್ಯಪನೂ, ಹಸ್ತಿಯೂ, [ಕಾಶ್ಯಪನೂ] ದೌಮ್ಯನೂ, ವಾಲ್ಮೀಕಿಯೂ ಮೊದಲಾದ ಸತ್ಯವ್ರತಪರಾಯಣರಾದ ಮಹಾ ಋಷಿಗಳೂ ವೇದವೇದಾಂಗ ಪಾರಂಗತ್ರರಾದ ಶಿಷ್ಯ ಪ್ರಶಿಷ್ಯರೊಂದಿಗೆ ಕೂಡಿ ಬರಲು ಆ ಕೇಶವನು ಆ ರುಷಿಗಳಿಗೆ ಪ್ರತ್ಯುತ್ಥಾನವಂ ಮಾಡಿ ಕ್ಷತ್ರಿಯನು ಮಾಡುವ ರೀತಿ ಅರ್ಘ್ಯ, ಪಾದ್ಯ, ಮಧುಪರ್ಕಾದಿಗಳಿಂದ ಪೂಜೆಯನ್ನು ಮಾಡಿ ಸುಖಾಸನದಲ್ಲಿ ಕುಳ್ಳಿರಿಸಿ, ಪ್ರೇಮಪೂರ್ವಕವಾಗಿ ಕುಶಲಪ್ರಶ್ನೆಯನ್ನು ಮಾಡಿ, ಅವರ ಅಪ್ಪಣೆಯಿಂದ ಸುಖಾಸನದಲ್ಲಿ

ಕುಳಿತುಕೊಂಡಿರಲು, ಆ ಬಳಿಕ ಮಹರ್ಷಿಗಳು ಯೋಗಿಧ್ಯೇಯನಾದ ಕೇಶವನನ್ನು ಪ್ರತ್ಯೇಕವಾಗಿ ನೋಡಿದ್ದರಿಂದ, ಆನಂದಾರ್ಣವಮಗ್ನರಾಗಿ ಆದಿದೇವನನ್ನು ಅನೇಕಪ್ರಕಾರಗಳಿಂದ ಸ್ತುತಿಸಿದರು.

* * * *

ನಿನಗಿಂತಲೂ ಅನ್ಯವಾದ ಪದಾರ್ಥವಿಲ್ಲ. ನಿನ್ನ ಕಟಾಕ್ಷದಿಂದ ಲೋಕ ಚಕ್ರವು ನಿರ್ವಕ್ರವಾಗಿ ಪ್ರವರ್ತಿಸುತಲಿದೆ. ಈ ಆಶ್ಚರ್ಯವನ್ನು ನೀನೇ ತಿಳುಹಿಸಬೇಕು. ನಿನ್ನ ಮುಖಾರವಿಂದದ ದೆಸೆಯಿಂದ ಅಗ್ನಿ ಹುಟ್ಟಿ, ವನಸಮೇತವಾದ ಪರ್ವತವನ್ನು ದಹಿಸಲು ತಿರುಗೂ ನೀನು ಯಥಾ ಪ್ರಕಾರವಾಗಿ ಆ ಪರ್ವತವನ್ನೂ ಮನೋಹರ ರೂಪವಾಗುವ ಹಾಗೆ ಮಾಡಲು, ಅನಿರ್ವಚನೀಯಂಗಳಾದ ಆಶ್ಚರ್ಯಂಗಳನ್ನು ನೋಡಿ . . . .

(ವಿ-ವಿ.)—

ಆನುಶಾಸನಿಕ ಪರ್ವದಲ್ಲಿ ಒಂದರಿಂದ ನೂರ ಎಂಭತ್ತಾರು ಅಧ್ಯಾಯಗಳು ಸಂಪೂರ್ಣವಾಗಿಯೂ ನೂರ ಎಂಭತ್ತೇಳನೆಯ ಅಧ್ಯಾಯವು ಅಸಮಗ್ರವಾಗಿಯೂ ಇದೆ. ಬರೆವಣಿಗೆ ಶ್ರೇಷ್ಠವಾದುದು. ತಪ್ಪುಗಳಿಲ್ಲ. ಶುದ್ಧವಾದ ಪ್ರತಿ. ಕಳಲೆ ನಂಜರಾಜ ಕವಿ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ 8೯ ನಂಬರಿನಲ್ಲಿ ನೋಡಿ ತಿಳಿಯುವುದು.

No. 111. ಭಾರತ ವಚನ-

BHĀRATA PROSE.

Substance, palm-leaf. Size, 17¼ × 1⅜ inches. Pages, 35. Lines, 7 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Mangalaparva complete.

A rendering in Kanarese prose of the Mausalaparva of the Sanskrit Mahābhārata; by Cikkadēvarāja. For other particulars see under No. 104 ante.

Beginning:

ಅನಂತರದಲ್ಲಿ ಕುರುನಂದನನಾದ ಯುಧಿಷ್ಠಿರನು ಮೂವತ್ತಾರನೆಯ ವರ್ಷವು ಪ್ರಾಪ್ತವಾಗುತ ಇರಲಾಗಿ ದುರ್ನಿಮಿತ್ತಗಳನ್ನು ನೋಡಿದನು. ದೊಡ್ಡ ಮಳಲನ್ನು ಆಕರ್ಷಿಸಿಕೊಂಡಂಥ ಕಠಿಣವಾದ ವಾಯುಗಳು ಬೀಸಲು ಶಕುನಪಕ್ಷಿಗಳು ಅಪಸವ್ಯಂಗಳಾಗಿ ಮಂಡಲಾಕಾರಂಗಳಾಗಿ ಚರಿಸಿದುವು. ನದಿಗಳು ಪ್ರಾಙ್ಮುಖವಾಗಿ ಪ್ರವಹಿಸುವ ನದಿಗಳು ಪಶ್ಚಿಮವಾಗಿ ಪ್ರವಹಿಸುವುವು. ದಿಕ್ಕುಗಳು ನೀಹಾರ ಸಂಪರೀತಂಗಳಾದುವು. ಹಗಲೇ ಗಗನದೆಸೆಯಿಂದ ಉಲ್ಕೆಗಳು ಅಂಗಾರವರ್ಷಂಗಳು ಭೂಮಿಯನ್ನೈದಿದುವು. ಕೇಳು ಜನಮೇಜಯ ! ರಜಸ್ಸಿನಿಂದ ಆಚ್ಛಾದಿಸಲ್ಪಟ್ಟ ಮಂಡಲವನುಳ್ಳವನಾಗಿಯೂ ವಿಗತವಾದ ರಶ್ಮಿಗಳುಳ್ಳವನಾಗಿ ಕಬಂಧಗಳಿಂದ ಅಲಂಕೃತನಾದ ಆ ಸೂರ್ಯನು ಉದಯಕಾಲದಲ್ಲಿ ಉದಿಸುವನು. ದಾರುಣ ಭಯಂಕರನಾದ ಮೂರು ವರ್ಣಗಳುಳ್ಳ, ಶ್ಯಾಮವಾಗಿ ಹಾಗೆಯೇ ಭಸ್ಮಾರುಣ ಪ್ರಭೆಯುಳ್ಳವಾಗಿ ಸೂರ್ಯಚಂದ್ರರಿಬ್ಬರಿಗೂ ಪರಿವೇಷಗಳು ಕಾಣಿಸಲ್ಪಟ್ಟವು. ಜಗತ್ಕರ್ತನಾದ ಶ್ರೀಕೃಷ್ಣನು

ಸ್ವರ್ಗವನ್ನು ಐದಲಿಚ್ಚಯಿಸುತಿರಲಾಗಿ ಇವೂ ಮತ್ತೆ ಕೆಲವು ಅನೇಕವಾದ ಅದ್ಭುತಗಳೂ ಕಾಣಲ್ಪಟ್ಟವು, ಯಾವ ಶ್ರೀಕೃಷ್ಣನ ಪ್ರಸಾದದ ದೆಸೆಯಿಂದ ಕೃತ ಯುಗದಲ್ಲಿ ಹೇಗೊ ಹಾಗೆಯೋ ಈ ಧರ್ಮವು ಕಲಿಯುಗದಲ್ಲಿ ಇನ್ನೂ ದೋಷ ರಹಿತವಾದ ಯಶಸ್ಸಿನಿಂದ ಯುಕ್ತವಾದ . . . . . . ತೇಜಸ್ವಿಯಾದ ಕುರುವಂಶದರಸಾದ ಪಾಂಡವನು ಅತಿಶಂಕಿತನಾಗಿ ಅನಂತರ ಕೆಲವು ಕಾಲದ ಮೇಲೆ ವೃಷ್ಣಿ ಚಕ್ರಕ್ಕೆ ಮುಸಲದ ದೆಸೆಯಿಂದ ನಾಶಮಾಡಲ್ಪಟ್ಟೀತೆಂದು ಕೇಳಿದ . . . . ಬಲರಾಮನು ಬಿಟ್ಟುಹೋದನೆಂಬುದನ್ನು ಪಾಂಡವನು ಕೇಳಿ ತಮ್ಮಂದಿರನ್ನು ಕರೆಯಿಸಿಕೊಂಡು ಇನ್ನೇನು ಮಾಡುವ ಎಂದು ಆಲೋಚಿಸಿದನು. ಬ್ರಹ್ಮದಂಡದ ಬಲದ ದೆಸೆಯಿಂದ ಅನ್ಯೋನ್ಯವಾಗಿ ಯುದ್ಧವನ್ನು ಮಾಡಿ ನಾಶವನ್ನೈದಿದುದನ್ನು ಕೇಳಿ ಆ ಪಾಂಡವರು ಬಹುವಾಗಿ ಕ್ಲೇಶಪಟ್ಟರು. ಶಾರ್ಙ್ಗ ಧನ್ವಿಯಾದ ಆ ವಾಸುದೇವನ ನಿಧನವನ್ನು ಸಮುದ್ರವು ಶೋಷಿಸೀತೆಂಬವೊಲು ವೀರರಾದ ಪಾಂಡವರು ನಿಶ್ಚಯಿಸುವರಲ್ಲ. ವೃಷ್ಣಿನಾಶಕ್ಕೆ ನಾಶಹೇತುವಾದಂಥ ಮುಸಲವನ್ನು ಕೇಳಿ ದುಃಖಶೋಕ ಸಮನ್ವಿತರಾಗಿ ವಿಷಣ್ಣರಾಗಿ ಗತ ಸಂಕಲ್ಪವುಳ್ಳವರಾಗಿ ಆ ಪಾಂಡವರು ಇದ್ದರು.

Colophon:

ಇತಿ ಪ್ರಥಮೋಧ್ಯಾಯ :

ಅನಂತರ ಜನಮೇಜಯಮಹಾರಾಜನು ವೈಶಂಪಾಯನನನ್ನು ಹೇ ಭಗವನ್ ! ಎಂದು ಸಂಬೋಧನೆ ಮಾಡಿ, ಅಂಧಕರು ವೃಷ್ಣಿಗಳೊಡನೆ ಮಹಾರಥಿಕರಾದ ಬೋಜರು, ವಾಸುದೇವನು ನೋಡುತ್ತಿರಲಾಗಿ ಹೇಗೆ ಹತರಾದರೆಂದು ಪ್ರಶ್ನೆಮಾಡಲಾಗಿ ವೈಶಂಪಾಯನನು ಹೇಳುತಲಿದ್ದಾನೆ.

End:

ಮೂರು ಲೋಕವನಾದರೂ ಅನ್ಯಾಕರಿಸುವುದಕ್ಕೆ ಸಮರ್ಥನಾದ ಕೃಷ್ಣನಿಗೆ ಮನುಷ್ಯನು ಕೊಟ್ಟ ಶಾಪವನ್ನು ಪರಿಹರಿಸುವುದು ಆತಗೆ ಗಣ್ಯವಲ್ಲ. ಪೂರ್ವದಲ್ಲಿ ಅಷ್ಟಾವಕ್ರನನ್ನು ನೋಡಿ ಆ ಸ್ತ್ರೀಯರು ನಕ್ಕರು. ಅದರಿಂದ ಕುಪಿತನಾದ ಅಷ್ಟಾವಕ್ರನಿಂದ ಶಪಿಸಲ್ಪಟ್ಟರು. ಅದುಕಾರಣ ಬಲಕ್ಷಯವಾಯಿತು. ಚತುರ್ಭುಜನಾದ ವಾಸುದೇವನು ಭೂಭಾರವನ್ನು ಪರಿಹರಿಸುವುದಕ್ಕೋಸ್ಕರ ಭೂಮಿಯಲ್ಲಿ ಮನುಷ್ಯಾವತಾರವಾಗಿ ಅವತರಿಸಿ ನಿನ್ನ ಮೇಲಣ ಪ್ರೀತಿಯಿಂದ ಸಾರಥ್ಯವಂ ಮಾಡಿದನು. ಭೂಭಾರವನ್ನು ಪರಿಹರಿಸಿ ಸರ್ವರನ್ನೂ ಮೋಹಿಸುವ ಹಾಗೆ ಮಾಡಿ ತಾನು ವೈಕುಂಠಕ್ಕೆ ತಿರುಗಿ ಹೋದನು. ಭೀಮಸೇನನ ಸಹಾಯದಿಂದಲೂ ನಕುಲಸಹದೇವರ ಸಹಾಯದಿಂದಲೂ ದೇವತೆಗಳಿಗೆ ಮಹತ್ತಾದ ಸಹಾಯಕರ್ಮವನ್ನೂ ಮಾಡಿದೆ. ನೀವು ಕೃತಕೃತ್ಯರು. ನೀವು ಮಾಡತಕ್ಕ ಪ್ರಯೋಜನವೇನು ಇಲ್ಲ. ಗಮನ ಕಾಲವು ಪ್ರಾಪ್ತವಾಗಿ ಇದೆ ನಿಮಗೆ ರಾಜ್ಯವನ್ನು ಬಿಟ್ಟುಹೋಗುವುದೇ ಶ್ರೇಯಸ್ಸೆಂದು ನಮಗೆ ತೋರುತ್ತದೆ. ಕೇಳು ಭರತ ! ಆಗತಕ್ಕ ಕಾಲದಲ್ಲಿ ಬಲವೂ ಬುದ್ಧಿಯೂ ವಿವೇಕವೂ ಉಂಟಾಗುವುದು. ವಿಪರೀತಕಾಲದಲ್ಲಿ ವಿಪರೀತವಾಗುವುದು. ಇದೆಲ್ಲವೂ ಕಾಲ ಮೂಲಬಲವೆಂದು ಅರ್ಜುನಾ ! ತಿಳಿ, ಬಲವಂತರನ್ನು ದುರ್ಬಲರನ್ನು ಮಾಡುತ್ತದೆ. ದುರ್ಬಲರನ್ನು ಬಲವಂತರನ್ನು ಮಾಡುತ್ತದೆ ಕಾಲವೂ ಕೃತಕೃತ್ಯಗಳಾದ ಅಸ್ತ್ರಗಳೂ ಕೃಷ್ಣನ ಸಂಗಡಲೇ ಹೋದುವು. ಇನ್ನು ನೀವು ಸರ್ವಥಾ ಇಲ್ಲಿ ಇರುವುದು ಉಚಿತವಲ್ಲ. ನೀನು ಹೋಗುವುದೇ ನನಗೆ ಸಮ್ಮತವಾಗಿದೆ ಎಂದು ವ್ಯಾಸರಿಂದ ಹೇಳಲ್ಪಟ್ಟವನಾಗಿ ಅರ್ಜುನನು ಹಸ್ತಿನಾಪುರ

ವನ್ನೈದಿ ಯುಧಿಷ್ಠಿರಂಗೆ ವೃಷ್ಣ್ಯಂಧಕರ ವೃತ್ತಾಂತವೆಲ್ಲವಂ ವಿಸ್ತರಿಸಿ ಹೇಳಿದನೆಂದು ವೈಶಂಪಾಯನನು ಜನಮೇಜಯ ಮಹಾರಾಯನಿಗೆ ಹೇಳಿದನು.

Colophon :

ಇತಿ ಮೌಸಲ ಪರ್ವಣಿ ನವಮೋಧ್ಯಾಯ :

ಇದು ನಿದುಸಕಲ ಸುರಾಸುರಮೌಳಿಮಣಿ ಘೃಣಿಮಂಜರೀ ಪ್ರೂಜರಿತ ? ಮುಕುಂದಪಾದಾರವಿಂದಮಕರಂದಧಾರಾಸಮೇಧಿತಮಧುಕರಾಯಮಾಣ ನಿಜಾಂತರಂಗತರಂಗಕರಸಮುದಂಚಿತನಿಕರ ಕುಸುಮಾವಳೀಸಮರ್ಪಣಸಮಾಕುಲ ಕಾವೇರೀಪ್ರೂರಪರೀತಪಶ್ಚಿಮರಂಗಪುರೀನಿಕೇತನಾಗ್ರನಿವೇಶಿತವಿನತಾನಂದನಾವಲೋಕನಸುಕಲಫಲಾಯಿತ ಸಮಸ್ತಸಾಮಂತನೃಪಸರ್ವಸ್ವಸಂಕ್ರಮಣ ದಕ್ಷಿಣೋತ್ತರಪೂರ್ವಪಶ್ಚಿಮಾಬ್ಧಿವೇಲಾವಲಯಿತಮಹೀತಲ ಶ್ರೋತ್ರಿಯಕುಲದಾರಿದ್ರವಿದ್ರಾವಣೋನ್ನಿದ್ರ ಷೋಡಶಮಹಾದಾನವಿಶ್ರಾಣನಶಾರದ ಶಾರದಾಹೃದಯಾನಂದಕಂದಳನಾನುಷಂಗಿಸಂಗೀತಸಾಹಿತ್ಯಕಲಾಧರ ವಿಮಲಯಾದವಕುಲಕಲಶೋದಧಿಕಲಾಧರ ಶ್ರೀಮದಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪಾಪ್ರತಿಮವೀರನರಪತಿ ಚಿಕ್ಕದೇವರಾಯವಿರಚಿತಮಪ್ಪ ಕರ್ಣಾಟಕಭಾಷಾರಚಿತಮಪ್ಪಮಹಾಭಾರತಕಥಾ ಟಿಪ್ಪಣದೊಳ್ ಮೌಸಲ ಪರ್ವಂ ಸಮಾಪ್ತಂ.

(ವಿ.ವಿ.)—

ಮೌಸಲಪರ್ವ ಸಮಗ್ರವಾಗಿದೆ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳು ಬಹಳ. ಸ್ವಲ್ಪ ಶಿಥಿಲ. ಗ್ರಂಥಪಾತ್ರ ಇಲ್ಲ. ಚಿಕ್ಕದೇವರಾಜನೆಂಬ ಮೈಸೂರಿನ ಅರಸು ಇದನ್ನು ಪರಿವರ್ತಿಸಿದಂತೆ ತಿಳಿಯಬರುತ್ತದೆ. ಭಾಷಾಶೈಲಿಯು ಅಷ್ಟು ತೃಪ್ತಿಕರವಾಗಿಲ್ಲ. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ 104 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 112. ಭಾರತ ವಚನ.

BHĀRATA PROSE.

Substance, palm-leaf. Size, $17\frac{1}{4} \times 1\frac{1}{2}$ inches. Pages, 14. Lines, 7 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Mahāprasthānaparva complete.

A rendering in Kanarese prose of the story of the Mahāprasthānaparva of the Sanskrit Mahābhārata; by Cikkadēvarāja. For other particulars see under No. 104 ante.

Beginning:

ವೃಕೋಧರರ? ಕುಲವು ಮುಸಲದಿಂದ ನಾಶಮಾಡಲ್ಪಟ್ಟಿತು. ಈ ವೃತ್ತಾಂತವನ್ನು ಕೇಳಿ ಕೃಷ್ಣನು, ವೈಕುಂಠವನ್ನೈದಿದನಂತರ ಪಾಂಡವರು ಮುಂದೆ ಯೇನು ಮಾಡಿದರೆಂದು ಜನಮೇಜಯನು ವೈಶಂಪಾಯನನ್ನು ಕೇಳಲಾಗಿ ವೈಶಂಪಾಯನನು ಹೇಳುತ್ತಾನೆ. ಕೇಳು ! ಜನಮೇಜಯಾ ! ಕುರುವಂಶಾಧೀಶ್ವರನಾದ ಧರ್ಮರಾಯನು ವೃಷ್ಣಿಗಳ ಮಹತ್ತಾದ ಕಥನಮಂ ಕೇಳಿ ಪ್ರಸ್ಥಾನದಲ್ಲಿ ಮತಿಯನಿರಿಸಿದವನಾಗಿ ಅರ್ಜುನನನ್ನು ಕುರಿತು ಒಂದು ವಾಕ್ಯವಂ

ನುಡಿದನು. ಕೇಳು ! ಅರ್ಜುನ ! ಸಮಸ್ತವಾದ ಭೂತಂಗಳನ್ನೂ ಕಾಲವುಪಸಂಹರಿಸುತ್ತದೆ. ಅದು ಕಾರಣ ನಾನು ಕರ್ಮನ್ಯಾಸವನ್ನು ಮಾಡುತ್ತೇನೆ. ನೀನು ನೋಡುವುದಕ್ಕೆ ಅರ್ಹನೆಂದು ಈ ಪ್ರಕಾರ ಆ ಕೌಂತೇಯನು ಹೇಳಲಾಗಿ ಕಾಲಕಾಲನಾದ ಅರ್ಜುನನು (ತಥಾ) ಹಾಗೇ ಆಗಲಿಯೆಂದು ಹೇಳುತ್ತಿದ್ದಂಥವನಾಗಿ ಜೇಷ್ಠ ಭ್ರಾತೃವಾದ ಧರ್ಮರಾಯನ ವಾಕ್ಯವನಂಗೀಕರಿಸಿದನು. ಅರ್ಜುನನ ಮಾತ್ರವನ್ನು ಕೇಳದಂಥವನಾಗಿ ಭೀಮನು ನಕುಲಸಹದೇವರಿಬ್ಬರೂ ಅರ್ಜುನನಿಂದ ನುಡಿಯಲ್ಪಟ್ಟ ವಾಕ್ಯವನ್ನು ಅಂಗೀಕರಿಸಿದರು. ತಮ್ಮ ರಾಜ್ಯದಲ್ಲಿ ಅಭಿಮನ್ಯುವಿನ ಕುಮಾರನಾದ ಪರೀಕ್ಷಿನ್ಮಹಾರಾಯನ ಪಟ್ಟಾಭಿಷೇಕವನ್ನು ಮಾಡಿದನು ? ಸಮಸ್ತವಾದ ರಾಜ್ಯಭಾರವನೆಲ್ಲವನ್ನೂ ವೈಶ್ಯಪುತ್ರನಾದ ಯುಯುತ್ಸುವಿನಲ್ಲಿರಿಸಿ ಅನಂತರ ಯುಧಿಷ್ಠಿರನು ದುಃಖಾರ್ತಳಾದ ಸುಭದ್ರಾದೇವಿಯನ್ನು ಕುರಿತು ಒಂದು ಮಾತನ್ನು ಹೇಳದನು. ನಿನ್ನ ಮೊಮ್ಮಗನು ಕುರುವಂಶಕ್ಕೆ ಅರಸಾದನು. ಯಾದವರಲ್ಲಿ ಪರಿಶೇಷಿಸ್ತ ? ವಜ್ರನು. ಇಂದ್ರಹಸ್ತದಲ್ಲಿ ಪಟ್ಟಾಭಿಷೇಕ ಮಾಡಲ್ಪಟ್ಟಿತು. ವಜ್ರನೆಂಬರಸನು ನಿನ್ನಿಂದ ರಕ್ಷಿಸಲು ತಕ್ಕುದು ? (ವನು).

* * * *

ನಾರಾಯಣನ ಸಹಾಯದಿಂದ ಅರ್ಜುನನ ಪ್ರತಾಪದಿಂದಲೂ, ನನ್ನಿಂದ ಪಾಂಡವವನವು ದಹಿಸಲ್ಪಟ್ಟಿತು. ಫಲ್ಗುಣನೆಂಬ ಈ ತಮ್ಮನು ಶ್ರೇಷ್ಠವಾದ ಗಾಂಡೀವವನ್ನು ಬಿಟ್ಟು ವನವನ್ನೈದಲಿ. ಗಾಂಡೀವದಿಂದ ಪ್ರಯೋಜನವಿಲ್ಲ. ಪೂರ್ವದಲ್ಲಿ ಶ್ರೀಕೃಷ್ಣನ ಹಸ್ತದಲ್ಲಿ ಚಕ್ರವು ಇದ್ದುದಾಯಿತು. ಅದು ಗತವಾಯಿತು. ಆ ಚಕ್ರವು ಕೃಷ್ಣನ ಹಸ್ತಕ್ಕೆ ಕಾಲಾಂತರದಲ್ಲಿ ಎಯ್ದಲುತಕ್ಕುದು. ಪೂರ್ವದಲ್ಲಿ ಪಾರ್ಥಂಗೋಸ್ಕರ ವರುಣನ ದೆಸೆಯಿಂದ ತಂದು ಕೊಡಲ್ಪಟ್ಟಿತು. ಕಾರ್ಮುಕ ಶ್ರೇಷ್ಠವಾದ ಗಾಂಡೀವವನ್ನು ವರುಣಂಗೋಸ್ಕರ ಕೊಡಲ್ಪಡಲಿಯೆಂದು ಹೇಳಿದನು. ಅನಂತರ ಆ ಸಮಸ್ತವಾದ ಅಣ್ಣತಮ್ಮಂದಿರು ಆ ಅರ್ಜುನನನ್ನು ಪ್ರೇರಿಸಿದರು. ಗಾಂಡೀವ ಧನುವನ್ನು ಅಕ್ಷಯಸಾಯಕಂಗಳುಳ್ಳ ಬತ್ತಳಿಕೆಯನ್ನೂ ಅರ್ಜುನನು ಸಮುದ್ರಜಲದಲ್ಲಿ ಹಾಕಿದನು. ಅನಂತರ ಅಗ್ನಿಹೋತ್ರನು ಅಂತರ್ಧಾನವನ್ನೈದಿದನು. ಕೇಳು ಜನಮೇಜಯ ! ಅನಂತರದಲ್ಲಿ ಪಾಂಡವರು ದಕ್ಷಿಣಾಭಿಮುಖವಾಗಿ ನಡೆದರು. ಸಮುದ್ರತೀರದಲ್ಲಿಯೇ ಹೋಗಿ ಕೆಲವು ದೂರ ಅನಂತರ ಪಶ್ಚಿಮಾಭಿಮುಖವಾಗಿ ಸಮುದ್ರಜಲದಲ್ಲಿ ಪಶ್ಚಿಮಾಭಿಮುಖವಾಗಿ ಮುಳುಗಿರುವ ದ್ವಾರಕೆಯನ್ನು ನೋಡಿ ಹಾಗೆ ಭೂಪ್ರದಕ್ಷಿಣವಾಗಿ ಯೋಗಯುಕ್ತರಾದ ಪಾಂಡವರು ಉತ್ತರಾಭಿ ಮುಖಮಾಗಿ ಹೋದರೆಂದು ವೈಶಂಪಾಯನರು ಜನಮೇಜಯನಿಗೆ ಹೇಳಿದರು.

Colophon :

ಇತಿ ಮಹಾಭಾರತೇ ಮಹಾಪ್ರಸ್ಥಾನಿಕೇ ಪರ್ವಣಿ ಪ್ರಥಮೋಧ್ಯಾಯಃ.

ಮತ್ತಂ, ವೈಶಂಪಾಯನರು ಜನಮೇಜಯಂಗೆ ಹೇಳುವ ಪರಿಯದೆಂತೆನೆ,—ಕೇಳು ಜನಮೇಜಯ ! ಅನಂತರ ಯೋಗಯುಕ್ತರಾದ ಪಾಂಡವರು ಉದಙ್ಮುಖವಾಗಿ ಹೋಗುತ್ತ ಮಾರ್ಗದಲ್ಲಿ ಹಿಮವತ್ಪರ್ವತವನ್ನು ಕಂಡರು. ಆಹಿಮವಂತನನ್ನು ದಾಟಿ ಅನಂತರವಾಲುಕಾರ್ಣವವೆಂಬ ದೇಶವಿಶೇಷವನ್ನು ನೋಡಿದರು. ಹಾಗೆ ಪರ್ವತ ಶ್ರೇಷ್ಠಮಾದ ಮೇರುಪರ್ವತವನ್ನು ಕಂಡರು.

End :

ಸ್ವಾಮಿ ! ನನ್ನತಮ್ಮಂದಿರನ್ನೂ ನನ್ನ ಸಂಬಂಧವಾದ ಅರಸುಗಳನ್ನೂ ಇಲ್ಲಿ ಒಬ್ಬರನ್ನೂ ? ನೋಡಲಿಲ್ಲ ಶುಭವಾಗಲಿ ಅಶುಭಕರವಾದ ಪಾಪವಾಗಲಿ ಈಗ ನನ್ನ ಸೋದರರು ಎಲ್ಲಿದ್ದಾರೋ ಅಲ್ಲೀ ನಾನಿದ್ದೇನಲ್ಲದೆ ನಾನು ಮತ್ತೊಂದು ಲೋಕದಲ್ಲಿರುವವನಲ್ಲವೆಂದು ಹೇಳಿದ ಧರ್ಮರಾಯನ ಮಾತನ್ನು ಕೇಳಿ ದೇವರಾಜನು ಧರ್ಮರಾಯನನ್ನು ಕುರಿತು ಒಂದು ಮಾತು ಹೇಳುತ್ತಲಿದಾನೆ. ರಾಜೇಂದ್ರಾ ! ಕೇಳು !! ಸತ್ಕರ್ಮಗಳನ್ನು ಆಚರಿಸಿದಂತಹ ಸತ್ಪುರುಷನು ಸ್ವರ್ಗವನ್ನೈದಿದವನು. ಅವನು ಮಾನುಷ ಚಾರಿತ್ರಂಗಳನ್ನು ಬಿಟ್ಟು ದೇವತ್ವವನ್ನೈದಿ ಸುಖದಲ್ಲಿರುವನು. ನೀನಿನ್ನು ಮಾನುಷವಾಸನೆಯನ್ನು ಬಿಡು. ಸುಖದಲ್ಲಿರು, ನಿಮ್ಮವರೊಬ್ಬರೂ ಇಲ್ಲಿಲ್ಲ. ಬೇಕಾದರೆ ಇದೆಕೊ ! ರಾಜ ಋಷಿಗಳಿದ್ದಾರೆ. ಅವರನ್ನು ನೋಡು ಎಂದು ಹೇಳಲಾಗಿ ಮತ್ತೆ ಧರ್ಮರಾಯನು ಹೇಳುತ್ತಾನೆ. ನನ್ನ ಸೋದರರೆಲ್ಲಿದ್ದಾರೋ ದ್ರೌಪದಿಯೆಲ್ಲಿದ್ದಾಳೋ ಅಲ್ಲಿಗೇ ನಾನು ಹೋದೇನು. ನಾನಿಲ್ಲಿರಲೊಲ್ಲೆನೆಂದು ಧರ್ಮರಾಯನು ಹೇಳಿದನೆಂದು ವೈಶಂಪಾಯನರು ಜನಮೇಜಯರಾಯನೊಡನೆ ಹೇಳಿದರು.

Colophon :

ಇತಿ ಮಹಾಪ್ರಸ್ಥಾನಿಕೇ ಪರ್ವಣಿ ತೃತೀಯೋಧ್ಯಾಯಃ

"ಗದ್ಯ"

ಇದು ನಿದು ಸಕಲಸುರಾಸುರಮೌಳಿಮಣಿಘೃಣಿಮಂಜರೀಪಿಂಜರಿತಮುಕುಂದಪಾದಾರವಿಂದ ಮಕರಂದಧಾರಾಸಮೇಧಿತಮಧುಕರಾಯಮಾನ ನಿಜಾಂತರಂಗ ಕರಸಮುದಂಚಿತ ಶೀ(ಕರ) ಕುಸುಮಾವಳೀಸಮುತ್ಕೀರ್ಣಸಮಾಕುಲ ಕಾವೇರೀ ಪೂರಪರೀತದಕ್ಷಿಣರಂಗ ಪುರೀನಿಕೇತನ ಕೇತನಾಗ್ರನಿವೇಶಿತವಿನತಾನಂದನಾವಲೋಕನನುಕೂಲಪಲಾಯಿತಸಮಸ್ತ ಸಾಮಂತನೃಪಸರ್ವಸ್ವ ಸಂಕ್ರಮಣ ದಕ್ಷಿಣೋತ್ತರಪೂರ್ವಪಶ್ಚಿಮಾಬ್ಧಿವೇಲಾವಲಯಿತ ಮಹೀತಲಮಹಿತಶ್ರೋತ್ರಿಯ ಕುಲದಾರಿದ್ರ್ಯವಿದ್ರಾವಣೋನ್ನಿದ್ರ ಷೋಡಶಮಹಾದಾನ ವಿಶ್ರಾಣನಶಾರದ ಶಾರದಾಹೃದಯಾನಂದಕಂದಳನಾನುಷಂಗಿಸಂಗೀತಸಾಹಿತ್ಯಕಲಾಧರ ವಿಮಲಯಾದವಕುಲಕಲಶೋದಧಿಕಲಾಧರ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರನರಪತಿ ಚಿಕ್ಕದೇವರಾಯ ವಿರಚಿತಮಪ್ಪ ಕರ್ಣಾಟಕಭಾಷಾವಿರಚಿತಮಪ್ಪ ಮಹಾಭಾರತಕಥಾಟಿಪ್ಪಣದೊಳ್ ಮಹಾಪ್ರಸ್ಥಾನಪರ್ವಂ ಸಮಾಪ್ತಂ.

(ವಿ.ವಿ.)—

ಮಹಾಪ್ರಸ್ಥಾನಪರ್ವ ಸಮಾಪ್ತ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳುಂಟು. ಸ್ವಲ್ಪ ಶಿಥಿಲ. ಗ್ರಂಥ ಪೂತವಿಲ್ಲ. ಕವಿ, ಚಿಕ್ಕ ದೇವರಾಜ. ಉಳಿದ ವಿಷಯಗಳನ್ನು ೧೦೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 113. ಭಾರತ ವಚನ.
BHĀRATA PROSE.

Substance, palm-leaf. Size, 17¼ × 1⅜ inches. Pages, 14. Lines, 8 on a page. Character, Kanarese. Condition, slightly injured. Appearance, old. Mode of writing, good but not free from mistakes.

Contains the Svargārōhaṇaparva complete.

A rendering in Kanarese prose describing the story of the Svargārōhaṇaparva of the Sanskrit Mahābhārata; by Cikkadēvarāja. For other particulars see under No. 104 ante.

Beginning:

ನಮ್ಮ ಪೂರ್ವ ಪಿತಾಮಹರಾದ ಪಾಂಡವರು ಧಾರ್ತರಾಷ್ಟ್ರರು ಯಾವ ಪ್ರಸ್ಥಾನಂಗಳ ನೆಯ್ದಿದರು ? ಅದನ್ನು ಕೇಳಬೇಕೆಂದು ಇಚ್ಛೈಯಿಸಿದ್ದೇನೆ. ನೀನು ವೇದವ್ಯಾಸರ ಅನುಗ್ರಹ ದಿಂದ ಸರ್ವವನ್ನೂ ಬಲ್ಲೆಯಲ್ಲಾ ! ಅದು ಕಾರಣ ಕೇಳುತ್ತೇನೆ— ಹೇಳು—ಎಂದು ಜನಮೇಜಯರಾಯನು ವೈಶಂಪಾಯನನ್ನು ಕೇಳಲು ವೈಶಂಪಾಯನನು ಹೇಳುತ್ತಿದ್ದಾನೆ :—

ಕೇಳು ಜನಮೇಜಯಾ ! ನಿಮ್ಮ ಪೂರ್ವಪಿತಾಮಹರಾದ ಪಾಂಡವರು ತ್ರಿವಿಷ್ಟಪವನ್ನೈದಿ ಅವರು ಮಾಡಿದ ಕೃತ್ಯವನ್ನು ಹೇಳೇನು ಕೇಳು. ಯುಧಿಷ್ಠಿರನು, ಪ್ರಕಾಶಮಾನವಾದಂಥ, ವೀರನಾದಂಥ ವೀರಲಕ್ಷ್ಮೀಸಮೇತನಾಗಿ ದೇವತೆಗಳೊಡನೆ ಸಾಧ್ಯರು ಸಹ ಪುಣ್ಯಕರ್ಮಗಳಿಂದ ಸಮೇತನಾಗಿ ಸಿಂಹಾಸನದಮೇಲೆ ಕುಳಿತು ಇರುವಂಥಾ ದುರ್ಯೋಧನನನ್ನು ನೋಡಿದನು. ಅನಂತರ ಯುಧಿಷ್ಟಿರನು ದರ್ಯೋಧನನನ್ನು ನೋಡಿ ಸಹಿಸಲಾರದೆ ಅವನ ಸಂಪತ್ತು ನೋಡಿ ಅವನೊಡನೆ ಸಹವಾಸವಂ ಮಾಡಬಾರದೆಂದು ನಿವೃತ್ತನಾದನು. ಆಗ ಧರ್ಮರಾಯನು ಅಲ್ಲಿ ರುವವರನ್ನು ಕುರಿತು ಲುಬ್ಧನಾದಂಥ, ಕಿಂಚಿದ್ಜ್ಞನಾದ ದುರ್ಯೋಧನನೊಡನೆ ನಾನು ಸಹ ವಾಸವಂ ಮಾಡುವವನಲ್ಲ—ಎಂದು ಹೇಳುತ್ತ ಮೊದಲು ಭೂಲೋಕದಲ್ಲಿ ಸಮಸ್ತನಾದ ಸ್ನೇಹಿತರನ್ನೂ ಬಂಧುಗಳನ್ನೂ ನಮ್ಮನ್ನೂ ಮಹಾಘೋರವಾದ ಆಹವದಲ್ಲಿ ಕೊಂದನು. ಸಭಾಮಧ್ಯದಲ್ಲಿ ಸುಶೀಲೆಯಾದ ದ್ರೌಪದಿಯನ್ನು ಅವಮಾನ ಮಾಡಿದನು. ದೇವತೆಗಳಿರಾ ನಿಮಗೆ ಸ್ವಸ್ತಿಯಾಗಲಿ ನಮಸ್ಕರಿಸಿ ಹೇಳುತ್ತೇನೆ. ಸರ್ಪಾತ್ಮನಾದ, ದುರಾತ್ಮಕನಾದ ದುರ್ಯೋಧನನನ್ನು ನಾನು ನೋಡಲಾರೆನು.

* * * *

ಸತ್ಯಸಂಗತನಾದ, ಕುಂತೀಸುತನಾದ, ಮಹಾತ್ಮನಾದ ಕರ್ಣನನ್ನೂ ಧೃಷ್ಟದ್ಯುಮ್ನ ನನ್ನೂ ಸಾತ್ಯಕಿಯನ್ನೂ, ಧೃಷ್ಟದ್ಯುಮ್ನನ ಕುಮಾರರನ್ನೂ ಮತ್ತೆ ಕ್ಷತ್ರ ಧರ್ಮದಿಂದ ವಧ್ಯ ರಾದಂಥ ನರಾಧಿಪರನ್ನೂ ನೋಡಬೇಕು, ನಾರದಾ ! ಅವರೆಲ್ಲಿ ? ನಾನು ಕಾಣೆನು. ವಿರಾಟ ನೂ, ದ್ರುಪದನೂ, ಧೃಷ್ಟಕೇತು ಮೊದಲಾದವರನ್ನೂ ಶಿಖಂಡಿಯನ್ನೂ ದ್ರೌಪದೇಯರನೂ ದುರ್ಧರ್ಷನಾದ ಅಭಿಮನ್ಯುವನ್ನೂ ನೋಡಬೇಕು. ನಾರದಾ ! ಎಂದು ಧರ್ಮರಾಯನು ಪೇಳಿದ ಎಂದು ವೈಶಂಪಾಯನರು ಜನಮೇಜಯಮಹಾರಾಯಂಗೆ ಹೇಳಿದರು.

Colophon:

ಇತಿ ಸ್ವರ್ಗಾರೋಹಣಿಕೇ ಪರ್ವಣಿ ಪ್ರಥಮೋಧ್ಯಾಯಃ

ಮತ್ತೆಯೂ ಯುಧಿಷ್ಠಿರನು, ಎಲೆ ದೇವತೆಗಳಿರಾ ! ಎಂದು ಸಂಬೋಧನೆ ಮಾಡಿ ಹೇಳು ತ್ತಿದ್ದಾನೆ.—ಇಲ್ಲಿ ಅಮಿತಪರಾಕ್ರಮಶಾಲಿಯಾದ ಕರ್ಣನನ್ನು ಕಾಣೆನು. ಮಹಾತ್ಮರಾ ದಂಥ, ರಣೋನ್ಮತ್ತರಾದ ಭೀಮಾರ್ಜುನರನ್ನೂ ಕಾಣೆನು. ಮಹಾರಥಿಕರಾದ [ಅರಸುಗಳು] ರಣವಹ್ನಿಯಲ್ಲಿ ಶರೀರಗಳನ್ನು ಹೋಮವನ್ನು ಮಾಡಿದಂಥ ಅರಸುಗಳನ್ನೂ ಬಂಧುಗಳನ್ನೂ ಭ್ರಾತೃಗಳನ್ನೂ ಬಿಟ್ಟು ನಾನು ಇಲ್ಲಿ ಇರಲೊಲ್ಲೆನು.

* * * *

ಸಮಸ್ತನಾದ ಅರಸುಗಳಿಗೂ ನರಕವು ಅವಶ್ಯಕವಾಗಿ ನೋಡತಕ್ಕದು. ಅದು ಕಾರಣ ನಿನ್ನಿಂದ ಮುಹೂರ್ತಮಾತ್ರನರಕದುಃಖವನನುಭವಿಸಲ್ಪಟ್ಟಿತು. ಸವ್ಯಸಾಚಿ ಯುಭಿಮನ್ಯು ಸುಕುಮಾರರಾದ ನಕುಲಸಹದೇವರಿಬ್ಬರಾಗಲಿ ಸತ್ಯಸಂಧನಾದ ಶೂರನಾದ ಕರ್ಣನಾಗಲಿ ನರಕದಲ್ಲಿರುವಂತಹವರಲ್ಲ. ರಾಜಪುತ್ರಿಯಾದ ಪಾಂಚಾಲಿಯು ನರಕಾರ್ಹಳಲ್ಲ. ಯುಧಿಷ್ಠಿರಾ ! ಬಾ ! ಬಾ ! ಇವರೆಲ್ಲರನ್ನೂ ನೋಡು ಸ್ವರ್ಗದಲ್ಲಿದ್ದಾರೆಂದು ಯಮನಿಂದ ಹೇಳಲ್ಪಟ್ಟವನಾದನು. ರಾಜರ್ಷಿಗಳಾದ ನಿಮ್ಮ ಪೂರ್ವಪಿತಾಮಹರೆಲ್ಲ ಧರ್ಮದಿಂದಲೇ ಪುಣ್ಯಲೋಕವನ್ನೈದಿದರು. ಅವರಿಂದಲೂ ದೇವಗಂಗೆಯಲ್ಲಿ ಸ್ನಾನ ಮಾಡಲ್ಪಟ್ಟಿತು. ಅದು ಕಾರಣ ಅವರು ದೇವತಾದೇಹಿಗಳಾಗಿದ್ದಾರೆ. ಅದು ಕಾರಣ ನೀನು ವಿರಜಾನದಿಯಲ್ಲಿ ಸ್ನಾನ ಮಾಡಿ ಮಾನುಷತನುವನ್ನು ಬಿಡೆಂದು ಹೇಳಿದನು. ಅನಂತರ ಧರ್ಮರಾಯನು ಸ್ನಾನವಂ ಮಾಡಿ ಮಾನುಷದೇಹವಂಬಿಟ್ಟು ದೇವದೇಹಿಯಾಗಿ ಧರ್ಮದೊಡನೆ ದೇವತೆಗಳಿಂದಲೂ ಋಷಿಗಳಿಂದಲೂ, ಸ್ತೂಯಮಾನನಾಗಿ ಸ್ವರ್ಗಕ್ಕೆ ಹೋದನು ಎಂದು ವೈಶಂಪಾಯನನು ಜನಮೇಜಯರಾಯಂಗೆ ಹೇಳಿದನು.

End :

ಈ ಜಯಾಖ್ಯವೆಂಬ ಇತಿಹಾಸವನ್ನು ಅರಸು ಮಕ್ಕಳು ಅವಶ್ಯವ ಕೇಳತಕ್ಕದು. ಅವರಿಗೆ ಜಯವಾಗುವುದು. ಕೇಳಿದವರಿಗೆ ಕೀರ್ತಿಯೂ, ಲಕ್ಷ್ಮಿಯೂ, ವಿದ್ಯೆಯೂ ಅವಶ್ಯವುಂಟಾಗಿ ಸಂತೋಷದಲ್ಲಿ ಸುಖವಾಗಿರುವರು. ಗರ್ಭಿಣಿಸ್ತ್ರೀಯರು ಅವಶ್ಯಕೇಳಿದರೆ ಕೀರ್ತಿಸಂಪನ್ನನಾದ ಮಗನನ್ನು ಪಡೆಯುವರು. ಹೇಳಿದ ಬ್ರಾಹ್ಮಣನು ಇಹಲೋಕದಲ್ಲಿ ಕೀರ್ತಿಸಂಪನ್ನನಾಗಿ ಭಾಗ್ಯಸಮೇತನಾಗಿರುವನು. ಸ್ವರ್ಗಭೋಗಂಗಳನನುಭವಿಸಿಕೊಂಡು ಸುಖದಲ್ಲಿರುವನು. ವ್ಯಾಸರ ಪ್ರಸಾದದಿಂದ ಸ್ವರ್ಗವನ್ನೈದಿ ಸುಖದಲ್ಲಿರುವನು. ಸಂದೇಹವಿಲ್ಲ. ಈ ಜಯಾಖ್ಯವೆಂಬ ಇತಿಹಾಸವನ್ನು ಚೆನ್ನಾಗಿ ಅರ್ಥಪೂರ್ವಕವಾಗಿ ನೋಡಿದ ಬ್ರಾಹ್ಮಣನು ಸಕಲವೇದಾರ್ಥವನ್ನೂ ತಿಳಿದವನಾಗುವನು. ಆ ಬ್ರಾಹ್ಮಣನು ಪೂಜ್ಯನು. ಪೂಜಾಯೋಗ್ಯನಾಗಿಹನು.

Colophon :

ಇತಿ ಶ್ರೀಮನ್ಮಹಭಾರತೇ ಶತಸಹಸ್ರತಾಯಾಂ ಸಂಹಿತಾಯಾಂ ವೈಯ್ಯಾಸಿಖ್ಯಾಂ. ಸ್ವರ್ಗಾರೋಹಣಿಕೇ ಪರ್ವಣಿ ಪಂಚಮೋಧ್ಯಾಯಃ

" ಗದ್ಯ "

ಇದು ನಿದು ಸಕಲಸುರಾಸುರಮೌಳಿಮಣಿಘೃಣಿಮಂಜರೀಪಿಂಜರಿತಮುಕುಂದಪಾದಾರವಿಂದ ಮಕರಂದಧಾರಾಸಮೇಧಿತಮಧುಕರಾಯಮಾನ ನಿಜಾಂತರಂಗತರಂಗ ಕರಸಮುದಂಚಿತ ನಿಕರ ಕುಸುಮಾವಳೀಸಮರ್ಪಣಾಸಮಾಕುಲ ಕಾವೇರೀಪೂರಪರೀತಪಶ್ಚಿಮರಂಗಪುರೀನಿಕೇತನಾಗ್ರನಿವೇಶಿತವಿನತಾನಂದನಾವಲೋಕನನುಕಲಫಲಾಯಿತ ಸಮಸ್ತ ಸಾಮಂತನೃಪಸರ್ವಸ್ವಸಂಕ್ರಮಣ ದಕ್ಷಿಣೋತ್ತರಪೂರ್ವಪಶ್ಚಿಮಾಬ್ಧಿವೇಲಾವಲಯಿತ ಮಹೀತಲಮಹಿತಶ್ರೋತ್ರಿಯಕುಲದಾರಿದ್ರ್ಯವಿದ್ರಾವಣೋನ್ನಿದ್ರ ಷೋಡಶಮಹಾದಾನ ವಿಶ್ರಾಣನಶಾರದ ಶಾರದಾಹೃದಯಾನಂದಕಂದಳ ನಾನುಷಂಗಿಸಂಗೀತಸಾಹಿತ್ಯಕಲಾಧರ ವಿಮಲಗಾದವಕುಲಕಲಶೋದಧಿಕಲಾಧರ ಶ್ರೀ

ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರನರಪತಿ ಚಿಕ್ಕ ದೇವ ರಾಯವಿರಚಿತ ಮಪ್ಪ ಮಹಾಭಾರತಕಥಾ ಟಿಪ್ಪಣದೊಳ್ ಸ್ವರ್ಗಾರೋಹಣ ಪರ್ವಸಮಾಪ್ತಂ.

(ವಿ.ವಿ.)—

ಸ್ವರ್ಗಾರೋಹಣಪರ್ವ ಸಮಗ್ರ. ಬರೆವಣಿ ಚೆನ್ನಾಗಿದೆ. ತಪ್ಪುಗಳವೆ. ಸ್ವಲ್ಪ ಶಿಥಿಲ ಗ್ರಂಥಪಾತವಿಲ್ಲ. ಕವಿ. ಚಿಕ್ಕ ದೇವರಾಜ. ಉಳಿದ ವಿಷಯಗಳನ್ನು ೧೦೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 114. ಭಾರತ ಕಥಾಸಂಗ್ರಹ-

BHĀRATAKATHĀSANGRAHA

Substance, palm-leaf. Size, 11¾ × 1 inches. pages, 32. Lines, 4 on a page. Character, Kanarese. Condition, slightly injured. Appearance, old. Mode of writing, not good, and not free from mistakes.

A rendering in Kanarese prose of the story of Ādiparva of the Sanskrit Mahā-bhārata, by Jakkaṇanāyaka.

Contains the Ādiparva complete.

Beginning:

ಭಾರತ್ರದ ಕಥೆಯು ಟೀಕು ಸಹಾ ವ್ಯಾಖ್ಯಾನಿಸಿದ ಜಕಣಿ ನಾಯಕನ ಬೊಲ್ಲಿ :—

ಶೃತಶೃಂಗಾರ ಸಮಿಲಾಶ್ರಮದಲ್ಲಿ ಶೌನಕಾದಿಮಹಾಮುನೀಶರರು ತಪಸ್ಸು ಮಾಡುತ್ತ ಇರುತ್ತಿದ್ದ ವೇಳೆಯಲ್ಲಿ ರೋಮಹರ್ಷಿಣಿಯೆಂಬ ಸೂತಪುರಾಣಿಕರು ಬಂದರು. ಆ ಮುನೀಂದ್ರರು ಈ ಶೌನಕಾದಿಗಳು ಈ ಪುರಾಣಿಕನನ್ನು ಸಂಬೋಧಿಸಿ ಎಲೈ! ಪುರಾಣಿಕೋತ್ತಮನೆ!! ಉತ್ತಮವಾದಂಥ ಪುರಾಣವುಂಟೇ ಎಂದರೆ ಸೂತ್ರನು ಕೈಮುಗಿದು ಒಂದು ಪೌರಾಣಾಸ್ರಿಮ (?) ಮಹಾಭಾರತದ ಕಥನ ಇದ್ದೀತು. ಅದು ಪಂಚಮವೇದವೆನಿಸುವುದು. ಅದನ್ನು ಜನಮೇಜಯರಾಯನು ಸರ್ಪಯಾಗಬ್ರೂಣಹತ್ಯದೋಷ ಪರಿಹಾರಾರ್ಥವಾಗಿ ವೇದವ್ಯಾಸದೇವರ ಅನುಜ್ಞೆಯಿಂದ ವೈಶಂಪಾಯನ ಮುನಿಯ ಕೈಯಿಂ ಕೇಳಿದನು. ನಾನೂ ಆಗಳೇ ಕೇಳಿದೆನು ಅದನ್ನು ಹೇಳುವೆನು ಎಂದರೆ ಋಷಿಗಳು ಕೇಳ ತೊಡಗಿದರು.

ಕೇಳಿರೈ! ಮುನೀಂದ್ರರುಗಳಿರಾ! ವೈಶಂಪಾಯನನು ಜನಮೇಜಯಗೆ ಪರೀಕ್ಷಿತನು ಕಲಿಯನ್ನು ಬಂಧಿಸಿ ರಾಜ್ಯವಾಳುತ್ತಿರಲು ಬ್ರಹ್ಮಶಾಪದಿಂದ ಸರ್ಪದಿಂದ ಮರಣವನ್ನೈದಿದನು ಎಂದು ಹೇಳಿ ಮೇಲೆ ಎ. ಲೋಮ ಚರಿತವನ್ನು ಹೇಳಿ ಗರುಡಾಸ್ತಿಕರ ಕಥೆಯನ್ನು ಹೇಳಿದನು ಬಳಿಕ ಮುನಿಗಳಿಗೆ ಸೂತನು, ಜನಮೇಜಯನು ಕಲಿಯ ಬಿಟ್ಟು ಆಳಿದ್ದನ್ನೂ ಮೇಲೆ ಶತಕ್ರತುವನ್ನು ಮಾಡಿದ್ದನ್ನೂ, ಸರ್ಪಯಜ್ಞವನ್ನು ಮಾಡಿದ್ದನ್ನೂ ವಿಸ್ತರಿಸಿದ್ದನ್ನೂ ಕೇಳಿ ವೈಶಂಪಾಯನು ಜನಮೇಜಯಮಹಾರಾಯ ಆದಿಕೃತಯುಗದಲ್ಲಿ ನವಬ್ರಹ್ಮರು ಜನಿಸಿದರು ಅವರಲ್ಲಿ ಅತ್ರಿಮುನಿಯಾದನು. ಆತನಿಗೂ ಅನಸೂಯಾದೇವಿಗೂ ಸೋಮ ಹುಟ್ಟಿದನು. ಆಸೋಮನಿಗೂ ಬೃಹಸ್ಪತಿದೇವರ ಸ್ತ್ರೀ ತಾರೆಗೂ ಬುಧನು ಹುಟ್ಟಿದನು ಆ ಬುಧಂಗೆ ಪುರವ

ಹುಟ್ಟಿದನು. ಆತನಿಗೂ ಊರ್ವಶಿಗೂ ಆಯು: ಕುಮಾರನಾದನು. ಆಯುವಿಗೆ ನಹುಷ ಹುಟ್ಟಿದನು. ಆನಹುಷನು ಶತಕ್ರತುವನ್ನು ಮಾಡಿ ಇಂದ್ರ ತಪಕ್ಕೆ ಯೋಗ್ಯನಾದನು. ಆನ ಹುಷನಿಂದ ಯಯಾತಿಯಾದನು. ಆತನ ಚರಿತ್ರವನ್ನು ಶುಕ್ರದೇವರ ಮಗಳು ದೇವಯಾನೆ ಯಿಂದಲೂ ಯಯಾತಿಯ ಮಕ್ಕಳು ಪೌರ ಗುದ್ರತ್ವ ಬಂದು ವರವಕೊಟ್ಟದನು. (?) ಯದು ವಿಂಗೆ ರಾಜ್ಯಸಿಂಹಾಸನವ ಬೇಡು ಎಂದರೆ ಶಾಪಬಂದು ಸೋಮಕುಲ ಎರಡಾಗಿ ಪೌರವಂಶ ಯಾದವ ವಂಶವಾದ ಸ್ಥಿತಿಯನ್ನು ವಿಸ್ತರಿಸಿ ಹೇಳಿದನು. ಆತಗೆ ದುಷ್ಯಂತನು. ಶಕುಂತಳೆಯ ಕಥೆಯನ್ನು ಹೇಳಿದನು. ಆತಗೆ ಭರತನು. ಅವನ ಚರಿತ್ರದಲ್ಲಿ ಭರತವಂಶವಾಯಿತು. ಅತನ ಮಗ ಸುಹೂರ್ತನು. ಆತನ ಮಗ ಹಸ್ತಿ. ಆತನು ಹಸ್ತಿಯೆಂಬ ದೈತ್ಯನನ್ನು ಸೀಳಿ ತನ್ನ ಹೆಸರಿನಲ್ಲಿ ಹಸ್ತಿನಾಪುರವನ್ನು ಕಟ್ಟಿದನು. ಆತನ ಪಾರಂಪರೆಯಲ್ಲಿ ಸಧರಣನಾದನು. ಆತನಿಗೂ ಸೂರ್ಯಪುತ್ರಿಗೂ ಕುರುರಾಯನಾದನು. ಅದರಿಂದ ಕುರುವಂಶವಾಯಿತು. ಆ ಪಾರಂಪರೆಯಲ್ಲಿ ಪೃಥ್ವಿ, ರಾಜ್ಯವನಾಳುತ್ತಿದ್ದನು.

ಭೂಮಿದೇವಿಯು ಬ್ರಹ್ಮದೇವನಿಗೆ ಭೂಭಾರನಾಗಿದ್ದೀತು ಎಂದು ಹೇಳಿದರೆ ಶ್ರೀಹರಿ ಭೂ ಭಾರವನಿಳುಹ ಬೇಕು. ಭೂಭಾರವಾಗಿದ್ದೀತು ಎಂದು ಹೇಳಿದರೆ ಶ್ರೀಹರಿ ಭೂಭಾರವನಿಳು ಹಲು ಅವತರಿಸುವಾಗ ಸಕಲದೇವತೆಗಳಿಗೂ ಭೂಮಿಯಲ್ಲಿ ಜನಿಸುವುದಕ್ಕೆ ಆಜ್ಞಾಪಿಸಿದರು ಆಗ ಸಮುದ್ರನು ಪ್ರತಿಮಗೆ ಮಗನಾಗಿ ಶಂತನು ವೆಂಬ ಹೆಸರಿನಲ್ಲಿ ಜನಿಸಿದನು.

* * * *

ಧೃತರಾಷ್ಟ್ರನಿಗೆ ಗಾಂಧಾರದೇಶದ ಅರಸು ಸುಬಲನ ಮಗಳು ಗಾಂಧಾರಿಯನು ಮದುವೆಮಾಡಿದರು. ಮತ್ತೆ ಭೋಜನ ಮನೆಯಲ್ಲಿ ಕುಂತಿಯಿರಲಾಗಿ ದೂರ್ವಾಸನೆಂಬ ಮುನಿ ಐದು ಮಂತ್ರ ಪಿಂಡವ ಕುಂತೀದೇವಿಗೆ ಉಪದೇಶಿಸಿ ದೇವರ್ಕಳ ವಳಗೆ ಆರನೆಯವನ ದೇವರು ವರವ ಕೊಟ್ಟಾರು ಎಂದು ಹೇಳಿ ಬಿಜಯಂಗೈದರು. ಕುಂತೀದೇವಿಯು ಕನ್ನಿಕೆಯಾ ವಲ್ಲಿ ನದಿಯ ತೀರದಲ್ಲಿ ಒಂದು ಮಂತ್ರದಿಂದ ಸೂರ್ಯನಂನೆನೆಯಲಾಗಿ ಕರ್ಣನು ಜನಿಸಿದನು ಆಗ ಕುಂತೀದೇವಿಯು ಅಂಜಿ ನದಿಯ ತೀರದಲ್ಲಿ ಹಾಕಿ ಹೋದರೆ ರಾಧೇಯನೆಂಬ ಸೂತ್ರನ (?) ಸಾಕಿದನು. ಆತ್ರನು ಪರಶುರಾಮ ದೇವರಿಂದ ಬಿಲ್ಲು ವಿದ್ಯವನ್ನು ಕಲಿತ್ರನು. ಅವನ ಕೈಯಿಂದಲೇ ಶಾಪಹತ್ರನಾಗಿ ಅಲ್ಲಿಂದ ಗಂಧರ್ವರಲ್ಲಿ ಬಂದು ಅಭ್ಯಾಸವನ್ನು ಮಾಡುವಾಗ ಅಲ್ಲಿ ಯೂ ಶಾಪಹತ್ರನಾಗಿ ಸೂತನ ಮನೆಯಲ್ಲಿದ್ದನು. ಆ ಕುಂತಿಯು ಪಾಂಡುವಿಗೆ ಅರಸಿಯಾ ದಳು. ಮಾದ್ರಾದೇವಿಯನ್ನೂ ಮದುವೆ ಮಾಡಿದರು. ಪಾಂಡುವಿಗೆ ಪಟ್ಟಾಭಿಷೇಕವನ್ನು ಮಾಡಿದರು. ಸುಖದಲ್ಲಿ ರಾಜ್ಯವನಾಳುತ್ತಿರುವ ಸಮಯದಲ್ಲಿ ಬೇಂಟೆಗೆ ಹೋಗಿ ಮುನಿ ಮೃಗವಾಗಿ ಕ್ರೀಡಿಸುವುದ ಕಂಡು ಎಚ್ಚು ಕೊಂದದ್ದರಿಂದ ಆ ಮುನಿ ನಿನಗೆ ಸ್ತ್ರೀಯು ಕೂ ಡಿದಾಗಲೇ ಮರಣವೆಂಬ ಶಾಪವಿಡಲಾಗಿ ಆಗ ಪಾಂಡುವು ತನ್ನ ಇಬ್ಬರು ಸ್ತ್ರೀಯರು ಸಹಿತ ಅರಣ್ಯವಾಸಕ್ಕೆ ಬಂದು ಶೃತಶೃಂಗಾರ ಸಯಿಲಾಶ್ರಮದಲ್ಲಿ ತಪಸ್ಸು ಮಾಡುತ್ತಾ ಇದ್ದನು.

End :

ಕೃಷ್ಣಾರ್ಜುನರು ಬೇಂಟೆಯ ಹೋಗುವಲ್ಲಿ ಅಗ್ನಿ ದೇವರು ಬ್ರಾಹ್ಮಣವೇಷದಲ್ಲಿ ಖಾಂ ಡವವನಗ್ರಾಸವ ಕೊಡಬೇಕೆಂದು ಕೇಳಲಾಗಿ ಅರ್ಜುನನು ಕೊಟ್ಟೆನೆಂದನು. ಯಜ್ಞ ಪುರುಷನು ಅದಕ್ಕೆ ಮೆಚ್ಚಿ ದಿವ್ಯರಥ ಶ್ವೇತಚ್ಛತ್ರ ಗಾಂಡೀವ, ಅಕ್ಷಯ ಬತ್ತಳಿಕೆಯನ್ನು ಕೊಟ್ಟು ಪಾರ್ಥನಿಂ . . ಖಾಂಡವವನದಹನಮಂ ಮಾಡಿಸುವಾಗ ದೇವೇಂದ್ರನು ದೇವ ತೆಗಳು ಬಂದು ತಾಗಿದರೆ ಕಾದಿಗೆಲಿದನು. ಖಾಂಡವ ದಹನದಿಂದ ಅಗ್ನಿದೇವರು ತೃಪ್ತಿಯಲ್ಲಿ.

ನ್ನೈದಿದರು. ಅಗ್ನಿ ಮಧ್ಯದಲ್ಲಿ ತಕ್ಷಕನ ಸಂತತಿಯಾದ ಕೋಟಿ ಸಂಖೆಯು ಸರ್ಪಗಳೆಲ್ಲ ಬೆಂದುವು. ಅದರೊಳಗೆ ಅಶ್ವಸೇನ ನೆಂಬ ಸರ್ಪವು ಆಡಲಾಗಿ ಹೋಗಲಾಗಿ ಅಗ್ನಿದೇವರು ಹೋಗುತಿದೆಯೆಂದು ವವರಿದರೆ ಪಾರ್ಥನು ಎಚ್ಚಲ್ಲಿ ಕೊರಳು ಕರಿದು ಮುಂಡಬಿದ್ದಿತು. ಅತ್ತಲೆ ಅರ್ಜುನನ ಹಗೆ ಸಾಧಿಸಿ ಹೋಗಿ ಕರ್ಣನ ಮೂಡಿಕೆಯೊಳಗೆ ಶರವಾಗಿ ಇದ್ದಿತು. ಆ ಖಾಂಡವನದಲ್ಲಿ ಋಷಿ ಸಂತತಿಯಾದ್ದ ನಾಲ್ಕು ಪಕ್ಷಿಗಳು ಬದುಕಿದುವು. ಮಯನು ಓಡಿ ಬಂದು ಅರ್ಜುನನ ಕಂಡು ಬದುಕಿದನು. ಬಳಿಕಾ ದೇವೇಂದ್ರನು ಶ್ರೀ ಕೃಷ್ಣಾರ್ಜುನರ ಕೂಡೆ ಯುದ್ಧಕ್ಕೆ ಬಂದಾಗ ನಾರದನು ಒಡಂಬಡಿಸಿ ನಿಲ್ಲಿಸಲಾಗಿ ಮತ್ತೆ ಬಂದು ಇ . . . ಕಂಡನು. ಕಂಡು ಪಾರ್ಥಂಗೆ ಒಂದು ಮಕುಟವನ್ನು ಕೊಟ್ಟು ಹೋದನು. ಬಳಿಕ ಶ್ರೀ ಕೃಷ್ಣಾರ್ಜುನರು ಇಂದ್ರ ಪ್ರಸ್ಥಕ್ಕೆ ಬಂದು ಧರ್ಮಸುತ್ರಗೆ ಹೇಳಿ ಶ್ರೀ ಲಕ್ಷ್ಮೀಕಾಂತನು ದ್ವಾರಕಿಗೆ ಬಿಜಯಂಗೆಯ್ಯಲನುವಾದನು ಎಂದು ವೈಶಂಪಾಯನನು ಜನಮೇಜಯಂಗೆ ವಿಸ್ತರಿಸಿ ಹೇಳಿದನು. ಎಂದು ನೈಮಿಶಾರಣ್ಯವಾಸಿಗಳಾದ ಶೌನಕಾ ಮಹಾಮುನಿಗಳಿಗೆ ಸೂತಪೌರಾಣಿಕನು ಹೇಳುತ್ತಾ ಇದಾರೆ ಎಂಬುದು ಆದಿಪರ್ವದ ಕಥೆಯು ಸೂಚಕಕದಕಥಾಪ್ರಸಂಗವು ಸಂಪೂರ್ಣ.

Colophon :

ಇತಿ ಆದಿ ಪರ್ವಸಮಾಪ್ತಂ.

(ವಿ.ವಿ.)—

ಆದಿಪರ್ವಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಸಾಮಾನ್ಯ. ತಪ್ಪುಗಳು ಹೇರಳವಾಗಿವೆ. ಕವಿ ಜಕ್ಕಣ ನಾಯಕ ಅಥವಾ ಜಕ್ಕ ಭೂಪಾಲನೆಂಬುವನು. . ಹಿಂದೆ ವರ್ಣಿತವಾದ ಗ್ರಂಥವೇಸರಿ.

No. 115. ಭಾರತಕಥಾ ಸಂಗ್ರಹ.

BHĀRATAKATHĀSAṄGRAHA.

Substance, palm-leaf. Size, 11¼ × 1 inches. Pages 14. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

A rendering in Kanarese prose of the story of Sabhāparva of the Sanskrit Māhabhārata by ; Jakkaṇanāyaka.

Contains the Sabhāparva complete.

Beginning :

ಕೇಳು ಜನಮೇಜಯಮಹಾರಾಯನೆ ಶ್ರೀ ಕೃಷ್ಣಾರ್ಜುನರು ಪಾಂಡುಪುತ್ರನಾದ ಧರ್ಮರಾಯನ ಕೈಯ್ಯ ಕಳುಹಿಸಿಕೊಂಡು ದ್ವಾರಕಾಪುರಿಗೆ ಬಿಜಯಂಗೆಯ್ದರು. ಖಾಂಡವವನ ದಹನದಲ್ಲಿ ಬದುಕಿದಂತಹ ಮಯನು ನವರತ್ನದಿಂದ ಒಂದು ಸಭಾಮಂಟಪವನ್ನೂ, ಭೀಮಸೇನನಿಗೆ ಒಂದು ಗದೆಯನ್ನೂ ಕೊಂಡು ಬಂದು ಧರ್ಮಪುತ್ರಗೆ ಕೊಡಲಾಗ ಆ ಮಯನನ್ನು

ಮನ್ನಿಸಿ ಕಳುಹಿಸಿ ಸುಮುಹೂರ್ತದಲ್ಲಿ ಉತ್ಸಾಹದಿಂದ ಸಭಾಪ್ರವೇಶವನ್ನು ಮಾಡಿದ ಧರ್ಮಪುತ್ರನು ಕುಳಿತಿದ್ದ ವೇಳೆಯಲ್ಲಿ ನಾರದಮುನೀಶ್ವರರು ಬಂದು ರಾಜನೀತಿಗಳನ್ನೂ ದೇವಸಭೆಯನ್ನೂ ವಿಸ್ತಾರವಾಗಿ ಹೇಳಿ ಪಾಂಡವರಿಗೆ ಇಂದ್ರ ನಗರಿಯಲ್ಲಿ ಕುಳ್ಳಿರಿಸುವಂಥ ರಾಜಸಭೆಯ ಯಜ್ಞವನ್ನು ಮಾಡೂ ಎಂದು ಹೇಳಲಾಗಿ ಮೇಲೆ ಯುಧಿಷ್ಠಿರನು ದ್ವಾರಕಾಪುರದಿಂದ ಶ್ರೀ ಕೃಷ್ಣದೇವರನ್ನು ಬಿಜಯಂಗೈಸಿಕೊಂಡು ಬಂದು ಅವರ ಅನುಜ್ಞೆಯಿಂದ ಯಜ್ಞವನ್ನು ಮಾಡಿ ಶ್ರೀ ಕೃಷ್ಣನು ಭೀಮಾರ್ಜುನರು ಸಹಿತ ಮಗಧರಾಯನ ಮೇಲೆ ದಂಡೆತ್ತಿ ಹೋಗಿ ಸ್ನಾತಕರು ಮಾತ್ರದಿಂದ ನೀತಿಮಾಜಪಟ್ಟಣವನ್ನು ಹೊಕ್ಕು ಜರಾಸಂಧನ ಕೂಡೆ ಭೀಮನು ಮಲ್ಲಯುದ್ಧದಲ್ಲಿ ಸೋಲಿಸಿ ಆತನನ್ನು ಯಮನನ್ನು ಕಾಣಿಸಿ ಅಲ್ಲಿ ಸೆರೆಯಲ್ಲಿ ಸಿಕ್ಕಿದಂಥ ರಾಯರುಗಳನ್ನು ಬಿಡಿಸಿ ತಿರುಗಿಬಂದು ಎಲ್ಲಾ ಸ್ಥಿತಿಯನ್ನೂ ಧರ್ಮಪುತ್ರಂಗೆ ಹೇಳಿ ಶ್ರೀಹರಿಯು ದ್ವಾರಕಾ ಪುರಕ್ಕೆ ಬಿಜಯಂಗೈದರು. ಬಳಿಕ ವೇದವ್ಯಾಸದೇವರ ಅನುಜ್ಞೆಯಿಂದ ದಿಗ್ವಿಜಯಕ್ಕೆ ಪಯಣವ ಮಾಡಿದನು. ಪಾರ್ಥನು ನವಖಂಡಪೃಥ್ವಿಯನ್ನು ಗೆಲಿದು ಉತ್ತರಕುರುಗಳ ಪರ್ಯಂತರವು ಕಪ್ಪವನ್ನು ತೆಗೆದುಕೊಂಡು ಬಂದನು. ಮೊದಲು ಸಮುದ್ರಪರ್ಯಂತ್ರವೂ ಸಾಧಿಸಿ ತಪ್ಪವನ್ನು ತಂದನು. ತೆಂಕಣ ಸಾಗರಪರ್ಯಂತರವೂ ಸಹದೇವನು ಕಪ್ಪವನ್ನು ಕೊಂಡು ಅಲ್ಲಿ ಅಗ್ನಿಸಹವಾಗಿ ಇದ್ದ ನೀಲರಾಯನನ್ನು ಗೆದ್ದು ರಾಮೇಶ್ವರದಲ್ಲೂ ಬಿಟ್ಟು ಲಂಕೆಗೆ ಘಟೋದ್ಗಚನನ್ನು ಕಳುಹಿಸಿ ವಿಭೀಷಣನನ್ನು ಕಂಡು ಆತನ ಕೈಯ್ಯಿಂ ಕಪ್ಪವನ್ನು ಕೊಂಡು ಬಂದನು. ಪಶ್ಚಿಮದಿಕ್ಕನ್ನು ಸಾಧಿಸಿ ನಕುಲನು ಕಪ್ಪವನ್ನು ಕೊಂಡು ಬಂದನು. ಈ ನಾಲ್ಕು ದಿಕ್ಕಿನ ಕಪ್ಪವೂ ಬಂದ ಬಳಿಕ ಪಟ್ಟಣವನ್ನು ಶೃಂಗರಿಸಿ ಸಕಲ ರಾಯರುಗಳನ್ನೂ, ಋಷಿಗಳನ್ನೂ ನೆರಹಿ ನಾನಾದೇಶದ ಪ್ರಜೆಗಳನ್ನು ನೆರಹಿದರು. ಶ್ರೀ ಕೃಷ್ಣದೇವರೂ ಬಿಜಯಂಗೆಯ್ದರು. ಅವರ ನೇಮದಿಂದ ಧರ್ಮಪುತ್ರನು ದೀಕ್ಷಿತನಾಗಿ ಶಾಲಾಪ್ರವೇಶವನ್ನು ಮಾಡಿ ಏಳುದಿನ ಪರ್ಯಂತರವು ಯಜ್ಞೋತ್ಸಾಹವನ್ನು ಮಾಡಿಸಿ ಭೀಮನು ಪುರುಷಾಮೃಗವನ್ನು ಕೊಂಡು ಬಂದನು. ಬಳಿಕೆ ಯಜ್ಞವು ಪೂರ್ಣಾಹುತಿ ಆದ ಮೇಲೆ ಸುರರನೆಲ್ಲರನ್ನೂ ತುಷ್ಟಿಪಡಿಸಿ ಪಾಂಡು ಮಹಾರಾಯನಿಗೆ ಇಂದ್ರನಗರಿಯ ಸಿಂಹಾಸನವು ಆಯಿತು.

* * * *

ಶ್ರೀ ಕೃಷ್ಣದೇವರಿಗೆ ಅಗ್ರಪೂಜೆಯನ್ನು ಮಾಡಲಾಗಿ ಶಿಶುಪಾಲನು ಹರಿಯನ್ನು ಜರಿದರೆ ಭೀಷ್ಮರು ಶ್ರೀಹರಿಯ ಲೀಲಾವಿಚಿತ್ರವನ್ನು ವಿಸ್ತರಿಸಿ ಶ್ರೀ ಹರಿಯು ಶಿಶುಪಾಲನ ತಾಯಿಗೆ ಕೊಟ್ಟ ಭಾಷೆಯನ್ನು ಸಲಿಸಲೋಸ್ಕರವಾಗಿ ಶತಾಪರಾಧವನ್ನೂ ಸೈರಿಸಿ ಮೇಲೆ ಯುದ್ಧವನ್ನು ಮಾಡಿ ಆ ಶಿಶುಪಾಲನ ಶಿರಚ್ಛೇದನವನ್ನು ಮಾಡಿದರು. ಆ ವೇಳೆಯಲ್ಲಿ ಅನೇಕ ಉತ್ಪಾತಗಳು ತೋರಿದುವು. ಆ ಉತ್ಪಾತಫಲವನ್ನು ವ್ಯಾಸನಾರದರೂ ಧರ್ಮಪುತ್ರಂಗೆ ಹೇಳಿದರು. ಮೇಲೆ ಯಜ್ಞಪೂರ್ಣಾಹುತಿಯನ್ನು ಮಾಡಿ ಅವಭೃತ ಸ್ನಾನವನ್ನು ಮಾಡಿ ದಿಕ್ಪಾಲಕರಿಗೆ ಸಂತುಷ್ಟಿಯೂ ಹಾಗೆ ದಕ್ಷಿಣೆಯಿಂದ ಸಂತುಷ್ಟಿಪಡಿಸಿದರು. ಋಷಿಗಳನ್ನು ಸತ್ಕರಿಸಿ ರಾಯರುಗಳನ್ನು ಅವರವರ ಉಚಿತಪ್ರೀತಿಯಿಂ ಮನ್ನಿಸಿ ಕಳುಹಿಸಿದರು.

End :

ಕೌರವನು ಕೋಪಿಸಿಕೊಂಡು ದುಶ್ಶಾಸನನನ್ನು ಕಳುಹಿದಾಗ ಅವನು ; ಪುಷ್ಪವತಿಯಾಗಿ ಇರಲಾಗಿಯೂ ಮುಂದಲೆಯಂ ಹಿಡಿದುಕೊಂಡು ಬಂದು ಸಭೆಯಲ್ಲಿ ಸೀರೆಯನು

ಸುಲಿವಾಗ ದ್ರೌಪದಾದೇವಿಯು ಬೆದರಿ ಶ್ರೀ ಹರಿಯ ಧ್ಯಾನವನ್ನು ಮಾಡಲಾಗಿ ಆಕೆ ಉಟ್ಟಂಥಾ ಸೀರೆಯು ಅಕ್ಷಯವಾಗಿ ಹೆಚ್ಚಿ, ಆಕೆಯ ಲಜ್ಜೆಯು ಉಳಿಯಿತು. ಆಗ ಹಸ್ತಿನಾಪುರದೊಳಗೆ ಅನೇಕ ಉತ್ಪಾತಗಳು ಹುಟ್ಟಿದವು. ಆ ಮೇಲೆ ಭೀಮಾರ್ಜುನರು ಯಮಳರು ದುರ್ಯೋಧನ ದಶ್ಶಾಸನ ಕರ್ಣ ಶಕುನಿ ಆ ಮಗವ್ರುಗಳೊಕ್ಕ (?) ಮೊದಲಾದವರ ಕೊಲೆಗೆ ತಮತಮಗೆ ವಿಂಗಡಿಸಿಕೊಂಡು ಪ್ರತಿಜ್ಞೆಯನ್ನು ಮಾಡೆ ಧೃತರಾಷ್ಟ್ರನು ಅಂಜಿ ಬಂದು ದ್ರೌಪದಿಯನ್ನು ಸಂತೈಸಿ ಪಾಂಡವರಿಗೆ ರಾಜ್ಯ ಮೊದಲಾದ ವಸ್ತುಗಳನ್ನು ಕೊಟ್ಟು ಕಳುಹಲಾಗಿ ಅವರು ಒಂದೆರಡು ಪಯಣವ ತೆರಳಿ ಹೋದರು. ಮತ್ತೆ ಕೌರವನು ತಂದೆಯ ಕೂಡೆ ಹೇಳಿ ಪಾಂಡವರಿಗೆ ತಿರುಗಿ ಮರು ಜೂಜಿನಲ್ಲಿ, ಒಂದೇ ಹಲಗೆಯಲ್ಲಿ ಸೋತರೆ ಹನ್ನೆರಡು ವರುಷ ವನವಾಸವಂ ಒಂದು ವರುಷ ಅಜ್ಞಾತವಾಸ ಎಂದು ಒಡಂಬಡಿಸಿ ಆ ಹಲಗೆಯನ್ನು ಕೌರವನೇ ಗೆಲಿದನು. ಪಾಂಡವರು ಕುಂತೀದೇವಿಯನ್ನು ವಿದುರನ ಮನೆಯಲ್ಲಿರಿಸಿ ತಾವು ಅಲ್ಲಿಂದ ದ್ರೌಪದಿಯ ಸಹಿತವಾಗಿ ವನವಾಸಕ್ಕೆ ಹೊರವಂಡು ಭೀಷ್ಮದ್ರೋಣಕೃಪವಿದುರಮೊದಲಾದ ಬಾಂಧವರ ಕೈಯ್ಯಿಂ ಕಳುಹಿಸಿಕೊಂಡು ಗಂಗಾನದಿಯನುತ್ತರಿಸಿ ಕಾಮ್ಯಕವನಕ್ಕೆ ತೆರಳಿದರೆಂದು ವೈಶಂಪಾಯಮುನಿ ಜನಮೇಜಯರಾಯಗೆ ಹೇಳಿದನು. ಎಂದನು ನೈಮಿಶಾರಣ್ಯವಾಸಿಗಳಾದ ಶೌನಕಾದಿಮುನೀಂದ್ರರಿಗೆ ಸೂತಪೌರಾಣೀಕರು ಹೇಳುತ್ತಾ ಇದ್ದರು ಎಂದು ಸಭಾಪರ್ವದ ಕಥೆ ಸಮಾಪ್ತಂ.

Colophon :

ಸಭಾಪರ್ವಸಮಾಪ್ತಂ.

(ಪಿ-ಪಿ.)—

ಸಭಾಪರ್ವ ಸಮಗ್ರ. ಸ್ವಲ್ಪ ಶಿಥಿಲ. ಬರೆವಣಿಗೆ ಸಾಮಾನ್ಯ. ತಪ್ಪುಗಳುಂಟು. ಕವಿ ಜಕ್ಕಣನಾಯಕ ಅಥವಾ ಜಕ್ಕ ಭೂಪಾಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 116. ಭಾರತಕಥಾಸಂಗ್ರಹ.

BHĀRATAKATHĀSAṄGRAHA.

Substance, palm-leaf. Size, $11\frac{1}{4} \times 1$ inches. Pages, 162. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Araṇyaparva complete.

Similar to the work described under No. 96 ante ; by Jakkaṇanāyaka.

Beginning:

ಕೇಳೈ ! ಜನಮೇಜಯ ಮಹಾರಾಯ ! ವಿದುರನು ಪಾಂಡವರ ಬಳಿಯಿಂದ ಬಂದು ಧೃತ್ರರಾಷ್ಟ್ರರಾಯನನ್ನು ಕಂಡು ವಿದುರನ ಕೂಡ ಪಾಂಡವರಂ ಕಂಡು ಬಂದ ಸ್ಥಿತಿಯನ್ನು ವಿಸ್ತಾರವಾಗಿ ಹೇಳು ಎಂದರೆ ವಿದುರನು ಹೇಳುತ್ತಾ ಇದ್ದಾನೆ. ಭೀಮಾರ್ಜುನರು ನಕುಲಸಹದೇವರು ಧರ್ಮಪುತ್ರನು ದ್ರೌಪದಿಯ ಸಹಿತ ವನವಾಸಕ್ಕೆ ಹೋಗುತ್ತಾ ಇರುವಾಗ ಕೈಮುಗಿದು

ಕೊಂಡು ಧರ್ಮವೇಜಯು ಧರ್ಮವೇಜಯು ಎಂದು ಭೀಮನು ಎರಡು ಮಾತನ್ನು ಎಂದನು. ಕೌರವರ ಕುಲವನು ಬಡಿಬೇನು ಎಂದನು. ಅರ್ಜುನನು ರಿಮುಲವನು (?) ಹಿಡಿದು ಧಾರೆಯಾಗಿ ಬಿಡುತಾಯಿ ಮರಿಯಾಡಿಯಲ್ಲಿ (?) ನಾನಾವೃಷ್ಟಿಗಳು ಕರೆಯು ಉಳ್ಳವೆನುತಾ ಹೋದನು. ನಕುಲ ಸಹದೇವರು ತಾವು ಚಲುವರಾದ ಕಾರಣ ತಮ್ಮ ರೂಪಕಂಡ ಪ್ರತಿವ್ರತೆಯರುಗಳ ಚಿತ್ತ ಕೆಟ್ಟಾವು ಎಂದು ಮೈಕೈಗೆ ಮಸಿಯನ್ನು ಪೂಸಿಕೊಂಡು ಮೋರೆಯನ್ನು ಮುಚ್ಚಿಕೊಂಡು ಹೋದರು. ದ್ರೌಪದಿಯು ಒಂದು ಕೈಯನ್ನು ಎತ್ತಿಕೊಂಡು ಹದಿನಾಲ್ಕನೆಯ ವರ್ಷದಲ್ಲಿ ಶತ್ರುರಾಯರುಗಳನ್ನು ಸಂಹರಿಸಿ ಇಲ್ಲಿಗೆ ಬರುತ್ತಾ ಇದ್ದೇವೆ ಎಂದು ಮೆಲ್ಲಗೆ ಹೋದಳು.

*   *   *   *

ಕೇಳೈ ! ನೃಪಾಲ ! ವ್ರತಂಗಳಿಗೆ ಅಧಿಕವಾದಂತಹ ವ್ರತವುಂಟು ಇದರಿಂದ ಧರ್ಮಾರ್ಥಕಾಮಮೋಕ್ಷ ಸಿದ್ಧಿಯಾಗುವುದು. ಶ್ರೀ ಅನಂತನ ಮಾಹಾತ್ಮ್ಯೆಯನ್ನು ಹೇಳುವೆನು. ಅನಂತನಾರೆಂದು ಕೇಳುವೆಯಾ ! ಅನಂತನೆಂದರೂ ನಾನೆ. ಶೇಷನೆಂದರೂ ನಾನೆ. ನಕ್ಷತ್ರರಾಶಿದಿವರಾತ್ರಿಕಲಾಕಾಷ್ಠಮಾರ್ಧವು (?) ಸಪ್ತರ್ಷಿಗಳು ಚಂದ್ರಸೂರ್ಯರುಗಳು ನವಗ್ರಹಗಳು ಸಂವತ್ಸರಗಳು ಮಾಸಂಗಳು ಗೆಲವು ಸೋಲುಗಳು ಸುಖಂಗಳು ಇವು ಎಲ್ಲವೂ ನನ್ನ ಮೂರ್ತಿಗಳೇ ಆಗಿ ಅನಂತನೆಂಬಾತನು ನಾನೆ ಎಂದರೆ, ಎಲೈ ! ದೇವಾ ! ನೀವು ಬುದ್ಧಿಗಲಿಸಿದ ಅನಂತನ ವ್ರತವನ್ನು ನೋನುವ ಕ್ರಮವನ್ನು ನಿರೂಪಿಸಬೇಕು ಎಂದರೆ ಶ್ರೀ ಕೃಷ್ಣನು ಎಲೈ ! ನೃಪಾಲ ! ಭಾದ್ರಪದ ಮಾಸದ ಶುಕ್ಲಪಕ್ಷದ ಚತುರ್ದಶಿಯ ದಿನದಲ್ಲಿ ತಾನು ತನ್ನ ಮನೆಯನ್ನು ಅಲಂಕರಿಸಿ ಉದಯದಲ್ಲಿ ಸ್ನಾನವನ್ನು ಮಾಡಿ ಯಮುನೆಯನ್ನು ಕಳಶದಿಂದ ಬಿಜಯಂಗೈಸಿಕೊಂಡು ಬಂದು ದರ್ಭೆಯಿಂದ ಏಳುಎಸಳಿಂದ ಅನಂತನ ಮೂರ್ತಿಯನ್ನು ಮಾಡಿ ಚತುರ್ವರ್ಣದ ಮಂದಾಸನವಂ ಕಟ್ಟಿ ಪಲಬಗೆಯ ಪುಷ್ಪಗಳಿಂದ ಶೃಂಗರಿಸಿ ಸ್ವಸ್ತಿಕಶಂಖಚಕ್ರಂಗಳಿಂದ ಪಂಚವರ್ಣದ ರಂಗವಲ್ಲಿಗಳನ್ನು ಇಕ್ಕಿ ಅದರಮೇಲೆ ಯಮುನೆಯ ಕಳಶವನ್ನು ಬಿಜಯಂಗೈಸಿ ಶ್ರೀ ಅನಂತದೇವರಿಗೆ ಅರ್ಘ್ಯಪಾದ್ಯಾಚಮನಂಗಳಿಂದ ನ್ಯಾಸಪೂರ್ವಕಂ ಪಾನಮಂತ್ರಂಗಳಿಂದ ಗಂಧ ಅಕ್ಷತೆ ಜಾಜಿ ಕೇದಗಿ ಪುಷ್ಪಗಳಿಂದ ಧೂಪ ದೀಪಾರತಿಗಳಿಂದ ಪಟ್ಟೆಯ ಸೂತ್ರದಿಂದ ಹದಿನಾಲ್ಕು ಗಂಟುಗಳ ದ್ವಾರವನ್ನು ಮಾಡಿ ಆದ್ವಾರವ ಅರ್ಚನೆಯನ್ನು ಮಾಡಿ ಮಂತ್ರುವಿ ದಾರವಿಂದ ದ್ವಾರವನ್ನು ದಕ್ಷಿಣ ಹಸ್ತದಲ್ಲಿ ಕಟ್ಟಿಕೊಂಡು ಶ್ರೀ ಅನಂತನಿಗೆ ನಮಸ್ಕಾರಮಾಡಿ ಮಖದ (ಗಧ) ದೇಶದ ನಾಲ್ಕುಮಾನ ಕಣಿಕವಲ್ಲಿ ನಾಲ್ವತ್ತೆರಡು ಮಂಡಿಗೆಯನ್ನು ಮಾಡಿ ಅದಂ ಮೂರು ಭಾಗಮಂಮಾಡಿ, ಒಂದು ಭಾಗದ ಹದಿನಾಲ್ಕು ಮಂಡಿಗೆಯನ್ನು ಅಡಿಕೆ ಎಲೆ ಹದಿನಾಲ್ಕು ಫಲ ವಸ್ತು ಘೃತಕ್ಷೀರಯಜ್ಞೋಪವೀತ ಸಹಿತವಾಗಿ ಅನಂತನಿಗೆ ನೈವೇದ್ಯವನ್ನು ಮಾಡಿ ಆಕ್ರಮದಲ್ಲಿ ದಕ್ಷಿಣೆ ಪರಿವಾರ ವಸ್ತ್ರಾಲಂಕಾರದಿಂದ ಬ್ರಾಹ್ಮಣರಿಗೆ ದಾನವನ್ನು ಮಾಡಿ, ತಾನು ಹದಿನಾಲ್ಕು ಮಂಡಗೆಯ ಹವಿಸ್ಸನು ಮಾಡಿ ಈ ಮರ್ಯಾದೆಯಲ್ಲಿಯೇ ಹದಿನಾಲ್ಕು ವರುಷವು ನೋಂತು ಅಪ್ಪರಮೇಲೆ ಹದಿನಾಲ್ಕುಮಂದಿ ಬ್ರಾಹ್ಮಣರಿಗೆ ಗೋದಾನ ವಸ್ತ್ರದಾನ ಸುವರ್ಣದಾನ ಹಸ್ತಮಾತ್ರ ಕರ್ಣಮಾತ್ರ ಸಹಿತ ವಸ್ತ್ರ ಸಹಿತವಾಗಿ ಶ್ರೀ ಅನಂತನಿಗೆ ಜಾಗರನೃತ್ಯಂಗಳಿಂದ ಆರಾಧಿಸಿ ಬಾಯಿನವನ್ನು ಕೊಟ್ಟು ವ್ರತಸಂಪೂರ್ಣವೆನಿಸಿಕೊಂಡು ಈ ಮರ್ಯಾದೆಯಲ್ಲಿ ಉದ್ಯಾಪನೆಯನ್ನು ಮಾಡುವುದು ಇದೀಗ ಅನಂತನ ವ್ರತವೆಂದರೆ ಯುಧಿಷ್ಠಿರನು ಹೇಳಿದನು.

End :

ಶ್ರೀರಾಮನು ಲಕ್ಷ್ಮಣ ಸೀತಾಸಹಿತನಾಗಿ ಕೈಕೆಯ ದೆಸೆಯಿಂದ ಒಂದೇ ಸತ್ಯವನ್ನು ಧರಿಸಿ ದಂಡಕಾರಣ್ಯಕ್ಕೆ ಬಂದು ಮೂವರೂ ಹದಿನಾಲ್ಕು ವರ್ಷ ಪರ್ಯಂತರವೂ ಅಡವಿಯಲ್ಲಿ ತೊಳ

ಲಿದರು. ಆ ಮೇಲೆ ಸೀತಾದೇವಿಯನ್ನು ರಾವಣನು ಕದ್ದುಕೊಂಡು ಹೋಗಲಾಗಿ ರಾಮಚಂದ್ರನು ಕಪಿಬಲಸಹಿತವಾಗಿ ಬಂದು ಸೇತುವನ್ನು ಕಟ್ಟಿ ಲಂಕೆಯನ್ನು ಹೊಕ್ಕು ರಾವಣಾದಿ ದೈತ್ಯರನ್ನು ಮರ್ದಿಸಿ ವಿಭೀಷಣನಿಗೆ ಪಟ್ಟವನ್ನು ಕಟ್ಟಿ ಸೀತಾದೇವಿಯನ್ನು ಕೂಡಿಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದು ಮೇಲೆ ಹನ್ನೊಂದು ಸಾವಿರ ವರುಷ ರಾಜ್ಯ ವಾಳಿದನು. ಕೇಳೈ ! ಯುಧಿಷ್ಠಿರಾ ! ಇವರುಗಳೊಳಗೆ ಸಹಸ್ರದಲ್ಲಿ ಒಂದು ಪಾಲು ಬಳಲಿಕೆ ಉಂಟೆ. ನಿನಗೆ ನಿನ್ನ ತಮ್ಮಂದಿರು ಸ್ತ್ರೀಯು ಪರಿಚಾರಕರು ಲಕ್ಷ ಸಂಖ್ಯೆಯ ಬ್ರಾಹ್ಮಣರು ಮೇಲೆ ಸೂರ್ಯಕೊಟ್ಟಂಥ ಅಕ್ಷಯ ಕನಕಪಾತ್ರೆ. ನಿನಗೆ ಅಟವಿಯೇ ಸಾಮ್ರಾಜ್ಯವಾಗಿ ಇದ್ದೀತು. ಮೇಲೆ ಲಕ್ಷ್ಮೀಕಾಂತನ ಬಲವುಂಟು ಎಂದು ನಾನಾರೀತಿಯಲ್ಲಿ ಧರ್ಮಪುತ್ರನಂ ಸಂತೈಸಿ ಬೃಹದಶ್ವಮುನಿ ಧರ್ಮಪುತ್ರನಿಗೆ ಅಕ್ಷಯ ಹೃದಯವನ್ನು ಕರುಣಿಸಿ ತನ್ನಾಶ್ರಮಕ್ಕೆ ಹೋದನು. ಆ ದಿನಕ್ಕೆ ವನವಾಸ ಹನ್ನೊಂದು ವರ್ಷ ಸಂದಿತು. ಮತ್ತೊಂದು ದಿನ ಪಾಂಡವರ ಆಶ್ರಮದಲ್ಲಿ ಒಬ್ಬ ಬ್ರಾಹ್ಮಣನ ಔಪಾಸನದ ಕೊಳವೆಯ ಒಂದು ಎರಳೆಯು ಕೊಂಡು ಹೋಗಲಾಗಿ, ಆಮೃಗವ ಹಿಂದಟ್ಟಿಕೊಂಡು ಹೋಗಿ ಪಾಂಡವರು ಬಳಲಿ ನೀರಡಿಸಿ ಧರ್ಮಪುತ್ರನು ತನ್ನ ತಮ್ಮಂದಿರ ನೀರ ತರಹೇಳಿ ಒಬ್ಬರ ಹಿಂದೆ ಒಬ್ಬರ ಕಳುಹಲಾಗಿ ಅವರು ಖಚರನೆಂಬಾತನು ನಿರ್ಮಿಸಿದಂಥ ವಿಷದ ಸರೋವರದಲ್ಲಿ ಒಂದು ಅಶರೀರವಾಕ್ಯ ಬೇಡ ಬೇಡಾ ಎನ್ನಲು ನೀರನ್ನು ಕುಡಿದು ಎಲ್ಲರೂ ಬಿದ್ದರು. ಧರ್ಮಪುತ್ರನು ತಾನೂ ಬಂದು ವಿಷದ ಮಡುವಿನ ಖಚರನ ಕೂಡೆ ಧರ್ಮಾಧರ್ಮದ ವೃತ್ತಾಂತವನ್ನು ಹೇಳಲಾಗಿ, ಆಗ ಖಚರನಿಗೆ ಪೂರ್ವಶಾಪ ವಿಶಾಪವಾಗಿ ಈ ಧರ್ಮಪುತ್ರನಂ ಮೆಚ್ಚಿದನು. ಬಿದ್ದಂಥಾ ನಕುಲಸಹದೇವರು ಭೀಮಾರ್ಜುನರು ಈ ನಾಲ್ವರ ಪ್ರಾಣವಂ ಕೊಟ್ಟನು. ನಿಮ್ಮ ಅಜ್ಞಾತವಾಸದಲ್ಲಿ ನಿಮ್ಮನ್ನು ಯಾರೂ ಕಾಣದೇ ಇರಲಿ ಎಂದು ವರವನ್ನು ಕೊಟ್ಟು ಆ ಉಪಾಸನದ ಕೊಳವೆಯನ್ನು ಕೊಟ್ಟು ಹೋದನು. ಎಂದು ವೈಶಂಪಾಯನಮಹಾಮುನಿಗಳು ಜನಮೇಜಯನಿಗೆ ಹೇಳಿದನು ಎಂದು ನೈಮಿಶಾರಣ್ಯ ವಾಸಿಗಳಾದಂಥ ಶೌನಕಾದಿಮುನೀಂದ್ರರಿಗೆ ಸೂತಪೌರಾಣಿಕನು ಹೇಳುತ್ತಾ ಇದ್ದಾನೆಂಬುದು.

Colophon:

ಅರಣ್ಯಪರ್ವಂ ಸಮಾಪ್ತಂ.—

(ವಿ.-ವಿ.)—

ಅರಣ್ಯಪರ್ವ ಸಮಗ್ರ. ಶಿಥಿಲ. ಬರೆವಣಿಗೆ ಉತ್ತಮವಲ್ಲ. ತಪ್ಪುಗಳಿವೆ. ಕವಿ ಜಕ್ಕಣನಾಯಕ ಅಥವಾ ಜಕ್ಕಭೂಪಾಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 117. ಭಾರತಕಥಾಸಂಗ್ರಹ.

BHĀRATAKATHĀSAṄGRAHA.

Substance, palm-leaf. Size, 11¼ × 1 inches. Pages, 16. Lines, 5 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Virāṭaparva complete.

By Jakkaṇanāyaka.

Beginning :

ಕೇಳೈ ! ಜನಮೇಜಯ ಮಹಾರಾಯ ! ಪಾಂಡವರು ದ್ರೌಪದಿ ಸಹಿತ ತೆಂಕ ಮುಖನಾಗಿ ಅನೇಕಮೃಗಂಗಳಂ ಬೇಂಟೆಯಾಡುತ ವಸಿಷ್ಠಮುನಿಯ ಆಶ್ರಮಕ್ಕೆ ಬಂದು ಒಂದು ಆಲದ ಮರದ ನೆರಳಲ್ಲಿ ಕುಳಿತು ಧರ್ಮರಾಯನು ತಮ್ಮಂದಿರ ಕೂಡೆ ನಾವು ಇನ್ನು ಎಲ್ಲಿಗೆ ಹೋಗುವ ಎಂದು ಕೇಳಲಾಗಿ ಅರ್ಜುನನು ಈ ವೇಳೆಗೆ ವಿರಾಟರಾಯನಿಗೂ ಕೌರವನಿಗೂ ಹಗೆ. ಅವರ ರಾಜ್ಯವನ್ನು ಕೀಚಕ ಇಟ್ಟಿದು (?) ಇದಾನೆ. ಅವರವರಿಗೆ ಸರಹದ್ದು. ಅಲ್ಲಿಗೆ ಹೋಗುವ ಎಂದು ಧರ್ಮಪುತ್ರನು ಸನ್ಯಾಸಿಯಾಗಿ ಭೀಮನು ಬಾಣಸಿಗನಾಗಿ ಅರ್ಜುನನು ನಟುವನಾಗಿ ನಕುಲನು ಅಶ್ವರಕ್ಷಕನಾಗಿ ಸಹದೇವನು ಗೋರಕ್ಷಕನಾಗಿ ದ್ರೌಪದಿಯು ಸೈರಂಧ್ರಿಯಾಗಿ ಇವರೆಲ್ಲ ಈ ತೆರದಿಂದ ವಿರಾಟನ ಪಟ್ಟಣಕ್ಕೆ ಬಂದು ಅರಸನ್ನು ಕಾಣಿಸಿಕೊಂಡು ತಮ್ಮ ತಮ್ಮ ಊಳಿಗದಲ್ಲಿ ಓಲೈಸಿಕೊಂಡು ಹತ್ತು ತಿಂಗಳನ್ನು ನೂಕಿದರು ಮೇಲೆ ಒಂದು ದಿನ ವಿರಾಟನ ಅರಸಿ ಸುಧೇಷ್ಣಾದೇವಿಯ ಬಳಿಯಲ್ಲಿ ದ್ರೌಪದಾದೇವಿಯಿರಲಾಗಿ ಕೀಚಕನು ಕಂಡು ದ್ರೌಪದಿಯ ಮೇಲೆ ಕಾಮಿಸಿ ತಮ್ಮ ಅಕ್ಕನ ಕೂಡೆ ಬಹಳ ದೈನ್ಯದಿಂದ ಆಡಲಾಗಿ ನಾನಾ ಬಗೆಯಲ್ಲಿ ಬೇಡವೆಂದು ತಮ್ಮಗೆ ಹೇಳಿದರೆ ಕೇಳದೆ ಇರಲಾಗಿ ಈಕೆಯನ್ನು ತಮ್ಮ ಮನೆಗೆ ಕಳುಹಿಸ ಹೇಳಿ ತಾನು ಮನೆಗೆ ಹೋಗಿ ಕಾಮಜ್ವಾಲೆಯಲ್ಲಿ ಬೇಯುತ್ತಿರಲಾಗಿ ಸುಧೇಷ್ಣೆಯು ದ್ರೌಪದಿಯ ಕೂಡೆ ಕೀಚಕನ ಮನೆಯಲ್ಲಿ ಮಧುವನ್ನು ತರಹೇಳಿ ಕಳುಹಿಸಲಾಗಿ ಕೀಚಕನು ತುಡುಕಲಾಗಿ ದ್ರೌಪದಿಯು ಓಡಿಬಂದು ವಿರಾಟನ ಸಭೆಯ ಹೊಗಲಾಗಿ ಆ ದಿನ ರಾತ್ರಿಯಲ್ಲಿ ಆರೂ ಅರಿಯದಂತೆ ಕೀಚಕ ಮಾಡಿದ ವೃತ್ತಾಂತವನೆನಲಾಗಿ ಭೀಮನು ದ್ರೌಪದಿಯ ಕೂಡೆ ಬಂದೇನು ಎಂದು ನಾಟಕಶಾಲೆಗೆ ಬರಹೇಳು ನಾನು ಅಲ್ಲಿಗೆ ಬಂದು ಕೀಚಕನಂ ಕೊಂದೇನು ಎನ್ನಲಾಗಿ ದ್ರೌಪದಿಯು ಹಾಗೇ ಆಗಲಿ ವೆಂದು ಕೀಚಕನಂ ಕಂಡು ಕರೆಯಲಾಗಿ ಇಂದು ರಾತ್ರಿಗೆ ನಾಟಕಶಾಲೆಗೆ ಬಂದು ಇರು ನಾನು ಅಲ್ಲಿಗೆ ಬಂದೇನು ಎಂದು ಕಳುಹಲಾಗಿ ಇತ್ತ ಭೀಮನು ಹೆಂಗುಸಿನ ಅಂದದಲ್ಲಿ ನಾಟಕಶಾಲೆಯಲ್ಲಿದ್ದು ಆ ಕೀಚಕನಂ ಕೊಂದು ಅರಿಯದ ಹಾಗೆ ಇರಲಾಗಿ ಕೀಚಕನ ತಮ್ಮಂದಿರು ನೂರು ಮಂದಿಯು ಬಂದು ಈ ಹೆಂಗಸು ಕೊಲ್ಲಿಸಿದಳು ಇವಳನ್ನು ತಮ್ಮ ಅಣ್ಣನ ಸಂಗಡ ಕೊಂದೇವು ಎಂದು ಹಿಡಿದುಕೊಂಡು ಹೋಗಲಾಗಿ ಭೀಮನು ಸುಡುಗಾಡಿಗೆ ಹೋಗಿ ಒಂದು ಮರವನ್ನು ಕಿತ್ತುಕೊಂಡು ಆ ನೂರು ಮಂದಿಯನ್ನೂ ಅಲ್ಲಿಯೇ ಮಡುಹಿ ದ್ರೌಪದಿಯನ್ನು ಬಿಡಿಸಿದನು.

End :

ವಿರಾಟನು ತನ್ನ ಅರಸಿಯರು ಸಹಿತ ಬಂದು ಪಾಂಡವರಿಗೆ ಸಾಷ್ಟಾಂಗವೆರಗಿ ದಂಡಪ್ರಣಾಮವನ್ನು ಮಾಡಿ ಪಾಂಡವರಿಗೆ ಬೇಕು ಬೇಕಾದ ಹಾಗೆ ಸತ್ಕರಿಸಿ ತಮ್ಮ ಮಗಳು ಉತ್ತರೆಯನ್ನು ಅರ್ಜುನನಿಗೆ ಕೊಟ್ಟೆವು ಎನ್ನಲಾಗಿ ನನಗೀಕೆ ಶಿಷ್ಯಳಾಗ ಬೇಕು ಅಭಿಮನ್ಯುವಿಗೆ ಕೊಡಿ ಎನ್ನಲಾಗಿ ಕೊಟ್ಟೇವು. ಎಂದರು. ಆ ಕ್ಷಣವೇ ಕೃಷ್ಣರಾಯನಿಗೆ ತಮ್ಮ ದಿನನಾದುದಕ್ಕೂ ಕೌರವರು ಯುದ್ಧವಮಾಡಿ ನಾಚಿ ಮುಸುಕನಿಕ್ಕಿಕೊಂಡು ಹೋದುದಕ್ಕೂ ಅಭಿಮನ್ಯುವಿಗೆ ವಿರಾಟರಾಯ ಮಗಳನ್ನು ಕೊಟ್ಟೇನು ಎಂದುದಕ್ಕೂ, ಅಭಿಮನ್ಯುವನ್ನು ಕರೆದುಕೊಂಡು ಬನ್ನೀ ಎಂದು ಬಿನ್ನಹಂ. (ಬಿನ್ನ ಎನಲಾಗಿ) ಶ್ರೀಲಕ್ಷ್ಮೀಕಾಂತನು ಅಭಿಮನ್ಯುವನ್ನು ಕರೆದುಕೊಂಡು ವಿರಾಟನ ಪಟ್ಟಣಕ್ಕೆ ಬಂದು ಪಾಂಡವರ ಕ್ಷೇಮ ಕುಶಲವನ್ನು ಕೇಳಿ ಅಭಿಮನ್ಯುವಿನ ಮದುವೆಯನ್ನು ಮಹೋತ್ಸಾಹದಿಂದ ಮಾಡಿ ಅಲ್ಲಿಂದ ವಿರಾಟ ಸಹಿತವಾಗಿ ಉಪ್ಲವ ಪಟ್ಟಣಕ್ಕೆ ಬಂದು ಪಾಂಡವರು ಶ್ರೀಕೃಷ್ಣರಾಯ ಸಹಿತವಾಗಿ ಬಂದು ಬಿಟ್ಟರು. ಅಲ್ಲಿ ಪಾಂಚಾಲರಾಯ

ಶೃಂಜಯರು ಮೊದಲಾದ ರಾಯರುಗಳು ಬಂದು ಕಂಡರು. ಆ ಮೇಲೆ ಶ್ರೀಕೃಷ್ಣದೇವರು ಪಾಂಡವರಿಗೆ ಬುದ್ಧಿಗಲಿಸಿ ದ್ವಾರಕಾಪುರಕ್ಕೆ ಬಿಜಯಂಗೈದರು ಎಂದು ವೈಶಂಪಾಯನ ಮುನಿ ಜನಮೇಜಯನಿಗೆ ಹೇಳಿದನೆಂದು ನೈಮಿಶಾರಣ್ಯವಾಸಿಗಳಾದಂಥ ಶೌನಕಾದಿಮುನಿಗಳಿಗೆ ಸೂತ ಪೌರಾಣಿಕರು ಹೇಳಿದರು.

Colophon:

ಇತಿ ವಿರಾಟಪರ್ವಂ ಸಮಾಪ್ತಂ—.

(ವಿ-ವಿ.)—

ವಿರಾಟಪರ್ವ ಸಮಗ್ರವಾಗಿದೆ. ಶಿಥಿಲವಾಗಿದೆ. ಬರೆವಣಿಗೆ ಸಾಮಾನ್ಯ. ತಪ್ಪುಗಳಿವೆ. ಗ್ರಂಥ ಪಾತವಿಲ್ಲ. ಕವಿ ಜಕ್ಕಣನಾಯಕ ಅಥವಾ ಜಕ್ಕಭೂಪಾಲ.

No. 118. ಭಾರತಕಥಾಸಂಗ್ರಹ.

BHĀRATAKATHĀSAṄGRAHA.

Substance, palm-leaf. Size, $11\frac{1}{4}'' \times 1''$. Pages, 15. Lines, 5 on a page. Character, Kanarese. Condition, injured. Appearance, old. Mode of writing, not good, and not free from mistakes.

Contains the Udyōgaparva complete.

By Jakkaṇanāyaka.

Beginning:

ಕೇಳೈ! ಜನಮೇಜಯ ರಾಯ! ಅಭಿಮನ್ಯುವಿನ ವಿವಾಹವಾದ ಬಳಿಕ ಶ್ರೀಕೃಷ್ಣದೇವರು ದ್ರುಪದ ವಿರಾಟ ಬಲರಾಮ ಸಾತ್ಯಕಿ ಮತ್ತು ಕೆಲವು ನೆಂಟರು ಇಷ್ಟರು ಸಹಿತ ಪಾಂಡವರ ಓಲಗದಲ್ಲಿ ಕುಳಿತು ಇದ್ದಾಗ ಶ್ರೀಕೃಷ್ಣನು ಒಂದು ಮಾತನ್ನು ಬುದ್ಧಿಗಲಿಸಿದರು. ಇಷ್ಟು ದಿನವೂ ಪಾಂಡವರು ವನವಾಸದಲ್ಲಿ ನಡೆದರು, ಅವರಿಗೆ ಏನುಗತಿ ಎಂದರೆ ಬಲರಾಮನು ಕೌರವನಲ್ಲಿ ತಪ್ಪಿಲ್ಲ. ಇವರು ಜೂಜನಾಡಿ ರಾಜ್ಯವನೆಲ್ಲಾ ತಾವೇ ಸೋತರು ಎಂದರೆ ಸಾತ್ಯಕಿ ಕೋಪಿಸಿಕೊಂಡು ಕೌರವನ ಈಗಲೇ ಕೊಂದು ಬಂದೇನು ಎನಲಾಗಿ ಶ್ರೀಹರಿಯು ಆತನಂ ಸಂತೈಸಿ ನೀವು ಹಸ್ತಿನಾಪುರಕ್ಕೆ ದೂತರನ್ನು ಕಳುಹಿಸಿ, ನಿಮ್ಮ ರಾಜ್ಯವನ್ನು ಬೇಡಿಸಿ, ಭೀಷ್ಮಾದಿಗಳಿಗೆ ಹೇಳಿ ಕಳುಹಿಸಿ ಆತನ ನೆಲೆಯನರಿವುದು. ಅಲ್ಲಿಂದ ಮೇಲೆ ಧರಣಿಯ ಕೊಡೆ ನೆಂದರೆ ಕಾದುವುದು ಇದೇ ಮತವೆಂದು ಬುದ್ಧಿಗಲಿಸಿ ಮತ್ತೆ ಕರೆಸಿದರೆ ನಾವು ಬಂದೇವೆಂದು ಹೇಳಿ ದ್ವಾರಕಾಪುರಕ್ಕೆ ಬಿಜಯಂ ಗೈದರು.

* * * *

ಪಾಂಡವರಿಗೆ ಏಳು ಅಕ್ಷೋಹಿಣಿ ನೆರೆಯಿತು. ಕೌರವರಿಗೆ ಹನ್ನೊಂದು ಅಕ್ಷೋಹಿಣಿ ನೆರೆಯಿತು. ಕೌರವನು ಶ್ರೀಕೃಷ್ಣದೇವರನ್ನು ಕೂಡಿಕೊಳ್ಳಬೇಕೆಂದು ದ್ವಾರಕಾಪುರಿಗೆ ಬಂದನು. ಈ ಬೇಹಿನವರರಿತು ಪಾಂಡವರಿಗೆ ಹೇಳಿದರೆ ಅರ್ಜುನನು ದ್ವಾರಕಾಪುರಕ್ಕೆ ಕೌರವಂ

ವಂಟು ಹೋದನು. ಶ್ರೀಕೃಷ್ಣದೇವರು ಪವಡಿಸಿಕೊಂಡು ಇರಲಾಗಿ ಉಭಯರಾಯರುಗಳೂ ಬಂದು ಕುಳಿತು ಇರಲಾಗಿ ಶ್ರೀ ಲಕ್ಷ್ಮೀಕಾಂತನು ಉಪವಡವಾಗಿ (?) ಉಭಯರಾಯರುಗಳು ತಮ್ಮ ಕಾರ್ಯಗಳನ್ನು ಬಿನ್ನಹಮಾಡಿಕೊಳ್ಳಲಾಗಿ, ಶ್ರೀ ಕೃಷ್ಣದೇವರು ನೀವು ಇತ್ತಂಡವು ಸಂವಾದವು ಬೇಡ ಕೂಡಿ ಇರಿ ಎಂದು ಬುದ್ಧಿಗಲಿಸಿದರೆ ಕೌರವನು ನಿಮ್ಮ ಧರ್ಮ ಶ್ರವಣವನ್ನು ಕೇಳ ಬಂದವರಿಲ್ಲ. ನೀವು ಇತ್ತಂಡಕ್ಕೂ ಸರಿಯಾಗಿರಬೇಕು. ಎಂದು ಎನಲಾಗಿ, ಶ್ರೀ ಕೃಷ್ಣದೇವರು ಕೌರವ! ಬರೇ ಒಂದು ಕಡೆಯಾಗಿ ಇದ್ದೇವು. ಬಲಭದ್ರದೇವರು ಯಾದವಸೇನೆಯೆಲ್ಲವೂ ಒಂದು ಕಡೆಯಾಗಿ ಇವೆ. ನಿಮ್ಮ ಮನಸ್ಸಿಗೆ ಬಂದವರ ತೆಗೆದುಕೊಳ್ಳಿ ಎಂದರೆ, ಅರ್ಜುನನು ಆ ದಳವ ತೆಗೆದುಕೊಂಡರೆ ಇಷ್ಟಕ್ಕೆ ತಕ್ಕ ಸಂವರಣೆಯಿಲ್ಲ, ರಾಜ್ಯದೇಶ ಮೊದಲೇ ಇಲ್ಲ ನೀವೇ ನನಗೆ ಹತ್ತುಕೋಟಿ ಎನಲಾಗಿ ಕೌರವನು ಬಲಭದ್ರದೇವರು ಮೊದಲಾಗಿ ಆ ಸೇನೆಯೇ ಎನಗೆ ಸಾಕು. ನೀವು ಕೈಯಲ್ಲಿ ಆಯುಧಹಿಡಿಯಕೂಡದು ಎಂದು ಭಾಷೆಯನ್ನು ತೆಗೆದುಕೊಂಡು ಹೋದನು.

End:

ಪಾಂಡವರ ಪಾಳೆಯಕ್ಕೆ ಕೃಷ್ಣಸ್ವಾಮಿಯು ಬಂದು ಕೌರವರು ಸಂಧಾನವನೊಡಂಬಡರು. ನೀವು ಇನ್ನು ಕಾಳಗಕ್ಕೆ ಅನುವಾಗಿ ನಡೆಯಬೇಕು ಎಂದು ಹೇಳ ಧೃಷ್ಟದ್ಯುಮ್ನನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿ ಶ್ರೀ ಲಕ್ಷ್ಮೀಕಾಂತನು ಯುಧಿಷ್ಟಿರನು ಭೀಮಾರ್ಜುನ ನಕುಲ ಸಹದೇವ ಅಭಿಮನ್ಯು ಘಟೋತ್ಕಜ ದ್ರೌಪದಿಯ ಸುತರು ಸುಕರ್ಣ, ಸೋಮ, ಪ್ರತೀಂದ್ರ, ಶ್ರುತಕೀರ್ತಿ, ಶ್ರುತಸೇನ, ಶತಾನೀಕ ಮೊದಲಾದ ಕುಮಾರರು ವಿರಾಟದ್ರುಪದ ಕೊಂತಿಯ ಭೋಜ ಕೈಕೇಯ ಸೃಂಜಯರು ಸೋಮಕರು ಚೋಳಪಾಂಡ್ಯ ಚೇರಳ ಚೈದ್ಯ ಮಾಗಧ ಯಾದವರ ಮೂಲಬಲ ಸಹಿತವಾಗಿ ಪಯಣವಾಗಿ ಪಯಣಗತಿಗಳಲ್ಲಿ ತೆರಳಬರುತ್ತ ಇದ್ದರೆ ಕುರುಕ್ಷೇತ್ರನೆಂಬ ಸರಸ್ವತೀತೀರದಲ್ಲಿ ಬೀಡುಬಿಟ್ಟರು. ಅಲ್ಲಿಂದ ಕೌರವನ ಬಳಿಗೆ ದೂತರನ್ನು ಕಳುಹಿಸಿದರೆಂಬ ಕಥೆಯನ್ನು ಹೇಳಿದನು ಎಂದು ವೈಶಂಪಾಯನ ಮಹಾಮುನಿಯು ಜನಮೇಜಯನಿಗೆ ಹೇಳಿದನೆಂಬುದು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮಹಾಮುನಿಗಳಿಗೆ ಸೂತಪೌರಾಣಿಕರು ಹೇಳುತ್ತಾ ಇದ್ದರೆಂಬುದು ಉದ್ಯೋಗಪರ್ವದ ಕಥೆಯು ಸಮಾಪ್ತಿಯು.

Colophon:

ಇತಿ ಉದ್ಯೋಗಪರ್ವಂ ಸಂಪೂರ್ಣಂ.—

(ಪಿ-ವಿ.)—

ಉದ್ಯೋಗಪರ್ವ ಸಂಪೂರ್ಣವಾಗಿದೆ. ಶಿಥಿಲವಾಗಿದೆ. ಬರೆವಣಿಗೆ ಚೆನ್ನಾಗಿಲ್ಲ. ತಪ್ಪುಗಳುಂಟು. ಗ್ರಂಥ ಪಾತವಿಲ್ಲ. ಕವಿ ಜಕ್ಕಣನಾಯಕ ಅಥವಾ ಜಕ್ಕ ಭೂಪಾಲನೆಂಬುವನು.

No. 119. ಭಾರತ ಕಥಾ ಸಂಗ್ರಹ.

BHĀRATAKATHĀ SAṄGRAHA.

Substance, palm-leaf. Size, 11¼ × 1 inches. Pages, 29. Lines 5 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Bhīṣmaparvacomplete.

By Jakkaṇanāyaka.

Beginning :

ಕೇಳೈ ! ಜನಮೇಜನರಾಯ ! ಪಾಂಡವರು ಬಂದು ಕುರುಕ್ಷೇತ್ರದಲ್ಲಿ ಬಿಟ್ಟು ಕೌರವರಾಯನ ಬಳಿಗೆ ಭಟರನ್ನು ಕಳುಹಿಸರೆ ಕೌರವನು ತನ್ನ ಮಂತ್ರಿಗಳು ದ್ರೋಣ, ಕೃತವರ್ಮ ಸೈಂಧವ, ಶಕುನಿ, ದುಶ್ಶಾಸನ ಮೊದಲಾದ ದುಷ್ಟಚತುಷ್ಟಯವ ಕೂಡಿಕೊಂಡು ಏಕಾಂತದಲ್ಲಿ ಕುಳಿತು ಮಂತ್ರಿಗಳ ಕೇಳಿದರೆ ಒಂದು ವಿನೋದ ಮಾಡಿದರು.

ಕಾಡಲ್ಲಿದ್ದ ಪಾಂಡವರು ಹುಲ್ಲುನೃಪರಂ ಕೂಡಿಕೊಂಡು ಕಿರುದಳ ಸಹಿತ ಬಂದು ಕುರುಕ್ಷೇತ್ರದಲ್ಲಿ ಅಂಜದೆ ಅಧಟತದಲ್ಲಿ ತಮ್ಮನು ಕಾಳಗಕ್ಕೆ ಕರೆಯಾ ಕಳುಹಿಸಿರುವರು, ಎಂಬ ಮಾತನ್ನು ಕೇಳಿ ಇದೇನು ದೊಡ್ಡಿತವಮಾಡುತ್ತಾ ಇದೆ. ಪಾಂಡವರ ಬಲವನ್ನು ಬಲಿಗೈದು ಬಂಡಿ ಬಂಡಿಯಲ್ಲಿ ತಲೆಯನ್ನು ಹೂಡಿಸುವೆನು ಎಂದು ಪಾಂಡವರು ಐವರು ಅವರ ನೆಂಟರು ಇಷ್ಟರು ಸಹಿತ ಘೋರ ಕಾಲದಲ್ಲಿ ಇಕ್ಕುವೆನು. ಈ ನೊರಜುಗಳು ನನಗೆ ಸರಿಯೇ ಎಂದ ಕರ್ಣನ ಮಾತನ್ನು ದ್ರೋಣಾಚಾರ್ಯರು ಕೇಳಿ ಮೂಗಿನಮೇಲೆ ಬೆರಳನ್ನು ಇಟ್ಟುಕೊಂಡು ತಲೆದೂಗಿ ಕರ್ಣನಾಗಳೇ ಪಾಂಡವರನ್ನು ಕೊಂದನು. ಇನ್ನು ಆರಕೂಡೆ ಜಗಳ ಪಾಂಡವರು ಅಡವಿಯವರು ನೆರೆದ ಅರಸುಗಳೆಲ್ಲರೂ ಹುಲ್ಲು ಮಂಡಲೀಕರು ಅವರ ಹತ್ತಿರಪಿರುವ ಶ್ರೀ ಕೃಷ್ಣನು ಗೋವಳನು. ಅವರ ಕೂಡ ಕಾದುವುದೇ ಕರ್ಣನ ಪರ್ಯಂತರವೇಕೆ. ನಿನ್ನ ಊರತಳವಾರರ ಬಿಟ್ಟು ಕಾದಿಸು ಎಂದು ಜರಿದು ದ್ರೋಣಾಚಾರ್ಯರು ಒಂದು ಮಾತನಾಡಿದರು.

* * *

ಆ ಕ್ಷಣವೇ ಓಲಗಕ್ಕೆ ಬಂದು ಜೋಯಿಸರಂ ಕರೆಯಿಸಿ (ಭೀಷ್ಮನಿಗೆ) ಸೇನಾಧಿಪತಿಪಟ್ಟವನ್ನು ಕಟ್ಟಿದರು. ಸಕಲರಾಯರುಗಳೂ ಸಾಮಂತರುಂರೂ, ಮಂಡಲೀಕರೂ ಬಂದು ಕಾಣಿಕೆಯನ್ನು ಇಕ್ಕಿ ಕಂಡರು. ಭೀಷ್ಮನು ರಾಜತೇಜದಲ್ಲಿ ಸೂರ್ಯಪ್ರಕಾಶದಲ್ಲಿ ಒಪ್ಪುತ್ತಾ ಇದ್ದರು. ಆ ವೇಳೆಯಲ್ಲಿ ಕರ್ಣನು ಕೌರವನಂ ಕಂಡು ಎಲೈ ಹುಚ್ಚಾ ! ಅರಸಿ ಈಗ ಸಾವ ವೃದ್ಧನಂ ತಂದು ಸೇನಾಧಿಪತಿಪಟ್ಟವನ್ನು ಕಟ್ಟುವರೆ. ಇದನ್ನು ಕಂಡು ಪಾಂಡವರು ಬಿಲ್ಲಲೇ ಬಡಿದಾರು. ನಗೆಗೇಡೆಯನ್ನು ಮಾಡಿದೆ· ಹಿಂದೆ ಶ್ರೀರಾಮನೆಂಬುವನು ಜಾಂಬವನೆಂಬ ವೃದ್ಧನಿಗೆ ಪಟ್ಟವನ್ನು ಕಟ್ಟಿದರು. ಇವರ ಇಬ್ಬರ ಮುಂದೆ ಸೇನಾಧಿಪತಿಪಟ್ಟಕ್ಕೆ ಇನ್ನಾರುಂಟು ಧೀರರು, ಎಂದು ನಾನಾಪರಿಯಲ್ಲಿ ಜರಿಯಲಾಗಿ ದ್ರೋಣಾಚಾರ್ಯರು ಕರ್ಣನ ಕೂಡೆ ನಿನ್ನ ಹವಣೆ ನೋಡಿ ಮಾತನಾಡು ಭೀಷ್ಮರನ್ನೂ .ಜಾಂಬವರನ್ನೂ ಜರಿವ ಗರ್ವ ನಿನಗೆ ಎನ್ನಲಾಗಿ, ಭೀಷ್ಮರು ಇವನು ಜರಿದರೇನಾಯಿತು. ಇವನು ನೊರಜು. ಇವನನ್ನು ಒರಸಿ ಬಿಡುವ ದಾರಿಯಿದೆ· ಕೇಳಿರೈ ! ಪರಿವಾರಗಳಿರಾ ! ಪಾಂಡವರ ಬಲದಲ್ಲಿ ದಿನವೊಂದಕ್ಕೆ ಹತ್ತು ಸಾವಿರ ಮಕುಟವರ್ಧನರನ್ನು ಕೆಡಹುವೆನು. ಹರಿಯ ಚಕ್ರವನ್ನು ತುಡುಕಿಸುವೆನು. ಅರ್ಜುನನ ರಥವನ್ನು ಹಿಂದು ಮುಂದು ಮಾಡುವೆನು. ಭೀಮಾದಿಗಳ ಹರಿದು ಓಡಿಸುವೆನು, ಎಂಬು ನುಡಿದರೆ ಕೌರವನು ಸಂತೋಷಪಟ್ಟನು.

End :

ಆ ರಾತ್ರಿ ಭೀಷ್ಮರು ಇರುವ ಬಳಿಗೆ ಗಾಳಿಮಂಟಪವಾಗಿರುವ ಪರಕೆಯನ್ನು ಕಟ್ಟಿಸಿದನು. ಅಲ್ಲಿಗೆ ಕಾವಲ ಮಂದಿಯನ್ನು ಇಕ್ಕಿದನು. ಕೇಳೈ ! ಜನಮೇಜಯಮಹಾರಾಯ ಕೌರ

ವರು ಕುರುಕ್ಷೇತ್ರಕ್ಕೆ ತೆರಳಿ ಬಂದ ಬಳಿಕ ಧೃತರಾಷ್ಟ್ರನು, ಮಕ್ಕಳು ಏನಾದರೋ ಎಂದು ಶೋಕಿಸಲಾಗಿ ವ್ಯಾಸದೇವರು ಬಂದು ಸಂಜಯನಂ ಕರೆದು ರಣದೊಳಗಣ ವೃತ್ತಾಂತವು ನಿನಗೆ ತಿಳಿಯಲಿ ಎಂದು ವರವನ್ನು ಕೊಟ್ಟು, ಸಂಜಯನು ಭೀಷ್ಮರ ಹತ್ತು ದಿನಗಳ ಜಗಳವನ್ನು ವಿಸ್ತಾರವಾಗಿ ಹೇಳಿ ಮತ್ತೆ ರಣದೊಳಕ್ಕೆ ಬಂದನು. ಹೀಗೆ ವೈಶಂಪಾಯನಮುನಿ ಜನಮೇಜಯನಿಗೆ ಹೇಳಿದನೆಂದು ನೈಮಿಶಾರಣ್ಯವಾಸಿಗಳಾದ ಶೌನಕಾದಿಮಹಾಮುನಿಗಳಿಗೆ ಸೂತ ಪೌರಾಣಿಕನು ಹೇಳುತಾ ಇದ್ದನೆಂಬುದು ಭೀಷ್ಮಪರ್ವದ ಕಥೆಯು ಮಂಗಳವು.

Colophon:

ಇದು ಭೀಷ್ಮಪರ್ವವು.—

(ವಿ-ಪಿ.)—

ಭೀಷ್ಮಪರ್ವವು ಸಮಗ್ರವಾಗಿದೆ. ಶಿಥಿಲ. ಬರೆವಣಿಗೆ ಉತ್ತಮವಲ್ಲ. ತಪ್ಪುಗಳಿವೆ. ಗ್ರಂಥಪಾತ್ರವಿಲ್ಲ. ಕವಿಯು ಜಕ್ಕಣನಾಯಕ ಅಥವಾ ಜಕ್ಕ ಭೂಪಾಲನೆಂಬುವನು.

No. **120**. ಭಾರತ ಕಥಾ ಸಂಗ್ರಹ-

BHĀRATA KATHĀ SAṄGRAHA.

Substance, palm-leaf. Size, 11¼ × 1 inches. Pages, 33. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Drōṇaparva complete.

Similar to the work described under No. 100 *ante*; by Jakkaṇanāyaka.

Beginning:

ಕೇಳ್ಳೈ ! ಜನಮೇಜಯ ರಾಯ ! ದ್ರೋಣನ ಕಾಳಗದಲ್ಲಿ ಐದುದಿನ ಕಾಳಗದೊಳಗೆ ಇದ್ದು ಸಂಜಯನು ದ್ರೋಣನು ಸೇನಾಧಿಪತಿತ್ವವ ಮಾಡಿದ ಬಳಿಕ ಧೃತರಾಷ್ಟ್ರರಾಯನ ಬಳಿಗೆ ಬಂದು ದ್ರೋಣನ ಮರಣವಾರ್ತೆಯನ್ನು ಹೇಳಲಾಗಿ ಧೃತರಾಷ್ಟ್ರನು ಶೋಕಿಸಿ ಮೈಮರೆಯಲಾಗಿ ಸಂಜಯನು ನಿನ್ನ ಮಕ್ಕಳಿಗೆ ಹಿಂದಕ್ಕೆ ಉತ್ಸಾಹಕೊಟ್ಟು ಇನ್ನು ಮರುಗಿದರುಂಟೆ ಎಂದು ನಾನಾಪರಿಯಲ್ಲಿ ತಿಳಿಯ ಹೇಳಿ ಧೃತರಾಷ್ಟ್ರನ ಶೋಕವನ್ನು ನಿಲಿಸಿದನು. ಧೃತರಾಷ್ಟ್ರನು ದ್ರೋಣಾಚಾರ್ಯರು ಐದು ದಿನದೊಳಗೆ ಕೊರತೆಯೇನು. ಸಾರಥಿ ಆಳಿ ಕೊಂಡವರಾರು ಅವರ ಕಾಳಗದೊಳಗೆ ನಿಮ್ಮಲ್ಲಿ ಆರಾರು ಮಡಿದರೆಂಬುದನ್ನು ವಿಸ್ತಾರವಾಗಿ ಹೇಳು ಎಂದರೆ ಸಂಜಯನು ಕೇಳ್ಳೈ ! ಧೃತರಾಷ್ಟ್ರರಾಯನೆ ! ಸರಳಮಂಚದಲ್ಲಿ ಮಲಗಿದ ಬಳಿಕ ಭೀಷ್ಮರ ಕೈಯಿಂ ಕಳುಹಿಸಿಕೊಂಡು ಪಾಂಡವರು ಹೋದರು. ಕೌರವರು ತಮ್ಮ ಪಾಳೆಯಕ್ಕೆ ಬಂದು ಮಂತ್ರಿಗಳು ಸಹಿತ ಇರುಳಿನೋಲಗದಲ್ಲಿ ಕುಳಿತು ಇದ್ದು ದುಗುಡದಲ್ಲಿ ಚಿಂತಿಸುತ್ತಾ ಇರಲಾಗಿ ಕರ್ಣನು ಓಲಗಕ್ಕೆ ಬಂದು ಕೌರವನು ದುಗುಡವನ್ನು ಕಂಡು ಇದೇನು ಅರಸೇ ! ನಿನಗೆ ದುಗುಡವೇಕೆ. ಒಬ್ಬರು ಭೀಷ್ಮರು ಹೋದರೆ ಇನ್ನೂ ಏಕೈಕವೀರರು

ನಿನ್ನ ಹತ್ತಿರವೇ ಇದಾರೆ. ಪಾಂಡವರ ಕಾಳಗವನ್ನು ಗೆಲ್ಲುವೆನೆಂದು ಆಡಲಾಗಿ ಪರಿವಾರ ವೆಲ್ಲವೂ ಕರ್ಣನನ್ನು ಕೊಂಡಾಡಿತು. ಕರ್ಣನು ನಾನೇ ಕಾದುವೆನು. ಭೀಷ್ಮರ ಕೂಡೆ ಸಂವಾದಿಸಿ ಇದ್ದೇನೆ. ಅವರ ಬಳಿಗೆ ಹೋಗಿ ಭೀಷ್ಮರ ಸಂತೈಸಿ ಬಂದೇನು ಎಂದು ಬಹಳ ಮಂದಿಯ ಸಂದಣಿಯಲ್ಲಿ ಕೈದೀವಟಿಗೆಯಿಂದ ಭೀಷ್ಮರ ಸರಳಮಂಚದ ಬಳಿಗೆ ಬಂದು ಆತನ ಪಾದದಮೇಲೆ ಬಿದ್ದು ಕಣ್ಣೀರಿನಿಂದಲೂ ಪಾದವನ್ನು ತೊಳೆದು (ತೊಳೆಯಲಾಗಿ) ಭೀಷ್ಮರು ಎಚ್ಚತ್ತು ಕರ್ಣನಿಗೆ ಬುದ್ಧಿಗಲಿಸಿವರು.

* * * *

ಇರುಳಿನ ಓಲಗದಲ್ಲಿ ಕೌರವನು ಬಂದು ಧರ್ಮಪುತ್ರನಂ ಹಿಡಿದು ತಂದುದಿಲ್ಲ ಎಂದರೆ ನಾವು ಹಿಡಿವುದಕ್ಕೆ ಸಮೀಪಕ್ಕೆ ಸರಿದೆವು. ಅಷ್ಟರಲ್ಲಿ ಕೃಷ್ಣಾರ್ಜುನರು ಬಂದು ಅಡ್ಡೈಸಿ ತಡೆದರು. ಎಂದರೆ ಸಮಸಪ್ತಕರು ಎದ್ದು ನಿಂತು ಮೊದಲಾಗಿ ಅರ್ಜುನನ ನಿಮ್ಮ ಕಡೆಗೆ ಬಾರದಹಾಗೆ ನಾವೇ ಕಾದುವೆವು ಎಂದು ಭಾಷೆಯನ್ನು ಕೊಟ್ಟು ತಮ್ಮೊಳಗೆ ತಾವೇ ಬಿಟ್ಟು ಹೋಗದ ಹಾಗೆ ಅಗ್ನಿಸಾಕ್ಷಿಯಾಗಿ ಭಾಷೆಯನ್ನು ಮಾಡಿಕೊಂಡರು. ಆ ಮರು ದಿನದ್ರೋಣಾಚಾರ್ಯರು ಒಂದು ಮೋಹರ ಸಮಸಪ್ತಕರು ಒಂದು ಮೋಹರ ಹಾಗೆ ಎರಡು ಮೋಹರವು ಪಾಂಡವರ ಬಲವನ್ನು ಹೊಕ್ಕು ಧರ್ಮಪುತ್ರನಂ ಹಿಡಿಯಬರಲಾಗಿ ಅಲ್ಲಿ ಪಾಂಚಾಲನಾಯಕರು ಮೊದಲಾದ ದೊರೆಗಳು ದ್ರೋಣನ ತರುಬುತ್ತಾ ಕಾದುತ್ತಾ ಬಂದರು. ಆಗ ಕೌರವನ ದಳದಲ್ಲಿ ಅಂಗ ವಂಗ ವರಾಳ ಕಾಳಿಂಗರು ಅನೇಕ ಆನೆಯ ಮೋಹರ ಸಹಿತ ಬಂದರೆ ಪಾಂಡವರ ಬಲ ಬೆದರಿತು. ಆಗ ಭೀಮಸೇನನು ಆನೆಯಿಂ ಕೊಂದು, ಆನೆ ಯೆತ್ತಿಕೊಂಡು ರಥವನಿಟ್ಟು, ರಥವ ತೆಗೆದುಕೊಂಡು ಕುದುರೆಯನಿಟ್ಟು, ರಾವುತರ ಕಾಲಲ್ಲಿ, ಒರಸಿ ಕಾಲಾಳಹಾರಲಾದಿ ಅನೇಕ ಅರಸುಗಳನ್ನು ಕೊಂದನು. ಆಗ ಕೌರವನು ಸರ್ವದಳಸಹಿತ ಬಂದು ಕಾದಲಾಗಿ ಆತನ ತಮ್ಮಂದಿರು ಹತ್ತು ಮಂದಿಯನ್ನು ಎತ್ತಿ ದೂರಕ್ಕೆ ಇಟ್ಟನು.

End :

ಶ್ರೀ ಕೃಷ್ಣದೇವರು ಭೀಮನ ಕರೆದು ಅಶ್ವತ್ಥಾಮ ಹತನಾದನೆಂದು ಹೇಳಿದರೆ ಭೀಮನು ಬಂದು ದ್ರೋಣಾಚಾರ್ಯರ ಕೂಡೆ ಹೇಳಲಾಗಿ ಆತನ ಮಾತನಂಬದೆ, ಧರ್ಮಪುತ್ರನು ಬಂದು ಹೇಳಲಾಗಿ 'ಅಶ್ವತ್ಥಾಮೋಹತಃ ಕುಂಜರಃ' ಎಂಬ ತಾವಿನಲ್ಲಿ ಶ್ರೀ ಕೃಷ್ಣನು ಶಂಖಧ್ವನಿಯಂ ಮಾಡಲಾಗಿ 'ಕುಂಜರ' ಶಬ್ದವ ಕೇಳದೆ ಮಗ ಅಳಿದನೆಂದು ತಿರುಗಿ ಕಾದುತಾ ಇರಲಾಗಿ ಮೇಲೆ ಸಪ್ತರ್ಷಿಗಳು ಬಂದು ಬ್ರಾಹ್ಮಣರಿಗೆ ಇಷ್ಟು ವೀರಾವೇಶದ ಕಾಳಗ ಸಲ್ಲದು ಎಂದು ಬುದ್ಧಿಯನ್ನು ಹೇಳಲಾಗಿ ಈತನು ಸಮಾಧಿಯಲ್ಲಿ ಕುಳಿತು ಪ್ರಾಣವನ್ನು ಬಿಡುವ ಸಮಯದಲ್ಲಿ ಅಶ್ವತ್ಥಾಮನು ಬಂದು ನಾರಾಯಣಾಸ್ತ್ರವನ್ನು ಪ್ರಯೋಗಿಸಲಾಗಿ ಅದು ಪ್ರಳಯಾಗ್ನಿಯಾಗಿ ಪಾಂಡವರ ದಳಕ್ಕೆ ಕವಿಯಲಾಗಿ ಶ್ರೀ ಕೃಷ್ಣನು ತಮ್ಮ ಬಲವನೆಲ್ಲಾ ನಿರಾಯುಧರ ಮಾಡಿ ನಾರಾಯಣಾಸ್ತ್ರವನ್ನು ತನ್ನೊಳಗೆ ಐಕ್ಯವನ್ನೂ ಮಾಡಿಕೊಂಡನು. ಆಗ ಪಾಂಡವರ ರಕ್ಷಿಸಿದನು. ಆಗ ಕರ್ಣನಿಗೆ ಸೇನಾಧಿಪತಿಪಟ್ಟವನ್ನು ಕಟ್ಟಬೇಕು ಎನುತ್ತಾ ಇದ್ದರು ಎಂದು ಸಂಜಯನು ಧೃತರಾಷ್ಟ್ರರಾಯಗೆ ಹೇಳಿ ತಾನು ರಣದೊಳಕ್ಕೆ ಬಂದನು. ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಹೇಳಿದನೆಂದು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮುನೀಂದ್ರರಿಗೆ ಸೂತ ಪೌರಾಣಿಕನು ಹೇಳುತ್ತಾ ಇದ್ದನೆಂಬುದು ದ್ರೋಣಪರ್ವ ಕಥಾ ಪ್ರಸಂಗ ಸಮಾಪ್ತಿಯು.

Colophon :

ಇತಿ ದ್ರೋಣಪರ್ವಂ ಸಮಾಪ್ತಂ.

ದ್ರೋಣಾಚಾರ್ಯರಿಗೆ ಕಾರ್ತಿಕ ಬ॥ ೪ ದಿನ ಪಟ್ಟವ ಕಟ್ಟಿದರು. ಬ॥ ೧೦ ದಿನ ಮಧ್ಯಾಹ್ನಕ್ಕೆ ಮರಣವಾಯಿತು.

(ವಿ-ವಿ.)—

ದ್ರೋಣಪರ್ವ ಸಮಗ್ರವಾಗಿದೆ. ಶಿಥಿಲ. ಬರೆವಣಿಗೆ ಶ್ಲಾಘ್ಯವಲ್ಲ. ತಪ್ಪುಗಳವೆ. ಗ್ರಂಥಪಾತವಿಲ್ಲ. ಕವಿಯು ಜಕ್ಕಣನಾಯಕ ಅಥವಾ ಜಕ್ಕ ಭೂಪಾಲನೆಂಬುವನು.

No. 121. ಭಾರತ ಕಥಾ ಸಂಗ್ರಹ.

BHĀRATA KATHĀ SAṄGRAHA.

Substance, palm-leaf. Size, 11¼ × 1 inches. Pages, 31. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Karṇaparva complete.

Similar to the work described under No. 101 *ante*; by Jakkaṇanāyaka.

Beginning :

ಕೇಳೈ! ಜನಮೇಜಯ ಮಹಾರಾಯ! ಸಂಜಯನು ಕೌರವನ ಪಾಳೆಯದಿಂದ ಹಸ್ತಿನಾಪುರಕ್ಕೆ ಬಂದು ಧೃತರಾಷ್ಟ್ರನಿಗೆ ಕರ್ಣನ ಮರಣವಾರ್ತೆಯನ್ನು ಹೇಳದರೆ ಆತನು ಶೋಕಿಸಿ ಅರಮನೆಯ ರಾಣಿವಾಸವೆಲ್ಲವೂ ಶೋಕಿಸಿ ಪಟ್ಟಣವೆಲ್ಲವೂ ಗಜಬಜಿಸಲಾಗಿ ಸಂಜಯನು ಎಲ್ಲರನ್ನೂ ಸಂತೈಸಿದ ಬಳಿಕ ಧೃತರಾಷ್ಟ್ರನು ಸಂಜಯನ ಕೂಡೆ ಕರ್ಣನು ಮಾಡಿದ ಸ್ಥಿತಿಯನ್ನೂ, ಆತನ ಕಾಳಗವನ್ನೂ ವಿಸ್ತಾರವಾಗಿ ಹೇಳು ಎಂದರೆ ಕೇಳೈ! ಅರಸೆ! ಕರ್ಣನಿಗೆ ಸೇನಾಧಿಪತಿಪಟ್ಟವನ್ನು ಕಟ್ಟಿದರು. ಆ ಮರುದಿನ ಕರ್ಣನು ರಣದ ಆಯಕಟ್ಟನ್ನು ನೋಡಿ ತನ್ನ ದಳವನ್ನು ಪೋಹರಿಸಿದನು ಆಗ ಪಾಂಡವರೂ ಮೋಹರಿಸಿ ಬಂದರು. ಉಭಯದಳವೂ ಚೂಣಿ ಗಂಟಿಕ್ಕಿ ಮಡಿಯಿತು. ಆಗಕ್ಷೇಮಧೂರ್ತನು ಆನೆಗಳ ಸಹಿತ ಪಾಂಡವರ ದಳವನ್ನು ತಾಗಲಾಗಿ ಭೀಮನು ಗಜಬಲವನ್ನು ಹೊಕ್ಕು ಆನೆಯನ್ನು ಆನೆಯಮೇಲಿಟ್ಟು ಸಂಹರಿಸಿ ಕ್ಷೇಮಧೂರ್ತನೆಂಬ ಅರಸನ್ನು ಕೆಡಹಿದನು. ಕರ್ಣನು ಪಾಂಡವರ ದಳದಲ್ಲಿ ಅನೇಕ ವೀರರನ್ನು ಕೆಡಹಿದನು. ಕೌರವರಾಯನಿಗೂ ಯುಧಿಷ್ಠಿರರಾಯನಿಗೂ ಮಹಾಯುದ್ಧವಾಯಿತು. ಧರ್ಮಪುತ್ರನು ಕೌರವನ ಗೆಲಿದು ಬೊಬ್ಬಿರಿದನು. ಆಗ ಕರ್ಣ ಮೊದಲಾದ ಸರ್ವರುದಳವೂ ಕೌರವನ ಹಿಂದಕ್ಕೆ ಬಂದು ಧರ್ಮಪುತ್ರನಂ ತುರುಬಿದರು. ಆಗ ಪಾಂಚಾಲರು ಬೀಮ ಸಾತ್ಯಕಿ ದ್ರೌಪದಿಯ ಸುತರು ಧರ್ಮರಾಯನ ಹಿಂದಕ್ಕೆ ಬಂದು ಉಭಯದಳದ ದೊರೆಗಳೂ ಹಳಚಿದರು. ಆ ಹೊತ್ತಿಗೆ ಅಸ್ತಮಯವಾಯಿತು.

* * *

ಶಲ್ಯನನ್ನು ಒಡಂಬಡಿಸಿ ಕರ್ಣನಿಗೆ ಸಾರಥಿಯನ್ನಾಗಿ ಮಾಡಿದನು. ಆ ಇರುಳು ಕರ್ಣನು ಶಸ್ತ್ರಪೂಜೆಯನ್ನು ಮಾಡಿದನು. ಆ ಮಾರುದಿನ ಕರ್ಣನು ತನ್ನ ಭಂಡಾರವನ್ನು ವಿಶೇಷವಾಗಿ ದಾನವ ಮಾಡಿದನು. ರಣಕ್ಕೆ ತೆರಳಿ ಬರುವಾಗ ಕಂಡಂಥ ಅವಶಕುನಗಳನ್ನೂ ಲೆಕ್ಕಿಸದೆ ದಳವನ್ನು ಫೌಜು ಮಾಡುವಾಗ ಕರ್ಣನು ತನ್ನ ಪರಾಕ್ರಮವನ್ನು ಕೊಂಡಾಡುತ್ತಿರಲಾಗಿ ಶಲ್ಯನು ಜರಿಯಲಾಗಿ ಇಬ್ಬರಿಗೂ ಮಾತಿನ ಸಂವಾದ ಆಗಲಾಗಿ ಕೌರವನು ಬಂದು ಇಬ್ಬರನ್ನೂ ಸಂತೈಸಿದನು. ಮೇಲೆ ಕರ್ಣನು ಪಾಂಡವರ ಬಲವ ಕೆಣಕಿ ಧರ್ಮಜನ ಮೋಹರಕ್ಕೆ ನಡೆಯಲಾಗಿ ಬೀಮನು ಅಡ್ಡ ಬಂದು ತಾಗಿದರೆ ಕೌರವನಲ್ಲಿ ಮೂವತ್ತು ಸಾವಿರ ಆನೆ ಬರಲಾಗಿ ಅವನ್ನು ಸವರಿ ಕೌರವನ ಮೇಲೆ ಬೀಳಲಾಗಿ ಅಶ್ವತ್ಥಾಮನು ಬೀಮನ ತಾಗುವಾಗ ಆತನ ನಿಲ್ಲಿಸಿ ಕರ್ಣನ ತಾಗುವಾಗ ಬೀಮನಿಗೆ ಪಡಿಬಲನಾಗಿ ಪಾಂಡವರ ಬಲದ ನಾಯಕರೆಲ್ಲ ಬಂದು ಕರ್ಣನ ಹಳಚಿದಲ್ಲಿ ಕರ್ಣನು ಬಲುಪರಾಕ್ರಮವನ್ನು ಆಡುತ್ತಾ (ತೋರುತ್ತಾ) ಹುಯಲಲ್ಲಿ ಅರಸು ಮಕ್ಕಳು ಪಾಂಚಾಲರಲ್ಲಿ ಸತ್ಯಜಿತು ಮೊದಲಾದ ಐವರ ಕೊಂದು ಧರ್ಮಜ ಭೀಮರು ಹೊರತಾಗಿ ಎಲ್ಲರನ್ನೂ ವಿಭಾಡಿಸಿ ಗೆಲಿದನು. ಮತ್ತೆ ಪಾಂಡವರ ಬಲದ ವೀರರು ಸಂವರಿಸಿಕೊಂಡು ಕರ್ಣನನ್ನು ಅರಸುತ್ತಾ ಬರಲಾಗೆ ಕರ್ಣನ ಮಗ ವೃಷಸೇನ ಸುಷೇಣರು ಬಂದು ಪಾಂಡವರ ಬಲವನ್ನು ಬೆಂಬತ್ತಿ ಕಾದುವಾಗ ಬೀಮನು ಒಂದು ಸುಷೇಣನನ್ನು ಕೆಡವಿದನು.

End:

ಕರ್ಣನು ಅರ್ಜುನನ ಮೇಲೆ ಸರ್ಪಬಾಣವನ್ನು ತೊಡಲಾಗಿ ಆ ಮೃತ್ಯುಬಾಣವನ್ನು ಕಂಡು ದೇವತೆಗಳು ವ್ಯಾಕುಲಪಡುತ್ತಾ ಇರಲಾಗಿ ಇತ್ತ ಅರ್ಜುನನ ಕೆಲಸವು ಹರುವಾಯಿತು ಎಂದು ಕೌರವ ದಳವು ಬೊಬ್ಬಿಡುತ್ತಾ ಇದ್ದಿತು. ಪಾಂಡವರ ಬಲ ಮೊರೆಯಿಡುತ್ತಾ ಇದ್ದಿತು. ಆಗ ಶ್ರೀಕೃಷ್ಣನು ಅರ್ಜುನನ ರಥವನ್ನು ಕುಸಿಯಲೊತ್ತಿ ಮೆಟ್ಟಲಾಗಿ ಸರ್ಪಬಾಣವು ಬಂದು ಮಕುಟವ ತಾಡುಕಿತು. ಅಲ್ಲಿ ಏನನ್ನೂ ಕಾಣದೆ ಕರ್ಣನ ಬಳಿಗೆ ಬಂದು ಮರಳಿ ತೊಡಬೇಕು ಎಂದರೆ ಕರ್ಣನು ತೊಡದೇ ಇರಲಾಗಿ ಬೇಡಾ ಸ್ವಾಮಿದ್ರೋಹವ ಮಾಡ ಬೇಡಾ ಎಂದರೆ ತೊಡಲಿಲ್ಲವಾದ ಕಾರಣ ಶಲ್ಯನು ಮುನಿದು ಹೋಗುವಾಗ, ಬೀಷ್ಮರು ಶಿಖಂಡಿಗೆ ಬೆನ್ನೊಡ್ಡಿ ಸತ್ತರು ದ್ರೋಣನು ಮಗನೆಂಬ ನೆಪದಲ್ಲಿ ಸತ್ತನು. ಕರ್ಣನು ಮರಳಿ ಆ ಅಂಬನ್ನು ತೊಡಹೇಳಿದರೆ ತೊಡದೇ ಹೋದನು. ಕೌರವರಾಯನು ಇವರ ಮೂವರ ನಂಬಿ ಕೆಟ್ಟನು ಎಂದು ಶಲ್ಯನೂ ಕೋಪಿಸಿಕೊಂಡು ಹೋದನು. ಆಮೇಲೆ ಕರ್ಣನು ತಾನೇ ಸಾರಥಿತನವ ಮಾಡಿಕೊಂಡು ಪ್ರತಾಪದಲ್ಲಿ ತಾನೇ ಯುದ್ಧವ ಮಾಡುತ್ತಾ ಇರಲಾಗಿ ಆ ಸಮಯದಲ್ಲಿ ಕರ್ಣನ ರಥವು ನೆಲಕ್ಕೆ ಇಳಿಯಲಾಗಿ ಕರ್ಣನು ಬೆರಗಾಗಿ ರಥದಿಂದ ಇಳಿದು ಮುಳುಗಿದ ರಥವನ್ನು ಎತ್ತುತ್ತಾ ಇರಲಾಗಿ ಶ್ರೀ ಕೃಷ್ಣನು ಅರ್ಜುನನ ಮುಖವನ್ನು ನೋಡಿ ಕರ್ಣನು ಅವೇಳೆಯಲ್ಲಿ ಇದಾನೆ ಬಾಣವತೊಡು ಎಂದರೆ ಅರ್ಜುನನ ಚಿತ್ತದಲ್ಲಿ ಕರುಣ ಹುಟ್ಟಿ ಕರ್ಣನ ಕೇಡಿಗೆ ಒಪ್ಪದೆ ನೆನೆಯದೇ ಇರಲಾಗಿ ನಾನಾಪ್ರಕಾರದಲ್ಲಿ ಬುದ್ಧಿಗಲಿಸಿ ವಿಶ್ವರೂಪವನ್ನು ತೋರಿಸಿ ಕೋಪವನ್ನು ಹುಟ್ಟಿಸಿ ಹಗೆಗೆ ಆಪತ್ತು ಬಂದಾಗಲೇ ಹಗೆಯನ್ನು ಗೆಲ್ಲಬೇಕು ಎಂದು ನೀತಿಗಳನ್ನು ಹೇಳಿ ಒಡಂಬಡಿಸಿದರೆ ಅರ್ಜುನನು ಎಸೆಯಲಾಗಿ ಕರ್ಣನು ಉಡಿಯ ಕಟಾರದಲ್ಲಿ (?) ನಾಲರನು (ಸತ್ತನು) ಎಂದು ವೈಶಂಪಾಯನ ಮಹಾಮುನಿಗಳು ಜನಮೇಜಯಗೆ ಹೇಳಿದನೆಂಬುದು ನೈಮಿಶಾರಣ್ಯವಾಸಿಗಳಾದಂಥ ಶೌನಕಾದಿಮುನೀಂದ್ರರಿಗೆ ಸೂತ ಪೌರಾಣಿಕನು ಹೇಳುತ್ತಾ ಇದ್ದನೆಂಬುವ ಕರ್ಣಪರ್ವದ ಕಥೆಯು ಸಮಾಪ್ತಿ, ಮಂಗಳವು.

Colophon:

ಕರ್ಣಪರ್ವಂ ಸಂಪೂರ್ಣಂ

(ವಿ-ವಿ.)—

ಕರ್ಣಪರ್ವವು ಸಂಪೂರ್ಣವಾಗಿದೆ. ಶಿಥಿಲ. ಲಿಪಿಯು ಉತ್ತಮವಾದುದಲ್ಲ. ತಪ್ಪುಗಳುಂಟು. ಗ್ರಂಥಪಾತವಿಲ್ಲ. ಕವಿಯು ಜಕ್ಕಣ ನಾಯಕ ಅಥವಾ ಜಕ್ಕ ಭೂಪಾಲನೆಂಬುವನು.

No. 22 ಭಾರತ ಕಥಾ ಸಂಗ್ರಹ.
BHĀRATĀKATHĀ SAṄGRAHA.

Substance, palm-leaf. Size, 11¼ × 1 inches. Pages, 13. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Śalya parva complete.

Similar to the work described under No. 103 *ante*; by Jakkaṇa-nāyaka.

Beginning:

ಕೇಳೈ! ಜನಮೇಜಯ ಮಹಾರಾಯ! ಸಂಜಯನು ಮತ್ತೆ ರಣದೊಳಕ್ಕೆ ಬಂದನು. ಕರ್ಣನ ಕೆಡವಿದ ಸಂತೋಷದಿಂದ ವಸಗೆ ವಾದ್ಯಗಳಿಂದ ಭಟರ ಬೊಬ್ಬೆಗಳಿಂದ ಕೈವಾರಿಗಳ ಮೊಹರದಲ್ಲಿ ಅರ್ಜುನನು ಪಾಳಯಕ್ಕೆ ತಿರುಗಿದನು. ಇತ್ತ ಪರವಶವಾಗಿದ್ದ ಕೌರವನಿಗೆ ಗುರು, ಕೃಪನು, ಪಚ್ಚೆಕರ್ಪೂರಗದ ಸಗ್ಗಳಿಗಳಿಂದ ಸಂತೈಗಿ, ಕರ್ಣದುಶ್ಶಾಸನರುಗಳನ್ನು ಭೀಮಪಾರ್ಥರ ಬಸುರಲ್ಲಿ ತೆಗೆವೆನೆಂದು, ಕೌರವನು ಗುರುಸುತನ ನೋಡಿ ನೀವು ಸೇನಾಪತಿ ಪಟ್ಟವನ್ನು ಧರಿಸಬೇಕು ಎಂದರೆ ಆ ಗುರುಸುತನು ರಾಯನನೊಡಂಬಡಿಸಿ ಶಲ್ಯನಿಗೆ ಸೇನಾಧಿಪತಿಪಟ್ಟವನ್ನು ಕಟ್ಟಿದನು. ಆ ಶಲ್ಯನು ಧರ್ಮಪುತ್ರನ ಕೂಡೆ ಕಾದಿ ಗೆಲುವೆನೆಂದು ಪ್ರತಿಜ್ಞೆಯ ಮಾಡಿದನು. ಈ ಸುದ್ದಿಯನ್ನು ಬೇಹಿನವರು ಪಾಂಡವರಿಗೆ ಹೇಳಲಾಗಿ ಆಗ ಧರ್ಮಪುತ್ರನು ಮದ್ರಭೂಪತಿಯ ಕೂಡೆ ಕಾದುವರು ನಮ್ಮೊಳಗೆ ಯಾರು ಎಂದರೆ ಶ್ರೀಕೃಷ್ಣದೇವರು, ಭೀಮಾರ್ಜುನರು ಯಮಳರುಗಳಿಂದ ಹರಿಯದು. ನಮ್ಮ ಕೈಯಲಿ ಅಹುದು ಎಂದರೆ ಧರ್ಮಪುತ್ರನು ನೀವು ಆರೂ ಬೇಡ. ನಮ್ಮ ತಂಮ್ಮಂದಿರು ಇಷ್ಟು ದಿನವೂ ಕಾದಿ ಬಳಲಿದರು. ನಾಳಿನ ಕಾಳಗ ನಮ್ಮದು ಎಂದರೆ ಶ್ರೀಕೃಷ್ಣದೇವರು ಧರ್ಮಜನ ಕೊಂಡಾಡಿದರು.

End:

ಪಾರ್ಥನೊ ಗುರುಸುತನೂ ಎಚ್ಚಾಡುತ್ತಿದ್ದರು. ಮತ್ತೆ ಮದ್ರಪತಿಯೂ ಧರ್ಮಪುತ್ರನೂ ಕಾದುತ್ತಿದ್ದರು. ದಳಪತಿಯ ಮಾರ್ಗಣವನ್ನು ಧರ್ಮಜನು ಕಡಿದನು. ಆಗ ಶಲ್ಯನ ರಥಸಾರಥಿಯನ್ನು ಕಡಿದನು. ಮದ್ರಭೂಪತಿ ತಿರುವಿಗೆ ಖಂಡೆಯವನ್ನು ಸಿಕ್ಕಿಕೊಂಡು ಧರ್ಮಜನ ರಥಕ್ಕೆ ಲಂಘಿಸುವಾಗ ಮೇಲೆ ದೇವತೆಗಳು ಬೆದರಿದರು. ಕೌರವರ

ಬಲವೆಲ್ಲಾ ಹಿಗ್ಗಿತು. ಪಾಂಡವರ ಬಲವೆಲ್ಲವೂ ಓಡಿತು. ಆಗ ಧರ್ಮ್ಮಕುಮಾರನು ಧೃತಿಗೆಡದೆ ಶಕ್ತಿಯಿಂದ ಮದುಭೂಪತಿಗೆ ಇಡಲಾಗಿ ಆ ಗಾಯದಲ್ಲಿಯೇ ಶಲ್ಯನುವ ಪಡಿಸಿದನು. ಆಗ ಪಾಂಡವಕೌರವಬಲವು ಹಳಚಿಕಾದಿದುವು. ಪಾರ್ಥ ಸಮಸಪ್ತಕರ ಕೊಂದನು. ಸಹದೇವನು ಶಕುನಿಯ ಬಿಲ್ಲಸಹಿತ ಕೆಡಹಿದನು. ನಕುಲನು

ಕೊಂದನು. ಹಕ್ಕಲು ಬಲವನ್ನೂ ಮಿಕ್ಕ ಆನೆಯನ್ನೂ ಸುದರ್ಶನನ್ನೂ ಭೀಮನು ಕೊಂದನು. ಮತ್ತೆ ಹಕ್ಕಲಾಗಿ ಮಿಕ್ಕುದನ್ನು ಆನೆ ಸಹಿತ ಕೌರವ ಹೊಕ್ಕು ಪಾಂಡವರ ಬೆಂಬೆಂತ್ತಿ ದೊರೆ ದೊರೆಗಳ ನೋಯಿಸಲಾಗಿ ಅಲ್ಲಿ ಮಿಕ್ಕ ನೂರು ಗಜವನ್ನು ಭೀಮ ಕೊಂದನು. ಆ ಸಂದಣಿಯಲ್ಲಿ ಕೌರವನು ಹೆಗಲಗದೆ ಸಹಿತ ಓಡಹೋಗಿ ವೈಶಂಪಾಯನ ಸರೋವರವನ್ನು ಹೊಕ್ಕನು.

ಇತ್ತ ಪಾಂಡವರು ಕೌರವನನ್ನು ಅರಸುತ್ತಾ ಕಾಳಗದೊಳಗೆ ಸಾತ್ಯಕಿ ಸಂಜಯನ ಹಿಡಿದು ಕೊಲ್ಲುತ್ತಿರಲಾಗಿ ವ್ಯಾಸ ದೇವರು ಬಂದು ಪರಮಶಿಷ್ಯನೆಂಬುದನರಿಯಾ ಎಂದು ಬಿಡಿಸಿದನು. ಆಗ ಸಂಜಯನು ಕೌರವನನ್ನು ಅರಸುತ್ತಾಬಂದು ಕಂಡು ಬುದ್ಧಿಗಲಿಸಿಕೊಂಡು ಪಾಳೆಯವನ್ನು ಹಸ್ತಿನಾಪುರಕ್ಕೆ ತೇಳಸಿಕೊಂಡು ಹೋಗಿ ಧೃತರಾಷ್ಟ್ರರಾಯನಂ ಕಂಡು ಈ ಕಾಳಗದ ಸುದ್ದಿಯನ್ನು ಹೇಳುತ್ತಾ ಇದ್ದನೆಂಬುದು ವೈಶಂಪಾಯನ ಮಹಾಮುನಿ ಜನಮೇಜಯಗೆ ಹೇಳದನೆಂದು ನೈಮಿಶಾರಣ್ಯವಾಸಿಗಳಾಗುತ ಇದ್ದಂಥ ಶೌನಕಾದಿಮುನೀಂದ್ರರಿಗೆ ಸೂತ ಪೌರಾಣಿಕನು ಹೇಳುತ್ತಾ ಇದ್ದನೆಂಬುದೇ ಶಲ್ಯಪರ್ವದ ಕಥೆಯು ಸಮಾಪ್ತಿಯು ಮಂಗಳವು.

Colophon :

ಇತಿ ಶಲ್ಯಪರ್ವಂ ಸಂಪೂರ್ಣಂ.—

(ವಿ. ವಿ.)—

ಶಲ್ಯಪರ್ವ ಸಮಗ್ರವಾಗಿದೆ. ಶಿಥಿಲ. ಬರವಣಿಗೆಯು ಚೆನ್ನಾದುದಲ್ಲ. ತಪ್ಪುಗಳುಂಟು. ಗ್ರಂಥ ಪಾತವಿಲ್ಲ. ಕವಿಯು ಜಕ್ಕಣನಾಯಕ ಅಥವಾ ಜಕ್ಕಭೂಪಾಲನೆಂಬುವನು.

No. 123. ಭಾರತ ಕಥಾ ಸಂಗ್ರಹ-

BHĀRATA KATHĀ SAṄGRAHA.

Substance, palm-leaf. Size, $11\frac{1}{4} \times 1$ inches. Pages, 15. Lines, 4 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Gadāparva complete.

Similar to the work described under No. 105 *ante*; by Jakkaṇanāyaka.

Beginning :

ಕೇಳ್ಳೈ! ಜನಮೇಜಯ ಮಹಾರಾಯ! ಸಂಜಯನು ಧೃತರಾಷ್ಟ್ರ ರಾಯನಿಗೆ ಕೌರವನ ಕಾಳೆಗದ ಪ್ರಸಂಗವನ್ನು ವಿಸ್ತರಿಸಿದನು. ಕೇಳ್ಳೈ! ನೃಪಾಲ! ಗುರುಸುತ, ಕೃಪವರ್ಮ್ಮರು

ಕೌರವೇಶ್ವರನನರಸುತಾ ಬಂದು ಸಂಜಯ ಹೇಳಿದ ದ್ವೈಪಾಯನವನವನ್ನು ಹೊಕ್ಕು ಸರೋವರದಲ್ಲಿ ಮುಳುಗಿದ್ದ ರಾಯನನ್ನು ಕಂಡು ಮಾತನಾಡುತ್ತಿಪ್ಪುದನ್ನು ಭೀಮನ ಮನೆಯ ಬೇಟೆಕಾರರು ಕಂಡು ಬಂದು ಪಾಂಡವರಿಗೆ ಹೇಳಲಾಗಿ ಆಕ್ಷಣವೇ ಬಂದು ಕೊಳನ ಮುತ್ತಿಕೊಂಡು ಮೂದಲಿಸಿ ಕೌರವನಂ ಕೊಳದಿಂದ ಹೊರವಡಿಸಿ ಮಡಿವರ್ಗವನ್ನು ಕೊಟ್ಟು ಭೀಮದುರ್ಯೋಧನರು ಗದಾಯುದ್ಧಕ್ಕೆ ಅನುವಾದರು. ಆಗ ತೀರ್ಥಯಾತ್ರೆಗೆ ಹೋಗಿ ಬಂದ ಬಲರಾಮನು ಬಂದನು. ಕೌರವನನ್ನು ಹೀಗೆ ಮಾಡಬಹುದೇ ಎಂದು ಕಾಲಾಗ್ನಿ ರುದ್ರನಾಗಿ ತಾನೇ ಕಾದುವೆನು ಎನಲಾಗಿ ಕೃಷ್ಣದೇವರು ಸಂತೈಸಿ ಕಳುಹಿದರು. ಆಗ ಭೀಮ ಕೌರವನ ಗದಾಯುದ್ಧದಲ್ಲಿ ಕಾದಿ ಕೌರವನ ತೊಡೆಯನ್ನು ಭೀಮನು ಮುರಿಯಲಿಟ್ಟರೆ ಕೌರವನು ನೆಲಕ್ಕೆ ತೊಟ್ಟನೆ ಬೀಳಲಾಗಿ ಭೀಮನು ಕೌರವನ ಮಕುಟವನ್ನು ಒದೆದು ಅನೇಕಪರಿಯಲ್ಲಿ ಮೂದಲಿಸಿ ಭಂಗಿಸಿ ಕೊರಳ ಕೊಯ್ವೇನು, ಎನ್ನಲಾಗಿ ಬಲಭದ್ರ ದೇವರು ಕೋಪಿಸಿಕೊಳ್ಳಲಾಗಿ ಶ್ರೀಹರಿಯು ಸಂತೈಸಿದರು. ಪಾಂಡವರ ಬಲವು ಪಾಳೆಯವ ಹೊಕ್ಕು ಒಳಗೆ ಇರುವಂಥವರಿಗೆ ಬೇಕು ಬೇಡ ಎಂಬಹಾಗೆ ಉಡುಗೆರೆಗಳನ್ನು ಕೊಟ್ಟು ಶ್ರೀಹರಿಯು ಧರ್ಮಪುತ್ರನು ಭೀಮಾರ್ಜುನರು ನಕುಲ ಸಾತ್ವಕಿ ಸಹದೇವರು ಸಹಿತ ಕೌರವನ ಪಾಳೆಯಕ್ಕೆ ಹೋದರು.

ಇತ್ತ ಗುರುಸುತನು ಕೃಪಕೃತವರ್ಮರ ಕೂಡಿಕೊಂಡು ಬಂದು ಪಾಂಡವರ ತಲೆಯ ತಂದೇವೆಂದು ಕೌರವನಿಗೆ ಹೇಳಿಹೋದರು. ಪಾಂಡವರು ಕೃಷ್ಣದೇವರು ಕೌರವನ ಪಾಳೆಯಕ್ಕೆ ಹೋಗುವಾಗ ಕಾಲರುದ್ರನನ್ನು ಪಾಳೆಯದ ಕಾವಲಿಗೆ ಇರಿಸಿ ಹೋಗಲಾಗಿ ಗುರುಸುತನು ರುದ್ರನ ಸ್ತೋತ್ರವಮಾಡಿ ವರವಂ ಪಡೆದು ಧೃಷ್ಟದ್ಯುಮ್ನ ಶಿಖಂಡಿ ಮೊದಲಾದಶೇಷಬಲವನ್ನು ಸಂಹರಿಸಿ ದ್ರೌಪದಿಯ ಐದು ಮಕ್ಕಳ ತಲೆಯನ್ನು ಕೊಯ್ದುಕೊಂಡು ಬಂದು ಕೌರವನ ಮುಂದೆ ಹಾಕಲಾಗಿ ಆಗ ಕೌರವನು ನೋಡಿ ಹಸುಮಕ್ಕಳಂ ಕೊಂದಿರಿ ಎಂದು ಪ್ರಾಣವಬಿಟ್ಟನು. ಆಗ ಅಶ್ವತ್ಥಾಮನು ಶಸ್ತ್ರಸನ್ಯಾಸವ ಮಾಡಿಕೊಂಡು ಕುರುಕ್ಷೇತ್ರದಲ್ಲಿ ಋಷಿಗಳ ಯಜ್ಞಮಂಟಪ ಶಾಲೆಯಂ ಹೊಕ್ಕನು.

* * * *

ಪಾಂಡವರು ವ್ಯಾಸದೌಮ್ಯರ ಕೂಡಿಕೊಂಡು ಧೃತರಾಷ್ಟ್ರ ಗಾಂಧಾರಿಯ ಕಾಂಬುದಕ್ಕೆ ವಿದುರಸಂಜಯರನ್ನು ಕರೆದು ಕಳುಹಿಸಿ ನಿಮ್ಮ ಮಕ್ಕಳು ತಾವು ನಡೆದಂಥ ದುರ್ಮಾರ್ಗ ತಮ್ಮ ಕೆಡಿಸಿತು. ಈ ಪಾಂಡುಪುತ್ರರು ಸತ್ಯವಂತರು. ಇವರ ಕಾಣಿಸಿಕೊಂಡು ಕೂಡಿಕೊಂಡು ಇರಬೇಕು ಎಂದು ಹಲವು ಪ್ರಕಾರದಲ್ಲಿ ಬುದ್ಧಿಗಲಿಸಿದರೆ ಧೃತರಾಷ್ಟ್ರಗಾಂಧಾರಿಯರು ತಮ್ಮೊಳಗೆ ಒಂದು ಕುಮಂತ್ರವಂ ನೆನೆದುಕೊಂಡು ಆದರೆ ಪಾಂಡವರು ಬಂದು ಸುಖದಲ್ಲಿ ರಾಜ್ಯವನಾಳಿಕೊಂಡು ಇರಲಿ ಎಂದರು. ಇವರ ಮನಸ್ಸಿನ ಹವಣನ್ನು ಶ್ರೀಕೃಷ್ಣದೇವರು ಅರಿತು ಉಕ್ಕಿನಲ್ಲಿ ಒಂದು ಭೀಮ ಪ್ರತಿಮೆಯಂ ಮಾಡಿಸಿ ಪಾಂಡವರನ್ನು ಧೃತರಾಷ್ಟ್ರನ ಬಳಿಗೆ ಒಡಗೊಂಡು ಬಂದಾಗ ಧರ್ಮರಾಯನು ಪಾದದ ಮೇಲೆ ಬಿದ್ದಾಗ ತಕ್ಕೈಸಿಕೊಂಡು ಆ ಮೇಲೆ ಭೀಮನನ್ನು ಮಗನೇ ಬಾರೈ! ಬಳಲಿದೆ ಏಲಾ ಎಂದು ಮೋಹದಲ್ಲಿ ಕರೆಯಲಾಗಿ ಭೀಮ ದನಿದ್ದೋರಿ ಉಕ್ಕಿನ ಭೀಮನನ್ನು ತಂದು ನಿಲಿಸಿದರು. ಆತನು ತಕ್ಕೈಸಿಕೊಳ್ಳಲು ಉಕ್ಕಿನ ಭೀಮನು ಹುಡಿಹುಡಿಯಾಗಿ ಹೋದನು. ಅಯ್ಯೋ ಮಗನೇ ಹೋದೆಯಲ್ಲಾ ಎಂದರೆ ಶ್ರೀಕೃಷ್ಣದೇವರು ಒಂದು ಬಾರಿಗೆ ಬದುಕಿದನು. ನಿಮ್ಮ ಕೋಪ ಹೋಯಿತೆಂದು ಆ ಮೇಲೆ ತಮ್ಮತಾಯಿ ಗಾಂಧಾರಿಯ ಕಾಣಿಸಿಕೊಳ್ಳಬೇಕೆಂದು ಆಕೆಯ ಬಳಿಗೆ ಹೋದರು.

End :

ಗಾಂಧಾರಿಯು ಶ್ರೀಕೃಷ್ಣನ ಮುಖವನೋಡಿ ಎಲೈ! ಸ್ವಾಮಿ! ಕಂಡೆಯಾ ನಮ್ಮ ಮಂದಿಯ ಕೇಡಾ ಎಂದು ಈ ಮರಿಯಾದಿಯಲ್ಲಿ ನಮಗೆ ಹೀಗೆ ಆಯಿತಲ್ಲ. ಇಂದಿಗೆ ಮೂವತ್ತಾರನೆಯ ವರುಷಕ್ಕೆ ಯಾದವ ವಂಶವೆಲ್ಲವೂ ತಮ್ಮೊಳಗೆ ತಾವೇ ಕಡಿದಾಡಿ ಅವರ ಸ್ತ್ರೀಯರು ಶೋಕಿಸುವಂಥಾದುದನ್ನು ನಾನು ಕಂಡ ಹಾಗೆ ನೀನು ಕಾಣು ಎಂದು ಶಾಪವನ್ನು ಕೊಟ್ಟಳು. ಶ್ರೀಲಕ್ಷ್ಮೀಕಾಂತನು ನಿನ್ನ ಪತಿವ್ರತೆಯ ವಚನ ತಪ್ಪಬಹುದೆ ಎಂದು ಕೈಕೊಂಡು ಧೃತರಾಷ್ಟ್ರ ಗಾಂಧಾರಿ ವಿದುರ ಸಂಜಯ ಪಾಂಡವರು ಕುಂತಿ, ದ್ರೌಪದಾದೇವಿ, ಸುಭದ್ರೆ, ಉತ್ತರಾದೇವಿಯರು (ಸಹಿತ) ವ್ಯಾಸದೇವರು ಧೌಮ್ಯರು ಸಹಿತ ಉದಕಕ್ರಿಯೆಗಳನ್ನು ಮಾಡುವುದಕ್ಕೆ ಗಂಗಾತೀರಕ್ಕೆ ಬಂದರು ಎಂದು ವೈಶಂಪಾಯನನು ಜನಮೇಜಯನಿಗೆ ಹೇಳವನೆಂಬುದು ನೈಮಿಶಾರಣ್ಯ ವಾಸಿಗಳಾದ ಶೌನಕಾದಿ ಮಹಾಮುನೀಂದ್ರರಿಗೆ ಸೂತಪೌರಾಣಿಕನು ಹೇಳುತ್ತಿದ್ದನೆಂಬುದು ಗದಾ ಪರ್ವಂ.—

Colophon :

ಗದಾ ಪರ್ವಂ ಸಮಾಪ್ತಂ.

(ವಿ.ವಿ.)—

ಗದಾ ಪರ್ವವು ಸಂಪೂರ್ಣವಾಗಿದೆ. ಶಿಥಿಲ. ಬರೆವಣಿಗೆಯು ಸಾಮಾನ್ಯ. ತಪ್ಪುಗಳಿವೆ. ಗ್ರಂಥ ಪಾತವಿಲ್ಲ. ಕವಿಯು ಜಕ್ಕಣನಾಯಕ ಅಥವಾ ಜಕ್ಕಭೂಪಾಲನೆಂಬುವನು.

No. 124. ಭಾರತತಾತ್ಪರ್ಯ ನಿರ್ಣಯ.
BHĀRATATĀTPARYANIRṆAYA.

Substance, paper. Size, 10½ × 9½ inches. Pages, 460. Lines, 20 on a page. Character, Kanarese. Condition, good. Appearance, new. Mode of writing, good but not free from mistakes.

Complete in 18 Adhyayas.

A narration in Kanarese prose of the Sanskrit Bhāratatātparyanirṇaya by Ānandatīrtha. The author Vādirāja (1570 A.D.) of the Sōde Maṭha in South Kanara District was the pupil of Vyāsarāya guru and composed also Vaikuṇṭhavarṇane, Svapnagadya, Lākṣmīśōbhāne and some prayer songs.

Date of transcription :—Friday the first day of the bright fortnight of the lunar month Jyēṣṭha in the year Plava corresponding to Śaka year 1763 and 1841 A.D.

Beginning :

ಆ ವಾಯು ಅಂತರ್ಗತನಾದ ಶ್ರೀ ಲಕ್ಷ್ಮೀಪತಿಗೆ ವಂದನೆಯಂ ಮಾಡಿ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಪುಸ್ತಕವನ್ನು ಪ್ರಾರಂಭಮಾಡಿದ್ದು ಶಕ ೧೭೬೩ ಪ್ಲವ ನಾಮ ಸಂವತ್ಸರ

ಜ್ಯೇಷ್ಠ ಶುದ್ಧ ಪ್ರತಿಪತ್ ಶುಕ್ರವಾರದಲ್ಲಿ ಶ್ರೀ ವಿಜಯರಾಜಗುರು ಶ್ರೀ ರಾಘವೇಂದ್ರ ಸತ್ಯಬೋಧ ಗುರುಭ್ಯೋ ನಮಃ ॥ ಶ್ರೀರಸ್ತು ಶುಭಮಸ್ತು ಸಂತತ್ರಂ ಹರಿಭಕ್ತಿರಸ್ತು.

ಸೂಚನೆ—ತಾತ್ಪರ್ಯ ನಿರ್ಣಯದ ಪ್ರಥಮಾಧ್ಯಾಯದಲ್ಲಿ ಆನಂದ ತೀರ್ಥರು ವೇದವ್ಯಾಸ ದರ್ಶನಕ್ಕೆ ಮೂರನೇ ಆವರ್ತಿ ಬದರಿಕಾಶ್ರಮಕ್ಕೆ ಹೋಗಿರಲಾಗಿ ವೇದವ್ಯಾಸರು ಆನಂದ ತೀರ್ಥರಿಗೆ . . . ವೇದಗಳಲ್ಲಿ (ಮಹಾಭಾರತ) ರಾಮಾಯಣಗಳಲ್ಲಿ ಪಾರದ ಶಾಸ್ತ್ರಾದಿಗಳಲ್ಲಿ ಪಾಂಚರಾತ್ರಾಗಮದಲ್ಲಿ ಜ್ಞಾನಾರ್ಥವಾಗಿ ಶ್ರುತಿಸ್ಮೃತಿಗಳಲ್ಲಿ ಹೇಳಿವೆ. ಅದು ಕಾರಣ ಅಜ್ಞಾನಿಗಳು ಮೋಹಿತರಾಗಿರೆ ಸಜ್ಜನರಿಗೆ ದಿವ್ಯಜ್ಞಾನ ಪ್ರಕಾಶ ಮಾಡಿಕೊಡಬೇಕಾಗಿ ಸರ್ವಶಾಸ್ತ್ರ ಸಾರಭೂತವನ್ನು ತೆಗೆದು ನಿರ್ಣಯಗ್ರಂಥ . . ವೇದವ್ಯಾಸದೇವರು ಆಜ್ಞಾಪಿಸಲಾಗಿ ದೇವರಾಜ್ಞೆಯನ್ನು ಶಿರಸಾವಹಿಸಿಕೊಂಡು ಆನಂದತೀರ್ಥರು ಬದರಿಕಾಶ್ರಮದಿಂದ . . ಬಂದು ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಗ್ರಂಥವನ್ನು ಮಹಾಭಾರತಾರ್ಥವಾಗಿ ಹೇಳಿದಾರೆ. ಆಚಾರ್ಯರು ತಾತ್ಪರ್ಯ ಗ್ರಂಥವನ್ನು ಮಾಡಿದ್ದಕ್ಕೆ . . ವಾದಿರಾಜಸ್ವಾಮಿಗಳು ಟೀಕೆಯನ್ನು ಮಾಡಬೇಕಾಗಿ ದೇವರಿಗೆ . . . ವಾಲವೆಂಬಲ್ಲಿ ಅಚ್ಯುತನಿದಾನೆ. ನಾವು ಮಾಡಿದ ಗ್ರಂಥವು ನಿರ್ವಿಘ್ನದಲ್ಲಿ ನಡೆಯಲ್ಲಿ ಎಂದರು.

* * * *

ಪುರಾಣಗಳಲ್ಲಿ ಮೋಹಕಕಥನವೇ ಹೇಳುತ್ತದೆ. ಭಾಷ್ಯತ್ರಯದಿಂದ ಗ್ರಂಥಗಳು ನಡೆದಿವೆ. ಮಂದಮತಿಗಳು ತಮಗೆ ತಿಳಿಯದೆ ಅನ್ಯಾರ್ಥವನ್ನು ಮಾಡಿದಾರೆ. ಇನ್ನು ಸಮ್ಮತಿಯನ್ನು ಹೇಳುತ್ತಾರೆ. ವರಾಹ ಪುರಾಣದಲ್ಲಿ ಮಹಾರುದ್ರನೇ ನಾರಾಯಣನೆಂದರೆ ಯತಿ ಪಾರ್ವತೀಪತಿಯು ಅಸುರ ಜನರನ್ನು ಮೋಹಿಸಬೇಕಾಗಿ ಮಿಥ್ಯಾಜ್ಞಾನಿಗಳಿಗೆ ವಂಚನಮಾಡದೆ ನೀನು ಮಿಥ್ಯಾಜ್ಞಾನಿಗಳಿಗೆ ನನ್ನ ಆಜ್ಞಾಬಂಧ, ನೀನುವಂಚಿಸು. ಅತಿಮಹಾಬಾಹೋ ನನ್ನಲ್ಲಿ ಇಲ್ಲದಂಥ ದೋಷಗುಣಗಳು ನನ್ನಲ್ಲಿ ಆರೋಪಿಸುವಿ. ನಾನು ನಾರಾಯಣ ಪರಾಧೀನ. ಹೀಗೆ ವಿರುದ್ಧಾರ್ಥವನ್ನು ಹೇಳು. ಜಗತ್ತಿನೊಳಗೆ ನಿನ್ನ ಪ್ರಕಾಶಮಾಡಿಕೊ. ಹೀಗೆಂದು ಸ್ವಾಮಿಯ ಆಜ್ಞೆಯು ಆಗಲು ಸ್ವಾಮಿಯ ಆಜ್ಞೆಯನ್ನು ಮೀರುವುದಕ್ಕೆ ಶಕ್ಯವಿಲ್ಲ. ಆದ ಕಾರಣ ಮಹಾರುದ್ರನು ಹೇಳಿದಾನೆ. ಸರ್ವಕಡೆಯಲ್ಲಿ ಲಿಂಗ ಪಿಂಡದ ಕೊನೆಯು ಕಾಣುತ್ತದೆ. ಲಿಂಗದ ಮೂಲವು ಕಾಣುವುದಿಲ್ಲ. ಎಂದು ನಾರಾಯಣನು ಲಿಂಗಮೂಲದ ಆಳಕ್ಕೆಹೋಗಿಕಡೆಯ ಲಿಂಗದ ಮೂಲವನ್ನು ಕಂಡಿದ್ದಿಲ್ಲ. ಹೀಗೆ ಸ್ವಾಮಿಯಲ್ಲಿ ಇಲ್ಲದಂತಹ ಗುಣಗಳನ್ನು ಹೇಳಿದಾನೆ. ಶಿವನು ಸರ್ವೋತ್ತಮನೆಂದು ತಿಳಿದು ಕೃಷ್ಣನು ತನ್ನ ಹೆಂಡತಿ ರುಕ್ಮಿಣಿಯನ್ನು ಕೂಡಿಕೊಂಡು ಕೈಲಾಸಕ್ಕೆ ಬಂದು ನನ್ನ ಕೈಯಲ್ಲಿ ವರವನ್ನು ಸಂಪಾದಿಸಿ ಪ್ರದ್ಯುಮ್ನನೆಂಬ ಮಗನನ್ನು ಹಡೆದಿದಾನೆ. ಹೀಗೆ ತನ್ನ ಪ್ರಕಾಶವನ್ನು ಶಿವನು ಹೇಳಿಕೊಂಡಿದಾನೆ. ಇವಿಷ್ಟನ್ನೂ ಅಸುರ ಜನರನ್ನು ಮೋಹಿಸಬೇಕಾಗಿ ನಾರಾಯಣ ನಾಜ್ಞೆಯಿಂದ ಶಿವನು ಹೇಳಿದ್ದಾನೆ. ಬ್ರಹ್ಮಾಂಡ ಪುರಾಣಗಳಲ್ಲಿ ವಚನಗಳವೆ. ಎನ್ನಂಥಾ ನಾರಾಯಣನು ಅಪ್ರಾಕೃತ ಸ್ವಗತ ಭೇದ ವರ್ಜ, ದೋಷದೂರ ಗುಣಪೂರ್ಣ ಜ್ಞಾನಾನಂದವೇ ಶರೀರವುಳ್ಳವನು. ಚಿದಾನಂದಾತ್ಮಕ ಹೀಗೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

* * * *

ಋಗಾದಿ ನಾಲ್ಕುವೇದಗಳಲ್ಲಿ ಪಂಚರಾತ್ರಾಗಮದಲ್ಲಿ ಅಷ್ಟಾದಶ ಪುರಾಣಗಳಲ್ಲಿ ಬ್ರಹ್ಮಸೂತ್ರದಲ್ಲಿ ಭಾರತಾದಿ ಶಾಸ್ತ್ರಗಳಲ್ಲಿ ಹೇಳುತ್ತದೆ. ಅದರಲ್ಲೆಲ್ಲಾ ಸಾರಭೂತವಾದದ್ದನ್ನು ತೆಗೆದು ಸಕಲ ಸಜ್ಜನರ ಮೇಲೆ ಅನುಗ್ರಹಾರ್ಥವಾಗಿ ನಾರಾಯಣನ ಆಜ್ಞೆಯಿಂದ ಆನಂದತೀರ್ಥ ಮುನಿಗಳು ಸರ್ವಶಾಸ್ತ್ರಮಥನ ಮಾಡಿ ಸಕಲಸಾರಭೂತವೂ ಸಜ್ಜನರಿಗೆ ತಿಳಿಯಬೇಕಾಗಿ ಹೇಳಿದಾರೆ. ಆನಂದತೀರ್ಥರು ಬಲೋನ್ನತಿಯುಳ್ಳವರು. ಸಕಲ ಶಾಸ್ತ್ರ ನಿರ್ಣಯಮಾಡಿ ಹೇಳಿದಾರೆ. ಶ್ರೀಮದಾಚಾರ್ಯರು ಮಾಡಿದ ಗ್ರಂಥವನ್ನು ಹೃತ್ಕಮಲದಲ್ಲಿ ಬಚ್ಚಿಟ್ಟುಕೊಂಡು ನಾರಾಯಣನು ಸರ್ವೋತ್ತಮನೆಂದು ತಿಳಿದ ಪಕ್ಷದಲ್ಲಿ ಅದರಿಂದ ಮೋಕ್ಷವಾಗುತ್ತದೆ. ಇಂಥಾ ಸಚ್ಛಾಸ್ತ್ರ ಸಕಲ ಶಾಸ್ತ್ರಗಳ ಮಥನಮಾಡಿ ನಿರ್ಣಯಗ್ರಂಥ ಮಾಡಿ ಹೇಳಿದೆ. ಹೇಳಿ ಕೇಳಿದವರಿಗೆ ವೈಕುಂಠಲೋಕ ಪ್ರಾಪ್ತಿಯಾಗುತ್ತದೆ. ಎಂದು ಅಧ್ಯಾಯಾರ್ಥವು.

Colophon :

ಇತಿ ಶ್ರೀಮನ್ಮಹಾಭಾರತದ ತಾತ್ಪರ್ಯ ನಿರ್ಣಯದ ಪ್ರಥಮಾಧ್ಯಾಯವು
ಸಂಪೂರ್ಣಂ.

ಈ ಎರಡನೇ ಅಧ್ಯಾಯದಲ್ಲಿ ನಾರಾಯಣನು ಸರ್ವೋತ್ತಮನೆಂದು ಸಕಲಭಾರತಾದಿ ಸುವಾಕ್ಯಗಳನ್ನೇ ಹೇಳಿದಾರೆ. ಪ್ರಥಮಾಧ್ಯಾಯದಲ್ಲಿ ನಾರಾಯಣನ ಗುಣೋತ್ಕರ್ಷಣೆಯನ್ನು ಹೇಳಿ ಈ ಅಧ್ಯಾಯದಲ್ಲಿ ಸ್ವಾಮಿಯು ನಿರ್ದೋಷಗುಣ ಪರಿಪೂರ್ಣನೆಂದು ಹೇಳಬೇಕಾಗಿ ಶ್ರೀಮಧ್ವಾಚಾರ್ಯರು ಮಂಗಳಾಚರಣೆ ಮಾಡುತ್ತಾರೆ. ಭಾರತದಲ್ಲಿ ಆದಿಪರ್ವದಲ್ಲಿ ಅದೇ ಶ್ಲೋಕದಲ್ಲಿ ವೇದವ್ಯಾಸರು ಮಂಗಳಾಚರಣೆಯನ್ನು ಮಾಡಿದಾರೆ.

* * * *

ಚೇತನಾಚೇತನಕ್ಕೆ ಒಡೆಯನಾದ ರಮಾಪತಿಯು ತನ್ನ ಹೆಂಡತಿ ಸೀತಾದೇವಿಯು ತನ್ನ ಹತ್ತಿರದಲ್ಲಿದ್ದರೂ ಹೆಂಡತಿಯನ್ನು ಕಾಣದೆ ಅಜ್ಞಾನಿ ಜನಕ್ಕೆ ಅಣಕಮಾಡಿ ತೋರಿಸಬೇಕಾಗಿ ಶೋಕಮೋಹವನ್ನು ಬಹಳವಾಗಿ ಮಾಡಿ ತೋರಿಸಿದಾನೆ. ಅನಂತ ಜೀವನರಾಶಿಗೆ ಸ್ವಾಮಿಯ ವಿಯೋಗವಿಲ್ಲ. ದೇಶತಃ ಕಾಲತಃ ಉಳ್ಳಂಥ ಲಕ್ಷ್ಮೀದೇವಿಗೂ ತನಗೂ ವಿಯೋಗವಿಲ್ಲದಿದ್ದರೂ ಅಜ್ಞಾನಿಗಳು ಹೆಂಡತಿಯನ್ನು ಹೋಗಲಾಡಿಸಿಕೊಂಡು ಪ್ರಲಾಪ ಮಾಡುತ್ತಾರೆಂದು ಅಣಕಮಾಡಿದಾನೆ. ನನ್ನ ಹೆಂಡತಿ ಸೀತೆಯನ್ನು ಕಂಡಿರಾ ಎಂದು ವೃಕ್ಷಗಳನ್ನೂ, ಪುಷ್ಪಗಳನ್ನೂ, ಗಿರಿಗಳನ್ನೂ, ಪಕ್ಷಿಗಳನ್ನೂ ಕೇಳುತ್ತಾ ಹೆಂಡತಿಯ ವಿಯೋಗದುಃಖವನ್ನು ಅಜ್ಞಾನಿಜನಕ್ಕೆ ತೋರಿಸುತ್ತಾ ಹೋಗಲಾಗಿ ಮಾರ್ಗದಲ್ಲಿ ಸೀತಾದೇವಿಯನ್ನು ರಕ್ಷಿಸುವೆನೆಂದು ಇಚ್ಛೆಮಾಡಿದ ಜಟಾಯು ಪಕ್ಷಿಯು ಯುದ್ಧಮಾಡಿ ವೈರಿಯಾದ ರಾವಣನ ಬಾಣದಿಂದ ಹೊಡೆಯಿಸಿಕೊಂಡು ಹೋಗಲ್ಪಟ್ಟ ಸಾಮರ್ಥ್ಯವುಳ್ಳವನಾಗಿ ಬಹಳ ವ್ಯಥೆಯಿಂದ ಬಿದ್ದಿದ್ದ ಪಕ್ಷಿಯನ್ನು ಕಂಡನು. ಜಟಾಯು ರಾಮ ಬಂದನೆಂದು ಶರಣು ಹೊಕ್ಕು ಮಾತನಾಡಿದನು. ಎಲೈ ಸ್ವಾಮಿಯೇ ನೀನು ನನ್ನಗೆಳೆಯನ ಮಗನಾಗಬೇಕು. ಸೀತಾದೇವಿಯನ್ನು ರಾವಣನು ಕೊಂಡು ಹೋಗುತ್ತಿರಲಾಗಿ ದೇವಿಯ ರಕ್ಷಿಸಬೇಕೆಂದು ನನ್ನ ಶಕ್ತಿಮೀರಿ ಯುದ್ಧವನ್ನು ಮಾಡಿದೆನು. ರಾವಣಾಸುರನು ಮಹಾಪ್ರಬಲನಾದ ಕಾರಣ ಸೀತೆಯನ್ನು ಕೊಂಡುಹೋದನು. ಈ ಪ್ರಕಾರ ಸೀತಾವಾರ್ತೆಯನ್ನು ಹೇಳಿ ರಾಮರಾಮ ಎಂದು ಸ್ಮರಣೆಮಾಡುತ್ತಾ ಪ್ರತ್ಯಕ್ಷ ಸ್ವಾಮಿಯ ಎದುರಿಗೆ ಪ್ರಾಣತ್ಯಾಗ ಮಾಡಿದನು.

End :

ದೈತ್ಯರು, ಶ್ರೀ ಕೃಷ್ಣನಿಂದ ಜರಾಸಂಧನು ಬಹುಬಾರಿ ಸೋತರೂ ಅವನನ್ನು ಬಿಡಲಿಲ್ಲ ತಮ್ಮತಮ್ಮ ಪೂರ್ವ ಸಂಸ್ಕಾರ ವಶದಿಂದ ಜರಾಸಂಧನಲ್ಲಿ ಪಕ್ಷಪಾತವನಿಟ್ಟಿದ್ದರು. ಧೃತರಾಷ್ಟ್ರರಾಯನು ಭೀಮಾರ್ಜುನರ ಬಲವನ್ನು ಬಹುಪ್ರಕಾರದಿಂದ ತಿಳಿದವನಾಗಿ ದೇವಾಂಶರಾದ್ದರಿಂದ ಸ್ನೇಹಪ್ರೀತಿಯಿಂದ ಯುಕ್ತನಾಗಿ ಧರ್ಮರಾಯನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿದನು. ಯುವರಾಜ್ಯದಲ್ಲಿ ಬೀಮಸೇನನನ್ನು ಅಭಿಷೇಕಮಾಡಿದನು. ಭೀಮಾರ್ಜುನರು ದಶದಿಕ್ಕುಗಳಲ್ಲಿದ್ದ ಸಮಸ್ತ ರಾಯರನ್ನೂ ಗೆದ್ದು ಕಪ್ಪವನ್ನು ತಂದುಕೊಂಡವರಾದರು. ಇವರ ಅಮಾನುಷವಾದ ವ್ಯಾಪಾರಗಳಿಂದ ಧೃತರಾಷ್ಟ್ರನು ಸುಪ್ರೀತನಾದನು. ಹಾಗೆಯೇ ಪಟ್ಟಣದಲ್ಲಿದ್ದ ದೇಶಗಳಲ್ಲಿದ್ದ ಜನಗಳೂ, ಬೀಷ್ಮದ್ರೋಣಾಚಾರ್ಯರೂ ಸುಪ್ರೀತರಾದರೆಂಬ ತಾತ್ಪರ್ಯ ನಿರ್ಣಯದ ಅಧ್ಯಾಯ ೧೮ ಕ್ಕೆ ಮಂಗಳಮಹಾ.

Colophon :

ಇತಿ ತಾತ್ಪರ್ಯ ನಿರ್ಣಯದಲ್ಲಿ 18 ನೆಯ ಅಧ್ಯಾಯವು ಸಂಪೂರ್ಣ.

(ವಿ-ವಿ.)—

ಸಮಗ್ರ. ಅಕ್ಷರಗಳು ಚೆನ್ನಾಗಿವೆ. ಗ್ರಂಥಪಾತ ಸ್ವಲ್ಪವುಂಟು. ಇದು ಮಧ್ವಗುರು ವಿರಚಿತವಾದ ಭಾರತ ತಾತ್ಪರ್ಯ ನಿರ್ಣಯಕ್ಕೆ ಕನ್ನಡ ಟೀಕು. ಉಡುಪಿ ಮಠಕ್ಕೆ ಸಂಬಂಧಪಟ್ಟ ಸೋದೆಮಠದ ಸ್ವಾಮಿಗಳಾದ ವಾದಿರಾಜ ಸ್ವಾಮಿಗಳವರು ಈ ಗ್ರಂಥಕರ್ತರು. ಇವರು ವ್ಯಾಸರಾಜರ ಶಿಷ್ಯರು. ಇವರ ಕಾಲವು ಕ್ರಿ.ಶ. ಸು 1570. ಇವರು ಈ ಗ್ರಂಥವಲ್ಲದೆ ವೈಕುಂಠವರ್ಣನೆ, ಸ್ವಪ್ನಗದ್ಯ, ಲಕ್ಷ್ಮೀಯ ಸೋಬಾನೆ ಮತ್ತು ಕೆಲವು ಕೀರ್ತನೆಗಳನ್ನು ಬರೆದಿರುತ್ತಾರೆ. ಉಳಿದ ವಿಷಯಗಳನ್ನು ಕರ್ಣಾಟಕ ಕವಿಚರಿತ್ರೆಯ 2 ನೇಯ ಸಂಪುಟದಲ್ಲಿ ನೋಡಿ ತಿಳಿಯುವುದು.

No. 125. ಭಾರತತಾತ್ಪರ್ಯನಿರ್ಣಯ ಟೀಕೆ.
BHĀRATATĀTPARYA NIRṆAYA ṬĪKE.

Substance, paper. Size, 12 × 7¾ inches. Pages, 478. Lines, 13 on a page. Character, Kanarese. Condition, much injured. Appearance, old. Mode of writing, good but not free from mistakes.

Complete in 18 Adhyāyās.

Same work as the above ; by Vādrāja.

(ವಿ-ವಿ.)—

ಭಾರತ ತಾತ್ಪರ್ಯ ನಿರ್ಣಯ. ಸಮಗ್ರ. ಶಿಥಿಲ. ಬರೆವಣಿಗೆ ಚೆನ್ನಾಗಿಲ್ಲ. ತಪ್ಪುಗಳು ಅಲ್ಲಲ್ಲಿ ಉಂಟು. ಗ್ರಂಥಪಾತವಿದೆ. ಮೇಲೆ ವರ್ಣಿತವಾಗಿರುವ ಗ್ರಂಥವೇ. ಕವಿ ವಾದಿರಾಜ ಉಳಿದ ವಿಷಯಗಳನ್ನು ಹಿಂದಿನ ನಂಬರಿನಲ್ಲಿ ನೋಡಿತಿಳಿಯುವುದು.

No. 126. ತೊರವೆ ರಾಮಾಯಣ.

TORAVE RĀMĀYAṆA.

Substance, Śrītāḷa. Size, 19⅓ × 2 inches. Pages, 428. Lines, 13 on a page. Character, Kanarese. Condition, slightly injured. Appearance, old. Mode of writing, good but not free from mistakes.

Complete.

A poem in Kanarese in the Bhāmini ṣaṭpadi metre describing the story of the Rāmāyaṇa ; by Narahari popularly known as Kumāra Valmīki, He was a Brahmin by caste. He belonged to Torave Grama in Sholapur District. The work is dedicated to God Narahari worshipped at Torave. The author of this work praises Kumāra-vyāsa, (1430 Ā. D.) Bobbūra Raṅga (1760 A.D.) has praised this author in his work. So it is presumed that this author flourished in the 16th century.

Date of Transcription.—Friday the eleventh day of bright fortnight of the lunar month Puṣya in the year Vijaya.

Name of the scribe .—Lingaya son of Anniyabhārati of Mañjeśvara.

Beginning:

॥ ಮಂಗಳಪದ್ಯಂ ॥

ಶ್ರೀ ಜನಕಜಾ ರಮಣ ಸ ।
ರೋಜ ಸಂಭವ ಜನಕ ನನುಪಮ ।
ರಾಜಶೇಖರ ವಿನುತ ನಿಖಿಳಾಮರ ಕಿರೀಟ ಚಯ ॥
ರಾಜಿತಾಮಳ ಲಲಿತ ಪದ ಪಂ ।
ಕೇಜನಾನತ ಜನ ದಯಾ ಸುರ ।
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವ ॥

* * * *

ಆದಿಕವಿ ಕವಿರಾಜ ಹಂಸನ ।
ನಾದಿಕವಿಕುಲ ಪರಮ ಹಂಸವ ।
ಹಾದಿವೌಕಸ ಪ್ರಚುರ ಭಾಷಾಕವಿಜನೋತ್ತುಂಗ ॥
ವೇದಗರ್ಭ ವರಪ್ರಸಾದಾ ।
ಹ್ಲಾದಕವಿ ರಘುವರ ಕಥಾಬ್ಧಿಮ ।
ಲೋದಧೀಂದು ಮಹಾಮುನಿ ಪ್ರಾಚೇತಸಂ ವಂದೆ ॥

ಚಾರುತರ ಕರ್ಣಾಟ ಪದ ವಿ ।
ಸ್ತಾರ ರಾಮಾಯಣಕೆ ಕರ್ತೃಕ ।
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥ ॥

ವೀರ ನರಹರಿಯನೆಲು ಮೆಚ್ಚದ ।
ರಾರು ಸತ್ಕವಿತಾ ವಿಲಾಸದ ।
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವ ॥
ಪರರ ಬಗೆ ಪರರುಕ್ತಿ ಪರರು
ತ್ಕರುಷ ಪರರುನ್ನತಿಯು ಕೃತಿಯುಪ ।
ಹರಣೆ ಪರರುಪಮಾನ ಪರರೊಡ್ಡವದ ಪರುಷವದ ॥
ಹರಹು ಹೊಗದಗ್ಗಳಿಕೆ ಪದಸಂ ।
ಚರಣೆಯುಲಿ ಲಿಪಿ ತಿರಿಗಿ ನೋಡದ ।
ಬಿರುದು ಬೇರೆ ಕುಮಾರ ವಾಲ್ಮೀಕಿಯು ವಚೋಲಹರಿ ॥

* * * *

ಧರೆಯೊಳಗಗ್ಗದ ರಾಘವೇಂದ್ರನ ।
ಚರಿತ ಶತಕೋಟಿ ಪ್ರವಿಸ್ತರ ।
ವರಮಹಾ ಚಾರಿತ್ರ ರಚನಾ ಸುಪ್ರಬಂಧದಲಿ ॥
ಪರಮ ಭಕ್ತಿಯೊಳಾವನೊಂದ ।
ಕ್ಷರವ ಕೇಳ್ವನವಂಗೆ ಪಾತಕ ।
ಹರಿವುದೆಂದು ಕುಮಾರರಿಗೆ ವಾಲ್ಮೀಕಿ ಮುನಿ ನುಡಿದ ॥
ಭವ ಭವಾರ್ಜಿತ ದುರಿತ ಕೋಟಿಯ ।
ದ್ರವಿಸುವಗ್ಗದ ನಾಮ ಸರಸಿಜ ।
ಭವ ಭವಾಚ್ಯುತರಮಲ ಪದವಿಯನೀವ ಗುಣನಾಮ ॥
ಶಿವನ ನಚ್ಚಿನ ನಾಮ ಗಿರಿಸಂ ।
ಭವೆಯು ನೇಮದ ನಾಮ ಸುರ ನರ ।
ಭುವನ ಪಾವನ ನಾಮ ಸೀತಾಪತಿಯು ಸಿರಿ ನಾಮ ॥
ಒದೆವುದಘ ಸಂಹತಿಯ ತಲೆದೋ ।
ರಿದೊಡೆ ದಹಿಸುವುದೆಡರ ನಾಕಿದ ।
ಡದುಹಿ ಬಿಸುಡುವು ದುನ್ಮದ ಪ್ರಳಯ ಪ್ರಪಂಚಕರ ॥
ಮುದವ ನಿಹದಲಿ ಕೊಡುವು ದಚ್ಯುತ ।
ಪದವ ಪರದೊಳಗೀವುದಿದು ನಿಗ ।
ಮದ ರಹಸ್ಯ ಪುರಾಣ ವಶ್ಯವಿದೆಂದು ಮುನಿ ನುಡಿದ ॥

Colophon:

ಪ್ರಥಮ ಸಂಧಿ ಸಮಾಪ್ತಂ

ಸೂ ॥ ಕುಶಲವರಿಗರುಹಿದನು ಪ್ರಾಚೇ ।
ತಸನು ದಿವಿಜ ಮುನೀಂದ್ರ ನುಪದೇ ।
ಶಿಸಿದ ರಾಮಾಯಣ ಕಥಾಮೃತ ಕಥನ ಕೌತುಕವ ॥

* * * *

ತರುಣಿಯರ ಶುಭಗೀತ ಧರಣೀ ।
ಸುರರ ಸೂಕ್ತ ಸುಮಂತ್ರ ಸಂವ ।
ತ್ಸರಿಕ ರಾಯಾತ ರವವೆಸೆದು ದ್ವಾಹ ಗೇಹದಲಿ ॥
ತರುಣಿ ಕೇಳಚೇಯಲಿ ರಘುಪತಿ ।
ಭರತ ಲಕ್ಷ್ಮಣದೇವ ಶತ್ರು ।
ಘ್ನರುಗಳಭ ಕಂಧರದೊಪ್ಪಿದರರಸ ನಾಜ್ಞೆಯಲಿ ॥
ಹಿಡಿದ ಮುತ್ತಿನ ಸೂಸಕದ ಬೆಳು ।
ಗೊಡೆಯ ಚಿಮ್ಮುವ ಚಾಮರದ ತರ ।
ವಿಡಿದ ಸೀಗುರಿಗಳ ವಿಡಾಯಿಯ ನೊಸಲು ಬಾಸಿಕದ ॥
ಹಿಡಿದ ಕೈದೀವಿಗೆಯ ಸಾಲಿನ ।
ತ್ರಾಡುಕು ವೆಳಗಿನ ವಂದಿ ಜನದು ।
ಗ್ಗಡದ ರಾಜಕುಮಾರಕರು ನಡೆತಂದರೊಲವಿನಲಿ ॥
ಸಂದಣಿಸಿದುವು ಕರಿ ತುರಗ ಬಳಿ ।
ಸಂದು ನೋಕಿದರಖಿಳ ನಾರಿಯ ।
ರಂದಣಿಗೆಗಳಿಟ್ಟಣಿಸಿದುವು ದಶರಥನ ಬಂಧುಜನ ॥
ಮುಂದೆ ಕಂಬಿಯ ಕಂಚುಕಿಯ ರೊಳು ।
ವಿಂದ ವಿಪ್ರರ ಮಂತ್ರ ಘೋಷಣೆ
ಯಿಂದ ಬಂದರು ರಾಜಪುತ್ರರು ರಾಜ ಬೀದಿಯಲಿ ॥
ಅಣುಗ ಕೇಳೈ ! ನಭದ ತಾರಾ ।
ಗಣ ತದೀಯ ಮಹೋತ್ಸವದ ದಿ ।
ಬ್ಬಣಕೆ ನೆರೆದುದೊ ಪುರದೊಳಿನೆ ಬೆಳಗಿದುದು ದೀಪಾಳಿ ।
ಮಣಿ ಮುಕುರದ ಬಲೆಯರು ನೃತ್ಯದ ।
ಗಣಿಕೆಯರ ಮಾಂಗಲ್ಯ ವಾದ್ಯದ ।
ಕಾಣಿತ್ರದಲಿ ನೆಲಕುಸಿಯೆ ಹೊಕ್ಕರು ಜನಕನರಮನೆಯ ॥
ಇಳಿದರಾನೆಯ ನಬಲೆಯರು ಹೊಂ ।
ದಳಿಗೆಗಳ ಪಸುಗೂಳ ದೀಪಾ ।
ವಳಿಯ ಸೊಡರಿನ ಸಾಲೆಸೆಯ ಸೂಸುಗಳ ಸೊಗಸಿನಲಿ ॥
ವಳಗ ಬಲ್ಲವರೂರ್ಧ್ವ ಮುಖದಂ ।
ಜುಳಿಗಳಲಿ ಜಯಯೆನಲು ಹೊಕ್ಕರು ।
ನಿಳಯವನು ನಿರ್ಜರರ ದುಂದುಭಿ ವಾದ್ಯ ರಭಸದಲಿ ॥
ಏನ ನೆಂಬೆನು ಜನಕ ನೃಪನ್ನನ ।
ನೂನ ಭಾಗ್ಯವ ನಮಮ ! ಜಗದಭಿ
ಮಾನ ದೈವದ ಲಲಿತ ಪದ ಕಮಲಾಭಿಷೇಚನವ ॥
ಶ್ರೀನಿವಾಸ ಸ್ಮರಣೆಯಲಿ ವಿ ।
ಜ್ಞಾನ ಮುಖದಲಿ ಮಾಡಿ ತಾಳ್ದನ ।
ನೂನ ತೀರ್ಥವ ಶಿರದೊಳಿಸು ಕೃತಾರ್ಥನೋ ಜಗಕೆ ॥

ಬಳಿಕ ಮಧುಪರ್ಕಾದಿ ವೈದಿಕ ।
ವಿಳಸದಭಿರಂಜನೆಯುಲಾ ಕಳ ।
ಕಳವ ಮಾಣಿಸು ತಿತ್ತರಾತ್ತಮ ಗುಡವ ಜೀರಿಗೆಯು ॥
ನಿಲಿಸಿ ಮೆಟ್ಟಕ್ಕಿಯಲಿ ಮಾಡುವ ।
ಕೈಳಗೆ ಕನ್ಯಾವರಣ ವಾಮವು ।
ಘಳಗೆ ವಟ್ಟೆಲ ಲಗ್ನದೊಳು ಪುಣ್ಯಾಹ ರಚನೆಯಲಿ ॥

ಇಳಿಯು ಮಗಳನು ರಾಂಘವಂಗೂ ।
ರ್ಮಿಳೆಯನಾಸೌಮಿತ್ರಿ ಗುಳವರಿ ।
ಗುಳದನುಜ ತನುಜೆಯರ ಧಾರೆಯು ನೆರದ ನಾ ಜನಕ ॥
ಸುಳದರಾದಂಪತಿಗಳುರು ಮಂ ।
ಜುಳದ ಮಣಿವೇದಿಕೆಗೆ ಹೋಮಾ ।
ನಲನ ಬಲವಂದೆಡಕೆ ನಾರಿದರವರ ಪತ್ನಿಯಾರು ॥

ಆದುದವರ ವಿವಾಹ ವೈಭವ ।
ವೈದಿಕದ ಲವನೀ ಸುರರು ಪೊಡ ।
ಲಾದ ಯಾಚಕ ವೃಂದ ದಣಿದುದು ಬಹಳ ದಾನದಲಿ ॥
ಆದಶಸ್ಯಂದನನ ಜನಕನ ।
ಮೇದಿನಿಯು ಸೇರುವೆಯು ರಾಯರ ।
ನಾದರಿಸಿದರು ತಮ್ಮೊಳುಡುಗೊರೆ ಯುಚಿತ ವಸನದಲಿ ॥

ವರ ಶುಭೋದಯದಿಕ್ಕೆ ಸಂಪ ।
ತ್ಕರದ ನೆಲೆವನೆ ಸಿರಿಯು ಸೊಂಪಿನ ।
ಶರಧಿ ಸೊಬಗಿನ ಸೆಜ್ಜೆ ಸುಮಾನದ ಜನಸ್ಥಾನ ॥
ನಿರುಪಮೋತ್ಸವ ಶಾಲೆ ಹರುಷೋ ।
ತ್ಕರದ ಜನ್ಮಸ್ಥಳವಿದೆನಲಾ ।
ಕರುಪಿಸಿತು ಜನಮನವ ನನುಪಮ ಪರಿಣಯಸ್ಥಾನ ॥

ಪರಮ ಸಂಭ್ರಮದಿಂದ ವರವಾ ।
ಸರ ಚತುಷ್ಟಯ ದಿರುಳು ದಂಪತಿ ।
ವರರು ಮೆರೆದರು ಭದ್ರ ಮದ ಸಿಂಧುರದ ಕಂಧರದ ॥
ಸುರುಚಿರದ ರತ್ನಪ್ರಭಾ ಪಂ ।
ಜರದ ಗದ್ದುಗೆಗಳಲಿ ನೃಪ ರಿ ।
ಬ್ಬರು ಮಹಾ ವಿತರಣದ ವೈಭವದ ಖಿಳ ರಚನೆಯಲಿ ॥

ಮರುದಿವಸ ಮರುವಲಿಯು ಸಮನಂ ।
ತರದ ಲವಭೃತ ದೋಕುಳಿಯು ವಿ ।
ಸ್ತರಣ ವೆಸೆದುದು ವಿಳಸಿತೋತ್ಸವ ವಿವಿಧ ರಚನೆಯಲಿ ॥
ಪರಿಮಳದ ಪನ್ನೀರ ನವ ಕ ।
ರ್ಪುರದ ಕತ್ತುರಿ ಕುಂಕು ಮದ ಕೊ ।
ಪ್ಪರಿಗೆಗಳ ನಾಲೆಸೆದುದನುಪಮ ಹೇಮ ಮಣಿ ಮಯದ ॥

ನನೆಯ ಕಂಚುಕಗಳೆಲಿ ಹೂದುರು ।
ಬನ ಹಿಣಿಲ್ಗಳ ದಂಡೆಗಳ ಮು ।
ಮ್ಮನೆಯ ಮುಂಜೆರಗುಗಳ ಚಂದ್ರಿಕೆ ಪಟದ ಚಲ್ಲಣದ ॥
ಕನಕ ರತ್ನಾಭರಣ ಕಾಂತಿಯ ।
ವನಿತೆಯರು ಬಳಸಿದರು ಬವರದ ।
ಮನಸಿಜನ ಮಾಸಾಳ ನೆಂದದ ಉಭಯ ಭೂಮಿಪರ ॥

ಕೊಂಡು ಕುಂಕುಮ ವಾರಿಗಳಹೊ ।
ನ್ನಂಡೆಗಳ ಜಲಯಂತ್ರಗಳ ಮುಂ ।
ಕೊಂಡು ನೃಪರಿಬ್ಬರ ವಧೂ ನಿಕುರುಂಬವಾನೃಪರ ॥
ಮಂಡಳಿಯ ತನ್ನೃಪ ಕುಮಾರರ ।
ತಂಡ ಸಾರಂಭದಲಿ ಸುರರೆಳೆ
ವೆಂಡಿರುತ್ಸಾಹಿಸಲು ಹೊಯ್ದಾಡಿದರು ವೋಕುಳಿಯ ॥

ಹೊರದು ದಿಳಿ ಸೌರಭ್ಯ ಶೈತ್ಯೋ ।
ತ್ಕರವ ನೆಂಬರ ವಳಯ ಪಗಲಕೆ ।
ಪರಿಮಳಿಸಿದುದು ಗಂಧವಾಹನ ನಾಳಿಕೆಯ ಸರಣಿ ॥
ಸುರಭಿ ಮಯ ವಾಯ್ತು ಬುಜ ಸಖಿಮ ।
ಕಿರಣ ರಾಮೋ ದೈಕ ಭಾರೋ ।
ತ್ಕರ ಮರೀ ಚಿಗಳಾದ ರನುಪಮ ಪಾರಿಕೇಳಿಯಲಿ ॥

ಆದುದಲ್ಲಿಂ ಮೇಲೆ ಮಾಮನೆ ।
ಮೇದಿನೀಪತಿ ಜನಕರಾಯಂ ।
ಗಾದಿವಾಕರ ಕುಲಲಲಾಮನಿಗಖಿಳ ವಿಭವವಲಿ ॥
ಆದರಿಸಿದನು ಜನಕ ನಿಭರಥ ।
ಕೈದು ರತ್ನಾಭರಣ ಕಾಂತಾ ।
ಮೇದಿನಿಯ ಬಳುವಲಿಗಳಿಂ ಬಳಿಕಾ ಕುಮಾರಕರ ॥

End :

ಚಾರುತರ ಕವಿ ಗಾಜಹಂಸಕು ।
ಮೂರ ವಾಲ್ಮೀಕೀಕ ಬಂಧವ
ಸಾರಮಯ ರಾಮಾಯಣವ ಸಾದರಿಸಿ ಕೇಳ್ದರಿಗೆ ॥
ಶ್ರೀರಮಣ ನಿಹ ಪರದ ಸುಖ ಸಂ ।
ಪೂರಣವ ನೊಲಿದೀವ ನೆಂಬುದು ।
ಧಾರಿಣಿ ಯೊಳದು ಸಿದ್ಧ ನಂಬುವುದಖಿಳ ಲೋಕ ಜನ ॥
ಶಿವನ ನುಡಿಯಿದು ಸರಸಿರುಹ ಸಂ ।
ಭವನ ಮಾತಿದು ಸುರ ಮುನಿಪನನು ।
ಪಮದ ವಿಶ್ರುತ ವಾಕ್ಯವಿದು ವಾಲ್ಮೀಕಿ ಮುನಿವರನ ॥

ಸವಿಗೊಡುವ ವಾಕ್ಯಾಮೃತಾರ್ಣವ ।
ದವಿರಳದ ಪಾನೀಯ ವಿದು ತ್ರೈ ।
ಭುವನ ರಂಜಿತ ಪುಂಜ ವಿದು ರಘುರಾಮ ಚಂದ್ರಕಥೆ ॥

ವರ ಸುವರ್ಣಕ ಕವಿಗಳೊಳು ಭಾ ।
ಸುರ ಕುಮಾರ ವ್ಯಾಸ ನೊಬ್ಬನು ।
ಯೆರಡನೆಯ ಲಾನೊಬ್ಬ ಮಾಗುಳೆಣಿಸುವುದೆ ವರ್ಣಕಕೆ ॥
ವರ ಕುಮಾರ ವ್ಯಾಸ ನೊಬ್ಬನು ।
ಯುರಡನೆಯ ಲಾನೊಬ್ಬ ಮಿಕ್ಕಿನ ।
ಬರಡು ಕವಿಗಳ ಲೆಕ್ಕಿಸುವನೆ ಕುಮಾರ ವಾಲ್ಮೀಕಿ ॥

ವರ ಕುಮಾರ ವ್ಯಾಸ ನೇಬಂ ।
ಧುರದ ಭಾರತ ಕೃತಿಗೆ ಕರ್ತನು ।
ನಿರುತ ರಾಮಾಯಣಕೆ ಸರಿ ಕವಿ ಕುಮಾರ ವಾಲ್ಮೀಕಿ ॥
ದೊರೆ ವಿಚಾರಿಸೆ ಪೇಳೆ ನೋಡುವ ।
ರೆರಡು ಕಾವ್ಯಕೆ ಮಿಕ್ಕ ಶಬ್ದಾ ।
ಕ್ಷರ ದರಿದ್ರರ ರಸವಿವರ್ಜಿತ ಬಂಧ ಬಂಧುರವ ॥

ಧರೆಯೊಳಗ್ಗದ ರಾಘವೇಂದ್ರನ ।
ಚರಿತ ಶತಕೋಟಿ ಪ್ರಭಾವಿ ।
ಸ್ತರ ಮಹಾ ಚಾರಿತ್ರ ರಚನಾ ಸೂತ್ರ ಬಂಧದಲಿ ॥
ಪರಮ ಭಕ್ತಿಯೊಳಾ ನೋಂದ ।
ಕ್ಷರವ ಕೇಳ್ವನರಂಗೆ ಪಾತಕ ।
ಹರಿವುದೆಂದು ಕುಮಾರರಿಗೆ ವಾಲ್ಮೀಕಿ ಮುನಿ ನುಡಿದ ॥

Colophon :

ಅಂತು ಸಂಧಿ ೧೧೬ ಕ್ಕಂ ಪದ ೫೮೫೪ ಕ್ಕಂ ಮಂಗಳಂ.

(ವಿ.-ವಿ.)—

ಕನ್ನಡ ತೊರವೆ ರಾಮಾಯಣವು ಸಮಗ್ರ. ಸ್ವಲ್ಪ ಶಿಥಿಲ. ಗ್ರಂಥಪಾತವಿಲ್ಲ. ಹೆಚ್ಚು ತಪ್ಪಿಲ್ಲ. ಲಿಪಿ ಚೆನ್ನಾಗಿದೆ. ಕೆಲವೆಡೆ ಮುದ್ರಿತವಾಗಿರುವ ಗ್ರಂಥ ಪದ್ಯಗಳಿಗಿಂತಲೂ ಉತ್ತಮವಾದ ಪಾಠಂತರವು ಕಾಣುವುದು. ಗ್ರಂಥಕರ್ತನು 'ಕುಮಾರ ವಾಲ್ಮೀಕಿ ಮತ್ತು ಕಪುರಾಜ ಹಂಸ' ಎಂಬ ಬಿರುದುಳ್ಳ ನರಿಹರಿಯೆಂಬುವನು. ಈತನು ಬ್ರಾಹ್ಮಣ ಕವಿ. ಸೊಲಾಪುರದ ಜಿಲ್ಲೆಗೆ ಸೇರಿದ ತೊರವೆ ಯೆಂಬ ಗ್ರಾಮವು ಈತನ ಸ್ಥಳವು. ಅಲ್ಲಿಯ ದೇವರಾದ ನರಸಿಂಹ ಅಂಕಿತದಲ್ಲಿ ತನ್ನ ಗ್ರಂಥವನ್ನು ಬರೆದಿದ್ದಾನೆ. ಈ ಗ್ರಂಥಕ್ಕೆ ಕವಿಯ ಗ್ರಾಮದಿಂದ ತೊರವೆಯ ರಾಮಾಯಣ ವೆಂಬ ಹೆಸರು ರೂಢಿಯಾಗಿದೆ. ವರ್ಣಕ ಕವಿಗಳಲ್ಲಿ ಕುಮಾರ ವ್ಯಾಸನೊಬ್ಬ (1430 A.D.) ತಾನೊಬ್ಬ ಇಬ್ಬರೇ ಗಣ್ಯರೆಂದು ಹೊಗಳಿಕೊಂಡಿರುವನು. ಈತನನ್ನು ಬೊಬ್ಬುರ ರಂಗ (1760 A.D.) ಮೊದಲಾದವರು ಹೊಗುಳುತ್ತಾರೆ. ಈತನು ಕುಮಾರ ವ್ಯಾಸನನ್ನು ಹೊಗಳುವುದರಿಂದ ಆತನಿಗಿಂತ ಈಚೆಯುವನು ಎಂವಗೆ ಸುಮಾರು 16 ನೆಯ ಶತಮಾನದಲ್ಲಿದ್ದಿರ ಬಹುದೆಂದು ಊಹಿಸಬಹುದು. ಗ್ರಂಥಾವತಾರದಲ್ಲಿ ತೊರವೆಯ ನರ

ಸಿಂಹ ದೇವರ ಸ್ತುತಿಯಿದೆ. ಬಳಿಕ ಶಿವ, ಲಕ್ಷ್ಮಿ, ಪಾರ್ವತಿ, ಬ್ರಹ್ಮ, ಸರಸ್ವತಿ, ಗಣೇಶ, ಆಂಜನೇಯ, ಭಾರದ್ವಾಜ ಗುರು, ವಾಲ್ಮೀಕಿ ಇವರನ್ನು ಕವಿಯು ಕ್ರಮವಾಗಿ ಹೊಗಳಿದ್ದಾನೆ. ಗ್ರಂಥಾಂತ್ಯದ ಕಡೆಯ ಪದ್ಯವನ್ನು ಪೀಠಿಕಾ ಸಂಧಿಯಲ್ಲಿಯೂ ಹೇಳುತ್ತಾನೆ. ಮುದ್ರಿತ ಪುಸ್ತಕಕ್ಕೂ ಇದಕ್ಕೂ ಸಂಧಿ ಮತ್ತು ಪದ್ಯ ಸಂಖ್ಯೆಗಳಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವುಂಟು. ಈ ಪ್ರತಿಯ ಕೊನೆಯಲ್ಲಿ ಈ ಕೆಳಗೆ ಬರೆದಿರುವಂತಿದೆ.

ಶಾಲೀವಾಹನ ಶಕವರುಷ ವಿಜಯನಾಮ ಸಂವತ್ಸರದ ಪುಷ್ಯ ಶು ॥ ೧೧ ಭಾರ್ಗವಾಸ ಸೂರ್ಯೋದಯವಾದ ಘಳಿಗೆ ೧೨ ಕ್ಕೆ ಮಂಜೇಶ್ವರದ ತೋಡಿನಾಯ ಅಣ್ಣಯ್ಯ ಭಾರತಿಗಳ ಮಗ ಲಿಂಗಯ್ಯಗಳು ಗುರು ಕಟಾಕ್ಷದಿಂದ ರಾಮಾಯಣ ಪುಸ್ತಕ ಬರೆದಾಯಿತೆಂದೆನಿಸಿದನು.

ಬಲ್ಲ ಪುರುಷರು ನೋಡಿ ಗ್ರಂಥದೆ ।
ಸೊಲ್ಲು ತಪ್ಪಾಯ್ತೆಂದು ಬರೆದನ ।
ಹೊಳ್ಳು ಗಳೆಯದೆ ತಿದ್ದುವುದು ಸತ್ಪುರುಷರಾದವರು ॥

ಎಲ್ಲ ಪ್ರತಿಯೊಳಗರಸಿ, ಸಾ, ಪ್ರತಿ ।
ಯಲ್ಲಿ ಇದ್ದರ್ಗದ ಬರೆವೆ ನಲ್ಲದೆ ।
ಸಲ್ಲುದೋ ಸಲ್ಲದೊ ಯಿದೆಂಬುದ ನರಿಯೆ ತಾನೆಂದ ॥

ಲೋಕಾಭಿರಾಮಂ ರಣರಂಗ ಧೀರಂ ।
ರಾಜೀವನೇತ್ರಂ ರಘುವಂಶನಾಥಂ ।
ಕಾರುಣ್ಯರೂಪಂ ಕರುಣಾವತಾರಂ ।
ಶ್ರೀರಾಮಚಂದ್ರಂ ಶರಣಂ ಪ್ರಪದ್ಯೇ ॥

ಈ ರಾಮಾಯಣ ಪುಸ್ತಕ ಕಿದುವಿನ ಕೋಟೆ ಗೋಪಾಲಯ್ಯನ ತಮ್ಮ ನೀಲಯ್ಯನಿಗೆ ಬರೆದು ಕಾಣಿಕೆ ತೆಗೆದುಕೊಂಡು ಕೊಟ್ಟೆನು.

No. 127. ತೊರೆವೆ ರಾಮಾಯಣ.
TORAVE RĀMĀYAṆA.

Substance, palm-leaf. Size, $13\frac{15}{16} \times 1\frac{1}{4}$ inches. Pages, 150. Lines, 5 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Adhyāyās 83—85, 91, 92 and 109.

Same work as the above.

(ವಿ.ವಿ.)—

ರಾಮಾಯಣ ಅಸಮಗ್ರ. ಶಿಥಿಲ. ಬರೆವಣಿಗೆ ಉತ್ತಮವಲ್ಲ. ತಪ್ಪುಗಳಿವೆ. ಗ್ರಂಥಪಾತವುಂಟು. ಹಿಂದೆ ವರ್ಣಿತವಾಗಿರುವ ಗ್ರಂಥವೇಸರಿ. ಕವಿ ಕುಮಾರ ವಾಲ್ಮೀಕಿ ಯೆಂಬ ಬಿರುದಾಂಕಿತನಾದ ನರಹರಿ ಯೆಂಬುವನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೬ ನಂಬರಿನಲ್ಲಿ ನೋಡಿ ತಿಳಿಯುವುದು.

No. 128. ತೊರವೆ ರಾಮಾಯಣ.
TORAVE RĀMĀYAṆA.

Substance, palm-leaf. Size, 14 × 1⅜ inches. Pages, 222. Lines, 6 on a page. Character, Kanarese. Condition, injured. Appearance, old. Mode of writing, good but not free from mistakes.

Contains the Adhyāyās 42 to 64 complete.

Same work as the above.

(ವಿ-ವಿ.)—

ಈ ಪ್ರತಿಯಲ್ಲಿ 42 ರಿಂದ 64 ಅಧ್ಯಾಯಗಳು ಪೂರ್ಣವಾಗಿವೆ. ಇದು ಶಿಥಿಲ. ಬರವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಕವಿಯು ಕುಮಾರ ವಾಲ್ಮೀಕಿ ಯೆಂಬ ಬಿರುದಾಂಕಿತನಾದ ನರಹರಿ ಯೆಂಬುವನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೭ ನಂಬರಿನಲ್ಲಿ ನೋಡಿ ತಿಳಿಯುವುದು.

No. 129. ತೊರವೆ ರಾಮಾಯಣ.
TORAVE RĀMĀYAṆA.

Substance, palm-leaf. Size, 13½ × 1⅜ inches. Pages, 304. Lines, 6 on a page. Character, Kanarese. Condition, injured. Appearance, old. Mode of writing, bad and not free from mistakes.

Incomplete.

Contains from 18th to 40th Adhyāyās of the Yuddhakāṇḍa.

Same work as the above.

(ವಿ.ವಿ.)—

ರಾಮಾಯಣ ಅಸಮಗ್ರ. ಶಿಥಿಲ. ಲಿಪಿಯು ಚೆನ್ನಾಗಿಲ್ಲ. ತಪ್ಪುಗಳುಂಟು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಕವಿ ಕುಮಾರ ವಾಲ್ಮೀಕಿ ಯೆಂದು ಬಿರುದಾಂಕಿತನಾದ ನರಹರಿ ಯೆಂಬುವನು. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 130. ತೊರವೆ ರಾಮಾಯಣ.
TORAVE RĀMĀYAṆA.

Substance, palm-leaf. Size, 14¾ × 1⅜ inches. Pages, 500. Lines, 6 on a page. Character, Kanarese. Condition, very much injured. Appearance, old. Mode of writing, good but not free from mistakes.

Contains the Adhyāyās 1 to 55 complete and 56 incomplete.

Same work as the above.

(ವಿ-ವಿ.)—

ಈ ಪ್ರತಿಯಲ್ಲಿ ಮೊದಲಿಂದ ಐವತ್ತೈದು ಅಧ್ಯಾಯಗಳು ಪೂರ್ಣವಾಗಿಯೂ, ಐವತ್ತಾರನೆಯದು ಅಪೂರ್ಣವಾಗಿಯೂ ಇವೆ. ಇದು ಬಹಳ ಶಿಥಿಲ. ಲಿಪಿಯು ಚೆನ್ನಾಗಿದೆ. ತಪ್ಪುಗಳುಂಟು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಕವಿಯು ಕುಮಾರ ವಾಲ್ಮೀಕಿಯೆಂಬ ಬಿರುದಾಂಕಿತನಾದ ನರಹರಿ ಯೆಂಬುವನು. ಮಿಕ್ಕ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 131. ತೊರವೆ ರಾಮಾಯಣ-

TORAVE RĀMĀYAṆA.

Substance, palm-leaf. Size, $14\frac{3}{8} \times 1\frac{3}{8}$ inches. Pages, 157. Lines, 5 on a page. Character, Kanarese. Condition, injured. Appearance, old· Mode of writing, not bad and not free from mistakes.

Contains a small portion in the middle.

Same work as the above.

(ವಿ-ವಿ.)—

ಇದರಲ್ಲಿ ರಾಮಾಯಣದ ಮಧ್ಯ ಭಾಗದ ೧೪ ಅಧ್ಯಾಯಗಳು ಮಾತ್ರ ಇವೆ. ಬರೆವಣಿಗೆ ಸಾಮಾನ್ಯ. ತಪ್ಪುಗಳುಂಟು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಕವಿಯು ಕುಮಾರ ವಾಲ್ಮೀಕಿಯೆಂಬ ಬಿರುದಾಂಕಿತನಾದ ನರಹರಿಯೆಂಬುವನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಈ ಪ್ರತಿಯ ಆದಿ ಭಾಗದಲ್ಲಿ ವಾಲ್ಮೀಕಿ ರಾಮಾಯಣದ ಬಾಲಕಾಂಡದ ಪ್ರಥಮ ಸರ್ಗವು ಇದೆ.

No. 132. ತೊರವೆ ರಾಮಾಯಣ-

TORAVE RĀMĀYAṆA.

Substance, Śrītāla. Size, 14×1^{7} inches. Pages, 180. Lines, 12 on a page. Character, Kanarese. Condition, injured. Appearance, old. Mode of writing, good and not free from mistakes.

Contains the Adhyāyās 1 to 41 compiete.

Same work as the above.

(ವಿ-ವಿ.)—

ರಾಮಾಯಣ ೧ ರಿಂದ ೪೧ ಅಧ್ಯಾಯಗಳಿವೆ. ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ. ಕವಿಯು ಕುಮಾರ ವಾಲ್ಮೀಕಿಯೆಂಬ ಬಿರುದಾಂಕಿತನಾದ ನರಹರಿಯೆಂಬುವನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೨೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಈ ಗ್ರಂಥದಾದಿಯಲ್ಲಿ ಶಿರುಪ್ಪಾವೈ ಎಂಬ ತಮಿಳು ಗ್ರಂಥದ ಎರಡು ಓಲೆಗಳಿವೆ.

No. 133. ಉತ್ತರ ರಾಮಾಯಣ.

UTTARA RĀMĀYAṆA.

Substance, palm-leaf. Size, 18½ × 1¼ inches. Pages, 87. Lines, 9 on a page. Character, Kanarese. Condition, injured. Appearance, old. Mode of writing, good but not free from mistakes.

The other work herein is (1) Hariścandra Kāvya. 46*a*.

Begins on fol. 2*a*.

Contains the Uttara Rāmāyaṇa complete.

A poem in Kanarese in the Bhāmini Ṣaṭpadi metre describing the story of the Uttara Kāṇḍa of the Rāmāyaṇa; by Tirumalevaidya. He was a son of Gaviyaṇṇa who was a Smarta Brahmin.

Beginning:

ಶ್ರೀಮದನುಪಮನಾಮ ಸದ್ಗುಣ ।
ಧಾಮ ಜಿತಸಂಗ್ರಾಮ ದಶಶಿರ ।
ಕಾಮಮದಹರಸೋಮಧರ ಸೀತಾಮನಃಪ್ರೇಮ ॥
ತಾಮರಸಭವಧಾಮ ನತಸು ।
ತ್ರಾಮ ಶೌರ್ಯೋದ್ಧಾಮ ದೇವಲ ।
ಲಾಮ ಪಾಲಿಸು ಭೀಮಬಲ ನಿಸ್ಸೀಮ ರಘುರಾಮ ।
ನೀಲಕಂಠ ಗಿರೀಶ ನಿರ್ಮಲ ।
ಶೂಲಧೆರ ಶುಭ್ರಾಂಗ ಶುಭಕರ ।
ಕಾಲಕಾಲ ಕಪರ್ದಿ ಕರುಣಾಕರ ಕಪಾಲಧರ ॥
ಶೈಲಜಾವರ ಶಂಭು ಶಂಕರ ।
ಭಾಳಲೋಚನ ಭಕ್ತಭಾವವ ।
ಪಾಲಿಸೈಪರಮೇಶ ಮತ್ಕೃತಿಗಮಲ ಮಂಗಳವ ॥

*   *   *   *

ಆದಿಕವಿ ವಾಲ್ಮೀಕಿಮುನಿ ಮೊದ ।
ಲಾದ ಸತ್ಕವಿ ಸಂತತಿಗೆ ಬಿಡ ।
ದಾದಿಯಲಿ ತಲೆವಾಗಿ ಬಣ್ಣಿಸಿ [ಭಜಿಸಿ] ಬಲಗೊಂಡು ॥
ಭೇದಬುದ್ಧಿಯ ಕುಜನರಿದಱತೊಳು ।
ಭೇದಿಸದೆ ದೂಷಣವ ದೂಷಾ ।
ಭೇದಕನ ಕಥೆ ವೇಳ್ವೆನೆಂದೆನೆ ಸುಜನರಾಲಿಪುದು ॥
ಆದಿಯಲಿ ನಾರದನು ಹೇಳಿದ ।
ನಾದಿಕವಿ ವಾಲ್ಮೀಕಿ ಗವನದ ।
ನಾದಿವಿಡಿದು ಸುರಿದನು ರಾಮಾಯಣ ಮಹಾಕೃತಿಯ ।
ಮೇದಿನಿಗೆ ಪೆಸರಾದ ಗವಿಯಣ ।
ಮೇದಿನೀಸುರ ಸೂನು ಪೇಳ್ವನು ।
ಮೇದಿನಿಗೆ ಕನ್ನಡಿಸಿ ತಿರುಮಲೆ ವೈದ್ಯನೀ ಕೃತಿಯ ।

ಕೃತಿಗೆ ಪಿಸರುತ್ತರ ಮಹಾ ಸ ।
ನ್ನುತದ ರಾಮಾಯಣ ವಿದಕೆ ಕೃತಿ ।
ಪತಿ ರಘುಕ್ಷಿತಿನಾಥನೆಂದೊಡದಾರು ಬಣ್ಣಿಸರು ॥

ನುತಿಸದಿಹರಾರಖಿಳ ಕವಿಸಂ ।
ತತಿಯೊಳುಳಿದ ಜನಂಗಳೊಳುರಘು ।
ಪತಿಯು ಪಾವನ ಚರಿತೆಗಳ ನಿರ್ಧೂತದುರಿತಗಳ ॥

* * * *

ಪೇಳದೆನು ರಾಮಾಯಣವನಿದ ।
ನಾಲಿಪುದು ಸಜ್ಜನರು ರಘು ಭೂ ।
ಪಾಲನೆನ್ನಯ ಮನದ ಬಳಿಯೊಳು ತಾನೆ ನೆಲೆಗೊಂಡು ॥

ನಾಲಗೆಗೆ ನಾನಾ ವಿಧಾಕ್ಷರ ।
ಜಲಗಳ ನುಚ್ಚರಿಸು ವತಿಶಯು ।
ದೇಟಿಗೆ ಯನೊಳದಿತ್ತು ಮಾಡಿಸಿದನು ಲಸತ್ಕೃತಿಯು ॥

ಕ್ಷಿಪ್ರದಿಂದಾಲಿಪುದು ಶತಕೋ ।
ಟಿಪ್ರವಿಸ್ತರ ವರಮಹಾ ಕೃತಿ ।
ಸುಪ್ರಸಿದ್ಧ ವಲಾ ಜಗಕೆ ರಘುರಾಮಚರಿತ್ರ ವಿದು ॥

ಸುಪ್ರಕಟದಿತಿಹಾಸ ವಿದೆ ರಘು ।
ಜಪ್ರಭಾವದ ಸೀಮೆಯಿದಱತೊಳು ।
ಸುಪ್ರಯುಕ್ತ [ದ ಸೀಮೆಯೆ] ಬಣ್ಣಿಸುವರಾರಿದನು ॥

Colophon:

ಪೀಠಿಕಾ ಸಂಧಿ ಸಮಾಪ್ತಂ.

ಸೂ ॥ ಪೇಳದನು ಪೌಲಸ್ತ್ಯ ವಂಶವಿ ।
ಶಾಲವನು ರಘುಪತಿಗೆ ಮುನಿಜನ ।
ಪಾಲನೆನಿಸುವಗಸ್ತ್ಯ ಮುನಿವರನುಚಿತ ವಚನದಲಿ ॥

* * * *

ಕಂಡನೈ ಕಾಂಚನ ಸರೋರುಹ ।
ಷಂಡಮಯು ಶರವಣ ನಿಕರದು ।
ದ್ದಂಡ ಕಾಂಚದ್ರುಮ ನಿಕುಂಜಲತಾ ನಿಕೇತನವ ॥

ತಂಡತಂಡದ ಯಕ್ಷಜನದೆಳ ।
ಪೆಂಡಿರಕ್ಷಿ ವಳರ್ಕ್ಷಶೋಭಾ ।
ಮಂಡಲವ ಕೈಲಾಸ ಶೈಲವನಾ ದಶಗ್ರೀವ ॥

ಪೇಳಲೇ ನಾರಜತ ಶೈಲದ ।
ಮೇಲೆ ನಡೆಯದೆ ವರ ವಿಮಾನದ ।
ಲೀಲೆ ನಿಂದುದು ದಶಶಿರನ ಭುಜಶೌರ್ಯ ನಿಲುವಂತೆ ॥

ಕಾಲಗತಿಯೋ ಗತಿಯುಡುಗಿತೀ ।
ಶೈಲದಗ್ರದೊಳೀ ವಿಮಾನ ವಿ ।
ಶಾಲಮತಿ ಮಾರೀಚ ಪೇಳೆನಲಾತನಿಂತೆಂದ ॥
ಆದೊಡಿದು ವೈಶ್ರವಣಗಲ್ಲದೆ ।
ಮೇದಿನಿಯೊಳನ್ಯರ್ಗೆ ನಡೆಯದು ।
ಕಾದಿಗೆಲಿದೀಳ್ಕೊಂಡೆವೈ ಸಲೆತಥ್ಯವಿದ ನೆನಲು ॥
ಆದರಿಸು ದಶವದನ ಹಿಮ್ಮೆ ।
ಟ್ಟೇ ಧರಾಧರದೊಳು ಕಪರ್ದಿ ವಿ ।
ನೋದಿಸುತ್ತಿಹನೆಂದು ನಂದೀಶ್ವರ ನಿರೂಪಿಸಿದ ॥
ಈ ಮಹೀಧರದಗ್ರದೊಳು ಸು ।
ತ್ರಾಮ ಪರಮೇಷ್ಠಿ ಪ್ರಭೃತಿ ಸುರ ।
ತಾಮಸೇಚರ ಯಕ್ಷಕಿನ್ನರ ಕಿಂಪುರುಷರೆನಿಪ ॥
ಕಾಮಗಾಮಿಗಳೈದ ಲಸದಳ ।
ವೈಮಹಾದೇವ ಪ್ರಭಾವದ ।
ಸೀಮೆಯಲಿ ಹಿಮ್ಮೆಟ್ಟು ಕೆಡಬೇಡೆಱಿಯೆ ನೀನೆಂದ ॥
ಎಂದ ಶಂಕರನಪರ ರೂಪಿನ ॥
ನಂದಿಕೇಶನ ಮೊಗವ ನೀಕ್ಷಿಸಿ ।
ಮಂದಹಾಸವ ಸೂಸಿದನು ವಾನರ ಮುಖಾಕೃತಿ ಗೆ॥
ಮಂದಮತಿ ದಶಮುಖನದಕೆ ಕಡು ।
ನೊಂದು ನಂದೀಶ್ವರನು ಬೞಿಕಿಂ ।
ತೆಂದು ನುಡಿದನು ಕುಟಿಲಮತಿಗತಿರೋಷ ಮುಖನಾಗಿ ॥
ಏನು ದಶಮುಖ ನಿನ್ನ ಶೌರ್ಯವ ।
ದೇನು ಕೊಲಲೆನಗರಿದೆ ದುಷ್ಕೃತ ।
ತಾನೆ ಮಾಳ್ಪುದು ಕುಲವಿನಾಶವ ನಿನಗೆ ತಥ್ಯವಿದು ॥
ವಾನರರು ಮದ್ವೀರ್ಯ ಸಂಭವ ।
ರೇ ನಿಶಾಚರ ನಿನ್ನ ಕೊಂದಪ ।
ರೇನು ಕೊಱತೆ ಮದಾಸ್ಯದೊಳು ದುಷ್ಟಾತ್ಮಹೋಗೆಂದ ॥
ಬಗೆವನೇ ಖಳನಾನುಡಿಯನೀ ।
ನಗವನುನ್ಮೂಲಿಪಿನು ಶಿವ ಗಡ ।
ತಗಹುಗಡ ತನಗೆನುತ ಶೈಲನಿತಂಬ ಕೈತಂದು ॥
ವಿಗಡರಕ್ಕಸನಾಹರಾದ್ರಿಯ ।
ಬಿಗಿದನ್ನೈ ಭುಜಗಳಲಿ ಫಣಿಪತಿ ।
ಬಿಗಿದವೊಲು ಮಂದರವನಂದಂಭೋದಿಮಥನದಲಿ ॥
ಘೀಳಿಡಲು ದಿಗ್ಗಜಗಳಹಿಪನ ।
ಮೌಳ ಕುಸಿಯಲು ಕುಲಶಿಲೋಚ್ಚಯ— ।
ದೋಳಗಳ ಬೆಸುಗೆಗಳು ಬಿಡಲೊಡೆಗಲಸಲಬ್ಧಿಚಯ ॥

ಮೇಲು ಜಗವಲ್ಲಾಡೆ ಭೂತಳ ।
ವಾಟಿಲತಳಗೆ ಬಿರಿಯೆ ದಿಕ್ಕಿನ ।
ಮೂಲೆಗಳ ಕಿತ್ತೆತ್ತಿದನು ಕೈಲಾಸ ಪರ್ವತವ ॥

ತೋಳಬಲು ವಿನ್ನೆಂತೊ ಖಳನು ।
ನ್ಮೂಲಿಸಲು ಪುಟನೆಗೆದು ದಾನಗ ।
ವಾಳುತನದಾಳಾಪ ವಥಟಿಗೆ ನಡುಗುತಖಿಲಜನ ॥

ಶೈಲಸುತೆ ಬಿಗಿಯಪ್ಪಿದಳು ಶಶಿ ।
ಮೌಳಿಯನು ಶಿವನಱಿದು ಮೆಲ್ಲನೆ ।
ಲೀಲೆಯಿಂದೊತ್ತಿದನು ಚರಣಾಂಗುಷ್ಠದಲಿ ನಗವ ॥

ಎತ್ತುವನು ದಶಮೌಳಿ ಮಗುಳದ— ।
ನೊತ್ತುವನು ಶಶಿಮೌಳಿ ಜಡಿದೊಲಿ ।
ದೆತ್ತುವನು ದಶಕಂಠ ನೊಡನೊತ್ತುವನು ಶಿತಿಕಂಠ ॥

ಎತ್ತುವನು ದನುಜೇಶ ನೊಡೆಸದ— ।
ನೊತ್ತುವನು ಪರಮೇಶ ನಗವೆಸೆ ।
ದತ್ತ ಧರಣೀದೇವಿ ತಿಱಿಕಲ್ಲಾಡು ವಂದದಲಿ ॥

End:

ಆ ಮಹಾ ಸಾಕೇತಪುರ ವದು ।
ರಾಮನೈದಿದ ಬೞಿಕ ಸುಜನ ।
ಸ್ತೋಮವಾಗಿಯನೇಕ ದಿನವಿರುತಿರೆ ತದನ್ವಯದ ॥

ಭೂಮಿ ಪಾಲರೊಳುದಿಸಿ ತತ್ಪುರ ।
ಕಾಮಿನಿಗೆ ಪತಿಯೆನಿಸಿ ಶೌರ್ಯೋ ।
ದ್ಧಾಮನಿರ್ದನು ವೃಷಭನೆನೆ ಮಂಗಳ ವಿದೀಕೃತಿಗೆ ॥

ಕಾಲಕಾಲಕೆ ಕೊಳ್ಗ ಮಳೆಭುವ ।
ನಾಳಗೊದವುಗೆ ಸಸ್ಯಕುಲಕೆ ಫ ।
ಲಾಳಿಯಾನಂದದಲಿ ಜೀವಿಸುಗಖಿಲ ಭುವನಚಯ ॥

ಪೀಳಲೇನಾಚಂದ್ರ ತಾರಕ— ।
ವೀಲಸತ್ಕಾವ್ಯಾಮೃತವ ನೊಲಿ— ।
ದಾಲಿಸುಗೆ ಸುಜನಾಳಿ ಬೆಳಗುಗೆ ಕೀರ್ತಿ ಕೃತಿಪತಿಯ ॥

ದಾ(ಂ)ಟುವರೆ ರಾಮಾಯಣಾಬ್ಧಿ ನೃ ।
ಕೇಟರೀ ಸನ್ಮತಿಗಹುದೆ ಶತ ।
ಕೋಟಿವಿಸ್ತರವೆನಲು ಚಂದ್ರಾದ್ಯರಿ ಗಲಂಘ್ಯವಲಾ ॥

ಕೋಟಿದುರಿತ ಕುಲಾದ್ರಿ ಕುಲಶತ ।
ಕೋಟಿ ಮುಕ್ತ್ಯಂಗನೆಯ ಕೂಟದ ।
ಕೋಟಿ ರಾಮಚರಿತ್ರವೆನೆ ವಿಸ್ತರಿಪರಾರೆಂದ ॥

ಅಕ್ಷಯಾತ್ಮ ವಿಪಕ್ಷದಾನವ ।
ಶಿಕ್ಷ ದುಷ್ಕೃತ ರೂಕ್ಷಸುಮನಸ ।
ಪಕ್ಷ [ಲೋಕಾಧ್ಯಕ್ಷ] ಕೌಸ್ತುಭಲಕ್ಷ ಘನವಕ್ಷ ॥
ಪಕ್ಷಿರಥ ಕಮಲಾಕ್ಷ ಕಿನ್ನರ ।
ಯಕ್ಷ ಸುರಮುನಿರಕ್ಷ ಸುಜನಾ ।
ಪೇಕ್ಷ ನರಹರ್ಯಕ್ಷ ಪಾಲಿಸು ಮೋಕ್ಷಪದ ದಕ್ಷ ॥

Colophon :

ಅಂತು ಸಂಧಿ ೨೦ ಕ್ಕಂ ಮಂಗಳಂ.

ಪ್ರಹ್ಲಾದ ನಾರದ ಪರಾಶರ ಪುಂಡರೀಕ
ವ್ಯಾಸಾಂಬರೀಷ ಶುಕಶೌನಕ ಭೀಷ್ಮದಾಲ್ಭ್ಯಾನ್ ॥
ರುಕ್ಮಾಂಗದಾರ್ಜುನ ವಶಿಷ್ಠ ವಿಭೀಷಣಾದೀನ್ ।
ಪುಣ್ಯಾನಿಮಾನ್ ಪರಮಭಾಗವತಾನ್ ಸ್ಮರಾಮಿ ॥
ಕಲ್ಯಾಣಾದ್ಭುತ ಗಾತ್ರಾಯ । ಕಾಮಿತಾರ್ಥ ಪ್ರದಾಯಿನೆ ॥
ಶ್ರೀಮದ್ವೇಂಕಟ ನಾಥಾಯ । ಶ್ರೀನಿವಾಸಾಯತೇ ನಮಃ ॥

ಇತಿ ಶ್ರೀಮದನೂನ ವರಪ್ರಸನ್ನ ತೊರವೆಯ ನಾರಸಿಂಹ ಶ್ರೀಪಾದಪಂಕಜ ಪರಾಗ ಲೇಪ ನಾಂಗ ಲೀಲಾ ಪ್ರಮೋದ ವಾಗ್ವಧೂಷಟ್ಪದ . . ಪ ಶ್ರೀಮತ್ಕುಮಾರ ವಾಲ್ಮೀಕಿ ವಿರಚಿತ ಮಪ್ಪ ಕರ್ಣಾಟಕ ರಾಮಾಯಣ ಕಥಾ ಕುಸುಮ ಮಂಜರಿಯೊಳುತ್ತರ ಕಥಾ ಪ್ರಸಂಗಂ ಸಂಪೂರ್ಣಂ.

(ವಿ-ವಿ.)—

ಉತ್ತರರಾಮಾಯಣ ಸಂಪೂರ್ಣವಾಗಿದೆ. ಶಿಥಿಲ. ಬರೆವಣಿಗೆ ಉತ್ತಮವಾದುದು. ತಪ್ಪುಗಳು ಅಷ್ಟಾಗಿಲ್ಲ. ಗ್ರಂಥ ಕರ್ತನು ತನ್ನನು ಗವಿಯಣ್ಣನ ಮಗನಾದ ತಿರುಮಲೆ ವೈದ್ಯನು ಎಂದು ಆದಿಯಲ್ಲಿ ಹೇಳಿಕೊಂಡಿದ್ದಾನೆ. ಈತನು ಪೂರ್ವ ಕನ್ನಡ ಕವಿಗಳಲ್ಲಿ ಯಾರ ಹೆಸರನ್ನೂ ಹೇಳದೆ 'ಆದಿಕವಿ ವಾಲ್ಮೀಕಿಮುನಿ ಮೊದಲಾದ ಸತ್ಕವಿ ಸಂತತಿಗೆ ಬಿಡದಾದಿಯಲಿ ತಲೆವಾಗಿ ಬಣ್ಣಿಸಿ ಭಜಿಸಿ ಬಲಗೊಂಡು . . . . . ಕತೆ ಪೇಳ್ವೆಂ' ಎಂದು ಹೇಳಿರುತ್ತಾನೆ. ಮ॥ ಆ. ರಾಮಾನುಜಯ್ಯಂಗಾರ್ಯರಿಂದ ಮುದ್ರಿಸಲ್ಪಟ್ಟಿರುವ ಪ್ರತಿಯಲ್ಲಿ 'ತಿರುಮಲೆ ವೈದ್ಯವಿರಚಿತ ಉತ್ತರರಾಮಾಯಣಂ' ಎಂದಿದೆ. ಆದುದರಿಂದ ಈತನೂ ಕುಮಾರ ವಾಲ್ಮೀಕಿಯೂ ಬೇರೆಬೇರೆ ಕವಿಗಳಾಗುವ ಪಕ್ಷಕ್ಕೆ ಕುಮಾರ ವಾಲ್ಮೀಕಿಯು ರಾಮಾಯಣದಲ್ಲಿ ರಚಿಸದೆ ಬಿಟ್ಟ ಈ ಉತ್ತರ ಭಾಗವನ್ನು ಈತನು ರಚಿಸಿದಂತಾಗುವುದು. ಆದುದರಿಂದ ಕುಮಾರ ವಾಲ್ಮೀಕಿಗಿಂತಲೂ ಈತನು ಈಚೆಗೆ ಎಂದರೆ ಸು. ೧೭ ನೆಯ ಶತಮಾನದಲ್ಲಿ ಇದ್ದಿರಬಹುದೆಂದು ತೋರುತ್ತದೆ.

No. 134. ಉತ್ತರ ರಾಮಾಯಣ.

UTTARA RĀMĀYAṆA.

Substance, Śrītāḷa. Size, $10\frac{1}{4} \times 2\frac{1}{8}$ inches. Pages, 66. Lines, 12 on a page. Character, Kanarese. Condition, injured. Appearance, old. Mode of writing, not bad, but not free from mistakes.

Contains the Adhyāyās 12 to 17 complete and 11th, 19th & 20th incomplete.

Same work as the above.

(ವಿ-ವಿ.)—

ರಾಮಾಯಣ ಉತ್ತರ ಕಾಂಡದಲ್ಲಿ ಹನ್ನೆರಡರಿಂದ ಹದಿನೇಳು ಅಧ್ಯಾಯಗಳು ಸಮಗ್ರವಾಗಿಯೂ, ಹನ್ನೊಂದು ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಅಧ್ಯಾಯಗಳು ಅಸಮಗ್ರವಾಗಿಯೂ ಇವೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ— ಇದು ಶಿಥಿಲ. ಬರೆವಣಿಗೆಯು ಉತ್ತಮವಲ್ಲ. ತಪ್ಪುಗಳಿವೆ. ಕವಿ ತಿರುಮಲೆವೈದ್ಯನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೩೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 135. ಉತ್ತರ ರಾಮಾಯಣ.

UTTARA RĀMĀYAṆA.

Substance, Śritāḷa. Size, $10\frac{1}{4} \times 1\frac{3}{16}$ inches. Pages, 108. Lines, 12 on a page. Character, Kanarese. Condition, injured. Appearance, old. Mode of writing, not good and not free from mistakes.

Contains the Adhyāyās 1 to 11 complete and Adhyāyās 12, 18 and 19 incomplete.

Same work as the above.

(ವಿ-ವಿ.)—

ರಾಮಾಯಣ ಉತ್ತರಕಾಂಡ ಮೊದಲಿಂದ ಹನ್ನೊಂದು ಅಧ್ಯಾಯಗಳು ಸಮಗ್ರವಾಗಿವೆ. 12, 18 ಮತ್ತು 19 ನೆಯ ಅಧ್ಯಾಯಗಳು ಅಸಮಗ್ರವಾಗಿವೆ. ಶಿಥಿಲ. ಬರವಣಿಗೆ ಉತ್ತಮವಲ್ಲ. ತಪ್ಪುಗಳಿವೆ. ಕವಿ ತಿರುಮಲೆ ವೈದ್ಯನು. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ೧೩೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 136. ರಾಮಾಯಣ (ವಚನ).

RĀMĀYAṆA (PROSE).

Substance, palm-leaf. Size, $17\frac{1}{2} \times 1\frac{5}{8}$ inches. Pages, 316. Lines, 7 on a page. Character, Kanarese. Condition, very much injured. Appearance, old. Mode of writing, not bad and not free from mistakes.

Contains the Adhyāyās 63 to 107 complete, and 62 and 108 incomplete in the Yuddhakāṇḍa.

A prose version describing the story of the **Yuddhakāṇḍa** of the Sanskrit Vālmīki Rāmāyaṇa. The name of the author is not given.

Beginning :

ಕೈಬಿ ಕತ್ತಿ ತೆ[ಗೆದು]ಕೊಂಡು (ಹೋದರು) ಝಳಪಿಸಿ ರಾಕ್ಷಸರೆಲ್ಲ ಕೇಳುವ ಹಾಗೆ ಇಂತೆಂದನು. ಬಹಳ ಪ್ರತಾಪದಿಂದ ಧನುರ್ಬಾಣಗಳು ಧರಿಸಿ ರಾವಣೇಶ್ವರನ ಅಪ್ಪಣೆಯಿಂದ

ಕಪಿನಾಯಕರ ತಲೆಗಳನೆಲ್ಲ ಕಡಿದು ರಾಮಲಕ್ಷ್ಮಣರ ಭೂಮಿಯಲ್ಲಿ ಕೆಡಹಿ ನರವಾನರರ ಬಲವೆಂಬ ಅಡವಿಗೆ ನಾನೇ ಕಾಡುಗಿಚ್ಚಾಗಿ ಸುಟ್ಟು ನಿರ್ಧೂಮ . . ಮಾಡಿ, ಜಯಶಾಲಿಯಾಗಿ ಬರುತ್ತಾ ಇದೇನೆ. ನನ್ನ ಪ್ರತಾಪವನೋಡಿ ಎಂದು ರಾವಣನ ಸಭೆಯಲ್ಲಿ ಮಂದಲಿಸಿ, ಗಜವನೇರಿ ಬಲಸ್ತೋಮದಿಂದ ಪಯಣವಾಗಿ ಬರುವಾಗ ಘನಗಾತ್ರವಾದ ಮದ್ದಾನೆಗಳ ಘೀಂಕಾರಗಳು ಕುದುರೆಗಳ ಶಫಾಧ್ವನಿಗಳು ರಥದ ಗಾಲಿಗಳ ಚೀತ್ಕಾರಗಳು ರಾಕ್ಷಸರ ಸಿಂಹನಾದಧ್ವನಿಗಳು ಗಂಭೀರನಾದ ದುಂದುಭಿ ಭೇರಿ ಮೊದಲಾದ ವಾದ್ಯಧ್ವನಿಗಳು, ದೊಡ್ಡ ದೊಡ್ಡ ಶಂಖಧ್ವನಿಗಳು ದಿಕ್ಕುಗಳನೆಲ್ಲ ಒಡೆಯುವ ಹಾಗೆ ಬಹಳ ಉಗ್ರದಿಂದ ಎಲಾ ! ಮೊದಲಾದ ರಭಸಗಳಿಂದ [ರಣ]ಕ್ಕೆ(ಯು) ಹೊರಟು ಬರುವಾಗ ಅಪಶಕುನಗಳು ಅನೇಕವಾಗಲು ಲಕ್ಕಿಸದೆ ರಾಕ್ಷಸರು ಕಪಿಬಲದ ಮೇಲೆ ಕವಿಯಲು ಆ ಉಭಯ ದಳವೂ ಜಗದಾಶ್ಚರ್ಯವಾದ ಯುದ್ಧವಂ ಮಾಡುವಲ್ಲಿ ಬೆಟ್ಟಗಳು ಕಲ್ಲುಗಳು ಮರಗಳು ಬಹಳವಾಗಿ ತಂದು ಬಾಹುಶಕ್ತಿಯಿಂದ ಕಪಿಗಳು ರಾಕ್ಷಸರ ಮೇಲೆ ಪ್ರಯೋಗಿಸಲು ಅವೆಲ್ಲವನ್ನೂ ದಿವ್ಯಬಾಣಗಳಿಂಬಿಟ್ಟು ಪುಡಿಪುಡಿಮಾಡಿ ಮತ್ತೂ ಅನೇಕ ಬಾಣಗಳಂ ಪ್ರಯೋಗಿಸಿ ಕಪಿಗಳಂ ಗಾಯವಂಮಾಡಿ, ಗದಾಘಾತಗಳಿಂದ ನುಗ್ಗುನುಗ್ಗುಮಾಡಿ ಅಡಿದ(?)ವೆಂಬ ಆಯುಧದಲ್ಲಿ ತಲೆಗಳಂ ಕಡಿದು ಶಕ್ತಿಯಿಂದ ಕಪಿಗಳ ಶರೀರಗಳು ತಟಾಯ (?) ಚುಚ್ಚಿ ತಗುಳಿಕುಂತದಿಂದ ಇರಿದು ಭಯಂಕರವಾದ ತೋಮರಗಳಲ್ಲಿ ಹೊಯಿದು ಭಿಂಡಿವಾಳದಲ್ಲಿ ಪುಡಿಮಾಡಿ ಮುಸಲದ ಪೆಟ್ಟುಗಳಿಂದ . . . ಬಿಸಿಮಾಡಿ ಪರಶುವಿನಲ್ಲಿ ಕಡಿದು ಈಪ್ರಕಾರದಲ್ಲಿ ಆಡಿನ ಹಿಂಡಿನೊಳಗೆ ಮಾರಿ ಮುಸಗಿದ ಹಾಗೆ ಮಕರಾಕ್ಷನು ಕರುಣವಿಲ್ಲದೆ ಕಪಿಸೇನೆಯಲ್ಲ ಸಂಹರಿಸುವಾಗ ಆ ರಾಕ್ಷಸನಿಗೆ ಇದಿರಾಗಿ ನಿಂದು ಜಗಳವಾಡುವುದಕ್ಕೆ ಸಾಮರ್ಥ್ಯವಿಲ್ಲದೆ ಕಪಿ ಸೈನ್ಯವು ಓಡಿ ಹೋಯಿತು.

* * * *

ಮಕರಾಕ್ಷನ ಎದೆಗೆ ಪಾವಕಾಸ್ತ್ರವಂ ಪ್ರಯೋಗಿಸಿ . . . . ಗರಿ . . . . . . ಹಾಗೂ, ಮತ್ತೊಂದು ದಿವ್ಯ ಬಾಣವ ಪ್ರಯೋಗಿಸಿ ಆ ಮಕರಾಕ್ಷನ ಶಿರವ ಭೇದವಂಮಾಡಲು ತಲೆ ಅಂಬರಕ್ಕೆ ಹಾರಿತು. ಮುಂಡ ನೆಲಕ್ಕುರುಳಿತು. ಈ ಪ್ರಕಾರ ಮಕರಾಕ್ಷನು ಹತನಾದುದಂಕಂಡು ಹತಶೇಷ ರಾಕ್ಷಸರು ಭಯಪಟ್ಟು ಓಡಿ ಹೋಗಿ ಲಂಕೆಯಂ ಹೊಕ್ಕು ರಾವಣೇಶ್ವರನಿಗೆ ಸಮರ ವೃತ್ತಾಂತವಂ ತಿಳುಹಲಾಗಿ ಮಕರಾಕ್ಷನು ಸತ್ತುದಂ ನೆನೆದು ಬಹಳ ದುಃಖಾಕ್ರಾಂತನಾಗಿ ಮೂರ್ಛೆವೋಗಿ, ತಿಳಿದು ತನ್ನ ಮಂತ್ರಿಗಳ ಕೂಡೆ ಇಂತೆಂದನು.—

Colophon :

ಇದು ಶ್ರೀಮದ್ರಾಮಾಯಣದಲ್ಲಿ ಯುದ್ಧಕಾಂಡದಲ್ಲಿ ಮಕರಾಕ್ಷನ ವಧೆ ಯೆಂಬ ಐವತ್ತಮೂರನೆಯ ಸರ್ಗವು ಸಮಾಪ್ತಿಯಾದುದು.

ಆ ತದನಂತರದಲ್ಲಿ ರಾವಣನು ಮಂತ್ರಿಗಳ ಕೂಡೆ ಇಂತೆಂದನು. ಸ್ತುತಿಮಾಡತಕ್ಕಂತಹ ಪರಾಕ್ರಮ ವುಂಟಾದ, ಬಾಹುಬಲದಲ್ಲಿ ಒಪ್ಪುವಂತಹ ರಾಮಲಕ್ಷ್ಮಣ ಸುಗ್ರೀವ ಮೊದಲಾದ ಕಪಿನಾಯಕರಂ ಜೈಸುವುದಕ್ಕೆ ನೀನು ಹೊರತಾಗಿ ಮಿಕ್ಕಾದ ರಾಕ್ಷಸರಾರುಂಟು. ಅದು ಕಾರಣದಿಂದ ಎಲೈ ! ಇಂದ್ರಜಿತುವೆ !! ರಾಕ್ಷಸ ಬಲವ ಕೂಡಿಕೊಂಡು ರಾಮಲಕ್ಷ್ಮಣರ ಮೇಲೆ ಯುದ್ಧಕ್ಕೆ ಹೋಗು ಎಂದು ತನ್ನ ಮಗನ ಕೂಡೆ ಹೇಳಲಾಗಿ ಇಂದ್ರಜಿತು ಮಹಾ ಪ . . . . . . ದ ಸೂರ್ಯ ದೇವರ ಪ್ರತಾಪ ದೋಪಾದಿಯಲ್ಲಿ ಯುದ್ಧಸನ್ನದ್ಧ . . . .

* * * *

ಸುಷೇಣನು ಬಂದು ರಾಮಚಂದ್ರನಿಗೆ ನಮಸ್ಕರಿಸಿ ಇಂತೆಂದು ಬಿನ್ನಹ ಮಾಡಿದನು.
ಸ್ವಾಮಿ ! ರಾಮಚಂದ್ರ ! ಪ್ರಾಕೃತ ಮನುಷ್ಯನೋಪಾದಿಯಲ್ಲಿ ದುಃಖಪಡುವುದು ತರವಲ್ಲ.
ಯಾವುದೊಂದು ಕಾರ್ಯವುಂಟಾದರೂ ಧೈರ್ಯವನ್ನು ಬಿಡದೇ ಇದ್ದವರಿಗೆ ಸಕಲ ಶ್ರೇಯಸ್ಸೂ
ಉಂಟಾಗುವುದು. ದುಃಖಪಡುವುದರಿಂದ ಸಕಲ ಕಾರ್ಯವೂ ನಷ್ಟವಾಗಿ ಹೋಗುವುದು.
ನೀವು ಸಕಲ ಧರ್ಮ ರಹಸ್ಯವನೆಲ್ಲ ಬಲ್ಲವರು. ನಾನು ನಿಮಗೆ ಹೆಚ್ಚಿಗೆ ಹೇಳತಕ್ಕವನಲ್ಲ.
ಆದರೆ ಈ ಲಕ್ಷ್ಮಣನ ಶರೀರದಲ್ಲಿ ಪ್ರಾಣಗಳು ಇದ್ದಾವು. ಕಣ್ಣುಗಳು ಕಮಲದ ಎಸಳನೋ
ಪಾದಿಯಲ್ಲಿ ಪ್ರಕಾಶವಾಗಿ ಇರುವುವು. ಮುಖ ಕಮಲವು ಬಹಳ ಕಾಂತಿಯಿಂದ ಪೂರ್ಣಚಂದ್ರ
ನೋಪಾದಿಯಲ್ಲಿದ್ದೀತು. ಕ್ಷೀರಸಾಗರದಲ್ಲಿ ಆದಿಶೇಷನ ಮೇಲೆ ಪವಡಿಸಿದಂಥ ವಿಷ್ಣುದೇವ
ರು ಯೋಗನಿದ್ರೆಯಲ್ಲಿದ್ದಹಾಗೆ ಇದ್ದೀತು. ನಿದ್ರೆಹೋಗುವವನ ಎದೆ ತಲ್ಲಣ ಗೊಂಡಹಾಗೆ
ಯೂ, ಶರೀರದಲ್ಲಿ ಉಷ್ಣವಾಗಿಯೂ ಇರುವುದು. ಇವನ ಶರೀರದಲ್ಲಿ ಪ್ರಾಣವಿರುವುದು.
ಇದು ನಿಶ್ಚಯ ಎಂದು ರಾಮಚಂದ್ರನಕೂಡೆ ಬಿನ್ನಹಮಾಡಿ ಹನುಮಂತನಂ ನೋಡಿ ಇಂತೆಂ
ದನು. ಎಲೈ ಹನುಮಂತಾ ! ಮೊದಲು ಜಾಂಬವಂತನು ಮಹೌಷಧಿಗಳಿರುವಂತಹ ಪರ್ವತಕ್ಕೆ
ದಾರಿಯನ್ನು ಹೇಳಿ ಸೌವರ್ಣಕರಣಿಯೆಂದೂ, ಸಂಜೀವಕರಣಿಯೆಂದೂ, ಸಂಧಾನ ಕರಣಿ
ಯೆಂದೂ, ವಿಶಲ್ಯಕರಣಿಯೆಂದೂ, ಈ ನಾಲ್ಕು ಬಗೆಯ ಔಷಧಗಳಂ ತಂದು ಈ ಲಕ್ಷ್ಮಣ
ನಂ ಎಬ್ಬಿಸಬೇಕು. ಅದು ಕಾರಣ ಈ ಲವಣ ಸಮುದ್ರವಂ ದಾಂಟಿ ಆಚೆ ಕುಶದ್ವೀಪವನತಿ
ಕ್ರಮಿಸಿ ಕ್ಷೀರ ಸಮುದ್ರವಂಲಂಘಿಸಿ, ಅದಕ್ಕುತ್ತರದಲ್ಲಿ ದ್ರೋಣಗಿರಿ ಚಂದ್ರಗಿರಿಗಳಲ್ಲಿ ಅಮೃ
ತವಳ್ಳಿ ಯಿದ್ದೀತು. ಅಲ್ಲಿ ಔಷಧಗಳುಂಟು ಹಗಲು ಕಾಣ ಬಾರದೇ ಇಹುದು. ರಾತ್ರಿಯಲ್ಲಿ
ಪ್ರಕಾಶವಾಗಿಹುದು. ಅಲ್ಲಿ ಗಂಧರ್ವರು ಅನೇಕಮಂದಿ ಔಷಧಗಳಂ ಕಾಮುಕೊಂಡಿಹರು.
ಅವರೊಳಗೆ ಯುದ್ಧನಾದೀತು. ಮತ್ತು ನಡುನಡುವೆ ಕಾಮರೂಪ ಧಾರಿಗಳಾದ ಮಾಯಾ
ವಿದ್ಯೆಗಳಲ್ಲಿ ಪ್ರವೀಣರಾದ ರಾಕ್ಷಸರಿರುವರು. ಅವರು ಯುದ್ಧವಂ ಮಾಡಿಯಾರು. ಬಹಳ
ಎಚ್ಚರಿಕೆಯಿಂದ ಹೋಗಿ ಬರಬೇಕು. ಇಲ್ಲಿಗೆ ಆರುಲಕ್ಷದ ನಾಲ್ವತ್ತು ಯೋಜನ ದಾರಿಯನ್ನು
ಸೂರ್ಯೋದಯ ವಾಗುವುದಕ್ಕೆ ಮುಂದಾಗಿ ಹೋಗಿ ಬಾರೈಹನುಮಂತಾ ! ತಡವ ಮಾಡಿದರೆ ಕಾ
ರ್ಯವು ಕೆಡುವುದು. ಆ ಔಷಧಗಳ ಕುರುಹು. ಎಲೆ ಬಿಳಿದಾಗಿಹುದು. ಕಾಯಿ ಹಸುರಾಗಿಹು
ದು ಹೂಗಳು ಕೆಂಪಾಗಿರುವುವು. ಈ ಔಷಧಗಳ ಕುರುಹು ನಿಶ್ಚಯವಾಗಿ ಹೇಳಿದ್ದೇನು ಎಂದು
ಸುಷೇಣನು ಹನುಮಂತನಿಗೆ ಹೇಳಲಾಗಿ ರಾಮಚಂದ್ರನು ಬಹಳ ದೈನ್ಯದಿಂದ ಇಂತೆಂದನು. ·

End :

ರಾಮಚಂದ್ರನು ಪ್ರಜೆಗಳಗೆ ತಂದೆಯೋಪಾದಿಯಲ್ಲಿ ಬಹಳ ದಯೆಯಿಂದ (ರಾಜ್ಯಪಾಲನೆ
ಯಂಮಾಡಿ) ಹನ್ನೊಂದು ಸಾವಿರ ವರ್ಷ ನಿರಾತಂಕದಿಂದ ರಾಜ್ಯವನಾಳಿದನು. ಎಂದು
ಶ್ರೀಮದ್ರಾಮಾಯಣದ ಕಥೆಯನ್ನು ವಾಲ್ಮೀಕಿಯು ಕುಶಲವರಿಗೆ ಹೇಳಿದನು. ಶ್ರೀಮದ್ರಾಮಾ
ಯಣವನ್ನು ಯಾರಾದರೂ ಕೇಳಿದರೂ, ಬರೆದರೂ, ಓದಿದರೂ ಆ ಪುಣ್ಯಾತ್ಮರು ಪಾಪವೆಂಬ
ಸಮುದ್ರವನ್ನು ದಾಟಿ ಧರ್ಮಾರ್ಥ ಕಾಮ ಮೋಕ್ಷಗಳನ್ನು ಪಡೆದು ಸುಖದಲ್ಲಿಹರು ಈ ರಾಮಾ
ಯಣದ ಕಥೆಯನ್ನು ಬ್ರಹ್ಮವರದಿಂದ ವಾಲ್ಮೀಕಿಯು ಸಂಸ್ಕೃತದಲ್ಲಿ ರಚಿಸಿದನು. ಆ
ಸಂಸ್ಕೃತಾರ್ಥವನ್ನೇ ಭಾಸ್ಕರನೆಂಬ ಕವೀಶ್ವರನು ತೆಲುಗು ಪ್ರಬಂಧವಂ ಮಾಡಿದನು. ಆ ರಾಮ
ಕಥೆಯನ್ನೇ ಕುಮಾರವಾಲ್ಮೀಕಿಯು ಕನ್ನಡ ಷಟ್ಪದಿ ಪ್ರಬಂಧವ ಮಾಡಿದನು. ಸಂಸ್ಕೃತ
ರಾಮಾಯಣವೇ ಲೋಕೋಪಕಾರಾರ್ಥವಾಗಿ ಸಕಲರಿಗೂ ಕರತಲಾಮಲಕವಾಗಿ ತಿಳಿಯುವ
ಹಾಗೆ . . . .

(ಪಿ-ಪಿ.)—

ರಾಮಾಯಣ ವಚನವು ಯುದ್ಧಕಾಂಡದಲ್ಲಿ 63-107 ಅಧ್ಯಾಯಗಳು ಸಮಗ್ರವಾಗಿವೆ. 62 ಮತ್ತು 108 ನೇಯ ಅಧ್ಯಾಯಗಳು ಅಸಮಗ್ರ. ಈ ನೂರೆಂಟನೆಯ ಅಧ್ಯಾಯದಲ್ಲಿ ಸ್ವಲ್ಪಮಟ್ಟಿಗೆ ಲುಪ್ತವಾಗಿದೆ. ಶಿಥಿಲ. ಅಕ್ಷರಗಳು ಸಾಮಾನ್ಯವಾಗಿವೆ. ತಪ್ಪುಗಳೂ ಸ್ವಲ್ಪ ಉಂಟು. ಗ್ರಂಥಪಾತವು ಅಲ್ಲಲ್ಲಿ ಕಂಡುಬರುವುದು. ಕವಿಯಾರೆಂಬುದು ಈ ಗ್ರಂಥದಿಂದ ತಿಳಿಯುವುದಿಲ್ಲ.

No. 137. ರಾಮಾಯಣ (ವಚನ).

RĀMĀYAṆA (PROSE).

Substance, palm-leaf. Size, 14⅛ × 1¼ inches. Pages, 324. Lines, 6 on a page. Character, Kanarese. Condition, injured. Appearance, old. Mode of writing, not bad but not free from mistakes.

Contains the Kiṣkindhākāṇḍa from the 20th Adhyāyā, Sundarakāṇḍa complete and a small portion in the beginning of the Yuddhakāṇḍa.

A rendering in Kanarese prose describing the story of the Rāmāyaṇa of Vālmīki. The name of the author is not given.

Beginning:

ಉಂಟೋ ಇಲ್ಲವೋ ಎಂಬ ಸಂದೇಹವಿದ್ದಿತು. ಎಂದು ಅಂಗದನು ಹೇಳಲಿಕ್ಕಾಗಿ ಅಂಗದನ ಕೂಡೆ ಜಾಂಬವಂತನು ಇಂತೆಂದನು. ಎಲೈ ಅಂಗದ ! ನಿನಗೆಸು . . . . ಸದಿಂದ ಈ ನೂರು ಯೋಜನ ಸಮುದ್ರವಂ ದಾಟಿ ತಿರುಗಿ ಬರುವಂಥ ಪರಾಕ್ರಮವುಂಟು. ವಾಲಿಯ ಪರಾಕ್ರಮಕ್ಕೆ ಸರಿಸಮಾನನಾದವನು. ವಾಲಿಗೆ ಬಹು ತ್ವರಿತದಿಂದ ಸಾವಿರಯೋಜನವಂ ದಾಟುವ ಸಾಮರ್ಥ್ಯವುಂಟು. ಅಂಥಾ ವಾಲಿಯ ಕುಮಾರನಲ್ಲವೆ ನೀನು ಸುಗ್ರೀವನೂ ಮಹಾಬಲವೇಗಗಳುಂಟಾದವನು. ಏತಕ್ಕಾದರೂ ನೀನೇ ಸಮರ್ಥನು. ವಾ . . ನಾವ ಪ್ರಕಾರದಲ್ಲಿ ಸಕಲ ಕಪಿನಾಯಕರೆಲ್ಲರೂ ಹೇಗೆ ಓಲೈಸುವರೋ ಆಪ್ರಕಾರ ಸಕಲರಾದ ಕಪಿನಾಯಕರಿಗೆಲ್ಲಾ ನೀನೇ ದೊರೆ. ಇವರಂ ಶಿಕ್ಷಿಸುವುದಕ್ಕೂ ರಕ್ಷಿಸುವುದಕ್ಕೂ ಕರ್ತನು. ನಿನ್ನ ಆಜ್ಞೆಯೊಳಗೆ ಇರತಕ್ಕವರು. ನಮ್ಮೆಲ್ಲರ ಕೈಯಲ್ಲಿಯೂ ಕೆಲಸಗಳಂ ಕೊಂಡು ನಮ್ಮಂ ಕಳುಹಿಸಿ ಸೀತೆಯ ನೋಡಿಸಬೇಕಲ್ಲದೆ ನೀನು ಹೋಗುವುದು ಧರ್ಮವಲ್ಲ.

* * * *

ಜಾಂಬವಂತನು ಹನುಮಂತನಂ ಬೇಡಿಕೊಂಡು ಮತ್ತಿಂತೆಂದನು. ರಾಮಚಂದ್ರನ ಕಾರ್ಯವಂ ಮಾಡುವುದಕ್ಕೂ ಈ ಸಮುದ್ರವಂ ದಾಂಟುವುದಕ್ಕೂ, ಲಂಕೆಯಂ ಹೊಕ್ಕು ಸೀತಾ ದೇವಿಯನರಸುವುದಕ್ಕೂ, ರಾಮ ಲಕ್ಷ್ಮಣ ಸುಗ್ರೀವರಿಗೆ ಸಂತೋಷವಂ ಮಾಡುವುದಕ್ಕೂ ನೀನೇ ಸಮರ್ಥನು. ನಮ್ಮೆಲ್ಲರನ್ನೂ ರಕ್ಷಿಸಯ್ಯಾ ಎಂದು ಹನುಮಂತನಂ ಬೇಡಿಕೊಳ್ಳಲಿಕ್ಕಾಗಿ ಕೇಳಿ ಮಹಾ ಸಂತೋಷಪಟ್ಟು ಹನುಮಂತನು ಮಹೋತ್ಸಾಹದಿಂದ ಆಕಾಶಕ್ಕೆ ಏಕವಾಗಿ ಬೆಳೆದು ಮಹಾಮೇರುವಿನೋಪಾದಿಯಲ್ಲಿ ಬಾಲ . ಳಿಯ ಬಿಟ್ಟುಕೊಂಡು ಬಾಲ ಸೂರ್ಯನ ಹಾಗೆ ಮುಖವನ್ನು ಕೆಂಪಗೆ ಮಾಡಿಕೊಂಡು ತ್ರಿವಿಕ್ರಮಾಕಾರದ ವಿಷ್ಣುವಿನೋಪಾದಿಯಲ್ಲಿ ಮದವೇರಿದ ಸಿಂಹದೋಪಾದಿಯಲ್ಲಿ, ಸಕಲವಾದ ಕಪಿ ಸೇನೆಗಳೆಲ್ಲ ಸಂತೋಷಪಡಲಿಕ್ಕಾಗಿ ಹುಣ್ಣಿಮೆಯ ದಿನದಲ್ಲಿ ಸಮುದ್ರನು ಉಬ್ಬಿಪೊಂಗಿದ ಹಾಗೆ ( ) ಶರೀರ ಬೆಳೆದು ಬಹಳ ಸಂತೋಷದಿಂದ ಕಪಿನಾಯಕರ ಕೂಡೆ ಇಂತೆಂದನು.

Colophon:

ಇದು ಶ್ರೀಮದ್ರಾಮಾಯಣದಲ್ಲಿ ಕಿಷ್ಕಿಂಧಾಕಾಂಡದಲ್ಲಿ ಇಪ್ಪತ್ತನೆಯ ಸರ್ಗಂ ಸಮಾಪ್ತಂ.—

ಆಮೇಲೆ ಹನುಮಂತನು ಇಂತೆಂದನು. ಎಲೈ ಕಪಿನಾಯಕರಿರಾ ! ನಮ್ಮ ತಂದೆ ತಾಯಿಗಳ ಪ್ರಭಾವವಂ ಕೇಳಿ. ಪಶ್ಚಿಮ ಸಮುದ್ರ ತೀರದಲ್ಲಿ ಮುನೀಶ್ವರರು ಸೇವಿಸಿಕೊಂಡಿರುವಂಥ ಪ್ರಭಾಸವೆಂಬ ಪುಣ್ಯತೀರ್ಥವುಂಟು.

* * * *

ಎಲೈ ರಾವಣೇಶ್ವರನೆ ! ಸುಗ್ರೀವನು ನಿನ್ನೊಡ ಹುಟ್ಟಿದವನು. ನಿನ್ನ ಯೋಗಕ್ಷೇಮವನ್ನು ಕೇಳಿದನು. ರಾಮಚಂದ್ರನೂ ಸುಗ್ರೀವನೂ ನಿನಗೆ ಬುದ್ಧಿಮಾರ್ಗವಾಗಿ ಹೇಳಿರುವರು ಕೇಳು. ಧಶರಥರಾಯನ ಮಗನಾದ ರಾಮಚಂದ್ರನು ಸೀತಾ ಲಕ್ಷ್ಮಣ ಸಮೇತನಾಗಿ ತಮ್ಮ ತಂದೆಯಾಜ್ಞೆಯಂತೆ ವನವಾಸವಂ ಮಾಡುವಲ್ಲಿ ದಂಡಕಾರಣ್ಯದಲ್ಲಿ ಮದೋನ್ಮತ್ತರಾದ ರಾಕ್ಷಸರನೇಕಮಂದಿಯಂ ವಧಿಸಿ ಖರದೂಷಣಾದಿಗಳಂ ಸಂಹರಿಸಿರುವಲ್ಲಿ ಸೀತಾದೇವಿಯು ಮೋಸ ಹೋಗಲಾಗಿ ತನ್ನ ತಮ್ಮನೂ ತಾನೂ ಎಲ್ಲಾ ಕಡೆಯಲ್ಲಿಯೂ ಅರಸಿ ಋಷ್ಯಮೂಕ ಪರ್ವತವಂ ಸೇರಿ ಸುಗ್ರೀವನ ಸ್ನೇಹವಂ ಮಾಡಿ, ಆ ಸುಗ್ರೀವನ ಪ್ರೀತಿಗಾಗಿ ವಾಲಿಯನಿರಿದು ಆ ವಾಲಿಯ ರಾಜ್ಯಕ್ಕಧಿಪತಿಯಾಗು ಎಂದು ಸುಗ್ರೀವನಿಗೆ ಪಟ್ಟವಕಟ್ಟಿ ಸೀತೆಯ ನರಸಿ ಬನ್ನಿಯೆಂದು ಹೇಳಲು, ಸುಗ್ರೀವನು ಗರುಡ ವಾಯುದೇವರಿಗೆ ಸಮಾನವಾದ ವೇಗವುಂಟಾದ ಮಹಾಬಲಸಂಪನ್ನರಾದ ಅನೇಕ ಬಲಿಮುಖ ಕೋಟಿಗಳನೆಲ್ಲ ಕಡೆಯಲ್ಲಿಯೂ ಸೀತಾದೇವಿಯ ನರಸಿಬನ್ನಿಯೆಂದು ಕಳುಹಿದರು. ಅದು ಕಾರಣ ನಾನು ರಾಮಚಂದ್ರ ಸುಗ್ರೀವರನುಜ್ಞೆಯಿಂದ ಸಮುದ್ರವಂ ಲಂಘಿಸಿ ಲಂಕೆಯಂ ಹೊಕ್ಕು ಅಲ್ಲಿ ಅರಸಿ ಆ ಮೇಲೆ ಅಶೋಕವನದಲ್ಲಿ ಸೀತಾದೇವಿಯಂ ನೋಡಿದೆನು. ಧರ್ಮವಿರುದ್ಧವಾದ, ಕುಲವಂ ನಾಶಮಾಡುವ, ಅನರ್ಥಕಾರಿಯಾದ, ಪಾಪ ಕರ್ಮವಾದ, ಈ ಪರಸ್ತ್ರೀಯ ನಪಹರಿಸುವಂತಹುದು ನಿಮ್ಮಂತಹ ಬುದ್ಧಿವಂತರಿಗೆ ಯೋಗ್ಯವೆ ? ಧರ್ಮವಂ ತಪ್ಪದಿರುವವನು ಎಂದಿಗೂ ಚಲನೆಯಿಲ್ಲದ ಐಶ್ವರ್ಯದಿಂದಿಹನು ಪಾಪವಂ ಮಾಡಿದವನು ಬಹಳ ದುಃಖವನನುಭವಿಸುವನು. ಅದು ನಿಮಿತ್ತ ನೀನು ಪರಸ್ತ್ರೀಯನಪಹರಿಸಿ ತಂದುದರಿಂದ ಕೆಟ್ಟುಹೋಗುತ್ತಲಿದ್ದೀ ಎಂದು ಮೂದಲಿಸಿ ಮತ್ತಿಂತೆಂದನು.

End:

ದೇವೇಂದ್ರಾದಿ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ತ್ರೀಯರುಗಳನೊಪ್ಪಿಸಿ ಸರ್ವಸ್ವವಂ ಕಾಣಿಕೆಯಾಗಿ ಕೊಟ್ಟು ಶರಣುಹೊಕ್ಕು ಭಂಟರಾಗಿ ಓಲೈಸುತ್ತಿದಾರೆ. ಈಶ್ವರನೂ ಬ್ರಹ್ಮದೇವರೂ ದಿನದಿನವೂ ಮಂತ್ರಾಕ್ಷತೆಯನಿಕ್ಕಿ ಹರಸಿ ಹೋಗುತ್ತಾ ಇದಾರೆ. ಈಶ್ವರನ ಕೃಪಾಕಟಾಕ್ಷವುಂಟಾದ ರಾವಣೇಶ್ವರನ ಬಳಿಗೆ ನೀವು ಬಂದರೆ ನಮ್ಮ ದೊರೆಗೆ ತಿಳಿಯ ಹೇಳಿಕೊಂಡು ನಿಮ್ಮ ಕಾರ್ಯವಂ ಸಮರ್ಪಕವಾಗಿ ಮಾಡಿ ವೈರವಿಲ್ಲದ ಹಾಗೆ ನಡೆಸಿಕೊಟ್ಟೇವು. ಈ ಕಾಡು ಕಪಿಗಳ ಮಾತು ಕೇಳಬೇಡಿ ನೀವಿಬ್ಬರೂ ನನ್ನ ಸಂಗಡಬನ್ನಿ. ಬಂದರೆ ದಶಕಂಠನ ಕೈಲಿ ಅಭಯವಕೊಡಿಸಿ ಭರತ ಶತ್ರುಘ್ನರಂ ಹೊರಡಿಸಿ ನಿಮ್ಮ ಅಯೋಧ್ಯೆಯನ್ನು ನಿಮಗೆ ಕೊಡಿಸಿ ರಾಜ್ಯವಾಳುವಹಾಗೆ ಮಾಡುವೆವು. ಈ ಕಾರ್ಯಕ್ಕೋಸ್ಕರ ನಮ್ಮರಸು ನಿಮ್ಮಬಳಿಗೆ ಕಳುಹಿಸಿದನು, ನಮ್ಮ ಸಂಗಡ ಬನ್ನಿ ಎಂದು ಕರೆಯಲಿಕ್ಕಾಗಿ ಕೇಳಿ ಸುಗ್ರೀವನು ಬಹಳ ಕೋ

. . . .

(ವಿ.ವಿ.)—

ವಚನ ರಾಮಾಯಣವು ಅಸಮಗ್ರ ಇದರಲ್ಲಿ ಕಿಷ್ಕಿಂಧಾಕಾಂಡದ ಕೊನೆಯ ಭಾಗ, ಸುಂದರಕಾಂಡ ಮತ್ತು ಯುದ್ಧಕಾಂಡದ ಆದಿ ಭಾಗಗಳು ಇವೆ. ಶಿಥಿಲ. ಲಿಪಿ ಸಾಮಾನ್ಯ ತಪ್ಪುಗಳು ಅಲ್ಲಲ್ಲಿ ಇವೆ. ಗ್ರಂಥಪಾತವುಂಟು. ಕವಿಯಾರೆಂಬುದು ಈ ಗ್ರಂಥದಿಂದ ತಿಳಿಯುವುದಿಲ್ಲ.

No. 138 ರಾಮಾಯಣ (ವಚನ.)

RĀMĀYAṆA (Prose.)

Substance, Srītāḷa. Size, $25\frac{5}{8} \times 2\frac{1}{2}$ inches. Pages, 9. Lines, 12 on a page. Character, Kanarese. Condition, slightly injured. Appearance, old. Mode of writing, not bad, but not free from mistakes. Begins on fol. 156 b.

The other works herein are (1) Bhāgavatā 1 a (2) VālmīkiRāmāyaṇa, 155 a.

Contains the first three Adyāyās in the Bālakāṇḍa.

Describes the story of the Vālmīki Rāmāyaṇa in Kanarese porse. The name of the author is not given.

Beginning :

ಶ್ಲೋಕ ॥ ತಪಃ ಸ್ವಾಧ್ಯಾಯ ನಿರತಂ ।
ತಪಸ್ವೀ ವಾಗ್ವಿದಾಂವರಂ ।
ನಾರದಃ ಪರಿಪಪ್ರಚ್ಛ ।
ವಾಲ್ಮೀಕಿ ರ್ಮುನಿ ಪುಂಗವಂ ॥

ಶ್ರೀಮದಶರಣ್ಯಶರಣ್ಯನಹ ಆರ್ತತ್ರಾಣ ಪರಾಯಣನಹ ಅಂಬುಜಾಕ್ಷನಹ ಯೋಗಿಧ್ಯೇಯಪಾದಾರವಿಂದನಹ ಅವಾಙ್ಮನಸಗೋಚರನಹ ಶ್ರೀ ಲಕ್ಷ್ಮೀಕುಚಕಲಶಕುಂಕುಮಾಂಕಿತವಕ್ಷಸ್ಥಲನಹ ಶ್ರೀಮನ್ನಾರಾಯಣನ ಶ್ರೀ ಚರಣಾರವಿಂದಗಳಲ್ಲಿ ನಿರತಿಶಯಭಕ್ತಿಯುಕ್ತನಾದ ವಾಲ್ಮೀಕಿ ಮುನೀಶ್ವರನಿಂದ ಪ್ರಣೀತವಾದ ಶ್ಲೋಕೈಕಶ್ರವಣತಾವನ್ಮಾತ್ರದಿಂದ ಸಮಸ್ತಕಲಿಕಲ್ಮಷಾಪನೋದನಪಟುತರವಾದ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಸಾಧನವಾದ ಪಂಚಮವೇದವೆನಿಸಿಕೊಳ್ಳುವ ಶ್ರೀಮದ್ರಾಮಾಯಣದಲ್ಲಿ ಆದಿಕಾಲ ವೃತ್ತಾಂತವದೆಂತೆನೆ.

* * * *

ದಶರಥಮಹಾರಾಯನು ಪ್ರಧಾನಿಗಳಿಗೂ ಸಮಸ್ತ ಪ್ರಜೆಗಳಿಗೂ ಸಂತೋಷವಾಗುವ ಪ್ರಕಾರದಲ್ಲಿ ಈ ರಘುನಾಥನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂದು ಪ್ರೀತಿಯಿಂದ ಪಟ್ಟಾಭಿಷೇಕಕ್ಕೆ ಯೋಗ್ಯವಾದ ಸಕಲವಸ್ತುಗಳನ್ನೂ ತರಿಸಿ ಯತ್ನವಂಮಾಡಲಾಗಿ ಆ ಪಟ್ಟಾಭಿಷೇಕ ವೃತ್ತಾಂತವನ್ನು ಪರರ ಮುಖಾಂತರದಿಂದ ದಶರಥರಾಯನ ಪಟ್ಟಮಹಿಷಿಯಾದ ಕೈಕಾದೇವಿಯು ಪೂರ್ವದಲ್ಲಿ ದಶರಥರಾಯನು ತನಗೆ, ಮೆಚ್ಚಿ ಎರಡು ವರಗಳನ್ನು ಬೇಡು ಎನಲಾಗಿ ನೀನು ವರಗಳನ್ನು ಕೊಡಬೇಕಾದರೆ ನಾನು ಕೇಳದಾಗ ಕೊಡಬೇಕೆಂದು (ಬಿನ್ನಹಮಾಡಿಕೊಳಲಾಗಿ) ಆ ದಶರಥರಾಜನು ಈ ರಘುನಾಥನ ಪಟ್ಟಾಬಿಷೇಕಸಮಯದಲ್ಲಿ ಆ ಎರಡು ವರಗಳನ್ನು ಬೇಡಿಕೊ ಎನಲಾಗಿ, (ಆಕೆಯು) ರಘುನಾಥನನ್ನು ವನವಾಸಕ್ಕೆ ಕಳುಹಿಸು ಎನಲಾಗಿ,

ಪರಾಕ್ರಮಿಯಾದ ರಘುನಾಥನು ತನ್ನ ತಂದೆಯಾದ ದಶರಥನ ಪ್ರತಿಜ್ಞೆಯಂ ಪರಿಪಾಲಿಸಬೇಕೆಂದು ಆತನ ಅಪ್ಪಣೆಯಿಂದ ತನ್ನ ಕಿರಿಯ ತಾಯಿಯಾದ ಕೈಕಾದೇವಿಯ ಇಷ್ಟಾರ್ಥಮಂ ನೆರವೇರಿಸಬೇಕೆಂಬ ಬುದ್ಧಿಯಿಂದ ವನವಾಸಕ್ಕೆ ತೆರಳಲು ;

* * * *

ಆವನು ಈ ಚಾರಿತ್ರವನ್ನು ಪಠಿಸುತ್ತಿದ್ದಾನೋ ಆ ಪುಣ್ಯಾತ್ಮನು ಈ ಮಧ್ಯಮಲೋಕದಲ್ಲಿ ಸಮಸ್ತಪಾತಕಂಗಳಿಂದ ಬಿಡುಗಡೆಯನ್ನೈದುವನು. ಆಯುರಾರೋಗ್ಯೈಶ್ವರ್ಯಕರವಾದ ರಾಮಾಯಣದ ಕಥೆಯನ್ನು ಯಾವನು ಪಾರಾಯಣಮಾಡುತ್ತಿದ್ದಾನೋ ಆ ಪುಣ್ಯಾತ್ಮನು ಈ ಮಧ್ಯಮಲೋಕದಲ್ಲಿ ಪುತ್ರಪೌತ್ರರುಗಳಿಂದಲೂ, ಸಮಸ್ತ ಭೃತ್ಯವರ್ಗಗಳಿಂದಲೂ (ಸುಖವನ್ನು) ಅನುಭವಿಸಿ ಶರೀರಾಂತ್ಯದಲ್ಲಿ ಸ್ವರ್ಗಲೋಕವನ್ನೈದುವನು. ಈ ರಾಮಚರಿತ್ರೆಯನ್ನು ಪಠನಮಾಡುವ ಬ್ರಾಹ್ಮಣನು ಅತ್ಯಂತಜ್ಞಾನಿಯುಳ್ಳವನಾಗುವನು. ಕ್ಷತ್ರಿಯನು ಪಠನಮಾಡಿದರೆ ಅನೇಕಭೂಮ್ಯಾಧಿಪತ್ಯವನ್ನು ಪಡೆಯುವನು. ವೈಶ್ಯನು ಪಠನ ಮಾಡಿದರೆ ಬೇಹರದಿಂದ ಬಹಳಲಾಭವಂ ಪಡೆಯುವನು. ಶೂದ್ರನು ಪಠನಮಾಡಿದರೆ ದೊಡ್ಡವನಾಗುವನು ಎಂದು ನಾರದಮುನೀಶ್ವರನು ವಾಲ್ಮೀಕಿಮುನೀಶ್ವರನಿಗೆ ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ನಿರೂಪಿಸಿದನು.—

Colophon ;

ಶ್ರೀಮದ್ರಾಮಾಯಣದಲ್ಲಿ ಬಾಲಕಾಂಡದಲ್ಲಿ ಪ್ರಥಮಾಧ್ಯಾಯ ಕಥಾ ಪ್ರಸಂಗಕ್ಕೆ ಮಂಗಳಮಸ್ತು.—

ವಾಲ್ಮೀಕಿ ಮುನೀಶ್ವರನು ನಾರದ ಮುನೀಶ್ವರನ ವಾಕ್ಯಮಂಕೇಳಿ ಅನಂತರದಲ್ಲಿ ಪೂರ್ವೋಕ್ತಸದ್ಗುಣಗಳಿಂದ ಸಂಪೂರ್ಣವಾದ ಶ್ರೀ ರಾಮಚಂದ್ರಸ್ವಾಮಿಚರಿತ್ರೆಯನ್ನು ಹೇಳಲು ರಘುನಾಥಸ್ವಾಮಿಗೂ, ಸೀತಾದೇವಿಗೂ ಲಕ್ಷ್ಮಣಸ್ವಾಮಿಗೂ ನಮಸ್ಕರಿಸಿ ;

End :

ಕುಬೇರನ ಪುಷ್ಪಕವಂ ಹತ್ತಿಕೊಂಡು ಸೀತಾ ಸಮೇತನಾಗಿ ಅಯೋಧ್ಯಾಪಟ್ಟಣಕ್ಕೆ ಬಂದು ಭರತನಂ ಕಾಣಿಸಿಕೊಂಡ ವೃತ್ತಾಂತವನ್ನೂ, ರಘುನಾಥನಿಗೆ ಪಟ್ಟಾಭಿಷೇಕವಾದ ವೃತ್ತಾಂತವನ್ನೂ, ಲಂಕಾಪಟ್ಟಣದಿಂದ ಬಂದ ಕಪಿನಾಯಕರನ್ನು ಅವರವರ ಸ್ಥಾನಂಗಳಿಗೆ ಕಳುಹಿಸಿದ ವೃತ್ತಾಂತವನ್ನೂ, ತನ್ನ ರಾಷ್ಟ್ರವಂಧರ್ಮದಿಂದ ಪಾಲಿಸಿದ ವೃತ್ತಾಂತವನ್ನೂ, ಸೀತಾದೇವಿಯನ್ನು ತಿರಿಗಿ ವನದಲ್ಲಿರಿಸಿದ ವೃತ್ತಾಂತವನ್ನೂ ಈ ರಘುನಾಥನು ಈ ಭೂಲೋಕದಲ್ಲಿ ಕಥಾ ಪ್ರಸಂಗಗಳನ್ನೂ, ಉತ್ತರರಾಮಾಯಣದಲ್ಲಿ ಹೇಳುವ ವೃತ್ತಾಂತವನ್ನೂ ಇದೇ ಮೊದಲಾದ ಸಮಸ್ತಧರ್ಮ ಕಥಾಪ್ರಸಂಗಗಳನ್ನೂ ವಾಲ್ಮೀಕಿ ಮುನೀಶ್ವರನು ಸದ್ಧಿತಾರ್ಥವಾಗಿ ವಿಸ್ತರಿಸಿದನು ಎಂಬಲ್ಲಿಗೆ ಶ್ರೀಮದ್ರಾಮಾಯಣದಲ್ಲಿ ಬಾಲಕಾಂಡದಲ್ಲಿ 3 ನೆಯ ಅಧ್ಯಾಯಕ್ಕೆ ಮಂಗಳಮಹಾಶ್ರೀ.—

Colophon :

ಶ್ರೀಮದ್ರಾಮಾಯಣದಲ್ಲಿ ಬಾಲಕಾಂಡದಲ್ಲಿ ಮೂರನೆಯ ಅಧ್ಯಾಯಂ ಸಮಾಪ್ತಂ.—

ಆ ಮೇಲೆ ಷಡ್ಗುಣೈಕಸಂಪನ್ನನಾದ ವಾಲ್ಮೀಕಿಮುನೀಶ್ವರನು ಜಗದ್ಧಿತಾರ್ಥವಾಗಿ ಪರಮ ಪುರುಷನು ರಾಮಾವತಾರದಿಂದ ಅಯೋಧ್ಯಾಪಟ್ಟಣದಲ್ಲಿ ಪಟ್ಟಾಭಿಷಿಕ್ತನಾಗಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತಿದ್ದಂಥ ರಘುನಾಥನ ಚಾರಿತ್ರವನ್ನು ವಿಸ್ತಾರವಾಗಿ ವಿವರಿಸಿ. ಆ ವಾಲ್ಮೀಕಿಮುನೀಶ್ವರನು ಉತ್ತಮ.........

(ವಿ-ಪಿ.)—

ರಾಮಾಯಣಟೀಕೆಯಲ್ಲಿ ಬಾಲಕಾಂಡದ ಮೂರು ಅಧ್ಯಾಯಗಳು ಸಮಗ್ರವಾಗಿವೆ. ಸ್ವಲ್ಪ ಶಿಥಿಲ. ಲಿಪಿಯು ಸಾಧಾರಣವಾಗಿದೆ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿದುಬರುವುದಿಲ್ಲ.

AUTHOR INDEX TO DESCRIPTIVE CATALOGUE OF KANARESE MSS. VOL. I.

ಅಭಿನವ ಬಾಲ ಸರಸ್ವತಿ, ಮಂಗರಾಜ 28, 26.

ಅಮರಸಿಂಹ 39, 40.

ಅಮೃತನಂದಿ 24, 25.

ಕಳಲೆ ನಂಜರಾಜ 152, 156, 157, 164, 165, 168, 181, 182, 183, 188, 190, 201, 203, 209, 212, 213.

ಕುಮಾರ ವಾಲ್ಮೀಕಿ (ನರಹರಿ) 242, 243, 247, 248, 250, 249.

ಕುಮಾರ ವ್ಯಾಸ (ನಾರಣಪ್ಪ) 48, 67, 76, 80, 89, 98, 105, 112, 119, 125, 131, 54, 73.

ಕೇಶವ ಅಥವಾ ಕೇಶಿರಾಜ 9, 12, 13, 14, 18.

ಚಿಕ್ಕದೇವರಾಜ 191, 195, 198, 201, 203, 206, 209, 213, 215, 217, 218.

ಚೆನ್ನಕವಿ ಅಥವಾ ಧೀರದ್ರಾವಿಡ 34, 35.

ಜಕ್ಕನಾಯಕ, ಜಕಣನಾಯಕ ಅಥವಾ ಜಕ್ಕಭೂಪಾಲ 170, 172, 173, 222, 224, 226, 228, 229, 230, 231, 233, 235, 236, 238.

ತಿಮ್ಮಣ್ಣಂ, ತಿಮ್ಮಣಾರ್ಯ್ಯ 136, 137, 142, 143, 147.

ತಿರುಮಲೆ ವೈದ್ಯ 251, 255, 256.

ದೇವೋತ್ತಮ 36, 38, 39.

ನರಹರಿ (ಕುಮಾರವಾಲ್ಮೀಕಿ) 242, 243, 247, 248, 249, 250.

ನಾಗವರ್ಮ I 41, 43, 45, 46.

ನಾಗವರ್ಮ II 2, 6, 19, 23.

ನಾರಣಪ್ಪ (ಕುಮಾರ ವ್ಯಾಸ) 54, 67, 68, 73, 74, 75, 80, 81, 84, 86, 89, 91, 92, 93, 99, 100, 106, 107, 113, 114, 119, 120, 121, 125, 126.

ಲಿಂಗಮಂತ್ರಿ 29, 31.

ವಾದಿರಾಜ (ಆನಂದತೀರ್ಥ) 238, 239, 241.

ವಿರಕ್ತ ತೋಂಟದಾರ್ಯ 31-33.

GENERAL INDEX TO DESCRIPTIVE CATALOGUE OF KANARESE MSS.—VOL. I.

[ಷರಾ.—ಕೆಳಗಡೆಯಲ್ಲಿ ಗೆರೆಯನ್ನೊಳಗೊಂಡ ಹೆಸರುಳ್ಳ ಗ್ರಂಥಗಳು ಈ ಸೂಚೀ ಪತ್ರ (Catalogue) ದಲ್ಲಿ ವಿವರಿಸಲ್ಪಟ್ಟಿವೆ.]

ಅಕಾರಾದಿ ನಿಘಂಟು 24, 25.
ಅಜೀತಸೇನ 43.
ಅಜಿತಸೇನಾಚಾರ್ಯ 41.
ಅಣ್ಣಂ 43.
ಅಣ್ಣಯ್ಯ ಭಾರತಿ 242.
ಅನಂತ ಛಂದಸ್ಸು 36, 46.
ಅನಂತನಾಥಪುರಾಣ 1.
ಅಪ್ಪಯ್ಯ 90.
ಅಪ್ರತಿಮ ವೀರನರಪತಿ 217.
ಅಭಿನವ ನಿಘಂಟು ಅಥವಾ ಮಂಗಾಭಿಧಾನ 28, 26.
ಅಭಿನವ ಮಂಗ 28, 26.
ಅಭಿನವ ಬಾಲಸರಸ್ವತಿ 28, 26.
ಅಭಿನವ ವಾಂಚ 37.
ಅಭಿನವಾಭಿಧಾನ 26, 28.
ಅಮರ 37.
ಅಮರಸಿಂಹ 39, 40.
ಅಮೃತನಂದಿ (1300 A. D.) 24,25.
ಅಸಗ 9, 10, 16.
ಆಚಣ್ಣ ಅಥವಾ ವಾಣೀವಲ್ಲಭ (ಸು 1195 A.D.) 1.
ಆನಂದತೀರ್ಥ 238, 239.
ಆರೂಢ ಛಂದಸ್ಸು 36, 46.
ಆಲೂರ 120.
ಇಂದ್ರಕೀಲ ಪರ್ವತ 81, 84.
ಈಶ್ವರ ಕ್ಷಿತಿನಾಥ 132.
ಉಡುಪಿ ಮಠ 241.
ಉತ್ತರ ರಾಮಾಯಣ 252, 256, 255, 251.
ಉತ್ತರ ಮೀಮಾಂಸೆ 155.
ಋಕ್ಶಾಖಾಧ್ಯಾಯಿ 190.
ಎರಡನೆಯ ನಾಗವರ್ಮ 6.
ಒಡ್ಡೀಧಾಳಿ ತಿರುಮಳ ದೇವರು 152.
ಐರಾವತ 47.
ಕಂಠೀರವನರಸ ಭೂಪಾಲ 153.
ಕನಕಗಿರಿ 61, 55.
ಕನ್ದಕನ್ದರ್ಪ 43.
ಕಬ್ಬಿಗರ ಕೈಪಿಡಿ 29.
ಕಮ್ಮೆಕುಲ 28.
ಕಮ್ಮೆ ವಂಶ 26.
ಕರಿಯ ಬಂಟನ ಕಥೆ 99, 100.
ಕರ್ಣಾಟಕ ಛಂದೋಂಬುಧಿ 31.
ಕರ್ಣಾಟಕ ಭಾರತ ಕಥಾಮಂಜರಿ 131, 73.
ಕರ್ಣಾಟಕ ಭಾಷಾಭೂಷಣ 6.
ಕರ್ಣಾಟಕ ಭಾಷಾಭೂಷಣ ಸೂತ್ರಗಳು 1, 2, 7, 6.
ಕರ್ಣಾಟಕ ವ್ಯಾಕರಣ 7.
ಕರ್ಣಾಟಕ ಶಬ್ದಮಂಜರಿ 32, 46.
ಕವಿಕುಂಜರ ಕುಮಾರವ್ಯಾಸ 134.
ಕವಿತಾಗುಣೋದಯ, ನಾಕಿಗ, ನಾಗವರ್ಮ (II) 23.
ಕವಿಮಂಗ 8.
ಕವಿರಾಜ ಹಂಸ 242, 246, 247, 41.
ಕಳಲೆ ನಂಜರಾಜ 201, 152, 203, 212, 211, 209, 190, 188, 182, 183, 156, 157, 165, 164, 168, 181.
ಕಳಲೆ ನಂಜರಾಜೇಂದ್ರ 154.
ಕಳಿಂಗ ನೀತಿ 47.
ಕಾಂತರಾಜೇಂದ್ರ 154.
ಕಾದಂಬರಿ 41.
ಕಾವ್ಯಾವಲೋಕನ 21, 20, 19, 1.
ಕಿರಾತ 13.
ಕಿರಾತಾರ್ಜುನ 14.
ಕಿರಾತಾರ್ಜುನೀಯ 9.
ಕೀರ್ತನೆಗಳು 241.
ಕುಂದಕಬ್ಬೆ 42.
ಕುಮಾರವಾಲ್ಮೀಕಿ 243, 242, 243, 247, 255, 48, 54.
ಕುಮಾರವ್ಯಾಸ 247, 133, 48, 49, 54, 67, 76, 84.

ಕುಮಾರವ್ಯಾಸಯೋಗೀಂದ್ರ 80, 54,89, 98, 105, 112, 119, 131, 125, 73.
ಕೃಷ್ಣದೇವರಾಯ 131, 137.
ಕೃಷ್ಣಯ್ಯ 93, 99.
ಕೃಷ್ಣರಾಜ 157, 168, 190.
ಕೃಷ್ಣರಾಜನೃಪ 134.
ಕೃಷ್ಣರಾಜೇಂದ್ರ 153.
ಕೃಷ್ಣರಾಯ 132, 133, 136, 137
ಕೆಂಚಪ್ಪ (ಹಿರೆ) 61.
ಕೆತಾವೆಡಿ ಶೆಟ್ಟಿ 91, 92.
ಕೇಶವ ಅಥವಾ ಕೇಶಿರಾಜ 9, 10, 13, 16, 18, 12, 14.
ಕೊಟ್ಟೂರು 99.
ಕೋನಪ್ಪ 90.
ಕೋನಯ್ಯ 48, 54
ಕೋನೇರಿ ಶೆಟ್ಟಿ 91, 92.
ಕೋಳಿವಾಡು 48, 54.
ಕೌಂಡಿಕಬ್ಬೆ 42.
ಗಜಗ 9, 10, 16.
ಗಣಗಳಗ್ರಂಥ 35, 46.
ಗದಗ 48.
ಗದುಗು 54, 80.
ಗದುಗಿನ ವೀರನಾರಾಯಣ 131.
ಗರಳಪುರ 157.
ಗವಿಯಣ 251.
ಗುಣನಂದಿ 9, 10, 16.
ಗುಣವರ್ಮ 9, 10, 16.
ಗುಮ್ಮಗಟ್ಟಿ 90.
ಗುರಿಕಾರಮಾದಯ್ಯ 74.
ಗೋಪಾಲ 37.
ಗೋವಿಂದಯ್ಯ 55, 61.
ಗ್ರೀಕ್ 7.
ಘೋಷಯಾತ್ರ 172
ಚಂದ್ರಭಟ್ಟ 9, 10, 16.
ಚಾವುಂಡರಾಯ, 41.
ಚಾಳುಕ್ಯ (ಜಗದೇಕಮಲ್ಲ) (1139—1149 A. D.) 1.
ಚಿಕ್ಕದೇವರಾಜ 213, 218, 201, 203, 206, 191, 198.
ಚಿಕ್ಕದೇವರಾಜ ಭೂಪಾಲ 153
ಚಿಕ್ಕದೇವರಾಯ 209, 220, 215, 217.
ಚೆನ್ನಕವಿ ಅಥವಾ ಧೀರದ್ರಾವಿಡ 34.
ಚೆಲುವರಾಯ 19.
ಚೆಲ್ವರಾಯ 15.
ಚೋಳಪಾಲಕ ಚರಿತಂ 9, 13, 14.
ಚೋಳ ವಂಶ 14.
ಛಂದೋಂಬುಧಿ 46, 35, 41, 43, 45, 47.
ಜಕಣನಾಯಕ 170.
ಜಕ್ಕಣನಾಯಕ ಅಥವಾ ಜಕ್ಕ ಭೂಪಾಲ 220, 231, 230, 229, 228, 226, 224, 222, 236, 238, 231, 233, 235.
ಜಕ್ಕ ಭೂಪಾಲ 236, 170, 172, 222.
ಜಗದೇಕ ಮಲ್ಲ (ಚಾಳುಕ್ಯ) 1.
ಜನ್ನ (1209 A.D.) 1, 9, 14.
ಜಯಂತ 37.
ಜುಂಜರಾಜ 170, 172.
ಜೇಜೇಘಾಟ 154.
ತಿಪ್ಪಯ್ಯ 99.
ತಿಮ್ಮಣ್ಣ 137, 134, 133, 143, 147, 152.
ತಿಮ್ಮಣಾರ್ಯ 142, 136.
ತಿಮ್ಮನೃಪ 132.
ತಿಮ್ಮಪ್ಪ 90, 100, 131.
ತಿಮ್ಮರಾಜೇಂದ್ರ 153, 154.
ತಿರುಪ್ಪಾವೈ 250.
ತಿರುಮಲ ಭಟ್ಟ 90.
ತಿರುಮಲಯ್ಯ 92.
ತಿರುಮಲೆ ವೈದ್ಯ 251, 255, 256.
ತೆಲುಗು ಪ್ರಬಂಧ 258.
ತೊರವೆ ಗ್ರಾಮ 242.
ತೊರವೆ ರಾಮಾಯಣ 249, 248, 250, 242
ತೊರವೀರಾಯ 242.
ತೋಟದಯ್ಯನ ನಾಯಕರಯ್ಯ 9, 13.
ತೋಂಟದಾರ್ಯ 32, 33.
ದಳಪತಿ ದೇವರಾಜ 203, 182, 211, 212.
ದಾಮಮಯ್ಯಂ 42.
ದಾಮೋದರ 1.
ಧೇವರಾಜ 152, 156, 157, 165, 168, 183, 190.
ದೇವರಾಜೇಂದ್ರ 154.
ದೇವೋತ್ತಮ 31, 34, 36, 37, 38, 39,

ದೊಡ್ಡರಾಜ 152, 156, 157, 165, 168, 183, 190, 203, 211, 212.
ದೊಡ್ಡರಾಜೇನ್ದ್ರಮ್ 154.
ದ್ರೌಪದೀ ಸ್ವಯಂವರ 128.
ದ್ವಾರಸಮುದ್ರ 14.
ದ್ವಾರಸಮುದ್ರದ ಬಲ್ಲಾಳರು (1209) 9.
ಧನಂಜಯ 37.
ಧೀರದ್ರಾವಿಡ ಅಥವಾ ಚೆನ್ನಕವಿ 35.
ನಂಜಪ್ಪ 74.
ನಂಜರಾಜವಾಣೀ ವಿಲಾಸ 154, 153, 157, 182, 203, 211, 156.
ನಂಜರಾಜೇನ್ದ್ರ 154.
ನರಸ ಕ್ಷಮಾಧಿಪ ರತ್ನ 132.
ನರಸನೃಪ 136.
ನರಸನೃಪಾಲ 132.
ನರಸ ಭೂಪತಿ 133.
ನರಸ ಭೂಪಾಲಕ 133.
ನರಸ ಭೂವರ 132.
ನರಸಯ ಕೃಷ್ಣರಾಯ 134, 147.
ನರಸಯ್ಯ ಕೃಷ್ಣರಾಯ 142.
ನರಸಿಂಗರಾಯ 59, 61.
ನರಸಿಂಹ ಹೊಯ್ಸಳ (1136—1171 A.D.) 9.
ನರಸೇಂದ್ರ 132, 134.
ನರಹರಿ 243, 247.
ನಯಸೇನ (1112 A.D.) 1.
ನಳಚರಿತೆ 47.
ನಳಚರಿತ್ರೆ 35, 46.
ನಾಕಿ (ಸೈಯಡಿ ನಾತ) 43, 41.
ನಾಕಿಗ 45.
ನಾಗಚಂದ್ರ 9.
ನಾಗವರ್ಮ 43, 45, 46, 41, 37, 31, 28, 23, 19, 15, 9, 1.
ನಾಗವರ್ಮ ಛಂದಸ್ಸು 6, 15.
ನಾಗಾಂಬಿಕೆ 133.
ನಾಗಮಾಂಬಾ 133.
ನಾಗಮಾಂಬೆ 133.
ನಾನಾರ್ಥ ಕಂದಪದ್ಯ 46, 35, 34.
ನಾನಾರ್ಥ ರತ್ನಾಕರ 38, 31.
ನಾನಾರ್ಥ ರತ್ನಾಕರ ಸಟೀಕ 36, 38.
ನಾಮಲಿಂಗಾನು ಶಾಸನ 40, 39.
ನಾಮಲಿಂಗಾನು ಶಾಸನ ಸಟೀಕ 39.
ನಾರಣಪ್ಪ 55.
ನಾರಾಯಣಪ್ಪ 75, 76, 80, 81, 84, 68, 73, 74, 67, 61, 54, 48, 126, 85, 89, 91, 92, 93, 99, 100, 106, 107, 113, 114, 115, 119, 120, 121, 125.
ನಾಲ್ಕುವೇದಂಗಳು 155.
ನಿರಂಜನ 32.
ನಿರಂಜನಲಿಂಗ 32.
ನೀಲಾಂಬಿಕಾಸ್ತೋತ್ರ 39, 38.
ನೀಲಯ್ಯ 248.
ನುಗ್ಗಹಳ್ಳಿ 29, 31.
ನೇಮಿಚಂದ್ರ 109.
ನ್ಯಾಯಶಾಸ್ತ್ರ 155.
ಪಂಪ ಅಥವಾ ಹಂಪ 9.
ಪಂಪಾವತಿ 132.
ಪಾಲ್ಕುರಿಕೆ ಸೋಮೇಶ್ವರ ಪುರಾಣ 34, 31.
ಪಾಶುಪತಾಸ್ತ್ರ 81.
ಪಿಂಗಳ 43, 9
ಪೂರ್ವ ಮೀಮಾಂಸೆ 155.
ಪೋಳಕಬ್ಬೆ 42, 41.
ಪ್ರಬೋಧ ಚಂದ್ರಂ 9, 13, 14.
ಪ್ರಭಾಸ 260.
ಪ್ರಾಚೇತಸ 242.
ಪ್ರೌಢದೇವ 54.
ಪ್ರೌಢದೇವರಾಯ 48, 31.
ಬಂಜಗೆರೆ 90.
ಬದನೆಹಾಳು 61.
ಬಬ್ಬೂರ ರಂಗ 48, 54.
ಬಲ್ಲಾಳರು (ದ್ವಾರ ಸಮುದ್ರ) 9.
ಬಾಣ ಭಟ್ಟ 45, 41.
ಬೆಂಗಳೂರು 62, 54.
ಬ್ರಹ್ಮದೀಕ್ಷಿತ 90.
ಬ್ರಹ್ಮಶಿವ 9.
ಭದ್ರಗಿರಿಮಾಹಾತ್ಮ್ಯ 154.
ಭದ್ರಗಿರಿಮಾಹಾತ್ಮ್ಯ 153.
ಭಾಗವತ 91, 92, 151, 152.
ಭಾಗುರಿ 37.
ಭಾನುಕವಿ 131.
ಭಾನು ಭಟ್ಟ 134, 137.
ಭಾಮಿನಿ 251.
ಭಾರತ ಕಥೆ 136, 142.

ಭಾರತ ಕಥಾ ಕುಸುಮಮಲ್ಲರಿ 152, 151, 147, 143, 137, 125, 100, 119.
ಭಾರತ ಕಥಾ ಮಂಜರಿ 131, 125, 120, 119, 114, 113, 112, 107, 106, 105, 100, 99, 98, 93, 92, 91, 90, 89, 85, 81, 84, 80, 76, 75, 74, 73, 68, 67, 63, 62, 54, 48.
ಭಾರತ ಕಥಾ ಸಂಗ್ರಹ 231, 233, 235, 236, 220, 222, 224, 226, 228, 229.
ಭಾರತ ತಾತ್ಪರ್ಯ ಟೀಕು 157.
ಭಾರತ ತಾತ್ಪರ್ಯ ನಿರ್ಣಯ 238.
ಭಾರತ ತಾತ್ಪರ್ಯ ನಿರ್ಣಯ ಟೀಕೆ 241.
ಭಾರತ ವಚನ 217, 215, 213, 209, 206, 203, 201, 198, 195, 190, 184, 186, 188, 181, 179, 176, 173, 169, 168, 164, 162, 160, 157, 152.
ಭಾರದ್ವಾಜ 152, 190.
ಭಾಷಾ ಭೂಷಣ 47, 23, 15.
ಭಾಸ್ಕರ ಕವೀಶ್ವರ 258.
ಮಂಗರಾಜ 26, 28.
ಮಂಗಳೂರು 54, 61.
ಮಗ್ಗಿಗಳು 81, 84.
ಮಂಜೇಶ್ವರ 242.
ಮಧ್ವಗುರು 241.
ಮನಸಿಜ 9, 10, 16.
ಮನೋವಿಜಯ 31.
ಮನೋವಿಜಯ ತಾತ್ಪರ್ಯ 34.
ಮಲ್ಲಿಕಾರ್ಜುನ 9, 10, 14, 16.
ಮಹಾಭಾರತ 172, 173, 158, 67, 81, 131, 61, 56, 54, 48, 49.
ಮಹಾಭಾರತ ತಾತ್ಪರ್ಯ ಟೀಕು 156, 165, 190.
ಮಹೀಶೂರ 183, 154, 212, 203, 99.
ಮಾಗಡೆಯ್ಯ 120.
ಮಿ. ಬ್ರೌನ್ ಸಾಹೇಬ 7, 46.
ಮೈಸೂರು 54, 61, 93, 195.
ಮೈಸೂರು ಕೃಷ್ಣರಾಜ 152.
ಮೈಸೂರು ಸಂಸ್ಥಾನ 157.
ಮೊಟ್ಟಿ ರಾಮಪ್ಪ 100.
ಮೋತಿ ರಾಮಪ್ಪ 99.
ರಕ್ಕಸ ಗಂಗ 41, 43.
ರಗಳೆಗಳ ಲಕ್ಷ್ಮಣ 36, 46.
ರತ್ನಪರೀಕ್ಷೆ 6, 15.
ರತ್ನ ಶಾಸ್ತ್ರ 47.
ರಾಚಮಲ್ಲ 41.
ರಾಜನೀತಿ 47.
ರಾಮ ಚರಿತ 14.
ರಾಮಾಯಣ 114, 246, 242, 251, 252.
ರಾಮಾಯಣ ವಚನ 256, 259, 26.
ರಾಮಾಯಣ ಟೀಕೆ 262
ರಾಯಭೂವರ 31, 29.
ರೇವಮ್ಮಾರ್ಯ ರಾಮರಸ 26, 28
ರೋಮನ್ 7.
ಲಕ್ಷ್ಮಕವಿ 48, 54.
ಲಕ್ಷ್ಮೀರಮಣ 99.
ಲಕ್ಷ್ಮೀ ರಮಣಪ್ಪ 93.
ಲಕ್ಷ್ಮೀ ಶೋಭಾನೆ 238.
ಲಕ್ಷ್ಮೀ ಸೋಬಾನೆ 241.
ಲಲಿತಾಸ್ತೋತ್ರ 36.
ಲಿಂಗಪ್ಪಯ್ಯಾ ಶಾನುಭೋಗ 9.
ಲಿಂಗಮಂತ್ರಿ 29, 34.
ಲಿಂಗಯ್ಯ 242.
(ವಕಾರಾದಿ ಶಬ್ದಗಳು).
ವರ್ಧಮಾನ ಪುರಾಣ 1.
ವಸ್ತು ಕೋಶ 2, 1, 28, 26.
ವಾಣೀವಲ್ಲಭ (ಆಚಣ್ಣ) 1.
ವಾಣೀ ವಿಲಾಸ 183, 168, 165.
ವಾದಿರಾಜ 238, 241.
ವಾದಿರಾಜ ಸ್ವಾಮಿಗಳು 241, 239.
ವಾರಣಾಸಿ 49, 63, 131.
ವಾಲ್ಮೀಕಿ 258.
ವಾಲ್ಮೀಕಿ ಮುನಿ 251.
ವ್ಯಾಸ ರಾಜ 241.
ವ್ಯಾಸರಾಯ ಗುರು 238.
ವಿಜಯನಗರ 137, 54, 48, 31, 131.
ವಿದುರನೀತಿ 47
ವಿದ್ಯಾನಗರೀ 133.
ವಿಭೀಷಣ ಬುದ್ಧಿ 114, 47.
ವಿರಕ್ತತೋಂಟದಾರ್ಯ 31-34.
ವಿರುಪಯಲಿಂಗ 29.
ವಿರೂಪಾಕ್ಷ 29.

ವೀರ ರಾಜ 211, 212, 203, 165, 182, 190, 152, 157, 168.
ವೀರ ರಾಜೇಂದ್ರ 154.
ವೀರ ಬಲ್ಲಾಳ 14.
ವೀರ ನರಪತಿ 215.
ವೃಷಭ 254.
ವೆಂಕಪ್ಪ 120.
ವೆಂಕಟಯ್ಯ 90.
ವೆಂಗಿ 41.
ವೆಣ್ಣಮಯ್ಯಂ 42, 41.
ವೇದವ್ಯಾಸ 48.
ವೇಲಾಪುರಿ (ವೇಲೂರು) 19.
ವೈದ್ಯ ವಿಷಯಗಳು 100.
ಶಕುನ ಶಾಸ್ತ್ರ 47.
ಶಬ್ದಮಂಜರಿ 34, 37.
ಶಬ್ದ ಮಣಿದರ್ಪ್ಪಣ 47, 6, 18, 13, 12, 10.
ಶಬ್ದಮಣಿದರ್ಪ್ಪಣ ಸೂತ್ರಗಳು 14, 9, 15.
ಶಬ್ದಮಣಿದರ್ಪ್ಪಣ ಸೋದಾಹರಣ ವೃತ್ತಿ 15, 19.
ಶಬ್ದಸ್ಮೃತಿ 9, 19, 22, 23.
ಶಾಂಭಟ್ಟ 90.
ಶಿವಭಕ್ತವಿಲಾಸ 153, 154.
ಶಿವಸೂಕ್ತ ಷಡಕ್ಷರ 47, 36.
ಶೃಂಗಾರ ಪದ್ಯ 14.
ಶೃಂಗಾರ ರತ್ನಾಕರ 36, 47, 46.
ಶೃಂಗಾರದ ಹಾಡು 81, 84.
ಶ್ಯಾಮಲಾ ದಂಡಕ 47.
ಶ್ರೀಕಂಠಾಚಾರ್ಯ 154.
ಶ್ರೀ ಕೃಷ್ಣರಾಜ ಭೂಪಾಲ 153.
ಶ್ರೀ ಚಿತ್ರಮೌಳಿ 9, 13, 14.
ಶ್ರೀ ನಂಜರಾಜ ವಾಣೀವಿಲಾಸ 190.
ಶ್ರೀಮದ್ರಾಮಾಯಣ 258.
ಶ್ರೀಮಧ್ವಾಚಾರ್ಯರು 240.
ಶ್ರೀಮಹಾ ಭಾರತ 64.
ಶ್ರೀ ಮಹೀ ಶೂರಸೇನಾಧಿಪ 211.
ಶ್ರೀ ಮಹಿಸೂರು 156.
ಶ್ರೀರಂಗಪಟ್ಟಣ 153.
ಶ್ರೀ ವಿಜಯ 9, 10, 16.
ಶ್ರೀ ವೀರಚಿಕ್ಕ ದೇವರಾಯ 195.
ಶ್ರೀ ವೀರನರಪತಿ 209.
ಶ್ರೋತ್ರಿಯ 215.
ಸಂಕೀರ್ಣ ಗ್ರಂಥ 46, 36.
ಸಂಗೀತಸಾಹಿತ್ಯ 215.
ಸಂಸ್ಕೃತ ಭಾರತ 181, 164, 160, 147, 143, 137, 131, 126, 121, 115, 107, 100, 93, 85, 76, 67.
ಸಂಸ್ಕೃತ ರಾಮಾಯಣ 258.
ಸನತ್ಸುಜಾತ ನೀತಿ 47.
ಸರ್ವಜ್ಞ 14.
ಸರ್ವಜ್ಞ ಭೂಪ (1260 A.D) 9.
ಸಾರಂಗಧರನ ಕಥೆ 47, 35, 46.
ಸಿದ್ಧೇಶ್ವರ ಪುರಾಣ 31, 34.
ಸಿನಭಾಗ ಲಿಂಗಪ್ಪ (? ಸೇನ ಭಾಗಲಿಂಗಪ್ಪ) 13.
ಸಿ. ಪಿ. ಬ್ರೌನ್ 9.
ಸುಜನೋತ್ತಂಸ 9, 10, 16.
ಸುಭದ್ರಾ ಹರಣಂ 9, 13, 14.
ಸುಮನೋ ಬಾಣ (1136—1171 A. D) 9, 10, 14, 16.
ಸೂಕ್ತಿ ಸುಧಾರ್ಣವ 9, 13.
ಸೋದೆ ಮಠ 241.
ಸೋಮೇಶ್ವರ (ಹೊಯ್ಸಳ) 1233—1254 A.D. 9, 13.
ಸೋಲಾಪುರ 242, 247.
ಸ್ಥಾನಿಕ ಲಕ್ಷ್ಮೀರಮಣಪ್ಪ 99.
ಸ್ವಪ್ನಗದ್ಯ 238, 241.
ಹಂಪೆ ಪಂಪ 10, 16.
ಹರದತ್ತ 154.
ಹರಿವಿಲಾಸ ಚರಿತ್ರೆ 91, 151, 152.
ಹರಿಶ್ಚಂದ್ರ ಕಾವ್ಯ 251.
ಹರಿಶ್ಚಂದ್ರರಾಯನ ಕಥೆ 35, 46, 47.
ಹರಿಹರ ಚರಿತ್ರೆ 47.
ಹಾಡುಗಳು 99, 100.
ಹಾಲಾಸ್ಯ ಮಹಾತ್ಮ್ಯೆ 154.
ಹಾಸನ 29.
ಹಿರಿಯ ಕೆಂಚಪ್ಪ 55
ಹಿರಿಯ ತಿಮ್ಮಪ್ಪ 90.
ಹೇಮರಾಜ 9.
ಹೊನ್ನ or ಪೊನ್ನ 9, 10, 16.
ಹೊಯ್ಸಳ ನಾರಸಿಂಹ (1136—1171 (A.D.) 9, 14.
ಹೊಯ್ಸಳ ಸೋಮೇಶ್ವರ 9, 13.

AGENTS FOR THE SALE OF MADRAS GOVERNMENT PUBLICATIONS.

IN INDIA.

RAM NARAIN LAL, Bookseller, etc., 1, Bank Road, Allahabad.

THE BANGALORE PRINTING AND PUBLISHING CO., LTD., "Lake View," Mysore Road, Bangalore City.

The Superintendent, GOVERNMENT CENTRAL BOOK DEPOT, Bangalore.

THE INDIAN BOOK SHOP, Benares City.

D. B. TARAPOREVALA SONS & CO., Bombay.

THACKER & CO. (LTD.), Bombay.

N. S. WAGLE, Circulating Agent and Bookseller, No. 6, Tribhuvan Road, Girgaon, Bombay.

THE BOOK COMPANY, Calcutta.

BUTTERWORTH & CO. (LTD.), 6, Hastings Street, Calcutta.

R. CAMBRAY & CO., Calcutta.

The Managing Director, KAMALA BOOK DEPOT, LTD., 15, College Square, Calcutta.

THACKER, SPINK & CO., 3, Esplanade East, Calcutta.

SAMPSON WILLIAM & CO., Booksellers, etc., 127-B, The Mall, Cawnpore.

THE OXFORD BOOK AND STATIONERY CO., Kashmere Gate, Delhi.

RAMAKRISHNA & SONS, Lahore (Punjab).

The Proprietor, THE PUNJAB SANSKRIT BOOK DEPOT, Saidmitha Street, Lahore (Punjab).

THE CHRISTIAN LITERATURE SOCIETY FOR INDIA, Post Box No. 501, Park Town, Madras.

CITY BOOK COMPANY, Post Box No. 283, Madras.

C. COOMARASWAMI NAYUDU AND SONS, 27 and 35, Chinnathambi Street, Madras.

HIGGINBOTHAMS (LTD.), Mount Road, Madras.

THE LAW PRINTING HOUSE, 11, Mount Road, Madras.

G. A. NATESAN & CO., Madras.

P. R. RAMA IYER & CO., Madras.

P. VARADACHARI & CO., Booksellers, 8, Linghi Chetti Street, Madras.

Agent, THE SOUTH INDIA SAIVA-SIDDHANTA WORKS PUBLISHING SOCIETY, LTD., 6, Coral Merchant Street, Madras.

D. SRI KRISHNAMURTI, Editor of "Grama Paripalana," Ongole (Madras).

E. M. GOPALAKRISHNA KONE, Pudumandapam, Madura (Madras).

M. SESHACHALAM & CO., Proprietors, The Hindu Press, Masulipatam (Madras).

THE MODERN STORES, Salem (Madras).

MANIAM BROS., Booksellers, etc., Railway Station Road, Tanjore (Madras).

S. KRISHNASWAMI & CO., Teppakulam Post, Trichinopoly Fort (Madras).

L. VAIDYANATHA AYYAR, Law Bookseller, Teppakulam P.O., Trichinopoly (Madras).

A. VENKATASUBBAN, Law Bookseller, Vellore (Madras).

P. N. SWAMINATHA SIVAN & CO., Commission Agents, Booksellers, etc., Pudukkottai State.

THE INTERNATIONAL BOOK SERVICE, Booksellers, etc., Poona.

MOHANLAL DOSSABHAI SHAH, Books Agent, Publisher and Printer, Rajkot.

THE BOOKLOVERS' RESORT, Booksellers and News Agents, Taikad, Trivandrum.

NOTICE.

Official publications may be obtained in the United Kingdom either direct from the office of the High Commissioner for India, India House, Aldwych, London, W.C. 2, or through any bookseller.